ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೦

ಶ್ರೀ ಬ್ರಹ್ಮವೈವರ್ತಮಹಾಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೩

ಅನುವಾದಕ:

ಸಾಹಿತ್ಯ ಮತ್ತು ಕನ್ನಡ ವಿದ್ವಾನ್

ಚಿಟ್ಟದಪುರದ ಸುಬ್ರಾಯರ ಮಗ ಕೃಷ್ಣಪ್ಪ

ಸಂಸ್ಕೃತ ಪಂಡಿತ,

ಟ್ರೈನಿಂಗ್ ಕಾಲೇಜು, ಮೈಸೂರು.

ಮೈಸೂರು :

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೯

ಪೀಠಿಕೆ.

ಪ್ರಕೃತಿಖಂಡದ ಈ ಸಂಚಿಕೆಯಲ್ಲಿ ಸಾವಿತ್ರೀ ಮತ್ತು ಲಕ್ಷ್ಮೀದೇವಿಯರ ಉಪಾಖ್ಯಾನವು ಸವಿಸ್ತರವಾಗಿ ನಿರೂಪಿತವಾಗಿದೆ. ಸಾವಿತ್ರಿಯು ತನ್ನ ಪಾತಿವ್ರತ್ಯದ ಪ್ರಭಾವದಿಂದ ಯಮಧರ್ಮರಾಯನ ಅನುಗ್ರಹಕ್ಕೆ ಪಾತ್ರಳಾಗಿ, ಅಪಮೃತ್ಯುವಿಗೊಳಗಾಗಿದ್ದ ತನ್ನ ಪತಿಯನ್ನು ಮತ್ತೆ ಬದುಕಿಸಿಕೊಂಡುದಲ್ಲದೆ, ತನ್ನ ಮಾವನಿಗೆ ಹೋದ ಕಣ್ಣುಗಳನ್ನೂ, ಕಳೆದುಹೋದ ರಾಜ್ಯವನ್ನೂ ಪುನಃ ದೊರಕಿಸಿಕೊಟ್ಟಳು. ಇದೇ ರೀತಿಯಾಗಿ ಪೂರ್ವದಲ್ಲಿ ಭರತಖಂಡದಲ್ಲಿದ್ದ ಅಹಲ್ಯೆ, ಸೀತೆ, ದ್ರೌಪದೀ ಮುಂತಾದ ಮಹಾಪತಿವ್ರತೆಯರು ತಮ್ಮ ಪಾತಿವ್ರತ್ಯದ ಮಹಿಮೆಯಿಂದ ತಮ್ಮ ಪತಿಗಳಿಗೆ ಒದಗಿದ್ದ ಮಹಾವಿಪತ್ತುಗಳನ್ನು ಪಾರುಗಾಣಿಸಿದರು. ಅಂದಮೇಲೆ ಸ್ತ್ರೀಯರ ಪಾತಿವ್ರತ್ಯದ ಮಹಿಮೆಯು ಅಪಾರವಾದುದೆಂದು ಬೇರೆ ಹೇಳಬೇಕಾದುದಿಲ್ಲ. ಎಂದಿನವರೆಗೆ ಕುಲಸ್ತ್ರೀಯರು ಅಧರ್ಮಕ್ಕೆ ಎಡೆಗೊಡುವುದಿಲ್ಲವೋ ಅಂದಿನವರೆಗೂ ಮಾನವನು ಸತ್ಯಧರ್ಮಪರಿಪಾಲನೆಯಲ್ಲಿ ನಿರತನಾಗಿ ತನ್ನ ಮುಕ್ತಿಯನ್ನು ಸಾಧಿಸಿಕೊಳ್ಳಬಲ್ಲನು. ಸ್ತ್ರೀಯರು ಧರ್ಮಬಾಹಿರರಾದರೆ ವರ್ಣಸಾಂಕರ್ಯವುಂಟಾಗಿ ಸಮಾಜವು ದುಃಸ್ಥಿತಿಗೀಡಾಗುವುದು. ಈ ಅಭಿಪ್ರಾಯವನ್ನು ಗೀತೆಯ ಅರ್ಜುನವಿಷಾದಯೋಗದಲ್ಲಿ 'ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ । ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ' ॥ ಎಂದು ಪರಮಾತ್ಮನು ನಿರೂಪಿಸಿದ್ದಾನೆ. ಆದುದರಿಂದಲೇ ಯಮಸಾವಿತ್ರಿಯರ ಸಂವಾದ ಸಂದರ್ಭದಲ್ಲಿ ಜೀವಿಗಳ ಕರ್ಮಪರಿಪಾಕವನ್ನೂ ಅದರ ಶುಭಾಶುಭಫಲಗಳನ್ನೂ ನಿರೂಪಿಸಿ, ಯಮಪುರಿಯಲ್ಲಿರುವ ನರಕಕುಂಡಗಳ ಭಯಂಕರಸ್ವರೂಪವನ್ನೂ ವರ್ಣಿಸಿ, ಜನರು ಪಾಪಭೀರುಗಳಾಗಿ ಸತ್ಕರ್ಮದಲ್ಲಿ ನಿರತರಾಗಲೆಂದು ವ್ಯಾಸಮಹರ್ಷಿಗಳು ಎಚ್ಚರಿಸಿದ್ದಾರೆ. ಅಂತೆಯೇ ಲಕ್ಷ್ಮಿಯ ಉಪಾಖ್ಯಾನದಲ್ಲಿ ಸಂಪತ್ತಿನಿಂದ ಉನ್ಮತ್ತನಾದ ದೇವೇಂದ್ರನು ದೂರ್ವಾಸಮಹರ್ಷಿಗಳ ಶಾಪಕ್ಕೊಳಗಾದುದನ್ನು ತಿಳಿಸುವುದರ ಮೂಲಕ ಲಕ್ಷ್ಮೀಪುತ್ರರಿಂದ ಸಮಾಜದ ರೀತಿನೀತಿಗಳು ಬಹಳಮಟ್ಟಿಗೆ ಕೀಳಾಗುವುವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. 'ಏಕಃ ಕರೋತಿ ಪಾಪಾನಿ ಫಲಂ ಭುಂಕ್ತೇ ಮಹಾಜನಾಃ' ಎಂಬ ಲೋಕೋಕ್ತಿಯಂತೆ ದೇವೇಂದ್ರನ ಧನಮದದಿಂದುಂಟಾದ

ದುಷ್ಪರಿಣಾಮಕ್ಕೆ ದೇವತೆಗಳೆಲ್ಲರೂ ಭಾಗಿಗಳಾಗಬೇಕಾಯಿತು. ಸಂಪದ್ವಿನಾಶ ವಾದುದರಿಂದಲೇ ದೇವೇಂದ್ರನು ದಿವ್ಯಜ್ಞಾನಿಯಾಗಲು ಬಯಸಿ ದೂರ್ವಾಸಮಹರ್ಷಿ ಗಳಿಂದ ಜ್ಞಾನೋಪದೇಶವನ್ನು ಹೊಂದಿದನು.

ಇದೇ ರೀತಿಯಾಗಿ 'ಸ್ವಾಹಾ, ಸ್ವಧಾ' ಮುಂತಾದ ಅನೇಕ ದೇವಿಯರ ಉಪಾಖ್ಯಾನವನ್ನು ತಿಳಿಸುವುದರ ಮೂಲಕ ಮಹರ್ಷಿಗಳು ಜನತೆಗೆ ಸನ್ಮಾರ್ಗವನ್ನು ಬೋಧಿಸಿ, ಮಹದುಪಕಾರ ಮಾಡಿದ್ದಾರೆ.

ಇಂಥ ಪವಿತ್ರವಾದ ಗ್ರಂಥಗಳನ್ನು ಕರ್ಣಾಟಕ ಭಾಷೆಗೆ ಪರಿವರ್ತನೆಮಾಡಿಸು ವುದರ ಮೂಲಕ ಮಹದುಪಕಾರವನ್ನು ಮಾಡುತ್ತಿರುವ, ಪರಮೋದಾರಿಗಳಾದ ನಮ್ಮನ್ನಾಳುವ **ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರಿಗೂ, ಇವರ ಕುಟುಂಬಕ್ಕೂ, ಜಗದಂಬಿಕೆಯು ಆಯುರಾರೋಗ್ಯ ಐಶ್ವರ್ಯಾದಿಗಳನ್ನೂ, ಪುತ್ರಪೌತ್ರಾದಿ ಸಕಲ ಸಂಪತ್ತನ್ನೂ ಇತ್ತು ಚಿರಕಾಲ ರಕ್ಷಿಸಲೆಂದು ಪ್ರಾರ್ಥಿಸುವ

ವಿರೋಧಿ ಸಂ|| ದ ಶ್ರಾವಣ
ಶುದ್ಧ ದ್ವಿತೀಯಾ

ಸಜ್ಜನ ವಿಧೇಯ,
ಚಿಟ್ವದಪುರದ ಸುಬ್ರಾಯರ ಮಗ ಕೃಷ್ಣಪ್ಪ.

ವಿಷಯಾನುಕ್ರಮಣಿಕೆ.

ಅಧ್ಯಾಯ.	ವಿಷಯ.	ಪುಟ.
ಇಪ್ಪತ್ತಮೂರನೆಯ ಅಧ್ಯಾಯವು—		
	ಸಾವಿತ್ರಿಯ ಉಪಾಖ್ಯಾನದಲ್ಲಿ ಅಶ್ವಪತಿರಾಜನನ್ನು ಕುರಿತು ಪರಾಶರರು ಹೇಳಿದ ಸಾವಿತ್ರೀವ್ರತನಿರೂಪಣೆ.	1–20
ಇಪ್ಪತ್ತನಾಲ್ಕನೆಯ ಅಧ್ಯಾಯವು—		
	ಸಾವಿತ್ರಿಯ ಅವತಾರ–ಸತ್ಯವಂತನೊಡನೆ ಆಕೆಯ ವಿವಾಹ–ಅಪಮೃತ್ಯುಹತನಾದ ಸತ್ಯವಂತನನ್ನು ಸಾವಿತ್ರಿಯು ಅನುಸರಿಸುವಿಕೆ.	21–30
ಇಪ್ಪತ್ತೈದನೆಯ ಅಧ್ಯಾಯವು—		
	ಯಮ ಸಾವಿತ್ರಿಯರ ಸಂವಾದ.	31–39
ಇಪ್ಪತ್ತಾರನೆಯ ಅಧ್ಯಾಯವು—		
	ಯಮ ಸಾವಿತ್ರಿಯರ ಸಂವಾದ ಸಂದರ್ಭದಲ್ಲಿ ಜೀವಿಗಳ ಕರ್ಮವಿಪಾಕ ವಿವರಣೆ.	40–57
ಇಪ್ಪತ್ತೇಳನೆಯ ಅಧ್ಯಾಯವು—		
	ಪುಣ್ಯಕರ್ಮಗಳ ಫಲನಿರೂಪಣೆ.	58–88
ಇಪ್ಪತ್ತೆಂಟನೆಯ ಅಧ್ಯಾಯವು—		
	ಸಾವಿತ್ರಿಯು ಯಮನನ್ನು ಸ್ತುತಿಸುವಿಕೆ.	89–94
ಇಪ್ಪತ್ತೊಂಭತ್ತನೆಯ ಅಧ್ಯಾಯವು—		
	ನರಕಕುಂಡಗಳ ಸಂಖ್ಯಾವಿವರಣೆ.	95–101
ಮೂವತ್ತನೆಯ ಅಧ್ಯಾಯವು—		
	ಪಾಪಿಗಳಿಗೆ ಪ್ರಾಪ್ತವಾಗುವ ನರಕಯಾತನೆಗಳು–ಅತಿದೇಶಿಕವಾದ ಬ್ರಹ್ಮಹತ್ಯೆ ಮತ್ತು ಗೋಹತ್ಯೆಗಳ ಸ್ವರೂಪ ನಿರೂಪಣೆ.	102–150

ಅಧ್ಯಾಯ.	ವಿಷಯ.	ಪುಟ.
ಮೂವತ್ತೊಂದನೆಯ ಅಧ್ಯಾಯವು—		
	ಪಾಪಿಗಳ ಪಾಪಾನುಗುಣವಾಗಿ ಪ್ರಾಪ್ತವಾಗುವ ನರಕಕುಂಡಗಳ ವಿವರಣೆ.	**151_165**
ಮೂವತ್ತೆರಡನೆಯ ಅಧ್ಯಾಯವು—		
	ಮನುಜರಿಗೆ ಸ್ವರ್ಗಫಲವನ್ನು ದೊರಕಿಸುವ ಪುಣ್ಯಕರ್ಮಗಳ ನಿರೂಪಣೆ.	**166–174**
ಮೂವತ್ತಮೂರನೆಯ ಅಧ್ಯಾಯವು—		
	ಎಂಭತ್ತಾರು ನರಕಕುಂಡಗಳ ಲಕ್ಷಣನಿರೂಪಣೆ.	**175–200**
ಮೂವತ್ತನಾಲ್ಕನೆಯ ಅಧ್ಯಾಯವು—		
	ಯಮಧರ್ಮರಾಯನು ಸಾವಿತ್ರಿಯ ಪತಿಯನ್ನು ಪುನರುಜ್ಜೀವನಗೊಳಿಸಿ, ಆಕೆಗೆ ಶ್ರೀಕೃಷ್ಣನ ಮಹಿಮೆಯನ್ನು ವಿವರಿಸಿ, ದೀರ್ಘಸುಮಂಗಲಿಯಾಗುವಂತೆ ಹರಸುವಿಕೆ.	**201–222**
ಮೂವತ್ತೈದನೆಯ ಅಧ್ಯಾಯವು—		
	ಲಕ್ಷ್ಮಿಯ ಉಪಾಖ್ಯಾನದಲ್ಲಿ ಲಕ್ಷ್ಮಿಯ ಉತ್ಪತ್ತಿ–ಆಕೆಯ ನಾನಾರೂಪಗಳು ಮತ್ತು ಆಕೆಯ ಮಹಿಮೆಯನ್ನು ವಿವರಿಸುವಿಕೆ.	**223–231**
ಮೂವತ್ತಾರನೆಯ ಅಧ್ಯಾಯವು—		
	ದೂರ್ವಾಸರ ಶಾಪದಿಂದ ದೇವೇಂದ್ರನ ಸಂಪದ್ವಿನಾಶ ಮತ್ತು ದೇವೇಂದ್ರನಿಗೆ ದೂರ್ವಾಸರ ಜ್ಞಾನೋಪದೇಶದ ವಿವರಣೆ.	**232–271**
ಮೂವತ್ತೇಳನೆಯ ಅಧ್ಯಾಯವು—		
	ಬೃಹಸ್ಪತಿ ದೇವೇಂದ್ರರ ಸಂವಾದ ನಿರೂಪಣೆ.	**272–281**
ಮೂವತ್ತೆಂಟನೆಯ ಅಧ್ಯಾಯವು—		
	ಇಂದ್ರನು ದೇವತೆಗಳೊಡನೆ ಬ್ರಹ್ಮನ ಸಮೀಪಕ್ಕೆ ಹೋಗುವಿಕೆ–ಅಲ್ಲಿಂದ ಬ್ರಹ್ಮನೊಡನೆ ವೈಕುಂಠಕ್ಕೆ ತೆರಳುವಿಕೆ–ಶ್ರೀಮನ್ನಾರಾಯಣನ ಅಪ್ಪಣೆಯಂತೆ ದೇವದಾನವರು ಕ್ಷೀರಸಮುದ್ರವನ್ನು ಮಥಿಸಿ ಪುನಃ ಲಕ್ಷ್ಮಿಯನ್ನು ಪಡೆಯುವಿಕೆ.	**282–298**

ಅಧ್ಯಾಯ.	ವಿಷಯ.	ಪುಟ.
ಮೂವತ್ತೊಂಭತ್ತನೆಯ ಅಧ್ಯಾಯವು—		
	ಲಕ್ಷ್ಮೀದೇವಿಯ ಧ್ಯಾನ, ಸ್ತೋತ್ರ, ಪೂಜಾದಿಗಳ ನಿರೂಪಣೆ.	299–318
ನಲವತ್ತನೆಯ ಅಧ್ಯಾಯವು—		
	ಸ್ವಾಹೋಪಾಖ್ಯಾನದಲ್ಲಿ ಸ್ವಾಹಾದೇವಿಯ ಜನ್ಮ, ಧ್ಯಾನ, ಸ್ತೋತ್ರ, ಪೂಜಾದಿಗಳ ವಿವರಣೆ.	319–332
ನಲವತ್ತೊಂದನೆಯ ಅಧ್ಯಾಯವು—		
	ಸ್ವಧಾದೇವಿಯ ಉಪಾಖ್ಯಾನದಲ್ಲಿ ಸ್ವಧಾದೇವಿಯ ಉತ್ಪತ್ತಿ ಮತ್ತು ಪೂಜಾವಿಧಾನನಿರೂಪಣೆ.	333–345
ನಲವತ್ತೆರಡನೆಯ ಅಧ್ಯಾಯವು—		
	ದಕ್ಷಿಣಾದೇವಿಯ ಉಪಾಖ್ಯಾನದಲ್ಲಿ ದಕ್ಷಿಣಾದೇವಿಯ ಉತ್ಪತ್ತಿ ಮತ್ತು ಪೂಜಾವಿಧಾನನಿರೂಪಣೆ.	346–384
ನಲವತ್ತಮೂರನೆಯ ಅಧ್ಯಾಯವು—		
	ಷಷ್ಠೀದೇವಿಯ ಉಪಾಖ್ಯಾನದಲ್ಲಿ ಷಷ್ಠೀದೇವಿಯ ಉತ್ಪತ್ತಿ ಮತ್ತು ಪೂಜಾವಿಧಾನನಿರೂಪಣೆ.	385–394
ನಲವತ್ತೈದನೆಯ ಅಧ್ಯಾಯವು—		
	ಮನಸಾದೇವಿಯ ಉಪಾಖ್ಯಾನದಲ್ಲಿ ಮನಸಾದೇವಿಯ ಸ್ತೋತ್ರಾದಿನಿರೂಪಣೆ.	395–400
ನಲವತ್ತಾರನೆಯ ಅಧ್ಯಾಯವು—		
	ಮನಸಾದೇವಿಯ ಉತ್ಪತ್ತಿ ಮತ್ತು ಪೂಜಾವಿಧಾನನಿರೂಪಣೆ.	401–435

— || ೭: ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಅಥ ತ್ರಯೋವಿಂಶತಿತಮೋಽಧ್ಯಾಯಃ ||

|| ನಾರದ ಉವಾಚ ||

ತುಲಸ್ಯುಪಾಖ್ಯಾನಮಿದಂ ಶ್ರುತಮೀಶ ಸುಧೋಪಮಂ |
ಯತ್ತು ಸಾವಿತ್ರ್ಯುಪಾಖ್ಯಾನಂ ತನ್ಮೇ ವ್ಯಾಖ್ಯಾತುಮರ್ಹಸಿ || ೧ ||

ಪುರಾ ಯೇನ ಸಮುದ್ಭೂತಾ ಸಾ ಶ್ರುತಾ ಚ ಶ್ರುತಿಪ್ರಸೂಃ |
ಕೇನ ವಾ ಪೂಜಿತಾ ದೇವೀ ಪ್ರಥಮೇ ಕೈಶ್ಚ ವಾಪರೇ || ೨ ||

ಇಪ್ಪತ್ತಮೂರನೆಯ ಅಧ್ಯಾಯ

೧. ನಾರದ :—ಎಲೈ ಮಹರ್ಷಿಯೆ, ಅಮೃತಸಮಾನವಾದ ತುಳಸೀ ದೇವಿಯ ಕಥೆಯನ್ನು ಕೇಳಿದುದಾಯಿತು. ಈಗ ಸಾವಿತ್ರೀದೇವಿಯ ಕಥೆಯನ್ನು ನನಗೆ ದಯವಿಟ್ಟು ಹೇಳು.

೨. ಜಗದ್ವಿಖ್ಯಾತಳೂ ವೇದಮಾತೆಯೂ ಆದ ಆ ಸಾವಿತ್ರಿಯು ಪೂರ್ವದಲ್ಲಿ ಯಾರಿಂದ ಜನ್ಮವೆತ್ತಿದಳು. ಆ ದೇವಿಯನ್ನು ಮೊದಲು ಪೂಜಿಸಿದವರಾರು ? ಅನಂತರ ಪೂಜಿಸಿದವರಾರು ?

॥ ನಾರಾಯಣ ಉವಾಚ ॥

ಬ್ರಹ್ಮಣಾ ವೇದಜನನೀ ಪೂಜಿತಾ ಪ್ರಥಮೇ ಮುನೇ ।
ದ್ವಿತೀಯೇ ಚ ದೇವಗಣೈಸ್ತತ್ಪಶ್ಚಾದ್ವಿದುಷಾಂ ಗಣೈಃ ॥ ೩ ॥

ತಥಾ ಚಾಶ್ವಪತಿಃ ಪೂರ್ವಂ ಪೂಜಯಾಮಾಸ ಭಾರತೇ ।
ತತ್ಪಶ್ಚಾತ್ಪೂಜಯಾಮಾಸುರ್ವರ್ಣಾಶ್ಚತ್ವಾರ ಏವ ಚ ॥ ೪ ॥

॥ ನಾರದ ಉವಾಚ ॥

ಕೋ ವಾ ಸೋಽಶ್ವಪತಿರ್ಬ್ರಹ್ಮನ್ಕೇನ ವಾ ತೇನ ಪೂಜಿತಾ ।
ಸರ್ವಪೂಜ್ಯಾ ಚ ಸಾವಿತ್ರೀ ತನ್ಮೇ ವ್ಯಾಖ್ಯಾತುಮರ್ಹಸಿ ॥ ೫ ॥

॥ ನಾರಾಯಣ ಉವಾಚ ॥

ಮದ್ರದೇಶೇ ಮಹಾರಾಜೋ ಬಭೂವಾಶ್ವಪತಿರ್ಮುನೇ ।
ವೈರಿಣಾಂ ಬಲಹರ್ತಾ ಚ ಮಿತ್ರಾಣಾಂ ದುಃಖನಾಶನಃ ॥ ೬ ॥

---

೩. ನಾರಾಯಣ:— ಎಲೈ ನಾರದಮುನಿಯೇ, ವೇದಮಾತೆಯಾದ ಸಾವಿತ್ರೀದೇವಿಯು ಮೊದಲು ಬ್ರಹ್ಮದೇವನಿಂದಲೂ, ಅನಂತರ ದೇವತೆಗಳ ಸಮೂಹದಿಂದಲೂ, ಅನಂತರ ವಿದ್ವಾಂಸರ ಸಮೂಹದಿಂದಲೂ ಪೂಜೆಗೊಂಡಳು.

೪. ಅಂತೆಯೇ ಭರತಖಂಡದಲ್ಲಿ ಮೊದಲು ಅಶ್ವಪತಿಯೆಂಬ ರಾಜನು ಸಾವಿತ್ರೀದೇವಿಯನ್ನು ಪೂಜಿಸಿದನು. ಅನಂತರ ಚಾತುರ್ವರ್ಣ್ಯದವರೂ ಪೂಜಿಸಲಾರಂಭಿಸಿದರು.

೫ ನಾರದ:—ಎಲೈ ಸ್ವಾಮಿಯೇ, ಅಶ್ವಪತಿಯೆಂಬುವನು ಯಾರು? ಅವನು ಸಾವಿತ್ರಿಯನ್ನು ಪೂಜಿಸಲು ಕಾರಣವೇನು? ಸಾವಿತ್ರಿಯು ಸರ್ವಪೂಜ್ಯಳಾದುದೆಂತು? ಎಂಬುದನ್ನು ದಯವಿಟ್ಟು ಹೇಳಬೇಕು.

೬ ನಾರಾಯಣ:—ಎಲೈ ಮುನಿಯೇ, ಹಿಂದೆ ಮದ್ರದೇಶದಲ್ಲಿ ಅಶ್ವಪತಿಯೆಂಬ ರಾಜನೊಬ್ಬನಿದ್ದನು. ಅವನು ಶತ್ರುಗಳ ಬಲನಾಶಕನೂ, ಬಂಧುಗಳ ಕಷ್ಟನಿವಾರಕನೂ ಆಗಿದ್ದನು.

ಆಸೀತ್ತಸ್ಯ ಮಹಾರಾಜ್ಞಃ ಮಹಿಷೀ ಧರ್ಮಚಾರಿಣೀ ।
ಮಾಲತೀತಿ ಚ ಸಾ ಖ್ಯಾತಾ ಯಥಾ ಲಕ್ಷ್ಮೀರ್ಗದಾಭೃತಃ ॥ ೭ ॥

ಸಾ ಚ ರಾಜ್ಞೀ ಮಹಾಸಾಧ್ವೀ ವಸಿಷ್ಠಸ್ಯೋಪದೇಶತಃ ।
ಚಕಾರಾರಾಧನಂ ಭಕ್ತ್ಯಾ ಸಾವಿತ್ರ್ಯಾಶ್ಚೈವ ನಾರದ ॥ ೮ ॥

ಪ್ರತ್ಯಾದೇಶಂ ನ ಸಾ ಪ್ರಾಪ ಮಹಿಷೀ ನ ದದರ್ಶ ತಾಂ ।
ಗೃಹಂ ಜಗಾಮ ಸಾ ದುಃಖಾದ್ಧೃದಯೇನ ವಿದೂಯತಾ ॥ ೯ ॥

ರಾಜಾ ತಾಂ ದುಃಖಿತಾಂ ದೃಷ್ಟ್ವಾ ಬೋಧಯಿತ್ವಾ ನಯೇನ ವೈ ।
ಸಾವಿತ್ರ್ಯಾಸ್ತಪಸೇ ಭಕ್ತ್ಯಾ ಜಗಾಮ ಪುಷ್ಕರಂ ತದಾ ॥ ೧೦ ॥

ತಪಶ್ಚಚಾರ ತತ್ರೈವ ಸಂಯತಃ ಶತವತ್ಸರಂ ।
ನ ದದರ್ಶ ಚ ಸಾವಿತ್ರೀಂ ಪ್ರತ್ಯಾದೇಶೋ ಬಭೂವ ಹ ॥ ೧೧ ॥

---

೭. ಶ್ರೀಮನ್ನಾರಾಯಣನಿಗೆ ಲಕ್ಷ್ಮೀದೇವಿಯಿರುವಂತೆ ಆ ಮಹಾರಾಜನಿಗೆ ಮಾಲತಿಯೆಂಬ ಪತ್ನಿಯು ಪಟ್ಟಮಹಿಷಿಯಾಗಿದ್ದಳು

೮. ಸಾಧ್ವೀಶಿರೋಮಣಿಯಾದ ಆ ಮಾಲತೀದೇವಿಯು ವಸಿಷ್ಠ ಮಹರ್ಷಿಯ ಉಪದೇಶದಂತೆ ಭಕ್ತಿಪೂರ್ವಕವಾಗಿ ಸಾವಿತ್ರಿಯ ಆರಾಧನೆಯನ್ನು ಮಾಡಿದಳು.

೯. ಎಷ್ಟು ಆರಾಧನೆಮಾಡಿದರೂ ಆ ರಾಣಿಯು ದೇವಿಯ ಅಭಯ ನುಡಿಗಳನ್ನು ಕೇಳಲಿಲ್ಲ. ಸಾವಿತ್ರೀ ದೇವಿಯನ್ನು ನೋಡಲೂ ಇಲ್ಲ ಆದುದರಿಂದ ಸಂತಪ್ತಹೃದಯಳಾಗಿ ಮನೆಗೆ ಹಿಂತಿರುಗಿದಳು

೧೦. ಆಗ ರಾಜನಾದ ಅಶ್ವಪತಿಯು ದುಃಖಿತಳಾದ ರಾಣಿಯನ್ನು ನಯದಿಂದ ಸಮಾಧಾನಗೊಳಿಸಿ, ತಾನು ಸಾವಿತ್ರಿಯನ್ನು ಕುರಿತು ತಪಸ್ಸು ಮಾಡಲು ಪುಷ್ಕರ ಕ್ಷೇತ್ರಕ್ಕೆ ಹೋದನು.

೧೧. ಅಲ್ಲಿ ಜಿತೇಂದ್ರಿಯನಾಗಿ, ನೂರುವರ್ಷಗಳಕಾಲ ತಪಸ್ಸು ಮಾಡಿದನು. ಆದರೂ ಸಾವಿತ್ರಿಯನ್ನು ನೋಡಲಾಗದೆ ವ್ಯಥಿತಮನಸ್ಕನಾದನು.

ಶುಶ್ರಾವಾಕಾಶವಾಣೀಂ ಚ ನೃಪೇಂದ್ರಶ್ಚಾಶರೀರಿಣೀಂ ।
ಗಾಯತ್ರೀ ದಶಲಕ್ಷಂ ಚ ಜಪಂ ಕುರ್ವಿತಿ ನಾರದ ॥ ೧೨ ॥

ಏತಸ್ಮಿನ್ನಂತರೇ ತತ್ರ ಪ್ರಜಗಾಮ ಪರಾಶರಃ ।
ಪ್ರಣನಾಮ ನೃಪಸ್ತಂ ಚ ಮುನಿರ್ನೃಪಮುವಾಚ ಹ ॥ ೧೩ ॥

॥ ಪರಾಶರ ಉವಾಚ ॥

ಸಕೃಜ್ಜಪಶ್ಚ ಗಾಯತ್ರ್ಯಾಃ ಪಾಪಂ ದಿನಕೃತಂ ಹರೇತ್ ।
ದಶಧಾ ಪ್ರಜಪಾನ್ನೃಣಾಂ ದಿವಾರಾತ್ರ್ಯಘಮೇವ ಚ ॥ ೧೪ ॥

ಶತಧಾ ಚ ಜಪಾಚ್ಚೈವಂ ಪಾಪಂ ಮಾಸಾರ್ಜಿತಂ ಪರಂ ।
ಸಹಸ್ರಧಾ ಜಪಾಚ್ಚೈವಂ ಕಲ್ಮಷಂ ವತ್ಸರಾರ್ಜಿತಂ ॥ ೧೫ ॥

---

೧೨ ಎಲೈ ನಾರದನೇ, ಆಗ ಆ ರಾಜನನ್ನು ಕುರಿತು ಹತ್ತು ಲಕ್ಷ ಗಾಯತ್ರಿಯನ್ನು ಜಪಿಸೆಂದು ಅಶರೀರವಾಣಿಯು ಬೋಧಿಸಿತು.

೧೩ ಈ ಸಮಯಕ್ಕೆ ಸರಿಯಾಗಿ ಪರಾಶರ ಮುನಿಯು ಆ ರಾಜನಿದ್ದೆಡೆಗೆ ಬಂದನು ಕೂಡಲೇ ರಾಜನು ಎದ್ದು ನಮಸ್ಕರಿಸಲು, ಆ ಮುನಿಯು ಅವನನ್ನು ಕುರಿತು ಇಂತೆಂದನು.

೧೪. ಪರಾಶರ:—ಎಲೈ ರಾಜನೇ, ಗಾಯತ್ರಿಯನ್ನು ಒಂದೊಂದುಬಾರಿ ಜಪಿಸುವುದರಿಂದ ಪ್ರತಿದಿನವೂ ಮಾಡಿದ ಪಾಪವು ಪರಿಹಾರವಾಗುವುದು ಹತ್ತು ಸಾರಿ ಜಪಿಸಿದ ಮಾನವನು ಹಗಲೂ ರಾತ್ರಿಯೂ ಮಾಡಿದ ಪಾಪವನ್ನು ಪರಿಹರಿಸಿಕೊಳ್ಳುವನು.

೧೫. ನೂರುಸಾರಿ ಜಪಿಸಿ, ಒಂದು ತಿಂಗಳು ಮಾಡಿದ ಪಾಪವನ್ನೂ ಸಾವಿರಸಾರಿ ಜಪಿಸಿ, ಒಂದು ವರ್ಷಕಾಲ ಮಾಡಿದ ಪಾಪವನ್ನೂ ಪರಿಹರಿಸಿಕೊಳ್ಳುವನು.

ಲಕ್ಷಂ ಜನ್ಮಕೃತಂ ಪಾಪಂ ದಶಲಕ್ಷಂ ತ್ರಿಜನ್ಮನಃ ।
ಸರ್ವಜನ್ಮಕೃತಂ ಪಾಪಂ ಶತಲಕ್ಷೋ ವಿನಶ್ಯತಿ ॥ ೧೬ ॥

ಕರೋತಿ ಮುಕ್ತಿಂ ವಿಪ್ರಾಣಾಂ ಜಪೋ ದಶಗುಣಸ್ತತಃ ।
ಕರಂ ಸರ್ಪಫಣಾಕಾರಂ ಕೃತ್ವಾ ತು ಊರ್ಧ್ವಮುದ್ರಿತಂ ॥ ೧೭ ॥

ಆನಮ್ರ ಮೂರ್ಧಮಚಲಂ
ಆನಮ್ರ ಮೂರ್ಧಾಸತತಮಿತಿಪಾಠಃ } ಪ್ರಜಪೇತ್ಪ್ರಾಙ್ಮುಖೋ ದ್ವಿಜಃ ।
ಅನಾಮಿಕಾಮಧ್ಯದೇಶಾದಧೋ ವಾಮಕ್ರಮೇಣ ಚ ॥ ೧೮ ॥

ತರ್ಜನೀಮೂಲಪರ್ಯಂತಂ ಜಪಸ್ಯೈಷಕ್ರಮಃ ಕರೇ ।
ಶ್ವೇತಪಂಕಜಬೀಜಾನಾಂ ಸ್ಫಾಟಿಕಾನಾಂ ಚ ಸಂಸ್ಕೃತಾಂ ॥ ೧೯ ॥

ಕೃತ್ವಾ ವಾ ಮಾಲಿಕಾಂ ರಾಜನ್ ಜಪೇತ್ತೀರ್ಥೇ ಸುರಾಲಯೇ ।
ಸಂಸ್ಥಾಪ್ಯ ಮಾಲಾಮಶ್ವತ್ಥಪತ್ರಸಪ್ತಸು ಸಂಯುತೇಃ ॥ ೨೦ ॥

---

೧೬ ಲಕ್ಷಸಾರಿ ಜಪಿಸಿ, ಹುಟ್ಟಿದಂದಿನಿಂದಲೂ ಮಾಡಿದ ಪಾಪವನ್ನೂ, ಹತ್ತು ಲಕ್ಷಸಾರಿ ಜಪಿಸಿ, ಮೂರು ಜನ್ಮದ ಪಾಪವನ್ನೂ. ನೂರು ಲಕ್ಷಬಾರಿ ಜಪಿಸಿ ಅನೇಕ ಜನ್ಮಜನ್ಮಾಂತರಗಳ ಪಾಪವನ್ನೂ ಪರಿಹರಿಸಿಕೊಳ್ಳುವನು

೧೭-೧೮. ಅದಕ್ಕೆ ಹತ್ತರಷ್ಟು ಜಪಿಸಿದರೆ ಬ್ರಾಹ್ಮಣರು ಮುಕ್ತಿಯನ್ನು ಹೊಂದುವರು. ಕೈಯನ್ನು ಹಾವಿನ ಹೆಡೆಯಂತೆ ಮೇಲುಮುಖನಾಗಿ ಮಾಡಿಕೊಂಡು ದ್ವಿಜನು ಪೂರ್ವಾಭಿಮುಖನಾಗಿ ಜಪಿಸಬೇಕು. ಅನಾಮಿಕಾ ಬೆರಳಿನ ಮಧ್ಯಪ್ರದೇಶದಿಂದ ಪ್ರಾರಂಭಮಾಡಿಕೊಂಡು ಎಡಭಾಗದಿಂದ ಕ್ರಮವಾಗಿ ಎಣಿಸುತ್ತಾ ತೋರುಬೆರಳಿನ ಬುಡದವರೆಗೆ ಎಣಿಸಿ, ಜಪ ಮಾಡಬೇಕು. ಇದು ಕೈಯ್ಯಲ್ಲಿ ಜಪ ಮಾಡುವ ಕ್ರಮ.

೧೯-೨೦. ಅಥವಾ ಪುಣ್ಯಕ್ಷೇತ್ರದಲ್ಲೋ, ದೇವಾಲಯದಲ್ಲೋ ಬಿಳಿದಾವರೆಯ ಬೀಜದಿಂದಾಗಲೀ, ಶುದ್ಧವಾದ ಸ್ಫಟಿಕದಿಂದಾಗಲೀ ರಚಿಸಿರುವ ಮಾಲೆಯಿಂದಾದರೂ, ಜಪಮಾಡಬಹುದು. (ಆ ಮಾಲೆಯನ್ನು ಏಳು ಅರಳಿ ಎಲೆಯಲ್ಲಿಟ್ಟು ಇಂದ್ರಿಯನಿಗ್ರಹಪರನಾಗಿ ಜಪಿಸಬೇಕು).

ಕೃತ್ವಾ ಗೋರೋಚನಾಕ್ತಾಂ ಚ ಗಾಯತ್ರ್ಯಾಸ್ನಾಪಯೇತ್ಸುಧೀಃ ।
ಗಾಯತ್ರೀಶತಕಂ ತಸ್ಯಾಂ ಜಪೇಚ್ಚ ವಿಧಿಪೂರ್ವಕಂ　　॥ ೨೧ ॥

ಅಥವಾ ಪಂಚಗವ್ಯೇನ ಸ್ನಾತಾ ಮಾಲಾ ಸುಸಂಸ್ಕೃತಾ ।
ಅಥ ಗಂಗೋದಕೇನೈವ ಸ್ನಾತಾ ವಾತಿಸುಸಂಸ್ಕೃತಾ　　॥ ೨೨ ॥

ಏವಂ ಕ್ರಮೇಣ ರಾಜರ್ಷೇ ದಶಲಕ್ಷಂ ಜಪಂ ಕುರು ।
ಸಾಕ್ಷಾದ್ದ್ರಕ್ಷ್ಯಸಿ ಸಾವಿತ್ರೀಂ ತ್ರಿಜನ್ಮಪಾಪಕಕ್ಷಯಾತ್　　॥ ೨೩ ॥

ನಿತ್ಯಂ ನಿತ್ಯಂ ತ್ರಿಸಂಧ್ಯಂ ಚ ಕರಿಷ್ಯಸಿ ದಿನೇ ದಿನೇ ।
ಮಧ್ಯಾಹ್ನೇ ಚಾಪಿ ಸಾಯಾಹ್ನೇ ಪ್ರಾತರೇವ ಶುಚಿಃ ಸದಾ　　॥ ೨೪ ॥

ಸಂಧ್ಯಾಹೀನೋಽಶುಚಿರ್ನಿತ್ಯಮನರ್ಹಃ ಸರ್ವಕರ್ಮಸು ।
ಯದಹ್ನಾ ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್　　॥ ೨೫ ॥

---

೨೧. ಪಂಡಿತನಾದವನು, ಆ ಮಾಲೆಗೆ ಗಾಯತ್ರೀ ಮಂತ್ರೋಚ್ಚಾರಣ ಪೂರ್ವಕವಾಗಿ ಗೋರೋಚನವನ್ನು ಬಳಿದು ವಿಧಿಪೂರ್ವಕವಾಗಿ ನೂರು ಗಾಯತ್ರಿಯನ್ನು ಅದರಲ್ಲಿ ಜಪಿಸಬೇಕು.

೨೨. ಗೋರೋಚನವಿಲ್ಲದಿದ್ದರೆ, ಪಂಚಗವ್ಯ (ಸಗಣಿ, ಗಂಜಲ, ಹಾಲು, ಮೊಸರು, ತುಪ್ಪ) ದಿಂದಾಗಲೀ, ಗಂಗೋದಕದಿಂದಾಗಲೀ, ಸ್ನಾನಮಾಡಿಸುವುದರಿಂದಲೂ ಜಪಮಾಲೆಯು ಸುಸಂಸ್ಕೃತವಾಗುವುದು.

೨೩. ಎಲೈ ರಾಜರ್ಷಿಯೇ, ಹೀಗೆ ಕ್ರಮವಾಗಿ ಹತ್ತುಲಕ್ಷ ಜಪಮಾಡು. ಆಗ ನಿನ್ನ ಮೂರು ಜನ್ಮದ ಪಾಪಗಳೂ ನಾಶವಾಗಿ ಸಾವಿತ್ರೀದೇವಿಯ ಸಾಕ್ಷಾತ್ಕಾರವನ್ನು ಹೊಂದುವೆ.

೨೪. ಪ್ರತಿದಿನವೂ ತಪ್ಪದೆ ಪ್ರಾತಃಕಾಲ, ಮಧ್ಯಾಹ್ನ ಅಥವಾ ಸಾಯಂಕಾಲಗಳಲ್ಲಾಗಲೀ, ತ್ರಿಸಂಧ್ಯೆಯಲ್ಲೂ ಆಗಲೀ ಜಪಿಸುವುದು ಉತ್ತಮ.

೨೫. ಸಂಧ್ಯಾವಂದನೆ ಮಾಡದೆ ಅಶುಚಿಯಾಗಿರುವ ಮನುಷ್ಯನು ಸಕಲ ಕರ್ಮಗಳಿಗೂ ಅನರ್ಹನಾಗುವನು. ಅವನು ಅಂದು ಮಾಡಿದ ಪುಣ್ಯಕರ್ಮದ ಫಲವನ್ನು ಹೊಂದಲಾರನು.

ನೋಪತಿಷ್ಠತಿ ಯಃ ಪೂರ್ವಾಂ ನೋಪಾಸ್ತೇ ಯಶ್ಚ ಪಶ್ಚಿಮಾಂ ।
ಸ ಶೂದ್ರವದ್ಬಹಿಷ್ಕಾರ್ಯಃ ಸರ್ವಸ್ಮಾದ್ದ್ವಿಜಕರ್ಮಣಃ ॥ ೨೬ ॥

ಯಾವಜ್ಜೀವನಪರ್ಯಂತಂ ಯಸ್ತ್ರಿಸಂಧ್ಯಾಂ ಕರೋತಿ ಚ ।
ಸ ಚ ಸೂರ್ಯಸಮೋ ವಿಪ್ರಸ್ತೇಜಸಾ ತಪಸಾ ಸದಾ ॥ ೨೭ ॥

ತತ್ಪಾದಪದ್ಮರಜಸಾ ಸದ್ಯಃ ಪೂತಾ ವಸುಂಧರಾ ।
ಜೀವನ್ಮುಕ್ತಃ ಸ ತೇಜಸ್ವೀ ಸಂಧ್ಯಾಪೂತೋ ಹಿ ಯೋ ದ್ವಿಜಃ ॥ ೨೮ ॥

ತೀರ್ಥಾನಿ ಚ ಪವಿತ್ರಾಣಿ ತಸ್ಯ ಸ್ಪರ್ಶನಮಾತ್ರತಃ ।
ತತಃ ಪಾಪಾನಿ ಯಾಂತ್ಯೇವ ವೈನತೇಯಾದಿವೋರಗಾಃ ॥ ೨೯ ॥

ನ ಗೃಹ್ಣಂತಿ ಸುರಾಃ ಪೂಜಾಂ ಪಿತರಃ ಪಿಂಡತರ್ಪಣಂ ।
ಸ್ವೇಚ್ಛಯಾ ಚ ದ್ವಿಜಾತೇಶ್ಚ ತ್ರಿಸಂಧ್ಯರಹಿತಸ್ಯ ಚ ॥ ೩೦ ॥

---

೨೬. ಯಾರು ಬೆಳಗಿನ ಮತ್ತು ಸಂಜೆಯ ಸಂಧ್ಯಾಕರ್ಮಗಳನ್ನು ಕ್ರಮವಾಗಿ ಆಚರಿಸುವುದಿಲ್ಲವೋ ಅವನನ್ನು ಬ್ರಾಹ್ಮಣೋಚಿತವಾದ ಸಕಲ ಕರ್ಮಗಳಿಂದಲೂ ಬಹಿಷ್ಕಾರ ಹಾಕಿ ಶೂದ್ರನಂತಿಡಬೇಕು.

೨೭. ಜೀವಿತಕಾಲಪೂರ್ತಿಯಾಗಿ ಯಾರು ತ್ರಿಸಂಧ್ಯಾಕರ್ಮವನ್ನು ಆಚರಿಸುವರೋ ಆ ಬ್ರಾಹ್ಮಣರು ತೇಜಸ್ಸು ಮತ್ತು ತಪಸ್ಸಿನಲ್ಲಿ ಸೂರ್ಯನಿಗೆ ಸಮನೆನಿಸುವರು.

೨೮ ಸಂಧ್ಯೆಯಿಂದ ಪವಿತ್ರನಾಗಿರುವ ಆ ಬ್ರಾಹ್ಮಣನ ಪಾದಧೂಳಿಯ ಸ್ಪರ್ಶದಿಂದ ಭೂದೇವಿಯೂ ಕೂಡ ಪವಿತ್ರಳಾಗುವಳು. ಆ ತೇಜಸ್ವಿಯೂ ಕೂಡ ಜೀವನ್ಮುಕ್ತನಾಗುವನು.

೨೯. ಆ ಪುಣ್ಯಪುರುಷನ ಸ್ಪರ್ಶಮಾತ್ರದಿಂದ ಪುಣ್ಯತೀರ್ಥಗಳೆಲ್ಲವೂ ಪವಿತ್ರವಾಗುವುವು. ಗರುಡನನ್ನು ಕಂಡು ಹಾವುಗಳು ಬೆದರಿ ಓಡುವಂತೆ ಪಾಪಗಳೆಲ್ಲವೂ ಅವನಿಗೆ ಬೆದರಿ ಓಡುವುವು.

೩೦ ತ್ರಿಸಂಧ್ಯಾಕರ್ಮವನ್ನಾಚರಿಸದೆ ಸ್ವೇಚ್ಛೆಯಾಗಿರುವ ಮನುಜನು ಅರ್ಪಿಸಿದ ಪೂಜೆಯನ್ನು ದೇವತೆಗಳು ಸ್ವೀಕರಿಸುವುದಿಲ್ಲ ಅವನು ಕೊಟ್ಟ ಪಿಂಡ ಮತ್ತು ತರ್ಪಣೋದಕವನ್ನು ಪಿತೃಗಳು ಸ್ವೀಕರಿಸುವುದಿಲ್ಲ

ವಿಷ್ಣುಮಂತ್ರವಿಹೀನಶ್ಚ ತ್ರಿಸಂಧ್ಯರಹಿತೋ ದ್ವಿಜಃ ।
ಏಕಾದಶೀವಿಹೀನಶ್ಚ ವಿಷಹೀನೋ ಯಥೋರಗಃ ॥ ೩೧ ॥

ಹರೇರನ್ನೈವೇದ್ಯಭೋಜೀ ಧಾವಕೋ ವೃಷವಾಹಕಃ ।
ಶೂದ್ರಾನ್ನಭೋಜೀ ವಿಪ್ರಶ್ಚ ವಿಷಹೀನೋ ಯಥೋರಗಃ ॥ ೩೨ ॥

ಶವದಾಹೀ ಚ ಶೂದ್ರಾಣಾಂ ಯೋ ವಿಪ್ರೋ ವೃಷಲೀಪತಿಃ ।
ಶೂದ್ರಾಣಾಂ ಸೂಪಕಾರಶ್ಚ ವಿಷಹೀನೋ ಯಥೋರಗಃ ॥ ೩೩ ॥

ಶೂದ್ರಾಣಾಂ ಚ ಪ್ರತಿಗ್ರಾಹೀ ಶೂದ್ರಯಾಜೀ ಚ ಯೋ ದ್ವಿಜಃ ।
ಅಸಿಜೀವೀ ಮಷೀಜೀವೀ ವಿಷಹೀನೋ ಯಥೋರಗಃ ॥ ೩೪ ॥

---

೩೧. ವಿಷ್ಣುಮಂತ್ರವನ್ನು ಜಪಿಸದ, ತ್ರಿಸಂಧ್ಯೆಯನ್ನಾಚರಿಸದ, ಮತ್ತು ಏಕಾದಶೀ ವ್ರತವನ್ನಾಚರಿಸದ ದ್ವಿಜನು ವಿಷವಿಲ್ಲದ ಸರ್ಪದಂತೆ ದುರ್ಬಲನಾಗುವನು.

೩೨. ಶ್ರೀಹರಿಗೆ ಅರ್ಪಿಸದ ಅನ್ನವನ್ನು ಭುಂಜಿಸುವವನೂ, ಜಾತಿಹೀನರ ಬಟ್ಟೆಯನ್ನು ಒಗೆಯುವವನೂ, ವೃಷಭದಮೇಲೆ ಸಂಚರಿಸುವವನೂ, ಶೂದ್ರರ ಅನ್ನವನ್ನು ತಿನ್ನುವವನೂ ಆದ ದ್ವಿಜನು ವಿಷವಿಲ್ಲದ ಹಾವಿಗೆ ಸಮಾನನು.

೩೩. ಬ್ರಾಹ್ಮಣನಾಗಿ ಹುಟ್ಟಿ, ಶೂದ್ರರ ಶವಸಂಸ್ಕಾರ ಮಾಡುವವನೂ, ಶೂದ್ರ ಸ್ತ್ರೀಯನ್ನು ಲಗ್ನವಾಗುವವನೂ, ಶೂದ್ರರ ಮನೆಯಲ್ಲಿ ಅಡಿಗೆ ಮಾಡುವವನೂ ವಿಷವಿಲ್ಲದ ಹಾವಿನಂತೆ ದುರ್ಬಲನಾಗುವನು.

೩೪. ಯಾವ ಬ್ರಾಹ್ಮಣನು ಶೂದ್ರನ ಕೈಯಲ್ಲಿ ಯಾಗ ಮಾಡಿಸಿ ಅವನಿಂದ ದಾನವನ್ನು ಪರಿಗ್ರಹಿಸುವನೋ, ಕತ್ತಿಯಿಂದಲೂ ಲೇಖನಿಯಿಂದಲೂ ಜೀವಿಸುವನೋ ಅವನು ವಿಷವಿಲ್ಲದ ಹಾವಿನಂತಾಗುವನು.

ಯೋ ವಿಪ್ರೋಽವೀರಾನ್ನಭೋಜೀ ಋತುಸ್ನಾತಾನ್ನಭೋಜಕಃ ।
ಭಗಜೀವೀ ವಾರ್ಧುಷಿಕೋ ವಿಷಹೀನೋ ಯಥೋರಗಃ ॥ ೩೫ ॥

ಯಃ ಕನ್ಯಾವಿಕ್ರಯೀ ವಿಪ್ರೋ ಯೋ ಹರೇರ್ನಾಮವಿಕ್ರಯೀ ।
ಯೋ ವಿದ್ಯಾವಿಕ್ರಯೀ ಭೂಪ ವಿಷಹೀನೋ ಯಥೋರಗಃ ॥ ೩೬ ॥

ಸೂರ್ಯೋದಯೇ ಚ ದ್ವಿರ್ಭೋಜೀ ಮತ್ಸ್ಯಭೋಜೀ ಚ ಯೋ ದ್ವಿಜಃ ।
ಶಿಲಾಪೂಜಾದಿರಹಿತೋ ವಿಷಹೀನೋ ಯಥೋರಗಃ ॥ ೩೭ ॥

ಇತ್ಯುಕ್ತ್ವಾ ಚ ಮುನಿಶ್ರೇಷ್ಠಃ ಸರ್ವಂ ಪೂಜಾವಿಧಿಕ್ರಮಂ ।
ತಮುವಾಚ ಚ ಸಾವಿತ್ರ್ಯಾ ಧ್ಯಾನಾಧಿಕಮಭೀಪ್ಸಿತಂ ॥ ೩೮ ॥

---

೩೫. ಪತಿಪುತ್ರರಿಲ್ಲದ ಹೆಂಗಸು ಮಾಡಿದ ಮತ್ತು ಋತುಸ್ನಾತಳಾದ ಸ್ತ್ರೀಯು ಮಾಡಿದ, ಅನ್ನವನ್ನು ತಿನ್ನುವವನೂ, ಪತ್ನೀಪುತ್ರಿಯರನ್ನು ಮತ್ತೊಬ್ಬನಿಗೆ ಕೊಟ್ಟು ಜೀವಿಸುವವನೂ, ಹಣವನ್ನು ಸಾಲ ಕೊಟ್ಟು ಬಡ್ಡಿಯಿಂದ ಜೀವಿಸುವವನೂ ವಿಷವಿಲ್ಲದ ಹಾವಿಗೆ ಸಮಾನರು

೩೬. ಎಲೈ ರಾಜನೇ, ಮಗಳನ್ನು ಹಣದಾಸೆಗೆ ಮಾರುವ ಬ್ರಾಹ್ಮಣನೂ. ಶ್ರೀಹರಿಯ ದಿವ್ಯನಾಮವನ್ನು ದುಡ್ಡಿಗೆ ಮಾರುವವನೂ. ಸದ್ವಿದ್ಯೆಯನ್ನು ವಿಕ್ರಯಿಸುವವನೂ ವಿಷರಹಿತವಾದ ಹಾವಿಗೆ ಸದೃಶರು.

೩೭. ಹಗಲು ಎರಡುಸಾರಿ ಊಟಮಾಡುವ, ಮತ್ತು ಮೀನನ್ನು ಆಹಾರವಾಗಿ ಸೇವಿಸುವ, ಮತ್ತು ಸಾಲಿಗ್ರಾಮಾದಿ ಶಿಲಾಪೂಜೆಯನ್ನು ಮಾಡದಿರುವ ಬ್ರಾಹ್ಮಣನು ವಿಷರಹಿತವಾದ ಹಾವಿನಂತಾಗುವನು.

೩೮. ಆ ಮುನಿಶ್ರೇಷ್ಠನು ಇಂತು ಸಾವಿತ್ರಿಯ ಪೂಜಾವಿಧಿಯನ್ನೆಲ್ಲಾ ಚೆನ್ನಾಗಿ ವಿವರಿಸಿ. ಆ ರಾಜನನ್ನು ಕುರಿತು ಸಾವಿತ್ರಿಯ ಧ್ಯಾನಾದಿಗಳನ್ನು ಉಪದೇಶಿಸಿದನು.

ದತ್ವಾ ಸರ್ವಂ ನೃಪೇಂದ್ರಾಯ ಪ್ರಯಯೌ ಸ್ವಾಲಯಂ ಮುನಿಃ ।
ರಾಜಾ ಸುಪೂಜ್ಯ ಸಾವಿತ್ರೀಂ ದದರ್ಶ ವರಮಾಪ ಚ　　　　॥ ೩೯ ॥

॥ ನಾರದ ಉವಾಚ ॥

ಕಿಂ ವಾ ಧ್ಯಾನಂ ಚ ಸಾವಿತ್ರ್ಯಾಃ ಕಿಂ ವಾ ಪೂಜಾವಿಧಾನಕಂ ।
ಸ್ತೋತ್ರಂ ಮಂತ್ರಂ ಚ ಕಿಂ ದತ್ವಾ ಪ್ರಯಯೌ ಸ ಪರಾಶರಃ　　　　॥ ೪೦ ॥

ನೃಪಃ ಕೇನ ವಿಧಾನೇನ ಸಂಪೂಜ್ಯ ಶ್ರುತಿಮಾತರಂ ।
ವರಂ ಚ ಕಿಂ ವಾ ಸಂಪ್ರಾಪ ವದಸ್ವೋಽಶ್ವಪತಿರ್ನೃಪಃ　　　　॥ ೪೧ ॥

॥ ನಾರಾಯಣ ಉವಾಚ ॥

ಜ್ಯೇಷ್ಠೇ ಕೃಷ್ಣತ್ರಯೋದಶ್ಯಾಂ ಶುದ್ಧೇ ಕಾಲೇ ಚ ಸಂಯುತಃ ।
ವ್ರತಮೇವ ಚತುರ್ದಶ್ಯಾಂ ವ್ರತೀ ಭಕ್ತ್ಯಾ ಸಮಾಚರೇತ್　　　　॥ ೪೨ ॥

---

೩೯. ಇಂತು ಆ ಮುನಿಯು ಆ ರಾಜನಿಗೆ ಸಕಲೋಪದೇಶವನ್ನೂ ಕೊಟ್ಟು ತನ್ನ ಆಶ್ರಮಕ್ಕೆ ಹಿಂತಿರುಗಲು, ರಾಜನು ಸಾವಿತ್ರಿಯನ್ನು ಪೂಜಿಸಿ, ಸಾಕ್ಷಾತ್ಕಾರ ಪಡೆದು, ವರವನ್ನು ಹೊಂದಿದನು.

೪೦. ನಾರದ:—ಎಲೈ ನಾರಾಯಣ ಮಹರ್ಷಿಯೇ, ಪರಾಶರ ಮಹರ್ಷಿಯು ಅಶ್ವಪತಿರಾಜನಿಗೆ ಉಪದೇಶಿಸಿದ ಸಾವಿತ್ರಿಯ ಧ್ಯಾನ ಪೂಜಾಕ್ರಮವನ್ನೂ, ಸ್ತೋತ್ರಮಂತ್ರಗಳನ್ನೂ ವಿವರಿಸು.

೪೧. ಆ ಅಶ್ವಪತಿರಾಜನೂ ಕೂಡ ಶ್ರುತಿಮಾತೆಯಾದ ಸಾವಿತ್ರಿಯನ್ನು ಯಾವ ರೀತಿಯಿಂದ ಪೂಜಿಸಿ, ಏನು ವರವನ್ನು ಪಡೆದನೆಂದು ವಿಸ್ತಾರವಾಗಿ ಹೇಳು.

೪೨. ನಾರಾಯಣ:— ಜ್ಯೇಷ್ಠಮಾಸದ ಶುಕ್ಲತ್ರಯೋದಶೀ ಅಥವಾ ಚತುರ್ದಶಿಯ ದಿನದಲ್ಲಿ ಶುದ್ಧವಾದ ಕಾಲವನ್ನರಿತು, ಇಂದ್ರಿಯ ನಿಗ್ರಹ ಪರನಾಗಿ ಭಕ್ತಿಯಿಂದ ಸಾವಿತ್ರೀ ವ್ರತವನ್ನಾಚರಿಸಬೇಕು.

ವ್ರತಂ ಚತುರ್ದಶಾಬ್ದಂ ಚ ದ್ವಿಸಪ್ತಫಲಸಂಯುತಂ |
ದತ್ವಾ ದ್ವಿಸಪ್ತನೈವೇದ್ಯಂ ಪುಷ್ಪಧೂಪಾದಿಕಂ ತಥಾ || ೪೩ ||

ವಸ್ತ್ರಂ ಯಜ್ಞೋಪವೀತಂ ಚ ಭೋಜ್ಯಂ ಚ ವಿಧಿಪೂರ್ವಕಂ |
ಸಂಸ್ಥಾಪ್ಯ ಮಂಗಲಘಟಂ ಫಲಶಾಖಾಸಮನ್ವಿತಂ || ೪೪ ||

ಗಣೇಶಂ ಚ ದಿನೇಶಂ ಚ ವಹ್ನಿಂ ವಿಷ್ಣುಂ ಶಿವಂ ಶಿವಾಂ |
ಸಂಪೂಜ್ಯ ಪೂಜಯೇದಿಷ್ಟಂ ಘಟೇ ಆವಾಹಿತೇ ಮುನೇ || ೪೫ ||

ಶೃಣು ಧ್ಯಾನಂ ಚ ಸಾವಿತ್ರ್ಯಾಶ್ಚೋಕ್ತಂ ಮಾಧ್ಯಂದಿನೇ ಚ ಯತ್ |
ಸ್ತೋತ್ರಂ ಪೂಜಾವಿಧಾನಂ ಚ ಮಂತ್ರಂ ಚ ಸರ್ವಕಾಮದಂ || ೪೬ ||

ತಪ್ತಕಾಂಚನ ವರ್ಣಾಭಾಂ ಜ್ವಲಂತೀಂ ಬ್ರಹ್ಮತೇಜಸಾ |
ಗ್ರೀಷ್ಮಮಧ್ಯಾಹ್ನಮಾರ್ತಂಡಸಹಸ್ರಸಮಸುಪ್ರಭಾಂ || ೪೭ ||

---

೪೩. ಹದಿನಾಲ್ಕು ಫಲಗಳನ್ನು ಸಮರ್ಪಿಸಿ, ಹದಿನಾಲ್ಕುಬಗೆಯ ನೈವೇದ್ಯವನ್ನು ಅರ್ಪಿಸಿ, ಪುಷ್ಪಧೂಪಾದಿಗಳಿಂದ ಸಾವಿತ್ರಿಯನ್ನು ತುಷ್ಟಿಬಡಿಸಿ, ಹದಿನಾಲ್ಕು ವರ್ಷಗಳಕಾಲ ವ್ರತವನ್ನಾಚರಿಸಬೇಕು

೪೪. ವಸ್ತ್ರ ಮತ್ತು ಯಜ್ಞೋಪವೀತಗಳನ್ನೂ, ಭಕ್ಷ್ಯಭೋಜ್ಯಾದಿಗಳನ್ನೂ ವಿಧಿಪೂರ್ವಕವಾಗಿ ಸಮರ್ಪಿಸಿ, ಫಲ ಮತ್ತು ಶಾಖೆಯೊಡಗೂಡಿದ ಮಂಗಳ ಕಲಶದಲ್ಲಿ ದೇವಿಯನ್ನು ಆವಾಹಿಸಬೇಕು.

೪೫. ಗಣೇಶ, ದಿನೇಶ (ಸೂರ್ಯ), ಅಗ್ನಿ, ವಿಷ್ಣು, ಶಿವ ಮತ್ತು ಶಿವಾ (ಪಾರ್ವತಿ) ಈ ದೇವದೇವಿಯರನ್ನೆಲ್ಲಾ ಮೊದಲು ಪೂಜಿಸಿ, ಅನಂತರ ಕಲಶದಲ್ಲಿ ಇಷ್ಟದೇವತಾವಾಹನೆಯನ್ನು ಮಾಡಿ ಪೂಜಿಸಬೇಕು.

೪೬. ಎಲೈ ಮುನಿಯೇ, (ಮಾಧ್ಯಂದಿನಕ್ರಮೋಕ್ತವಾದ) ಸಾವಿತ್ರಿಯ ಧ್ಯಾನಕ್ರಮವನ್ನೂ, ಸ್ತೋತ್ರ ಪೂಜಾವಿಧಾನವನ್ನೂ, ಸರ್ವಕಾಮಫಲಪ್ರದವಾದ ಮಂತ್ರವನ್ನೂ ಹೇಳುವೆನು ಕೇಳು.

೪೭-೪೮. (ಧ್ಯಾನ) ಪುಟಕ್ಕೆ ಹಾಕಿದ ಚಿನ್ನದಂತೆ ದೇಹಕಾಂತಿಯುಳ್ಳವಳೂ, ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುವವಳೂ, ಗ್ರೀಷ್ಮರ್ತುವಿನ ಮಧ್ಯಾಹ್ನಕಾಲದ

ಈಷದ್ಧಾಸ್ಯಪ್ರಸನ್ನಾಸ್ಯಾಂ ರತ್ನಭೂಷಣಭೂಷಿತಾಂ ।
ವಹ್ನಿಶುದ್ಧಾಂಶುಕಾಧಾನಾಂ ಭಕ್ತಾನುಗ್ರಹಕಾತರಾಂ ॥ ೪೮ ॥

ಸುಖದಾಂ ಮುಕ್ತಿದಾಂ ಶಾಂತಾಂ ಕಾಂತಾಂ ಚ ಜಗತಾಂ ವಿಧೇಃ ।
ಸರ್ವಸಂಪತ್ಸ್ವರೂಪಾಂ ಚ ಪ್ರದಾತ್ರೀಂ ಸರ್ವಸಂಪದಾಂ ॥ ೪೯ ॥

ವೇದಾಧಿಷ್ಠಾತೃದೇವೀಂ ಚ ವೇದಶಾಸ್ತ್ರಸ್ವರೂಪಿಣೀಂ ।
ವೇದಬೀಜಸ್ವರೂಪಾಂ ಚ ಭಜೇ ತ್ವಾಂ ವೇದಮಾತರಂ ॥ ೫೦ ॥

ಧ್ಯಾತ್ವಾ ಧ್ಯಾನೇನ ಚಾನೇನ ದತ್ವಾ ಪುಷ್ಪಂ ಸ್ವಮೂರ್ಧನಿ ।
ಪುನರ್ಧ್ಯಾತ್ವಾ ಘಟೇ ಭಕ್ತ್ಯಾ ದೇವೀಮಾವಾಹಯೇದ್ವ್ರತೀ ॥ ೫೧ ॥

ದತ್ವಾ ಷೋಡಶೋಪಚಾರಂ ವೇದೋಕ್ತಮಂತ್ರಪೂರ್ವಕಂ ।
ಸಂಪೂಜ್ಯ ಸ್ತುತ್ವಾ ಪ್ರಣಮೇದೇವಂ ದೇವೀಂ ವಿಧಾನತಃ ॥ ೫೨ ॥

ಸಹಸ್ರಸೂರ್ಯರಂತೆ ತೇಜೋವತಿಯೂ, ನಸುನಗೆಯಿಂದ ಪ್ರಸನ್ನಮುಖಿಯೂ, ರತ್ನಾಭರಣಾಲಂಕೃತಳೂ, ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿರುವವಳೂ. ಭಕ್ತಾನುಗ್ರಹಕಾರಕಳೂ ಆದ ಸಾವಿತ್ರೀ ದೇವಿಯನ್ನು ಭಜಿಸುವೆನು.

೪೯–೫೦. ವಿಧಿನಿರ್ಮಿತವಾದ ಜಗತ್ತಿಗೆಲ್ಲಾ ಸುಖ ಮತ್ತು ಮುಕ್ತಿಯನ್ನು ಕೊಡುವವಳೂ, ಶಾಂತಳೂ, ಮನೋಹರಳೂ, ಸರ್ವಸಂಪತ್ಸ್ವರೂಪಿಣಿಯೂ. ಸಕಲ ಸಂಪತ್ಪ್ರದಾತ್ರಿಯೂ, ವೇದಗಳಿಗೆ ಅಧಿಷ್ಠಾತ ದೇವತೆಯೂ, ವೇದಶಾಸ್ತ್ರಸ್ವರೂಪಿಣಿಯೂ, ವೇದಬೀಜಸ್ವರೂಪಳೂ. ವೇದಮಾತೆಯೂ ಆದ ನಿನ್ನನ್ನು ಸರ್ವದಾ ಭಜಿಸುವೆನು.

೫೧. ಮೇಲೆ ಹೇಳಿದ ಅರ್ಥವನ್ನು ಕೊಡುವ ಶ್ಲೋಕದಿಂದ ಸಾವಿತ್ರೀ ದೇವಿಯನ್ನು ಧ್ಯಾನಿಸಿ, ಪ್ರಸಾದವನ್ನು ತನ್ನ ತಲೆಯಲ್ಲಿ ಧರಿಸಿ. ಮತ್ತೆ ಧ್ಯಾನಿಸಿ, ದೇವಿಯನ್ನು ಭಕ್ತಿಯಿಂದ ಕಲಶದಲ್ಲಿ ಆವಾಹಿಸಬೇಕು.

೫೨. ವೇದೋಕ್ತಮಂತ್ರಪೂರ್ವಕವಾಗಿ ಷೋಡಶೋಪಚಾರಗಳನ್ನು ಸಮರ್ಪಿಸಿ, ದೇವಿಗೆ ವಿಧಿಪೂರ್ವಕವಾಗಿ ಪೂಜಿಸಿ ನಮಸ್ಕರಿಸಬೇಕು.

ಆಸನಂ ಪಾದ್ಯಮರ್ಘ್ಯಂ ಚ ಸ್ನಾನೀಯಂ ಚಾನುಲೇಪನಂ ।
ಧೂಪಂ ದೀಪಂ ಚ ನೈವೇದ್ಯಂ ತಾಂಬೂಲಂ ಶೀತಲಂ ಜಲಂ ॥ ೫೩ ॥

ವಸನಂ ಭೂಷಣಂ ಮಾಲ್ಯಂ ಗಂಧಮಾಚಮನೀಯಕಂ ।
ಮನೋಹರಂ ಸುತಲ್ಪಂ ಚ ದೇಯಾನ್ಯೇತಾನಿ ಷೋಡಶ ॥ ೫೪ ॥

ದಾರುಸಾರವಿಕಾರಂ ಚ ಹೇಮಾದಿನಿರ್ಮಿತಂ ಚ ವಾ ।
ದೇವಾಧಾರಂ ಪುಣ್ಯದಂ ಚ ಮಯಾ ನಿತ್ಯಂ ನಿವೇದಿತಂ ॥ ೫೫ ॥

ತೀರ್ಥೋದಕಂ ಚ ಪಾದ್ಯಂ ಚ ಪುಣ್ಯದಂ ಪ್ರೀತಿದಂ ಮಹತ್ ।
ಪೂಜಾಂಗಭೂತಂ ಶುದ್ಧಂ ಚ ಮಯಾ ಭಕ್ತ್ಯಾ ನಿವೇದಿತಂ ॥ ೫೬ ॥

ಪವಿತ್ರರೂಪಮರ್ಘ್ಯಂ ಚ ದೂರ್ವಾಪುಷ್ಪಾಕ್ಷತಾನ್ವಿತಂ ।
ಪುಣ್ಯದಂ ಶಂಖತೋಯೋಕ್ತಂ ಮಯಾ ತುಭ್ಯಂ ನಿವೇದಿತಂ ॥ ೫೭ ॥

೫೩-೫೪. ಆಸನ, ಪಾದ್ಯ, ಅರ್ಘ್ಯ, ಸ್ನಾನೋದಕ, ಲೇಪನಗಂಧ, ಧೂಪ, ದೀಪ, ನೈವೇದ್ಯ, ತಾಂಬೂಲ, ಶೀತಲೋದಕ, ವಸ್ತ್ರ, ಭೂಷಣ, ಪುಷ್ಪಮಾಲೆ, ಗಂಧ, ಆಚಮನ, ಮನೋಹರವಾದ ಶಯ್ಯೆ ಈ ಹದಿನಾರು ಉಪಚಾರಗಳನ್ನು ದೇವಿಗೆ ಸಮರ್ಪಿಸಬೇಕು.

೫೫. (ಷೋಡಶೋಪಚಾರ ಪೂಜೆ) ಉತ್ತಮವಾದ ಮರದಿಂದಾಗಲೀ, ಸುವರ್ಣಾದಿಗಳಿಂದಾಗಲೀ ನಿರ್ಮಿತವಾಗಿ ದೇವತೆಗೆ ಆಧಾರವಾಗಿರುವ ಪುಣ್ಯಕರವಾದ ಆಸನವನ್ನು ನಿನಗರ್ಪಿಸುವೆನು.

೫೬. ಪೂಜಾಂಗವೂ, ಪರಿಶುದ್ಧವೂ, ಪುಣ್ಯಕರವೂ, ಪ್ರೀತಿದಾಯಕವೂ ಆದ ತೀರ್ಥೋದಕವನ್ನು ಪಾದೋದಕವಾಗಿ ನಿನಗರ್ಪಿಸುವೆನು.

೫೭. ಪುಣ್ಯಕರವೂ, ದೂರ್ವಾ (ಗರಿಕೆ) ಪುಷ್ಪಾಕ್ಷತೆಯುತವೂ ಪವಿತ್ರ ರೂಪವೂ ಆದ ಶಂಖೋದಕದಿಂದ ನಿನಗೆ ಅರ್ಘ್ಯವನ್ನು ಸಮರ್ಪಿಸುವೆನು.

ಸುಗಂಧಿಧಾತ್ರೀ ತೈಲಂ ಚ ದೇಹಸೌಂದರ್ಯಕಾರಣಂ ।
ಮಯಾ ನಿವೇದಿತಂ ಭಕ್ತ್ಯಾ ಸ್ನಾನೀಯಂ ಪ್ರತಿಗೃಹ್ಯತಾಂ ॥ ೫೮ ॥

ಮಲಯಾಚಲಸಂಭೂತಂ ದೇಹಶೋಭಾವಿವರ್ಧನಂ ।
ಸುಗಂಧಿಯುಕ್ತಂ ಸುಖದಂ ಮಯಾ ತುಭ್ಯಂ ನಿವೇದಿತಂ ॥ ೫೯ ॥

ಗಂಧದ್ರವ್ಯೋದ್ಭವಃ ಪುಣ್ಯಃ ಪ್ರೀತಿದೋ ದಿವ್ಯಗಂಧದಃ ।
ಮಯಾ ನಿವೇದಿತೋ ಭಕ್ತ್ಯಾ ಧೂಪೋಽಯಂ ಪ್ರತಿಗೃಹ್ಯತಾಂ ॥ ೬೦ ॥

ಜಗತಾಂ ದರ್ಶನೀಯಂ ಚ ದರ್ಶನಂ ದೀಪ್ತಿಕಾರಣಂ ।
ಅಂಧಕಾರಧ್ವಂಸಬೀಜಂ ಮಯಾ ತುಭ್ಯಂ ನಿವೇದಿತಂ ॥ ೬೧ ॥

ತುಷ್ಟಿದಂ ಪುಷ್ಟಿದಂ ಚೈವ ಪ್ರೀತಿದಂ ಕ್ಷುದ್ವಿನಾಶನಂ ।
ಪುಣ್ಯದಂ ಸ್ವಾದುರೂಪಂ ಚ ನೈವೇದ್ಯಂ ಪ್ರತಿಗೃಹ್ಯತಾಂ ॥ ೬೨ ॥

---

೫೮. ಸುಗಂಧವೂ, ತೈಲಮಿಶ್ರಿತವೂ, ದೇಹಸೌಂದರ್ಯವರ್ಧಕವೂ ಆದ ಸ್ನಾನೋದಕವನ್ನು ನಾನು ಭಕ್ತಿಯಿಂದರ್ಪಿಸುವೆನು, ಸ್ವೀಕರಿಸು.

೫೯. ಮಲಯಪರ್ವತದಲ್ಲಿ ಉತ್ಪನ್ನವಾಗಿ, ದೇಹಶೋಭಾದಾಯಕವೂ, ಸುಗಂಧಯುಕ್ತವೂ ಆದ ದಿವ್ಯಾನುಲೇಪನವನ್ನು ನಿನಗರ್ಪಿಸುವೆನು.

೬೦. ಸುಗಂಧದ್ರವ್ಯಗಳಿಂದ ನಿರ್ಮಿತವಾಗಿ, ಪ್ರೀತಿಕರವೂ, ಪುಣ್ಯದಾಯಕವೂ, ಸುವಾಸಿತವೂ, ಆಗಿರುವ ಧೂಪವನ್ನು ನಾನು ಭಕ್ತಿಯಿಂದರ್ಪಿಸುವೆನು, ಸ್ವೀಕರಿಸು.

೬೧. ಜಗತ್ತಿಗೆಲ್ಲ ದರ್ಶನಯೋಗ್ಯವೂ, ಬೆಳಕಿಗೆ ಕಾರಣವೂ, ಅಂಧಕಾರಧ್ವಂಸಮಾಡಲು, ಮೂಲಕಾರಣವೂ, ಆದ ದೀಪವನ್ನು ನಿನಗೆ ಸಮರ್ಪಿಸುವೆನು.

೬೨. ತುಷ್ಟಿಪುಷ್ಟಿಪ್ರೀತಿಗಳನ್ನು ಕೊಟ್ಟು, ಕ್ಷುದ್ವಿನಾಶಕಾರಕವಾಗಿ, ಪುಣ್ಯಕರವೂ ಸ್ವಾದುರಸವೂ ಆಗಿರುವ ನೈವೇದ್ಯವನ್ನು ಅರ್ಪಿಸುವೆನು. ಸ್ವೀಕರಿಸು.

ತಾಂಬೂಲಂ ಚ ವರಂ ರಮ್ಯಂ ಕರ್ಪೂರಾದಿಸುವಾಸಿತಂ ।
ತುಷ್ಟಿದಂ ಪುಷ್ಟಿದಂ ಚೈವ ಮಯಾ ಭಕ್ತ್ಯಾ ನಿವೇದಿತಂ ॥ ೬೩ ॥

ಸುಶೀತಲಂ ವಾಸಿತಂ ಚ ಪಿಪಾಸಾನಾಶಕಾರಣಂ ।
ಜಗತಾಂ ಜೀವರೂಪಂ ಚ ಜೀವನಂ ಪ್ರತಿಗೃಹ್ಯತಾಂ ॥ ೬೪ ॥

ದೇಹಶೋಭಾಸ್ವರೂಪಂ ಚ ಸಭಾಶೋಭಾವಿವರ್ಧನಂ ।
ಕಾರ್ಪಾಸಜಂ ಚ ಕೃಮಿಜಂ ವಸನಂ ಪ್ರತಿಗೃಹ್ಯತಾಂ ॥ ೬೫ ॥

ಕಾಂಚನಾದಿಭಿರಾಬದ್ಧ ಶ್ರೀಯುಕ್ತಂ ಶ್ರೀಕರಂ ಸದಾ ।
ಸುಖದಂ ಪುಣ್ಯದಂ ಚೈವ ಭೂಷಣಂ ಪ್ರತಿಗೃಹ್ಯತಾಂ ॥ ೬೬ ॥

ನಾನಾಪುಷ್ಪಲತಾಕೀರ್ಣಂ ಬಹುಭಾಸಾ ಸಮನ್ವಿತಂ ।
ಪ್ರೀತಿದಂ ಪುಣ್ಯದಂ ಚೈವ ಮಾಲ್ಯಂ ವೈ ಪ್ರತಿಗೃಹ್ಯತಾಂ ॥ ೬೭ ॥

---

೬೩. ಪಚ್ಚಕರ್ಪೂರಾದಿಗಳಿಂದ ಸುವಾಸಿತವಾಗಿ, ತುಷ್ಟಿಪುಷ್ಟಿಗಳನ್ನು ಕೊಡುವ, ರಮ್ಯವಾದ ತಾಂಬೂಲವನ್ನು ನಿನಗೆ ಭಕ್ತಿಯಿಂದರ್ಪಿಸುವೆನು.

೬೪. ಜಗತ್ತಿಗೆ ಜೀವನಸ್ವರೂಪವೂ, ಪಿಪಾಸಾಪರಿಹಾರಕವೂ, ಸುವಾಸಿತವೂ, ಶೀತಲವೂ ಆದ ನಿರ್ಮಲೋದಕವನ್ನು ನಿನಗರ್ಪಿಸುವೆನು.

೬೫. ಶರೀರಶೋಭಾರೂಪವೂ, ಸಭಾಶೋಭಾಕಾರಕವೂ ಆಗಿ ಉತ್ತಮವಾದ ಹತ್ತಿಯಿಂದಾಗಲೀ, ರೇಷ್ಮೆಯಿಂದಾಗಲೀ ರಚಿಸಿರುವ ವಸ್ತ್ರದ್ವಯವನ್ನರ್ಪಿಸುವೆನು.

೬೬. ಸುವರ್ಣಾದಿಗಳಲ್ಲಿ ಮೆಟ್ಟಲ್ಪಟ್ಟು, ಕಾಂತಿಯುತವೂ, ಸರ್ವದಾ ಮಂಗಳಕರವೂ. ಸುಖದಾಯಕವೂ, ಪುಣ್ಯಕಾರಕವೂ ಆದ ಭೂಷಣವನ್ನು ಸಮರ್ಪಿಸುವೆನು. ಸ್ವೀಕರಿಸು.

೬೭. ವಿವಿಧಪುಷ್ಪಗಳಿಂದ ಕೂಡಿ, ದಿವ್ಯಕಾಂತಿಯುತವಾಗಿ, ಪ್ರೀತಿಕರವೂ, ಮನೋಹರವೂ ಆದ (ಪುಷ್ಪ) ಮಾಲೆಯನ್ನು ಸಮರ್ಪಿಸುವೆನು. ಸ್ವೀಕರಿಸು.

ಸರ್ವಮಂಗಲರೂಪಶ್ಚ ಸರ್ವಮಂಗಲದೋ ವರಃ ।
ಪುಣ್ಯಪ್ರದಶ್ಚ ಗಂಧಾಢ್ಯೋ ಗಂಧಶ್ಚ ಪ್ರತಿಗೃಹ್ಯತಾಂ ॥ ೬೮ ॥

ಶುದ್ಧಂ ಶುದ್ಧಿಪ್ರದಂ ಚೈವ ಶುದ್ಧಾನಾಂ ಪ್ರೀತಿದಂ ಮಹತ್ ।
ರಮ್ಯಮಾಚಮನೀಯಂ ಚ ಮಯಾ ದತ್ತಂ ಪ್ರಗೃಹ್ಯತಾಂ ॥ ೬೯ ॥

ರತ್ನಸಾರಾದಿನಿರ್ಮಾಣಂ ಪುಷ್ಪಚಂದನಸಂಯುತಂ ।
ಸುಖದಂ ಪುಣ್ಯದಂ ಚೈವ ಸುತಲ್ಪಂ ಪ್ರತಿಗೃಹ್ಯತಾಂ ॥ ೭೦ ॥

ನಾನಾವೃಕ್ಷಸಮುದ್ಭೂತಂ ನಾನಾರೂಪಸಮನ್ವಿತಂ ।
ಫಲಸ್ವರೂಪಂ ಫಲದಂ ಫಲಂ ಚ ಪ್ರತಿಗೃಹ್ಯತಾಂ ॥ ೭೧ ॥

ಸಿಂದೂರಂ ಚ ವರಂ ರಮ್ಯಂ ಭಾಲಶೋಭಾ ವಿವರ್ಧನಂ ।
ಭೂಷಣಂ ಭೂಷಣಾನಾಂ ಚ ಸಿಂದೂರಂ ಪ್ರತಿಗೃಹ್ಯತಾಂ ॥ ೭೨ ॥

---

೬೮. ಸರ್ವಮಂಗಲಸ್ವರೂಪವೂ, ಸರ್ವಮಂಗಳಕರವೂ ಆಗಿ, ಪುಣ್ಯಪ್ರದವೂ, ಸುಗಂಧಯುತವೂ ಆದ ದಿವ್ಯಗಂಧವನ್ನು ಅರ್ಪಿಸುವೆನು. ಸ್ವೀಕರಿಸು.

೬೯. ಅತ್ಯಂತ ಪರಿಶುದ್ಧವೂ, ಶುದ್ಧಿದಾಯಕವೂ, ರಮ್ಯವೂ ಆದ ಶುದ್ಧಾಚಮನವನ್ನು ನಾನು ಕೊಡುವೆನು. ಸ್ವೀಕರಿಸು.

೭೦. ಶ್ರೇಷ್ಠ ರತ್ನದಿಂದ ನಿರ್ಮಿತವಾಗಿ, ಪುಷ್ಪಚಂದನಾದಿಗಳಿಂದಲಂಕೃತವಾಗಿ, ಸುಖಕರವಾದ ಉತ್ತಮ ಶಯನವನ್ನು ಪ್ರೀತಿಯಿಂದ ಅರ್ಪಿಸುವೆನು. ಸ್ವೀಕರಿಸು.

೭೧. ಅನೇಕ ವೃಕ್ಷಗಳಲ್ಲಿ ಉತ್ಪತ್ತಿಪಡೆದು, ಭಿನ್ನಭಿನ್ನ ರೂಪದಿಂದ ಕೂಡಿರುವ, ಸಕಲರ ಇಷ್ಟಾರ್ಥಫಲದಾಯಕವಾದ ಫಲವನ್ನು ಸಮರ್ಪಿಸುವೆನು. ಸ್ವೀಕರಿಸು.

೭೨. ಹಣೆಯ ಕಾಂತಿಯನ್ನು ಹೆಚ್ಚಿಸಿ, ಒಡವೆಗಳಲ್ಲೆಲ್ಲಾ ಉತ್ತಮ ಒಡವೆಯೆನಿಸಿಕೊಳ್ಳುವ ಉತ್ತಮವಾದ ಸಿಂದೂರ (ಚಂದ್ರ) ವನ್ನು ಸಮರ್ಪಿಸುವೆನು, ಸ್ವೀಕರಿಸು.

ವಿಶುದ್ಧಗ್ರಂಥಿಸಂಯುಕ್ತಂ ಪುಣ್ಯಸೂತ್ರವಿನಿರ್ಮಿತಂ ।
ಪವಿತ್ರಂ ವೇದಮಂತ್ರೇಣ ಯಜ್ಞಸೂತ್ರಂ ಚ ಗೃಹ್ಯತಾಂ ॥ ೭೩ ॥

ದ್ರವ್ಯಾಣ್ಯೇತಾನಿ ಮೂಲೇನ ದತ್ವಾ ಸ್ತೋತ್ರಂ ಪಠೇತ್ಸುಧೀಃ ।
ತತಃ ಪ್ರಣಮ್ಯ ವಿಪ್ರಾಯ ಪ್ರತೀ ದದ್ಯಾಚ್ಚ ದಕ್ಷಿಣಾಂ ॥ ೭೪ ॥

ಸಾವಿತ್ರೀತಿ ಚತುರ್ಥ್ಯಂತಂ ವಹ್ನಿಜಾಯಾಂತಮೇವ ಚ ।
ಲಕ್ಷ್ಮೀಮಾಯಾ ಕಾಮಪೂರ್ವಂ ಮಂತ್ರಮಷ್ಟಾಕ್ಷರಂ ವಿದುಃ ॥ ೭೫ ॥

ಶ್ರೀಂ ಹ್ರೀಂ ಕ್ಲೀಂ ಸಾವಿತ್ರ್ಯೈ ಸ್ವಾಹಾ ।
ಮಧ್ಯಂ ದಿನೋಕ್ತಂ ಸ್ತೋತ್ರಂ ಚ ಸರ್ವವಾಂಛಾಫಲಪ್ರದಂ ।
ವಿಪ್ರಜೀವನರೂಪಂ ಚ ನಿಬೋಧ ಕಥಯಾಮಿ ತೇ ॥ ೭೬ ॥

ಕೃಷ್ಣೇನ ದತ್ತಾ ಸಾವಿತ್ರೀ ಗೋಲೋಕೇ ಬ್ರಹ್ಮಣೇ ಪುರಾ ।
ನ ಯಾತಿ ಸಾ ತೇನ ಸಾರ್ಧಂ ಬ್ರಹ್ಮಲೋಕಂ ತು ನಾರದ ॥ ೭೭ ॥

---

೭೩. ಮಂಗಳಕರವಾದ ಸೂತ್ರದಿಂದ ನಿರ್ಮಿತವಾಗಿ, ಪರಿಶುದ್ಧವಾದ ಬ್ರಹ್ಮಗ್ರಂಥಿಯಿಂದ ಕೂಡಿ, ವೇದಮಂತ್ರದಿಂದ ಪವಿತ್ರವಾಗಿರುವ, ಯಜ್ಞೋಪವೀತವನ್ನು ಸ್ವೀಕರಿಸು.

೭೪. ಈ ರೀತಿಯಾಗಿ ಮೇಲೆ ಹೇಳಿದ ಷೋಡಶದ್ರವ್ಯಗಳನ್ನು ಕ್ರಮವಾಗಿ ಅರ್ಪಿಸಿ ಜ್ಞಾನಿಯಾದವನು ಸ್ತೋತ್ರವನ್ನು ಪಠಿಸಬೇಕು. ಅನಂತರ ಬ್ರಾಹ್ಮಣನಿಗೆ ನಮಸ್ಕರಿಸಿ, ದಕ್ಷಿಣೆಯನ್ನು ಕೊಡಬೇಕು.

೭೫. ಲಕ್ಷ್ಮೀ, ಮಾಯಾ ಮತ್ತು ಕಾಮ ಎಂಬರ್ಥವನ್ನು ಕೊಡುವ ಬೀಜಾಕ್ಷರಪೂರ್ವಕವಾದ ಚತುರ್ಥೀವಿಭಕ್ತ್ಯಂತವಾದ ಸಾವಿತ್ರೀಶಬ್ದವು ಮಧ್ಯದಲ್ಲಿರುವ, ವಹ್ನಿಪತ್ನಿಯಾದ ಸ್ವಾಹಾ ಎಂಬ ಶಬ್ದವೇ ಕೊನೆಯಲ್ಲುಳ್ಳ ಎಂಟು ಅಕ್ಷರದ ಮಂತ್ರವೇ ಸಾವಿತ್ರೀ ಮಂತ್ರವು.

೭೬. ಆ ಮಂತ್ರವೇ "ಶ್ರೀಂ ಹ್ರೀಂ ಕ್ಲೀಂ ಸಾವಿತ್ರ್ಯೈ ಸ್ವಾಹಾ" ಎಂಬುದು. ಸಕಲರ ಇಷ್ಟಾರ್ಥಫಲಪ್ರದವೂ, ವಿಪ್ರರಿಗೆ ಜೀವನರೂಪವೂ, ಮಾಧ್ಯಂದಿನೋಕ್ತವೂ ಆದ ಸಾವಿತ್ರೀಸ್ತೋತ್ರವನ್ನು ಹೇಳುವೆನು, ಕೇಳು.

೭೭. ಎಲೈ ನಾರದನೇ, ಪೂರ್ವದಲ್ಲಿ ಶ್ರೀಕೃಷ್ಣಪರಮಾತ್ಮನು ಗೋಲೋಕದಲ್ಲಿ ಸಾವಿತ್ರಿಯನ್ನು ಬ್ರಹ್ಮನಿಗೆ ಅನುಗ್ರಹಿಸಿ ಕೊಟ್ಟನು. ಆದರೆ ಆ ಸಾವಿತ್ರಿಯು ಬ್ರಹ್ಮನೊಡನೆ ಬ್ರಹ್ಮಲೋಕಕ್ಕೆ ಹೋಗಲೊಪ್ಪಲಿಲ್ಲ.

ಬ್ರಹ್ಮಾ ಕೃಷ್ಣಾಜ್ಞಯಾ ಭಕ್ತ್ಯಾ ಪರ್ಯಷ್ಟೌದ್ವೇದಮಾತರಂ ।
ತದಾ ಸಾ ಪರಿತುಷ್ಟಾ ಚ ಬ್ರಹ್ಮಾಣಂ ಚಕಮೇ ಸತೀ ॥ ೭೮ ॥

॥ ಬ್ರಹ್ಮೋವಾಚ ॥

ನಾರಾಯಣಸ್ವರೂಪಾ ಚ ನಾರಾಯಣಿ ಸನಾತನಿ ।
ನಾರಾಯಣಾತ್ಸಮುದ್ಭೂತೇ ಪ್ರಸನ್ನಾ ಭವ ಸುಂದರಿ ॥ ೭೯ ॥

ತೇಜಸ್ಸ್ವರೂಪೇ ಪರಮೇ ಪರಮಾನಂದರೂಪಿಣೀ ।
ದ್ವಿಜಾತೀನಾಂ ಜಾತಿರೂಪೇ ಪ್ರಸನ್ನಾ ಭವ ಸುಂದರಿ ॥ ೮೦ ॥

ನಿತ್ಯೇ ನಿತ್ಯಪ್ರಿಯೇ ದೇವಿ ನಿತ್ಯಾನಂದಸ್ವರೂಪಿಣಿ ।
ಸರ್ವಮಂಗಲರೂಪೇಣ ಪ್ರಸನ್ನಾ ಭವ ಸುಂದರಿ ॥ ೮೧ ॥

ಸರ್ವಸ್ವರೂಪೇ ವಿಪ್ರಾಣಾಂ ಮಂತ್ರಸಾರೇ ಪರಾತ್ಪರೇ ।
ಸುಖದೇ ಮೋಕ್ಷದೇ ದೇವಿ ಪ್ರಸನ್ನಾ ಭವ ಸುಂದರಿ ॥ ೮೨ ॥

ವಿಪ್ರಪಾಪೇಂಧದಾಹಾಯ ಜ್ವಲದಗ್ನಿಶಿಖೋಪಮೇ ।
ಬ್ರಹ್ಮತೇಜಃಪ್ರದೇ ದೇವಿ ಪ್ರಸನ್ನಾ ಭವ ಸುಂದರಿ ॥ ೮೩ ॥

---

೭೮. ಆಗ ಬ್ರಹ್ಮನು ಶ್ರೀಕೃಷ್ಣನ ಅಪ್ಪಣೆಯಂತೆ ವೇದಮಾತೆಯಾದ ಸಾವಿತ್ರಿಯನ್ನು ಸ್ತುತಿಸಿದನು. ಆಗ ಸಾವಿತ್ರಿಯು ಸಂತುಷ್ಟಳಾಗಿ ಬ್ರಹ್ಮನನ್ನು ಕಾಮಿಸಿದಳು.

೭೯. ಬ್ರಹ್ಮ:—ನಾರಾಯಣಸ್ವರೂಪಳೂ, ಅನಾದಿಯೂ, ನಾರಾಯಣನಿಂದ ಉತ್ಪತ್ತಿಪಡೆದವಳೂ ಆದ ಸಾವಿತ್ರಿಯೇ ನೀನು ಪ್ರಸನ್ನಳಾಗು.

೮೦. ತೇಜಃಸ್ವರೂಪಿಣಿಯೂ, ಪರಮಾನಂದರೂಪಿಣಿಯೂ, ದ್ವಿಜರಿಗೆ ಜಾತಿರೂಪಳೂ ಆದ ಎಲೌ ಸುಂದರಿಯೇ, ಪ್ರಸನ್ನಳಾಗು.

೮೧. ನಿತ್ಯಳೂ ನಿತ್ಯಾನಂದಸ್ವರೂಪಿಣಿಯೂ, ಸರ್ವಮಂಗಳರೂಪಿಣಿಯೂ, ಆದ ಎಲೌ ಸುಂದರಿಯೇ ಪ್ರಸನ್ನಳಾಗು.

೮೨. ವಿಪ್ರರಿಗೆ ಸರ್ವಸ್ವರೂಪಳೂ, ಮಂತ್ರಸಾರಳೂ, ಪರಾತ್ಪರಳೂ, ಸುಖ ಮತ್ತು ಮೋಕ್ಷವನ್ನು ಕೊಡುವವಳೂ ಆದ ಎಲೌ ಸುಂದರಿಯೇ, ಪ್ರಸನ್ನಳಾಗು.

೮೩. ವಿಪ್ರರ ಪಾಪವೆಂಬ ಕಟ್ಟಿಗೆಯನ್ನು ಸುಡುವ ಅಗ್ನಿಸ್ವರೂಪಳೂ, ವಿಪ್ರರಿಗೆ ಬ್ರಹ್ಮತೇಜಸ್ಸನ್ನು ಕೊಡುವವಳೂ ಆದ ದೇವಿಯೇ, ನೀನು ಪ್ರಸನ್ನಳಾಗು.

ಕಾಯೇನ ಮನಸಾ ವಾಚಾ ಯತ್ಪಾಪಂ ಕುರುತೇ ದ್ವಿಜಃ ।
ತತ್ತ್ವತ್ಸ್ಮರಣಮಾತ್ರೇಣ ಭಸ್ಮೀಭೂತಂ ಭವಿಷ್ಯತಿ ॥ ೮೪ ॥

ಇತ್ಯುಕ್ತ್ವಾ ಜಗತಾಂ ಧಾತಾ ತತ್ರ ತಸ್ಥೌ ಚ ಸಂಸದಿ ।
ಸಾವಿತ್ರೀ ಬ್ರಹ್ಮಣಾಸಾರ್ಧಂ ಬ್ರಹ್ಮಲೋಕಂ ಜಗಾಮ ಸಾ ॥ ೮೫ ॥

ಅನೇನಸ್ತವರಾಜೇನ ಸಂಸ್ತೂಯಾಶ್ವಪತಿರ್ನೃಪಃ ।
ದದರ್ಶ ತಾಂ ಚ ಸಾವಿತ್ರೀಂ ವರಂ ಪ್ರಾಪ ಮನೋಗತಂ ॥ ೮೬ ॥

ಸ್ತವರಾಜಮಿದಂ ಪುಣ್ಯಂ ತ್ರಿಸಂಧ್ಯಾಯಾಂ ಚ ಯಃ ಪಠೇತ್ ।
ಪಾಠೇ ಚತುರ್ಣಾಂ ವೇದಾನಾಂ ಯತ್ಫಲಂ ತಲ್ಲಭೇದ್ಧ್ರುವಂ ॥ ೮೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಸಾವಿತ್ರ್ಯುಪಾಖ್ಯಾನೇ ಸಾವಿತ್ರೀ ಸ್ತೋತ್ರಕಥನಂನಾಮ ತ್ರಯೋವಿಂಶತಿತಮೋಽಧ್ಯಾಯಃ

---

೮೪. ದ್ವಿಜನು ಕಾಯಾ, ವಾಚಾ, ಮನಸಾ ಯಾವ ಪಾಪವನ್ನು ಮಾಡುವನೋ, ಅವೆಲ್ಲವೂ ನಿನ್ನನ್ನು ಸ್ಮರಿಸಿದ ಮಾತ್ರದಿಂದಲೇ ಬೂದಿಯಾಗಿ ನಾಶವಾಗುವುವು.

೮೫. ಜಗದೊಡೆಯನಾದ ಶ್ರೀಕೃಷ್ಣನು ಇಂತು ನುಡಿದು ಸುಮ್ಮನಾದನು. ಸಾವಿತ್ರೀದೇವಿಯು ಬ್ರಹ್ಮನೊಡನೆ ಬ್ರಹ್ಮಲೋಕಕ್ಕೆ ತೆರಳಿದಳು.

೮೬. ಅಶ್ವಪತಿ ಮಹಾರಾಜನು ಈ ಉತ್ತಮವಾದ ಸ್ತೋತ್ರದಿಂದ ಸಾವಿತ್ರಿಯನ್ನು ಸ್ತುತಿಸಿ, ಆ ದೇವಿಯ ಸಾಕ್ಷಾತ್ಕಾರ ಹೊಂದಿ, ತನ್ನ ಮನೋಗತವಾದ ವರವನ್ನು ಪಡೆದನು.

೮೭. ಈ ಮಂಗಳ ಸ್ತೋತ್ರವನ್ನು ತ್ರಿಸಂಧ್ಯೆಯಲ್ಲೂ ಪಠಿಸುವವರು ಚತುರ್ವೇದಗಳ ಪಠನದಿಂದುಂಟಾದ ಫಲವನ್ನು ಖಂಡಿತವಾಗಿಯೂ ಪಡೆಯುವರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಸಾವಿತ್ರೀಸ್ತೋತ್ರಕಥನ ರೂಪವಾದ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

ಇಪ್ಪತ್ತಮೂರನೆಯ ಅಧ್ಯಾಯದ ಸಾರಾಂಶವು

ವೇದಮಾತೆಯಾದ ಸಾವಿತ್ರಿಯ ಕಥೆಯನ್ನು ಕೇಳ ಬಯಸಿದ ನಾರದನನ್ನು ಕುರಿತು ನಾರಾಯಣಮಹರ್ಷಿಯು ಇಂತೆಂದನು. ಮದ್ರದೇಶದಲ್ಲಿ ಅಶ್ವಪತಿಯೆಂಬ ಮಹಾರಾಜನು ಆಳಿಕೊಂಡಿದ್ದನು. ಅವನಿಗೆ ಮಾಲತಿಯೆಂಬ ಧರ್ಮಪತ್ನಿ ಇದ್ದಳು. ಆಕೆಯು ವಶಿಷ್ಠಮಹರ್ಷಿಯ ಅಪ್ಪಣೆಯಂತೆ ಸಾವಿತ್ರೀದೇವಿಯನ್ನು ಆರಾಧಿಸಿದಳು. ಆದರೂ ಸಾವಿತ್ರಿಯು ಪ್ರತ್ಯಕ್ಷವಾಗದಿರಲು, ರಾಜನು ಪುಷ್ಕರಕ್ಷೇತ್ರಕ್ಕೆ ಹೋಗಿ ಸಾವಿತ್ರೀದೇವಿಯನ್ನು ಕುರಿತು ನೂರುವರ್ಷಗಳ ಕಾಲ ತಪಸ್ಸು ಮಾಡಿದನು. ಆಗ "ಹತ್ತುಲಕ್ಷ ಗಾಯತ್ರಿಯನ್ನು ಜಪಿಸೆಂದು" ಅಶರೀರವಾಣಿಯು ರಾಜನಿಗೆ ಹೇಳಿತು. ಆ ಸಮಯಕ್ಕೆ ಸರಿಯಾಗಿ ಪರಾಶರಮುನಿಗಳು ರಾಜನ ಸಮೀಪಕ್ಕೆ ಬಂದು, ಗಾಯತ್ರಿಯ ಮಾಹಾತ್ಮ್ಯವನ್ನು ವಿವರಿಸಿ, ಹತ್ತುಲಕ್ಷ ಗಾಯತ್ರಿಯನ್ನು ಜಪಿಸುವುದರಿಂದ ಸಾವಿತ್ರಿಯು ಪ್ರತ್ಯಕ್ಷಳಾಗುವಳೆಂದು ತಿಳಿಸಿದರು. ಮುನಿಗಳ ಉಪದೇಶದಂತೆ ರಾಜನು ವಿಧಿಪೂರ್ವಕವಾಗಿ ಗಾಯತ್ರಿಯನ್ನು ಜಪಿಸಿ, ಜ್ಯೇಷ್ಠಶುಕ್ಲ ತ್ರಯೋದಶೀದಿವಸ ಸಾವಿತ್ರೀವ್ರತವನ್ನು ವಿಧ್ಯುಕ್ತವಾಗಿ ಆಚರಿಸಿದನು. 'ಶ್ರೀಂ ಹ್ರೀಂ ಕ್ಲೀಂ ಸಾವಿತ್ರ್ಯೈ ಸ್ವಾಹಾ' ಎಂಬ ಅಷ್ಟಾಕ್ಷರ ಮಂತ್ರವನ್ನು ಜಪಿಸಿ ಭಕ್ತಿಯಿಂದ ಸಾವಿತ್ರಿಯನ್ನು ಧ್ಯಾನಿಸಿದನು. ಆಗ ಸಾವಿತ್ರಿಯು ಪ್ರತ್ಯಕ್ಷಳಾಗಿ ರಾಜನ ಇಷ್ಟಾರ್ಥವನ್ನು ಪೂರ್ತಿಗೊಳಿಸಿದಳು.

(ಈ ಅಧ್ಯಾಯದಲ್ಲಿ ಗಾಯತ್ರಿಯ ಮಾಹಾತ್ಮ್ಯವೂ. ನಿತ್ಯಕರ್ಮತ್ಯಾಗಿಗಳ ಪಾಪವೂ ವಿವೃತವಾಗಿದೆ.)

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಚತುರ್ವಿಂಶತಿತಮೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಸ್ತುತ್ವಾ ಸೋಽಶ್ವಪತಿಸ್ತೇನ ಸಂಪೂಜ್ಯವಿಧಿಪೂರ್ವಕಂ ।
ದದರ್ಶ ತತ್ರ ತಾಂ ದೇವೀಂ ಸಹಸ್ರಾರ್ಕಸಮಪ್ರಭಾಂ ॥ ೧ ॥

ಉವಾಚ ಸಾ ತಂ ರಾಜಾನಂ ಪ್ರಸನ್ನಾ ಸಸ್ಮಿತಾ ಸತೀ ।
ಯಥಾ ಮಾತಾ ಸ್ವಪುತ್ರಂ ಚ ದ್ಯೋತಯಂತೀ ದಿಶಸ್ತ್ವಿಷಾ ॥ ೨ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

೧. ನಾರಾಯಣ:—ಆ ಅಶ್ವಪತಿಮಹಾರಾಜನು, ಮೇಲೆ ಹೇಳಿದ ಸ್ತೋತ್ರದಿಂದ ಸಾವಿತ್ರೀದೇವಿಯನ್ನು ಸ್ತುತಿಸಿ, ವಿಧಿವತ್ತಾಗಿ ಪೂಜಿಸಿ, ಸಹಸ್ರಸೂರ್ಯರ ಕಾಂತಿಯಿಂದ ಬೆಳಗುತ್ತಿದ್ದ ಸಾವಿತ್ರೀದೇವಿಯ ದರ್ಶನವನ್ನು ಪಡೆದನು.

೨. ತನ್ನ ದೇಹಕಾಂತಿಯಿಂದ ದಶದಿಕ್ಕುಗಳನ್ನೂ ಬೆಳಗುತ್ತಿರುವ, ಆ ಸಾವಿತ್ರೀದೇವಿಯು ಸ್ಮಿತಮುಖಿಯಾಗಿ, ಮಾತೆಯು ಪುತ್ರನನ್ನು ವಾತ್ಸಲ್ಯದಿಂದ ಸಂಭಾಷಿಸುವಂತೆ, ಆ ರಾಜನೊಡನೆ ಸಂಭಾಷಿಸಿದಳು.

॥ ಸಾವಿತ್ರ್ಯುವಾಚ ॥

ಜಾನಾಮಿ ತೇ ಮಹಾರಾಜ ಯತ್ತೇ ಮನಸಿ ವರ್ತತೇ ।
ವಾಂಛಿತಂ ತವ ಪತ್ನ್ಯಾಶ್ಚ ಸರ್ವಂ ದಾಸ್ಯಾಮಿ ನಿಶ್ಚಿತಂ ॥ ೩ ॥

ಸಾಧ್ವೀ ಕನ್ಯಾಭಿಲಾಷಂ ಚ ಕರೋತಿ ತವ ಕಾಮಿನೀ ।
ತ್ವಂ ಪ್ರಾರ್ಥಯಸಿ ಪುತ್ರಂ ಚ ಭವಿಷ್ಯತಿ ಚ ತೇ ಕ್ರಮಾತ್ ॥ ೪ ॥

ಇತ್ಯುಕ್ತ್ವಾ ಸಾ ಮಹಾದೇವೀ ಬ್ರಹ್ಮಲೋಕಂ ಜಗಾಮಹ ।
ರಾಜಾ ಜಗಾಮ ಸ್ವಗೃಹಂ ತತ್ಕನ್ಯಾಽಽದೌ ಬಭೂವ ಹ ॥ ೫ ॥

ರಾಜ್ಞೋ ಧನಾಚ್ಚ ಸಾವಿತ್ರ್ಯಾ ಬಭೂವ ಕಮಲಾಕಲಾ ।
ಸಾವಿತ್ರೀತಿ ಚ ತನ್ನಾಮ ಚಕಾರಾಶ್ವಪತಿರ್ನೃಪಃ ॥ ೬ ॥

ಕಾಲೇನ ಸಾ ವರ್ಧಮಾನಾ ಬಭೂವ ಚ ದಿನೇ ದಿನೇ ।
ರೂಪಯೌವನಸಂಪನ್ನಾ ಶುಕ್ಲೇ ಚಂದ್ರಕಲಾಯಥಾ ॥ ೭ ॥

---

೩. ಸಾವಿತ್ರಿ :—ಎಲೈ ಮಹಾರಾಜನೇ, ನಿನ್ನ ಮನೋಭಿಲಾಷೆಯನ್ನೂ, ನಿನ್ನ ಪತ್ನಿಯ ಇಷ್ಟಾರ್ಥವನ್ನೂ. ನಾನು ತಿಳಿದಿರುವೆನು. ಅವೆಲ್ಲವನ್ನೂ ನಿಮಗೆ ಅನುಗ್ರಹಿಸುವೆನು.

೪. ನಿನ್ನ ಕಾಂತೆಯು ಪತಿವ್ರತಾಶಿರೋಮಣಿಯಾದ ಕನ್ಯೆಯೊಬ್ಬಳನ್ನು ಬಯಸುತ್ತಿರುವಳು ನೀನು ಸತ್ಪುತ್ರನನ್ನು ಬಯಸುತ್ತಿರುವೆ. ಆದ್ದರಿಂದ ನಿಮಗೆ ಕ್ರಮವಾಗಿ, ಪುತ್ರೀ ಮತ್ತು ಪುತ್ರಸಂತಾನವಾಗುವುದು.

೫. ಇಂತುನುಡಿದು ಆ ಸಾವಿತ್ರೀದೇವಿಯು ಬ್ರಹ್ಮಲೋಕಕ್ಕೆ ಹೊರಟು ಹೋದಳು. ಇತ್ತ ರಾಜನು ತನ್ನ ಮನೆಗೆ ಹಿಂತಿರುಗಿದ ಕೆಲವು ದಿನಗಳ ಮೇಲೆ, ಅವನಿಗೆ ಮೊದಲು ಕನ್ಯೆಯೊಬ್ಬಳು ಜನಿಸಿದಳು.

೬ ಸಾವಿತ್ರೀದೇವಿಯ ವರದಿಂದಲೂ ಲಕ್ಷ್ಮಿಯ ಅಂಶದಿಂದಲೂ ಜನಿಸಿ, ರಾಜ್ಯಲಕ್ಷ್ಮಿಯಂತಿರುವ ಆ ಕನ್ಯೆಗೆ ಅಶ್ವಪತಿಯು, 'ಸಾವಿತ್ರೀ' ಎಂದು ನಾಮಕರಣ ಮಾಡಿದನು

೭. ಆ ಬಾಲೆಯು ಶುಕ್ಲಪಕ್ಷದ ಚಂದ್ರಕಲೆಯಂತೆ ದಿನದಿನಕ್ಕೂ ಅಭಿವೃದ್ಧಿಗೊಳ್ಳುತ್ತಾ, ಸ್ವಲ್ಪಕಾಲದಲ್ಲಿಯೇ ರೂಪಯೌವನ ಸಂಪನ್ನಳಾದಳು.

ಸಾ ವರಂ ವರಯಾಮಾಸ ದ್ಯುಮತ್ಸೇನಾತ್ಮಜಂ ತದಾ |
ಸಾವಿತ್ರೀ ಸತ್ಯವಂತಂ ಚ ನಾನಾಗುಣಸಮನ್ವಿತಂ || ೮ ||

ರಾಜಾ ತಸ್ಮೈ ದದೌ ತಾಂ ಚ ರತ್ನಭೂಷಣಭೂಷಿತಾಂ |
ಸ ಚ ಸಾರ್ಧಂ ಕೌತುಕೇನ ತಾಂ ಗೃಹೀತ್ವಾ ಗೃಹಂ ಯಯೌ || ೯ ||

ಸ ಚ ಸಂವತ್ಸರೇಽತೀತೇ ಸತ್ಯವಾನ್ಸತ್ಯವಿಕ್ರಮಃ |
ಜಗಾಮ ಫಲಕಾಷ್ಠಾರ್ಥಂ ಪ್ರಹರ್ಷಂ ಪಿತುರಾಜ್ಞಯಾ || ೧೦ ||

ಜಗಾಮ ತತ್ರ ಸಾವಿತ್ರೀ ತತ್ಪಶ್ಚಾದ್ದೈವಯೋಗತಃ |
ನಿಪತ್ಯ ವೃಕ್ಷಾದ್ದೈವೇನ ಪ್ರಾಣಾಂಸ್ತತ್ಯಾಜ ಸತ್ಯವಾನ್ || ೧೧ ||

ಯಮಸ್ತಜ್ಜೀವಪುರುಷಂ ಬದ್ಧ್ವಾಂಗುಷ್ಠಸಮಂ ಮುನೇ |
ಗೃಹೀತ್ವಾ ಗಮನಂ ಚಕ್ರೇ ತತ್ಪಶ್ಚಾತ್ಪ್ರಯಯೌ ಸತೀ || ೧೨ ||

---

೮. ಅನಂತರ ಆ ಸಾವಿತ್ರಿಯು ಸದ್ಗುಣಸಂಪನ್ನನೂ ದ್ಯುಮತ್ಸೇನನ ಪುತ್ರನೂ ಆದ ಸತ್ಯವಂತನನ್ನು, ತನಗೆ ಪತಿಯನ್ನಾಗಿ ವರಿಸಿದಳು.

೯. ಅಶ್ವಪತಿರಾಜನು ಸಾವಿತ್ರಿಯನ್ನು ರತ್ನಭೂಷಣಗಳಿಂದಲಂಕರಿಸಿ ಸತ್ಯವಾನನಿಂದ, ಪಾಣಿಗ್ರಹಣಮಾಡಿಸಿದನು. ವಿವಾಹಿತನಾದ ಸತ್ಯವಾನನೂ ಕೂಡ ಉತ್ಸಾಹದಿಂದ ಅವಳೊಡನೆ ತನ್ನ ಮಂದಿರಕ್ಕೆ ಹೋದನು.

೧೦. ಹೀಗಿರಲು, ಒಂದು ವರ್ಷ ಕಳೆದನಂತರ ಪರಾಕ್ರಮಶಾಲಿಯಾದ ಆ ಸತ್ಯವಂತನು ತಂದೆಯ ಅಪ್ಪಣೆಯಂತೆ ಸಮಿತ್ತನ್ನೂ, ಕಟ್ಟಿಗೆಯನ್ನೂ, ಹಣ್ಣುಗಳನ್ನೂ ತರಲು ಕಾಡಿಗೆ ಹೋದನು.

೧೧. ಸಾವಿತ್ರಿಯೂ ಕೂಡ, ವಿಧಿಯೋಗದಿಂದ ತನ್ನ ಪತಿಯ ಹಿಂದೆಯೇ ಹೋದಳು. ಸತ್ಯವಾನನು ದುರದೃಷ್ಟವಶದಿಂದ ಮರದಿಂದ ಬಿದ್ದು ಪ್ರಾಣ ಬಿಟ್ಟನು.

೧೨. ಯಮರಾಜನು ಅಂಗುಷ್ಟಪ್ರಮಾಣವುಳ್ಳ, ಸತ್ಯವಂತನ ಜೀವಪುರುಷನನ್ನು ಪಾಶದಿಂದ ಕಟ್ಟಿಕೊಂಡು ಒಯ್ಯುತ್ತಿರಲು, ಸಾಧ್ವೀಶಿರೋಮಣಿಯಾದ ಸಾವಿತ್ರಿಯು ಅವನ ಹಿಂದೆಯೇ ಹೋದಳು.

ಪಶ್ಚಾತ್ತಾಂ ಸುಂದರೀಂ ದೃಷ್ಟ್ವಾ ಯಮಃ ಸಂಯಮಿನೀಪತಿಃ ।
ಉವಾಚ ಮಧುರಂ ಸಾಧ್ವೀಂ ಸಾಧೂನಾಂ ಪ್ರವರೋ ಮಹಾನ್ ॥ ೧೩ ॥

॥ ಯಮ ಉವಾಚ ॥

ಅಹೋ ಕ್ವಯಾಸಿ ಸಾವಿತ್ರಿ ಗೃಹೀತ್ವಾ ಮಾನುಷೀಂ ತನುಂ ।
ಯದಿ ಯಾಸ್ಯಸಿ ಕಾಂತೇನ ಸಾರ್ಧಂ ದೇಹಂ ತದಾ ತ್ಯಜ ॥ ೧೪ ॥

ಗಂತುಂ ಮರ್ತ್ಯೋ ನ ಶಕ್ನೋತಿ ಗೃಹೀತ್ವಾ ಪಾಂಚಭೌತಿಕಂ ।
ದೇಹಂ ಚ ಯಮಲೋಕಂ ಚ ನಶ್ವರಂ ನಶ್ವರಃ ಸದಾ ॥ ೧೫ ॥

ಪೂರ್ಣಶ್ಚ ಭರ್ತುಸ್ತೇ ಕಾಲಃ ಹ್ಯಭವದ್ಭಾರತೇ ಸತಿ ।
ಸ ಕರ್ಮಫಲ ಭೋಗಾರ್ಥಂ ಸತ್ಯವಾನ್ಯಾತಿ ಮದ್ಗೃಹಂ ॥ ೧೬ ॥

---

೧೩. ತನ್ನ ಹಿಂದೆ ಸುಂದರಿಯೊಬ್ಬಳು ಬರುತ್ತಿರುವುದನ್ನು ಕಂಡು ಆ ಸಂಯಮಿನೀನಗರಿಯ ಪತಿಯೂ, ಸಾಧುಗಳಲ್ಲಿ ಶ್ರೇಷ್ಠನೂ ಆದ ಆ ಯಮ ರಾಜನು ಸಾಧ್ವಿಯನ್ನು ಕುರಿತಿಂತೆಂದನು.

೧೪. ಯಮ :—ಓಹೋ! ಎಲೌ ಸಾವಿತ್ರೀದೇವಿಯೇ, ಮನುಷ್ಯಶರೀರ ವನ್ನು ಧರಿಸಿಕೊಂಡು ನೀನೆಲ್ಲಿಗೆ ಬರುತ್ತಿರುವೆ? ನಿನ್ನ ಪತಿದೇವನನ್ನು ಹಿಂಬಾಲಿ ಸುವೆಯಾದರೆ, ಈ ಪ್ರಾಕೃತ ಶರೀರವನ್ನು ತ್ಯಜಿಸು.

೧೫. ಮನುಜನು ನಶ್ವರವಾದ ಪಾಂಚಭೌತಿಕ ಶರೀರವನ್ನು ಪರಿಗ್ರಹಿಸಿ ನಶ್ವರನೆನಿಸಿಕೊಂಡು, ಯಮಲೋಕಕ್ಕೆ ತೆರಳಲಸಾಧ್ಯವಾಗುವುದು.

೧೬. ಎಲೌ ಪತಿವ್ರತೆಯೇ, ನಿನ್ನ ಪತಿಯು ಭಾರತದಲ್ಲಿ ಜೀವಿಸಿಕೊಂಡಿರ ಬೇಕಾದ ಕಾಲವು ಪೂರ್ಣವಾಯಿತು. ಆ ಸತ್ಯವಾನನು ತನ್ನ ಕರ್ಮಫಲವನ್ನು ಅನುಭವಿಸಲು ನನ್ನ ಲೋಕಕ್ಕೆ ಬರುತ್ತಿದ್ದಾನೆ.

ಕರ್ಮಣಾ ಜಾಯತೇ ಜಂತುಃ ಕರ್ಮಣ್ಯೈವ ಪ್ರಲೀಯತೇ।
ಸುಖಂ ದುಃಖಂ ಭಯಂ ಶೋಕಂ ಕರ್ಮಣ್ಯೈವ ಪ್ರಪದ್ಯತೇ ॥ ೧೭ ॥

ಕರ್ಮಣೇಂದ್ರೋ ಭವೇಜ್ಜೀವೋ ಬ್ರಹ್ಮಪುತ್ರಃ ಸ್ವಕರ್ಮಣಾ।
ಸ್ವಕರ್ಮಣಾ ಹರೇರ್ದಾಸೋ ಜನ್ಮಾದಿರಹಿತೋ ಭವೇತ್ ॥ ೧೮ ॥

ಸ್ವಕರ್ಮಣಾ ಸರ್ವಸಿದ್ಧಿಮಮರತ್ವಂ ಲಭೇದ್ಧ್ರುವಂ।
ಲಭೇತ್ಸ್ವಕರ್ಮಣಾ ವಿಷ್ಣೋಃ ಸಾಲೋಕ್ಯಾದಿ ಚತುಷ್ಟಯಂ ॥ ೧೯ ॥

ಕರ್ಮಣಾ ಬ್ರಾಹ್ಮಣತ್ವಂ ಚ ಮುಕ್ತತ್ವಂ ಚ ಸ್ವಕರ್ಮಣಾ।
ಸುರತ್ವಂ ಚ ಮನುತ್ವಂ ಚ ರಾಜೇಂದ್ರತ್ವಂ ಲಭೇನ್ನರಃ ॥ ೨೦ ॥

ಕರ್ಮಣಾ ಚ ಮುನೀಂದ್ರತ್ವಂ ತಪಸ್ವಿತ್ವಂ ಚ ಕರ್ಮಣಾ।
ಕರ್ಮಣಾ ಕ್ಷತ್ರಿಯತ್ವಂ ಚ ವೈಶ್ಯತ್ವಂ ಚ ಸ್ವಕರ್ಮಣಾ ॥ ೨೧ ॥

---

೧೭ ಪ್ರತಿಯೊಂದು ಪ್ರಾಣಿಯೂ ಜನ್ಮಾಂತರಕರ್ಮಾನುಗುಣವಾಗಿ ಜನ್ಮವೆತ್ತಿ ಸಾಯುವುದು. ಸುಖದುಃಖಗಳೂ, ಭಯಶೋಕಗಳೂ, ಜನ್ಮಾಂತರ ಕರ್ಮಾನುಗುಣವಾಗಿಯೇ ಜಂತುಗಳಿಗೆ ಜನಿಸುವುವು.

೧೮. ಜೀವನು ಸ್ವಕರ್ಮದಿಂದಲೇ, ಇಂದ್ರನಾಗಬಲ್ಲನು. ಬ್ರಹ್ಮಪುತ್ರ ನಾಗಬಲ್ಲನು. ಸ್ವಕರ್ಮದಿಂದಲೇ ಜನ್ಮರಹಿತನಾಗಿ, ಶಾಶ್ವತವಾದ ಹರಿದಾಸ್ಯವನ್ನು ಹೊಂದಬಲ್ಲನು.

೧೯. ಸ್ವಕರ್ಮದಿಂದಲೇ ದೇವತ್ವವೇ ಮುಂತಾದ ಸಕಲಸಿದ್ಧಿಯನ್ನೂ ನಿಶ್ಚಿತವಾಗಿ ಹೊಂದಬಲ್ಲನು. ಸ್ವಕರ್ಮದಿಂದಲೇ ವಿಷ್ಣುವಿನ ಸಾಲೋಕ್ಯ, ಸಾಮೀಪ್ಯ, ಸಾಯುಜ್ಯಗಳನ್ನು ಜೀವನು ಹೊಂದುವನು.

೨೦. ಕರ್ಮಾನುಗುಣವಾಗಿಯೇ ಬ್ರಾಹ್ಮಣಿಕೆ, ಜೀವನ್ಮುಕ್ತಿ, ದೇವತಾ ಸ್ವರೂಪ. ಮನುಗಳಸ್ಥಾನ ಮತ್ತು ಶ್ರೇಷ್ಠರಾಜತ್ವವನ್ನು ಜೀವನು ಪಡೆಯುವನು.

೨೧. ಸ್ವಕರ್ಮಾನುಗುಣವಾಗಿಯೇ ಜೀವನು ಮುನೀಂದ್ರನೂ, ತಪಸ್ವಿಯೂ, ಕ್ಷತ್ರಿಯನೂ, ವೈಶ್ಯನೂ, ಆಗುವನು.

ಕರ್ಮಣಾ ಚೈವ ಶೂದ್ರತ್ವಮಂತ್ಯಜತ್ವಂ ಸ್ವಕರ್ಮಣಾ ॥ ೨೨ ॥

ಸ್ವಕರ್ಮಣಾ ಚ ಮ್ಲೇಚ್ಛತ್ವಂ ಲಭತೇ ನಾತ್ರ ಸಂಶಯಃ ।
ಸ್ವಕರ್ಮಣಾ ಜಂಗಮತ್ವಂ ಸ್ಥಾವರತ್ವಂ ಸ್ವಕರ್ಮಣಾ ॥ ೨೩ ॥

ಸ್ವಕರ್ಮಣಾ ಚ ಶೈಲತ್ವಂ ವೃಕ್ಷತ್ವಂ ಚ ಸ್ವಕರ್ಮಣಾ ।
ಸ್ವಕರ್ಮಣಾ ಪಶುತ್ವಂ ಚ ಪಕ್ಷಿತ್ವಂ ಚ ಸ್ವಕರ್ಮಣಾ ॥ ೨೪ ॥

ಸ್ವಕರ್ಮಣಾ ಕ್ಷುದ್ರಜಂತುಃ ಕೃಮಿತ್ವಂ ಚ ಸ್ವಕರ್ಮಣಾ ।
ಸ್ವಕರ್ಮಣಾ ಚ ಸರ್ಪತ್ವಂ ಗಂಧರ್ವತ್ವಂ ಸ್ವಕರ್ಮಣಾ ॥ ೨೫ ॥

ಸ್ವಕರ್ಮಣಾ ರಾಕ್ಷಸತ್ವಂ ಕಿಂನರತ್ವಂ ಸ್ವಕರ್ಮಣಾ ।
ಸ್ವಕರ್ಮಣಾ ಚ ಯಕ್ಷತ್ವಂ ಕೂಷ್ಮಾಂಡತ್ವಂ ಸ್ವಕರ್ಮಣಾ ॥ ೨೬ ॥

ಸ್ವಕರ್ಮಣಾ ಚ ಪ್ರೇತತ್ವಂ ವೇತಾಲತ್ವಂ ಸ್ವಕರ್ಮಣಾ ।
ಭೂತತ್ವಂ ಚ ಪಿಶಾಚತ್ವಂ ಡಾಕಿನೀತ್ವಂ ಸ್ವಕರ್ಮಣಾ ॥ ೨೭ ॥

೨೨–೨೩. ಶೂದ್ರ, ಅಂತ್ಯಜ, ಮ್ಲೇಚ್ಛ ಮುಂತಾದ ಜನ್ಮಗಳೆಲ್ಲವೂ, ಜಂತುವಿಗೆ ಸ್ವಕರ್ಮಾನುಗುಣವಾಗಿಯೇ ಲಭಿಸುವುವೆಂಬುದರಲ್ಲಿ ಸಂದೇಹವಿಲ್ಲ. ಸ್ಥಾವರಜಂಗಮಗಳೂ ಕರ್ಮಾನುಗುಣವಾಗಿಯೇ ಜನ್ಮವೆತ್ತುವುವು.

೨೪. ಬೆಟ್ಟ, ಮರ, ಪಶು, ಪಕ್ಷಿ ಮುಂತಾದ ಜನ್ಮಗಳೆಲ್ಲವೂ ಸ್ವಕರ್ಮದಿಂದಲೇ ಲಭಿಸುವುವು.

೨೫. ಕ್ಷುದ್ರಜಂತುವಾಗಲೀ, ಕ್ರಿಮಿಯಾಗಲೀ, ಸರ್ಪವಾಗಲೀ, ಗಂಧರ್ವನೇ ಆಗಲೀ, ಕರ್ಮಾನುಗುಣವಾಗಿಯೇ ಜನ್ಮವೆತ್ತಬೇಕು.

೨೬. ಯಕ್ಷಕಿನ್ನರರೂ, ಕೂಷ್ಮಾಂಡಬ್ರಹ್ಮರಾಕ್ಷಸರೂ, ಸ್ವಕರ್ಮಾನುಗುಣವಾಗಿಯೇ ಜನ್ಮಹೊಂದುವರು.

೨೭. ಜೀವಿಗಳು ಕರ್ಮಾನುಗುಣವಾಗಿಯೇ ಭೂತ, ಪ್ರೇತ, ಪಿಶಾಚ, ವೇತಾಲ, ಡಾಕಿನಿ ಮುಂತಾದ ಯೋನಿಯಲ್ಲಿ ಜನ್ಮಹೊಂದುವರು.

ದೈತ್ಯತ್ವಂ ದಾನವತ್ವಂ ಚಾಪ್ಯಸುರತ್ವಂ ಸ್ವಕರ್ಮಣಾ ।
ಕರ್ಮಣಾ ಪುಣ್ಯವಾನ್ ಜೀವೋ ಮಹಾಪಾಪೀ ಸ್ವಕರ್ಮಣಾ ॥ ೨೮ ॥

ಕರ್ಮಣಾ ಸುಂದರೋಽರೋಗೀ ಮಹಾರೋಗೀ ಚ ಕರ್ಮಣಾ ।
ಕರ್ಮಣಾ ಚಾಂಧಃ ಕಾಣಶ್ಚ ಕುತ್ಸಿತಶ್ಚ ಸ್ವಕರ್ಮಣಾ ॥ ೨೯ ॥

ಕರ್ಮಣಾ ನರಕಂ ಯಾಂತಿ ಜೀವಾಃ ಸ್ವರ್ಗಂ ಸ್ವಕರ್ಮಣಾ ।
ಕರ್ಮಣಾ ಶಕ್ರಲೋಕಂ ಚ ಸೂರ್ಯಲೋಕಂ ಸ್ವಕರ್ಮಣಾ ॥ ೩೦ ॥

ಕರ್ಮಣಾ ಚಂದ್ರಲೋಕಂ ಚ ವಹ್ನಿಲೋಕಂ ಸ್ವಕರ್ಮಣಾ ।
ಕರ್ಮಣಾ ವಾಯುಲೋಕಂ ಚ ಕರ್ಮಣಾ ವಾರುಣಾಲಯಂ ॥ ೩೧ ॥

ತಥಾ ಕುಬೇರಲೋಕಂ ಚ ನರೋ ಯಾತಿ ಸ್ವಕರ್ಮಣಾ ।
ಕರ್ಮಣಾ ಧ್ರುವಲೋಕಂ ಚ ಶಿವಲೋಕಂ ಸ್ವಕರ್ಮಣಾ ॥ ೩೨ ॥

---

೨೮. ದೈತ್ಯದಾನವರೂ, ಅಸುರರೂ, ಕರ್ಮಾನುಸಾರವಾಗಿ ಆಯಾಯ ಜನ್ಮವನ್ನು ಪಡೆಯುವರು. ಜೀವನು ಪುಣ್ಯವಂತನಾಗುವುದೂ, ಮಹಾಪಾಪಿಯಾಗುವುದೂ, ಸ್ವಕರ್ಮಫಲದಿಂದಲೇ.

೨೯. ಜಂತುವು ಸತ್ಕರ್ಮಾನುಗುಣವಾಗಿ ಸುಂದರನೂ, ಆರೋಗ್ಯದೃಢಕಾಯನೂ ಆಗಿ ಜನಿಸುವನು. ದುಷ್ಕರ್ಮದಫಲವಾಗಿ, ಮಹಾರೋಗಿಯೂ, ಕುಂಟ ಕುರುಡನೂ, ನೀಚನೂ ಆಗಿ ಜನಿಸುವನು.

೩೦. ಜೀವರಿಗೆ ಕರ್ಮಾನುಸಾರವಾಗಿಯೇ ಸ್ವರ್ಗ, ನರಕ ಪ್ರಾಪ್ತಿಯಾಗುವುದು. ಇಂದ್ರಲೋಕವನ್ನೂ, ಸೂರ್ಯಲೋಕವನ್ನೂ, ಸ್ವಕರ್ಮದಿಂದಲೇ ಜೀವನು ಹೊಂದುವನು.

೩೧. ಚಂದ್ರಲೋಕ ಅಗ್ನಿಲೋಕಗಳೂ, ವಾಯುಲೋಕ ವರುಣಲೋಕಗಳೂ, ಕರ್ಮಾನುಗುಣವಾಗಿಯೇ ಲಭಿಸುವುವು

೩೨ ಕುಬೇರನಲೋಕವನ್ನಾಗಲೀ, ಧ್ರುವಲೋಕ ಶಿವಲೋಕಗಳನ್ನಾಗಲೀ, ಮನುಜನು ಸ್ವಕರ್ಮದಿಂದಲೇ ಹೊಂದುವನು.

ಯಾತಿ ನಕ್ಷತ್ರಲೋಕಂ ಚ ಸತ್ಯಲೋಕಂ ಸ್ವಕರ್ಮಣಾ ।
ಜನೋಲೋಕಂ ತಪೋಲೋಕಂ ಮಹರ್ಲೋಕಂ ಸ್ವಕರ್ಮಣಾ ॥ ೩೩ ॥

ಸ್ವಕರ್ಮಣಾ ಚ ಪಾತಾಲಂ ಬ್ರಹ್ಮಲೋಕಂ ಸ್ವಕರ್ಮಣಾ ।
ಕರ್ಮಣಾ ಭಾರತಂ ಪುಣ್ಯಂ ಸರ್ವೇಪ್ಸಿತವರಪ್ರದಂ ॥ ೩೪ ॥

ಕರ್ಮಣಾ ಯಾತಿ ವೈಕುಂಠಂ ಗೋಲೋಕಂ ಚ ನಿರಾಮಯಂ ।
ಕರ್ಮಣಾ ಚಿರಜೀವೀ ಚ ಕ್ಷಣಾಯುಶ್ಚ ಸ್ವಕರ್ಮಣಾ ॥ ೩೫ ॥

ಕರ್ಮಣಾ ಕೋಟಿಕಲ್ಪಾಯುಃ ಕ್ಷೀಣಾಯುಶ್ಚ ಸ್ವಕರ್ಮಣಾ ।
ಜೀವಸಂಚಾರಮಾತ್ರಾಯುರ್ಗರ್ಭೇ ಮೃತ್ಯುಃ ಸ್ವಕರ್ಮಣಾ ॥ ೩೬ ॥

---

೩೩. ನಕ್ಷತ್ರಲೋಕಚಂದ್ರಲೋಕಗಳನ್ನಾಗಲೀ, ಜನೋಲೋಕ ತಪೋಲೋಕ ಸತ್ಯಲೋಕಗಳನ್ನಾಗಲೀ, ಜಂತುವು ಕರ್ಮಾನುಗುಣವಾಗಿಯೇ ಹೊಂದುವನು.

೩೪. ಪಾತಾಲ ಬ್ರಹ್ಮಲೋಕಗಳೂ, ಸಕಲೇಷ್ಟಾರ್ಥಗಳನ್ನು ಕೊಡುವ ಪುಣ್ಯಕರವಾದ ಭರತಖಂಡವೂ, ಕರ್ಮದಿಂದಲೇ ಲಭಿಸುವುದು.

೩೫. ವೈಕುಂಠವನ್ನೂ, ನಿರಾಮಯವಾದ ದೇವಲೋಕವನ್ನೂ, ಕರ್ಮದಿಂದಲೇ ಹೊಂದುವನು. ದೀರ್ಘಾಯುವಾಗಲೀ, ಅಲ್ಪಾಯುವಾಗಲೀ, ಸ್ವಕರ್ಮದಿಂದಲೇ ಉಂಟಾಗುವುದು.

೩೬. ಕೋಟಿಕಲ್ಪಕಾಲ ಜೀವಿಸುವುದಾಗಲೀ, ಕ್ಷೀಣಾಯುವಾಗಲೀ, ಹುಟ್ಟಿದ ಕ್ಷಣದಲ್ಲೇ ಸಾಯುವುದಾಗಲೀ, ಗರ್ಭದಲ್ಲೇ ಮರಣಹೊಂದುವುದಾಗಲೀ ಸ್ವಕರ್ಮದ ಫಲವೇ ಅಹುದು.

ಇತ್ಯೇವಂ ಕಥಿತಂ ಸರ್ವಂ ಮಯಾ ತತ್ತ್ವಂ ಚ ಸುಂದರಿ ।
ಕರ್ಮಣಾ ತೇ ಮೃತೋ ಭರ್ತಾ ಗಚ್ಛ ವತ್ಸೇ ಯಥಾ ಸುಖಂ ॥ ೩೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದ ನಾರಾಯಣಸಂವಾದೇ ಕರ್ಮವಿಪಾಕೇ
ಕರ್ಮಣಃ ಸರ್ವಹೇತುತ್ವಪ್ರದರ್ಶನಂ
ನಾಮಚತುರ್ವಿಂಶತಿತಮೋಽಧ್ಯಾಯಃ

---

೩೭. ಎಲೌ ಸುಂದರಾಂಗಿಯೇ, ಈ ರೀತಿಯಾಗಿ ನಾನು ಸಕಲ ತತ್ತ್ವಗಳನ್ನೂ ವಿವರಿಸಿದೆನು. ಆದ್ದರಿಂದ ನಿನ್ನ ಪತಿಯು ಕರ್ಮಾನುಗುಣವಾಗಿ ಮೃತನಾದುದರಿಂದ ಬಂದ ದಾರಿಯನ್ನು ಹಿಡಿದು ಸುಖವಾಗಿ ತೆರಳು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಕರ್ಮವಿಪಾಕವನ್ನೂ ಕರ್ಮವೇ ಸರ್ವಕ್ಕೂ ಮೂಲವೆಂಬುದನ್ನೂ ಮನಗಾಣಿಸುವ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು.

ಇಪ್ಪತ್ತನಾಲ್ಕನೆಯ ಅಧ್ಯಾಯದ ಸಾರಾಂಶವು

ಅಶ್ವಪತಿ ಮಹಾರಾಜನು ಸಾವಿತ್ರೀದೇವಿಯನ್ನು ಸ್ತುತಿಸಿ, ಸಾಕ್ಷಾತ್ಕಾರವನ್ನು ಪಡೆದು, ಆ ದೇವಿಯ ವರದಿಂದ ಸುಂದರ ಕನ್ಯೆಯೊಬ್ಬಳನ್ನು ಪಡೆದು, 'ಸಾವಿತ್ರಿ' ಎಂದು ನಾಮಕರಣಮಾಡಿದನು. ಆ ಬಾಲೆಯು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಪಡೆದು, ಪ್ರೌಢಳಾಗಿ, ತಂದೆಯ ಅನುಮತಿ ಪಡೆದು, ದ್ಯುಮತ್ಸೇನನ ಮಗನಾದ ಸತ್ಯವಂತನನ್ನು ವರಿಸಿ, ಒಂದು ವರ್ಷಕಾಲ ಸುಖವಾಗಿದ್ದಳು. ಅನಂತರ ಸತ್ಯವಾನನು ಒಮ್ಮೆ ಅವನ ಅಪ್ಪಣೆಯಂತೆ ಸಮಿತ್ಪುಷ್ಪಗಳನ್ನೂ, ಕಟ್ಟಿಗೆಯನ್ನೂ, ತರಲು ಕಾಡಿಗೆ ತೆರಳಿ, ಅಲ್ಲಿ ಮರದಿಂದ ಬಿದ್ದು ಪ್ರಾಣಬಿಟ್ಟನು. ಪತಿಯನ್ನೇ ಅನುಸರಿಸಿ ಹೋಗಿದ್ದ ಆ ಸಾವಿತ್ರಿಯು ಪತಿಯ ಮರಣದಿಂದ ಗೋಳಾಡುತ್ತಿರುವಾಗಲೇ ಯಮಧರ್ಮರಾಯನು ಸತ್ಯವಂತನ ಜೀವವನ್ನು ಕರೆದೊಯ್ಯಲು ತೊಡಗಿದನು. ಸಾವಿತ್ರಿಯು ಅವನನ್ನೇ ಹಿಂಬಾಲಿಸಲು ತೊಡಗಿದಾಗ ಯಮರಾಜನು ಆಕೆಯನ್ನು ಕುರಿತು ಇಂತೆಂದನು :—" ಎಲೌ ಪತಿವ್ರತೆಯಾದ ಸಾವಿತ್ರಿಯೇ, ನಿನ್ನ ಪತಿಯು ಭಾರತದಲ್ಲಿ ಜೀವಿಸಿರಬೇಕಾದ ಕಾಲವು ಪರಿಪೂರ್ಣವಾಯಿತು. ಈಗ ತನ್ನ ಕರ್ಮಾನುಗುಣವಾದ ಫಲವನ್ನು ಅನುಭವಿಸಲು ನನ್ನ ಲೋಕಕ್ಕೆ ಬರುತ್ತಿದ್ದಾನೆ. ಪ್ರತಿಯೊಂದು ಪ್ರಾಣಿಯೂ ತನ್ನ ಜನ್ಮಾಂತರದ ಕರ್ಮಾನುಗುಣವಾಗಿ ಜನನ ಮರಣಗಳನ್ನೂ, ಸುಖ ದುಃಖಗಳನ್ನೂ, ಸ್ವರ್ಗ ನರಕಗಳನ್ನೂ ಹೊಂದುವನು. ಕರ್ಮವೇ ಎಲ್ಲದಕ್ಕೂ ಮೂಲವಾದುದು. ಆದ್ದರಿಂದ ನೀನು ನಿನ್ನ ಪತಿಯ ಅನುಸರಣೆಯನ್ನು ಬಿಟ್ಟು ಹಿಂತಿರುಗಿ ಹೋಗು" ಎಂದು ಹೇಳಿದನು.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಪಂಚವಿಂಶತಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಯಮಸ್ಯ ವಚನಂ ಶ್ರುತ್ವಾ ಸಾವಿತ್ರೀ ಚ ಪತಿವ್ರತಾ ।
ತುಷ್ಟಾವ ಪರಯಾಭಕ್ತ್ಯಾ ತಮುವಾಚ ಮನಸ್ವಿನೀ ॥ ೧ ॥

॥ ಸಾವಿತ್ರ್ಯುವಾಚ ॥

ಕಿಂ ಕರ್ಮ ವಾ ಶುಭಂ ಧರ್ಮರಾಜ ಕಿಂ ವಾಽಶುಭಂ ನೃಣಾಂ ।
ಕರ್ಮ ನಿರ್ಮೂಲಯಂತ್ಯೇವ ಕೇನ ವಾ ಸಾಧವೋ ಜನಾಃ ॥ ೨ ॥

ಕರ್ಮಣಾಂ ಬೀಜರೂಪಃ ಕಃ ಕೋ ವಾ ಕರ್ಮಫಲಪ್ರದಃ ।
ಕಿಂ ಕರ್ಮ ತದ್ಭವೇತ್ಕೇನ ಕೋ ವಾ ತದ್ಧೇತುರೇವ ಚ ॥ ೩ ॥

ಇಪ್ಪತ್ತೈದನೆಯ ಅಧ್ಯಾಯ

೧. ಶ್ರೀ ನಾರಾಯಣ :—ಯಮಧರ್ಮರಾಯನ ಮಾತುಗಳನ್ನು ಕೇಳಿ, ಪತಿವ್ರತೆಯಾದ ಸಾವಿತ್ರಿಯು ಪರಮಭಕ್ತಿಯಿಂದ ಅವನನ್ನು ಸ್ತುತಿಸಿ, ಈ ರೀತಿ ಹೇಳಿದಳು.

೨. ಸಾವಿತ್ರಿ :—ಎಲೈ ಧರ್ಮರಾಜನೇ, ಮನುಜರ ಶುಭಾಶುಭಕರ್ಮಗಳಾವುವು? ಸತ್ಪುರುಷರು ಕರ್ಮಬಂಧನದಿಂದ ವಿಮುಕ್ತರಾಗುವ ಬಗೆಹೇಗೆ?

೩. ಕರ್ಮಗಳಿಗೆಲ್ಲ ಬೀಜಸ್ವರೂಪನಾರು? ಕರ್ಮಫಲಗಳನ್ನು ಕೊಡುವವರಾರು? ಕರ್ಮವೆಂದರೇನು? ಅದರ ಉತ್ಪತ್ತಿಹೇಗೆ? ಅದಕ್ಕೆ ಕಾರಣರಾರು?

ಕೋ ವಾ ಕರ್ಮಫಲ ಭುಂಕ್ತೆ ಕೋ ವಾ ನಿರ್ಲಿಪ್ತ ಏವ ಚ ।
ಕೋ ವಾ ದೇಹೀ ಕಶ್ಚ ದೇಹಃ ಕೋ ವಾ ವೈ ಕರ್ಮಕಾರಕಃ ॥ ೪ ॥

ಕಿಂ ವಿಜ್ಞಾನಮನೋಬುದ್ಧಿಃ ಕೇ ವಾ ಪ್ರಾಣಾಃ ಶರೀರಿಣಾಂ ।
ಕಾನೀಂದ್ರಿಯಾಣಿ ಕಿಂ ತೇಷಾಂ ಲಕ್ಷಣಂ ದೇವತಾಶ್ಚ ಕಾಃ ॥ ೫ ॥

ಭೋಕ್ತಾ ಭೋಜಯಿತಾ ಕೋ ವಾ ಕೋ ಭೋಗಃ ಕಾ ಚ ನಿಷ್ಕೃತಿಃ ।
ಕೋ ಜೀವಃ ಪರಮಾತ್ಮಾ ಕಸ್ತನ್ಮೆ ವ್ಯಾಖ್ಯಾತುಮರ್ಹಸಿ ॥ ೬ ॥

॥ ಯಮ ಉವಾಚ ॥

ವೇದೇನ ವಿಹಿತಂ ಕರ್ಮ ತನ್ಮಯೋ ಮಂಗಲಂ ಪರಂ ।
ಅವೈದಿಕಂ ತು ಯತ್ಕರ್ಮ ತದೇವಾಶುಭಮೇವ ಚ ॥ ೭ ॥

---

೪. ಕರ್ಮಫಲವನ್ನು ಉಪಭೋಗಿಸುವವರಾರು? ಕರ್ಮಬಂಧನಕ್ಕೆ ಸಿಲುಕದೆ ನಿರ್ಲಿಪ್ತರಾಗುವವರು ಯಾರು? ದೇಹಿಯಾರು? ದೇಹವಾವುದು? ಇವುಗಳಲ್ಲಿ ಕರ್ಮಕಾರಕವಾವುದು?

೫. ಜ್ಞಾನ, ಮನಸ್ಸು, ಬುದ್ಧಿ ಎಂದರೇನು? ಶರೀರದಲ್ಲಿ ಪ್ರಾಣಗಳಾವುವು? ಇಂದ್ರಿಯಗಳಾವುವು? ಅವುಗಳ ಲಕ್ಷಣವೇನು? ಅವುಗಳ ಅಭಿಮಾನಿ ದೇವತೆ ಯಾರು?

೬. ಕರ್ಮಭೋಕ್ತೃವಾರು? ದಾತೃಯಾರು? ಭೋಗವೆಂದರೇನು? ಅದಕ್ಕೆ ನಿಷ್ಕೃತಿ ಯಾವುದು? ಜೀವನಾರು? ಪರಮಾತ್ಮನಾರು? ಇವೆಲ್ಲವನ್ನೂ ನನಗೆ ವಿಸ್ತರಿಸಿ ಹೇಳು.

೭. ಯಮ :—ವೇದವಿಹಿತವಾದುದೆಲ್ಲ ಸತ್ಕರ್ಮವೆನಿಸಿ ಮಂಗಳಕರವಾಗಿರುವುದು. ವೇದದಲ್ಲಿ ಅನುಕ್ತವಾಗಿ ಅವೈದಿಕವೆನಿಸಿಕೊಂಡಿರುವ ಕರ್ಮಗಳೆಲ್ಲವೂ ಅಶುಭ ಫಲದಾಯಕವಾದುವು.

ಅಹೈತುಕೀ ವಿಷ್ಣುಸೇವಾ ಸಂಕಲ್ಪರಹಿತಾ ಸತಾಂ ।
ಕರ್ಮನಿರ್ಮೂಲನಾತ್ಮಾ ವೈ ಸಾ ಚೈವ ಹರಿಭಕ್ತಿದಾ ॥ ೮ ॥

ಹರಿಭಕ್ತೋ ನರೋ ಯಶ್ಚ ಸ ಚ ಮುಕ್ತಃ ಶ್ರುತೌ ಶ್ರುತಂ ।
ಜನ್ಮಮೃತ್ಯುಜರಾವ್ಯಾಧಿ ಶೋಕಭೀತಿವಿವರ್ಜಿತಃ ॥ ೯ ॥

ಮುಕ್ತಿಶ್ಚ ದ್ವಿವಿಧಾ ಸಾಧ್ವಿ ಶ್ರುತ್ಯುಕ್ತಾ ಸರ್ವಸಮ್ಮತಾ ।
ನಿರ್ವಾಣಪದದಾತ್ರೀ ಚ ಹರಿಭಕ್ತಿಪ್ರದಾ ನೃಣಾಂ ॥ ೧೦ ॥

ಹರಿಭಕ್ತಿಸ್ವರೂಪಾಂ ಚ ಮುಕ್ತಿಂ ವಾಂಛಂತಿ ವೈಷ್ಣವಾಃ ।
ಅನ್ಯೇ ನಿರ್ವಾಣರೂಪಾಂ ಚ ಮುಕ್ತಿಮಿಚ್ಛಂತಿ ಸಾಧವಃ ॥ ೧೧ ॥

ಕರ್ಮಣೋ ಬೀಜರೂಪಶ್ಚ ಸಂತತಂ ತತ್ಫಲಪ್ರದಃ ।
ಕರ್ಮರೂಪಶ್ಚ ಭಗವಾನ್ ಶ್ರೀಕೃಷ್ಣಃ ಪ್ರಕೃತೇಃ ಪರಃ ॥ ೧೨ ॥

---

೮. ಕಾರಣವೂ, ಆಕಾಂಕ್ಷೆಯೂ ಇಲ್ಲದ ನಿಷ್ಕಾಮವಾದ ವಿಷ್ಣುವಿನ ಸೇವೆಯು ಮನುಜರ ಕರ್ಮಬಂಧವನ್ನು ಬಯಲುಮಾಡಿ ಹರಿಭಕ್ತಿಯನ್ನು ಕೊಡುವುದು.

೯. ಹರಿಭಕ್ತಿಯುಳ್ಳ ಮನುಜನು ಮುಕ್ತನೆಂದು ಶ್ರುತ್ಯುಕ್ತವಾಗಿದೆ. ಅವನಿಗೆ ಜನ್ಮ, ಮೃತ್ಯು, ಜರಾ, ವ್ಯಾಧಿ, ಶೋಕ ಭೀತ್ಯಾದಿಗಳಿರುವುದಿಲ್ಲ.

೧೦. ಎಲೌ ಸಾಧ್ವೀಶಿರೋಮಣಿಯೇ, ಮುಕ್ತಿಯು ಎರಡು ವಿಧವೆಂದು ಶ್ರುತ್ಯುಕ್ತವೂ, ಸರ್ವ ಸಮ್ಮತವೂ ಆಗಿದೆ. ಅವುಗಳಲ್ಲಿ ಒಂದು ನಿರ್ವಾಣಮುಕ್ತಿ. ಮತ್ತೊಂದು ಹರಿಭಕ್ತಿರೂಪವಾದ ಮುಕ್ತಿ.

೧೧. ವೈಷ್ಣವರು ಹರಿಭಕ್ತಿಸ್ವರೂಪವಾದ ಮುಕ್ತಿಯನ್ನು ಬಯಸುವರು. ಇತರ ಸತ್ಪುರುಷರೆಲ್ಲರೂ ನಿರ್ವಾಣಮುಕ್ತಿಯನ್ನು ಬಯಸುವರು.

೧೨. ಕರ್ಮಕ್ಕೆ ಬೀಜಸ್ವರೂಪನೂ, ಕರ್ಮಗಳ ಫಲಪ್ರದನೂ, ಕರ್ಮಸ್ವರೂಪನೂ ಆದ ಶ್ರೀಕೃಷ್ಣಭಗವಂತನು ಪ್ರಕೃತಿಗಿಂತ ಶ್ರೇಷ್ಠನಾದವನು.

ಸೋಽಪಿ ತದ್ಧೇತುರೂಪಶ್ಚ ಕರ್ಮ ತೇನ ಭವೇತ್ಸತಿ ।
ಜೀವಃ ಕರ್ಮಫಲಂ ಭುಂಕ್ತೇ ಆತ್ಮಾ ನಿರ್ಲಿಪ್ತ ಏವ ಚ ॥ ೧೩ ॥

ಆತ್ಮನಃ ಪ್ರತಿಬಿಂಬಂ ಚ ದೇಹೀ ಜೀವಃ ಸ ಏವ ಚ ।
ಪಾಂಚಭೌತಿಕರೂಪಶ್ಚ ದೇಹೋ ನಶ್ವರ ಏವ ಚ ॥ ೧೪ ॥

ಪೃಥಿವೀ ವಾಯುರಾಕಾಶೋ ಜಲಂ ತೇಜಸ್ತಥೈವ ಚ ।
ಏತಾನಿ ಸೂತ್ರರೂಪಾಣಿ ಸೃಷ್ಟೇಃ ಸೃಷ್ಟಿವಿಧೌ ಹರೇಃ ॥ ೧೫ ॥

ಕರ್ತಾ ಭೋಕ್ತಾ ಚ ದೇಹೀ ಚ ಸ್ವಾತ್ಮಭೋಜಯಿತಾ ಸದಾ ।
ಭೋಗೋ ವಿಭವಭೇದಶ್ಚ ನಿಷ್ಕೃತಿರ್ಮುಕ್ತಿರೇವ ಚ ॥ ೧೬ ॥

ಸದಸದ್ಭೇದಬೀಜಂ ಚ ಜ್ಞಾನಂ ನಾನಾವಿಧಂ ಭವೇತ್ ।
ವಿಷಯಾಣಾಂ ವಿಭಾಗಾನಾಂ ಭೇದಬೀಜಂ ಚ ಕೀರ್ತಿದಂ ॥ ೧೭ ॥

೧೩. ಎಲೌ ಪತಿವ್ರತೆಯೇ, ಭಗವಂತನೇ ಕರ್ಮಕ್ಕೆ ಕಾರಣಸ್ವರೂಪನು. ಅವನಿಂದಲೇ ಕರ್ಮವು ಉತ್ಪತ್ತಿಯಾಗುವುದು. ಆದರೆ, ಜೀವನು ಕರ್ಮ ಫಲವನ್ನು ಉಪಭೋಗಿಸುವನು. ಆತ್ಮನು ನಿರ್ಲಿಪ್ತನಾದವನು.

೧೪. ಆತ್ಮನ ಪ್ರತಿಬಿಂಬವೇ ದೇಹಿ ಅಥವಾ ಜೀವನೆನಿಸಿಕೊಳ್ಳುವುದು. ಪಂಚಭೂತಗಳಿಂದ ಸೃಷ್ಟವಾದ ದೇಹವು ನಶ್ವರವಾದುದು.

೧೫. ಸೃಷ್ಟಿಕರ್ತನ ಸೃಷ್ಟಿಗೆ ಮಣ್ಣು, ಗಾಳಿ, ಆಕಾಶ, ನೀರು, ತೇಜಸ್ಸು ಇವುಗಳು ಸೂತ್ರಾತ್ಮಕವಾಗಿರುವುವು.

೧೬. ಕರ್ಮಗಳನ್ನು ಮಾಡುವವನೂ ಅವುಗಳ ಫಲವನ್ನು ಅನುಭವಿಸುವವನೂ ಜೀವನೇ. ಆತ್ಮನು ಫಲವನ್ನು ಕೊಡುವವನು ಮಾತ್ರ. ಫಲ ಭೋಗವೆಂಬುದು ಒಂದು ತರಹ ಸಂಪತ್ತು. ಅದರಿಂದ ಬಿಡುಗಡೆಯೇ ಮುಕ್ತಿಯೆನಿಸುವುದು.

೧೭. ಇದು ಒಳ್ಳೆಯದು ಇದು ಕೆಟ್ಟದ್ದು ಎಂದು ವಿಭಾಗಿಸಲು ಬೀಜರೂಪವೂ, ವಿಷಯವಿಭಾಗಗಳಿಗೆ ಮೂಲರೂಪವೂ, ಕೀರ್ತಿದಾಯಕವೂ ಆದ ಜ್ಞಾನವು ವಿವಿಧವಾಗಿರುವುದು.

ಬುದ್ಧಿರ್ವಿವೇಚನಾರೂಪಾ ಜ್ಞಾನಸಂದೀಪಿನೀ ಶ್ರುತೌ ।
ವಾಯುಭೇದಾಶ್ಚ ವೈ ಪ್ರಾಣಾ ಬಲರೂಪಾಶ್ಚ ದೇಹಿನಾಂ ॥ ೧೮ ॥

ಇಂದ್ರಿಯಾಣಾಂ ವೈ ಪ್ರವರಮೀಶ್ವರಾಣಾಂ ಸಮೂಹಕಂ ।
ಪ್ರೇರಕಂ ಕರ್ಮಣಾಂ ಚೈವ ದುರ್ನಿವಾರ್ಯಂ ಚ ದೇಹಿನಾಂ ॥ ೧೯ ॥

ಅನಿರೂಪ್ಯಮದೃಶ್ಯಂ ಚ ಜ್ಞಾನಭೇದಂ ಮನಃ ಸ್ಮೃತಂ ।
ಲೋಚನಂ ಶ್ರವಣಂ ಘ್ರಾಣಂ ತ್ವಗ್ಜಿಹ್ವಾದಿಕಮಿಂದ್ರಿಯಂ ॥ ೨೦ ॥

ಅಂಗಿನಾಮಂಗರೂಪಂ ಚ ಪ್ರೇರಕಂ ಸರ್ವಕರ್ಮಣಾಂ ।
ರಿಪುರೂಪಂ ಮಿತ್ರರೂಪಂ ಸುಖದಂ ದುಃಖದಂ ಸದಾ ॥ ೨೧ ॥

ಸೂರ್ಯೋ ವಾಯುಶ್ಚ ಪೃಥಿವೀ ವಾಣ್ಯಾದ್ಯಾ ದೇವತಾಃ ಸ್ಮೃತಾಃ ।
ಪ್ರಾಣದೇಹಾದಿಭೃದ್ಯೋ ಹಿ ಸ ಜೀವಃ ಪರಿಕೀರ್ತಿತಃ ॥ ೨೨ ॥

---

೧೮. ಯುಕ್ತಾಯುಕ್ತವಿವೇಚನಾತ್ಮಕವಾದ ಜ್ಞಾನವೇ ಬುದ್ಧಿ ಎನಿಸಿಕೊಳ್ಳುವುದು. ಅದಕ್ಕೆ 'ಜ್ಞಾನಸಂದೀಪನೀ' ಎಂಬ ಹೆಸರು ಶ್ರುತ್ಯುಕ್ತವಾಗಿದೆ. ದೇಹಿಗಳಿಗೆ ಬಲವನ್ನು ಕೊಡುವ ಪ್ರಾಣ, ಅಪಾನ, ವ್ಯಾನ ಉದಾನ ಮತ್ತು ಸಮಾನವೆಂಬ ವಾಯುಗಳೇ ಪಂಚಪ್ರಾಣಗಳೆನಿಸುವುವು.

೧೯–೨೦. ಇಂದ್ರಿಯಗಳಿಗೆಲ್ಲ ಶ್ರೇಷ್ಠವಾಗಿಯೂ, ಕರ್ಮಗಳಿಗೆ ಪ್ರೇರಕವಾಗಿಯೂ, ದೇಹಿಗಳಿಗೆಲ್ಲಾ ದುರ್ನಿವಾರ್ಯವಾಗಿಯೂ, ಅನಿರ್ವಚನೀಯವಾಗಿಯೂ, ಕಣ್ಣಿಗೆ ಕಾಣದೆಯೂ ಇರುವ, ಜ್ಞಾನಭೇದವೇ ಮನಸ್ಸು ಎನಿಸಿಕೊಳ್ಳುವುದು. ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆ, ಈ ಐದು ಇಂದ್ರಿಯಗಳೆನಿಸಿಕೊಳ್ಳುವುವು.

೨೧. ಈ ಇಂದ್ರಿಯಗಳು ಅಂಗಿಯಾದ ಜೀವನಿಗೆ ಅಂಗರೂಪವಾಗಿ ಸಮಸ್ತಕರ್ಮಗಳಿಗೂ ಪ್ರೇರಕವಾಗಿ ಒಮ್ಮೆ ಶತ್ರುರೂಪವಾಗಿ ದುಃಖವನ್ನೂ, ಮತ್ತೊಮ್ಮೆ ಮಿತ್ರರೂಪವಾಗಿ ಸುಖವನ್ನೂ ಕೊಡುವುವು.

೨೨. ಸೂರ್ಯ, ವಾಯು, ಪೃಥ್ವಿ ಮತ್ತು ವಾಣಿ ಇವರೇ ಈ ಇಂದ್ರಿಯಗಳ ಅಭಿಮಾನಿದೇವತೆಗಳು. ದೇಹೇಂದ್ರಿಯಪ್ರಾಣಾದಿಗಳನ್ನು ಧರಿಸುವವನನ್ನೇ ದೇಹೀ ಅಥವಾ ಜೀವನೆನ್ನುವರು.

ಪರಮಾತ್ಮಾ ಪರಂ ಬ್ರಹ್ಮ ನಿರ್ಗುಣಃ ಪ್ರಕೃತೇಃ ಪರಃ ।
ಕಾರಣಂ ಕಾರಣಾನಾಂ ಚ ಶ್ರೀಕೃಷ್ಣೋ ಭಗವಾನ್ಸ್ವಯಂ ॥ ೨೩ ॥

ಇತ್ಯೇವಂ ಕಥಿತಂ ಸರ್ವಂ ಮಯಾ ಪೃಷ್ಟಂ ಯಥಾಗಮಂ ।
ಜ್ಞಾನಿನಾಂ ಜ್ಞಾನರೂಪಂ ಚ ಗಚ್ಛ ವತ್ಸೇ ಯಥಾಸುಖಂ ॥ ೨೪ ॥

॥ ಸಾವಿತ್ರ್ಯುವಾಚ ॥

ತ್ಯಕ್ತ್ವಾ ಕ್ವಯಾಮಿ ಕಾಂತಂ ವಾ ತ್ವಾಂ ವಾ ಜ್ಞಾನಾರ್ಣವಂ ಬುಧಂ ।
ಪ್ರಶ್ನಂ ಯದ್ಯತ್ಕರೋಮಿ ತ್ವಾಂ ತದ್ಭವಾನ್ವಕ್ತುಮರ್ಹತಿ ॥ ೨೫ ॥

ಕಾಂ ಕಾಂ ಯೋನಿಂ ಯಾತಿ ಜೀವಃ ಕರ್ಮಣಾ ಕೇನ ವಾ ಯಮ ।
ಕೇನ ವಾ ಕರ್ಮಣಾ ಸ್ವರ್ಗಂ ಕೇನ ವಾ ನರಕಂ ಪಿತಃ ॥ ೨೬ ॥

ಕೇನ ವಾ ಕರ್ಮಣಾ ಮುಕ್ತಿಃ ಕೇನ ಭಕ್ತಿರ್ಭವೇದ್ಧರೇಃ ।
ಕೇನ ವಾ ಕರ್ಮಣಾ ರೋಗೀ ಚಾರೋಗೀ ಕೇನ ಕರ್ಮಣಾ ॥ ೨೭ ॥

---

೨೩. ಪರಬ್ರಹ್ಮಸ್ವರೂಪನೂ, ಪ್ರಕೃತಿಗಿಂತ ಶ್ರೇಷ್ಠನೂ, ನಿರ್ಗುಣನೂ, ಕಾರಣಗಳಿಗೆಲ್ಲಾ ಆದಿಕಾರಣನೂ ಆದ ಶ್ರೀ ಕೃಷ್ಣನೇ ಸ್ವಯಂಪರಮಾತ್ಮನು.

೨೪. ನೀನು ಕೇಳಿದ ಪ್ರಶ್ನೆಗಳಿಗೆ ಶಾಸ್ತ್ರಾನುಸಾರವಾಗಿ ಸಮಂಜಸವಾದ ಉತ್ತರವನ್ನು ನಾನು ಹೇಳಿದೆನು. ಜ್ಞಾನಿಗಳಿಗೆ ಆತ್ಮಸ್ವರೂಪವಾದ ಆತ್ಮವಸ್ತುವನ್ನು ನಿರೂಪಿಸಿದೆನು. ಆದ್ದರಿಂದ ಎಲೌ ವತ್ಸೆ, ನೀನು ಸುಖವಾಗಿ ಹಿಂತಿರುಗಿ ಹೋಗು.

೨೫. ಸಾವಿತ್ರಿ :--ನನ್ನ ಪ್ರಾಣಕಾಂತನನ್ನೂ, ಜ್ಞಾನಸಮುದ್ರನೂ, ಪಂಡಿತನೂ ಆದ ನಿನ್ನನ್ನೂ ಬಿಟ್ಟು, ನಾನೆಲ್ಲಿಗೆ ಹೋಗಲಿ? ನಿನ್ನನ್ನು ಕುರಿತು ಯಾವ ಯಾವ ಪ್ರಶ್ನೆಗಳನ್ನು ಕೇಳುವೆನೋ ಅವೆಲ್ಲಕ್ಕೂ ದಯವಿಟ್ಟು ಉತ್ತರಹೇಳು.

೨೬. ಎಲೈ ಧರ್ಮರಾಜನೇ, ಯಾವ ಯಾವ ಕರ್ಮಗಳಿಂದ ಜೀವನು ಯಾವ ಯಾವ ಯೋನಿಯಲ್ಲಿ ಜನ್ಮವೆತ್ತುವನು? ಯಾವ ಕರ್ಮದಿಂದ ಸ್ವರ್ಗವೂ ಯಾವ ಕರ್ಮದಿಂದ ನರಕವೂ ಲಭಿಸುವುದು?

೨೭ ಯಾವ ಕರ್ಮದಿಂದ ಮುಕ್ತಿಯೂ, ಮತ್ತೆ ಯಾವ ಕರ್ಮದಿಂದ ಹರಿಭಕ್ತಿಯೂ ಲಭಿಸುವುದು? ಯಾವ ಕರ್ಮದಿಂದ ರೋಗಿಯೂ, ಯಾವ ಕರ್ಮದಿಂದ ನೀರೋಗಿಯೂ ಆಗುವನು?

ಕೇನ ವಾ ದೀರ್ಘಜೀವೀ ಚ ಕೇನಾಲ್ಪಾಯುಶ್ಚ ಕರ್ಮಣಾ ।
ಕೇನ ವಾ ಕರ್ಮಣಾ ದುಃಖೀ ಕೇನ ವಾ ಕರ್ಮಣಾ ಸುಖೀ ॥ ೨೮ ॥

ಅಂಗಹೀನಶ್ಚ ಕಾಣಶ್ಚ ಬಧಿರಃ ಕೇನ ಕರ್ಮಣಾ ।
ಅಂಧೋ ವಾ ಕೃಪಣೋ ವಾಪಿ ಪ್ರಮತ್ತಃ ಕೇನ ಕರ್ಮಣಾ ॥ ೨೯ ॥

ಕ್ಷಿಪ್ತೋಽತಿಲುಬ್ಧಕಶ್ಚೈವ ಕೇನ ವಾ ನರಘಾತಕಃ ।
ಕೇನ ಸಿದ್ಧಿಮವಾಪ್ನೋತಿ ಸಾಲೋಕ್ಯಾದಿ ಚತುಷ್ಟಯಂ ॥ ೩೦ ॥

ಕೇನ ವಾ ಬ್ರಾಹ್ಮಣತ್ವಂ ಚ ತಪಸ್ವಿತ್ವಂ ಚ ಕೇನ ವಾ ।
ಸ್ವರ್ಗಭೋಗಾದಿಕಂ ಕೇನ ವೈಕುಂಠಂ ಕೇನ ಕರ್ಮಣಾ ॥ ೩೧ ॥

ಗೋಲೋಕಂ ಕೇನ ವಾ ಬ್ರಹ್ಮನ್ ಸರ್ವೋತ್ಕೃಷ್ಟಂ ನಿರಾಮಯಂ ।
ನರಕಂ ವಾ ಕತಿವಿಧಂ ಕಿಂ ಸಂಖ್ಯಂ ನಾಮ ಕಿಂ ತಥಾ ॥ ೩೨ ॥

---

೨೮. ಯಾವ ಕರ್ಮಗಳ ಫಲವಾಗಿ ಜೀವನು ದೀರ್ಘಾಯುಷ್ಯವನ್ನು ಹೊಂದುವನು? ಯಾವ ಕರ್ಮದಿಂದ ಜೀವನು ದುಃಖಿ ಮತ್ತು ಸುಖಿಯಾಗುವನು?

೨೯. ಅಂಗಹೀನ, ಕುರುಡ ಮತ್ತು ಕಿವುಡನಾಗುವುದು ಯಾವ ಕರ್ಮದ ಫಲವು? ದೀನ ಮತ್ತು ಪ್ರಮತ್ತನಾಗುವುದು ಯಾವ ಕರ್ಮದ ಫಲವು?

೩೦. ಜಾತಿಭ್ರಷ್ಟನೂ, ದುರಾಶಾಪರನೂ, ನರಹಿಂಸಕನೂ ಆಗುವುದು ಯಾವ ಕರ್ಮಗಳ ಫಲವು? ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ರೂಪವಾದ ಮುಕ್ತಿಯನ್ನೂ, ಸಿದ್ಧಿಯನ್ನೂ, ಹೊಂದಬೇಕಾದರೆ ಯಾವ ಕರ್ಮಗಳನ್ನು ಮಾಡಬೇಕು?

೩೧. ಬ್ರಾಹ್ಮಣ, ತಪಸ್ವಿ ಮುಂತಾದ ಜನ್ಮಗಳನ್ನು ಪಡೆಯಲು ಯಾವ ಸತ್ಕರ್ಮಗಳನ್ನು ಮಾಡಬೇಕು? ಸ್ವರ್ಗಭೋಗಾದಿಗಳೂ, ವೈಕುಂಠಪ್ರಾಪ್ತಿಯೂ, ಯಾವ ಕರ್ಮಗಳ ಫಲವು?

೩೨. ಎಲೈ ಧರ್ಮರಾಜನೇ, ಸರ್ವೋತ್ಕೃಷ್ಟವಾದ ಲೋಕಪ್ರಾಪ್ತಿಯು ಯಾವ ಕರ್ಮದಿಂದ ಲಭಿಸುವುದು? ನರಕಗಳೆಷ್ಟು ವಿಧ? ಅವುಗಳ ಸಂಖ್ಯೆ ಎಷ್ಟು? ಅವುಗಳ ಹೆಸರೇನು?

ಕೋ ವಾ ಕಂ ನರಕಂ ಯಾತಿ ಕಿಯಂತಂ ತೇಷು ತಿಷ್ಠತಿ ।
ಪಾಪಿನಾಂ ಕರ್ಮಣಾ ಕೇನ ಕೋವಾ ವ್ಯಾಧಿಃ ಪ್ರಜಾಯತೇ ॥ ೩೩ ॥

ಯದ್ಯದಸ್ತಿ ಮಯಾ ಪೃಷ್ಟಂ ತನ್ಮೇ ವ್ಯಾಖ್ಯಾತುಮರ್ಹಸಿ ॥ ೩೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದ ನಾರಾಯಣಸಂವಾದೇ ಕರ್ಮವಿಪಾಕೇ ಯಮೋಕ್ತ್ಯನಂತರಂ ಸಾವಿತ್ರೀ ಪ್ರಶ್ನೋ ನಾಮ ಪಂಚವಿಂಶತಿತಮೋಽಧ್ಯಾಯಃ

---

೩೩. ಯಾರು ಯಾವ ನರಕಕ್ಕೆ ಹೋಗಿ ಎಷ್ಟುಕಾಲ ಅಲ್ಲಿರುವರು? ಪಾಪಿಗಳಿಗೆ ಯಾವ ಕರ್ಮದಿಂದ ಯಾವ ರೋಗವು ಉತ್ಪತ್ತಿಯಾಗುವುದು?

೩೪. ಇವುಗಳಲ್ಲದೆ ನಾನು ಪ್ರಶ್ನಿಸದಿರುವ ಯಾವುದಾದರೂ ವಿಷಯಗಳಿದ್ದರೂ ನನಗೆ ವಿಸ್ತರಿಸಿ ಹೇಳು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದಲ್ಲಿ ಸಾವಿತ್ರೀ ಪ್ರಶ್ನರೂಪವಾದ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೈದನೆಯ ಅಧ್ಯಾಯದ ಸಾರಾಂಶವು

ತನ್ನ ಕರ್ಮಾನುಗುಣವಾದ ಫಲವನ್ನು ಭೋಗಿಸಲು ಸತ್ಯವಾನನು ಯಾವ ಲೋಕಕ್ಕೆ ತೆರಳುತ್ತಿರುವನೆಂದು ಹೇಳಿದ ಯಮಧರ್ಮರಾಯನನ್ನು ಕುರಿತು ಸಾವಿತ್ರಿಯು ಈ ರೀತಿ ಪ್ರಶ್ನಿಸಿದಳು. "ಎಲೈ ಧರ್ಮರಾಜನೇ! ಶುಭಾಶುಭ ಕರ್ಮಗಳಾವುವು? ಕರ್ಮಗಳಿಗೆ ಮೂಲವಾವುದು? ದೇಹ ಮತ್ತು ದೇಹಿಗಳ ವಿವೇಚನೆಯನ್ನೂ, ಜ್ಞಾನ, ಮನಸ್ಸು ಮತ್ತು ಬುದ್ಧಿಗಳ ಅಂತರವನ್ನೂ ತಿಳಿಯುವುದೆಂತು? ಕರ್ಮಫಲಗಳ ದಾತೃ ಮತ್ತು ಭೋಕ್ತೃಗಳಾರು? ಜೀವಾತ್ಮಪರಮಾತ್ಮರ ಸ್ವರೂಪವೇನು?" ಈ ರೀತಿಯಾದ ಸಾವಿತ್ರಿಯ ಪ್ರಶ್ನೆಗಳಿಗೆ ಯಮಧರ್ಮರಾಯನು ಇಂತು ಉತ್ತರವಿತ್ತನು—ವೇದೋಕ್ತವಾದ ಕರ್ಮಗಳೆಲ್ಲಾ ಶುಭವೆನಿಸುವುವು. ವೇದದಲ್ಲಿ ಅನುಕ್ತವಾದವು ಅಶುಭಕರ್ಮಗಳು. ಪರಮಾತ್ಮನು ಕರ್ಮಕ್ಕೆ ಮೂಲಕಾರಣನು, ಜೀವಾತ್ಮನು ಕರ್ಮಭೋಗಿಯಾಗುವನು. ಆತ್ಮನ ಪ್ರತಿಬಿಂಬವನ್ನೇ ಜೀವಾತ್ಮನೆನ್ನುವರು. ಪಂಚಮಹಾಭೂತಗಳಿಂದ ಸೃಷ್ಟವಾದ ದೇಹದಲ್ಲಿ ಆತ್ಮನು ಸೇರಿ, 'ದೇಹೀ' ಎನಿಸಿಕೊಳ್ಳುವನು. ವ್ಯವಹಾರೋಚಿತವಾದ ತಿಳಿವಳಿಕೆಯೇ ಜ್ಞಾನವೆನಿಸುವುದು. ಯುಕ್ತಾಯುಕ್ತವಿವೇಚನಾತ್ಮಕವಾದ ಜ್ಞಾನವನ್ನು ಬುದ್ಧಿ ಎನ್ನುವರು. ದೇಹೇಂದ್ರಿಯಾತೀತವೂ ಕರ್ಮಗಳಿಗೆ ಪ್ರೇರಕವೂ ಅನಿರ್ವಚನೀಯವೂ ಆದ ಜ್ಞಾನಭೇದವೇ ಮನಸ್ಸೆನಿಸಿಕೊಳ್ಳುವುದು. ಜೀವನು ಫಲಾಪೇಕ್ಷೆಯಿಲ್ಲದೆ ಕರ್ತವ್ಯಬುದ್ಧಿಯಿಂದ ಕರ್ಮಗಳನ್ನು ಮಾಡಿ ಕರ್ಮಬಂಧನಕ್ಕೆ ಸಿಲುಕದೆ ಮುಕ್ತನಾಗಿ ಆತ್ಮಸ್ವರೂಪವನ್ನು ಪಡೆಯುವನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಷಡ್ವಿಂಶತಿತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಸಾವಿತ್ರೀವಚನಂ ಶ್ರುತ್ವಾ ಜಗಾಮ ವಿಸ್ಮಯಂ ಯಮಃ ।
ಪ್ರಹಸ್ಯ ವಕ್ತುಮಾರೇಭೇ ಕರ್ಮಪಾಕಂ ಚ ಜೀವಿನಾಂ || ೧ ||

|| ಯಮ ಉವಾಚ ||

ಕನ್ಯಾ ದ್ವಾದಶವರ್ಷೀಯಾ ವತ್ಸೇ ತ್ವಂ ವಯಸಾಽಧುನಾ ।
ಜ್ಞಾನಂ ತೇ ಪೂರ್ವವಿದುಷಾಂ ಯೋಗಿನಾಂ ಜ್ಞಾನಿನಾಂ ಪರಂ || ೨ ||

ಇಪ್ಪತ್ತಾರನೆಯ ಅಧ್ಯಾಯವು

೧. ನಾರಾಯಣ:—ಸಾವಿತ್ರಿಯ ಮಾತನ್ನು ಕೇಳಿ ಯಮರಾಜನು ಅತ್ಯಾಶ್ಚರ್ಯಗೊಂಡನು. ಅನಂತರ ಅವಳ ಉನ್ನತಾಶೆಗೆ ನಸುನಕ್ಕು ಜೀವಿಗಳ ಕರ್ಮವಿಪಾಕವನ್ನು ವಿವರಿಸಲಾರಂಭಿಸಿದನು.

೨. ಯಮ:—ಎಲೌ ವತ್ಸೆಯಾದ ಸಾವಿತ್ರಿಯೇ, ನೀನು ಇನ್ನೂ ಹನ್ನೆರಡುವರ್ಷ ವಯಸ್ಸಿನ ಕನ್ಯೆಯಾಗಿದ್ದೀಯೆ. ಆದರೆ ನಿನ್ನ ಜ್ಞಾನವು ವಿದ್ವಾಂಸರಿಗೂ. ಯೋಗಿಗಳಿಗೂ, ಜ್ಞಾನಿಗಳಿಗೂ ಮೀರಿದುದಾಗಿದೆ.

ಸಾವಿತ್ರೀ ವರದಾನೇನ ತ್ವಂ ಸಾವಿತ್ರೀ ಕಲಾ ಸತಿ ।
ಪ್ರಾಪ್ತಾ ಪುರಾ ಭೂಭೃತಾ ಚ ತಪಸಾ ತತ್ಸಮಾ ಶುಭೇ ॥ ೩ ॥

ಯಥಾ ಶ್ರೀಃ ಶ್ರೀಪತೇಃ ಕ್ರೋಡೇ ಭವಾನೀ ಚ ಭವೋರಸಿ ।
ಯಥಾ ರಾಧಾ ಚ ಶ್ರೀಕೃಷ್ಣೇ ಸಾವಿತ್ರೀ ಬ್ರಹ್ಮವಕ್ಷಸಿ ॥ ೪ ॥

ಧರ್ಮೋರಸಿ ಯಥಾ ಮೂರ್ತಿಃ ಶತರೂಪಾ ಮನೌ ಯಥಾ ।
ಕರ್ದಮೇ ದೇವಹೂತಿಶ್ಚ ವಸಿಷ್ಠೇಽರುಂಧತೀ ಯಥಾ ॥ ೫ ॥

ಅದಿತಿಃ ಕಶ್ಯಪೇ ಚಾಪಿ ಯಥಾಽಹಲ್ಯಾ ಚ ಗೌತಮೇ ।
ಯಥಾ ಶಚೀ ಮಹೇಂದ್ರೇ ಚ ಯಥಾ ಚಂದ್ರೇ ಚ ರೋಹಿಣೀ ॥ ೬ ॥

ಯಥಾ ರತಿಃ ಕಾಮದೇವೇ ಯಥಾ ಸ್ವಾಹಾ ಹುತಾಶನೇ ।
ಯಥಾ ಸ್ವಧಾ ಚ ಪಿತೃಷು ಯಥಾಸಂಜ್ಞಾ ದಿವಾಕರೇ ॥ ೭ ॥

ವರುಣಾನೀ ಚ ವರುಣೇ ಯಜ್ಞೇ ಚ ದಕ್ಷಿಣಾ ಯಥಾ ।
ಯಥಾ ಧರಾ ವರಾಹೇ ಚ ದೇವಸೇನಾ ಚ ಕಾರ್ತಿಕೇ ॥ ೮ ॥

---

೩. ನಿನ್ನ ತಂದೆಯಾದ ಅಶ್ವಪತಿಯು ಹಿಂದೆ ಸಾವಿತ್ರೀದೇವಿಯನ್ನು ಕುರಿತು ತಪಸ್ಸುಮಾಡಿ ಆಕೆಯ ವರದಿಂದ ಆಕೆಯ ಕಲಾಸಂಭೂತಳೂ, ಆಕೆಗೆ ಸಮಾನಳೂ ಆದ ನಿನ್ನನ್ನು ಪಡೆದನು.

೪–೯. ಶ್ರೀಮನ್ನಾರಾಯಣನು ಲಕ್ಷ್ಮಿಯನ್ನೂ, ಶಂಕರನು ಪಾರ್ವತಿಯನ್ನೂ, ಶ್ರೀಕೃಷ್ಣಪರಮಾತ್ಮನು ರಾಧಾದೇವಿಯನ್ನೂ, ಬ್ರಹ್ಮದೇವನು ಸಾವಿತ್ರಿಯನ್ನೂ, ಧರ್ಮದೇವನು ಮೂರ್ತಿದೇವಿಯನ್ನೂ, ಸ್ವಾಯಂಭುವಮನುವು ಶತರೂಪೆಯನ್ನೂ, ಕರ್ದಮನು ದೇವಹೂತಿಯನ್ನೂ, ವಸಿಷ್ಠನು ಅರುಂಧತಿಯನ್ನೂ, ಕಶ್ಯಪನು ಅದಿತಿಯನ್ನೂ, ಗೌತಮನು ಅಹಲ್ಯೆಯನ್ನೂ, ಮಹೇಂದ್ರನು ಶಚೀದೇವಿಯನ್ನೂ, ಚಂದ್ರನು ರೋಹಿಣಿಯನ್ನೂ, ಕಾಮದೇವನು ರತೀದೇವಿಯನ್ನೂ, ಅಗ್ನಿಯು ಸ್ವಾಹಾದೇವಿಯನ್ನೂ, ಪಿತೃದೇವತೆಗಳು ಸ್ವಧಾದೇವಿಯನ್ನೂ, ಸೂರ್ಯದೇವನು ಸಂಜ್ಞಾದೇವಿಯನ್ನೂ, ವರುಣನು ವರುಣಾನಿಯನ್ನೂ, ಯಜ್ಞಪುರುಷನು ದಕ್ಷಿಣಾದೇವಿಯನ್ನೂ, ಆದಿವರಾಹನು ವಸುಂಧರೆಯನ್ನೂ, ಷಣ್ಮುಖನು ದೇವಸೇನೆಯನ್ನೂ, ತಮ್ಮ ವಕ್ಷಸ್ಥಲದಲ್ಲಿ ಧರಿಸಿ ಸೌಭಾಗ್ಯವತಿಯರನ್ನಾಗಿ ಹೇಗೆ

ಸೌಭಾಗ್ಯಾಸು ಪ್ರಿಯೋತ್ವಂ ಚ ಭವ ಸತ್ಯವತಿ ಪ್ರಿಯೇ ।
ಇತಿ ತುಭ್ಯಂ ವರಂ ದತ್ತಮಪರಂ ಚ ಯದೀಪ್ಸಿತಂ ।
ವೃಣು ದೇವಿ ಮಹಾಭಾಗೇ ಸರ್ವಂ ದಾಸ್ಯಾಮಿ ನಿಶ್ಚಿತಂ ॥ ೯ ॥

॥ ಸಾವಿತ್ರ್ಯುವಾಚ ॥

ಸತ್ಯವದೌರಸೇನೈವ ಪುತ್ರಾಣಾಂ ಶತಕಂ ಮಮ ।
ಭವಿಷ್ಯತಿ ಮಹಾಭಾಗ ವರಮೇತನ್ಮದೀಪ್ಸಿತಂ ॥ ೧೦ ॥

ಮತ್ಪಿತುಃ ಪುತ್ರಶತಕಂ ಶ್ವಶುರಸ್ಯ ಚ ಚಕ್ಷುಷೀ ।
ರಾಜ್ಯಲಾಭೋ ಭವತ್ವೇವ ವರಮೇವಂ ಮದೀಪ್ಸಿತಂ ॥ ೧೧ ॥

ಅಂತೇ ಸತ್ಯವತಾ ಸಾರ್ಧಂ ಯಾಸ್ಯಾಮಿ ಹರಿಮಂದಿರಂ ।
ಸಮತೀತೇ ಲಕ್ಷವರ್ಷೇ ದೇಹೀಮಂ ಮೇ ಜಗತ್ಪ್ರಭೋ ॥ ೧೨ ॥

ಮಾಡಿರುವರೋ ಹಾಗೆ ನಿನ್ನನ್ನೂ ಕೂಡ ಸತ್ಯವಂತನು ವರಿಸಿ ಸೌಭಾಗ್ಯವತಿಯರಲ್ಲಿ ಶ್ರೇಷ್ಠಳನ್ನಾಗಿ ಮಾಡುವನು. ಈ ವರವನ್ನು ನಿನಗೆ ಕೊಟ್ಟಿರುವೆನು. ನಿನಗಿಷ್ಟವಾದ ಯಾವ ವರವನ್ನು ಕೇಳಿದರೂ ನಾನು ಅದನ್ನು ನಿಶ್ಚಯವಾಗಿ ಕೊಡುವೆನು.

೧೦ ಸಾವಿತ್ರಿ :—ಎಲೈ ಮಹಾಭಾಗನೇ, ಸತ್ಯವಂತನ ಔರಸಪುತ್ರನಿಂದಲೇ ನನ್ನ ವಂಶದಲ್ಲಿ ನೂರಾರು ಮಕ್ಕಳು ಜನಿಸಿ ವಂಶಾಭಿವೃದ್ಧಿಗೊಳಿಸುವಂತೆ ವರವನ್ನು ಅನುಗ್ರಹಿಸು.

೧೧. ನನ್ನ ತಂದೆಯ ವಂಶದಲ್ಲಿ ನೂರಾರು ಮಕ್ಕಳು ಜನಿಸಲಿ. ನನ್ನ ಮಾವನಿಗೆ ಕಣ್ಣುಗಳು ಬರಲಿ. ಹೋದ ರಾಜ್ಯವು ಪುನಃ ಪ್ರಾಪ್ತಿಯಾಗಲಿ. ಇದೇ ನನ್ನ ಅಭೀಪ್ಸಿತವಾದ ವರವು.

೧೨. ಕೊನೆಯಲ್ಲಿ ಲಕ್ಷವರ್ಷ ಕಳೆದಮೇಲೆ ಸತ್ಯವಂತನೊಡನೆ ಶ್ರೀಹರಿಯ ಲೋಕಕ್ಕೆ ತೆರಳುವಂತೆಯೂ, ಅಲ್ಲಿ ಶಾಶ್ವತವಾಗಿರುವಂತೆಯೂ ವರವನ್ನು ಅನುಗ್ರಹಿಸು.

ಜೀವಕರ್ಮವಿಪಾಕಂ ಚ ಶ್ರೋತುಂ ಕೌತೂಹಲಂ ಚ ಮೇ ।
ವಿಶ್ವವಿಸ್ತಾರಬೀಜಂ ಚ ತನ್ಮೇ ವ್ಯಾಖ್ಯಾತುಮರ್ಹಸಿ ‖ ೧೩ ‖

‖ ಯಮ ಉವಾಚ ‖

ಭವಿಷ್ಯತಿ ಮಹಾಸಾಧ್ವಿ ಸರ್ವಂ ಮಾನಸಿಕಂ ತವ ।
ಜೀವಕರ್ಮವಿಪಾಕಂ ಚ ಕಥಯಾಮಿ ನಿಶಾಮಯ ‖ ೧೪ ‖

ಶುಭಾನಾಮಶುಭಾನಾಂ ಚ ಕರ್ಮಣಾಂ ಜನ್ಮ ಭಾರತೇ ।
ಪುಣ್ಯಕ್ಷೇತ್ರೇಽತ್ರ ಸರ್ವತ್ರ ನಾನ್ಯತ್ರ ಭುಂಜತೇ ಜನಾಃ ‖ ೧೫ ‖

ಸುರಾ ದೈತ್ಯಾ ದಾನವಾಶ್ಚ ಗಂಧರ್ವಾ ರಾಕ್ಷಸಾದಯಃ ।
ನರಾಶ್ಚ ಕರ್ಮಜನಕಾ ನ ಸರ್ವೇ ಸಮಜೀವಿನಃ ‖ ೧೬ ‖

ವಿಶಿಷ್ಟಜೀವಿನಃ ಕರ್ಮ ಭುಂಜತೇ ಸರ್ವಯೋನಿಷು ।
ವಿಶೇಷತೋ ಮಾನವಾಶ್ಚ ಭ್ರಮಂತಿ ಸರ್ವಯೋನಿಷು ‖ ೧೭ ‖

---

೧೩. ವಿಶ್ವವು ವಿಸ್ತಾರವಾಗಲು ಬೀಜರೂಪವಾದ ಜೀವಕರ್ಮವಿಪಾಕವನ್ನು ಕೇಳಲು ನನಗೆ ಬಹಳ ಕುತೂಹಲವಿರುವುದರಿಂದ ದಯವಿಟ್ಟು ವಿವರಿಸಬೇಕು.

೧೪. ಯಮ :—ಎಲೌ ಸಾಧ್ವೀಶಿರೋಮಣಿಯೇ, ನಿನ್ನ ಮನಸ್ಸಿನಲ್ಲಿರುವ ಅಭಿಲಾಷೆಯೆಲ್ಲವೂ ಪೂರ್ಣವಾಗುವುದು. ನಿನ್ನಿಷ್ಟದಂತೆ ಜೀವಕರ್ಮವಿಪಾಕವನ್ನು ಹೇಳುವೆನು ಕೇಳು.

೧೫. ಜನರು ಪುಣ್ಯಕ್ಷೇತ್ರವಾದ ಭರತಖಂಡದಲ್ಲಿಯೇ ಜನ್ಮವೆತ್ತಿ ಶುಭಾಶುಭ ಕರ್ಮಗಳ ಫಲವನ್ನು ಉಪಭೋಗಿಸುವರು, ಮತ್ತೆಲ್ಲಿಯೂ ಅಲ್ಲ.

೧೬. ದೇವತೆಗಳು, ದೈತ್ಯರು, ದಾನವರು, ಗಂಧರ್ವರು, ರಾಕ್ಷಸರು ಮತ್ತು ನರರು ಕರ್ಮಾನುಗುಣವಾಗಿ ಜನಿಸುವರು. ಇವರ ಜೀವನವು ಒಂದೇ ಸಮನಾಗಿರುವುದಿಲ್ಲ.

೧೭. ಸಮಸ್ತ ಜೀವಿಗಳೂ ತಮ್ಮ ಕರ್ಮಫಲವನ್ನು ಎಲ್ಲ ಯೋನಿಯಲ್ಲಿಯೂ ಜನ್ಮವೆತ್ತಿ ಭೋಗಿಸುವರು. ಅದರಲ್ಲೂ ವಿಶೇಷವಾಗಿ, ಮಾನವರು ಸಕಲ ಯೋನಿಯಲ್ಲೂ ಅಲೆದಾಡುವರು.

ಶುಭಾಶುಭಂ ಭುಂಜತೇ ಚ ಕರ್ಮ ಪೂರ್ವಾರ್ಜಿತಂ ಪರಂ ।
ಶುಭೇನ ಕರ್ಮಣಾ ಯಾಂತಿ ತೇ ಸ್ವರ್ಗಾದಿಕಮೇವ ಚ ॥ ೧೮ ॥

ಕರ್ಮಣಾ ಚಾಶುಭೇನ್ಯೈವ ಭ್ರಮಂತಿ ನರಕೇಷು ಚ ।
ಕರ್ಮನಿರ್ಮೂಲನೇ ಮುಕ್ತಿಃ ಸಾ ಚೋಕ್ತಾ ದ್ವಿವಿಧಾ ಮತಾ ॥ ೧೯ ॥

ನಿರ್ವಾಣರೂಪಾ ಸೇವಾ ಚ ಕೃಷ್ಣಸ್ಯ ಪರಮಾತ್ಮನಃ ।
ರೋಗೀ ಕುಕರ್ಮಣಾ ಜೀವಶ್ಚಾರೋಗೀ ಶುಭಕರ್ಮಣಾ ॥ ೨೦ ॥

ದೀರ್ಘಜೀವೀ ಚ ಕ್ಷೀಣಾಯುಃ ಸುಖೀ ದುಃಖೀ ಚ ನಿಶ್ಚಿತಂ ।
ಅಂಧಾದಯಶ್ಚಾಂಗಹೀನಾಃ ಕುತ್ಸಿತೇನ ಚ ಕರ್ಮಣಾ ॥ ೨೧ ॥

---

೧೮. ಅಲ್ಲದೆ ತಮ್ಮ ಪೂರ್ವಾರ್ಜಿತವಾದ ಶುಭಾಶುಭಕರ್ಮಗಳ ಫಲವನ್ನು ಭೋಗಿಸುವರು. ಅವರು ಶುಭಕರ್ಮದ ಫಲವಾಗಿ ಸ್ವರ್ಗಾದಿ ಉತ್ತಮ ಲೋಕಕ್ಕೆ ಹೋಗುವರು.

೧೯. ಅಶುಭಕರ್ಮದ ಫಲವಾಗಿ ನರಕಲೋಕಗಳಲ್ಲಿ ಭ್ರಮಣಮಾಡುತ್ತಾರೆ. ಕರ್ಮಫಲಭೋಗವು ಮುಗಿದು ಕರ್ಮನಿರ್ಮೂಲವಾದರೆ ಮುಕ್ತಿಯು ಲಭಿಸುವುದು. ಆ ಮುಕ್ತಿಯು ಎರಡು ಬಗೆಯಾಗಿರುವುದು.

೨೦. ಒಂದು ನಿರ್ವಾಣ ಮುಕ್ತಿ. ಮತ್ತೊಂದು ಕೃಷ್ಣಪರಮಾತ್ಮನ ಸೇವಾರೂಪವಾದ ಮುಕ್ತಿ. ಜೀವನು ದುಷ್ಕರ್ಮದ ಫಲವಾಗಿ ರೋಗಿಯೂ, ಶುಭಕರ್ಮದ ಫಲವಾಗಿ ನೀರೋಗಿಯೂ ಆಗುವನು.

೨೧. ಮನುಜನು ಪುಣ್ಯಕರ್ಮದಿಂದ ದೀರ್ಘಜೀವಿಯೂ, ಸುಖಿಯೂ ಆಗುವನು ಕುತ್ಸಿತಕರ್ಮದಿಂದ ಕ್ಷೀಣಾಯುವೂ, ದುಃಖಿಯೂ, ಕುರುಡ ಮುಂತಾದ ಅಂಗಹೀನನೂ ಆಗುವನು.

ಸಿದ್ಧ್ಯಧಿಕಮವಾಪ್ನೋತಿ ಸರ್ವೋತ್ಕೃಷ್ಟೇನ ಕರ್ಮಣಾ ।
ಸಾಮಾನ್ಯಂ ಕಥಿತಂ ಸರ್ವಂ ವಿಶೇಷಂ ಶೃಣು ಸುಂದರಿ ॥ ೨೨ ॥

ಸುದುರ್ಲಭಂ ಸುಭೋಗ್ಯಂ ಚ ಪುರಾಣೇಷು ಶ್ರುತಿಷ್ವಪಿ ॥ ೨೩ ॥

ದುರ್ಲಭಾ ಮಾನವೀ ಜಾತಿಃ ಸರ್ವಜಾತಿಷು ಭಾರತೇ ।
ಸರ್ವಾಭ್ಯೋ ಬ್ರಾಹ್ಮಣಃ ಶ್ರೇಷ್ಠಃ ಪ್ರಶಸ್ತಃ ಸರ್ವಕರ್ಮಸು ॥ ೨೪ ॥

ವಿಷ್ಣುಭಕ್ತೋ ದ್ವಿಜಶ್ಚೈವ ಗರೀಯಾನ್ಭಾರತೇ ತತಃ ।
ನಿಷ್ಕಾಮಶ್ಚ ಸಕಾಮಶ್ಚ ವೈಷ್ಣವೋ ದ್ವಿವಿಧಃ ಸತಿ ॥ ೨೫ ॥

ಸಕಾಮಶ್ಚ ಪ್ರಧಾನಶ್ಚ ನಿಷ್ಕಾಮೋ ಭಕ್ತ ಏವ ಚ ।
ಕರ್ಮಭೋಗೀ ಸಕಾಮಶ್ಚ ನಿಷ್ಕಾಮೋ ನಿರುಪದ್ರವಃ ॥ ೨೬ ॥

---

೨೨. ಸರ್ವೋತ್ಕೃಷ್ಟವಾದ ಕರ್ಮವನ್ನಾಚರಿಸುವುದರಿಂದ ಸಕಲೇಷ್ಟಾರ್ಥಗಳನ್ನೂ ಪಡೆಯುವನು. ಇದುವರೆಗೆ ಸಾಮಾನ್ಯವಿಷಯವನ್ನು ಹೇಳಿದೆನು. ಈಗ ವಿಶೇಷವನ್ನರುಹುವೆನು.

೨೩. ನಾನು ಹೇಳುವ ಈ ವಿಷಯವು ಪುರಾಣಗಳಲ್ಲೂ ವೇದದಲ್ಲೂ ದುರ್ಲಭವಹುದು.

೨೪. ಭಾರತದಲ್ಲಿ ಎಲ್ಲಾ ಜನ್ಮಗಳಿಗಿಂತಲೂ ಮಾನವಜನ್ಮವು ಲಭಿಸುವುದು ದುರ್ಲಭ. ಆ ಮಾನವ ಜಾತಿಯಲ್ಲೂ ಬ್ರಾಹ್ಮಣನು ಶ್ರೇಷ್ಠನು. ಸರ್ವಕರ್ಮಗಳಲ್ಲೂ ಪ್ರಶಸ್ತನು.

೨೫. ಅದರಲ್ಲೂ ಭಾರತದಲ್ಲಿ ವಿಷ್ಣುಭಕ್ತನಾದ ದ್ವಿಜನಾಗುವುದು ಮತ್ತೂ ಪ್ರಶಸ್ತವಾದುದು. ಎಲೌ ಪತಿವ್ರತೆಯೇ ವೈಷ್ಣವರಲ್ಲಿ ನಿಷ್ಕಾಮ ಮತ್ತು ಸಕಾಮ ಎಂದು ಇಬ್ಬಗೆಯುಂಟು.

೨೬. ಅವರಲ್ಲಿ ಸಕಾಮನು ಜೀವಿಗಳಲ್ಲಿ ಪ್ರಧಾನನು ನಿಷ್ಕಾಮನು ಭಕ್ತನೆನಿಸುವನು. ಸಕಾಮನು ಕರ್ಮಫಲಭೋಗಿಯಾಗುವನು. ಆದರೆ ನಿಷ್ಕಾಮನು ಯಾವ ತೊಂದರೆಗೂ ಸಿಲುಕನು.

ಸ ಯಾತಿ ದೇಹಂ ತ್ಯಕ್ತ್ವಾ ಚ ಪದಂ ವಿಷ್ಣೋರ್ನಿರಾಮಯಂ ।
ಪುನರಾಗಮನಂ ನಾಸ್ತಿ ತೇಷಾಂ ನಿಷ್ಕಾಮಿಣಾಂ ಸತಿ ॥ ೨೭ ॥

ಯೇ ಸೇವಂತೇ ಚ ದ್ವಿಭುಜಂ ಕೃಷ್ಣಮಾತ್ಮಾನಮೀಶ್ವರಂ ।
ಗೋಲೋಕಂ ಯಾಂತಿ ತೇ ಭಕ್ತಾ ದಿವ್ಯರೂಪವಿಧಾರಿಣಃ ॥ ೨೮ ॥

ಯೇ ಚ ನಾರಾಯಣಂ ಭಕ್ತಾಃ ಸೇವಂತೇ ಚ ಚತುರ್ಭುಜಂ ।
ವೈಕುಂಠಂ ಯಾಂತಿ ತೇ ಸರ್ವೇ ದಿವ್ಯರೂಪವಿಧಾರಿಣಃ ॥ ೨೯ ॥

ಸಕಾಮಿನೋ ವೈಷ್ಣವಾಶ್ಚ ಗತ್ವಾ ವೈಕುಂಠಮೇವ ಚ ।
ಭಾರತಂ ಪುನರಾಯಾಂತಿ ತೇಷಾಂ ಜನ್ಮ ದ್ವಿಜಾತಿಷು ॥ ೩೦ ॥

ಕಾಲೇನ ತೇ ಚ ನಿಷ್ಕಾಮಾ ಭವಿಷ್ಯಂತಿ ಕ್ರಮೇಣ ಚ ।
ಭಕ್ತಿಂ ಚ ನಿರ್ಮಲಾಂ ಬುದ್ಧಿಂ ತೇಭ್ಯೋ ದಾಸ್ಯತಿ ನಿಶ್ಚಿತಂ ॥ ೩೧ ॥

---

೨೭. ನಿಷ್ಕಾಮಿಯು ದೇಹತ್ಯಾಗಾನಂತರ ನಿರಾಮಯವಾದ ವಿಷ್ಣುವಿನ ಲೋಕಕ್ಕೆ ತೆರಳುವನು. ನಿಷ್ಕಾಮಿಗಳಿಗೆ ಭೂಲೋಕದಲ್ಲಿ ಪುನರ್ಜನ್ಮವಿಲ್ಲ.

೨೮. ಯಾವ ನಿಷ್ಕಾಮಿಗಳು ದ್ವಿಭುಜನಾದ ಶ್ರೀಕೃಷ್ಣಪರಮಾತ್ಮನನ್ನು ಭಜಿಸುವರೋ ಆ ಭಕ್ತರು ದಿವ್ಯರೂಪಧಾರಿಗಳಾಗಿ ಗೋಲೋಕಕ್ಕೆ ಹೋಗುತ್ತಾರೆ.

೨೯. ಯಾವ ಭಕ್ತರು ಚತುರ್ಭುಜನಾದ ನಾರಾಯಣನನ್ನು ಭಕ್ತಿಯಿಂದ ಸೇವಿಸುವರೋ ಅವರು ದಿವ್ಯರೂಪಧಾರಿಗಳಾಗಿ ವೈಕುಂಠಕ್ಕೆ ಹೋಗುವರು.

೩೦. ಸಕಾಮಿಗಳಾದ ವಿಷ್ಣುಭಕ್ತರಾದರೆ ವೈಕುಂಠಕ್ಕೆ ಹೋಗಿ ಪುಣ್ಯ ಭೋಗವಮಾಡಿ ಪುನಃ ಭಾರತಕ್ಕೆ ಹಿಂತಿರುಗುವರು. ಅವರು ದ್ವಿಜರಾಗಿ ಹುಟ್ಟುವರು.

೩೧. ಕಾಲಕ್ರಮದಲ್ಲಿ ಅವರೆಲ್ಲರೂ ನಿಷ್ಕಾಮರಾಗುವರು. ಆ ಪರಮಾತ್ಮನು ಅವರಿಗೆ ಭಕ್ತಿಯನ್ನೂ, ನಿರ್ಮಲವಾದ ಬುದ್ಧಿಯನ್ನೂ ನಿಶ್ಚಯವಾಗಿಯೂ ಅನುಗ್ರಹಿಸುವನು.

ಬ್ರಾಹ್ಮಣಾದ್ವೈಷ್ಣವಾದನ್ಯೇ ಸಕಾಮಾಃ ಸರ್ವಜನ್ಮಸು ।
ನ ತೇಷಾಂ ನಿರ್ಮಲಾಬುದ್ಧಿರ್ವಿಷ್ಣುಭಕ್ತಿವಿವರ್ಜಿತಾಃ ॥ ೩೨ ॥

ತೀರ್ಥಾಶ್ರಿತಾ ದ್ವಿಜಾ ಯೇ ಚ ತಪಸ್ಯಾನಿರತಾಃ ಸತಿ ।
ತೇ ಯಾಂತಿ ಬ್ರಹ್ಮಲೋಕಂ ಚ ಪುನರಾಯಾಂತಿ ಭಾರತಂ ॥ ೩೩ ॥

ಸ್ವಧರ್ಮನಿರತಾ ವಿಪ್ರಾಃ ಸೂರ್ಯಭಕ್ತಾಶ್ಚ ಭಾರತೇ ।
ವ್ರಜಂತಿ ಸೂರ್ಯಲೋಕಂ ತೇ ಪುನರಾಯಾಂತಿ ಭಾರತಂ ॥ ೩೪ ॥

ಸ್ವಧರ್ಮನಿರತಾ ವಿಪ್ರಾಃ ಶೈವಾಃ ಶಾಕ್ತಾಶ್ಚ ಗಾಣಪಾಃ ।
ತೇ ಯಾಂತಿ ಶಿವಲೋಕಂ ಚ ಪುನರಾಯಾಂತಿ ಭಾರತಂ ॥ ೩೫ ॥

ಯೇ ವಿಪ್ರಾ ಅನ್ಯದೇವೇಷ್ಟಾಃ ಸ್ವಧರ್ಮನಿರತಾಃ ಸತಿ ।
ತೇ ಗತ್ವಾ ಶಕ್ರಲೋಕಂ ಚ ಪುನರಾಯಾಂತಿ ಭಾರತಂ ॥ ೩೬ ॥

---

೩೨. ವಿಷ್ಣುಭಕ್ತರಾದ ಬ್ರಾಹ್ಮಣರನ್ನುಳಿದು ಬಾಕಿಯುವರೆಲ್ಲರೂ ಸರ್ವ ಜನ್ಮಗಳಲ್ಲೂ ಸಕಾಮಿಗಳಾಗಿಯೇ ಇರುವರು. ಅವರಿಗೆ ವಿಷ್ಣುಭಕ್ತಿಯಾಗಲೀ ನಿರ್ಮಲಬುದ್ಧಿಯಾಗಲೀ ಇರುವುದಿಲ್ಲ

೩೩. ಎಲೌ ಸತಿಯಾದ ಸಾವಿತ್ರಿಯೇ. ಬ್ರಾಹ್ಮಣರು ಪುಣ್ಯತೀರ್ಥದಲ್ಲಿ ತಪೋನಿರತರಾಗಿದ್ದರೆ ಅದರ ಫಲಭೋಗಕ್ಕಾಗಿ ಅವರು ಬ್ರಹ್ಮಲೋಕಕ್ಕೆ ತೆರಳಿ ಪುನಃ ಭಾರತಕ್ಕೆ ಹಿಂತಿರುಗುವರು.

೩೪. ಭರತಖಂಡದಲ್ಲಿ ಜನಿಸಿ ಸ್ವಧರ್ಮಾಚರಣೆಯಲ್ಲಿ ನಿರತರಾಗಿ, ಸೂರ್ಯ ಭಕ್ತರಾಗಿ ಇರುವ ಬ್ರಾಹ್ಮಣರು ಕೊನೆಯಲ್ಲಿ ಸೂರ್ಯಲೋಕಕ್ಕೆ ಹೋಗಿ ಪುನಃ ಭಾರತಕ್ಕೆ ಬರುವರು.

೩೫. ಸ್ವಧರ್ಮನಿರತರಾಗಿ, ಶಿವ, ಶಕ್ತಿ ಗಣಪತಿಗಳನ್ನು ಸೇವಿಸುವ ವಿಪ್ರರು ಶಿವಲೋಕಕ್ಕೆ ತೆರಳಿ, ಮತ್ತೆ ಭಾರತದಲ್ಲಿ ಜನಿಸುವರು.

೩೬ ಯಾವ ಬ್ರಾಹ್ಮಣರು ಇತರ ದೇವತೆಗಳನ್ನು ಪೂಜಿಸುವವರಾಗಿ, ಸ್ವಧರ್ಮಾಚರಣಪರರಾಗಿರುವರೋ ಅವರೆಲ್ಲರೂ ಇಂದ್ರಲೋಕಕ್ಕೆ ಹೋಗಿ ಫಲಾನುಭವಮಾಡಿ ಭಾರತಕ್ಕೆ ಹಿಂದಿರುಗುವರು.

ಹರಿಭಕ್ತಾಶ್ಚ ನಿಷ್ಕಾಮಾಃ ಸ್ವಧರ್ಮರಹಿತಾ ದ್ವಿಜಾಃ ।
ತೇಽಪಿ ಯಾಂತಿ ಹರೇರ್ಲೋಕಂ ಕ್ರಮಾದ್ಭಕ್ತಿಬಲಾದಹೋ ॥ ೩೭ ॥

ಸ್ವಧರ್ಮರಹಿತಾ ವಿಪ್ರಾ ದೇವಾನ್ಯಸೇವಿನಃ ಸದಾ ।
ಭ್ರಷ್ಟಾಚಾರಾಶ್ಚ ಬಾಲಾಶ್ಚ ತೇ ಯಾಂತಿ ನರಕಂ ಧ್ರುವಂ ॥ ೩೮ ॥

ಸ್ವಧರ್ಮನಿರತಾಶ್ಚೈವಂ ವರ್ಣಾಶ್ಚತ್ವಾರ ಏವ ಚ ।
ಭವಂತ್ಯೇವ ಶುಭಸ್ಯೈವ ಕರ್ಮಣಃ ಫಲಭಾಗಿನಃ ॥ ೩೯ ॥

ಸ್ವಧರ್ಮರಹಿತಾಸ್ತೇ ಚ ನರಕಂ ಯಾಂತಿ ಹಿ ಧ್ರುವಂ ।
ಭಾರತೇ ಚ ಭವಂತ್ಯೇವ ಕರ್ಮಣಃ ಫಲಭಾಗಿನಃ ॥ ೪೦ ॥

ಸ್ವಧರ್ಮನಿರತಾ ವಿಪ್ರಾಃ ಸ್ವಧರ್ಮನಿರತಾಯ ಚ ।
ಕನ್ಯಾಂ ದದತಿ ವಿಪ್ರಾಯ ಚಂದ್ರಲೋಕಂ ವ್ರಜಂತಿ ತೇ ॥ ೪೧ ॥

---

೩೭. ನಿಷ್ಕಾಮವಾದ ಹರಿಭಕ್ತಿಯೊಂದಿದ್ದರೆ, ಬ್ರಾಹ್ಮಣರು ಸ್ವಧರ್ಮಾಚರಣೆಯಲ್ಲಿಲ್ಲದಿದ್ದರೂ ಆ ಭಕ್ತಿಯ ಮಹಿಮೆಯಿಂದಲೇ ಕ್ರಮವಾಗಿ ಹರಿಲೋಕಕ್ಕೆ ಹೋಗುವರು.

೩೮. ಆದರೆ ಸ್ವಧರ್ಮಾಚರಣೆಯನ್ನು ಬಿಟ್ಟು ಇತರ ದೇವತೆಗಳನ್ನು ಸೇವಿಸುವ ಬ್ರಾಹ್ಮಣರು ಭ್ರಷ್ಟಾಚಾರರಾಗುವುದರಿಂದ ನರಕಕ್ಕೆ ಖಂಡಿತವಾಗಿಯೂ ಹೋಗುವರು.

೩೯. ಚಾತುರ್ವರ್ಣ್ಯದವರೂ ತಮ್ಮ ತಮ್ಮ ಧರ್ಮದಲ್ಲಿ ನಿರತರಾಗಿದ್ದರೆ ತಮ್ಮ ಶುಭಕರ್ಮಗಳ ಫಲಾನುಭವಿಗಳಾಗುವರು.

೪೦. ಸ್ವಧರ್ಮಾಚರಣೆಯನ್ನು ಬಿಟ್ಟು ನರಕಕ್ಕೆ ಹೋಗುವ ಮನುಜನೂ ಕೂಡ, ಭಾರತದಲ್ಲಿ ಹುಟ್ಟಿ ಕರ್ಮಫಲಭಾಗಿಯಾಗುವನು.

೪೧. ಸ್ವಧರ್ಮಾಚರಣೆಯಲ್ಲಿರುವ ವಿಪ್ರರು, ಸ್ವಧರ್ಮಾಚರಣೆಯಲ್ಲಿರುವ ವಿಪ್ರನಿಗೆ ಕನ್ಯೆಯನ್ನು ಕೊಟ್ಟರೆ ಅವರು ಚಂದ್ರಲೋಕಕ್ಕೆ ಹೋಗುವರು.

ವಸಂತಿ ತತ್ರ ತೇ ಸಾಧ್ವಿ ಯಾವದಿಂದ್ರಾಶ್ಚತುರ್ದಶ ।
ಸಾಲಂಕೃತಾಯಾ ದಾನೇನ ದ್ವಿಗುಣಂ ಫಲಮುಚ್ಯತೇ　　॥ ೪೨ ॥

ಸಕಾಮಾ ಯಾಂತಿ ತಲ್ಲೋಕಂ ನ ನಿಷ್ಕಾಮಾಶ್ಚ ವೈಷ್ಣವಾಃ ।
ತೇ ಪ್ರಯಾಂತಿ ವಿಷ್ಣುಲೋಕಂ ಫಲಸಂಧಾನವರ್ಜಿತಾಃ　　॥ ೪೩ ॥

ಗವ್ಯಂ ಚ ರಜತಂ ಭಾರ್ಯಾಂ ವಸ್ತ್ರಂ ಸಸ್ಯಂ ಫಲಂ ಜಲಂ ।
ಯೋ ದದತ್ಯೇವ ವಿಪ್ರೇಭ್ಯಸ್ತಲ್ಲೋಕಂ ಹಿ ವ್ರಜಂತಿ ಚ　　॥ ೪೪ ॥

ವಸಂತಿ ತೇ ಚ ತಲ್ಲೋಕಂ ಯಾವನ್ಮನ್ವಂತರಂ ಸತಿ ।
ಕಾಲಂ ಚ ಸುಚಿರಂ ವಾಸಂ ಕುರ್ವಂತಿ ತತ್ರ ತೇ ಜನಾಃ　　॥ ೪೫ ॥

---

೪೨. ಎಲೌ ಸಾಧ್ವಿಯೇ, ಅವರು ಆ ಚಂದ್ರಲೋಕದಲ್ಲಿ ಚತುರ್ದಶ ಇಂದ್ರರ ಜೀವಿತಕಾಲದವರೆಗೆ ವಾಸಿಸುವರು. ಸಾಲಂಕೃತಕನ್ಯಾದಾನಮಾಡುವುದರಿಂದ ಇದರ ದ್ವಿಗುಣವಾಗಿ ಫಲವು ಲಭಿಸುವುದು.

೪೩. ಸಕಾಮಿಗಳಾದ ಭಕ್ತರು ತಮ್ಮ ಇಷ್ಟದೇವತೆಯ ಲೋಕವನ್ನೈದುವರು. ನಿಷ್ಕಾಮಿಗಳಾದ ವಿಷ್ಣುಭಕ್ತರಾದರೋ ಫಲಸಂಧಾನರಹಿತರಾಗಿ ವಿಷ್ಣುಲೋಕಕ್ಕೆ ಹೋಗುವರು.

೪೪. ಹಸುವಿನ ಹಾಲು, ಮೊಸರು ಮತ್ತು ತುಪ್ಪವನ್ನೂ, ಬೆಳ್ಳಿ ಮತ್ತು ಕನ್ಯೆಯನ್ನೂ, ವಸ್ತ್ರ, ಸಸ್ಯ, ಫಲ, ಜಲ ಮುಂತಾದುವುಗಳನ್ನೂ ಯಾರು ಬ್ರಾಹ್ಮಣರಿಗೆ ದಾನಮಾಡುವರೋ ಅವರು ತಮ್ಮ ಇಷ್ಟದೇವತೆಯ ಲೋಕಕ್ಕೆ ಹೋಗುವರು.

೪೫. ಆ ಲೋಕದಲ್ಲಿ ಅವರು ಮನ್ವಂತರಕಾಲ ಸುಖವಾಗಿ ವಾಸಿಸುವರು. ಬಹಳಕಾಲ ಅಲ್ಲಿಯೇ ವಾಸಮಾಡಿಕೊಂಡಿರುವರು.

ಯೇ ದದತಿ ಸುವರ್ಣಂ ಚ ಗಾಂ ಚ ತಾಮ್ರಾದಿಕಂ ಸತಿ ।
ತೇ ಯಾಂತಿ ಸೂರ್ಯಲೋಕಂ ಚ ಶುಚಯೇ ಬ್ರಾಹ್ಮಣಾಯ ಚ ॥ ೪೬ ॥

ವಸಂತಿ ತತ್ರ ತೇ ಲೋಕೇ ವರ್ಷಾಣಾಮಯುತಂ ಸತಿ ।
ವಿಪುಲೇ ಚ ಚಿರಂ ವಾಸಂ ಕುರ್ವಂತಿ ಚ ನಿರಾಮಯಾಃ ॥ ೪೭ ॥

ದದಾತಿ ಭೂಮಿಂ ವಿಪ್ರೇಭ್ಯೋ ಧಾನ್ಯಾನಿ ವಿಪುಲಾನಿ ಚ ।
ಸ ಯಾತಿ ವಿಷ್ಣುಲೋಕಂ ಚ ಶ್ವೇತದ್ವೀಪಂ ಮನೋಹರಂ ॥ ೪೮ ॥

ತತ್ರೈವ ನಿವಸತ್ಯೇವ ಯಾವಚ್ಚಂದ್ರದಿವಾಕರೌ ।
ವಿಪುಲಂ ವಿಪುಲೇ ವಾಸಂ ಕರೋತಿ ಪುಣ್ಯವಾನ್ಸತಿ ॥ ೪೯ ॥

ಗೃಹಂ ದದತಿ ವಿಪ್ರಾಯ ಯೇ ಜನಾ ಭಕ್ತಿಪೂರ್ವಕಂ ।
ತೇ ಯಾಂತಿ ಸುರಲೋಕಂ ಚ ಚಿರಂ ತತ್ರ ಭವಂತಿ ತೇ ॥ ೫೦ ॥

---

೪೬. ಯಾರು ಚಿನ್ನವನ್ನೂ, ಹಸುವನ್ನೂ, ಭೂಮಿಯನ್ನೂ, ತಾಮ್ರಾದಿ ಲೋಹವನ್ನೂ ಶುಚಿಯಾದ ಬ್ರಾಹ್ಮಣರಿಗೆ ದಾನಮಾಡುವರೋ ಅವರು ಸೂರ್ಯ ಲೋಕಕ್ಕೆ ತೆರಳುವರು.

೪೭. ಅವರು ಸೂರ್ಯಲೋಕದಲ್ಲಿ ಹತ್ತು ಸಹಸ್ರವರ್ಷ ವಾಸಿಸುವರು. ವಿಪುಲವಾದ ಆ ಲೋಕದಲ್ಲಿ ನಿರಾಮಯರಾಗಿ ಚಿರಕಾಲ ಸುಖದಿಂದಿರುವರು.

೪೮. ಬ್ರಾಹ್ಮಣನಿಗೆ ಭೂಮಿಯನ್ನೂ. ವಿಪುಲವಾದ ಧಾನ್ಯವನ್ನೂ ದಾನಮಾಡುವವರು ಮನೋಹರವಾದ ಶ್ವೇತದ್ವೀಪವೆಂಬ ವಿಷ್ಣುಲೋಕಕ್ಕೆ ತೆರಳುವರು.

೪೯. ಪುಣ್ಯವಂತನಾದ ಆ ಮನುಷ್ಯನು ವಿಪುಲವಾದ ಆ ಲೋಕದಲ್ಲಿ ಚಂದ್ರಸೂರ್ಯರಿರುವವರೆಗೆ ವಾಸಮಾಡಿಕೊಂಡಿರುವನು.

೫೦. ಯಾರು ಬ್ರಾಹ್ಮಣರಿಗೆ ಭಕ್ತಿಪೂರ್ವಕವಾಗಿ ಗೃಹದಾನಮಾಡುವರೋ ಅವರು ದೇವಲೋಕಕ್ಕೆ ಹೋಗಿ ಚಿರಕಾಲ ಬಾಳುತ್ತಾರೆ.

ಗೃಹರೇಣುಪ್ರಮಾಣಾಬ್ದಂ ದಾನಂ ಪುಣ್ಯದಿನೇ ಯದಿ ।
ವಿಪುಲಂ ವಿಪುಲೇ ವಾಸಂ ಕುರ್ವಂತಿ ಮಾನವಾಃ ಸತಿ ॥ ೫೧ ॥

ಯಸ್ಮೈ ಯಸ್ಮೈ ಚ ದೇವಾಯ ಯೋ ದದಾತಿ ಗೃಹಂ ನರಃ ।
ಸ ಯಾತಿ ತಸ್ಯ ಲೋಕಂ ಚ ರೇಣುಮಾನಾಬ್ದಮೇವ ಚ ॥ ೫೨ ॥

ಸೌಧೇ ಚತುರ್ಗುಣಂ ಪುಣ್ಯಂ ಪೂರ್ತೇ ಶತಗುಣಂ ಫಲಂ ।
ಪ್ರಕೃಷ್ಟೇಽಷ್ಟಗುಣಂ ತಸ್ಮಾದಿತ್ಯಾಹ ಕಮಲೋದ್ಭವಃ ॥ ೫೩ ॥

ಯೋ ದದಾತಿ ತಡಾಗಂ ಚ ಸರ್ವಭೂತಾಯ ಭಾರತೇ ।
ಸ ಯಾತಿ ಜನಲೋಕಂ ಚ ವರ್ಷಾಣಾಮಯುತಂ ಸತಿ ॥ ೫೪ ॥

---

೫೧. ಎಲೌ ಸತೀಶಿರೋಮಣಿಯೇ, ಮಾನವರು ಪುಣ್ಯದಿವಸದಲ್ಲಿ ಯಥೇಚ್ಛವಾಗಿ ದಾನಮಾಡಿದರೆ, ತನ್ನ ಮನೆಯ ಧೂಳಿಕಣಗಳಿರುವಷ್ಟು (ಸಂಖ್ಯೆ) ವರ್ಷಗಳು ವಿಪುಲವಾದ ಸ್ವರ್ಗದಲ್ಲಿ ವಾಸಿಸುವರು.

೫೨. ಯಾವ ಮನುಷ್ಯನು ಯಾವ ದೇವರ ಹೆಸರು ಹೇಳಿ ಗೃಹದಾನ ಮಾಡುವನೋ ಆಯಾ ದೇವರ ಲೋಕಕ್ಕೆ ಅಂತ್ಯಕಾಲದಲ್ಲಿ ಹೋಗಿ ಅಗಣಿತಕಾಲ ವಾಸಿಸುವನು.

೫೩. ಅದರಲ್ಲೂ ಉಪ್ಪರಿಗೆ ಮನೆಯನ್ನು ದಾನಮಾಡಿದರೆ ನಾಲ್ಕರಷ್ಟು ಪುಣ್ಯವೂ, ಭಾವಿ ಮುಂತಾದವುಗಳನ್ನು ದಾನಮಾಡಿದರೆ ನೂರರಷ್ಟು ಪುಣ್ಯವೂ, ಪ್ರಕೃಷ್ಟವಾದ ವಸ್ತುಗಳನ್ನು ದಾನಮಾಡಿದರೆ ಅದಕ್ಕಿಂತ ಎಂಟರಷ್ಟು ಪುಣ್ಯವೂ, ಲಭಿಸುವುದೆಂದು ಬ್ರಹ್ಮದೇವನು ಹೇಳಿದನು.

೫೪. ಭರತಖಂಡದಲ್ಲಿ ಯಾರು ಸಮಸ್ತರಿಗೂ ಉಪಯೋಗವಾಗುವ ಕೆರೆಯೊಂದನ್ನು ತೋಡಿಸಿಕೊಡುವರೋ ಅವರು ಜನೋಲೋಕಕ್ಕೆ ಹೋಗಿ ಹತ್ತು ಸಾವಿರ ವರ್ಷ ಸುಖವಾಗಿರುವರು.

ವಾಪ್ಯಾಂ ಫಲಂ ಶತಗುಣಂ ಪ್ರಾಪ್ನೋತಿ ಮಾನವಸ್ತತಃ ।
ತಥಾ ಸೇತುಪ್ರದಾನೇನ ತಡಾಗಸ್ಯ ಫಲಂ ಲಭೇತ್ ॥ ೫೫ ॥

ಧನುಶ್ಚತುಃಸಹಸ್ರೇಣ ದೈರ್ಘ್ಯಮಾನೇನ ನಿಶ್ಚಿತಂ ।
ನ್ಯೂನಾ ವಾತಾವತಿಪ್ರಸ್ಥೇ ಸಾ ವಾಪೀ ಪರಿಕೀರ್ತಿತಾ ॥ ೫೬ ॥

ದಶವಾಪೀ ಸಮಾ ಕನ್ಯಾ ಯದಿ ಪಾತ್ರೇ ಪ್ರದೀಯತೇ ।
ಫಲಂ ದದಾತಿ ದ್ವಿಗುಣಂ ಯದಿ ಸಾಲಂಕೃತಾ ಭವೇತ್ ॥ ೫೭ ॥

ತತ್ಫಲಂ ಚ ತಡಾಗೇ ಚ ಪಂಕೋದ್ಧಾರೇಣ ತತ್ಫಲಂ ।
ವಾಪ್ಯಾಶ್ಚ ಪಂಕೋದ್ಧಾರೇಣ ವಾಪೀತುಲ್ಯಫಲಂ ಭವೇತ್ ॥ ೫೮ ॥

---

೫೫. ಯಾರು ಸಾರ್ವಜನಿಕರಿಗೆ ಉಪಯೋಗವಾಗುವಂತೆ ಭಾವಿಯನ್ನು ತೋಡಿಸಿಕೊಡುವರೋ ಅವರು ಅದರ ನೂರರಷ್ಟು ಫಲವನ್ನು ಹೊಂದುವರು. ಅಂತೆಯೇ ಸೇತುವೆಯನ್ನು ಕಟ್ಟಿಸಿ ದಾನಮಾಡುವುದರಿಂದ ಕೆರೆಯನ್ನು ದಾನಮಾಡಿ ಪಡೆಯುವ ಪುಣ್ಯವನ್ನು ಪಡೆಯುವರು.

೫೬. ನಾಲ್ಕುಸಾವಿರ ಧನುಸ್ಸಿನಷ್ಟು ದೀರ್ಘವಾಗಿಯೂ, ಅದಕ್ಕೆ ಸ್ವಲ್ಪ ಕಮ್ಮಿ ಅಥವಾ ಅದರಷ್ಟೇ ಅಗಲವಾಗಿಯೂ ತೋಡಿಸಿರುವ ಜಲಾಶಯಕ್ಕೆ ಭಾವಿ ಎಂದು ಹೇಳುವರು.

೫೭. ಕನ್ಯೆಯನ್ನು ಸತ್ಪಾತ್ರನಿಗೆ ದಾನಮಾಡಿದರೆ ಜನೋಪಯೋಗಕ್ಕಾಗಿ ಹತ್ತು ಭಾವಿಯನ್ನು ತೋಡಿಸಿಕೊಟ್ಟ ಫಲವು ಲಭಿಸುವುದು. ಅದೇ ಕನ್ಯೆಯನ್ನು ಸಾಲಂಕೃತಳನ್ನಾಗಿ ದಾನಮಾಡಿದರೆ ಎರಡರಷ್ಟು ಫಲ ದೊರೆಯುವುದು.

೫೮. ಕೆರೆಯಲ್ಲಾಗಲೀ, ಭಾವಿಯಲ್ಲಾಗಲೀ, ಕೆಸರನ್ನು ತೆಗೆದು ನೀರನ್ನು ತಿಳಿಯಾಗಿ ಮಾಡುವುದರಿಂದ ಕೆರೆಭಾವಿಗಳನ್ನು ತೋಡಿಸಿದ ಫಲವು ಲಭಿಸುವುದು.

ಅಶ್ವತ್ಥವೃಕ್ಷಮಾರೋಪ್ಯ ಪ್ರತಿಷ್ಠಾಂ ಚ ಕರೋತಿ ಯಃ ।
ಸ ಯಾತಿ ತಪಸೋ ಲೋಕಂ ವರ್ಷಾಣಾಮಯುತಂ ಪರಂ ॥ ೫೯ ॥

ಪುಷ್ಪೋದ್ಯಾನಂ ಯೋ ದದಾತಿ ಸಾವಿತ್ರೀ ಸರ್ವಭೂತಯೇ ।
ಸ ವಸೇದ್ಧ್ರುವಲೋಕೇ ಚ ವರ್ಷಾಣಾಮಯುತಂ ಧ್ರುವಂ ॥ ೬೦ ॥

ಯೋ ದದಾತಿ ವಿಮಾನಂ ಚ ವಿಷ್ಣವೇ ಭಾರತೇ ಸತಿ ।
ವಿಷ್ಣುಲೋಕೇ ವಸೇತ್ಸೋಽಪಿ ಯಾವನ್ಮನ್ವಂತರಂ ಪರಂ ॥ ೬೧ ॥

ಚಿತ್ರಯುಕ್ತೇ ಚ ವಿಪುಲೇ ಫಲಂ ತಸ್ಯ ಚತುರ್ಗುಣಂ ।
ರಥಾರ್ಧಂ ಶಿಬಿಕಾದಾನೇ ಫಲಮೇವ ಲಭೇದ್ಧ್ರುವಂ ॥ ೬೨ ॥

ಯೋ ದದಾತಿ ಭಕ್ತಿಯುಕ್ತೋ ಹರಯೇ ದೋಲಮಂದಿರಂ ।
ವಿಷ್ಣುಲೋಕೇ ವಸೇತ್ಸೋಽಪಿ ಯಾವನ್ಮನ್ವಂತರ ಪರಂ ॥ ೬೩ ॥

---

೫೯. ಅರಳಿ ಮರವನ್ನು ನೆಡಿಸಿ ಅಲ್ಲಿ ಅಶ್ವತ್ಥನಾರಾಯಣನನ್ನು ಪ್ರತಿಷ್ಠೆ ಮಾಡಿಸುವ ಮನುಷ್ಯನು ತಪೋಲೋಕಕ್ಕೆ ಹೋಗಿ ಅಲ್ಲಿ ಹತ್ತುಸಾವಿರವರ್ಷ ವಾಸಿಸುವನು.

೬೦. ಎಲೌ ಸಾವಿತ್ರಿಯೇ, ಸಮಸ್ತಪ್ರಾಣಿಗಳ ಉಪಯೋಗಕ್ಕಾಗಿ ಪುಷ್ಪೋದ್ಯಾನವನ್ನು ನಿರ್ಮಿಸಿ ಯಾರು ದಾನಮಾಡುವರೋ ಅವರು ಹತ್ತುಸಾವಿರವರ್ಷ ಧ್ರುವಲೋಕದಲ್ಲಿ ವಾಸಿಸುವರು.

೬೧. ಯಾವನು ಭರತಖಂಡದಲ್ಲಿ ವಿಷ್ಣುವಿನ ತೃಪ್ತ್ಯರ್ಥವಾಗಿ ವಿಮಾನಾದಿ ವಾಹನಗಳನ್ನು ಕೊಡುವನೋ ಅವನು ಮನ್ವಂತರದವರೆಗೆ ವಿಷ್ಣುಲೋಕದಲ್ಲಿ ನೆಲೆಸುವನು.

೬೨. ದಾನಮಾಡುವ ವಿಮಾನವು ವಿಪುಲವಾಗಿ ಚಿತ್ರಿತವಾಗಿದ್ದರೆ ಅದರ ನಾಲ್ಕರಷ್ಟು ಫಲ ಲಭಿಸುವುದು. ರಥ ಮತ್ತು ಪಲ್ಲಕ್ಕಿಯನ್ನು ದಾನಮಾಡುವುದರಿಂದಲೂ ಅನಂತ ಫಲ ಲಭಿಸುವುದು.

೬೩. ಶ್ರೀಹರಿಗೆ ಉಯ್ಯಾಲಾಡುವ ಮನೆಯೊಂದನ್ನು ಭಕ್ತಿಯಿಂದರ್ಪಿಸುವವನಿಗೆ ಮನ್ವಂತರಕಾಲದವರೆಗೆ ವಿಷ್ಣುಲೋಕದಲ್ಲಿ ವಾಸವು ಲಭಿಸುವುದು.

ರಾಜಮಾರ್ಗಂ ಸೌಧಯುಕ್ತಂ ಯಃ ಕರೋತಿ ಪತಿವ್ರತೇ ।
ವರ್ಷಾಣಾಮಯುತಂ ಸೋಽಪಿ ಶಕ್ರಲೋಕೇ ಮಹೀಯತೇ ॥ ೬೪ ॥

ಬ್ರಾಹ್ಮಣೇಭ್ಯೋಽಪಿ ದೇವೇಭ್ಯೋ ದಾನೇ ಸಮಫಲಂ ಲಭೇತ್ ।
ಯಚ್ಚ ದತ್ತಂ ಹಿ ಭೋಕ್ತುವ್ಯೈನದತ್ತಂ ನೋಪತಿಷ್ಠತೇ ॥ ೬೫ ॥

ಭುಕ್ತ್ವಾ ಸ್ವರ್ಗಾದಿಕಂ ಸೌಖ್ಯಂ ಪುರಾ ಯಾಂತಿ ಚ ಭಾರತೇ ।
ಲಭೇದ್ವಿಪ್ರಕುಲೇಷ್ವೇವ ಕ್ರಮೇಣೈವೋತ್ತಮಾದಿಷು ॥ ೬೬ ॥

ಭಾರತೇ ಪುಣ್ಯವಾನ್ವಿಪ್ರೋ ಭುಕ್ತ್ವಾ ಸ್ವರ್ಗಾದಿಕಂ ಪರಂ ।
ಪುನಃ ಸೋಽಪಿ ಭವೇದ್ವಿಪ್ರೋ ನ ಪುನಃ ಕ್ಷತ್ರಿಯಾದಯಃ ॥ ೬೭ ॥

ಕ್ಷತ್ರಿಯೋ ವಾಪಿ ವೈಶ್ಯೋ ವಾ ಕಲ್ಪಕೋಟಿಶತೇನ ಚ ।
ತಪಸಾ ಬ್ರಾಹ್ಮಣತ್ವಂ ಚ ನ ಪ್ರಾಪ್ನೋತಿ ಶ್ರುತೌ ಶ್ರುತಂ ॥ ೬೮ ॥

---

೬೪. ಎಲೌ ಪತಿವ್ರತೆಯೇ, ಉಭಯಸಾರ್ಶ್ವದಲ್ಲೂ ಉಪ್ಪರಿಗೆ ಮನೆಗಳಿರುವ ರಾಜಮಾರ್ಗವನ್ನು ಕಲ್ಪಿಸುವವನು ಹತ್ತುಸಾವಿರವರ್ಷಗಳಕಾಲ ಇಂದ್ರಲೋಕದಲ್ಲಿ ಮೆರೆಯುವನು.

೬೫. ದೇವತೆಗಳಿಗೂ ಬ್ರಾಹ್ಮಣರಿಗೂ ದಾನಕೊಡುವುದರಿಂದ ಸಮಾನಫಲ ವುಂಟಾಗುವುದು. ಇಲ್ಲಿ ದಾನಮಾಡಿದರೆ ಪರಲೋಕದಲ್ಲಿ ಭೋಗಿಸಬಹುದು. ಇಲ್ಲದಿದ್ದರೆ ಅಲ್ಲಿ ಹೊಟ್ಟೆಗಿಲ್ಲದಿರಬೇಕು.

೬೬. ಸ್ವರ್ಗಾದಿಭೋಗಗಳನ್ನನುಭವಿಸಿ ಮೊದಲಿನಂತೆಯೇ ಭಾರತಕ್ಕೆ ಬಂದು ಉತ್ತಮವಾದ ವಿಪ್ರಕುಲದಲ್ಲಿ ಯೋಗ್ಯತಾನುಗುಣವಾಗಿ ಜನ್ಮವೆತ್ತುವರು.

೬೭. ಭರತಖಂಡದಲ್ಲಿ ಪುಣ್ಯವನ್ನು ಗಳಿಸಿದ ಬ್ರಾಹ್ಮಣನು ಸ್ವರ್ಗಾದಿ ಫಲಗಳನ್ನನುಭವಿಸಿ ಮತ್ತೆ ಬ್ರಾಹ್ಮಣನಾಗಿಯೇ ಹುಟ್ಟುವನು. ಕ್ಷತ್ರಿಯಾದಿಗಳಾಗಿ ಹುಟ್ಟುವುದಿಲ್ಲ.

೬೮. ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಕೋಟಿಕಲ್ಪಗಳಕಾಲ ತಪಸ್ಸನ್ನಾಚರಿಸಿದರೂ ಬ್ರಾಹ್ಮಣಿಕೆಯನ್ನು ಪಡೆಯಲಾರನೆಂದು ಶ್ರುತ್ಯುಕ್ತಿಯಾಗಿದೆ.

ಸ್ವಧರ್ಮರಹಿತಾ ವಿಪ್ರಾ ನಾನಾಯೋನಿಂ ವ್ರಜಂತಿ ಚ ।
ಭುಕ್ತ್ವಾ ಚ ಕರ್ಮಭೋಗಂ ಚ ವಿಪ್ರಯೋನಿಂ ಲಭೇತ್ಪುನಃ ॥ ೬೯ ॥

ಮಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ।
ಅವಶ್ಯಮೇವ ಭೋಕ್ತವ್ಯಂ ಕಲ್ಪಕೋಟಿಶತೈರಪಿ ॥ ೭೦ ॥

ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ।
ದೇವತೀರ್ಥೇ ಸಹಾಯೇನ ಕಾಯವ್ಯೂಹೇ ನ ಶುದ್ಧ್ಯತಿ ॥ ೭೧ ॥

ಏತತ್ತೇ ಕಥಿತಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೭೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಸಾವಿತ್ರ್ಯುಪಾಖ್ಯಾನೇ ಕರ್ಮ
ವಿಪಾಕೇ ಕರ್ಮಾನುರೂಪಸ್ಥಾನಗಮನಂ ನಾಮ
ಷಡ್ವಿಂಶತಿತಮೋಽಧ್ಯಾಯಃ

---

೬೯. ಸ್ವಧರ್ಮಾಚಾರವನ್ನು ಬಿಟ್ಟ ಬ್ರಾಹ್ಮಣರು ಕೀಟಾದಿ ಜನ್ಮಗಳನ್ನು ಪಡೆದು, ತಮ್ಮ ಕರ್ಮಫಲವನ್ನು ಭುಜಿಸಿ, ಪುನಃ ಬ್ರಾಹ್ಮಣಜನ್ಮವನ್ನು ಪಡೆಯುವರು.

೭೦. ತಾನು ಮಾಡಿದ ಕರ್ಮದ ಫಲವನ್ನು ಭೋಗಿಸದ ಹೊರತು ಕೋಟಿ ಕಲ್ಪಗಳು ಕಳೆದರೂ ಕರ್ಮವು ಸವೆಯುವುದಿಲ್ಲ. ಆದ್ದರಿಂದ ಕೋಟಿಕಲ್ಪಗಳಾದರೂ ತನ್ನ ಕರ್ಮಗಳ ಫಲವನ್ನು ಅನುಭವಿಸಿಯೇ ತೀರಬೇಕು.

೭೧. ತಾನು ಮಾಡಿದ ಕರ್ಮವು ಶುಭವಾಗಲೀ ಅಶುಭವಾಗಲೀ ಅದರ ಫಲವನ್ನು ತಾನೇ ಅವಶ್ಯಕವಾಗಿ ಅನುಭವಿಸಬೇಕು. ದೇವತಾ ತೀರ್ಥಗಳ ಅನುಗ್ರಹ ದಿಂದಲೂ, ದೇಹದಂಡನೆಯಿಂದಲೂ, ಪಾಪಕರ್ಮದಿಂದಲೂ, ಶುದ್ಧಿ ಹೊಂದುವನು

೭೨. ಎಲೌ ಸಾವಿತ್ರಿಯೇ, ನಿನಗೆ ಇದೆಲ್ಲವನ್ನೂ ಹೇಳಿರುವೆನು. ಇನ್ನೇ ನನ್ನು ಕೇಳಲು ನಿನಗೆ ಬಯಕೆ ಇರುವುದು? ತಿಳಿಸು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಕರ್ಮಾನು ರೂಪಸ್ಥಾನಗಮನವೆಂಬ ಇಪ್ಪತ್ತಾರನೆಯ ಅಧ್ಯಾಯವು ಸಂಪೂರ್ಣವಾಯಿತು.

ಇಪ್ಪತ್ತಾರನೆಯ ಅಧ್ಯಾಯದ ಸಾರಾಂಶವು

ಜೀವಿಗಳ ಕರ್ಮವಿಪಾಕವನ್ನು ತಿಳಿಯ ಬಯಸಿದ ಸಾವಿತ್ರಿಯ ಪ್ರಶ್ನೆಗಳಿಗೆ ಆಶ್ಚರ್ಯಗೊಂಡ ಯಮಧರ್ಮರಾಯನು ಲಕ್ಷ್ಮೀ, ಪಾರ್ವತಿ, ರಾಧೆ ಮುಂತಾದ ಮಹಾಪತಿವ್ರತೆಯಂತೆ ಸೌಭಾಗ್ಯವತಿಯಾಗೆಂದು ಸಾವಿತ್ರಿಯನ್ನು ಹರಸಿ ನಿನಗಿಷ್ಟವಾದ ವರವನ್ನು ಬೇಡೆಂದನು. ಆಗ ಸಾವಿತ್ರಿಯು ಸತ್ಯವಂತನ ಔರಸಪುತ್ರನಿಂದ ತನ್ನ ವಂಶವು ಅಭಿವೃದ್ಧಿಯಾಗುವಂತೆಯೂ, ತನ್ನ ತಂದೆಯ ವಂಶವು ಅಭಿವೃದ್ಧಿಯಾಗುವಂತೆಯೂ, ತನ್ನ ಮಾವನಿಗೆ ಹೋದ ಕಣ್ಣುಗಳೂ, ಕಳೆದುಹೋದ ರಾಜ್ಯವೂ ಪುನಃ ಪ್ರಾಪ್ತವಾಗುವಂತೆಯೂ, ಕೊನೆಯಲ್ಲಿ ಪತಿಯೊಡನೆ ತಾನು ವೈಕುಂಠಕ್ಕೆ ತೆರಳುವಂತೆಯೂ, ವರವನ್ನು ಬೇಡಿದಳು. ಯಮನು ಹಾಗೆಯೇ ಆಗಲೆಂದು ಅನುಗ್ರಹಿಸಿ ಜೀವಿಗಳ ಕರ್ಮವಿಪಾಕವನ್ನು ವಿವರಿಸಿದನು. ಜೀವಿಯು ತನ್ನ ಜನ್ಮಾಂತರದ ಕರ್ಮಕ್ಕೆ ಅನುಸಾರವಾಗಿ ಭರತಖಂಡದಲ್ಲಿ ಜನ್ಮವೆತ್ತಿ ಶುಭಾಶುಭ ಕರ್ಮಗಳ ಫಲವನ್ನು ಅನುಭವಿಸುವನು ಫಲಪ್ರಾಪ್ತಿಯ ಅಭಿಲಾಷೆಯಿಲ್ಲದೆ ಕರ್ತವ್ಯಬುದ್ಧಿಯಿಂದ ಕರ್ಮಮಾಡುವವನು ಮುಕ್ತಿಯನ್ನೂ ಪಡೆಯುವನು. ಇಲ್ಲಿ ನಿರೂಪಿತವಾಗಿರುವ ಮುಕ್ತಿಯು ಶ್ರೀಕೃಷ್ಣಪರಮಾತ್ಮನ ಕೈಂಕರ್ಯರೂಪವಾದುದು. ಭರತಖಂಡದಲ್ಲಿ ಮಾನವಜನ್ಮವೂ ಅದರಲ್ಲೂ ಬ್ರಾಹ್ಮಣಜಾತಿಯಲ್ಲಿ ಜನ್ಮವೂ ಸರ್ವಸುಲಭವಲ್ಲ ಬ್ರಾಹ್ಮಣನು ವಿಷ್ಣುಭಕ್ತನಾಗಿ ನಿಷ್ಕಾಮಕರ್ಮವನ್ನು ಮಾಡಿದರೆ ವಿಷ್ಣುಲೋಕಕ್ಕೆ ತೆರಳುವನು. 'ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಳೇಬರಂ । ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ' ಎಂಬ ಗೀತಾ ವಚನದಂತೆ ನಿಷ್ಕಾಮಕರ್ಮಿಯು ತನ್ನ ಅಭೀಷ್ಟದೇವತೆಯ ಸನ್ನಿಧಿಯನ್ನು ಹೊಂದುವನು. 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ಎಂದು ಶ್ರೀಕೃಷ್ಣಪರಮಾತ್ಮನು ಹೇಳಿರುವಂತೆ ಚಾತುರ್ವರ್ಣ್ಯದವರೂ ತಮತಮಗೆ ಉಚಿತವಾದ ಧರ್ಮವನ್ನಾಚರಿಸುವುದರಿಂದ ಪುಣ್ಯಲೋಕ

ವನ್ನು ಹೊಂದುವರು. ಯಾರೇ ಆಗಲಿ ತಮ್ಮ ತಮ್ಮ ವರ್ಣಾಶ್ರಮಕ್ಕೆ ಅನುಚಿತವಾದ ಧರ್ಮಾಚರಣೆಯಲ್ಲಿದ್ದರೆ ಅವರು ನಿಶ್ಚಯವಾಗಿಯೂ ನರಕವನ್ನೈದುವರು. ಸಕಾಮನಾಗಿ ಪುಣ್ಯಕರ್ಮಗಳನ್ನು ಮಾಡಿ ಸ್ವರ್ಗಾದಿಲೋಕಗಳನ್ನು ಪಡೆದರೂ 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ಎಂಬ ಶ್ರುತಿಯಂತೆ ಭೂಲೋಕದಲ್ಲೇ ಪುನಃ ಜನ್ಮವೆತ್ತಬೇಕಾಗುವುದು. ಆದಕಾರಣ ಯಾರೇ ಆಗಲಿ ಕರ್ತವ್ಯಬುದ್ಧಿಯಿಂದ ತಮತಮಗೆ ಉಕ್ತವಾದ ಸತ್ಕರ್ಮಗಳನ್ನು ಮಾಡಿ ಫಲವನ್ನು ಬಯಸದಿದ್ದರೆ ಮುಕ್ತಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಸಪ್ತವಿಂಶತಿತಮೋಽಧ್ಯಾಯಃ ॥

॥ ಸಾವಿತ್ರ್ಯುವಾಚ ॥

ಪ್ರಯಾಂತಿ ಸ್ವರ್ಗಮನ್ಯೇ ಚ ಯೇನ ಯೇನೈವ ಕರ್ಮಣಾ ।
ಮಾನವಾಃ ಪುಣ್ಯವಂತಶ್ಚ ತನ್ಮೇ ವ್ಯಾಖ್ಯಾತುಮರ್ಹಸಿ ॥ ೧ ॥

॥ ಯಮ ಉವಾಚ ॥

ಅನ್ನದಾನಂ ಚ ವಿಪ್ರಾಯ ಯಃ ಕರೋತಿ ಚ ಭಾರತೇ ।
ಅನ್ನಪ್ರಮಾಣವರ್ಷಂ ಚ ಶಕ್ರಲೋಕೇ ಮಹೀಯತೇ ॥ ೨ ॥

ಅನ್ನದಾನಾತ್ಪರಂ ದಾನಂ ನ ಭೂತಂ ನ ಭವಿಷ್ಯತಿ ।
ನಾತ್ರ ಪಾತ್ರಪರೀಕ್ಷಾ ಸ್ಯಾನ್ನ ಕಾಲನಿಯಮಃ ಕ್ವಚಿತ್ ॥ ೩ ॥

ಇಪ್ಪತ್ತೇಳನೆಯ ಅಧ್ಯಾಯವು

೧. ಸಾವಿತ್ರಿ :—ಪುಣ್ಯವಂತರಾದ ಮನುಷ್ಯರು ಯಾವ ಯಾವ ಕರ್ಮ ಮಾಡಿದರೆ ಸ್ವರ್ಗಲೋಕವನ್ನು ಹೊಂದುವರೆಂಬುದನ್ನು ದಯೆಯಿಟ್ಟು ನನಗೆ ವಿಸ್ತರಿಸಿ ಹೇಳು.

೨. ಯಮ :—ಭರತಖಂಡದಲ್ಲಿ ಬ್ರಾಹ್ಮಣರಿಗೆ ಅನ್ನದಾನಮಾಡಿದವನು ಆ ಅನ್ನದ ಅಗುಳಿರುವಷ್ಟುಕಾಲ ಇಂದ್ರಲೋಕದಲ್ಲಿ ಸುಖವಾಗಿರುವನು.

೩. ಅನ್ನದಾನಕ್ಕಿಂತ ಉತ್ತಮವಾದ ದಾನವು ಹಿಂದೂ ಇರಲಿಲ್ಲ. ಮುಂದೂ ಇರುವುದಿಲ್ಲ. ಅನ್ನದಾನಮಾಡಲು ಪಾತ್ರದ ಪರೀಕ್ಷೆಯಾಗಲೀ, ಕಾಲನಿಯಮವಾಗಲೀ ಇರುವುದಿಲ್ಲ.

ದೇವೇಭ್ಯೋ ಬ್ರಾಹ್ಮಣೇಭ್ಯೋ ವಾ ದದಾತಿ ಚಾಸನಂ ಯದಿ ।
ಮಹೀಯತೇ ವಹ್ನಿಲೋಕೇ ವರ್ಷಾಣಾಮಯುತಂ ಧ್ರುವಂ ॥ ೪ ॥

ಯೋ ದದಾತಿ ಚ ವಿಪ್ರಾಯ ದಿವ್ಯಾಂ ಧೇನುಂ ಪಯಸ್ವಿನೀಂ ।
ತಲ್ಲೋಮಮಾನವರ್ಷಂ ಚ ವೈಕುಂಠೇ ಚ ಮಹೀಯತೇ ॥ ೫ ॥

ಚತುರ್ಗುಣಂ ಪುಣ್ಯದಿನೇ ತೀರ್ಥೇ ಶತಗುಣಂ ಫಲಂ ।
ದಾನಂ ನಾರಾಯಣಕ್ಷೇತ್ರೇ ಫಲಂ ಕೋಟಿಗುಣಂ ಭವೇತ್ ॥ ೬ ॥

ಗಾಂ ಯೋ ದದಾತಿ ವಿಪ್ರಾಯ ಭಾರತೇ ಭಕ್ತಿಪೂರ್ವಕಂ ।
ವರ್ಷಾಣಾಮಯುತಂ ಚೈವ ಚಂದ್ರಲೋಕೇ ಮಹೀಯತೇ ॥ ೭ ॥

ಯಶ್ಚೋಭಯಮುಖೀ ದಾನಂ ಕರೋತಿ ಬ್ರಾಹ್ಮಣಾಯ ಚ ।
ತಲ್ಲೋಮಮಾನವರ್ಷಂ ಚ ವೈಕುಂಠೇ ಚ ಮಹೀಯತೇ ॥ ೮ ॥

---

೪. ದೇವತೆಗಳಿಗಾಗಲೀ, ಬ್ರಾಹ್ಮಣರಿಗಾಗಲೀ ಆಸನವನ್ನು ಕೊಟ್ಟು ಉಪಚರಿಸುವವನು ಹತ್ತುಸಾವಿರ ವರ್ಷಗಳಕಾಲ ಅಗ್ನಿಲೋಕದಲ್ಲಿ ಸುಖವಾಗಿ ನೆಲೆಸುವನು.

೫. ಯಾರು ಬ್ರಾಹ್ಮಣರಿಗೆ ಯಥೇಚ್ಛವಾಗಿ ಹಾಲು ಕೊಡುವ ಸುಂದರವಾದ ಹಸುವನ್ನು ದಾನಮಾಡುವರೋ ಅವರು ಆ ಹಸುವಿನ ಕೂದಲುಗಳಿರುವಷ್ಟು ಕಾಲ ವೈಕುಂಠದಲ್ಲಿ ನೆಲೆಸುವರು.

೬. ಪುಣ್ಯದಿವಸದಲ್ಲಿ ಗೋದಾನಮಾಡುವುದರಿಂದ ನಾಲ್ಕರಷ್ಟು ಫಲವೂ, ಪುಣ್ಯತೀರ್ಥದಲ್ಲಿ ದಾನಮಾಡಿದರೆ ನೂರರಷ್ಟು ಫಲವೂ, ಬದರಿಕಾಶ್ರಮದಲ್ಲಿ ದಾನಮಾಡುವುದರಿಂದ ಕೋಟಿಫಲವೂ ಲಭಿಸುವುದು.

೭. ಭರತಖಂಡದಲ್ಲಿ ಭಕ್ತಿಪುರಸ್ಸರವಾಗಿ ಬ್ರಾಹ್ಮಣನಿಗೆ ಗೋದಾನಮಾಡುವವನು ಹತ್ತುಸಾವಿರ ವರ್ಷಗಳಕಾಲ ಚಂದ್ರಲೋಕದಲ್ಲಿ ಸುಖವಾಗಿರುವನು.

೮. ಯಾರು ಬ್ರಾಹ್ಮಣರಿಗೆ (ಉಭಯಮುಖ ಎಂದರೆ) ಕರು ಹಾಕುತ್ತಿರುವ ಗೋವನ್ನು ದಾನಮಾಡುವರೋ ಅವರು ಆ ಗೋವುಗಳ ರೋಮಕೂಪಗಳಿರುವಷ್ಟು ಕಾಲ ವೈಕುಂಠದಲ್ಲಿ ಮೆರೆಯುವರು.

ಯೋ ದದಾತಿ ಬ್ರಾಹ್ಮಣಾಯ ಶಾಲಿಗ್ರಾಮಂ ಸವಸ್ತ್ರಕಂ ।
ಮಹೀಯತೇ ಸ ವೈಕುಂಠೇ ಯಾವಚ್ಚಂದ್ರದಿವಾಕರೌ ॥ ೯ ॥

ಯೋ ದದಾತಿ ಬ್ರಾಹ್ಮಣಾಯ ಛತ್ರಂ ಚ ಸುಮನೋಹರಂ ।
ವರ್ಷಾಣಾಮಯುತಂ ಸೋಽಪಿ ಮೋದತೇ ವರುಣಾಲಯೇ ॥ ೧೦ ॥

ವಿಪ್ರಾಯ ಪಾದುಕಾಯುಗ್ಮಂ ಯೋ ದದಾತಿ ಚ ಭಾರತೇ ।
ಮಹೀಯತೇ ವಾಯುಲೋಕೇ ವರ್ಷಾಣಾಮಯುತಂ ಸತಿ ॥ ೧೧ ॥

ಯೋ ದದಾತಿ ಬ್ರಾಹ್ಮಣಾಯ ಶಯ್ಯಾಂ ದಿವ್ಯಾಂ ಮನೋಹರಾಂ ।
ಮಹೀಯತೇ ಚಂದ್ರಲೋಕೇ ಯಾವಚ್ಚಂದ್ರದಿವಾಕರೌ ॥ ೧೨ ॥

ಯೋ ದದಾತಿ ಪ್ರದೀಪಂ ಚ ದೇವಾಯ ಬ್ರಾಹ್ಮಣಾಯ ಚ ।
ಯಾವನ್ಮನ್ವಂತರಂ ಸೋಽಪಿ ಬ್ರಹ್ಮಲೋಕೇ ಮಹೀಯತೇ ॥ ೧೩ ॥

ಸಂಪ್ರಾಪ್ಯ ಮಾನವೀಂ ಯೋನಿಂ ಚಕ್ಷುಷ್ಮಾಂಶ್ಚ ಭವೇದ್ಧ್ರುವಂ ।
ನ ಯಾತಿ ಯಮಲೋಕಂ ಚ ತೇನ ಪುಣ್ಯೇನ ಸುಂದರಿ ॥ ೧೪ ॥

---

೯. ಬ್ರಾಹ್ಮಣನಿಗೆ ವಸ್ತ್ರಸಹಿತವಾದ ಸಾಲಿಗ್ರಾಮವನ್ನು ದಾನಮಾಡುವವನು ಚಂದ್ರಸೂರ್ಯರಿರುವವರೆಗೂ ವೈಕುಂಠದಲ್ಲಿ ವೈಭವದಿಂದಿರುವನು.

೧೦. ಮನೋಹರವಾದ ಛತ್ರವನ್ನು ಬ್ರಾಹ್ಮಣನಿಗೆ ದಾನಮಾಡುವವನು ಹತ್ತುಸಾವಿರ ವರ್ಷಗಳಕಾಲ ವರುಣಲೋಕದಲ್ಲಿ ಸಂತೋಷದಿಂದಿರುವನು.

೧೧. ಭರತಖಂಡದಲ್ಲಿ ಬ್ರಾಹ್ಮಣನಿಗೆ ಪಾದುಕಾಯುಗ್ಮವನ್ನು ದಾನಮಾಡುವವನು ಹತ್ತುಸಾವಿರ ವರ್ಷಗಳಕಾಲ ವಾಯುಲೋಕದಲ್ಲಿ ವಾಸಿಸುವನು.

೧೨ ಮನೋಹರವಾದ ದಿವ್ಯಶಯ್ಯೆಯನ್ನು ಬ್ರಾಹ್ಮಣನಿಗೆ ದಾನಮಾಡುವವನು ಚಂದ್ರಸೂರ್ಯರಿರುವವರೆಗೆ ಚಂದ್ರಲೋಕದಲ್ಲಿ ಸುಖವಾಗಿರುವನು.

೧೩–೧೪. ದೇವತೆಗಳಿಗೂ, ಬ್ರಾಹ್ಮಣರಿಗೂ, ದೀಪದಾನಮಾಡುವವನು ಮನ್ವಂತರದವರೆಗೆ ಬ್ರಹ್ಮಲೋಕದಲ್ಲಿ ನೆಲೆಸುವನು. ಅಲ್ಲದೆ ಮುಂದಾದರೂ ಮನುಷ್ಯಜನ್ಮವನ್ನೇ ಪಡೆದು ತೇಜಸ್ವಿಯಾದ ಕಣ್ಣುಗಳಿಂದ ಕೂಡಿರುವನು. ಅಲ್ಲದೆ ದೀಪದಾನಮಾಡಿದ ಫಲವಾಗಿ ಯಮಲೋಕದಿಂದ ಮುಕ್ತನಾಗುವನು.

ಕರೋತಿ ಗಜದಾನಂ ಚ ಯೋ ಹಿ ವಿಪ್ರಾಯ ಭಾರತೇ ।
ಯಾವದಿಂದ್ರಾದಿದೇವಸ್ಯ ಲೋಕೇ ಚಾರ್ಧಾಸನೇ ವಸೇತ್ ॥ ೧೫ ॥

ಭಾರತೇ ಯೋಽಶ್ವದಾನಂ ಚ ಕರೋತಿ ಬ್ರಾಹ್ಮಣಾಯ ಚ ।
ಮೋದತೇ ವಾರುಣೇ ಲೋಕೇ ಯಾವದಿಂದ್ರಾಶ್ಚತುರ್ದಶ ॥ ೧೬ ॥

ಪ್ರಕೃಷ್ಟಾಂ ಶಿಬಿಕಾಂ ಯೋ ಹಿ ದದಾತಿ ಬ್ರಾಹ್ಮಣಾಯ ಚ ।
ಮಹೀಯತೇ ವಿಷ್ಣುಲೋಕೇ ಯಾವನ್ಮನ್ವಂತರಂ ಸತಿ ॥ ೧೭ ॥

ಯೋ ದದಾತಿ ಚ ವಿಪ್ರಾಯ ವ್ಯಜನಂ ಶ್ವೇತಚಾಮರಂ ।
ಮಹೀಯತೇ ವಾಯುಲೋಕೇ ವರ್ಷಾಣಾಮಯುತಂ ಧ್ರುವಂ ॥ ೧೮ ॥

ಧಾನ್ಯಾಚಲಂ ಯೋ ದದಾತಿ ಬ್ರಾಹ್ಮಣಾಯ ಚ ಭಾರತೇ ।
ಸ ಚ ಧಾನ್ಯಪ್ರಮಾಣಾಬ್ದಂ ವಿಷ್ಣುಲೋಕೇ ಮಹೀಯತೇ ॥ ೧೯ ॥

---

೧೫. ಭಾರತದಲ್ಲಿ ಬ್ರಾಹ್ಮಣನಿಗೆ ಗಜದಾನಮಾಡುವವನು ದೇವಲೋಕದಲ್ಲಿ ಇಂದ್ರಾದಿದೇವತೆಗಳೊಡನೆ ಅರ್ಧಾಸನದಲ್ಲಿ ಮೆರೆಯುವನು.

೧೬. ಬ್ರಾಹ್ಮಣನಿಗೆ ಅಶ್ವದಾನಮಾಡುವವನು ಚತುರ್ದಶ ಇಂದ್ರರು ಜೀವಿಸುವಷ್ಟು ಕಾಲ ವರುಣಲೋಕದಲ್ಲಿ ಸುಖವಾಗಿ ಜೀವಿಸುವನು

೧೭. ಉತ್ಕೃಷ್ಟವಾದ ಪಲ್ಲಕ್ಕಿಯನ್ನು ಬ್ರಾಹ್ಮಣನಿಗೆ ದಾನಮಾಡುವವನು ಮನ್ವಂತರ ಕಾಲದವರೆಗೆ ವಿಷ್ಣುಲೋಕದಲ್ಲಿ ಕೀರ್ತಿವಂತನಾಗಿರುವನು.

೧೮. ಬ್ರಾಹ್ಮಣನಿಗೆ ಬೀಸಣಿಗೆಯನ್ನೂ, ಬಿಳೀಚಾಮರವನ್ನೂ ದಾನ ಮಾಡುವವನು ಹತ್ತುಸಾವಿರ ವರ್ಷಗಳಕಾಲ ವಾಯುಲೋಕದಲ್ಲಿ ಸುಖ ವಾಗಿರುವನು.

೧೯. ಭರತಖಂಡದಲ್ಲಿ ಬ್ರಾಹ್ಮಣನಿಗೆ ಧಾನ್ಯರಾಶಿಯನ್ನು ದಾನಮಾಡು ವವನು ಆ ರಾಶಿಯಲ್ಲಿ ಎಷ್ಟು ಕಾಳುಗಳಿವೆಯೋ ಅಷ್ಟು ವರ್ಷಗಳಕಾಲ ವಿಷ್ಣು ಲೋಕದಲ್ಲಿ ನೆಲೆಸುವನು.

ತತಃ ಸ್ವಯೋನಿಂ ಸಂಪ್ರಾಪ್ಯ ಚಿರಜೀವೀ ಭವೇತ್ಸುಖೀ ।
ದಾತಾ ಗ್ರಹೀತಾ ತೌ ದ್ವೌ ಚ ಧ್ರುವಂ ವೈಕುಂಠಗಾಮಿನೌ ॥ ೨೦ ॥

ಸತತಂ ಶ್ರೀಹರೇರ್ನಾಮ ಭಾರತೇ ಯೋ ಜಪೇನ್ನರಃ ।
ಸ ಏವ ಚಿರಜೀವೀ ಚ ತತೋ ಮೃತ್ಯುಃ ಪಲಾಯತೇ ॥ ೨೧ ॥

ಯೋ ನರೋ ಭಾರತೇ ವರ್ಷೇ ದೋಲನಂ ಕಾರಯೇದ್ಧರೇಃ ।
ಪೂರ್ಣಿಮಾರಜನೀಶೇಷೇ ಜೀವನ್ಮುಕ್ತೋ ಭವೇನ್ನರಃ ॥ ೨೨ ॥

ಇಹಲೋಕೇ ಸುಖಂ ಭುಕ್ತ್ವಾ ಯಾತ್ಯಂತೇ ವಿಷ್ಣುಮಂದಿರಂ ।
ನಿಶ್ಚಿತಂ ನಿವಸೇತ್ತತ್ರ ಶತಮನ್ವಂತರಾವಧಿ ॥ ೨೩ ॥

ಫಲಮುತ್ತರಫಾಲ್ಗುನ್ಯಾಂ ತತೋಽಪಿ ದ್ವಿಗುಣಂ ಭವೇತ್ ।
ಕಲ್ಪಾಂತಜೀವೀ ಸ ಭವೇದಿತ್ಯಾಹ ಕಮಲೋದ್ಭವಃ ॥ ೨೪ ॥

---

೨೦. ಅನಂತರ ತನ್ನ ಪೂರ್ವಯೋನಿಯನ್ನು ಪಡೆದು ಚಿರಂಜೀವಿಯೂ ಸುಖಿಯೂ ಆಗಿರುವನು. ದಾನಮಾಡುವವನೂ ತೆಗೆದುಕೊಳ್ಳುವವನೂ ನಿಶ್ಚಯವಾಗಿಯೂ ವೈಕುಂಠಕ್ಕೆ ತೆರಳುವರು.

೨೧. ಭಾರತದಲ್ಲಿ ಯಾವಾಗಲೂ ಎಡೆಬಿಡದೆ ಶ್ರೀಹರಿಯ ದಿವ್ಯನಾಮವನ್ನು ಜಪಿಸುವವನು ಚಿರಂಜೀವಿಯಾಗುವನು. ಮೃತ್ಯುದೆ ವತೆಯು ಅವನಿಗೆ ಹೆದರಿ ದೂರ ಹೋಗುವಳು.

೨೨. ಯಾವ ಮನುಷ್ಯನು ಭಾರತವರ್ಷದಲ್ಲಿ ಶ್ರೀಹರಿಯ ದೋಲನೋತ್ಸವವನ್ನು (ಪೂರ್ಣಿಮಾರಾತ್ರಿಯ ಕೊನೆಯಲ್ಲಿ) ಮಾಡಿಸುವನೋ ಅವನು ಜೀವನ್ಮುಕ್ತನಾಗುವನು.

೨೩. ಅವನು ಇಹಲೋಕದಲ್ಲಿ ಸುಖವನ್ನು ಭೋಗಿಸಿ ಕೊನೆಗೆ ವೈಕುಂಠಕ್ಕೆ ತೆರಳುವನು. ಅಲ್ಲಿ ಶತಮನ್ವಂತರಗಳಕಾಲ ನಿಶ್ಚಯವಾಗಿಯೂ ಸುಖಿವಾಗಿರುವನು.

೨೪. ಉತ್ತರಫಲ್ಗುನೀನಕ್ಷತ್ರದಲ್ಲಿ ವಿಷ್ಣುವಿಗೆ ದೋಲೋತ್ಸವವನ್ನು ಮಾಡಿಸಿದರೆ ಅದರ ಎರಡರಷ್ಟು ಫಲವು ದೊರೆಯುವುದು. ಅವನು ಕಲ್ಪದ ಕೊನೆಯವರೆಗೂ ಜೀವಿಸಿಕೊಂಡಿರುವನೆಂದು ಬ್ರಹ್ಮನು ಹೇಳಿರುವನು.

ತಿಲದಾನಂ ಬ್ರಾಹ್ಮಣಾಯ ಯಃ ಕರೋತಿ ಚ ಭಾರತೇ ।
ತಿಲಪ್ರಮಾಣವರ್ಷಂ ಚ ಮೋದತೇ ವಿಷ್ಣುಮಂದಿರೇ ॥ ೨೫ ॥

ತತಃ ಸ್ವಯೋನಿಂ ಸಂಪ್ರಾಪ್ಯ ಚಿರಜೀವೀ ಭವೇತ್ಸುಖೀ ।
ತಾಮ್ರಪಾತ್ರಸ್ಥ ದಾನೇನ ದ್ವಿಗುಣಂ ಚ ಫಲಂ ಲಭೇತ್ ॥ ೨೬ ॥

ಸಾಲಂಕೃತಾಂ ಚ ಭೋಗ್ಯಾಂ ಚ ಸವಸ್ತ್ರಾಂ ಸುಂದರೀಂ ಪ್ರಿಯಾಂ ।
ಯೋ ದದಾತಿ ಬ್ರಾಹ್ಮಣಾಯ ಭಾರತೇ ಚ ಪತಿವ್ರತಾಂ ॥ ೨೭ ॥

ಮಹೀಯತೇ ಚಂದ್ರಲೋಕೇ ಯಾವದಿಂದ್ರಾಶ್ಚ ತುರ್ದಶ ।
ತತ್ರ ಸ್ವರ್ವೇಶ್ಯಯಾ ಸಾರ್ಧಂ ಮೋದತೇ ಚ ದಿವಾನಿಶಂ ॥ ೨೮ ॥

ತತೋ ಗಂಧರ್ವಲೋಕೇ ಚ ವರ್ಷಾಣಾಮಯುತಂ ಸತಿ ।
ದಿವಾನಿಶಂ ಕೌತುಕೇನ ಚೋರ್ವಶ್ಯಾ ಸಹ ಮೋದತೇ ॥ ೨೯ ॥

---

೨೫. ಭರತಖಂಡದಲ್ಲಿ ಬ್ರಾಹ್ಮಣನಿಗೆ (ತಿಲ) ಎಳ್ಳುದಾನಮಾಡುವವನು ಆ ಎಳ್ಳುಕಾಳುಗಳಿರುವಷ್ಟು ಕಾಲ ವೈಕುಂಠದಲ್ಲಿ ಸುಖಿಸುವನು.

೨೬. ಅನಂತರ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆದು ಚಿರಂಜೀವಿಯೂ ಸುಖಿಯೂ ಆಗುವನು. ಅದೇ ಎಳ್ಳನ್ನು ತಾಮ್ರದ ಪಾತ್ರೆಯಲ್ಲಿಟ್ಟು ದಾನಮಾಡಿದರೆ ದ್ವಿಗುಣಫಲವು ಲಭಿಸುವುದು.

೨೭–೨೮. ವಸ್ತ್ರಾಲಂಕಾರಭೂಷಿತಳೂ, ಭೋಗ್ಯಳೂ, ಪತಿವ್ರತೆಯೂ, ಸುಂದರಿಯೂ, ಆದ ಕನ್ಯೆಯನ್ನು ಭಾರತದಲ್ಲಿ ಬ್ರಾಹ್ಮಣನಿಗೆ ದಾನಮಾಡುವವನು ಚತುರ್ದಶ ದೇವೇಂದ್ರರ ಜೀವಿತಕಾಲದವರೆಗೆ ದೇವತಾವೇಶ್ಯೆಯರೊಡನೆ ಹಗಲು ರಾತ್ರಿ ಆನಂದಿಸುವನು.

೨೯. ಅನಂತರ ಗಂಧರ್ವಲೋಕಕ್ಕೆ ಹೋಗಿ ಹತ್ತುಸಾವಿರ ವರ್ಷಗಳಕಾಲ ಊರ್ವಶಿಯೆಂಬ ಅಪ್ಸರೆಯೊಡನೆ ಹಗಲುರಾತ್ರಿ ಕ್ರೀಡಿಸುವನು.

ತತೋ ಜನ್ಮ ಸಹಸ್ರಂ ಚ ಪ್ರಾಪ್ನೋತಿ ಸುಂದರೀಂ ಪ್ರಿಯಾಂ ।
ಸತೀಂ ಸೌಭಾಗ್ಯಯುಕ್ತಾಂ ಚ ಕೋಮಲಾಂ ಪ್ರಿಯವಾದಿನೀಂ ॥ ೩೦ ॥

ದದಾತಿ ಸಫಲಂ ವೃಕ್ಷಂ ಬ್ರಾಹ್ಮಣಾಯ ಚ ಯೋ ನರಃ ।
ಫಲಪ್ರಮಾಣವರ್ಷಂ ಚ ಶಕ್ರಲೋಕೇ ಮಹೀಯತೇ ॥ ೩೧ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ಲಭತೇ ಸುತಮುತ್ತಮಂ ।
ಸಫಲಾನಾಂ ಚ ವೃಕ್ಷಾಣಾಂ ಸಹಸ್ರಂ ಚ ಪ್ರಶಂಸಿತಂ ॥ ೩೨ ॥

ಕೇವಲಂ ಫಲದಾನಂ ಚ ಬ್ರಾಹ್ಮಣಾಯ ದದಾತಿ ಯಃ ।
ಸುಚಿರಂ ಸ್ವರ್ಗವಾಸಂ ಚ ಕೃತ್ವಾ ಯಾತಿ ಚ ಭಾರತಂ ॥ ೩೩ ॥

ನಾನಾದ್ರವ್ಯಸಮಾಯುಕ್ತಂ ನಾನಾಸಸ್ಯಸಮನ್ವಿತಂ ।
ದದಾತಿ ಯಶ್ಚ ವಿಪ್ರಾಯ ಭಾರತೇ ವಿಪುಲಂ ಗೃಹಂ ॥ ೩೪ ॥

---

೩೦. ಅನಂತರ ಸಹಸ್ರಜನ್ಮಗಳಕಾಲ ಸೌಭಾಗ್ಯವತಿಯೂ, ಪತಿವ್ರತೆಯೂ, ಕೋಮಲೆಯೂ, ಪ್ರಿಯವಾದಿನಿಯೂ, ಆದ ಸುಂದರಸ್ತ್ರೀಯನ್ನು ಹೊಂದಿ ಸುಖವಾಗಿರುವನು.

೩೧. ಫಲಪೂರಿತವಾದ ಮರವನ್ನು ಬ್ರಾಹ್ಮಣನಿಗೆ ದಾನಮಾಡುವವನು ಆ ಹಣ್ಣುಗಳ ಸಂಖ್ಯೆಗಳಿರುವಷ್ಟು ಕಾಲ ಇಂದ್ರಲೋಕದಲ್ಲಿ ಸುಖವಾಗಿರುವನು.

೩೨. ಅನಂತರ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆದು ಯೋಗ್ಯನಾದ ಪುತ್ರನನ್ನು ಪಡೆಯುವನು. ಫಲಪೂರಿತವಾದ ಸಾವಿರ ವೃಕ್ಷಗಳನ್ನು ದಾನಮಾಡು ವುದರಿಂದ ಇನ್ನೂ ಉತ್ತಮ ಫಲವು ಲಭಿಸುವುದು.

೩೩. ಕೇವಲ ಒಂದು ಹಣ್ಣನ್ನು ಬ್ರಾಹ್ಮಣನಿಗೆ ದಾನಮಾಡುವುದರಿಂದ ಬಹುಕಾಲ ಸ್ವರ್ಗವಾಸಮಾಡಿ ಪುನಃ ಭಾರತಕ್ಕೆ ಹಿಂತಿರುಗುವನು.

೩೪–೩೫ ವಿಧವಿಧ ದ್ರವ್ಯಗಳಿಂದ ಕೂಡಿ ವಿವಿಧ ಸಸ್ಯಕ್ಷೇತ್ರಗಳಿಂದ ಯುತವಾದ ವಿಸ್ತಾರವಾದ ಮನೆಯನ್ನು ಭಾರತದಲ್ಲಿ ಬ್ರಾಹ್ಮಣನಿಗೆ ದಾನಮಾಡು

ಕುಬೇರಲೋಕೇ ವಸತಿ ಸ ಚ ಮನ್ವಂತರಾವಧಿ ।
ತತಃ ಸ್ವಯೋನಿಂ ಸಂಪ್ರಾಪ್ಯ ಮಹಾಂಶ್ಚ ಧನವಾನ್ಭವೇತ್ ॥ ೩೫ ॥

ಯೋ ಜನಃ ಸಸ್ಯಸಂಯುಕ್ತಾಂ ಭೂಮಿಂ ಚ ರುಚಿರಾಂ ಸತಿ ।
ದದಾತಿ ಭಕ್ತ್ಯಾ ವಿಪ್ರಾಯ ಪುಣ್ಯಕ್ಷೇತ್ರೇ ಚ ವಾ ಸತಿ ॥ ೩೬ ॥

ಮಹೀಯತೇ ಸ ವೈಕುಂಠೇ ಮನ್ವಂತರ ಶತಂ ಧ್ರುವಂ ।
ಪುನಃ ಸ್ವಯೋನಿಂ ಸಂಪ್ರಾಪ್ಯ ಮಹಾಂಶ್ಚ ಭೂಮಿವಾನ್ಭವೇತ್ ॥ ೩೭ ॥

ತಂ ನ ತ್ಯಜತಿ ಭೂಮಿಶ್ಚ ಜನ್ಮನಾಂ ಶತಕಂ ಪರಂ ।
ಶ್ರೀಮಾಂಶ್ಚ ಧನವಾಂಶ್ಚೈವ ಪುತ್ರವಾಂಶ್ಚ ಪ್ರಜೇಶ್ವರಃ ॥ ೩೮ ॥

ಸಪ್ರಜಂ ಚ ಪ್ರಕೃಷ್ಟಂ ಚ ಗ್ರಾಮಂ ದದ್ಯಾದ್ದ್ವಿಜಾತಯೇ ।
ಲಕ್ಷಮನ್ವಂತರಂ ಚೈವ ವೈಕುಂಠೇ ಸ ಮಹೀಯತೇ ॥ ೩೯ ॥

ವವನು ಒಂದು ಮನ್ವಂತರದವರೆಗೆ ಬೇರೆ ಲೋಕದಲ್ಲಿ ವಾಸಮಾಡಿ ಪುನಃ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆದು, ಮಹಾತ್ಮನೂ ಧನವಂತನೂ ಆಗುವನು.

೩೬–೩೭. ಸಸ್ಯಯುತವಾಗಿ ಮನೋಹರವಾಗಿರುವ ಭೂಮಿಯನ್ನು ಬ್ರಾಹ್ಮಣನಿಗೆ ಭಕ್ತಿಯಿಂದ ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ದಾನಮಾಡುವವನು ನೂರು ಮನ್ವಂತರಗಳ ಕಾಲ ವೈಕುಂಠದಲ್ಲಿ ಮೆರೆಯುತ್ತಿದ್ದು, ಮತ್ತೆ ತನ್ನ ಪೂರ್ವ ಯೋನಿಯಲ್ಲಿ ಹುಟ್ಟಿ, ದೊಡ್ಡ ಕ್ಷೇತ್ರಪಾಲನಾಗುವನು.

೩೮. ನೂರು ಜನ್ಮಗಳು ಕಳೆದರೂ ಆ ಭೂಮಿಯು ಅವನ ಕೈಬಿಟ್ಟು ಹೋಗುವುದಿಲ್ಲ. ಅವನು ಶ್ರೀಮಂತನೂ, ಧನವಂತನೂ, ಪುತ್ರವಂತನೂ ಆಗಿ ಪ್ರಜಾಧಿಪತಿಯಾಗುವನು.

೩೯. ಸತ್ಪ್ರಜೆಯುಕ್ತವಾಗಿ ಉತ್ತಮವಾಗಿರುವ ಗ್ರಾಮವನ್ನು ದ್ವಿಜಾತಿ ಶ್ರೇಷ್ಠನಿಗೆ ದಾನಮಾಡಿದರೆ ಲಕ್ಷಮನ್ವಂತರಗಳ ಕಾಲ ವೈಕುಂಠದಲ್ಲಿ ಅವನು ಸುಖವಾಗಿರುವನು.

ಪುನಃ ಸ್ವಯೋನಿಂ ಸಂಪ್ರಾಪ್ಯ ಗ್ರಾಮಲಕ್ಷಂ ಲಭೇದ್ಧ್ರುವಂ ।
ನ ಜಹಾತಿ ಚ ತಂ ಪೃಥ್ವೀ ಜನ್ಮನಾಂ ಲಕ್ಷಮೇವ ಚ ॥ ೪೦ ॥

ಸಪ್ರಜಂ ಸುಪ್ರಕೃಷ್ಟಂ ಚ ಪಂಚಸಸ್ಯಸಮನ್ವಿತಂ ।
ನಾನಾಪುಷ್ಕರಿಣೀವೃಕ್ಷಂ ಫಲಭೋಗಸಮನ್ವಿತಂ ॥ ೪೧ ॥

ನಗರಂ ಯಶ್ಚ ವಿಪ್ರಾಯ ದದಾತಿ ಭಾರತೇ ಭುವಿ ।
ಮಹೀಯತೇ ಸ ವೈಕುಂಠೇ ದಶಲಕ್ಷೇಂದ್ರಕಾಲಕಂ ॥ ೪೨ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ರಾಜೇಂದ್ರೋ ಭಾರತೇ ಭವೇತ್ ।
ನಗರಾಣಾಂ ಚ ನಿಯುತಂ ಲಭತೇ ನಾತ್ರ ಸಂಶಯಃ ॥ ೪೩ ॥

ಧರಾ ತಂ ನ ಜಹಾತ್ಯೇವ ಜನ್ಮನಾಂ ನಿಯುತಂ ಧ್ರುವಂ ।
ಪರಮೈಶ್ವರ್ಯಸಂಯುಕ್ತೋ ಭವೇದೇವ ಮಹೀತಲೇ ॥ ೪೪ ॥

---

೪೦. ಮತ್ತೆ ತನ್ನ ಪೂರ್ವಯೋನಿಯನ್ನು ಪಡೆದು ಲಕ್ಷಗ್ರಾಮಗಳಿಗೆ ಅವನು ಅಧಿಪತಿಯಾಗುವನು. ಲಕ್ಷಜನ್ಮಗಳು ಕಳೆದರೂ ಪೃಥ್ವಿಯು ಅವನ ಕೈಬಿಡುವುದಿಲ್ಲ.

೪೧-೪೨. ಪ್ರಜೆಗಳಿಂದ ಕೂಡಿ ಪ್ರಕೃಷ್ಟವೆನಿಸಿಯೂ, ಪಂಚಸಸ್ಯಗಳಿಂದ, ದಿವ್ಯವಾದ ಪುಷ್ಕರಣಿಗಳಿಂದ ಮತ್ತು ಫಲಭರಿತವಾದ ವೃಕ್ಷಗಳಿಂದ ಕೂಡಿಯೂ, ಇರುವ ದಿವ್ಯನಗರವೊಂದನ್ನು ಭಾರತದಲ್ಲಿರುವವರು ಬ್ರಾಹ್ಮಣನಿಗೆ ದಾನಮಾಡಿದರೆ, ಅವರು ವೈಕುಂಠದಲ್ಲಿ ಹತ್ತುಲಕ್ಷ ದೇವೇಂದ್ರರ ಕಾಲದವರೆಗೆ ವಿಹರಿಸಿ ಕೊಂಡಿರುವರು.

೪೩. ಪುನಃ ತಮ್ಮ ಪೂರ್ವಯೋನಿಯಲ್ಲಿ ಜನ್ಮವೆತ್ತಿ ಭಾರತದಲ್ಲಿ ರಾಜ ಶ್ರೇಷ್ಠರಾಗುವರು. ಅಲ್ಲದೆ ಲಕ್ಷನಗರಗಳನ್ನಾಳುವುದರಲ್ಲಿ ಸಂಶಯವಿಲ್ಲ.

೪೪. ಲಕ್ಷಜನ್ಮಗಳು ಕಳೆಯುವವರೆಗೂ ಭೂದೇವಿಯು ಅವರನ್ನು ಬಿಡುವುದಿಲ್ಲ. ಅವರು ಭೂಮಂಡಲದಲ್ಲಿ ಪರಮೈಶ್ವರ್ಯಭರಿತರಾಗಿರುವರು

ನಗರಾಣಾಂ ಚ ಶತಕಂ ದೇಶಂ ಯೋ ಹಿ ದ್ವಿಜಾತಯೇ ।
ಸುಪ್ರಕೃಷ್ಟಪ್ರಜಾಯುಕ್ತಂ ದದಾತಿ ಭಕ್ತಿಪೂರ್ವಕಂ　　॥ ೪೫ ॥

ವಾಪೀ ತಡಾಗಸಂಯುಕ್ತಂ ನಾನಾವೃಕ್ಷಸಮನ್ವಿತಂ ।
ಮಹೀಯತೇ ಸ ವೈಕುಂಠೇ ಕೋಟಿಮನ್ವಂತರಾವಧಿ　　॥ ೪೬ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ಜಂಬೂದ್ವೀಪಪತಿರ್ಭವೇತ್ ।
ಪರಮೈಶ್ವರ್ಯಸಂಯುಕ್ತೋ ಯಥಾ ಶಕ್ರಸ್ತಥಾ ಭುವಿ　　॥ ೪೭ ॥

ಮಹೀ ತಂ ನ ಜಹಾತ್ಯೇವ ಜನ್ಮನಾಂ ಕೋಟಿನೇವ ಚ ।
ಕಲ್ಪಾಂತಜೀವೀ ಸ ಭವೇದ್ರಾಜರಾಜೇಶ್ವರೋ ಮಹಾನ್　　॥ ೪೮ ॥

ಸ್ವಾಧಿಕಾರಂ ಸಮಗ್ರಂ ಚ ಯೋ ದದಾತಿ ದ್ವಿಜಾತಯೇ ।
ಚತುರ್ಗುಣಂ ಫಲಂ ಚಾಽತೋ ಭವೇತ್ತಸ್ಯ ನ ಸಂಶಯಃ　　॥ ೪೯ ॥

೪೫–೪೬. ಪ್ರಕೃಷ್ಟಪ್ರಜೆಗಳುಳ್ಳ ನೂರಾರು ನಗರಗಳಿಂದಲೂ ವಾಪೀಕೂಪ ತಟಾಕಗಳಿಂದಲೂ, ಅನೇಕ ವೃಕ್ಷಗಳಿಂದಲೂ ಕೂಡಿದ ದೇಶವನ್ನು ಭರತಖಂಡದಲ್ಲಿ ಬ್ರಾಹ್ಮಣನಿಗೆ ಭಕ್ತಿಪೂರ್ವಕವಾಗಿ ದಾನಮಾಡುವವನು ಕೋಟಿಮನ್ವಂತರಗಳ ಕಾಲ ವೈಕುಂಠದಲ್ಲಿ ಮೆರೆಯುವನು.

೪೭. ಪುನಃ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆದು ಪರಮೈಶ್ವರ್ಯ ಭರಿತನಾಗಿ ದೇವೇಂದ್ರನು ದೇವಲೋಕಾಧಿಪತಿಯಾಗಿರುವಂತೆ ಜಂಬೂದ್ವೀಪಕ್ಕೆ ಪತಿಯಾಗಿರುವನು.

೪೮. ಕೋಟಿಜನ್ಮಗಳು ಕಳೆದರೂ ಭೂಮಿಯು ಅವನನ್ನು ಬಿಡುವುದಿಲ್ಲ. ಅವನು ಕಲ್ಪಾಂತದವರೆಗೂ ಜೀವಿಸಿಕೊಂಡಿದ್ದು ರಾಜರಾಜೇಶ್ವರನೆನಿಸಿಕೊಳ್ಳುವನು.

೪೯. ಯಾರು ತನ್ನ ಸಂಪೂರ್ಣವಾದ ರಾಜ್ಯಾಧಿಕಾರವನ್ನು ಬ್ರಾಹ್ಮಣನಿಗೆ ದಾನಮಾಡುವರೋ ಅವರು ಮೇಲೆ ಹೇಳಿದುದಕ್ಕೆ ನಾಲ್ಕರಷ್ಟು ಫಲವನ್ನು ಹೊಂದುವುದರಲ್ಲಿ ಸಂದೇಹವಿಲ್ಲ.

ಜಂಬೂದ್ವೀಪಂ ಯೋ ದದಾತಿ ಬ್ರಾಹ್ಮಣಾಯ ಪತಿವ್ರತೇ ।
ಫಲಂ ಶತಗುಣಂ ಚಾತೋ ಭವೇತ್ತಸ್ಯ ನ ಸಂಶಯಃ ॥ ೫೦ ॥

ಸಪ್ತದ್ವೀಪಮಹೀದಾತುಃ ಸರ್ವತೀರ್ಥಾನುಸೇವಿನಃ ।
ಸರ್ವೇಷಾಂ ತಪಸಾಂ ಕರ್ತುಃ ಸರ್ವೋಪವಾಸಕಾರಿಣಃ ॥ ೫೧ ॥

ಸರ್ವದಾನಪ್ರದಾತುಶ್ಚ ಸರ್ವಸಿದ್ಧೇಶ್ವರಸ್ಯ ಚ ।
ಅಸ್ತ್ಯೇವ ಪುನರಾವೃತ್ತಿರ್ನ ಭಕ್ತಸ್ಯ ಹರೇರಹೋ ॥ ೫೨ ॥

ಅಸಂಖ್ಯಬ್ರಹ್ಮಣಾಂ ಪಾತಂ ಪಶ್ಯಂತಿ ವೈಷ್ಣವಾಃ ಸತಿ ।
ನಿವಸಂತಿ ಹಿ ಗೋಲೋಕೇ ವೈಕುಂಠೇ ವಾ ಹರೇಃ ಪದೇ ॥ ೫೩ ॥

ವಿಷ್ಣುಮಂತ್ರೋಪಾಸಕಶ್ಚ ವಿಹಾಯ ಮಾನವೀಂ ತನುಂ ।
ಬಿಭರ್ತಿ ದಿವ್ಯರೂಪಂ ಚ ಜನ್ಮಮೃತ್ಯುಜರಾಪಹಂ ॥ ೫೪ ॥

---

೫೦. ಎಲೌ ಪತಿವ್ರತೆಯೇ, ಬ್ರಾಹ್ಮಣನಿಗೆ ಜಂಬೂದ್ವೀಪವನ್ನು ದಾನ ಮಾಡುವವನು ಅದಕ್ಕೆ ನೂರರಷ್ಟು ಫಲವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

೫೧–೫೨. ಸಪ್ತದ್ವೀಪಸಹಿತವಾದ ಭೂಮಿಯನ್ನು ದಾನಮಾಡುವವನಿಗೂ, ಸಕಲ ಪುಣ್ಯತೀರ್ಥಗಳನ್ನು ಸೇವಿಸುವವನಿಗೂ, ಸಕಲವಾದ ತಪಸ್ಸುಗಳನ್ನಾಚರಿಸುವವನಿಗೂ, ಸಕಲ ಉಪವಾಸವ್ರತಗಳನ್ನಾಚರಿಸುವವನಿಗೂ, ಸರ್ವವಸ್ತುಗಳನ್ನು ದಾನಮಾಡುವವನಿಗೂ, ಸಕಲಸಿದ್ಧಿಗಳನ್ನು ಪಡೆದು ಸರ್ವಶಕ್ತನಾಗಿರುವವನಿಗೂ, ಪುನರಾವೃತ್ತಿಯು ಇದ್ದೇ ಇರುತ್ತದೆ. ಆದರೆ ಹರಿಭಕ್ತನಾದವನಿಗೆ ಪುನರ್ಜನ್ಮವಿರುವುದಿಲ್ಲ.

೫೩. ವಿಷ್ಣುಭಕ್ತರು, ಗೋಲೋಕದಲ್ಲಾಗಲೀ, ಹರಿಪದವಾದ ವೈಕುಂಠದಲ್ಲಾಗಲೀ, ವಾಸಮಾಡಿಕೊಂಡು ಅಗಣಿತ ಚತುರ್ಮುಖಬ್ರಹ್ಮರ ನಾಶವನ್ನು ನೋಡುವರು.

೫೪. ವಿಷ್ಣುಮಂತ್ರವನ್ನು ಉಪಾಸನೆಮಾಡುವವನೂ ಕೂಡ ಮಾನುಷ ಶರೀರವನ್ನು ಬಿಟ್ಟು ಜನ್ಮಮೃತ್ಯುಜರಾನಾಶಕವಾದ ದಿವ್ಯರೂಪವನ್ನು ಧರಿಸುವನು.

ಲಬ್ಧ್ವಾ ವಿಷ್ಣೋಶ್ಚ ಸಾರೂಪ್ಯಂ ವಿಷ್ಣು ಸೇವಾಂ ಕರೋತಿ ಚ ।
ಸ ಚ ಪಶ್ಯತಿ ಗೋಲೋಕೇ ಹ್ಯಸಂಖ್ಯಂ ಪ್ರಾಕೃತಂ ಲಯಂ ॥ ೫೫ ॥

ನಶ್ಯಂತಿ ದೇವಾಃ ಸಿದ್ಧಾಶ್ಚ ವಿಶ್ವಾನಿ ನಿಖಿಲಾನಿ ಚ ।
ಕೃಷ್ಣಭಕ್ತಾನ ನಶ್ಯಂತಿ ಜನ್ಮಮೃತ್ಯುಜರಾಹರಾಃ ॥ ೫೬ ॥

ಕಾರ್ತಿಕೇ ತುಲಸೀದಾನಂ ಕರೋತಿ ಹರಯೇ ಚ ಯಃ ।
ಯುಗಂ ಪತ್ರಪ್ರಮಾಣಂ ಚ ಮೋದತೇ ಹರಿಮಂದಿರೇ ॥ ೫೭ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ಹರಿಭಕ್ತಿಂ ಲಭೇದ್ಧ್ರುವಂ ।
ಸುಖೀ ಚ ಚಿರಜೀವೀ ಚ ಸ ಭವೇದ್ಭಾರತೇ ಭುವಿ ॥ ೫೮ ॥

---

೫೫. ಅವನು ವಿಷ್ಣುವಿನ ಸಾರೂಪ್ಯವನ್ನು ಪಡೆದು ವಿಷ್ಣುಸೇವೆಯನ್ನು ಮಾಡುತ್ತಿರುವುದಲ್ಲದೆ ಗೋಲೋಕದಲ್ಲಿ ನೆಲೆಸಿಕೊಂಡು ಅಗಣಿತ ಪ್ರಾಕೃತ ಪ್ರಲಯವನ್ನು ನೋಡುತ್ತಾನೆ.

೫೬. ದೇವತೆಗಳೂ, ಸಿದ್ಧರೂ ಮತ್ತು ನಿಖಿಲವಿಶ್ವವೂ ನಾಶಹೊಂದುವುವು. ಆದರೆ ಇತರರ ಜನ್ಮಮೃತ್ಯುಜರಾಹರಣಮಾಡಲು ಶಕ್ತರಾದ ಕೃಷ್ಣಭಕ್ತರು ಎಂದೆಂದಿಗೂ ನಾಶಹೊಂದುವುದಿಲ್ಲ.

೫೭. ಯಾರು ಕಾರ್ತೀಕಮಾಸದಲ್ಲಿ ಶ್ರೀಹರಿಗೆ ತುಲಸೀಪತ್ರವನ್ನು (ಪೂಜೆ) ದಾನಮಾಡುವರೋ ಅವರು ಯುಗಪೂರ್ತಿಯಾಗಿ ಅಥವಾ ತುಲಸೀಪತ್ರಗಳ ಸಂಖ್ಯಾಪರಿಮಿತಕಾಲ ವೈಕುಂಠದಲ್ಲಿ ಸುಖವಾಗಿರುವರು.

೫೮. ಮತ್ತೆ ತಮ್ಮ ಪೂರ್ವಯೋನಿಯಲ್ಲಿಯೇ ಜನ್ಮಪಡೆದು ನಿಶ್ಚಿತವಾಗಿಯೂ ಹರಿಭಕ್ತಿಯನ್ನು ಹೊಂದುವರು ಅಲ್ಲದೇ ಅವರು ಭಾರತಭೂಮಿಯಲ್ಲಿ ಸುಖಿಯೂ ಚಿರಂಜೀವಿಯೂ ಆಗುವರು.

ಘೃತಪ್ರದೀಪಂ ಹರಯೇ ಕಾರ್ತಿಕೇ ಯೋ ದದಾತಿ ಚ ।
ಫಲಪ್ರಮಾಣಂ ವರ್ಷಂ ಚ ಮೋದತೇ ಹರಿಮಂದಿರೇ ॥ ೫೯ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ವಿಷ್ಣುಭಕ್ತಿಂ ಲಭೇದ್ಧ್ರುವಂ ।
ಮಹಾಧನಾಢ್ಯಃ ಸ ಭವೇಚ್ಚಕ್ಷುಷ್ಮಾಂಶ್ಚೈವ ದೀಪ್ತಿಮಾನ್ ॥ ೬೦ ॥

ಮಾಘೇ ಯಃ ಸ್ನಾತಿ ಗಂಗಾಯಾಮರುಣೋದಯಕಾಲತಃ ।
ಯುಗಷಷ್ಟಿಸಹಸ್ರಾಣಿ ಮೋದತೇ ಹರಿಮಂದಿರೇ ॥ ೬೧ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ವಿಷ್ಣುಭಕ್ತಿಂ ಲಭೇದ್ಧ್ರುವಂ ।
ಜಿತೇಂದ್ರಿಯಾಣಾಂ ಪ್ರವರಃ ಸ ಭವೇದ್ಭಾರತೇ ಭುವಿ ॥ ೬೨ ॥

ಮಾಘೇ ಯಃ ಸ್ನಾತಿ ಗಂಗಾಯಾಂ ಪ್ರಯಾಗೇ ಚಾರುಣೋದಯೇ ।
ವೈಕುಂಠೇ ಮೋದತೇ ಸೋಽಪಿ ಲಕ್ಷಮನ್ವಂತರಾವಧಿ ॥ ೬೩ ॥

---

೫೯. ಕಾರ್ತೀಕಮಾಸದಲ್ಲಿ ಶ್ರೀಹರಿಗೆ ತುಪ್ಪದ ದೀಪವನ್ನು ಬೆಳಗುವವನು ಆ ತುಪ್ಪದ ಕಣಗಳಿರುವಷ್ಟು ಕಾಲ ಹರಿಮಂದಿರವಾದ ವೈಕುಂಠದಲ್ಲಿ ಸಂತೋಷ ದಿಂದಿರುವನು.

೬೦. ಪುನಃ ತನ್ನ ಪೂರ್ವಜನ್ಮವನ್ನು ಪಡೆದು ವಿಷ್ಣುಭಕ್ತಿಯನ್ನು ಹೊಂದುವು ವಲ್ಲದೆ ಹೆಚ್ಚು ಧನವಂತನೂ, ತೇಜೋವಂತನೂ ಆಗಿ ದಿವ್ಯಚಕ್ಷುಸ್ಸುಳ್ಳವ ನಾಗುವನು.

೬೧. ಮಾಘಮಾಸದ ಅರುಣೋದಯದಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡುವವರು ಅರವತ್ತುಸಾವಿರ ಯುಗಗಳಕಾಲ ವೈಕುಂಠದಲ್ಲಿ ಸುಖವಾಗಿ ನೆಲೆಸುವರು.

೬೨. ಮತ್ತೆ ಪೂರ್ವಯೋನಿಯ ಜನ್ಮಪಡೆದು ವಿಷ್ಣುಭಕ್ತರಾಗಿರುವುದಲ್ಲದೆ ಭರತಖಂಡದಲ್ಲಿ ಜಿತೇಂದ್ರಿಯರಿಗೆಲ್ಲಾ ಶ್ರೇಷ್ಠರೆನಿಸಿಕೊಳ್ಳುವರು.

೬೩. ಯಾರು ಮಾಘ ಮಾಸದ ಅರುಣೋದಯ ಕಾಲದಲ್ಲಿ ಪ್ರಯಾಗ ಕ್ಷೇತ್ರದ ಗಂಗಾಸಂಗಮದಲ್ಲಿ ಸ್ನಾನಮಾಡುವರೋ ಅವರು ಲಕ್ಷಮನ್ವಂತರಗಳ ಕಾಲ ವೈಕುಂಠದಲ್ಲಿ ಸಂತೋಷದಿಂದಿರುವರು.

ಪುನಃ ಸ್ವಯೋನಿಂ ಸಂಪ್ರಾಪ್ಯ ವಿಷ್ಣುಮಂತ್ರಂ ಲಭೇದ್ಧ್ರುವಂ ।
ತ್ಯಕ್ತ್ವಾ ಚ ಮಾನುಷಂ ದೇಹಂ ಪುನರ್ಯಾತಿ ಹರೇಃ ಪದಂ　　॥ ೬೪ ॥

ನಾಸ್ತಿ ತತ್ಪುನರಾವೃತ್ತಿರ್ವೈಕುಂಠಾಚ್ಚ ಮಹೀತಲೇ ।
ಕರೋತಿ ಹರಿದಾಸ್ಯಂ ಚ ಲಬ್ಧ್ವಾ ಸಾರೂಪ್ಯಮೇವ ಚ　　॥ ೬೫ ॥

ನಿತ್ಯಸ್ನಾಯೀ ಚ ಗಂಗಾಯಾಂ ಸ ಪೂತಃ ಸೂರ್ಯವದ್ಭುವಿ ।
ಪದೇ ಪದೇಽಶ್ವಮೇಧಸ್ಯ ಲಭತೇ ನಿಶ್ಚಿತಂ ಫಲಂ　　॥ ೬೬ ॥

ತಸ್ಯೈವ ಪಾದರಜಸಾ ಸದ್ಯಃ ಪೂತಾ ವಸುಂಧರಾ ।
ಮೋದತೇ ಸ ಚ ವೈಕುಂಠೇ ಯಾವಚ್ಚಂದ್ರದಿವಾಕರೌ　　॥ ೬೭ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ತಪಸ್ವಿಪ್ರವರೋ ಭವೇತ್ ।
ಸ್ವಧರ್ಮನಿರತಃ ಶುದ್ಧೋ ವಿದ್ವಾಂಶ್ಚ ಸುಜಿತೇಂದ್ರಿಯಃ　　॥ ೬೮ ॥

೬೪　ಪುನಃ ಪೂರ್ವಜನ್ಮವನ್ನು ಪಡೆದು ವಿಷ್ಣುಮಂತ್ರೋಪದೇಶವನ್ನು ಪಡೆಯುವುದಲ್ಲದೆ ಮಾನುಷದೇಹವನ್ನು ಬಿಟ್ಟು ಪುನಃ ಹರಿಯ ವಾಸಸ್ಥಾನಕ್ಕೆ ತೆರಳುವರು.

೬೫.　ಅವರಿಗೆ ವೈಕುಂಠದಿಂದ ಭೂಮಂಡಲಕ್ಕೆ ಪುನರಾವೃತ್ತಿಯಿರುವುದಿಲ್ಲ. ಅವರು ಹರಿಸಾರೂಪ್ಯವನ್ನು ಹೊಂದಿ ಯಾವಾಗಲೂ ಹರಿಸೇವೆ ಮಾಡುತ್ತಿರುವರು.

೬೬　ನಿತ್ಯವೂ ಗಂಗೆಯಲ್ಲಿ ಸ್ನಾನಮಾಡುವವನು ಸೂರ್ಯನಂತೆ ಭೂಲೋಕದಲ್ಲಿ ಪವಿತ್ರನೆನಿಸಿಕೊಳ್ಳುವನು. ಆಗಾಗ್ಗೆ ಅಶ್ವಮೇಧಯಾಗಮಾಡುವುದರಿಂದ ಲಭಿಸುವ ಸತ್ಫಲವು ಗಂಗಾಸ್ನಾಯಿಗೆ ಲಭಿಸುವುದು.

೬೭.　ಅವನ ಪಾದಧೂಳಿಯ ಸ್ಪರ್ಶದಿಂದ ವಸುಂಧರೆಯು ಕೂಡಲೆ ಪವಿತ್ರವಾಗುವುದು. ಅಲ್ಲದೆ ಅವನು ಚಂದ್ರಸೂರ್ಯರಿರುವವರೆಗೂ ವೈಕುಂಠದಲ್ಲಿ ಮೆರೆಯುವನು

೬೮.　ಪುನಃ ತನ್ನ ಪೂರ್ವಯೋನಿಯಲ್ಲಿ ಜನ್ಮವೆತ್ತಿ ತಪಸ್ವಿಶ್ರೇಷ್ಠನೆನಿಸಿಕೊಂಡು ಸ್ವಧರ್ಮಾಚಾರನಿರತನೂ, ಶುದ್ಧನೂ, ವಿದ್ವಾಂಸನೂ, ಜಿತೇಂದ್ರಿಯನೂ ಆಗುವನು.

ಮೀನಕರ್ಕಟಯೋರ್ಮಧ್ಯೇ ಗಾಢಂ ತಪತಿ ಭಾಸ್ಕರೇ ।
ಭಾರತೇ ಯೋ ದದಾತ್ಯೇವ ಜಲಮೇವ ಸುವಾಸಿತಂ ॥ ೧೯ ॥

ಮೋದತೇ ಸ ಚ ವೈಕುಂಠೇ ಯಾವದಿಂದ್ರಾಶ್ಚತುರ್ದಶ ।
ಪುನಃ ಸ್ವಯೋನಿಂ ಸಂಪ್ರಾಪ್ಯ ಸುಖೀ ನಿಷ್ಕಪಟೋ ಭವೇತ್ ॥ ೨೦ ॥

ವೈಶಾಖೇ ಹರಯೇ ಭಕ್ತ್ಯಾ ಯೋ ದದಾತಿ ಚ ಚಂದನಂ ।
ಯುಗಷಷ್ಟಿ ಸಹಸ್ರಾಣಿ ಮೋದತೇ ವಿಷ್ಣುಮಂದಿರೇ ।
ಪುನಃ ಸ್ವಯೋನಿಂ ಸಂಪ್ರಾಪ್ಯ ರೂಪವಾಂಶ್ಚ ಸುಖಿಭವೇತ್ ॥ ೨೧ ॥

ವೈಶಾಖೇ ಸಕ್ತುದಾ ಂ ಚ ಯಃ ಕರೋತಿ ದ್ವಿಜಾತಯೇ ।
ಸಕ್ತುರೇಣುಪ್ರಮಾಣಾಬ್ಧಂ ಮೋದತೇ ವಿಷ್ಣುಮಂದಿರೇ ॥ ೨೨ ॥

ಕರೋತಿ ಭಾರತೇ ಯೋ ಹಿ ಕೃಷ್ಣಜನ್ಮಾಷ್ಟಮೀವ್ರತಂ ।
ಶತಜನ್ಮಕೃತಾತ್ಪಾಪಾನ್ಮುಚ್ಯತೇ ನಾತ್ರ ಸಂಶಯಃ ॥ ೨೩ ॥

೧೯–೨೦. ಮೀನ ಮತ್ತು ಕರ್ಕಾಟಕ ರಾಶಿಗಳ ಮಧ್ಯದಲ್ಲಿ ಸೂರ್ಯನು ಗಾಢವಾಗಿ ತಪಿಸುತ್ತಿರುವಾಗ ಭರತಖಂಡದಲ್ಲಿ ಯಾರು ಏಲಕ್ಕಿ ಮುಂತಾದುವುಗಳಿಂದ ಸುವಾಸಿತವಾದ ನೀರನ್ನು ದಾನವ ಡುವರೋ ಅವರು ಚತುರ್ದಶ ಇಂದ್ರರ ಜೀವಿತಕಾಲದವರೆಗೆ ವೈಕುಂಠದಲ್ಲಿ ಸಂತೋಷದಿಂದಿದ್ದು ಪುನಃ ತನ್ನ ಪೂರ್ವ ಯೋನಿಯಲ್ಲಿ ಜನ್ಮಪಡೆದು ಸುಖಿಗಳೂ ಕಪಟರಹಿತರೂ ಆಗುವರು.

೨೧ ವೈಶಾಖಮಾಸದಲ್ಲಿ ಶ್ರೀಹರಿಗೆ ಭಕ್ತಿಯಿಂದ ಚಂದನಗಂಧವನ್ನರ್ಪಿಸುವವನು ಅರವತ್ತು ಸಾವಿರ ಯುಗಗಳಕಾಲ ವೈಕುಂಠದಲ್ಲಿ ಸಂತೋಷದಿಂದಿದ್ದು ಪುನಃ ಪೂರ್ವಯೋನಿಯಲ್ಲಿ ಜನ್ಮವೆತ್ತಿ ರೂಪವಂತನೂ ಸುಖಿಯೂ ಆಗುವನು.

೨೨. ವೈಶಾಖಮಾಸದಲ್ಲಿ ಬ್ರಾಹ್ಮಣನಿಗೆ ಸತ್ತುಗದ ಹಿಟ್ಟನ್ನು ದಾನ ಮಾಡುವವನು ಆ ಹಿಟ್ಟಿನಲ್ಲಿ ಎಷ್ಟು ಕಣಗಳಿವೆಯೋ ಅಷ್ಟುಕಾಲ ವೈಕುಂಠದಲ್ಲಿ ಸಂತೋಷಪಡುವನು.

೨೩. ಭಾರತದಲ್ಲಿ ಶ್ರೀಕೃಷ್ಣಜನ್ಮಾಷ್ಟಮೀ ವ್ರತವನ್ನಾಚರಿಸುವವನು ನೂರು ಜನ್ಮಗಳಲ್ಲಿ ಮಾಡಿದ ಪಾಪದಿಂದ ಮುಕ್ತನಾಗುವುದರಲ್ಲಿ ಸಂದೇಹವಿಲ್ಲ.

ವೈಕುಂಠೇ ಮೋದತೇ ಸೋಽಪಿ ಯಾವದಿಂದ್ರಾಶ್ಚತುರ್ದಶ ।
ಪುನಃ ಸ್ವಯೋನಿಂ ಸಂಪ್ರಾಪ್ಯ ಕೃಷ್ಣಭಕ್ತಿಂ ಲಭೇದ್ಧ್ರುವಂ ॥ ೭೪ ॥

ಇಹೈವ ಭಾರತೇ ವರ್ಷೇ ಶಿವರಾತ್ರಿಂ ಕರೋತಿ ಯಃ ।
ಮೋದತೇ ಶಿವಲೋಕೇ ಚ ಸಪ್ತಮನ್ವಂತರಾವಧಿ ॥ ೭೫ ॥

ಶಿವಾಯ ಶಿವರಾತ್ರೌ ಚ ಬಿಲ್ವಪತ್ರಂ ದದಾತಿ ಯಃ ।
ಪತ್ರಪ್ರಮಾಣಂ ಚ ಯುಗಂ ಮೋದತೇ ಶಿವಮಂದಿರೇ ॥ ೭೬ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ಶಿವಭಕ್ತಿಂ ಲಭೇದ್ಧ್ರುವಂ ।
ವಿದ್ಯಾವಾನ್ಪುತ್ರವಾಂಚ್ಛ್ರೀಮಾನ್ಪ್ರಜಾವಾನ್ಭೂಮಿವಾನ್ಭವೇತ್ ॥ ೭೭ ॥

ಚೈತ್ರಮಾಸೇಽಥವಾ ಮಾಘೇ ಶಂಕರಂ ಯೋಽರ್ಚಯೇದ್ವ್ರತೀ ।
ಕರೋತಿ ನರ್ತನಂ ಭಕ್ತ್ಯಾ ವೇತ್ರಪಾಣಿರ್ದಿವಾನಿಶಂ ॥ ೭೮ ॥

---

೭೪. ಅಲ್ಲದೆ ಅವನು ಚತುರ್ದಶೇಂದ್ರರ ಜೀವಿತಕಾಲದವರೆಗೆ ವೈಕುಂಠದಲ್ಲಿ ಸಂತೋಷದಿಂದಿದ್ದು ಮತ್ತೆ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆಯುವುದಲ್ಲದೆ ಶ್ರೀಕೃಷ್ಣಭಕ್ತಿಯನ್ನು ನಿಶ್ಚಿತವಾಗಿಯೂ ಹೊಂದುವನು.

೭೫. ಇದೇ ಭಾರತವರ್ಷದಲ್ಲಿ ಶಿವರಾತ್ರಿ ವ್ರತವನ್ನಾಚರಿಸುವವನು ಸಪ್ತ ಮನ್ವಂತರಗಳು ಮುಗಿಯುವವರೆಗೂ ಶಿವಲೋಕದಲ್ಲಿ ಆನಂದಿಸುವನು.

೭೬. ಶಿವರಾತ್ರಿಯ ದಿವಸ ಶಿವನಿಗೆ ಬಿಲ್ವಪತ್ರೆಯನ್ನು ಪೂಜೆಮಾಡುವವನು ಎಷ್ಟು ಪತ್ರಗಳನ್ನು ಪೂಜಿಸಿರುವನೋ ಅಷ್ಟು ವರ್ಷಗಳಕಾಲ ಶಿವಲೋಕದಲ್ಲಿ ಮೆರೆಯುವನು.

೭೭. ಪುನಃ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆಯುವುದಲ್ಲದೇ ಶಿವ ಭಕ್ತಿಯುತನೂ, ವಿದ್ಯಾವಂತನೂ, ಪುತ್ರವಂತನೂ, ಶ್ರೀಮಂತನೂ, ಪ್ರಜಾ ವಂತನೂ, ಭೂಮಿಗೆ ನಾಯಕನೂ ಆಗುವುದರಲ್ಲಿ ಸಂದೇಹವಿಲ್ಲ.

೭೮. ಚೈತ್ರಮಾಸದಲ್ಲಾಗಲೀ, ಮಾಘಮಾಸದಲ್ಲಾಗಲೀ, ಶಂಕರನನ್ನು ಪೂಜಿಸುವ ವ್ರತಪರನೂ ಮತ್ತು ಕೈಯಲ್ಲಿ ಬೆತ್ತವನ್ನು ಹಿಡಿದು ಹಗಲೂ ರಾತ್ರಿಯೂ ಭಕ್ತಿಯಿಂದ ಶಿವನ ಮುಂದೆ ನರ್ತನಮಾಡುವವನೂ ಶಿವಲೋಕದಲ್ಲಿ ಮೆರೆಯುವನು.

ಮಾಸಂ ವಾಪ್ಯರ್ಧಮಾಸಂ ವಾ ದಶ ಸಪ್ತ ದಿನಾನಿ ವಾ ।
ದಿನಮಾನಂ ಯುಗಂ ಸೋಽಪಿ ಶಿವಲೋಕೇ ಮಹೀಯತೇ ॥ ೭೯ ॥

ಶ್ರೀರಾಮನವಮೀಂ ಯೋ ಹಿ ಕರೋತಿ ಭಾರತೇ ನರಃ ।
ಸಪ್ತಮನ್ವಂತರಂ ಯಾವನ್ಮೋದತೇ ವಿಷ್ಣುಮಂದಿರೇ ॥ ೮೦ ॥

ಪುನಃ ಸ್ವಯೋನಿಂ ಸಂಪ್ರಾಪ್ಯ ರಾಮಭಕ್ತಿಂ ಲಭೇದ್ಧ್ರುವಂ ।
ಜಿತೇಂದ್ರಿಯಾಣಾಂ ಪ್ರವರೋ ಮಹಾಂಶ್ಚ ಧಾರ್ಮಿಕೋ ಭವೇತ್ ॥ ೮೧ ॥

ಶಾರದೀಯಾಂ ಮಹಾಪೂಜಾಂ ಪ್ರಕೃತೇರ್ಯಃ ಕರೋತಿ ಚ ।
ಮಹಿಷೈಶ್ಛಾಗಲೈರ್ಮೇಷೈರಿಕ್ಷುಕೂಷ್ಮಾಂಡಕೈಸ್ತಥಾ ॥ ೮೨ ॥

ನೈವೇದ್ಯೈರುಪಹಾರೈಶ್ಚ ಧೂಪದೀಪಾದಿಭಿಸ್ತಥಾ ।
ನೃತ್ಯಗೀತಾದಿಭಿರ್ವಾದ್ಯೈರ್ನಾನಾಕೌತುಕಮಂಗಲೈಃ ॥ ೮೩ ॥

---

೭೯. ಒಂದು ತಿಂಗಳಾಗಲೀ, ಅರ್ಧತಿಂಗಳಾಗಲೀ, ಹತ್ತು ಅಥವಾ ಏಳು ದಿವಸಗಳಾಗಲೀ ಶಿವನ ಮುಂದೆ ನರ್ತನಮಾಡುವವನು ಎಷ್ಟು ದಿನಗಳ ವ್ರತವನ್ನಾಚರಿಸುವನೋ ಅಷ್ಟು ಯುಗಗಳ ಕಾಲ ಶಿವಲೋಕದಲ್ಲಿ ಮೆರೆಯುವನು.

೮೦. ಭಾರತದಲ್ಲಿ ಶ್ರೀರಾಮನವಮಿಯನ್ನಾಚರಿಸುವ ಮನುಷ್ಯನು ಏಳು ಮನ್ವಂತರಗಳ ಕಾಲ ವೈಕುಂಠದಲ್ಲಿ ಸುಖಿಯಾಗಿ ಬಾಳುವನು.

೮೧. ಪುನಃ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆದು ಶ್ರೀರಾಮಭಕ್ತಿಯನ್ನು ಪಡೆಯುವುದಲ್ಲದೆ ಜಿತೇಂದ್ರಿಯರಲ್ಲಿ ಶ್ರೇಷ್ಠನೂ, ಪರಮಧಾರ್ಮಿಕನೂ ಆಗುವನು.

೮೨–೮೪. ಶರದೃತುವಿನಲ್ಲಿ ಪ್ರಕೃತಿದೇವಿಗೆ (ಮಹಿಷ ಛಾಗಲ, ಮೇಷ) ಕಬ್ಬು, ಕುಂಬಳಕಾಯಿ ಮುಂತಾದ ನೈವೇದ್ಯಗಳಿಂದಲೂ, ಉಪಹಾರಾದಿಗಳಿಂದಲೂ, ಪೂಜಿಸಿ ನೃತ್ಯಗೀತ ವಾದ್ಯಾದಿಗಳಿಂದ (ವಿವಿಧ ಕೌತುಕ ಮಂಗಲಗಳಿಂದ) ತುಷ್ಟಿಬಡಿಸುವವರು ಏಳು ಮನ್ವಂತರಗಳಕಾಲ ಶಿವಲೋಕದಲ್ಲಿ ವಾಸಮಾಡಿಕೊಂಡಿರುವು

ಶಿವಲೋಕೇ ವಸೇತ್ಸೋಽಪಿ ಸಪ್ತಮನ್ವಂತರಾವಧಿ ।
ಪುನಃ ಸ್ವಯೋನಿಂ ಸಂಪ್ರಾಪ್ಯ ಬುದ್ಧಿಂ ಚ ನಿರ್ಮಲಾಂ ಲಭೇತ್ ॥ ೮೪ ॥

ಅಚಲಾಂ ಶ್ರಿಯಮಾಪ್ನೋತಿ ಪುತ್ರಪೌತ್ರಾದಿವರ್ಧಿನೀಂ ।
ಮಹಾಪ್ರಭಾವಯುಕ್ತಶ್ಚ ಗಜವಾಜಿಸಮನ್ವಿತಃ ॥
ರಾಜರಾಜೇಶ್ವರಃ ಸೋಽಪಿ ಭವೇದೇವ ನ ಸಂಶಯಃ ॥ ೮೫ ॥

ಭಾದ್ರಶುಕ್ಲಾಷ್ಟಮೀಂ ಪ್ರಾಪ್ಯ ಮಹಾಲಕ್ಷ್ಮೀಂ ಚ ಯೋಽರ್ಚಯೇತ್ ॥೮೬॥

ನಿತ್ಯಂ ಭಕ್ತ್ಯಾ ಪಕ್ಷಮೇಕಂ ಪುಣ್ಯಕ್ಷೇತ್ರೇ ಚ ಭಾರತೇ ।
ದತ್ವಾ ತಸ್ಯೈ ಪ್ರಕೃಷ್ಟಾನಿ ಚೋಪಚಾರಾಣಿ ಷೋಡಶ ॥ ೮೭ ॥

ವೈಕುಂಠೇ ಮೋದತೇ ಸೋಽಪಿ ಯಾವಚ್ಚಂದ್ರದಿವಾಕರೌ ।
ಪುನಃ ಸ್ವಯೋನಿಂ ಸಂಪ್ರಾಪ್ಯ ರಾಜರಾಜೇಶ್ವರೋ ಭವೇತ್ ॥ ೮೮ ॥

ದಲ್ಲದೆ ಪುನಃ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆದು ನಿರ್ಮಲವಾದ ಬುದ್ಧಿಯನ್ನು ಹೊಂದುವರು.

೮೫. ಅಲ್ಲದೇ ಪುತ್ರಪೌತ್ರಾಭಿವೃದ್ಧಿಕರವೂ, ನಿಶ್ಚಲವೂ ಆದ ಸಂಪತ್ತನ್ನೂ ಪಡೆದು ಅನೇಕ ಆನೆ, ಕುದುರೆ ಮುಂತಾದ ವಾಹನಯುಕ್ತರಾಗಿ ಮಹಾಪ್ರಭಾವ ಶಾಲಿಯೆನಿಸುವರು. ಮತ್ತು ಅವರು ರಾಜರಾಜೇಶ್ವರರೆನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.

೮೬–೮೮. ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ಭಾದ್ರಪದ ಶುಕ್ಲ ಅಷ್ಟಮೀ ದಿನವಾಗಲೀ, ಪ್ರತಿ ದಿನವಾಗಲೀ, ಒಂದು ಪಕ್ಷವಾಗಲೀ, ಭಕ್ತಿಯಿಂದ ಮಹಾ ಲಕ್ಷ್ಮಿಗೆ ಪ್ರಕೃಷ್ಟವಾದ ಷೋಡಶೋಪಚಾರಗಳಿಂದ ಪೂಜಿಸುವವನು, ಸೂರ್ಯ ಚಂದ್ರರಿರುವವರೆಗೂ ವೈಕುಂಠದಲ್ಲಿ ಆನಂದದಿಂದಿದ್ದು ಪುನಃ ತನ್ನ ಪೂರ್ವ ಯೋನಿಯಲ್ಲಿ ಜನ್ಮಪಡೆದು ರಾಜರಾಜೇಶ್ವರನೆನಿಸಿಕೊಳ್ಳುವನು.

ಕಾರ್ತಿಕೀ ಪೂರ್ಣಿಮಾಯಾಂ ಚ ಕೃತ್ವಾತು ರಾಸಮಂಡಲಂ ।
ಗೋಪಾನಾಂ ಶತಕಂ ಕೃತ್ವಾ ಗೋಪೀನಾಂ ಶತಕಂ ತಥಾ ॥ ೮೯ ॥

ಶಿಲಾಯಾಂ ಪ್ರತಿಮಾಯಾಂ ವಾ ಶ್ರೀಕೃಷ್ಣಂ ರಾಧಯಾ ಸಹ ।
ಭಾರತೇ ಪೂಜಯೇದ್ದತ್ವಾ ಚೋಪಚಾರಾಣಿ ಷೋಡಶ ॥ ೯೦ ॥

ಗೋಲೋಕೇ ಚ ವಸೇತ್ಸೋಽಪಿ ಯಾವದ್ವೈ ಬ್ರಹ್ಮಣೋ ವಯಃ ।
ಭಾರತಂ ಪುನರಾಗತ್ಯ ಹರಿಭಕ್ತಿಂ ಲಭೇದ್ಧ್ರುವಂ ॥ ೯೧ ॥

ಕ್ರಮೇಣ ಸುದೃಢಾಂ ಭಕ್ತಿಂ ಲಬ್ಧ್ವಾ ಮಂತ್ರಂ ಹರೇರಪಿ ।
ದೇಹಂ ತ್ಯಕ್ತ್ವಾ ಚ ಗೋಲೋಕಂ ಪುನರೇವ ಪ್ರಯಾತಿ ಸಃ ॥ ೯೨ ॥

ತತ್ರ ಕೃಷ್ಣಸ್ಯ ಸಾರೂಪ್ಯಂ ಸಂಪ್ರಾಪ್ಯ ಪಾರ್ಷದೋ ಭವೇತ್ ।
ಪುನಸ್ತತ್ಪತನಂ ನಾಸ್ತಿ ಜರಾಮೃತ್ಯುಹರೋ ಮಹಾನ್ ॥ ೯೩ ॥

೮೯–೯೧ ಕಾರ್ತೀಕಮಾಸದ ಪೂರ್ಣಿಮಾ ದಿವಸದಲ್ಲಿ ರಾಸಮಂಡಲವನ್ನು ಕಲ್ಪಿಸಿ. ಶಿಲೆಯಲ್ಲಾಗಲೀ, ಪ್ರತಿಮಾರೂಪವಾಗಿಯಾಗಲೀ, ರಾಧಾಸಹಿತನಾದ ಶ್ರೀಕೃಷ್ಣನನ್ನೂ ನೂರುಜನ ಗೋಪಗೋಪಿಯರನ್ನೂ ನಿರ್ಮಿಸಿ, ಷೋಡಶೋಪಚಾರಗಳಿಂದ ಪೂಜಿಸುವವರು ಬ್ರಹ್ಮನ ಆಯುಃಪರಿಮಿತಿಯವರೆಗೆ ಗೋಲೋಕದಲ್ಲಿ ವಾಸಮಾಡಿಕೊಂಡಿದ್ದು ಪುನಃ ಭಾರತದಲ್ಲಿ ಜನ್ಮವೆತ್ತಿ ಶ್ರೀಹರಿಯ ಭಕ್ತನಾಗುವುದು ಸಿಶ್ಚಯು

೯೨. ಕ್ರಮವಾಗಿ ಶ್ರೀಹರಿಯಲ್ಲಿ ಸುದೃಢವಾದ ಭಕ್ತಿಯನ್ನೂ ಶ್ರೀಹರಿಯ ಮಂತ್ರೋಪದೇಶ ಸಿದ್ಧಿಯನ್ನೂ ಪಡೆದು ದೇಹತ್ಯಾಗಮಾಡಿ ಪುನಃ ಗೋಲೋಕಕ್ಕೆ ಹೋಗಿ ಸೇರುವನು.

೯೩. ಅಲ್ಲಿ ಶ್ರೀಕೃಷ್ಣನ ಸಾರೂಪ್ಯವನ್ನು ಪಡೆದು ಪಾರ್ಶದನಾಗಿರುವನು. ಜರಾಮೃತ್ಯುರಹಿತನಾದ ಆ ಭಕ್ತನಿಗೆ ಪುನಃ ಭೂಮಿಯಲ್ಲಿ ಜನ್ಮವುಂಟಾಗುವುದಿಲ್ಲ.

ಶುಕ್ಲಾಂ ವಾಪ್ಯಥವಾ ಕೃಷ್ಣಾಂ ಕರೋತ್ಯೇಕಾದಶೀಂ ಚ ಯಃ ।
ವೈಕುಂಠೇ ಮೋದತೇ ಸೋಽಪಿ ಯಾವದ್ವೈ ಬ್ರಹ್ಮಣೋ ವಯಃ ॥ ೯೪ ॥

ಭಾರತಂ ಪುನರಾಗತ್ಯ ಹರಿಭಕ್ತಿಂ ಲಭೇದ್ಧ್ರುವಂ ।
ಪುನರ್ಯಾತಿ ಚ ವೈಕುಂಠಂ ನ ತಸ್ಯ ಪತನಂ ಭವೇತ್ ॥ ೯೫ ॥

ಭಾದ್ರೇ ಶುಕ್ಲೇ ಚ ದ್ವಾದಶ್ಯಾಂ ಯಃ ಶಕ್ರಂ ಪೂಜಯೇನ್ನರಃ ।
ಷಷ್ಟಿವರ್ಷಸಹಸ್ರಾಣಿ ಶಕ್ರಲೋಕೇ ಮಹೀಯತೇ ॥ ೯೬ ॥

ರವಿವಾರೇಽರ್ಕಸಂಕ್ರಾಂತ್ಯಾಂ ಸಪ್ತಮ್ಯಾಂ ಶುಕ್ಲಪಕ್ಷತಃ ।
ಸಂಪೂಜ್ಯಾರ್ಕಂ ಹವಿಷ್ಯಾನ್ನಂ ಯಃ ಕರೋತಿ ಚ ಭಾರತೇ ॥ ೯೭ ॥

ಮಹೀಯತೇ ಸೋಽರ್ಕಲೋಕೇ ಯಾವಚ್ಚಂದ್ರದಿವಾಕರೌ ।
ಭಾರತಂ ಪುನರಾಗತ್ಯ ಚಾರೋಗೀ ಶ್ರೀಯುತೋ ಭವೇತ್ ॥ ೯೮ ॥

---

೯೪. ಶುಕ್ಲಪಕ್ಷದಲ್ಲಾಗಲೀ ಕೃಷ್ಣಪಕ್ಷದಲ್ಲಾಗಲೀ ಏಕಾದಶೀ ವ್ರತವನ್ನಾಚರಿಸುವವನು ಬ್ರಹ್ಮನ ಆಯುಸ್ಸಿರುವವರೆಗೆ ವೈಕುಂಠದಲ್ಲಿ ಸುಖವಾಗಿ ನೆಲೆಸುವನು.

೯೫. ಪುನಃ ಭಾರತದಲ್ಲಿ ಜನ್ಮವೆತ್ತಿ ಹರಿಭಕ್ತಿಯನ್ನು ಪಡೆದು ಪುನಃ ವೈಕುಂಠಕ್ಕೆ ತೆರಳುವನು. ಅನಂತರ ಅವನಿಗೆ ಪುನರ್ಜನ್ಮವಿಲ್ಲವು.

೯೬. ಭಾದ್ರಪದ ಶುಕ್ಲದ್ವಾದಶಿಯ ದಿವಸ ಇಂದ್ರನನ್ನು ಪೂಜಿಸುವವನು ಅರವತ್ತುಸಾವಿರ ವರ್ಷಗಳು ಇಂದ್ರಲೋಕದಲ್ಲಿ ಸಂತೋಷದಿಂದ ಮೆರೆಯುವನು.

೯೭–೯೮. ಭಾನುವಾರ ಸೂರ್ಯಸಂಕ್ರಮಣ ಮತ್ತು ಶುಕ್ಲಪಕ್ಷದ ಸಪ್ತಮೀ ದಿವಸಗಳಲ್ಲಿ, ಸೂರ್ಯನನ್ನು ಪೂಜಿಸಿ ಹವಿಷ್ಯಾನ್ನವನ್ನು ಸೇವಿಸುವ ಮನುಷ್ಯನು ಸೂರ್ಯಲೋಕದಲ್ಲಿ ಚಂದ್ರಸೂರ್ಯರಿರುವವರೆಗೆ ಮಹಿಮೆಯಿಂದಿದ್ದು ಪುನಃ ಭಾರತಕ್ಕೆ ಬಂದು ನೀರೋಗಿಯೂ ಸಂಪದ್ಯುಕ್ತನೂ ಆಗುವನು.

ಜ್ಯೇಷ್ಠಶುಕ್ಲ
ಜ್ಯೇಷ್ಠಕೃಷ್ಣ ಇತಿ ಪಾಠಃ } ಚತುರ್ದಶ್ಯಾಂ ಸಾವಿತ್ರೀಂ ಯೋ ಹಿ ಪೂಜಯೇತ್ ।
ಮಹೀಯತೇ ಬ್ರಹ್ಮಲೋಕೇ ಸಪ್ತಮನ್ವಂತರಾವಧಿ ॥ ೯೯ ॥

ಪುನರ್ಮಹೀಂ ಸಮಾಗತ್ಯ ಶ್ರೀಮಾನತುಲವಿಕ್ರಮಃ ।
ಚಿರಜೀವೀ ಭವೇತ್ಸೋಽಪಿ ಜ್ಞಾನವಾನ್ಸಂಪದಾಯುತಃ ॥ ೧೦೦ ॥

ಮಾಘಸ್ಯ ಶುಕ್ಲಪಂಚಮ್ಯಾಂ ಪೂಜಯೇದ್ಯಃ ಸರಸ್ವತೀಂ ।
ಸಂಯತೋ ಭಕ್ತಿತೋ ದತ್ವಾ ಚೋಪಚಾರಾಣಿ ಷೋಡಶ ॥ ೧೦೧ ॥

ಮಹೀಯತೇ ಸ ವೈಕುಂಠೇ ಯಾವದ್ಬ್ರಹ್ಮ ದಿವಾನಿಶಂ ।
ಸಂಪ್ರಾಪ್ಯ ಚ ಪುನರ್ಜನ್ಮ ಸ ಭವೇತ್ಕವಿಪಂಡಿತಃ ॥ ೧೦೨ ॥

ಗಾಂ ಸುವರ್ಣಾದಿಕಂ ಯೋ ಹಿ ಬ್ರಾಹ್ಮಣಾಯ ದದಾತಿ ಚ ।
ನಿತ್ಯಂ ಜೀವನಪರ್ಯಂತಂ ಭಕ್ತಿಯುಕ್ತಶ್ಚ ಭಾರತೇ ॥ ೧೦೩ ॥

೯೯–೧೦೦. ಜೇಷ್ಠಶುಕ್ಲ ಚತುರ್ದಶಿಯ ದಿವಸ ಸಾವಿತ್ರಿಯನ್ನು ಪೂಜಿಸುವವನು ಏಳು ಮನ್ವಂತರಗಳಕಾಲ ಬ್ರಹ್ಮಲೋಕದಲ್ಲಿ ನೆಲೆಸುವುದಲ್ಲದೆ ಪುನಃ ಭೂಮಿಯಲ್ಲಿ ಜನ್ಮವೆತ್ತಿ ಶ್ರೀಮಂತನೂ, ಅತುಲಪರಾಕ್ರಮಶಾಲಿಯೂ, ಚಿರಂಜೀವಿಯೂ, ದಿವ್ಯಜ್ಞಾನಿಯೂ ಆಗುವನು.

೧೦೧-೧೦೨. ಮಾಘಶುಕ್ಲಪಂಚಮಿಯ ದಿವಸ ಸರಸ್ವತಿಯನ್ನು ಜಿತೇಂದ್ರಿಯನಾಗಿ ಭಕ್ತಿಪೂರ್ವಕವಾಗಿ ಷೋಡಶೋಪಚಾರಗಳಿಂದ ಪೂಜಿಸುವವನು ಬ್ರಹ್ಮನ ಒಂದು ಹಗಲುರಾತ್ರಿ ಕಳೆಯುವವರೆಗೆ ವೈಕುಂಠದಲ್ಲಿ ಸಂತೋಷದಿಂದಿದ್ದು ಪುನಃ ಭಾರತದಲ್ಲಿ ಜನ್ಮಪಡೆದು ಉತ್ತಮಕವಿಯೂ ಪಂಡಿತಶ್ರೇಷ್ಠನೂ ಆಗುವನು.

೧೦೩–೧೦೫. ಭಾರತದಲ್ಲಿ ಭಕ್ತಿಪೂರ್ವಕವಾಗಿ ಭೂಮಿ, ಗೋವು ಮತ್ತು ಧನಕನಕಾದಿಗಳನ್ನು ಬ್ರಾಹ್ಮಣರಿಗೆ ದಾನಮಾಡುವವನು ಗೋವುಗಳ ಲೋಮ

ಗವಾಂ ಲೋಮಪ್ರಮಾಣಾಬ್ದಂ ದ್ವಿಗುಣಂ ವಿಷ್ಣುಮಂದಿರೇ |
ಮೋದತೇ ಹರಿಣಾ ಸಾರ್ಧಂ ಕ್ರೀಡಾ ಕೌತುಕಮಂಗಲೈಃ || ೧೦೪ ||

ತತಃ ಪುನರಿಹಾಗತ್ಯ ವಿಷ್ಣುಭಕ್ತಿಂ ಲಭೇದ್ಧ್ರುವಂ |
ತತಃ ಪುನರಿಹಾಗತ್ಯ ರಾಜರಾಜೇಶ್ವರೋ ಭವೇತ್ |
ಗೋಮಾಂಶ್ಚ ಪುತ್ರವಾನ್ವಿದ್ವಾನ್ ಜ್ಞಾನವಾನ್ಸರ್ವತಃ ಸುಖೀ || ೧೦೫ ||

ಭೋಜಯೇದ್ಯೋ ಹಿ ಮಿಷ್ಟಾನ್ನಂ ಬ್ರಾಹ್ಮಣೇಭ್ಯಶ್ಚ ಭಾರತೇ |
ವಿಪ್ರಲೋಮಪ್ರಮಾಣಾಬ್ದಂ ಮೋದತೇ ವಿಷ್ಣುಮಂದಿರೇ || ೧೦೬ ||

ತತಃ ಪುನರಿಹಾಗತ್ಯ ಸ ಸುಖೀ ಧನವಾನ್ಭವೇತ್ |
ವಿದ್ವಾನ್ಸುಚಿರಜೀವೀ ಚ ಶ್ರೀಮಾನತುಲವಿಕ್ರಮಃ || ೧೦೭ ||

ಯೋ ವಕ್ತಿ ವಾ ದದಾತ್ಯೇವ ಹರೇರ್ನಾಮಾನಿ ಭಾರತೇ |
ಯುಗನಾಮಪ್ರಮಾಣಂ ಚ ವಿಷ್ಣುಲೋಕೇ ಮಹೀಯತೇ || ೧೦೮ ||

ಪ್ರಮಾಣದ ಎರಡರಷ್ಟು ವರ್ಷಗಳು ವೈಕುಂಠದಲ್ಲಿ ಸುಖವಾಗಿದ್ದು (ಶ್ರೀಹರಿಯೊಡನೆ ಕ್ರೀಡಿಸಿಕೊಂಡಿದ್ದು) ಅನಂತರ ಭೂಮಿಯಲ್ಲಿ ಪುನರ್ಜನ್ಮಹೊಂದಿ ವಿಷ್ಣುಭಕ್ತನಾಗುವನು. ಅಲ್ಲದೆ ಭೂಮಂಡಲದಲ್ಲಿ ರಾಜರಾಜೇಶ್ವರನೆನಿಸಿಕೊಂಡು ಗೋಮಂತನೂ, ಪುತ್ರವಂತನೂ, ವಿದ್ಯಾವಂತನೂ, ದಿವ್ಯಜ್ಞಾನಿಯೂ ಆಗಿ ಸುಖವಾಗಿರುವನು.

೧೦೬-೧೦೭. ಭಾರತದಲ್ಲಿ ಬ್ರಾಹ್ಮಣರಿಗೆ ಮೃಷ್ಟಾನ್ನ ಭೋಜನಮಾಡಿಸುವವನು ಆ ಬ್ರಾಹ್ಮಣರ ಲೋಮಪ್ರಮಾಣದಷ್ಟು ವರ್ಷಗಳಕಾಲ ವಿಷ್ಣುಲೋಕದಲ್ಲಿ ಸುಖವಾಗಿದ್ದು, ಪುನಃ ಭಾರತದಲ್ಲಿ ಜನ್ಮಪಡೆದು ಧನವಂತನೂ, ವಿದ್ಯಾವಂತನೂ ಆಗಿ ಅತುಲಪರಾಕ್ರಮಿಯೂ, ಶ್ರೀಮಂತನೂ, ಚಿರಂಜೀವಿಯೂ, ಸುಖಿಯೂ ಆಗುವನು.

೧೦೮. ಭಾರತದಲ್ಲಿ ಶ್ರೀಹರಿಯ ದಿವ್ಯನಾಮವನ್ನು ಜಪಿಸುವವನಾಗಲೀ, ಬರೆದು ದಾನಮಾಡುವವನಾಗಲೀ, ಆ ನಾಮಗಳಷ್ಟು ಯುಗಗಳಕಾಲ ವಿಷ್ಣುಲೋಕದಲ್ಲಿ ಸುಖವಾಗಿರುವನು.

ತತಃ ಪುನರಿಹಾಗತ್ಯ ವಿಷ್ಣುಭಕ್ತಿಂ ಲಭೇದ್ಧ್ರುವಂ ।
ಯದಿ ನಾರಾಯಣಕ್ಷೇತ್ರೇ ಫಲಂ ಕೋಟಿಗುಣಂ ಲಭೇತ್ ॥ ೧೦೯ ॥

ನಾಮ್ನಾ ಕೋಟಿಂ ಹರೇರ್ಯೋ ಹಿ ಕ್ಷೇತ್ರೇ ನಾರಾಯಣೇ ಜಪೇತ್ ।
ಸರ್ವಪಾಪವಿನಿರ್ಮುಕ್ತೋ ಜೀವನ್ಮುಕ್ತೋ ಭವೇದ್ಧ್ರುವಂ ॥ ೧೧೦ ॥

ಲಭತೇ ನ ಪುನರ್ಜನ್ಮ ವೈಕುಂಠೇ ಸ ಮಹೀಯತೇ ।
ಲಭೇದ್ವಿಷ್ಣೋಶ್ಚ ಸಾರೂಪ್ಯಂ ನ ತಸ್ಯ ಪತನಂ ಭವೇತ್ ॥ ೧೧೧ ॥

ಯಃ ಶಿವಂ ಪೂಜಯೇನ್ನಿತ್ಯಂ ಕೃತ್ವಾ ಲಿಂಗಂ ಚ ಪಾರ್ಥಿವಂ ।
ಯಾವಜ್ಜೀವನಪರ್ಯಂತಂ ಸ ಯಾತಿ ಶಿವಮಂದಿರಂ ॥ ೧೧೨ ॥

ಮೃದಾಂ ರೇಣುಪ್ರಮಾಣಾಬ್ದಂ ಶಿವಲೋಕೇ ಮಹೀಯತೇ ।
ತತಃ ಪುನರಿಹಾಗತ್ಯ ರಾಜೇಂದ್ರೋ ಭಾರತೇ ಭವೇತ್ ॥ ೧೧೩ ॥

೧೦೯–೧೧೦. ಅನಂತರ ಭಾರತದಲ್ಲಿ ಜನ್ಮಪಡೆದು ವಿಷ್ಣುಭಕ್ತಿಯನ್ನು ಹೊಂದುವನು. ನಾರಾಯಣಕ್ಷೇತ್ರದಲ್ಲಿ (ಬದರಿಕಾಶ್ರಮದಲ್ಲಿ) ಈ ಪುಣ್ಯಕರ್ಮ ಮಾಡಿದರೆ ಇದರ ಕೋಟಿಗುಣ ಫಲವು ಲಭಿಸುವುದು.

೧೧೧. ಅವನಿಗೆ ಪುನರ್ಜನ್ಮವಿಲ್ಲ. ವೈಕುಂಠದಲ್ಲಿ ವೈಭವದಿಂದಿದ್ದು ವಿಷ್ಣುವಿನ ಸಾರೂಪ್ಯವನ್ನು ಪಡೆಯುವನು. ಅವನಿಗೆ ಪುನಃ ಪತನವಿಲ್ಲ.

೧೧೨. ಯಾರು ತನ್ನ ಜೀವಿತಕಾಲದ ವರೆಗೂ ಮಣ್ಣಿನಲ್ಲಿ ಶಿವಲಿಂಗವನ್ನು ಮಾಡಿಕೊಂಡು ಭಕ್ತಿಯಿಂದ ಪೂಜಿಸುವರೋ ಅವರು ಶಿವಮಂದಿರವಾದ ಕೈಲಾಸಕ್ಕೆ ಹೋಗುವರು.

೧೧೩. ಆ ಲಿಂಗದಲ್ಲಿರುವ ರೇಣುಪ್ರಮಾಣದಷ್ಟು ವರ್ಷಗಳಕಾಲ ಶಿವಲೋಕದಲ್ಲಿ ಮಹಿಮಾವಂತರಾಗಿದ್ದು ಪುನಃ ಜನ್ಮಪಡೆದು ಭಾರತದಲ್ಲಿ ರಾಜಶ್ರೇಷ್ಠರೆನಿಸುವರು.

ಶಿಲಾಂ ಚ ಯೋಽರ್ಚಯೇನ್ನಿತ್ಯಂ ಶಿಲಾತೋಯಂ ಚ ಭಕ್ಷತೀ ।
ಮಹೀಯತೇ ಸ ವೈಕುಂಠೇ ಯಾವದ್ವೈ ಬ್ರಹ್ಮಣಃ ಶತಂ ॥ ೧೧೪ ॥

ತತೋ ಲಬ್ಧ್ವಾ ಪುನರ್ಜನ್ಮ ಹರಿಭಕ್ತಿಂ ಸುದುರ್ಲಭಾಂ ।
ಮಹೀಯತೇ ವಿಷ್ಣುಲೋಕೇ ನ ತಸ್ಯ ಪತನಂ ಭವೇತ್ ॥ ೧೧೫ ॥

ತಪಾಂಸಿ ಚೈವ ಸರ್ವಾಣಿ ವ್ರತಾನಿ ನಿಖಿಲಾನಿ ಚ ।
ಕೃತ್ವಾ ತಿಷ್ಠತಿ ವೈಕುಂಠೇ ಯಾವದಿಂದ್ರಾಶ್ಚತುರ್ದಶ ॥ ೧೧೬ ॥

ತತೋ ಲಬ್ಧ್ವಾ ಪುನರ್ಜನ್ಮ ರಾಜೇಂದ್ರೋ ಭಾರತೇ ಭವೇತ್ ।
ತತೋ ಮುಕ್ತೋ ಭವೇತ್ಪಶ್ಚಾತ್ಪುನರ್ಜನ್ಮ ನ ವಿದ್ಯತೇ ॥ ೧೧೭ ॥

ಯಃ ಸ್ನಾತಿ ಸರ್ವತೀರ್ಥೇಷು ಭುವಿ ಕೃತ್ವಾ ಪ್ರದಕ್ಷಿಣಂ ।
ಸ ಚ ನಿರ್ವಾಣತಾಂ ಯಾತಿ ನ ತಜ್ಜನ್ಮ ಭವೇದ್ಭುವಿ ॥ ೧೧೮ ॥

---

೧೧೪. ನಿತ್ಯವೂ ಸಾಲಿಗ್ರಾಮಶಿಲೆಯನ್ನು ಪೂಜಿಸಿ ಸಾಲಿಗ್ರಾಮತೀರ್ಥವನ್ನು ಪಾನಮಾಡುವವನು ನೂರು ಬ್ರಹ್ಮರ ಜೀವಿತಕಾಲದವರೆಗೆ ವೈಕುಂಠದಲ್ಲಿ ಸುಖವಾಗಿರುವನು.

೧೧೫. ಪುನರ್ಜನ್ಮಹೊಂದಿ ದುರ್ಲಭವಾದ ಹರಿಭಕ್ತಿಯನ್ನು ಪಡೆದು ವಿಷ್ಣುಲೋಕಕ್ಕೆ ತೆರಳುವ ಆ ಭಕ್ತನಿಗೆ ಪುನಃ ಪತನವಿಲ್ಲವು.

೧೧೬. ಸಕಲ ತಪಸ್ಸನ್ನೂ ನಿಖಿಲ ವ್ರತಗಳನ್ನೂ ಆಚರಿಸುವವನು ವೈಕುಂಠದಲ್ಲಿ ಹದಿನಾಲ್ಕು ಇಂದ್ರರ ಜೀವಿತಕಾಲದವರೆಗೂ ಸುಖವಾಗಿರುವನು.

೧೧೭. ಅನಂತರ ಪುನರ್ಜನ್ಮವನ್ನು ಹೊಂದಿ, ಭಾರತದಲ್ಲಿ ರಾಜಶ್ರೇಷ್ಠನೆನಿಸುವನು. ಅಲ್ಲದೇ ಮುಕ್ತಿಯನ್ನು ಪಡೆಯುವನು. ಅವನಿಗೆ ಪುನರ್ಜನ್ಮವಿಲ್ಲ.

೧೧೮. ಭೂಪ್ರದಕ್ಷಿಣೆಯನ್ನು ಮಾಡಿ ಸಕಲತೀರ್ಥಗಳಲ್ಲೂ ಸ್ನಾನಮಾಡುವವನು ಶಾಶ್ವತಮುಕ್ತಿಯನ್ನು ಪಡೆಯುವುದಲ್ಲದೆ ಅವನಿಗೆ ಪುನರ್ಜನ್ಮವಿಲ್ಲ.

ಪುಣ್ಯಕ್ಷೇತ್ರೇ ಭಾರತೇ ಚ ಯೋಽಶ್ವಮೇಧಂ ಕರೋತಿ ಚ ।
ಅಶ್ವಲೋಮಪ್ರಮಾಣಾಬ್ದಂ ಶಕ್ರಸ್ಯಾರ್ಧಾಸನೇ ವಸೇತ್ ॥ ೧೧೯ ॥

ಚತುರ್ಗುಣಂ ರಾಜಸೂಯೇ ಫಲಮಾಪ್ನೋತಿ ಮಾನವಃ ।
ನರಮೇಧೇಽಶ್ವಮೇಧಾರ್ಧಂ ಗೋಮೇಧೇ ಚ ತದೇವ ಚ ॥ ೧೨೦ ॥

ಪುತ್ರೇಷ್ಟೌ ಚ ತದರ್ಧಂ ಚ ಸುಪುತ್ರಂ ಚ ಲಭೇದ್ಧ್ರುವಂ ।
ಲಭತೇ } ವಾನುಕೂಲೇಷ್ಟೌ ಗೋಮೇಧ
ಲಾಂಗಲೇಷ್ಟೌಚ (ಇತಿ ಪಾಠಾಂತರಂ) } ಸದೃಶಂ ಫಲಂ ॥ ೧೨೧ ॥

ತತ್ಸಮಾನಂ ಚ ವಿಪ್ರೇಷ್ಟೌ ವೃದ್ಧಿಯಾಗೇ ಚ ತತ್ಫಲಂ ।
ಪದ್ಮಯಜ್ಞೇ ತದರ್ಧಂ ಚ ಫಲಮಾಪ್ನೋತಿ ಮಾನವಃ ॥ ೧೨೨ ॥

---

೧೧೯. ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ಅಶ್ವಮೇಧಯಾಗಮಾಡುವವನು ಕುದುರೆಯ ರೋಮಗಳ ಪ್ರಮಾಣದಷ್ಟು ಕಾಲ ಇಂದ್ರನ ಅರ್ಧಾಸನದಲ್ಲಿ ಮೆರೆಯುವನು.

೧೨೦. ರಾಜಸೂಯಯಾಗ ಮಾಡಿದರೆ ಮನುಜನು ಇದರ ನಾಲ್ಕರಷ್ಟು ಫಲವನ್ನು ಹೊಂದುವನು. ನರಮೇಧಯಾಗವನ್ನು ಮಾಡಿದರೆ ಅಶ್ವಮೇಧ ಯಾಗದ ಅರ್ಧಫಲವೂ, ಗೋಮೇಧಯಾಗ ಮಾಡಿದರೆ ಅಶ್ವಮೇಧಯಾಗ ಮಾಡಿದಷ್ಟು ಫಲವೂ ಲಭಿಸುವುದು.

೧೨೧. ಪುತ್ರಕಾಮೇಷ್ಟಿಯಾಗಮಾಡಿದರೆ ಅದರ ಅರ್ಧಫಲವೂ, ಸುಪುತ್ರರೂ ಲಭಿಸುವರು. ಲಾಂಗಲೇಷ್ಟಿಯನ್ನು ಮಾಡುವುದರಿಂದ ಗೋಮೇಧಯಾಗ ಮಾಡಿದ ಫಲವು ಲಭಿಸುವುದು.

೧೨೨. ವಿಪ್ರೇಷ್ಟಿಯನ್ನೂ, ವೃದ್ಧಿಯಾಗವನ್ನೂ ಮಾಡುವುದರಿಂದ ಅದಕ್ಕೆ ಸಮಾನವಾದ ಫಲವನ್ನೂ, ಪದ್ಮಯಾಗಮಾಡಿದರೆ ಅದರ ಅರ್ಧಫಲವನ್ನೂ ಮನುಷ್ಯನು ಹೊಂದುವನು.

ವಿಶೋಕೇ ಚ ವಿಶೋಕಂ ಚ ಪದ್ಮಾರ್ಧಂ ಸ್ವರ್ಗಮಶ್ನುತೇ ।
ವಿಜಯೇ ವಿಜಯೀ ರಾಜಾ ಸ್ವರ್ಗಂ ಪದ್ಮಸಮಂ ಲಭೇತ್ ॥ ೧೨೩ ॥

ಪ್ರಾಜಾಪತ್ಯೇ ಪ್ರಜಾಲಾಭೋ ಭೂವೃದ್ಧಿರ್ಭೂಭೃತಾಂ ಭವೇತ್ ।
ಇಹ ರಾಜಶ್ರಿಯಂ ಲಬ್ಧ್ವಾ ಪದ್ಮಾರ್ಧಂ ಸ್ವರ್ಗಮಶ್ನುತೇ ।
ಋದ್ಧಿಯಾಗೇ ಮಹೈಶ್ವರ್ಯಂ ಸ್ವರ್ಗಂ ಪದ್ಮಸಮಂ ಭವೇತ್ ॥ ೧೨೪ ॥

ವಿಷ್ಣುಯಜ್ಞಃ ಪ್ರಧಾನಂ ಚ ಸರ್ವಯಜ್ಞೇಷು ಸುಂದರಿ ।
ಬ್ರಹ್ಮಣಾ ಚ ಕೃತಃ ಪೂರ್ವಂ ಮಹಾಸಂಭಾರಸಂಯುತಃ ॥ ೧೨೫ ॥

ಬಭೂವ ಕಲಹೋ ಯತ್ರ ದಕ್ಷಶಂಕರಯೋಃ ಸತಿ ।
ಶೇಪುಶ್ಚ ನಂದಿನಂ ವಿಪ್ರಾ ನಂದೀ ವಿಪ್ರಾಂಶ್ಚ ಕೋಪತಃ ॥ ೧೨೬ ॥

---

೧೨೩. ವಿಶೋಕಯಾಗ ಮಾಡುವುದರಿಂದ ವಿಶೋಕವೆಂಬ ಸ್ವರ್ಗಫಲವನ್ನೂ (ಪದ್ಮಯಾಗದ ಅರ್ಧಫಲ) ವಿಜಯಯಾಗ ಮಾಡುವುದರಿಂದ ರಾಜನು ವಿಜಯಿಯಾಗುವುದಲ್ಲದೆ ಪದ್ಮಯಾಗದ ಸಮಾನಫಲವನ್ನೂ ಹೊಂದುವನು.

೧೨೪. ರಾಜರು ಪ್ರಾಜಾಪತ್ಯಯಾಗಮಾಡುವುದರಿಂದ ಪ್ರಜಾಲಾಭವೂ, ಭೂವೃದ್ಧಿಯೂ ಉಂಟಾಗುವುದು. ಇಹಲೋಕದಲ್ಲಿ ರಾಜ್ಯಸಂಪತ್ತನ್ನನುಭವಿಸಿ ಪದ್ಮಯಾಗದ ಅರ್ಧದಷ್ಟು ಸ್ವರ್ಗಫಲವನ್ನೂ ಪಡೆಯುವರು. ಋದ್ಧಿಯಾಗ ಮಾಡುವುದರಿಂದ ಮಹದೈಶ್ವರ್ಯವೂ ಪದ್ಮಯಾಗಕ್ಕೆ ಸಮಾನವಾದ ಫಲವೂ ಲಭಿಸುವುದು.

೧೨೫. ಎಲೌ ಸುಂದರಾಂಗಿಯಾದ ಸಾವಿತ್ರಿಯೇ, ಸಕಲಯಜ್ಞಗಳಲ್ಲೂ ವಿಷ್ಣುಯಜ್ಞವು ಅತಿಮುಖ್ಯವಾದುದು. ಪೂರ್ವದಲ್ಲಿ ಬ್ರಹ್ಮನು ಸಕಲಸಂಭಾರಗಳನ್ನು ಸಿದ್ಧಗೊಳಿಸಿಕೊಂಡು ಈ ಯಾಗವನ್ನು ಮಾಡಿದನು.

೧೨೬. ಎಲೌ ಸತಿಯೇ, ಅದೇ ವಿಷ್ಣುಯಜ್ಞದಲ್ಲಿಯೇ ದಕ್ಷಬ್ರಹ್ಮನಿಗೂ, ಶಂಕರನಿಗೂ ಕಲಹವುಂಟಾದುದು. ಆಗಲೇ ಬ್ರಾಹ್ಮಣರೆಲ್ಲರೂ ನಂದಿಯನ್ನೂ, ನಂದಿಯು ಬ್ರಾಹ್ಮಣರನ್ನೂ ಪರಸ್ಪರವಾಗಿ ಶಪಿಸಿದರು.

ಯತೋ ಹೇತೋರ್ದಕ್ಷಯಜ್ಞಂ ಬಭಂಜ ಚಂದ್ರಶೇಖರಃ ।
ಚಕಾರ ವಿಷ್ಣುಯಜ್ಞಂ ಚ ಪುರಾ ದಕ್ಷಪ್ರಜಾಪತಿಃ ॥ ೧೨೭ ॥

ಧರ್ಮಶ್ಚ ಕಶ್ಯಪಶ್ಚೈವ ಶೇಷಶ್ಚಾಪಿ ಚ ಕರ್ದಮಃ ।
ಸ್ವಾಯಂಭುವೋ ಮನುಶ್ಚೈವ ತತ್ಪುತ್ರಶ್ಚ ಪ್ರಿಯವ್ರತಃ ॥ ೧೨೮ ॥

ಶಿವಃ ಸನತ್ಕುಮಾರಶ್ಚ ಕಪಿಲಶ್ಚ ಧ್ರುವಸ್ತಥಾ ।
ರಾಜಸೂಯಸಹಸ್ರಾಣಾಂ ಸಮೃದ್ಧ್ಯಾ ಚ ಕ್ರತುರ್ಭವೇತ್ ॥ ೧೨೯ ॥

ರಾಜಸೂಯಸಹಸ್ರಾಣಾಂ ಫಲಮಾಪ್ನೋತಿ ನಿಶ್ಚಿತಂ ।
ವಿಷ್ಣುಯಜ್ಞಾತ್ಪರೋ ಯಜ್ಞೋ ನಾಸ್ತಿ ವೇದೇ ಫಲಪ್ರದಃ ॥ ೧೩೦ ॥

ಬಹು ಕಲ್ಪಾಂತಜೀವೀ ಚ ಜೀವನ್ಮುಕ್ತೋ ಭವೇದ್ಧ್ರುವಂ ।
ಜ್ಞಾನೇನ ತೇಜಸಾ ಚೈವ ವಿಷ್ಣುತುಲ್ಯೋ ಭವೇದಿಹ ॥ ೧೩೧ ॥

---

೧೨೭. ಹಿಂದೆ ದಕ್ಷಪ್ರಜಾಪತಿಯು ವಿಷ್ಣುಯಜ್ಞವನ್ನು ಮಾಡಿ ನಂದಿಗೂ ಬ್ರಾಹ್ಮಣರಿಗೂ ಜಗಳವಾದುದರಿಂದಲೇ ವೀರಭದ್ರನು ದಕ್ಷಯಜ್ಞವನ್ನು ನಾಶಗೊಳಿಸಿದುದು

೧೨೮–೧೨೯. ಧರ್ಮದೇವತೆಯೂ, ಕಶ್ಯಪಪ್ರಜಾಧಿಪತಿಯೂ, ಆದಿಶೇಷ, ಕರ್ದಮ, ಸ್ವಾಯಂಭುವಮನು, ಅವನ ಪುತ್ರನಾದ ಪ್ರಿಯವ್ರತ, ಶಿವ, ಸನತ್ಕುಮಾರ, ಕಪಿಲ ಮತ್ತು ಧ್ರುವ ಇವರೆಲ್ಲರೂ ಮಾಡಿದ ರಾಜಸೂಯಯಾಗದ ಸಹಸ್ರಪಾಲಿನಷ್ಟು ಫಲವು ವಿಷ್ಣುಯಾಗದಿಂದ ಲಭಿಸುವುದು.

೧೩೦. ವಿಷ್ಣುಯಾಗಕ್ಕಿಂತಲೂ ಶ್ರೇಷ್ಠವಾದ ಯಾಗವು ಬೇರಾವುದೂ ಇಲ್ಲವೆಂದು ವೇದೋಕ್ತವಾಗಿದೆ. ಸಹಸ್ರರಾಜಸೂಯಯಾಗದ ಫಲವನ್ನು ವಿಷ್ಣುಯಾಗವನ್ನು ಮಾಡಿದವನು ಹೊಂದುವನು.

೧೩೧. ವಿಷ್ಣುಯಾಗಮಾಡಿದವನು ಅನೇಕ ಕಲ್ಪಾಂತದವರೆಗೆ ಜೀವಿಸಿಕೊಂಡಿದ್ದು ಜೀವನ್ಮುಕ್ತನಾಗುವನಲ್ಲದೆ ಜ್ಞಾನ ಮತ್ತು ತಪೋಬಲಗಳಲ್ಲಿ ವಿಷ್ಣುವಿಗೆ ಸಮಾನನಾಗುವನು.

ಶಾಸ್ತ್ರಾಣಾಂ ಚ ಯಥಾ ವೇದಾ ಆಶ್ರಮಾಣಾಂ ಚ ಬ್ರಾಹ್ಮಣಾಃ ॥ ೧೩೨ ॥

ತೀರ್ಥಾನಾಂ ಚ ಯಥಾ ಗಂಗಾ ಪವಿತ್ರಾಣಾಂ ಚ ವೈಷ್ಣವಾಃ ।
ಏಕಾದಶೀ ವ್ರತಾನಾಂ ಚ ಪುಷ್ಪಾಣಾಂ ತುಲಸೀ ಯಥಾ ॥ ೧೩೩ ॥

ನಕ್ಷತ್ರಾಣಾಂ ಯಥಾ ಚಂದ್ರಃ ಪಕ್ಷಿಣಾಂ ಗರುಡೋ ಯಥಾ ।
ಯಥಾ ಸ್ತ್ರೀಣಾಂ ಚ ಪ್ರಕೃತಿರಾಧಾರಾಣಾಂ ವಸುಂಧರಾ ॥ ೧೩೪ ॥

ಶೀಘ್ರಗಾನಾಂ ಚೇಂದ್ರಿಯಾಣಾಂ ಚಂಚಲಾನಾಂ ಯಥಾ ಮನಃ ।
ಪ್ರಜಾಪತೀನಾಂ ಬ್ರಹ್ಮಾ ಚ ಪ್ರಜೇಶಾನಾಂ ಪ್ರಜಾಪತಿಃ ॥ ೧೩೫ ॥

ವೃಂದಾವನಂ ವನಾನಾಂ ಚ ವರ್ಷಾಣಾಂ ಭಾರತಂ ಯಥಾ ।
ಶ್ರೀಮತಾಂ ಚ ಯಥಾ ಶ್ರೀಶ್ಚ ವಿದುಷಾಂ ಚ ಸರಸ್ವತೀ ॥ ೧೩೬ ॥

ಪತಿವ್ರತಾನಾಂ ದುರ್ಗಾ ಚ ಸೌಭಾಗ್ಯಾನಾಂ ಚ ರಾಧಿಕಾ ।
ವಿಷ್ಣುಯಜ್ಞಸ್ತಥಾ ವತ್ಸೇ ಯಜ್ಞೇಷು ಚ ಮಹಾನಿತಿ ॥ ೧೩೭ ॥

೧೩೨–೧೩೩. ದೇವತೆಗಳಲ್ಲಿ ವಿಷ್ಣುವೂ, ವಿಷ್ಣುಭಕ್ತರಲ್ಲಿ ಶಿವನೂ, ಶಾಸ್ತ್ರಗಳಲ್ಲೆಲ್ಲಾ ಚತುರ್ವೇದಗಳೂ, ವರ್ಣಾಶ್ರಮಗಳಲ್ಲಿ ಬ್ರಾಹ್ಮಣರೂ, ತೀರ್ಥದಲ್ಲಿ ಗಂಗೆಯೂ, ಪವಿತ್ರರಾದವರಲ್ಲಿ ವಿಷ್ಣುಭಕ್ತರೂ, ವ್ರತಗಳಲ್ಲಿ ಏಕಾದಶಿಯೂ, ಪುಷ್ಪಗಳಲ್ಲಿ ತುಳಸಿಯೂ, ಶ್ರೇಷ್ಠವಾಗಿರುವಂತೆ ಯಾಗಗಳಲ್ಲೆಲ್ಲಾ ವಿಷ್ಣುಯಾಗವು ಶ್ರೇಷ್ಠವಾದದ್ದು.

೧೩೪–೧೩೫. ನಕ್ಷತ್ರಗಳ ಗುಂಪಿನಲ್ಲಿ ಚಂದ್ರನೂ, ಪಕ್ಷಿಗಳಲ್ಲಿ ಗರುಡನೂ, ಸ್ತ್ರೀಯರಲ್ಲಿ ಪ್ರಕೃತಿದೇವಿಯೂ, ಆಧಾರಗಳಲ್ಲಿ ವಸುಂಧರೆಯೂ, ಶೀಘ್ರಗಾಮಿಯೂ ಮತ್ತು ಚಂಚಲವೂ ಆದ ಇಂದ್ರಿಯಗಳಲ್ಲಿ ಮನಸ್ಸೂ, ಪ್ರಜಾಧಿಪತಿಗಳಲ್ಲಿ ಬ್ರಹ್ಮನೂ, ಪ್ರಜೇಶರಲ್ಲಿ ಪ್ರಜಾಪತಿಯೂ, ಉತ್ತಮರೆನಿಸಿರುವಂತೆ ಯಾಗಗಳಲ್ಲಿ ವಿಷ್ಣುಯಾಗವು ಉತ್ತಮವಾದುದು.

೧೩೬–೧೩೭. ವೃಂದಾವನವು ವನಗಳಲ್ಲಿಯೂ, ಭಾರತವರ್ಷವು ವರ್ಷಗಳಲ್ಲಿಯೂ, ಲಕ್ಷ್ಮೀದೇವಿಯು ಶ್ರೀಮಂತರುಗಳಲ್ಲಿಯೂ, ಸರಸ್ವತಿಯು ವಿದ್ವಾಂಸರುಗಳಲ್ಲಿಯೂ, ದುರ್ಗಾದೇವಿಯು ಪತಿವ್ರತೆಯರಲ್ಲಿಯೂ, ರಾಧೆಯು ಸೌಭಾಗ್ಯವತಿಯರಲ್ಲಿಯೂ, ಮಾಹಾತ್ಮ್ಯವನ್ನು ಪಡೆದಿರುವಂತೆ, ವಿಷ್ಣುಯಜ್ಞವು ಯಜ್ಞಗಳಲ್ಲಿ ಮಾಹಾತ್ಮ್ಯವನ್ನು ಪಡೆದಿರುವುದು.

ಅಶ್ವಮೇಧಶತೇನೈವ ಶಕ್ರತ್ವಂ ಲಭತೇ ಧ್ರುವಂ ।
ಸಹಸ್ರೇಣ ವಿಷ್ಣುಪದಂ ಸಂಪ್ರಾಪ ಪೃಥುರೇವ ಚ ॥ ೧೩೮ ॥

ಸ್ನಾನಂ ಚ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಣಂ ।
ಸರ್ವೇಷಾಂ ಚ ವ್ರತಾನಾಂ ಚ ತಪಸಾಂ ಫಲಮೇವ ಚ ॥ ೧೩೯ ॥

ಪಾಠಶ್ಚತುರ್ಣಾಂ ವೇದಾನಾಂ ಪ್ರಾದಕ್ಷಿಣ್ಯಂ ಭುವಸ್ತಥಾ ।
ಫಲಂ ಬೀಜಮಿದಂ ಸರ್ವಂ ಮುಕ್ತಿದಂ ಕೃಷ್ಣಸೇವನಂ ॥ ೧೪೦ ॥

ಪುರಾಣೇಷು ಚ ವೇದೇಷು ಚೇತಿಹಾಸೇಷು ಸರ್ವತಃ ।
ನಿರೂಪಿತಂ ಸಾರಭೂತಂ ಕೃಷ್ಣಪಾದಾಂಬುಜಾರ್ಚನಂ ॥ ೧೪೧ ॥

ತದ್ವರ್ಣನಂ ಚ ತದ್ಧ್ಯಾನಂ ತನ್ನಾಮಗುಣಕೀರ್ತನಂ ।
ತತ್ಸ್ತೋತ್ರಂ ಸ್ಮರಣಂ ಚೈವ ವಂದನಂ ಜಪ ಏವ ಚ ॥ ೧೪೨ ॥

---

೧೩೮. ನೂರು ಅಶ್ವಮೇಧಯಾಗ ಮಾಡುವುದರಿಂದ ಇಂದ್ರಪದವಿಯು ಲಭಿಸುವುದು. ಸಹಸ್ರಯಾಗಮಾಡಿದುದರಿಂದ ವಿಷ್ಣುಪದವಿಯನ್ನು ಪೃಥು ಚಕ್ರವರ್ತಿಯು ಪಡೆದನು.

೧೩೯. ಸಕಲ ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವುದೂ, ಸಕಲ ಯಜ್ಞಗಳಲ್ಲಿ ದೀಕ್ಷೆಗೊಳ್ಳುವುದೂ, ಸಮಸ್ತವ್ರತಗಳನ್ನೂ, ತಪಸ್ಸುಗಳನ್ನೂ ಆಚರಿಸುವುದೂ ವಿಷ್ಣುಯಾಗಕ್ಕೆ ಸಮವೆನಿಸುವುದಿಲ್ಲ.

೧೪೦. ಚತುರ್ವೇದಗಳನ್ನು ಬಾಯಿಪಾಠಮಾಡುವುದರಿಂದಲೂ, ಭೂಮಂಡಲವನ್ನು ಪ್ರದಕ್ಷಿಣೆಮಾಡುವುದರಿಂದಲೂ, ಲಭಿಸುವ ಫಲಕ್ಕೆ ಮುಕ್ತಿದಾಯಕವಾದ ಶ್ರೀಕೃಷ್ಣಸೇವೆಯೇ ಮೂಲಕಾರಣವೆನಿಸುವುದು.

೧೪೧. ಪುರಾಣಗಳಲ್ಲಿಯೂ, ಚತುರ್ವೇದಗಳಲ್ಲಿಯೂ, ಇತಿಹಾಸದಲ್ಲಿಯೂ, ಶ್ರೀಕೃಷ್ಣನ ಪಾದಕಮಲವನ್ನು ಪೂಜಿಸುವುದೇ ಸಾರಭೂತವಾದುದೆಂದು ನಿರೂಪಿತವಾಗಿದೆ.

೧೪೨–೧೪೩. ಎಲೌ ಸಾವಿತ್ರೀದೇವಿಯೇ, ಶ್ರೀಕೃಷ್ಣಪರಮಾತ್ಮನ ವರ್ಣನೆಯೂ, ಧ್ಯಾನವೂ, ನಾಮಗುಣಸಂಕೀರ್ತನೆಯೂ, ಸ್ತೋತ್ರವೂ, ಸ್ಮರಣೆಯೂ,

ತತ್ಪಾದೋದಕನೈವೇದ್ಯಭಕ್ಷಣಂ ನಿತ್ಯಮೇವ ಚ ।
ಸರ್ವಸಮ್ಮತಮಿತ್ಯೇವಂ ಸರ್ವೇಪ್ಸಿತಮಿದಂ ಸತಿ ॥ ೧೪೩ ॥

ಭಜ ಕೃಷ್ಣಂ ಪರಂ ಬ್ರಹ್ಮ ನಿರ್ಗುಣಂ ಪ್ರಕೃತೇಃ ಪರಂ ।
ಗೃಹಾಣ ಸ್ವಾಮಿನಂ ವತ್ಸೇ ಸುಖಂ ಗಚ್ಛ ಸ್ವಮಂದಿರಂ ॥ ೧೪೪ ॥

ಏತತ್ತೇ ಕಥಿತಂ ಸರ್ವಂ ವಿಪಾಕಂ ಕರ್ಮಣಾಂ ನೃಣಾಂ ।
ಸರ್ವೇಪ್ಸಿತಂ ಸರ್ವಮತಂ ಪರಂ ತತ್ವಪ್ರದಂ ನೃಣಾಂ ॥ ೧೪೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಸಾವಿತ್ರೀಯಮಸಂವಾದೇ ಸಾವಿತ್ರ್ಯುಪಾಖ್ಯಾನೇ ಶುಭಕರ್ಮವಿಪಾಕಪ್ರಕಥನಂ ನಾಮ ಸಪ್ತವಿಂಶತಿತಮೋಽಧ್ಯಾಯಃ

ವಂದನೆ ಮತ್ತು ಜಪವೂ, ನಿತ್ಯವೂ ಆ ಪರಮಾತ್ಮನ ಪಾದೋದಕ ಮತ್ತು ನೈವೇದ್ಯವನ್ನು ಭುಜಿಸುವುದೂ, ಸಕಲರಿಗೂ ಅಭೀಷ್ಟವಾದುದು ಮತ್ತು ಸಮ್ಮತವಾದುದು.

೧೪೪. ಆದುದರಿಂದ ನಿರ್ಗುಣನೂ, ಪ್ರಕೃತಿಗಿಂತ ಶ್ರೇಷ್ಠನೂ ಆದ ಶ್ರೀಕೃಷ್ಣ ಪರಬ್ರಹ್ಮನನ್ನು ಭಜಿಸು. ನಿನ್ನ ಪತಿಯನ್ನು ಸ್ವೀಕರಿಸಿ ನಿನ್ನ ಮಂದಿರಕ್ಕೆ ಹಿಂದಿರುಗು.

೧೪೫. ಸಕಲರಿಗೂ ಅಭೀಪ್ಸಿತವೂ, ಸಂಮತವೂ, ತತ್ವಬೋಧಕವೂ ಆದ ಮನುಷ್ಯರ ಕರ್ಮವಿಪಾಕವನ್ನು ನಿನಗೆ ವಿವರಿಸಿದೆನು. ಇದನ್ನು ತಿಳಿದು ಸುಖವಾಗಿ ಬಾಳು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಸಾವಿತ್ರೀ ಯಮರ ಸಂವಾದದಲ್ಲಿ ಶುಭಕರ್ಮಗಳ ವಿಪಾಕಬೋಧಕವಾದ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೇಳನೆಯ ಅಧ್ಯಾಯದ ಸಾರಾಂಶವು

'ಮನುಜರು ಯಾವ ಯಾವ ಕರ್ಮವಾಡಿದರೆ ಯಾವ ಯಾವ ಲೋಕವನ್ನು ಹೊಂದುವರು' ಎಂದು ಕೇಳಿದ ಸಾವಿತ್ರಿಯ ಪ್ರಶ್ನೆಗೆ ಯಮನು ಕೊಟ್ಟ ಉತ್ತರವು ಈ ಅಧ್ಯಾಯದಲ್ಲಿ ವಿಶದವಾಗಿದೆ. ಪ್ರತಿಯೊಬ್ಬ ಜೀವಿಯೂ ತನ್ನ ಕರ್ಮಾನುಗುಣವಾದ ಫಲವನ್ನು ಅನುಭವಿಸಿಯೇ ತೀರಬೇಕು. ನಿಷ್ಕಾಮ ಕರ್ಮವನ್ನು ಮಾಡಿದರೆ ಫಲಭೋಗದ ಅವಶ್ಯಕತೆಯಿಲ್ಲದೆ ಶಾಶ್ವತಮುಕ್ತಿಯನ್ನು ಪಡೆಯಬಹುದು. ದಾನಗಳಲ್ಲೆಲ್ಲ ಗೋದಾನ, ಭೂದಾನ ಮತ್ತು ಸುವರ್ಣ ದಾನಗಳು ಶ್ರೇಷ್ಠವಾಗಿರುವಂತೆ ಯಾಗಗಳಲ್ಲೆಲ್ಲ ವಿಷ್ಣುಯಾಗವು ಶ್ರೇಷ್ಠವಾದುದು. ವಿಷ್ಣುಯಾಗವನ್ನು ಆಚರಿಸುವ ವೈಷ್ಣವನು ಪುನರ್ಜನ್ಮವನ್ನು ಹೊಂದುವುದಿಲ್ಲ. ಚಿರಕಾಲ ವೈಕುಂಠದಲ್ಲಿ ನೆಲೆಸಿರುವನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಅಷ್ಟಾವಿಂಶತಿತಮೋಽಧ್ಯಾಯಃ ||

|| ಶ್ರೀ ನಾರಾಯಣ ಉವಾಚ ||

ಹರೇರುತ್ಕೀರ್ತನಂ ಶ್ರುತ್ವಾ ಸಾವಿತ್ರೀ ಯಮವಕ್ತ್ರತಃ |
ಸಾಶ್ರುನೇತ್ರಾ ಸಪುಲಕಾ ಯಮಂ ಪುನರುವಾಚ ಸಾ || ೧ ||

|| ಸಾವಿತ್ರ್ಯುವಾಚ ||

ಹರೇರುತ್ಕೀರ್ತನಂ ಧರ್ಮ ಸ್ವಕುಲೋದ್ಧಾರಕಾರಣಂ |
ಶ್ರೋತ್ರೃಣಾಂ ಚೈವ ವಕ್ತೃಣಾಂ ಜನ್ಮಮೃತ್ಯುಜರಾಹರಂ || ೨ ||

ಇಪ್ಪತ್ತೆಂಟನೆಯ ಅಧ್ಯಾಯವು

೧. ಶ್ರೀನಾರಾಯಣ :–ಎಲೈ ನಾರದನೇ, ಸಾವಿತ್ರಿಯು ಯಮನ ಬಾಯಿಂದ ಶ್ರೀಹರಿಯ ನಾಮಸಂಕೀರ್ತನವನ್ನು ಕೇಳಿ, ಆನಂದಾಶ್ರುಭರಿತಳೂ, ರೋಮಾಂಚಿತ ಶರೀರಳೂ, ಆಗಿ ಪುನಃ ಯಮನನ್ನು ಕುರಿತಿಂತೆಂದಳು.

೨. ಸಾವಿತ್ರೀ :—ಎಲೈ ಧರ್ಮರಾಜನೇ, ಶ್ರೀಹರಿಯ ನಾಮಸಂಕೀರ್ತನವು, ಧರ್ಮಕರವೂ, ಕುಲೋದ್ಧಾರಕವೂ, ಆಗಿರುವುದು. ಹೇಳಿಕೇಳುವವರ ಜರಾ ಮೃತ್ಯುಗಳನ್ನೂ, ಜನನವನ್ನೂ, ನಾಶಗೊಳಿಸುವುದು.

ದಾನಾನಾಂ ಚ ವ್ರತಾನಾಂ ಚ ಸಿದ್ಧೀನಾಂ ತಪಸಾಂ ಪರಂ |
ಯೋಗಾನಾಂ ಚೈವ ವೇದಾನಾಂ ಸೇವನಂ ಕೀರ್ತನಂ ಹರೇಃ || ೩ ||

ಮುಕ್ತತ್ವಮಮರತ್ವಂ ವಾ ಸರ್ವಸಿದ್ಧಿತ್ವಮೇವ ವಾ |
ಶ್ರೀಕೃಷ್ಣಸೇವನಸ್ಯೈವ ಕಲಾಂ ನಾರ್ಹಂತಿ ಷೋಡಶೀಂ || ೪ ||

ಭಜಾಮಿ ಕೇನ ವಿಧಿನಾ ಶ್ರೀಕೃಷ್ಣಂ ಪ್ರಕೃತೇಃ ಪರಂ |
ಮೂಢಾಂ ಮಾಮಬಲಾಂ ತಾತ ವದ ವೇದವಿದಾಂ ವರ || ೫ ||

ಶುಭಕರ್ಮವಿಪಾಕಂ ಚ ಶ್ರುತಂ ನೃಣಾಂ ಮನೋಹರಂ |
ಕರ್ಮಾಶುಭವಿಪಾಕಂ ಚ ತನ್ಮೇ ವ್ಯಾಖ್ಯಾತುಮರ್ಹಸಿ || ೬ ||

---

೩. ಶ್ರೀಹರಿಯ ನಾಮಸಂಕೀರ್ತನದಿಂದಲೇ ಸಕಲ ದಾನ, ವ್ರತ ಮತ್ತು ತಪಸ್ಸುಗಳ ಸಿದ್ಧಿಯು ಕೈಗೂಡುವುದು. ವೇದಾಭ್ಯಾಸಯೋಗಾಭ್ಯಾಸಗಳ ಫಲವು ಹರಿಸೇವೆಯಿಂದಲೇ ಲಭಿಸುವುದು

೪. ಜೀವನ್ಮುಕ್ತಿ, ದೇವತಾಸ್ವರೂಪ ಮತ್ತು ಸಕಲ ಸಿದ್ಧಿಗಳೂ ಕೂಡ ಶ್ರೀಕೃಷ್ಣಪರಮಾತ್ಮನ ಸೇವೆಮಾಡುವುದರ ಹದಿನಾರನೆಯ ಒಂದು ಭಾಗದಷ್ಟು ಫಲವನ್ನೂ ಕೊಡುವುದಿಲ್ಲ.

೫. ಎಲೈ ವೇದವೇದಾಂಗಪಾರಂಗತನಾದ ಯಮಧರ್ಮರಾಯನೇ, ಪ್ರಕೃತಿಗೆ ಪರನಾದ ಶ್ರೀಕೃಷ್ಣಪರಮಾತ್ಮನನ್ನು ಯಾವ ರೀತಿಯಲ್ಲಿ ಭಜಿಸಲಿ ಎಂಬುದನ್ನು ಮೂಢಳೂ. ಅಬಲೆಯೂ ಆದ ನನಗೆ ತಿಳಿಸು.

೬. ನರರ ಶುಭಕರ್ಮಗಳ ಪರಿಪಾಕವು ಬಹಳ ವಿಚಿತ್ರವಾಗಿರುವುದನ್ನು ನಿನ್ನಿಂದ ತಿಳಿದುದಾಯಿತು ಅಶುಭಕರ್ಮಗಳ ದುರ್ವಿಪಾಕವನ್ನು ದಯವಿಟ್ಟು ನನಗೆ ವಿವರಿಸಬೇಕು.

ಇತ್ಯುಕ್ತ್ವಾ ಸಾ ಸತೀ ಬ್ರಹ್ಮನ್ ಭಕ್ತಿನಮ್ರಾತ್ಮಕಂಧರಾ ।
ತುಷ್ಟಾವ ಧರ್ಮರಾಜಂ ಚ ವೇದೋಕ್ತೇನ ಸ್ತವೇನ ಚ　　॥ ೭ ॥

॥ ಸಾವಿತ್ರ್ಯುವಾಚ ॥

ತಪಸಾ ಧರ್ಮಮಾರಾಧ್ಯ ಪುಷ್ಕರೇ ಭಾಸ್ಕರಃ ಪುರಾ ।
ಧರ್ಮಾಂಶಂ ಯಂ ಸುತಂ ಪ್ರಾಪ ಧರ್ಮರಾಜಂ ನಮಾಮ್ಯಹಂ　　॥ ೮ ॥

ಸಮತಾ ಸರ್ವಭೂತೇಷು ಯಸ್ಯ ಸರ್ವಸ್ಯ ಸಾಕ್ಷಿಣಃ ।
ಅತೋ ಯನ್ನಾಮ ಶಮನಮಿತಿ ತಂ ಪ್ರಣಮಾಮ್ಯಹಂ　　॥ ೯ ॥

ಯೇನಾಂತಶ್ಚ ಕೃತೋ ವಿಶ್ವೇ ಸರ್ವೇಷಾಂ ಜೀವಿನಾಂ ಪರಂ ।
ಕರ್ಮಾನುರೂಪಕಾಲೇನ ತಂ ಕೃತಾಂತಂ ನಮಾಮ್ಯಹಂ　　॥ ೧೦ ॥

ಬಿಭರ್ತಿ ದಂಡಂ ದಂಡ್ಯಾಯ ಪಾಪಿನಾಂ ಶುದ್ಧಿಹೇತವೇ ।
ನಮಾಮಿ ತಂ ದಂಡಧರಂ ಯಃ ಶಾಸ್ತಾ ಸರ್ವಕರ್ಮಣಾಂ　　॥ ೧೧ ॥

---

೭. ಎಲೈ ನಾರದನೇ, ಪತಿವ್ರತೆಯಾದ ಆ ಸಾವಿತ್ರಿಯು ಭಕ್ತಿಯಿಂದ ತನ್ನ ತಲೆಯನ್ನು ತಗ್ಗಿಸಿಕೊಂಡು ಇಂತು ನುಡಿದು ವೇದೋಕ್ತವಾದ ರೀತಿಯಲ್ಲಿ ಯಮಧರ್ಮರಾಯನನ್ನು ಹೊಗಳಲು ಪ್ರಾರಂಭಮಾಡಿದಳು.

೮ ಸಾವಿತ್ರಿ : —ಪೂರ್ವದಲ್ಲಿ ಸೂರ್ಯದೇವನು ಪುಷ್ಕರಕ್ಷೇತ್ರದಲ್ಲಿ ತಪಸ್ಸಿನಿಂದ ಧರ್ಮರಾಜನನ್ನು ಮೆಚ್ಚಿಸಿ, ಧರ್ಮಾಂಶಸಂಭೂತನಾದ ಶಿಶುವನ್ನು ಯಾರಿಂದ ಪಡೆದನೋ ಅಂಥ ಧರ್ಮರಾಯನಿಗೆ ನಮಿಸುವೆನು.

೯. ಸರ್ವಸಾಕ್ಷಿಯಾದ ಯಾವ ಯಮಧರ್ಮರಾಯನು ಸರ್ವಪ್ರಾಣಿಗಳಲ್ಲೂ ಸಮನಾಗಿರುವುದರಿಂದ, ಶಮನನೆಂದು ಪ್ರಖ್ಯಾತನಾಗಿರುವನೋ, ಆ ಶಮನನಿಗೆ ನಮಸ್ಕರಿಸುವೆನು.

೧೦. ಕಾಲಕರ್ಮಾನುಸಾರವಾಗಿ ವಿಶ್ವದಲ್ಲಿರುವ ಸಮಸ್ತ ಜೀವಿಗಳಿಗೂ, ಅಂತಕನಾಗಿರುವುದರಿಂದ, ಕೃತಾಂತನೆನಿಸಿಕೊಂಡಿರುವ ನಿನಗೆ ವಂದಿಸುವೆನು.

೧೧. ಶಿಕ್ಷಾರ್ಹರ ಶಿಕ್ಷೆಗೂ, ಪಾಪಿಗಳ ಪರಿಶುದ್ಧಿಗೂ, ದಂಡವನ್ನು ಧರಿಸಿ ದಂಡಧರನೆನಿಸಿ, ಸರ್ವಕರ್ಮಗಳನ್ನೂ ನಿಯಮಿಸುವ ನಿನಗೆ ಅನಂತ ವಂದನೆಗಳು.

ವಿಶ್ವೇ ಯಃ ಕಲಯತ್ಯೇವ ಸರ್ವಾಯುಶ್ಚಾಪಿ ಸಂತತಂ ।
ಅತೀವ ದುರ್ನಿವಾರ್ಯಂ ಚ ತಂ ಕಾಲಂ ಪ್ರಣಮಾಮ್ಯಹಂ ॥ ೧೨ ॥

ತಪಸ್ವೀ ವೈಷ್ಣವೋ ಧರ್ಮಿ ಸಂಯಮೀ ವಿಜಿತೇಂದ್ರಿಯಃ ।
ಜೀವಿನಾಂ ಕರ್ಮಫಲದಂ ತಂ ಯಮಂ ಪ್ರಣಮಾಮ್ಯಹಂ ॥ ೧೩ ॥

ಸ್ವಾತ್ಮಾರಾಮಶ್ಚ ಸರ್ವಜ್ಞೋ ಮಿತ್ರಂ ಪುಣ್ಯಕೃತಾಂ ಭವೇತ್ ।
ಪಾಪಿನಾಂ ಕ್ಲೇಶದೋ ಯಶ್ಚ ಪುಣ್ಯಂ ಮಿತ್ರಂ ನಮಾಮ್ಯಹಂ ॥ ೧೪ ॥

ಯಜ್ಜನ್ಮ ಬ್ರಹ್ಮಣೋ ವಂಶೇ ಜ್ವಲಂತಂ ಬ್ರಹ್ಮತೇಜಸಾ ।
ಯೋ ಧ್ಯಾಯತಿ ಪರಂಬ್ರಹ್ಮ ಬ್ರಹ್ಮವಂಶಂ ನಮಾಮ್ಯಹಂ ॥ ೧೫ ॥

---

೧೨. ವಿಶ್ವದಲ್ಲಿರುವ ಸಕಲ ಪ್ರಾಣಿಗಳ ಆಯುಸ್ಸನ್ನು ಗಣನೆಮಾಡುವುದರಿಂದಲೇ ಕಾಲನೆನಿಸಿಕೊಂಡು ಎಲ್ಲರಿಗೂ ದುರ್ನಿವಾರ್ಯನಾಗಿರುವ ಕಾಲಪುರುಷನಿಗೆ ವಂದಿಸುವೆನು.

೧೩. ತಪಸ್ವಿಯೂ, ಪರಮವೈಷ್ಣವನೂ, ಧರ್ಮಪರನೂ, ಇಂದ್ರಿಯನಿಗ್ರಹಿಯೂ, ಜೀವಿಗಳ ಕರ್ಮಫಲದಾಯಕನೂ, ಆಗಿರುವುದರಿಂದ ಯಮನೆನಿಸುವ ನಿನಗೆ ವಂದಿಸುವೆನು.

೧೪. ಸ್ವಾತ್ಮಾರಾಮನೂ, ಸರ್ವಜ್ಞನೂ, ಪುಣ್ಯವಂತರಿಗೆ ಮಿತ್ರನೂ, ಪಾಪಿಗಳಿಗೆ ಕ್ಲೇಶದಾಯಕನೂ. ಆಗಿರುವುದರಿಂದ ಪುಣ್ಯನೂ, ಮಿತ್ರನೂ ಎನಿಸಿಕೊಂಡ ನಿನಗೆ ವಂದಿಸುವೆನು.

೧೫. ಯಾರು ಬ್ರಹ್ಮನ ವಂಶದಲ್ಲಿ ಜನಿಸಿ, ಬ್ರಹ್ಮತೇಜಸ್ಸಿನಿಂದ ಮೆರೆಯುತ್ತಾ, ಯಾವಾಗಲೂ ಪರಬ್ರಹ್ಮನನ್ನು ಧ್ಯಾನವ ಾಡುವನೋ, ಅಂಥ ಬ್ರಹ್ಮವಂಶಜನಿಗೆ ವಂದಿಸುವೆನು

ಇತ್ಯುಕ್ತ್ವಾ ಸಾ ಚ ಸಾವಿತ್ರೀ ಪ್ರಣನಾಮ ಯಮಂ ಮುನೇ ।
ಯಮಸ್ತಾಂ ವಿಷ್ಣುಭಜನಂ ಕರ್ಮಪಾಕಮುವಾಚ ಹ　　　॥ ೧೬ ॥

ಇದಂ ಯಮಾಷ್ಟಕಂ ನಿತ್ಯಂ ಪ್ರಾತರುತ್ಥಾಯ ಯಃ ಪಠೇತ್ ।
ಯಮಾತ್ತಸ್ಯ ಭಯಂ ನಾಸ್ತಿ ಸರ್ವಪಾಪಾತ್ಪ್ರಮುಚ್ಯತೇ　　　॥ ೧೭ ॥

ಮಹಾಪಾಪೀ ಯದಿ ಪಠೇನ್ನಿತ್ಯಂ ಭಕ್ತ್ಯಾ ಚ ನಾರದ ।
ಯಮಃ ಕರೋತಿ ತಂ ಶುದ್ಧಂ ಕಾಯವ್ಯೂಹೇನ ನಿಶ್ಚಿತಂ　　　॥ ೧೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಸಾವಿತ್ರೀಕೃತ ಯಮಸ್ತೋತ್ರಂ
ನಾಮ ಅಷ್ಟಾವಿಂಶತಿತಮೋಽಧ್ಯಾಯಃ

---

೧೬. ಎಲೈ ಮುನಿಯೇ, ಇಂತು ನುಡಿದು ಸಾವಿತ್ರಿಯು ಯಮನಿಗೆ ನಮಸ್ಕರಿಸಿದಳು. ಯಮನು ಅವಳಿಗೆ ವಿಷ್ಣುಭಜನೆಯ ಕ್ರಮವನ್ನೂ, ಕರ್ಮ ದುರ್ವಿಪಾಕವನ್ನೂ ಹೇಳಿದನು.

೧೭. ಯಮನನ್ನು ಕುರಿತ ಈ ಎಂಟು ಪದ್ಯಗಳನ್ನು ಪ್ರಾತಃಕಾಲದಲ್ಲಿ ಎದ್ದು ಪಠಿಸುವವರಿಗೆ ಯಮನಿಂದ ಯಾವ ಭಯವೂ ಇಲ್ಲ. ಅಲ್ಲದೆ ಸಕಲ ಪಾಪ ಗಳಿಂದಲೂ ಅವರು ಮುಕ್ತರಾಗುವರು.

೧೮. ಎಲೈ ನಾರದನೇ, ನಿತ್ಯವೂ ಭಕ್ತಿಯಿಂದ ಮಹಾಪಾಪಿಯು, ಈ ಸ್ತೋತ್ರವನ್ನು ಪಠಿಸಿದರೂ ಕೂಡ ಯಮನು ಅವನಿಗೆ ಜನ್ಮಾಂತರಗಳಿಲ್ಲದಂತೆ ಶುದ್ಧನನ್ನಾಗಿ ಮಾಡುವುದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಸಾವಿತ್ರೀಕೃತವಾದ
ಯಮನ ಸ್ತೋತ್ರವನ್ನು ತಿಳಿಸುವ ಇಪ್ಪತ್ತೆಂಟನೆಯ ಅಧ್ಯಾಯವು
ಮುಗಿದುದು.

ಇಪ್ಪತ್ತೆಂಟನೆಯ ಅಧ್ಯಾಯದ ಸಾರಾಂಶವು

ಶ್ರೀಕೃಷ್ಣಪರಮಾತ್ಮನನ್ನು ಭಜಿಸುವ ಕ್ರಮವನ್ನೂ, ದುಷ್ಕರ್ಮಗಳ ದುರ್ವಿಪಾಕವನ್ನೂ ತಿಳಿಸಬೇಕೆಂದು ಕೇಳಿ, ಸಾವಿತ್ರಿಯು ಯಮಧರ್ಮರಾಯನನ್ನು ಎಂಟು ಪದ್ಯಗಳಿಂದ ಸ್ತುತಿಸಿದಳು. ಸಂತುಷ್ಟನಾದ ಯಮಧರ್ಮರಾಯನು ಸಾವಿತ್ರಿಗೆ ವಿಷ್ಣುಭಜನೆಯ ಕ್ರಮವನ್ನೂ, ದುಷ್ಕರ್ಮಗಳ ದುರ್ವಿಪಾಕವನ್ನೂ ತಿಳಿಸಿದನು. ಉದಯಕಾಲದಲ್ಲಿ ಈ ಎಂಟು ಪದ್ಯಗಳಿಂದ ಯಮನನ್ನು ಸ್ತುತಿಸುವವರು ಸಕಲಪಾಪಗಳಿಂದ ಮೃತ್ಯುಂಜಯರಾಗುವರು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಏಕೋನತ್ರಿಂಶತ್ತಮೋಽಧ್ಯಾಯಃ ||

|| ಶ್ರೀ ನಾರಾಯಣ ಉವಾಚ ||

ಯಮಸ್ತಸ್ಯೈ ವಿಷ್ಣುಮಂತ್ರಂ ದತ್ವಾ ಚ ವಿಧಿಪೂರ್ವಕಂ |
ಕರ್ಮಾಶುಭವಿಪಾಕಂ ಚ ತಾಮುವಾಚ ರವೇಃ ಸುತಃ || ೧ ||

|| ಯಮ ಉವಾಚ ||

ಶುಭಕರ್ಮವಿಪಾಕಂ ಚ ಶ್ರುತಂ ನಾನಾವಿಧಂ ಸತಿ |
ಕರ್ಮಾಶುಭವಿಪಾಕಂ ಚ ಕಥಯಾಮಿ ನಿಶಾಮಯ || ೨ ||

ನಾನಾಪ್ರಕಾರಂ ಸ್ವರ್ಗಂ ಚ ಯಾತಿ ಜೀವಃ ಸುಕರ್ಮಣಾ |
ಕುಕರ್ಮಣಾ ಚ ನರಕಂ ಯಾತಿ ನಾನಾವಿಧಂ ನರಃ || ೩ ||

ಇಪ್ಪತ್ತೊಂಭತ್ತನೆಯ ಅಧ್ಯಾಯವು

೧. ಶ್ರೀ ನಾರಾಯಣ :—ಸೂರ್ಯಪುತ್ರನಾದ ಯಮಧರ್ಮರಾಯನು ಸಾವಿತ್ರೀದೇವಿಗೆ ವಿಷ್ಣುಮಂತ್ರವನ್ನು ವಿಧಿಪೂರ್ವಕವಾಗಿ ಉಪದೇಶಿಸಿ ಆಕೆಯನ್ನು ಕುರಿತು ಅಶುಭಕರ್ಮಗಳ ದುರ್ವಿಪಾಕವನ್ನು ವಿವರಿಸಿದನು.

೨. ಯಮ :—ಎಲೌ ಸತೀಶಿರೋಮಣಿಯೇ, ಶುಭಕರ್ಮಗಳ ನಾನಾವಿಧ ಸದ್ವಿಪಾಕಗಳನ್ನು ಇದುವರೆಗೂ ನೀನು ಕೇಳಿದೆ. ಈಗ ಅಶುಭಕರ್ಮಗಳ ದುರ್ವಿಪಾಕವನ್ನು ವಿವರಿಸುವೆನು, ಕೇಳು.

೩. ಮನುಷ್ಯನು ಸತ್ಕರ್ಮಮಾಡಿ ವಿವಿಧವಾದ ಸ್ವರ್ಗಲೋಕವನ್ನು ಪಡೆಯುವಂತೆ ದುಷ್ಕರ್ಮಮಾಡಿ ವಿವಿಧವಾದ ನರಕಲೋಕವನ್ನು ಪಡೆಯುವನು.

ನರಕಾಣಾಂ ಚ ಕುಂಡಾನಿ ಸಂತಿ ನಾನಾವಿಧಾನಿ ಚ ।
ನಾನಾಪುರಾಣಭೇದೇನ ನಾಮಭೇದಾನಿ ತಾನಿ ಚ ॥ ೪ ॥

ವಿಸ್ತೃತಾನಿ ಗಭೀರಾಣಿ ಕ್ಲೇಶದಾನಿ ಚ ಜೀವಿನಾಂ ।
ಭಯಂಕರಾಣಿ ಘೋರಾಣಿ ಹೇ ವತ್ಸೇ ಕುತ್ಸಿತಾನಿ ಚ ॥ ೫ ॥

ಷಡಶೀತಿಶ್ಚ ಕುಂಡಾನಿ ಸಂಯಮನ್ಯಾಂ ಚ ಸಂತಿ ಚ ।
ನಿಬೋಧ ತೇಷಾಂ ನಾಮಾನಿ ಪ್ರಸಿದ್ಧಾನಿ ಶ್ರುತೌ ಸತಿ ॥ ೬ ॥

ವಹ್ನಿಕುಂಡಂ ತಪ್ತಕುಂಡಂ ಕ್ಷಾರಕುಂಡಂ ಭಯಾನಕಂ ।
ವಿಟ್‌ಕುಂಡಂ ಮೂತ್ರಕುಂಡಂ ಚ ಶ್ಲೇಷ್ಮಕುಂಡಂ ಚ ದುಃಸಹಂ ॥ ೭ ॥

ಗರಕುಂಡಂ ದೂಷಿಕಾಕುಂಡಂ ವಸಾಕುಂಡಂ ತಥೈವ ಚ ।
ಶುಕ್ರಕುಂಡಮಸೃಕ್ಕುಂಡಮಶ್ರುಕುಂಡಂ ಚ ಕುತ್ಸಿತಂ ॥ ೮ ॥

---

೪. ಪುರಾಣಗಳ ಭೇದದಿಂದ ಭಿನ್ನನಾಮಗಳುಳ್ಳ ನಾನಾವಿಧ ಕುಂಡಗಳು ಪ್ರಸಿದ್ಧವಾಗಿವೆ.

೫. ಎಲೌ ವತ್ಸೆಯಾದ ಸಾವಿತ್ರಿಯೇ, ಆ ನರಕಗಳು ವಿಸ್ತಾರವಾಗಿಯೂ, ಗಂಭೀರವಾಗಿಯೂ, ಜೀವಿಗಳಿಗೆ ಕ್ಲೇಶದಾಯಕವಾಗಿಯೂ, ಭಯಂಕರವಾಗಿಯೂ, ಘೋರವಾಗಿಯೂ, ಅತಿಕುತ್ಸಿತವಾಗಿಯೂ ಇವೆ

೬. ಯಮನ ರಾಜಧಾನಿಯಾದ ಸಂಯಮಿನೀಪಟ್ಟಣದಲ್ಲಿ ಎಂಭತ್ತು ನಾಲ್ಕು ನರಕಕುಂಡಗಳಿವೆ. ಶ್ರುತಿಪ್ರಸಿದ್ಧವಾದ ಅವುಗಳ ಹೆಸರನ್ನು ಹೇಳುವೆನು ಕೇಳು.

೭–೮. ವಹ್ನಿಕುಂಡತಪ್ತಕುಂಡಗಳೂ ಭಯಾನಕವಾದ ಕ್ಷಾರಕುಂಡ ವಿಣ್ಮೂತ್ರಕುಂಡಗಳೂ, ದುಸ್ಸಹವಾದ ಶ್ಲೇಷ್ಮಕುಂಡವೂ, ಗರ, ದೂಷಿಕಾ ಮತ್ತು ವಸಾಕುಂಡಗಳೂ, ಶುಕ್ರ, ಅಸೃಕ್, ಅಶ್ರುಕುಂಡಗಳೂ, ಕುತ್ಸಿತವಾಗಿವೆ.

ಕುಂಡಂ ಗಾತ್ರಮಲಾನಾಂ ಚ ಕರ್ಣವಿಟ್ಕುಂಡಮೇವ ಚ ।
ಮಜ್ಜಾಕುಂಡಂ ಮಾಂಸಕುಂಡಂ ನಖಕುಂಡಂ ಚ ದುಸ್ತರಂ ॥ ೯ ॥

ಲೋಮ್ನಾಂ ಕುಂಡಂ ಕೇಶಕುಂಡಮಸ್ಥಿಕುಂಡಂ ಚ ದುಃಖದಂ ।
ತಾಮ್ರಕುಂಡಂ ಲೌಹಕುಂಡಂ ಪ್ರತಪ್ತಂ ಕ್ಲೇಶದಂ ಮಹತ್ ॥ ೧೦ ॥

ತೀಕ್ಷ್ಣಕಂಟಕಕುಂಡಂ ಚ ವಿಷಕುಂಡಂ ಚ ವಿಘ್ನದಂ ।
ಘರ್ಮಕುಂಡಂ ತಪ್ತಸುರಾಕುಂಡಂ ಚಾಪಿ ಪ್ರಕೀರ್ತಿತಂ ॥ ೧೧ ॥

ಪ್ರತಪ್ತತೈಲಕುಂಡಂ ಚ ದಂತಕುಂಡಂ ಚ ದುರ್ವಹಂ ।
ಕೃಮಿಕುಂಡಂ ಪೂಯಕುಂಡಂ ಸರ್ಪಕುಂಡಂ ದುರಂತಕಂ ॥ ೧೨ ॥

ಮಶಕುಂಡಂ ದಂಶಕುಂಡಂ ಭೀಮಂ ಗರಲಕುಂಡಕಂ ।
ಕುಂಡಂ ಚ ವಜ್ರದಂಷ್ಟ್ರಾಣಾಂ ವೃಶ್ಚಿಕಾನಾಂ ಚ ಸುವ್ರತೇ ॥ ೧೩ ॥

ಶರಕುಂಡಂ ಶೂಲಕುಂಡಂ ಖಡ್ಗಕುಂಡಂ ಚ ಭೀಷಣಂ ।
ಗೋಲಕುಂಡಂ ನಕ್ರಕುಂಡಂ ಕಾಕಕುಂಡಂ ಶುಚಾಸ್ಪದಂ ॥ ೧೪ ॥

೯–೧೦. ಶರೀರಮಲಗಳಿಂದ ನಿರ್ಮಿತವಾದ ಕುಂಡ, ಕಿವಿಯ ಕೊಳೆಯಿಂದ ಪೂರಿತವಾದ ಕುಂಡ, ಮಜ್ಜಾ, ಮಾಂಸ, ನಖ, ಲೋಮ, ಕೇಶ, ಅಸ್ಥಿ ಮತ್ತು ಪ್ರತಪ್ತವಾದ ತಾಮ್ರ ಮುಂತಾದ ಲೋಹಗಳಿಂದ ಪೂರಿತವಾದ ಕುಂಡಗಳೂ ದುಃಖಕರವಾಗಿವೆ.

೧೧–೧೨. ತೀಕ್ಷ್ಣವಾದ ಕಂಟಕಕುಂಡ, ವಿಘ್ನಕರವಾದ ವಿಷಕುಂಡ, ಘರ್ಮಕುಂಡ, ಕಾಯಿಸಿದ ಮದ್ಯ ಮತ್ತು ಎಣ್ಣೆಯಕುಂಡ, ದುರ್ವಹವಾದ ದಂಶಕುಂಡ, ಕೃಮಿ, ಪೂಯ ಮತ್ತು ಸರ್ಪಗಳಿಂದ ಪೂರಿತವಾಗಿರುವ ಕುಂಡಗಳೂ ದುರಂತವಾಗಿವೆ.

೧೩–೧೪. ಸೊಳ್ಳೆ ತಿಗಣೆಗಳಿಂದಲೂ, ಭಯಂಕರವಾದ ವಿಷದಿಂದಲೂ. ವಜ್ರದಂಷ್ಟ್ರ ಕ್ರಿಮಿಗಳಿಂದಲೂ, ವೃಶ್ಚಿಕಗಳಿಂದಲೂ ಶರ, ಶೂಲ, ಖಡ್ಗ, ಗೋಲ, ನಕ್ರ ಮತ್ತು ಕಾಕಗಳಿಂದ ಪೂರಿತವಾದ ಕುಂಡಗಳೂ ದುಃಖಾಸ್ಪದವಾಗಿವೆ.

ಸಂಚಾಲಕುಂಡಂ ವಾಜಕುಂಡಂ ಬಂಧಕುಂಡಂ ಸುದುಸ್ತರಂ |
ತಪ್ತಪಾಷಾಣಕುಂಡಂ ಚ ತೀಕ್ಷ್ಣಪಾಷಾಣಕುಂಡಕಂ || ೧೫ ||

ಲಾಲಾಕುಂಡಮಸಿಕುಂಡಂ ಚೂರ್ಣಕುಂಡಂ ಸುದಾರುಣಂ |
ಚಕ್ರಕುಂಡಂ ವಜ್ರಕುಂಡಂ ಕೂರ್ಮಕುಂಡಂ ವಿಷೋಲ್ಬಣಂ || ೧೬ ||

ಜ್ವಾಲಾಕುಂಡಂ ಭಸ್ಮಕುಂಡಂ ಪೂತಿಕುಂಡಂ ಚ ಸುಂದರಿ |
ತಪ್ತಸೂರ್ಯಮಸೀಪತ್ರಂ ಕ್ಷುರಧಾರಂ ಸುಚೀಮುಖಂ । ೧೭ ||

ಗೋಧಾಮುಖಂ ನಕ್ರಮುಖಂ ಗಜದಂಶಂ ಚ ಗೋಮುಖಂ |
ಕುಂಭೀಪಾಕಂ ಕಾಲಸೂತ್ರಮವಟೋದಮರುಂತುದಂ || ೧೮ ||

ಪಾಂಶುಭೋಜಂ ಪಾಶವೇಷ್ಟಂ ಶೂಲಪ್ರೋತಂ ಪ್ರಕಂಪನಂ |
ಉಲ್ಕಾಮುಖಮಂಧಕೂಪಂ ವೇಧನಂ ದಂಡತಾಡನಂ || ೧೯ ||

ಜಾಲಬಂಧಂ ದೇಹಚೂರ್ಣಂ ದಲನಂ ಶೋಷಣಂ ಕರಂ |
ಸರ್ಪಜ್ವಾಲಾಮುಖಂ ಜಿಹ್ವಧೂಮಾಂಧಂ ನಾಗವೇಷ್ಟನಂ || ೨೦ ||

೧೫-೧೬. ಸಂಚಾಲಕುಂಡ, ವಾಜಕುಂಡ, ಬಂಧಕುಂಡ, ತಪ್ತಪಾಷಾಣ ಕುಂಡ, ತೀಕ್ಷ್ಣಪಾಷಾಣಕುಂಡ, ಜೊಲ್ಲು, ಅಸಿ ಮತ್ತು ಚೂರ್ಣಪೂರಿತವಾದ ಕುಂಡಗಳೂ ಚಕ್ರ, ವಜ್ರ ಮತ್ತು ಕೂರ್ಮಕುಂಡಗಳೂ ಮಹೋಲ್ಬಣವಾಗಿವೆ.

೧೭-೧೮. ಜ್ವಾಲಾಕುಂಡ, ಭಸ್ಮಕುಂಡ ಮತ್ತು ಪೂತಿಕುಂಡಗಳೂ ತಪ್ತ ಸೂರ್ಯ, ಅಸಿಪತ್ರ, ಕ್ಷುರಧಾರ, ಸೂಜೀಮುಖ, ಗೋಧಾಮುಖ, ನಕ್ರಮುಖ, ಗಜದಂಶ, ಗೋಮುಖ, ಕುಂಭೀಪಾಕ, ಕಾಲಸೂತ್ರ, ಅವಟೋದ ಮತ್ತು ಅರುಂತದ ಇವೆಲ್ಲವೂ ಸುಪ್ರಸಿದ್ಧ ನರಕಗಳು.

೧೯-೨೦. ಪಾಂಶುಭೋಜ, ಪಾಶವೇಷ್ಟ, ಶೂಲಪ್ರೋತ, ಪ್ರಕಂಪನ, ಉಲ್ಕಾಮುಖ, ಅಂಧಕೂಪ, ವೇಧನ, ದಂಡತಾಡನ, ಜಾಲಬಂಧ, ದೇಹಚೂರ್ಣ, ದಲನ, ಶೋಷಣಕರ, ಸರ್ಪಜ್ವಾಲಾಮುಖ, ಜಿಹ್ವಧೂಮಾಂಧ, ನಾಗವೇಷ್ಟನ ಇವೆಲ್ಲವೂ ನರಕಭೇದಗಳು.

ಕುಂಡಾನ್ಯೇತಾನಿ ಸಾವಿತ್ರಿ ಪಾಪಿನಾಂ ಕ್ಲೇಶದಾನಿ ಚ ।
ನಿಯುಕ್ತೈಃ ಕಿಂಕರಗಣೈಃ ರಕ್ಷಿತಾನಿ ಚ ಸಂತತಂ || ೨೧ ||

ದಂಡಹಸ್ತೈಃ ಶೂಲಹಸ್ತೈಃ ಪಾಶಹಸ್ತೈರ್ಭಯಂಕರೈಃ ।
ಶಕ್ತಿಹಸ್ತೈರ್ಗದಾಹಸ್ತೈರ್ಮದಮತ್ತೈಶ್ಚ ದಾರುಣೈಃ || ೨೨ ||

ತಮೋಯುಕ್ತೈರ್ದಯಾಹೀನೈರ್ದುರ್ನಿವಾರ್ಯೈಂ ಚ ಸರ್ವತಃ ।
ತೇಜಸ್ವಿಭಿಶ್ಚ ನಿಃಶಂಕೈಸ್ತಾಮ್ರಪಿಂಗಲಲೋಚನೈಃ || ೨೩ ||

ಯೋಗಯುಕ್ತೈಃ ಸಿದ್ಧಯೋಗೈರ್ನಾನಾರೂಪಧರೈರ್ವರೈಃ ।
ಆಸನ್ನಮೃತ್ಯುಭಿರ್ದೃಷ್ಟೈಃ ಪಾಪಿಭಿಃ ಸರ್ವಜೀವಿಭಿಃ || ೨೪ ||

ಸ್ವಕರ್ಮನಿರತೈಃ ಶೈವೈಃ ಶಾಕ್ತೈಃ ಸೌರೈಶ್ಚ ಗಾಣಪೈಃ ।
ಅದೃಷ್ಟೈಃ ಪುಣ್ಯಕೃದ್ಭಿಶ್ಚ ಸಿದ್ಧಯೋಗಿಭಿರೇವ ಚ || ೨೫ ||

---

೨೧. ಎಲೌ ಸಾವಿತ್ರಿಯೇ, ಪಾಪಿಗಳಿಗೆ ಕ್ಲೇಶದಾಯಕವಾದ ಈ ನರಕ ಕುಂಡಗಳು ನನ್ನಿಂದ ನಿಯಮಿಸಲ್ಪಟ್ಟಿರುವ ಕಿಂಕರರಿಂದ ಯಾವಾಗಲೂ ರಕ್ಷಿಸಲ್ಪಟ್ಟಿವೆ

೨೨. ಆ ಕಿಂಕರರು ದಂಡಹಸ್ತರೂ, ಶೂಲಹಸ್ತರೂ, ಪಾಶಹಸ್ತರೂ, ಗದಾಹಸ್ತರೂ, ಭಯಂಕರರೂ. ಮದಮತ್ತರೂ. ದಾರುಣರೂ ಆಗಿದ್ದಾರೆ.

೨೩. ಅಜ್ಞಾನಿಗಳಾದ ಅವರೆಲ್ಲರೂ ದಯಾರಹಿತರಾಗಿ ದುರ್ನಿವಾರ್ಯರಾಗಿದ್ದಾರೆ. ಅಲ್ಲದೆ ತೇಜಸ್ವಿಗಳಾದ ಅವರು ನಿರ್ಭಯರೂ, ತಾಮ್ರಪಿಂಗಲಲೋಚನರೂ ಆಗಿದ್ದಾರೆ.

೨೪. ಅವರೆಲ್ಲರೂ ಯೋಗಾರೂಢರೂ, ಸಿದ್ಧಯೋಗಿಗಳೂ, ನಾನಾರೂಪ ಧಾರಿಗಳೂ ಆಗಿ, ಪಾಪಿಗಳಾದ ಜೀವಿಗಳಿಗೆ ಮರಣಕಾಲ ಸಮೀಪಿಸಿದಾಗ ಮಾತ್ರ ಕಾಣಿಸುವರು.

೨೫ ಅಲ್ಲದೆ ಸ್ವಕರ್ಮನಿರತರಾದ ಶೈವರಿಗೂ. ಶಾಕ್ತರಿಗೂ, ಸೌರರಿಗೂ, ಗಾಣಪರಿಗೂ, ಪುಣ್ಯಕರ್ಮಿಗಳಿಗೂ, ಸಿದ್ಧಯೋಗಿಗಳಿಗೂ ಕಾಣದಿರುವರು.

ಸ್ವಧರ್ಮನಿರತೈರ್ವಾಪಿ ವಿರತೈರ್ವಾ ಸ್ವತಂತ್ರಕೈಃ ।
ಬಲವದ್ಭಿಶ್ಚ ನಿಃಶಂಕೈಃ ಸ್ವಪ್ನದೃಷ್ಟೈಶ್ಚ ವೈಷ್ಣವೈಃ ॥ ೨೬ ॥

ಏತತ್ತೇ ಕಥಿತಂ ಸಾಧ್ವಿ ಕುಂಡಸಂಖ್ಯಾನಿರೂಪಣಂ ।
ಯೇಷಾಂ ನಿವಾಸೋ ಯತ್ಕುಂಡೇ ನಿಬೋಧ ಕಥಯಾಮಿ ತೇ ॥ ೨೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಸಾವಿತ್ರ್ಯುಪಾಖ್ಯಾನೇ ಯಮ ಸಾವಿತ್ರೀಸಂವಾದೇ ನರಕಕುಂಡಸಂಖ್ಯಾನಂ ನಾಮ ಏಕೋನತ್ರಿಂಶತ್ತಮೋಽಧ್ಯಾಯಃ

---

೨೬. ಸ್ವಧರ್ಮನಿರತರಿಂದಲೂ, ವಿರತರಿಂದಲೂ, ಸ್ವತಂತ್ರರಿಂದಲೂ, ಬಲಿಷ್ಠರೂ, ನಿಃಶಂಕರೂ ಆದ ವೈಷ್ಣವರಿಂದಲೂ ಸ್ವಪ್ನದಲ್ಲಿ ಮಾತ್ರ ನೋಡಲ್ಪಡುವರು.

೨೭. ಎಲೌ ಸಾಧ್ವೀಶಿರೋಮಣಿಯೇ, ನರಕಕುಂಡಗಳ ಸಂಖ್ಯೆಯನ್ನು ನಿನಗೆ ನಿರೂಪಿಸಿದೆನು. ಈಗ ಯಾರು ಯಾವ ಯಾವ ಕುಂಡದಲ್ಲಿ ವಾಸಿಸುವರು ಎಂಬುದನ್ನು ಹೇಳುವೆನು ಕೇಳು

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಯಮ ಮತ್ತು ಸಾವಿತ್ರಿಯರ ಸಂವಾದದಲ್ಲಿ ' ನರಕಕುಂಡಗಳ ಸಂಖ್ಯಾನ 'ವೆಂಬ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೊಂಭತ್ತನೆಯ ಅಧ್ಯಾಯದ ಸಾರಾಂಶವು

ಯಮನ ರಾಜಧಾನಿಯಾದ ಸಂಯಮಿನೀಪಟ್ಟಣದಲ್ಲಿ ವಹ್ನಿಕುಂಡವೇ ಮುಂತಾದ ಎಂಭತ್ತುನಾಲ್ಕು ನರಕಕುಂಡಗಳಿವೆ. ಆ ಕುಂಡಗಳನ್ನು ಭಯಂಕರ ರಾದ ಯಮನ ಕಿಂಕರರು ರಕ್ಷಿಸಿಕೊಂಡಿದ್ದಾರೆ. ಅವರು ಪಾಪಿಗಳಿಗೆ ಮರಣಕಾಲ ಸಮೀಪಿಸಿದ ಕೂಡಲೇ ಕಣ್ಣಿಗೆ ಕಾಣಿಸಿಕೊಳ್ಳುತ್ತಾರೆ. ಸತ್ಯಧರ್ಮನಿರತರಾದವರ ಕಣ್ಣೆದುರಿನಲ್ಲಿ ಯಮಕಿಂಕರರು ಸುಳಿಯುವುದೂ ಇಲ್ಲ.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ತ್ರಿಂಶತ್ತಮೋಽಧ್ಯಾಯಃ ||

|| ಯಮ ಉವಾಚ ||

ಹರಿಸೇವಾರತಃ ಶುದ್ಧೋ ಯೋಗೀ ಸಿದ್ಧೋ ವ್ರತೀ ಸತಿ |
ತಪಸ್ವೀ ಬ್ರಹ್ಮಚಾರೀ ಚ ನ ಯಾತಿ ನರಕಂ ಯತಿಃ || ೧ ||

ಕಟುವಾಚಾ ಬಾಂಧವಾಂಶ್ಚ ಖಲತ್ವೇನ ಚ ಯೋ ನರಃ |
ದಗ್ಧಾನ್ಕರೋತಿ ಬಲವಾನ್ವಹ್ನಿಕುಂಡಂ ಪ್ರಯಾತಿ ಸಃ || ೨ ||

ಮೂವತ್ತನೆಯ ಅಧ್ಯಾಯವು

೧. ಯಮ:—ಎಲೌ ಸತೀದೇವಿಯೇ, ಹರಿಸೇವಾಪರನೂ, ಯೋಗಾಭ್ಯಾಸ ನಿರತನೂ, ವ್ರತಪರನೂ, ತಪಸ್ವಿಯೂ, ಬ್ರಹ್ಮಚಾರಿಯೂ ಮತ್ತು ಯತಿಯೂ ಕೂಡ ನರಕಕ್ಕೆ ಹೋಗುವುದಿಲ್ಲ.

೨. ಯಾವ ಮನುಷ್ಯನು ದುಷ್ಟನಾಗಿ ಕ್ರೂರವಾಕ್ಯಗಳಿಂದ ಬಂಧುಬಳಗದವರನ್ನು ನಿಂದಿಸಿ, ಅವರ ಮನಸ್ಸನ್ನು ದಹಿಸುವನೋ ಆ ದುಷ್ಟನು ವಹ್ನಿಕುಂಡವೆಂಬ ನರಕಕ್ಕೆ ಹೋಗುವನು.

ಗಾತ್ರಲೋಮಪ್ರಮಾಣಾಬ್ದಂ ತತ್ರ ಸ್ಥಿತ್ವಾ ಹುತಾಶನೇ ।
ಪಶುಯೋನಿಮವಾಪ್ನೋತಿ ರೌದ್ರೇ ದಗ್ಧಸ್ತ್ರಿಜನ್ಮನಿ ॥ ೩ ॥

ಬ್ರಾಹ್ಮಣಂ ತೃಷಿತಂ ಕ್ಷುಬ್ಧಂ ಪ್ರತಪ್ತಂ ಗೃಹಮಾಗತಂ ।
ನ ಭೋಜಯತಿ ಯೋ ಮೂಢಸ್ತಪ್ತಕುಂಡಂ ಪ್ರಯಾತಿ ಸಃ ॥ ೪ ॥

ತತ್ರ ಲೋಮಪ್ರಮಾಣಾಬ್ದಂ ಸ್ಥಿತ್ವಾ ತತ್ರ ಚ ದುಃಖಿತಃ ।
ತಪ್ತಸ್ಥಲೇ ವಹ್ನಿಕುಂಡೇ ಪಕ್ಷೀಚ ಸಪ್ತಜನ್ಮಸು ॥ ೫ ॥

ರವಿವಾರಾರ್ಕಸಂಕ್ರಾಂತ್ಯಾಮಮಾಯಾಂ ಶ್ರಾದ್ಧವಾಸರೇ ।
ವಸ್ತ್ರಾಣಾಂ ಕ್ಷಾರಸಂಯೋಗಂ ಕರೋತಿ ಯೋ ಹಿ ಮಾನವಃ ॥ ೬ ॥

ಸ ಯಾತಿ ಕ್ಷಾರಕುಂಡಂ ಚ ಸೂತ್ರಮಾನಾಬ್ದಮೇವ ಚ ।
ಸ ವ್ರಜೇದ್ರಾಜಕೀಂ ಯೋನಿಂ ಸಪ್ತಜನ್ಮಸು ಭಾರತೇ ॥ ೭ ॥

---

೩. ಶರೀರದ ರೋಮಪ್ರಮಾಣಗಳಿರುವಷ್ಟು ಕಾಲ ರೌದ್ರವಾದ ಆ ನರಕಾಗ್ನಿಯಲ್ಲಿ ಬೆಂದು ಅನಂತರ ಮೂರು ಜನ್ಮದಲ್ಲಿ ಪಶುವಾಗುವನು.

೪. ಹಸಿದು ಬಾಯಾರಿ, ಬಳಲಿ ಬೆಂಡಾಗಿ, ಮನೆಗೆ ಬಂದಿರುವ ಬ್ರಾಹ್ಮಣನನ್ನು ತೃಪ್ತಿಯಾಗಿ ಊಟಮಾಡಿಸದಿರುವ ಮೂಢನು ತಪ್ತಕುಂಡವೆಂಬ ನರಕಕ್ಕೆ ಹೋಗುವನು.

೫. ಕುದಿಯುತ್ತಿರುವ ಆ ತಪ್ತಕುಂಡದಲ್ಲಿ ತನ್ನ ಶರೀರದ ರೋಮಗಳಿರುವಷ್ಟು ಕಾಲ ಇದ್ದು ದುಃಖಿತನಾಗಿ ಅನಂತರ ಸಪ್ತಜನ್ಮಗಳಲ್ಲಿ ಪಕ್ಷಿಯಾಗಿ ಅಲೆಯುವನು.

೬–೭. ಭಾನುವಾರ, ಸೂರ್ಯಸಂಕ್ರಮಣ, ಅಮಾವಾಸ್ಯೆ ಮತ್ತು ಶ್ರಾದ್ಧ ದಿವಸಗಳಲ್ಲಿ ಬಟ್ಟೆಗಳಿಗೆ (ಕ್ಷಾರವಸ್ತು) ಚೌಳುಮಣ್ಣನ್ನು ಹಾಕುವ ಮನುಷ್ಯನು ಆ ಬಟ್ಟೆಯಲ್ಲಿ ಎಷ್ಟು ದಾರಗಳಿಯೋ ಅಷ್ಟು ವರ್ಷಗಳು ಕ್ಷಾರಕುಂಡವೆಂಬ ನರಕದಲ್ಲಿ ತೊಳಲಿ ಅನಂತರ ಭಾರತದಲ್ಲಿ ಏಳು ಜನ್ಮಗಳು ಕಳೆಯುವವರೆಗೂ ಅಗಸನಾಗಿರುವನು.

ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇತ್ತು ಯಃ ।
ಷಷ್ಟಿವರ್ಷಸಹಸ್ರಾಣಿ ವಿಟ್ಕುಂಡಂ ಚ ಪ್ರಯಾತಿ ಸಃ ॥ ೮ ॥

ಷಷ್ಟಿವರ್ಷಸಹಸ್ರಾಣಿ ವಿಡ್ಭೋಜೀ ತತ್ರ ತಿಷ್ಠತಿ ।
ಷಷ್ಟಿವರ್ಷಸಹಸ್ರಾಣಿ ವಿಟ್ಕೃಮಿಶ್ಚ ಪುನರ್ಭುವಿ ॥ ೯ ॥

ಪರಕೀಯುತಡಾಗೇ ಚ ತಡಾಗಂ ಯಃ ಕರೋತಿ ಚ ।
ಉತ್ಸೃಜೇದ್ದೈವದೋಷೇಣ ಮೂತ್ರಕುಂಡಂ ಪ್ರಯಾತಿ ಸಃ ॥ ೧೦ ॥

ತದ್ರೇಣುಮಾನವರ್ಷಂ ಚ ತದ್ಭೋಜೀ ತತ್ರ ತಿಷ್ಠತಿ ।
ಭಾರತೇ ಗೋಧಿಕಾಚ್ಚೈವ ಸ ಭವೇತ್ಸಪ್ತಜನ್ಮಸು ॥ ೧೧ ॥

ಏಕಾಕೀ ಮಿಷ್ಟಮಶ್ನಾತಿ ಶ್ಲೇಷ್ಮಕುಂಡಂ ಪ್ರಯಾತಿ ಸಃ ।
ಪೂರ್ಣಮಬ್ದಶತಂ ಚೈವ ತದ್ಭೋಜೀ ತತ್ರ ತಿಷ್ಠತಿ ॥ ೧೨ ॥

---

೮. ತಾನಾಗಲೀ, ಇತರರಾಗಲೀ ಕೊಟ್ಟಿರುವ ಬ್ರಾಹ್ಮಣನ ಜೀವನ ವೃತ್ತಿಯನ್ನು ಅಪಹರಿಸುವವನು ಅರವತ್ತುಸಾವಿರ ವರ್ಷಗಳ ಕಾಲ ವಿಟ್‌ಕುಂಡ ವೆಂಬ ನರಕಕ್ಕೆ ಹೋಗುವನು.

೯. ಅಲ್ಲಿ ಅರವತ್ತುಸಾವಿರ ವರ್ಷಗಳ ಕಾಲ ಮಲವನ್ನು ತಿಂದುಕೊಂಡಿದ್ದು ಅನಂತರ ಅರವತ್ತುಸಾವಿರ ವರ್ಷಗಳ ಕಾಲ ಮಲಕ್ರಿಮಿಯಾಗಿ ಭೂಮಿಯಲ್ಲಿ ವಾಸಿಸುವನು.

೧೦. ಇನ್ನೊಬ್ಬರು ತೋಡಲಾರಂಭಿಸಿದ ಕೆರೆಯನ್ನು ತಾನು ಸಂಪೂರ್ಣ ವಾಗಿ ತೋಡಿಸಿ ತನ್ನ ಕೆರೆಯನ್ನಾಗಿ ಮಾಡಿಕೊಂಡು ಅಜ್ಞಾನದಿಂದ ಅಲ್ಲಿ ಮೂತ್ರ ವಿಸರ್ಜನೆಮಾಡುವವನು ಮೂತ್ರಕುಂಡವೆಂಬ ನರಕಕ್ಕೆ ಹೋಗುವನು.

೧೧. ಆ ಮೂತ್ರಕಣಗಳಿರುವಷ್ಟು ವರುಷ ಮೂತ್ರಭೋಜಿಯಾಗಿ ಅಲ್ಲಿಯೇ ಇದ್ದು ಅನಂತರ ಏಳು ಜನ್ಮಗಳು ಭಾರತದಲ್ಲಿ ಹಲ್ಲಿಯಾಗಿ ಜನಿಸುವನು.

೧೨. ಮನೆಯಲ್ಲಿ ಎಲ್ಲರನ್ನೂ ಬಿಟ್ಟು ತಾನು ಮಾತ್ರ ಮೃಷ್ಟಾನ್ನವನ್ನು ಭುಜಿಸುವವನು ಶ್ಲೇಷ್ಮಕುಂಡವೆಂಬ ನರಕಕ್ಕೆ ಹೋಗಿ ನೂರು ವರ್ಷಗಳು ಪೂರ್ಣ ವಾಗುವವರೆಗೂ ಶ್ಲೇಷ್ಮವನ್ನೇ ಸೇವಿಸುತ್ತಾ ಅಲ್ಲಿರುವನು.

ಪೂರ್ಣಮಬ್ದ ಶತಂ ಚೈವ ಸ ಪ್ರೇತೋ ಭಾರತೇ ಭವೇತ್ ।
ಶ್ಲೇಷ್ಮಮೂತ್ರಗರಂ ಚೈವ ಪೂಯಂ ಭುಂಕ್ತೇ ತತಃ ಶುಚಿಃ ॥ ೧೩ ॥

ಪಿತರಂ ಮಾತರಂ ಚೈವ ಗುರುಂ ಭಾರ್ಯಾಂ ಸುತಂ ಸುತಾಂ ।
ಯೋ ನ ಪುಷ್ಣಾತ್ಯನಾಥಂ ಚ ಗರಕುಂಡಂ ಪ್ರಯಾತಿ ಸಃ ॥ ೧೪ ॥

ಪೂರ್ಣಮಬ್ದ ಸಹಸ್ರಂ ಚ ತದ್ಭೋಜೀ ತತ್ರ ತಿಷ್ಠತಿ ।
ತತೋ ವ್ರಜೇದ್ಭೂತಯೋನಿಂ ಶತವರ್ಷಂ ತತಃ ಶುಚಿಃ ॥ ೧೫ ॥

ದೃಷ್ಟ್ವಾsತಿಥಿಂ ವಕ್ರಚಕ್ಷುಃ ಕರೋತಿ ಯೋ ಹಿ ಮಾನವಃ ।
ಪಿತೃದೇವಾಸ್ತಸ್ಯ ಜಲಂ ನ ಗೃಹ್ಣಂತಿ ಚ ಪಾಪಿನಃ ॥ ೧೬ ॥

ಯಾನಿ ಕಾನಿ ಚ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ ।
ಇಹೈವ ಲಭತೇ ಚಾಂತೇ ದೂಷಿಕಾಕುಂಡಮಾವ್ರಜೇತ್ ॥ ೧೭ ॥

---

೧೩. ಅನಂತರ ಭಾರತದಲ್ಲಿ ನೂರುವರ್ಷಗಳ ಕಾಲ ಪ್ರೇತನಾಗಿ ಜೀವಿಸುವನು. ಆಗ ಶ್ಲೇಷ್ಮ, ಮೂತ್ರ, ವಿಷ ಮತ್ತು ಕೀವುಗಳನ್ನು ಭುಜಿಸಿ ಅನಂತರ ಶುಚಿಯಾಗುವನು.

೧೪. ತಂದೆತಾಯಿಯರನ್ನೂ, ಪತ್ನೀಪುತ್ರಪುತ್ರಿಯರನ್ನೂ ಗುರುವನ್ನೂ ಪಾಲಿಸದೆ ಅನಾಥರನ್ನಾಗಿ ಮಾಡುವವನು ಗರಕುಂಡವೆಂಬ ನರಕಕ್ಕೆ ಹೋಗುವನು.

೧೫. ಅಲ್ಲಿ ಸಹಸ್ರವರ್ಷಗಳು ಪೂರ್ಣವಾಗುವವರೆಗೆ ಆ ವಿಷವನ್ನೇ ಭುಜಿಸಿಕೊಂಡಿದ್ದು ಅನಂತರ ನೂರು ವರ್ಷಗಳ ಕಾಲ ಭೂತಯೋನಿಯನ್ನು ಹೊಂದಿ ಶುಚಿಯಾಗುವನು.

೧೬. ಯೋಗ್ಯನಾದ ಅತಿಥಿಯನ್ನು ನೋಡಿ ಆದರಿಸದೆ, ಮುಖವನ್ನು ಓರೆಮಾಡಿಕೊಳ್ಳುವ ಪಾಪಿಯು ಕೊಟ್ಟ ತಿಲೋದಕವನ್ನು ಪಿತೃದೇವತೆಗಳು ಸ್ವೀಕರಿಸುವುದಿಲ್ಲ.

೧೭. ಅವನು ಬ್ರಹ್ಮಹತ್ಯಾದಿ ಮಹಾಪಾಪಗಳೆಲ್ಲವನ್ನೂ ಇಲ್ಲಿಯೇ ಪಡೆದು ಕೊನೆಯಲ್ಲಿ ದೂಷಿಕಾ (ಕಣ್ಣಿನ ಕೊಳೆ) ಕುಂಡವೆಂಬ ನರಕಕ್ಕೆ ಹೋಗುವನು.

ಪೂರ್ಣಮಬ್ದಶತಂ ಚೈವ ತದ್ಭೋಜೀ ತತ್ರ ತಿಷ್ಠತಿ ।
ತತೋ ನರೋ ಭವೇದ್ಭೂಮೌ ದರಿದ್ರಃ ಸಪ್ತಜನ್ಮಸು ॥ ೧೮ ॥

ದತ್ವಾ ದ್ರವ್ಯಂ ಚ ವಿಪ್ರಾಯ ಚಾನ್ಯಸ್ಮೈದೀಯತೇ ಯದಿ ।
ಸ ತಿಷ್ಠತಿ ವಸಾಕುಂಡೇ ತದ್ಭೋಜೀ ಶತವತ್ಸರಂ ॥ ೧೯ ॥

ತತೋ ಭವೇತ್ಸ ಚಂಡಾಲಸ್ತ್ರಿಜನ್ಮನಿ ತತಃ ಶುಚಿಃ ।
ಕೃಕಲಾಸೋ ಭವೇತ್ಸೋಽಪಿ ಭಾರತೇ ಸಪ್ತಜನ್ಮಸು ॥
ತತೋ ಭವೇನ್ಮಾನವಶ್ಚ ದರಿದ್ರೋಽಲ್ಪಾಯುರೇವ ಚ ॥ ೨೦ ॥

ಪುಮಾಂಸಂ ಕಾಮಿನೀ ವಾಪಿ ಕಾಮಿನೀಂ ವಾ ಪುಮಾನಥ ।
ಯಃ ಶುಕ್ರಂ ಪಾತಯತ್ಯೇವ ಶುಕ್ರಕುಂಡಂ ಪ್ರಯಾತಿ ಸಃ ॥ ೨೧ ॥

---

೧೮. ನೂರುವರ್ಷಗಳು ಪೂರ್ಣವಾಗುವವರೆಗೆ ನೇತ್ರಮಲವನ್ನೇ ಸೇವಿಸುತ್ತಾ ಅಲ್ಲಿದ್ದು ಅನಂತರ ಏಳುಜನ್ಮಗಳು ಕಳೆಯುವವರೆಗೆ ದರಿದ್ರಮನುಜನಾಗುವನು.

೧೯. ಒಬ್ಬ ಬ್ರಾಹ್ಮಣನಿಗೆ ದ್ರವ್ಯದಾನಮಾಡುವುದಾಗಿ ಪ್ರತಿಜ್ಞೆಮಾಡಿ ಅದನ್ನೇ ಮತ್ತೊಬ್ಬನಿಗೆ ಕೊಟ್ಟರೆ ಅಂಥವನು ವಸಾಕುಂಡದಲ್ಲಿ ನೆಲೆಸಿಕೊಂಡಿದ್ದು ಆ ವಸೆಯನ್ನೇ ನೂರುವರ್ಷ ಭುಜಿಸುವನು.

೨೦. ಅವನು ಭಾರತದಲ್ಲಿ ಮೂರುಜನ್ಮಕಳೆಯುವವರೆಗೆ ಚಂಡಾಲನಾಗಿದ್ದು ಅನಂತರ ಏಳು ಜನ್ಮಗಳು ಕಳೆಯುವವರೆಗೆ ಹೆಂಟಿಗೊದ್ದನಾಗುವನು. ಪುನಃ ಮನುಷ್ಯ ಜನ್ಮವೆತ್ತಿ ದರಿದ್ರನೂ ಅಲ್ಪಾಯುವೂ ಆಗುವನು.

೨೧. ಹೆಂಗಸು ಗಂಡಸನ್ನಾಗಲೀ, ಗಂಡಸು ಹೆಂಗಸನ್ನಾಗಲೀ ಬಲಾತ್ಕರಿಸಿ ರೇತಃಸ್ಖಲನಮಾಡಿದರೆ ಶುಕ್ರಕುಂಡವೆಂಬ ನರಕಕ್ಕೆ ಹೋಗಿ ಬೀಳುವರು.

ಪೂರ್ಣಮಬ್ದ ಶತಂ ಚೈವ ತದ್ಭೋಜೀ ತತ್ರ ತಿಷ್ಠತಿ ।
ಯೋನಿ ಕೃಮಿಃ ಶತಾಬ್ದಂ ಚ ಭವೇದ್ಭುವಿ ತತಃ ಶುಚಿಃ ॥ ೨೨ ॥

ಸಂತಾಡ್ಯ ಚ ಗುರುಂ ವಿಪ್ರಂ ರಕ್ತಪಾತಂ ಚ ಕಾರಯೇತ್ ।
ಸ ಚ ತಿಷ್ಠತ್ಯಸೃಕ್ಕುಂಡೇ ತದೋಜೀ ಶತವತ್ಸರಂ ॥ ೨೩ ॥

ತತೋ ಭವೇದ್ವ್ಯಾಧಜನ್ಮ ಸಪ್ತಜನ್ಮಸು ಭಾರತೇ ।
ತತಃ ಶುದ್ಧಿಮವಾಪ್ನೋತಿ ಮಾನವಶ್ಚ ಕ್ರಮೇಣ ಚ ॥ ೨೪ ॥

ಅಶ್ರುಸ್ರವಂತಂ ಗಾಯಂತಂ ಭಕ್ತಂ ದೃಷ್ಟ್ವಾ ಚ ಗದ್ಗದಂ ।
ಶ್ರೀಕೃಷ್ಣಗುಣಸಂಗೀತೇ ಹಸತ್ಯೇವ ಹಿ ಯೋ ನರಃ ॥ ೨೫ ॥

ಸ ವಸೇದಶ್ರುಕುಂಡೇ ಚ ತದ್ಭೋಜೀ ಶತವತ್ಸರಂ ।
ತತೋಭವೇತ್ಸ ಚಂಡಾಲೋ ತ್ರಿಜನ್ಮನಿ ತತಃ ಶುಚಿಃ ॥ ೨೬ ॥

---

೨೨. ನೂರುವರ್ಷಗಳವರೆಗೆ ಆ ಶುಕ್ರವನ್ನೇ ಭುಜಿಸಿಕೊಂಡು ಅಲ್ಲಿದ್ದು, ಮುಂದೆ ನೂರುವರ್ಷ ಯೋನಿಕೃಮಿಯಾಗಿ ಜನಿಸಿ, ಅನಂತರ ಭೂಮಿಯಲ್ಲಿ ಪರಿಶುದ್ಧನೆನಿಸುವನು.

೨೩. ಗುರುವನ್ನೂ, ಬ್ರಾಹ್ಮಣರನ್ನೂ, ಹೊಡೆದು ರಕ್ತಪಾತ ಮಾಡಿಸು ವವರು ಅಸೃಕ್‌ಕುಂಡವೆಂಬ ನರಕದಲ್ಲಿ ಬಿದ್ದು, ರಕ್ತವನ್ನೇ ಸೇವಿಸಿಕೊಂಡಿದ್ದು ನೂರುವರ್ಷ ತೊಳಲುವರು.

೨೪. ಅನಂತರ ಏಳು ಜನ್ಮಗಳು ಭಾರತದಲ್ಲಿ ಬೇಡರಾಗಿ ಹುಟ್ಟಿ ಕ್ರಮವಾಗಿ ಶುದ್ಧಿಹೊಂದಿ ಮಾನವೋತ್ತಮರಾಗುವರು.

೨೫–೨೬. ಶ್ರೀಕೃಷ್ಣಪರಮಾತ್ಮನ ನಾಮಗುಣ ಸಂಕೀರ್ತನೆಮಾಡುವಾಗ ಆನಂದಬಾಷ್ಪವನ್ನು ಸುರಿಸುತ್ತ ಗದ್ಗದಕಂಠದಿಂದ ಗಾನಮಾಡುವ ಭಕ್ತನನ್ನು ನೋಡಿ ಹಾಸ್ಯಮಾಡುವ ಮನುಷ್ಯನು ಅಶ್ರುಕುಂಡದಲ್ಲಿ ಕಣ್ಣೀರನ್ನೇ ಭುಜಿಸಿ ಕೊಂಡು ನೂರುವರ್ಷ ಇರುವನು. ಅನಂತರ ಮೂರು ಜನ್ಮಗಳಕಾಲ ಚಂಡಾಲತ್ವ ವನ್ನು ಪಡೆದು ಪುನಃ ಶುಚಿಯಾಗುವನು.

ಕರೋತಿ ಖಲತಾಂ ಶಶ್ವದಶುದ್ಧಹೃದಯೋನರಃ ।
ಕುಂಡಂ ಗಾತ್ರ ಮಲಾನಾಂ ಚ ಸ ಚ ಯಾತಿ ದಶಾಬ್ದಕಂ ॥ ೨೭ ॥

ತತಃ ಸ ಗಾರ್ದಭೀಂ ಯೋನಿಮವಾಪ್ನೋತಿ ತ್ರಿಜನ್ಮನಿ ।
ತ್ರಿಜನ್ಮನಿ ಚ ಶಾರ್ಗಾಲೀಂ ತತಃ ಶುದ್ಧೋ ಭವೇದ್ಧ್ರುವಂ ॥ ೨೮ ॥

ಬಧಿರಂ ಯೋ ಹಸತ್ಯೇವ ನಿಂದತ್ಯೇವ ಹಿ ಮಾನವಃ ।
ಸ ವಸೇತ್ ಕರ್ಣವಿಟ್ಕುಂಡೇ ತದ್ಭೋಜೀ ಶತವತ್ಸರಂ ॥ ೨೯ ॥

ತತೋ ಭವೇತ್ಸ ಬಧಿರೋ ದರಿದ್ರಃ ಸಪ್ತಜನ್ಮಸು ।
ಸಪ್ತಜನ್ಮಸ್ವಂಗಹೀನಸ್ತತಃ ಶುದ್ಧಿಂ ಲಭೇದ್ಧ್ರುವಂ ॥ ೩೦ ॥

---

೨೭. ಮನುಷ್ಯನು ಅಶುದ್ಧಹೃದಯನಾಗಿ ಆಗಾಗ್ಗೆ ಕ್ರೂರತನವನ್ನು ತೋರಿಸುತ್ತಿದ್ದರೆ ಶರೀರದ ಮಲದಕುಂಡದಲ್ಲಿ ಹತ್ತು ವರ್ಷಗಳಕಾಲ ಬಿದ್ದು ತೊಳಲುವನು.

೨೮. ಅನಂತರ ಮೂರು ಜನ್ಮಗಳು ಹೆಣ್ಣು ಕತ್ತೆಯಾಗಿ ಮತ್ತೆ ಮೂರು ಜನ್ಮಗಳು ಹೆಣ್ಣು ನರಿಯಾಗಿ ಹುಟ್ಟಿ ಅನಂತರ ಶುಚಿಯಾಗುವನು.

೨೯. ಕಿವುಡನನ್ನು ನೋಡಿ ಹಾಸ್ಯಮಾಡುವವನೂ, ನಿಂದಿಸುವವನೂ ಕಿವಿಯ ಮಲದಕುಂಡದಲ್ಲಿ ಅದನ್ನೇ ಭುಜಿಸಿಕೊಂಡು ನೂರು ವರ್ಷಗಳಕಾಲ ವಾಸಿಸುವನು.

೩೦. ಅನಂತರ ಅವನು ಕಿವುಡನಾಗಿಯೂ, ದರಿದ್ರನಾಗಿಯೂ, ಏಳು ಜನ್ಮಗಳನ್ನು ಕಳೆಯುವನು. ಪುನಃ ಏಳು ಜನ್ಮಗಳಲ್ಲಿ ಅಂಗಹೀನನಾಗಿದ್ದು ಅನಂತರ ಶುಚಿಯಾಗುವನು.

ಲೋಭಾತ್ಸ್ವಪಾಲನಾರ್ಥಾಯ ಜೀವಿನಂ ಹಂತಿ ಯೋ ನರಃ |
ಮಜ್ಜಾಕುಂಡೇ ವಸೇತ್ಸೋಽಪಿ ತದ್ಭೋಜೀ ಲಕ್ಷವರ್ಷಕಂ || ೩೧ ||

ತತೋ ಭವೇಚ್ಚ ಶಶಕೋ ಮೀನಶ್ಚ ಸಪ್ತಜನ್ಮಸು |
ಏಣಾದಯಶ್ಚ ಕರ್ಮಭ್ಯಸ್ತತಃ ಶುದ್ಧಿಂ ಲಭೇದ್ಧ್ರುವಂ || ೩೨ ||

ಸ್ವಕನ್ಯಾಪಾಲನಂ ಕೃತ್ವಾ ವಿಕ್ರೀಣಾತಿ ಹಿ ಯೋ ನರಃ |
ಅರ್ಥಲೋಭಾನ್ಮಹಾಮೂಢೋ ಮಾಂಸಕುಂಡಂ ಪ್ರಯಾತಿ ಸಃ || ೩೩ ||

ಕನ್ಯಾಲೋಮಪ್ರಮಾಣಾಬ್ದಂ ತದ್ಭೋಜೀ ತತ್ರ ತಿಷ್ಠತಿ |
ತಂ ಚ ಕುಂಡೇ ಪ್ರಹಾರಂ ಚ ಕರೋತಿ ಯಮಕಿಂಕರಃ || ೩೪ ||

---

೩೧. ದುರಾಶೆಯಿಂದ ತನ್ನ ಜೀವನಕ್ಕಾಗಿ ಇತರ ಪ್ರಾಣಿಗಳನ್ನು ಕೊಲ್ಲುವ ಮನುಷ್ಯನು ಲಕ್ಷ ವರ್ಷಗಳಕಾಲ ಮಜ್ಜಾಕುಂಡದಲ್ಲಿ ವಾಸಿಸುತ್ತಾ ಅದನ್ನೇ ಭುಜಿಸಿ ಕೊಂಡಿರುವನು.

೩೨. ಅನಂತರ ಏಳು ಜನ್ಮಗಳವರೆಗೆ ತನ್ನ ಕರ್ಮಾನುಗುಣವಾಗಿ ಮೊಲ, ಮೀನು, ಜಿಂಕೆ, ಮುಂತಾದ ಮೂಕಪ್ರಾಣಿಗಳಾಗಿ ಕಷ್ಟಪಟ್ಟು, ಪುನಃ ಶುದ್ಧಿ ಯಾಗುವನು.

೩೩. ಮಗಳ ಪಾಲನೆ ಪೋಷಣೆಗಳನ್ನು ಮಾಡಿ ದುಡ್ಡಿನಾಶೆಯಿಂದ ಮಾರುವ ಮೂಢಮನುಷ್ಯನು ಮಾಂಸಕುಂಡಕ್ಕೆ ಹೋಗಿ ಸೇರುವನು.

೩೪. ಆ ಕನ್ಯೆಯ ರೋಮಗಳ ಸಂಖ್ಯೆಯಷ್ಟು ಕಾಲ ಮಾಂಸವನ್ನು ಸೇವಿಸಿ ಕೊಂಡು ಅಲ್ಲಿರುವನು. ಯಮನ ಸೇವಕರು ವಿವಿಧರೀತಿಯಲ್ಲಿ ಅವನನ್ನು ಪ್ರಹಾರ ಮಾಡುವರು.

ಮಾಂಸ ಭಾರಂ ಮೂರ್ಧ್ನಿಕೃತ್ವಾ ರಕ್ತಧಾರಾಂ ಲಿಹೇತ್ಕ್ಷುಧಾ ।
ತತೋ ಹಿ ಭಾರತೇ ಪಾಪೀ ಕನ್ಯಾವಿಟ್ಸು ಕೃಮಿರ್ಭವೇತ್ ॥ ೩೫ ॥

ಷಷ್ಠಿವರ್ಷಸಹಸ್ರಾಣಿ ವ್ಯಾಧಶ್ಚ ಸಪ್ತಜನ್ಮಸು ।
ತ್ರಿಜನ್ಮನಿ ವರಾಹಶ್ಚ ಕುಕ್ಕುರಸ್ಸಪ್ತಜನ್ಮಸು ॥ ೩೬ ॥

ಸಪ್ತಜನ್ಮಸು ಮಂಡೂಕೋ ಜಲೌಕಾಃ ಸಪ್ತಜನ್ಮಸು ।
ಸಪ್ತ ಜನ್ಮಸು ಕಾಕಶ್ಚ ತತಃ ಶುದ್ಧಿಂ ಲಭೇದ್ಧ್ರುವಂ ॥ ೩೭ ॥

ವ್ರತಾನಾಮುಪವಾಸಾನಾಂ ಶ್ರಾದ್ಧಾದೀನಾಂ ಚ ಸಂಯಮೇ ।
ನ ಕರೋತಿ ಕ್ಷೌರಕರ್ಮ ಸೋಽಶುಚಿಃ ಸರ್ವಕರ್ಮಸು ॥ ೩೮ ॥

---

೩೫. ತಲೆಯ ಮೇಲೆ ಮಾಂಸದ ಹೊರೆಯನ್ನು ಹೊತ್ತು ಅದರಿಂದ ಹರಿಯುವ ರಕ್ತಧಾರೆಯನ್ನು ನೆಕ್ಕುತ್ತ ಇರುವನು. ಅನಂತರ ಭಾರತದಲ್ಲಿ ಆ ಕನ್ಯೆಯ ಮಲದಲ್ಲಿ ಕ್ರಿಮಿಯಾಗಿ ಜನಿಸುವನು.

೩೬. ಮುಂದೆ ಏಳು ಜನ್ಮಗಳಲ್ಲಿ ವ್ಯಾಧನಾಗಿಯೂ, ಮೂರು ಜನ್ಮಗಳಲ್ಲಿ ಹಂದಿಯಾಗಿಯೂ, ಏಳು ಜನ್ಮಗಳಲ್ಲಿ ನಾಯಿಯಾಗಿಯೂ ಅರವತ್ತು ಸಾವಿರವರ್ಷ ಬಾಳುವನು.

೩೭. ಪುನಃ ಏಳು ಜನ್ಮಗಳಲ್ಲಿ ಕಪ್ಪೆಯೂ, ಏಳು ಜನ್ಮಗಳಲ್ಲಿ ಜಿಗಣೆಯೂ, ಏಳು ಜನ್ಮಗಳಲ್ಲಿ ಕಾಗೆಯೂ, ಆಗಿ ಹುಟ್ಟಿ ಅನಂತರ ಶುದ್ಧಿಹೊಂದುವನು.

೩೮. ವ್ರತೋಪವಾಸಾದಿಗಳಲ್ಲೂ, ಶ್ರಾದ್ಧಾದಿಗಳಲ್ಲೂ ಸಂಯಮದಿಂದ ದೀಕ್ಷಾಬದ್ಧನಾಗಿದ್ದು ಅನಂತರ ಕ್ಷೌರಮಾಡಿಸಿಕೊಳ್ಳದವನು ಯಾವ ಕರ್ಮಕ್ಕೂ ಯೋಗ್ಯನಾಗುವುದಿಲ್ಲ.

ಸ ಚ ತಿಷ್ಠತಿ ಕುಂಡೇಷು ನಖಾದೀನಾಂ ಚ ಸುಂದರಿ ।
ತದೇವ ದಿನಮಾನಾಬ್ದಂ ತದ್ಭೋಜೀ ದಂಡತಾಡಿತಃ　　॥ ೩೯ ॥

ಸಕೇಶಂ ಪಾರ್ಥಿವಂ ಲಿಂಗಂ ಯೋ ವಾರ್ಚಯತಿ ಭಾರತೇ ।
ಸ ತಿಷ್ಠತಿ ಕೇಶಕುಂಡೇ ಮೃದ್ರೇಣುಮಾನವರ್ಷಕಂ　　॥ ೪೦ ॥

ತದಂತೇ ಯಾವನೀಂ ಯೋನಿಂ ಪ್ರಯಾತಿ ಹರಕೋಪತಃ ।
ಶತಾಬ್ದಾಚ್ಛುದ್ಧಿಮಾಪ್ನೋತಿ ಸ್ವಕುಲಂ ಲಭತೇ ಧ್ರುವಂ　　॥ ೪೧ ॥

ಪಿತೄಣಾಂ ಯೋ ವಿಷ್ಣುಪದೇ ಪಿಂಡಂ ನೈವ ದದಾತಿ ಚ ।
ಸ ತಿಷ್ಠತ್ಯಸ್ಥಿಕುಂಡೇ ಚ ಸ್ವಲೋಮಾಬ್ದಂ ಮಹೋಲ್ಬಣೇ　　॥ ೪೨ ॥

---

೩೯. ಅಂಥ ಮನುಷ್ಯನು ನಖಾದಿಕುಂಡದಲ್ಲಿ ಬಿದ್ದು ತೊಳಲುವನು. ಆ ವ್ರತೋಪವಾಸಾದಿಗಳ ದಿವಸದಷ್ಟು ವರ್ಷಗಳು ನಖಾದಿಗಳನ್ನೇ ತಿಂದುಕೊಂಡು ದಂಡಾಹತನಾಗಿ ಬಿದ್ದಿರುವನು.

೪೦. ಭಾರತದಲ್ಲಿ ಕೂದಲಿನಿಂದ ಮಿಶ್ರಿತವಾದ ಮಣ್ಣಿನಲ್ಲಿ ಲಿಂಗಮಾಡಿಕೊಂಡು ಪೂಜಿಸುವವನು ಆ ಮಣ್ಣಿನ ಧೂಳೀಕಣಗಳಷ್ಟು ವರ್ಷ ಕೇಶಕುಂಡದಲ್ಲಿ ತೊಳಲುವನು.

೪೧. ಅನಂತರ ಈಶ್ವರನ ಕೋಪಕ್ಕೆ ಸಿಲುಕಿ, ಯವನ ಯೋನಿಯಲ್ಲಿ ಜನ್ಮ ಪಡೆದು, ನೂರು ವರ್ಷಗಳನಂತರ ಶುದ್ಧಿಹೊಂದಿ, ತನ್ನ ಪೂರ್ವಕುಲದಲ್ಲಿ ಜನಿಸುವನು.

೪೨. ಪಿತೃದೇವತೆಗಳಿಗೆ ಪಿಂಡವನ್ನು ದಾನಮಾಡದಿರುವ ಮನುಷ್ಯನು ತನ್ನ ಲೋಮಪ್ರಮಾಣದಷ್ಟು ವರ್ಷಗಳು ಅತ್ಯುಲ್ಬಣವಾದ ಅಸ್ಥಿಕುಂಡದಲ್ಲಿ ಬೀಳುವನು.

ತತಃ ಸ್ವಯೋನಿಂ ಸಂಪ್ರಾಪ್ಯ ಖಂಜಃ ಸಪ್ತಸು ಜನ್ಮಸು ।
ಭವೇನ್ಮಹಾದರಿದ್ರಶ್ಚ ತತಃ ಶುದ್ಧೋಹಿ ದಂಡತಃ ॥ ೪೩ ॥

ಯಃ ಸೇವತೇ ಮಹಾಮೂಢೋ ಗುರ್ವಿಣೀಂ ಚ ಸ್ವಕಾಮಿನೀಂ ।
ಪ್ರತಪ್ತತಾಮ್ರಕುಂಡೇ ಚ ಶತವರ್ಷಂ ಸ ತಿಷ್ಠತಿ ॥ ೪೪ ॥

ಅವೀರಾನ್ನಂ ಚ ಯೋ ಭುಂಕ್ತೇ ಋತುಸ್ನಾತಾನ್ನಮೇವ ಚ ।
ಲೌಹಕುಂಡೇ ಶತಾಬ್ದಂ ಚ ಸ ಚ ತಿಷ್ಠತಿ ತಪ್ತಕೇ ॥ ೪೫ ॥

ಸ ವ್ರಜೇದ್ರಾಜಕೀಂ ಯೋನಿಂ ಕರ್ಮಕಾರೀಂ ಚ ಸಪ್ತಸು ।
ಮಹಾವ್ರಣೀ ದರಿದ್ರಶ್ಚ ತತಃ ಶುದ್ಧೋ ಭವೇನ್ನರಃ ॥ ೪೬ ॥

ಯೋ ಹಿ ಘರ್ಮಾಕ್ತಹಸ್ತೇನ ದೇವದ್ರವ್ಯಮುಪಸ್ಪೃಶೇತ್ ।
ಶತವರ್ಷಪ್ರಮಾಣಂ ಚ ಘರ್ಮಕುಂಡೇ ಸ ತಿಷ್ಠತಿ ॥ ೪೭ ॥

---

೪೩. ಅನಂತರ ತನ್ನ ಪೂರ್ವಯೋನಿಯನ್ನು ಪಡೆದು ಏಳು ಜನ್ಮಗಳಲ್ಲಿ ಕುಂಟನಾಗಿ, ಮಹಾದರಿದ್ರನೆನಿಸಿಕೊಂಡಿದ್ದು, ಶಿಕ್ಷೆಯಾದ ನಂತರ ಶುದ್ಧನೆನಿಸುವನು.

೪೪. ಗರ್ಭಿಣಿಯಾದ ತನ್ನ ಪತ್ನಿಯೊಡನೆ ಸಂಭೋಗಿಸುವ ಮೂಢನು ಚೆನ್ನಾಗಿ ಕಾದು ಕುದಿಯುತ್ತಿರುವ ತಾಮ್ರಕುಂಡದಲ್ಲಿ ನೂರುವರ್ಷ ತೊಳಲುವನು.

೪೫. ಪತಿಪುತ್ರರಿಲ್ಲದವರ ಮತ್ತು ಋತುಸ್ನಾತರಾದ ಸ್ತ್ರೀಯರ ಅನ್ನವನ್ನು ಭೋಜನಮಾಡುವವನು ಚೆನ್ನಾಗಿ ಕಾದ ಲೋಹಕುಂಡದಲ್ಲಿ ನೂರು ವರ್ಷಗಳ ಕಾಲ ಒದ್ದಾಡುವನು.

೪೬. ಅನಂತರ ಏಳು ಜನ್ಮಗಳಲ್ಲಿ ಅಗಸ ಮತ್ತು ಕಮ್ಮಾರನಾಗಿ ಹುಟ್ಟಿ ವ್ರಣರೋಗಿಯೂ, ದರಿದ್ರನೂ ಆಗುವನು.

೪೭. ಬೆವರಿನ ಕೈಯಿಂದ ದೇವರ ಪೂಜಾದ್ರವ್ಯವನ್ನು ಮುಟ್ಟುವವನು ನೂರು ವರ್ಷಗಳ ಕಾಲ ಸ್ವೇದಕುಂಡದಲ್ಲಿ ತೊಳಲುವನು.

ಯಃ ಶೂದ್ರೇಣಾಭ್ಯನುಜ್ಞಾತೋ ಭುಂಕ್ತೇ ಶೂದ್ರಾನ್ನಮೇವ ಚ ।
ಸ ಚ ತಪ್ತಸುರಾಕುಂಡೇ ಶತಾಬ್ದಂ ತಿಷ್ಠತಿ ದ್ವಿಜಃ ॥ ೪೮ ॥

ತತೋ ಭವೇಚ್ಛೂದ್ರಯಾಜೀ ಬ್ರಾಹ್ಮಣಃ ಸಪ್ತಜನ್ಮಸು ।
ಶೂದ್ರಶ್ರಾದ್ಧಾನ್ನಭೋಜೀ ಚ ತತಃ ಶುದ್ಧೋ ಭವೇದ್ಧ್ರುವಂ ॥ ೪೯ ॥

ವಾಗ್ದುಷ್ಟಾ ಕಟುವಾಚಾ ಯಾ ತಾಡಯೇತ್ಸ್ವಾಮಿನಂ ಸದಾ ।
ತೀಕ್ಷ್ಣಕಂಟಕಕುಂಡೇ ಸಾ ತದ್ಲೋಜೀ ತತ್ರ ತಿಷ್ಠತಿ ॥ ೫೦ ॥

ತಾಡಿತಾ ಯಮದೂತೇನ ದಂಡೇನ ಚ ಚತುರ್ಯುಗಂ ।
ತತ ಉಚ್ಚೈಃ ಶ್ರವಾಃ ಸಪ್ತಜನ್ಮಸ್ವೇವ ತತಃ ಶುಚಿಃ ॥ ೫೧ ॥

ವಿಷೇಣ ಜೀವಿನಂ ಹಂತಿ ನಿರ್ದಯೋ ಯೋ ಹಿ ಪಾಮರಃ ।
ವಿಷಕುಂಡೇ ಚ ತದ್ಲೋಜೀ ಸಹಸ್ರಾಬ್ದಂ ಚ ತಿಷ್ಠತಿ ॥ ೫೨ ॥

---

೪೮. ಬ್ರಾಹ್ಮಣನು ಶೂದ್ರನ ಅಧೀನನಾಗಿ ಶೂದ್ರಾನ್ನವನ್ನು ಭುಜಿಸುತ್ತಿದ್ದರೆ ತಪ್ತವಾದ ಮದ್ಯಕುಂಡದಲ್ಲಿ ನೂರುವರ್ಷಗಳಕಾಲ ತೊಳಲುತ್ತ ಇರುವನು.

೪೯. ಅನಂತರ ಏಳು ಜನ್ಮಗಳು ಕಳೆಯುವವರೆಗೆ ಶೂದ್ರರಿಗೆ ಪೌರೋಹಿತ್ಯ ಮಾಡಿಸುವ ಬ್ರಾಹ್ಮಣನಾಗುವನು. ಅಲ್ಲದೆ ಶೂದ್ರನು ಮಾಡಿದ ಶ್ರಾದ್ಧಾನ್ನವನ್ನು ತಿನ್ನುವನು. ಅನಂತರ ಶುಚಿಹೊಂದುವನು.

೫೦. ಹೆಂಗಸು ಕ್ರೂರನುಡಿಯಾಡುವವಳಾಗಿ ತನ್ನ ಪತಿಯನ್ನು ನಿಷ್ಠೂರವಾಗಿ ಬೈಯ್ಯುತ್ತಿದ್ದರೆ, ಚೂಪಾದ ಮುಳ್ಳುಗಳಿರುವ ಕಂಟಕಕುಂಡದಲ್ಲಿ ಆ ಮುಳ್ಳುಗಳನ್ನೇ ತಿಂದುಕೊಂಡು ತೊಳಲುವಳು.

೫೧. ಯಮದೂತರ ದಂಡದಿಂದ ಚತುರ್ಯುಗಗಳಕಾಲ ಶಿಕ್ಷೆಹೊಂದಿ ಏಳು ಜನ್ಮಗಳು ಕಳೆಯುವವರೆಗೆ ಕಿವುಡಿಯಾಗಿ ಹುಟ್ಟಿ ಅನಂತರ ಶುದ್ಧಿ ಹೊಂದುವಳು.

೫೨. ನಿರ್ದಯದಿಂದ ವಿಷವನ್ನು ಕೊಟ್ಟು ಪ್ರಾಣಿಗಳನ್ನು ಸಂಹರಿಸುವ ಪಾಮರನು ವಿಷಕುಂಡದಲ್ಲಿ ವಿಷವನ್ನೇ ತಿಂದುಕೊಂಡು ಸಹಸ್ರವರ್ಷಗಳ ಕಾಲ ಜೀವಿಸುವನು.

ತತೋ ಭವೇನ್ನೃಘಾತೀ ಚ ವ್ರಣೀಸ್ಯಾತ್ಸಪ್ತಜನ್ಮಸು ।
ಸಪ್ತಜನ್ಮಸು ಕುಷ್ಠೀ ಚ ತತಃ ಶುದ್ಧೋ ಭವೇದ್ಧ್ರುವಂ ॥ ೫೩ ॥

ದಂಡೇನ ತಾಡಯೇದ್ಯೋ ಹಿ ವೃಷಂ ಚ ವೃಷವಾಹಕಃ ।
ಭೃತ್ಯೈದ್ವಾರಾ ಸ್ವತಂತ್ರೋ ವಾ ಪುಣ್ಯಕ್ಷೇತ್ರೇ ಚ ಭಾರತೇ ॥ ೫೪ ॥

ಪ್ರತಪ್ತತೈಲಕುಂಡೇ ಚ ಸ ತಿಷ್ಠತಿ ಚತುರ್ಯುಗಂ ।
ಗವಾಂ ಲೋಮಪ್ರಮಾಣಾಬ್ದಂ ವೃಷೋ ಭವತಿ ತತ್ಪರಂ ॥ ೫೫ ॥

ಕುಂತೇನ ಹಂತಿ ಜೀವಂ ಯೋ ಲೌಹೇನ ಬಡಿಶೇನ ವಾ ।
ಕುಂತಕುಂಡೇ ವಸೇತ್ಸೋಽಪಿ ವರ್ಷಾಣಾಮಯುತಂ ಸತಿ ॥ ೫೬ ॥

ತತಃ ಸ್ವಯೋನಿಂ ಸಂಪ್ರಾಪ್ಯ ಚೋದರವ್ಯಾಧಿಸಂಯುತಃ ।
ಕ್ಲಿಷ್ಟೇನ ಜನ್ಮನೈಕೇನ ತತಃ ಶುದ್ಧೋ ಭವೇನ್ನರಃ ॥ ೫೭ ॥

---

೫೩. ಅನಂತರ ಏಳು ಜನ್ಮಗಳು ನರಘಾತಿಯೂ, ವ್ರಣರೋಗಿಯೂ ಆಗುವನು. ಮತ್ತೆ ಏಳು ಜನ್ಮಗಳಲ್ಲಿ ಕುಷ್ಠರೋಗವನ್ನು ಪಡೆದು ಅನಂತರ ಶುದ್ಧನಾಗುವನು.

೫೪-೫೫ ಪುಣ್ಯಕ್ಷೇತ್ರವಾದ ಈ ಭರತಖಂಡದಲ್ಲಿ ವೃಷವಾಹಕನಾಗಿ ತಾನಾಗಲೀ ಅಥವಾ ತನ್ನ ಭೃತ್ಯನ ಕೈಯಿಂದಾಗಲೀ ಎತ್ತುಗಳನ್ನು ದಂಡಿಸಿದರೆ ಚೆನ್ನಾಗಿ ಕಾಯಿಸಿರುವ ತೈಲಕುಂಡದಲ್ಲಿ ನಾಲ್ಕು ಯುಗಗಳ ಕಾಲ ನರಳಿ ಅನಂತರ ಹಸುವಿನ ಮೈಯಲ್ಲಿರುವ ರೋಮಗಳಿರುವಷ್ಟು ಕಾಲ ವೃಷಭನಾಗಿ ಹುಟ್ಟುವನು.

೫೬. ಒನಕೆ, ಲೋಹ ಮತ್ತು ಗಾಳಗಳಿಂದ ಜೀವಿಗಳನ್ನು ಸಂಹರಿಸುವವನು ಹತ್ತುಸಾವಿರ ವರ್ಷಗಳ ಕಾಲ ಕುಂತಕುಂಡದಲ್ಲಿ ನೆಲೆಸುವನು.

೫೭. ಅನಂತರ ತನ್ನ ಪೂರ್ವಯೋನಿಯಲ್ಲಿ ಜನ್ಮಪಡೆದು ಉದರರೋಗ ಪೀಡಿತನಾಗಿ ಒಂದು ಜನ್ಮ ಕಷ್ಟಪಟ್ಟು ಅನಂತರ ಶುದ್ಧನಾಗುವನು.

ಯೋ ಭುಂಕ್ತೇ ಚ ವೃಥಾ ಮಾಂಸಂ ಮತ್ಸ್ಯಭೋಜೀ ಚ ಬ್ರಾಹ್ಮಣಃ ।
ಹರೇರನೈವೇದ್ಯಭೋಜೀ ಕೃಮಿಕುಂಡಂ ಪ್ರಯಾತಿ ಸಃ ॥ ೫೮ ॥

ಸ್ವಲೋಮಮಾನವರ್ಷಂ ಚ ತದ್ಭೋಜೀ ತತ್ರ ತಿಷ್ಠತಿ ।
ತತೋ ಭವೇನ್ಮ್ಲೇಚ್ಛಜಾತಿಸ್ತ್ರಿಜನ್ಮನಿ ತತೋ ದ್ವಿಜಃ ॥ ೫೯ ॥

ಬ್ರಾಹ್ಮಣಃ ಶೂದ್ರಯಾಜೀ ಯಃ ಶೂದ್ರಶ್ರಾದ್ಧಾನ್ನಭೋಜಕಃ ।
ಶೂದ್ರಾಣಾಂ ಶವದಾಹೀ ಚ ಪೂಯಕುಂಡಂ ವ್ರಜೇದ್ಧ್ರುವಂ ॥ ೬೦ ॥

ಯಾವಲ್ಲೋಮಪ್ರಮಾಣಾಬ್ದಂ ಯಃ ಮಾನಸ್ಯ ಸುವ್ರತೇ ।
ತಾಡಿತೋ ಯಮದೂತೇನ ತದ್ಭೋಜೀ ತತ್ರ ತಿಷ್ಠತಿ ॥ ೬೧ ॥

---

೫೮. ಬ್ರಾಹ್ಮಣನಾದವನು ಕಾರಣವಿಲ್ಲದೆ ಮಾಂಸವನ್ನೂ, ಮೀನನ್ನೂ, ಪರಮಾತ್ಮನಿಗೆ ನಿವೇದಿಸದಿರುವ ಪದಾರ್ಥವನ್ನೂ, ಭುಜಿಸಿದರೆ ಕ್ರಿಮಿಕುಂಡವೆಂಬ ನರಕಕ್ಕೆ ಹೋಗುತ್ತಾನೆ.

೫೯. ಅಲ್ಲಿ ತನ್ನ ಲೋಮಗಳಿರುವಷ್ಟು ಕಾಲ ಅದನ್ನು ತಿಂದುಕೊಂಡು ಅಲ್ಲಿಯೇ ಇದ್ದು ಅನಂತರ ಮೂರು ಜನ್ಮ ಮ್ಲೇಚ್ಛನಾಗಿ ಹುಟ್ಟಿ, ಪುನಃ ಬ್ರಾಹ್ಮಣ ನಾಗುವನು.

೬೦. ಶೂದ್ರರಿಗೆ ಯಾಗಮಾಡಿಸುವವನೂ, ಶೂದ್ರರ ಶ್ರಾದ್ಧಾನ್ನವನ್ನು ಭುಜಿಸುವವನೂ, ಶೂದ್ರರ ಶವವನ್ನು ಸುಡುವವನೂ, ಆದ ಬ್ರಾಹ್ಮಣನು ಪೂಯ (ಕೀವು) ಕುಂಡಕ್ಕೆ ಹೋಗಿ ಬೀಳುವನು.

೬೧. ಎಲೌ ವ್ರತಪರಳಾದ ಸಾವಿತ್ರಿಯೇ, ಶೂದ್ರಯಾಜಕನು ತನ್ನ ಯಜಮಾನನ ಶರೀರದಲ್ಲಿರುವ ಲೋಮಗಳ ಪ್ರಮಾಣದಷ್ಟುಕಾಲ ಯಮದೂತ ರಿಂದ ಶಿಕ್ಷೆಹೊಂದುತ್ತ ಆ ಕೀವುಗಳನ್ನೇ ತಿಂದುಕೊಂಡಿರುವನು.

ತತೋ ಭಾರತಮಾಗತ್ಯ ಸ ಶೂದ್ರಃ ಸಪ್ತ ಜನ್ಮಸು ।
ಮಹಾಶೂಲೀ ದರಿದ್ರಶ್ಚ ತತಃ ಶುದ್ಧಃ ಪುನರ್ದ್ವಿಜಃ ॥ ೬೨ ॥

ಲಘುಂ ಕ್ರೂರಂ ಮಹಾಂತಂ ವಾ ಸರ್ಪಂ ಹಂತಿ ಚ ಯೋ ನರಃ ।
ಸ್ವಾತ್ಮಲೋಮಪ್ರಮಾಣಾಬ್ದಂ ಸರ್ಪಕುಂಡಂ ಪ್ರಯಾತಿ ಸಃ ॥ ೬೩ ॥

ಸರ್ಪೇಣ ಭಕ್ಷಿತಃ ಸೋಽಪಿ ಯಮದೂತೇನ ತಾಡಿತಃ ।
ವಸೇಚ್ಚ ಸರ್ಪವಿಡ್ಜೀವೀ ತತಃ ಸರ್ಪೋ ಭವೇದ್ಧ್ರುವಂ ॥ ೬೪ ॥

ತತೋ ಭವೇನ್ಮಾನವಶ್ಚಾಪ್ಯಲ್ಪಾಯುರ್ದಪ್ರುಸಂಯುತಃ ।
ಮಹಾಕ್ಲೇಶೇನ ತನ್ಮೃತ್ಯುಃ ಸರ್ಪೇಣ ಭಕ್ಷಣಂ ಧ್ರುವಂ ॥ ೬೫ ॥

ವಿಧಿಂ ಪ್ರಕಲ್ಪ್ಯ ಜೀವಾಂಶ್ಚ ಕ್ಷುದ್ರಜಂತೂಂಶ್ಚ ಹಂತಿ ಯಃ ।
ಸ ದಂಶಮಶಕೇ ಕುಂಡೇ ಜನ್ಮಮಾನದಿನಾಬ್ದಕಂ ॥ ೬೬ ॥

---

೬೨. ಅನಂತರ ಭಾರತದಲ್ಲಿ ಏಳು ಶೂದ್ರಜನ್ಮಗಳನ್ನೆತ್ತಿ, ಶೂಲರೋಗಿಯೂ, ದರಿದ್ರನೂ ಆಗಿ ಪಾಪದಿಂದ ಬಿಡುಗಡೆ ಹೊಂದಿ ಪುನಃ ಬ್ರಾಹ್ಮಣನಾಗುವನು.

೬೩. ಚಿಕ್ಕದಾದ, ದೊಡ್ಡದಾದ ಅಥವಾ ಕ್ರೂರವಾದ ಯಾವ ಹಾವನ್ನೇ ಆಗಲಿ ಕೊಲ್ಲುವ ಮನುಜನು ತನ್ನ ಶರೀರದ ಲೋಮಪ್ರಮಾಣದಷ್ಟು ಕಾಲ ಸರ್ಪ ಕುಂಡದಲ್ಲಿ ಬೀಳುವನು.

೬೪. ಅಲ್ಲಿ ತಾನು ಸರ್ಪಗಳಿಂದ ಭಕ್ಷಿತನಾಗಿ ಯಮದೂತರಿಂದ ಶಿಕ್ಷೆ ಹೊಂದುತ್ತ ಸರ್ಪಗಳ ಮಲವನ್ನೇ ತಿಂದುಕೊಂಡಿದ್ದು ಕೊನೆಗೆ ಸರ್ಪದ ಜನ್ಮವನ್ನೇ ತಾಳುವನು.

೬೫. ಅಲ್ಲದೆ ಮುಂದೆ ಮನುಷ್ಯನಾಗಿ ಹುಟ್ಟಿದರೂ ಕುಷ್ಠರೋಗಿಯೂ, ಅಲ್ಪಾಯುವೂ ಆಗಿ ಸಾಯುವಾಗ ಮಹಾಕಷ್ಟವನ್ನು ಅನುಭವಿಸುವನು ಕೊನೆಯಲ್ಲಿ ಸರ್ಪಗಳಿಂದಲೇ ಭಕ್ಷಿತನಾಗುವನು.

೬೬–೬೭. ವಿಧಿನಿಯಮವೆಂದು ಹೇಳಿ ಜೀವಿಗಳನ್ನೂ, ಕ್ಷುದ್ರಜಂತುಗಳನ್ನೂ ಕೊಲ್ಲುವವನು ದಂಶಮಶಕವೆಂಬ ಕುಂಡದಲ್ಲಿ ಬಿದ್ದು ತಾನು ಜೀವಿಸಿದ್ದಷ್ಟು ಕಾಲ

ದಿವಾನಿಶಂ ಭಕ್ಷಿತಸ್ತೈರನಾಹಾರಶ್ಚ ಶಬ್ದಕೃತ್ ।
ಬದ್ಧಹಸ್ತಪದಾದಿಶ್ಚ ಯಮದೂತೇನ ತಾಡಿತಃ ॥ ೬೭ ॥

ತತೋ ಭವೇತ್ಕ್ಷುದ್ರಜಂತುರ್ಜಾತಿರ್ವೈ ಯಾವತೀ ಸ್ಮೃತಾ ।
ತತೋ ಭವೇನ್ಮಾನವಶ್ಚ ಸೋಽಂಗಹೀನಸ್ತತಃ ಶುಚಿಃ ॥ ೬೮ ॥

ಯೋ ಮೂಢೋ ಮಧು ಗೃಹ್ಣಾತಿ ಹತ್ವಾ ಚ ಮಧುಮಕ್ಷಿಕಾಃ ।
ಸ ಏವ ಗರಲೇ ಕುಂಡೇ ಜೀವಮಾನದಿನಾಬ್ದಕಂ ॥ ೬೯ ॥

ಭಕ್ಷಿತೋ ಗರಲೈರ್ದಗ್ಧೋ ಯಮದೂತೇನ ತಾಡಿತಃ ।
ತತೋ ಹಿ ಮಕ್ಷಿಕಾಜಾತಿಸ್ತತಃ ಶುದ್ಧೋ ಭವೇನ್ನರಃ ॥ ೭೦ ॥

ದಂಡಂ ಕರೋತ್ಯದಂಡ್ಯೇ ಚ ವಿಪ್ರೇ ದಂಡಂ ಕರೋತಿ ಚ ।
ಸ ಕುಂಡಂ ವಜ್ರದಂಷ್ಟ್ರಾಣಾಂ ಕೀಟಾನಾಂ ವೈ ಪ್ರಯಾತಿ ಚ ॥ ೭೧ ॥

ಹಗಲುರಾತ್ರಿ ನೊಣಗಳಿಂದ ಭಕ್ಷಿತನಾಗಿ ಹೊಟ್ಟೆಗಿಲ್ಲದೆ ನರಳಿ ಯಮದೂತರಿಂದ ಬದ್ಧನಾಗಿ ಹೊಡೆಸಿಕೊಂಡು ಗೋಳಾಡುವನು.

೬೮. ಅನಂತರ ಪ್ರಪಂಚದಲ್ಲಿರುವ ಸಮಸ್ತ ಕ್ಷುದ್ರಜಂತುಗಳ ಜನ್ಮವನ್ನೂ ಕ್ರಮವಾಗಿ ಹೊಂದಿ ಪುನಃ ಮನುಷ್ಯಜನ್ಮವನ್ನು ಪಡೆದರೂ ಅಂಗಹೀನನಾಗಿ ನರಳಿ ಅನಂತರ ಪಾಪವಿದೂರನಾಗುವನು.

೬೯–೭೦. ಜೇನುನೊಣಗಳನ್ನು ಕೊಂದು ಜೇನುತುಪ್ಪವನ್ನು ಸ್ವೀಕರಿಸುವಾತನು ವಿಷಕುಂಡದಲ್ಲಿ ತಾನು ಜೀವಿಸಿದ ದಿನಗಳಷ್ಟು ವರ್ಷಗಳಿದ್ದು ವಿಷದಿಂದ ದಗ್ಧನಾಗಿ ಯಮದೂತರಿಂದ ಶಿಕ್ಷೆಹೊಂದಿ ತಾನೇ ಜೇನುನೊಣವಾಗಿ ಹುಟ್ಟಿ ಅನಂತರ ಶುದ್ಧನಾಗುವನು.

೭೧. ದಂಡನೆಗೆ ಅರ್ಹನಲ್ಲದವನನ್ನೂ, ಬ್ರಾಹ್ಮಣನನ್ನೂ, ದಂಡಿಸುವವನು ವಜ್ರದಂಷ್ಟ್ರವೆಂಬ ಕೀಟಗಳಿರುವ ನರಕಕುಂಡದಲ್ಲಿ ಬಿದ್ದು ತೊಳಲುವನು.

ತಲ್ಲೋಮಮಾನವರ್ಷಂ ಚ ತತ್ರ ತಿಷ್ಠತ್ಯಹರ್ನಿಶಂ ।
ಶಬ್ದಕೃದ್ಭಕ್ಷಿತಸ್ತೈಶ್ಚ ತತಃ ಶುದ್ಧೋ ಭವೇನ್ನರಃ ॥ ೭೨ ॥

ಅರ್ಥಲೋಭೇನ ಯೋ ಭೂಪಃ ಪ್ರಜಾ ದಂಡಂ ಕರೋತಿ ಚ ।
ವೃಶ್ಚಿಕಾನಾಂ ಚ ಕುಂಡೇಷು ತಲ್ಲೋಮಾಬ್ದಂ ವಸೇದ್ಧ್ರುವಂ ॥ ೭೩ ॥

ತತೋ ವೃಶ್ಚಿಕಜಾತಿಶ್ಚ ಸಪ್ತಜನ್ಮಸು ಜಾಯತೇ ।
ತತೋ ನರಶ್ಚಾಂಗಹೀನೋ ವ್ಯಾಧಿಯುಕ್ತೋ ಭವೇದ್ಧ್ರುವಂ ॥ ೭೪ ॥

ಬ್ರಾಹ್ಮಣಃ ಶಸ್ತ್ರಧಾರೀ ಯೋ ಹ್ಯನ್ಯೇಷಾಂ ಧಾವಕೋ ಭವೇತ್ ।
ಸಂಧ್ಯಾಹೀನಶ್ಚ ಮೂಢಶ್ಚ ಹರಿಭಕ್ತಿವಿಹೀನಕಃ ॥ ೭೫ ॥

ಸ ತಿಷ್ಠತಿ ಸ್ವಲೋಮಾಬ್ದಂ ಕುಂಡಾದಿಷು ಶರಾದಿಷು ।
ವಿದ್ಧಃ ಶರಾದಿಭಿಃ ಶಶ್ವತ್ತತಃ ಶುದ್ಧೋ ಭವೇನ್ನರಃ ॥ ೭೬ ॥

---

೭೨. ಆ ಕೀಟಗಳ ಲೋಮಪ್ರಮಾಣದಷ್ಟು ಕಾಲ ಹಗಲು ರಾತ್ರಿ ಅಲ್ಲಿರುವುದಲ್ಲದೆ, ಅವುಗಳಿಂದಲೇ ಭಕ್ಷಿತನಾಗಿ ಗೋಳಾಡಿ ಕೊನೆಗೆ ಶುದ್ಧಿ ಹೊಂದುವನು.

೭೩. ಹಣದಾಸೆಗಾಗಿ ಪ್ರಜೆಗಳನ್ನು ದಂಡಿಸುವ ರಾಜನು ವೃಶ್ಚಿಕ (ಚೇಳು) ಕುಂಡದಲ್ಲಿ ಅವುಗಳ ರೋಮಪ್ರಮಾಣದಷ್ಟು ಕಾಲ ವಾಸಿಸುವುದು ನಿಶ್ಚಯ.

೭೪. ಅನಂತರ ಏಳು ಸಾರಿ ಚೇಳಿನ ಜನ್ಮವೆತ್ತಿ ಮುಂದೆ ಒಂದು ವೇಳೆ ಮಾನವಜನ್ಮವನ್ನು ಹೊಂದಿದರೂ, ಅಂಗಹೀನನೂ, ರೋಗಗ್ರಸ್ತನೂ ಆಗುವುದರಲ್ಲಿ ಸಂಶಯವಿಲ್ಲ.

೭೫–೭೬. ಸಂಧ್ಯಾವಂದನಾದಿ ನಿತ್ಯಕರ್ಮವನ್ನೂ, ಶ್ರೀಹರಿಯ ಸೇವೆಯನ್ನೂ ಬಿಟ್ಟು ಆಯುಧಪಾಣಿಯೂ, ಇತರರ ವಸ್ತ್ರವನ್ನು ಒಗೆಯುವವನೂ ಆದ ಮೂಢಬ್ರಾಹ್ಮಣನು ಬಾಣದಕುಂಡದಲ್ಲಿ ತನ್ನ ಶರೀರದ ಲೋಮಗಳ ಪ್ರಮಾಣದಷ್ಟು ಕಾಲ ಬಿದ್ದು, ಆ ಬಾಣಗಳಿಂದ ಚುಚ್ಚಿಸಿಕೊಂಡು ನರಳಿ, ಅನಂತರ ಶುದ್ಧನಾಗುವನು.

ಕಾರಾಗಾರೇ ಸಾಂಧಕಾರೇ ನಿಬಧ್ನಾತಿ ಪ್ರಜಾಶ್ಚ ಯಃ ।
ಪ್ರಮತ್ತಃ ಸ್ವಲ್ಪದೋಷೇಣ ಗೋಲಕುಂಡಂ ಪ್ರಯಾತಿ ಸಃ　॥ ೭೭ ॥

ತತ್ಕುಂಡಂ ತಪ್ತತೋಯಾಕ್ತಂ ಸಾಂಧಕಾರಂ ಭಯಂಕರಂ ।
ತೀಕ್ಷ್ಣದಂಷ್ಟ್ರೈಶ್ಚ ಕೀಟೈಶ್ಚ ಸಂಯುಕ್ತಂ ಗೋಲಕುಂಡಕಂ　॥ ೭೮ ॥

ಕೀಟೈರ್ವಿದ್ಧೋ ವಸೇತ್ತತ್ರ ಪ್ರಜಾಲೋಮಾಬ್ದಮೇವ ಚ ।
ತತೋ ಭವೇನ್ನೀಚಭೃತ್ಯಸ್ತತಃ ಶುದ್ಧೋ ನರೋ ಭುವಿ　॥ ೭೯ ॥

ಸರೋವರಾದುತ್ಥಿತಾಂಶ್ಚ ನಕ್ರಾದೀನ್ಹಂತಿ ಯಃ ಸತಿ ।
ನಕ್ರಕಂಟಕಮಾನಾಬ್ದಂ ನಕ್ರಕುಂಡಂ ಪ್ರಯಾತಿ ಸಃ　॥ ೮೦ ॥

ತತೋ ನಕ್ರಾದಿಜಾತಿಶ್ಚ ಭವೇನ್ನದ್ಯಾದಿಷು ಧ್ರುವಂ ।
ತತಃ ಸದ್ಯೋ ವಿಶುದ್ಧೋ ಹಿ ದಂಡೇನೈವ ನರಃ ಪುನಃ　॥ ೮೧ ॥

---

೭೭. ಅಲ್ಪದೋಷಿಗಳಾದ ಪ್ರಜೆಗಳನ್ನು ಅಂಧಕಾರಸಹಿತವಾದ ಬಂಧನ ಗೃಹದಲ್ಲಿಡುವ ಪ್ರಮತ್ತನಾದ ರಾಜನು ಗೋಲಕುಂಡವೆಂಬ ನರಕದಲ್ಲಿ ಬೀಳುವನು.

೭೮. ಕುದಿಯುತ್ತಿರುವ ನೀರಿನಿಂದ ತುಂಬಿ, ಅಂಧಕಾರಯುತವೂ, ಭಯಂಕರವೂ, ತೀಕ್ಷ್ಣದಂಷ್ಟ್ರವುಳ್ಳ ಕೀಟಗಳಿಂದ ಸಂಯುಕ್ತವೂ ಆಗಿರುವ ಕುಂಡವೇ ಗೋಲಕುಂಡವೆನಿಸುವುದು.

೭೯. ಅಲ್ಲಿ ತನ್ನ ಪ್ರಜೆಗಳ ಲೋಮಪ್ರಮಾಣದಷ್ಟು ವರ್ಷಗಳು ಕೀಟ ಗಳಿಂದ ಕಚ್ಚಿಸಿಕೊಂಡಿದ್ದು, ಅನಂತರ ನೀಚಸೇವಕನಾಗಿ ಹುಟ್ಟಿ ದೋಷವಿಮುಕ್ತ ನಾಗುವನು.

೮೦. ಎಲೌ ಪತಿವ್ರತೆಯೇ, ಸರೋವರದಿಂದ ಹೊರಕ್ಕೆ ಬಂದಿರುವ ಮೊಸಳೆ ಮುಂತಾದ ಪ್ರಾಣಿಗಳನ್ನು ಸಂಹರಿಸುವವನು ಆ ಮೊಸಳೆಯ ದೇಹದಲ್ಲಿರುವ ಮುಳ್ಳುಗಳ ಸಂಖ್ಯೆಯಷ್ಟು ವರ್ಷಗಳು ನಕ್ರಕುಂಡವೆಂಬ ನರಕಕ್ಕೆ ಹೋಗುವನು.

೮೧. ಮುಂದೆ ನದೀತಟಾಕಾದಿಗಳಲ್ಲಿ ಮೊಸಳೆಯಾಗಿ ಹುಟ್ಟಿ ಪ್ರಾಯಶ್ಚಿತ್ತ ವನ್ನು ಅನುಭವಿಸಿದನಂತರ ವಿಶುದ್ಧನಾಗುವನು.

ವಕ್ಷಃ ಶ್ರೋಣೀಸ್ತನಾಸ್ಯಂ ಚ ಯಃ ಪಶ್ಯತಿ ಪರಸ್ತ್ರಿಯಾಃ ।
ಕಾಮೇನ ಕಾಮುಕೋ ಯೋ ಹಿ ಪುಣ್ಯಕ್ಷೇತ್ರೇ ಚ ಭಾರತೇ ॥ ೮೨ ॥

ಸ ವಸೇತ್ಕಾಕಕುಂಡೇ ಚ ಕಾಕೈಶ್ಚ ಕ್ಷುಣ್ಣಲೋಚನಃ ।
ತತಃ ಸ್ವಲೋಮಮಾನಾಬ್ದಂ ತತಶ್ಚಾಂಧಸ್ತ್ರಿಜನ್ಮನಿ ॥ ೮೩ ॥

ಸಪ್ತಜನ್ಮದರಿದ್ರಶ್ಚ ಮಹಾಕ್ರೂರಶ್ಚ ಪಾತಕೀ ।
ಭಾರತೇ ಸ್ವರ್ಣಕಾರಶ್ಚ ಸ ಚ ಸ್ವರ್ಣವಣಿಕ್ತತಃ ॥ ೮೪ ॥

ಯೋ ಭಾರತೇ ತಾಮ್ರಚೌರೋ ಲೌಹಚೌರಶ್ಚ ಸುಂದರಿ ।
ಸ ಸ್ವಲೋಮಪ್ರಮಾಣಾಬ್ದಂ ವಜ್ರಕುಂಡಂ ಪ್ರಯಾತಿ ವೈ ॥ ೮೫ ॥

ತತ್ರೈವ ವಜ್ರವಿಡ್ಭೋಜೀ ವಜ್ರೈಶ್ಚ ಕ್ಷುಣ್ಣಲೋಚನಃ ।
ತಾಡಿತೋ ಯಮದೂತೇನ ತತಃ ಶುದ್ಧೋ ಭವೇನ್ನರಃ ॥ ೮೬ ॥

೮೨-೮೩. ಪುಣ್ಯಕ್ಷೇತ್ರವಾದ ಭರತಖಂಡದಲ್ಲಿರುವ ಕಾಮುಕನು ಕಾಮಾಸಕ್ತತೆಯಿಂದ ಪರಸ್ತ್ರೀಯರ ಮುಖ, ಸ್ತನ ಮತ್ತು ನಿತಂಬಾದಿಗಳನ್ನು ನೋಡಿದರೆ ಕಾಕಕುಂಡದಲ್ಲಿ ಬಿದ್ದು ಕಾಕಾದಿಗಳಿಂದ ಕಣ್ಣು ಕುಕ್ಕಿಸಿಕೊಂಡು, ತನ್ನ ಲೋಮಪ್ರಮಾಣದಷ್ಟು ವರ್ಷಗಳ ಕಾಲ ತೊಳಲಿ, ಅನಂತರ ಮೂರು ಜನ್ಮಗಳಲ್ಲಿ ಕುರುಡನಾಗಿರುವನು.

೮೪. ಅನಂತರ ಏಳು ಜನ್ಮಗಳಲ್ಲಿ ಅತಿದರಿದ್ರನೂ, ಕ್ರೂರಿಯೂ, ಪಾತಕಿಯೂ ಆದ ಅಕ್ಕಸಾಲೆಯಾಗಿ ಸುವರ್ಣವಿಕ್ರಯದಿಂದ ಜೀವಿಸುವನು.

೮೫. ಭರತಖಂಡದಲ್ಲಿ ತಾಮ್ರವನ್ನೂ, ಇತರ ಲೋಹವನ್ನೂ ಕದಿಯುವ ಮನುಷ್ಯನು ತನ್ನ ಲೋಮಪ್ರಮಾಣದಷ್ಟು ವರ್ಷಗಳ ಕಾಲ ವಜ್ರಕುಂಡವೆಂಬ ನರಕದಲ್ಲಿ ತೊಳಲುವನು.

೮೬. ಅಲ್ಲಿ ವಜ್ರಕೀಟಗಳ ಮಲವನ್ನು ತಿಂದು ಆ ಕೀಟಗಳಿಂದ ಕಣ್ಣುಗಳನ್ನು ಕುಕ್ಕಿಸಿಕೊಂಡು, ಯಮದೂತರ ಶಿಕ್ಷೆಗೊಳಗಾಗಿ ಅನಂತರ ಶುದ್ಧನಾಗುವನು.

ಭಾರತೇ ದೇವಚೌರಶ್ಚ ದೇವದ್ರವ್ಯಾದಿಹಾರಕಃ ।
ಸುದುಷ್ಕರೇ ವಜ್ರಕುಂಡೇ ಸ್ವಲೋಮಾಬ್ದಂ ವಸೇದ್ಧ್ರುವಂ ॥ ೮೭ ॥

ದೇಹದಗ್ಧೋ ಹಿ ತದ್ವಜ್ರೈರನಾಹಾರಶ್ಚ ಶಬ್ದಕೃತ್ ।
ತಾಡಿತೋ ಯಮದೂತೇನ ತತಃ ಶುದ್ಧೋ ಭವೇನ್ನರಃ ॥ ೮೮ ॥

ರೌಪ್ಯಗವ್ಯಾಂಶುಕಾನಾಂ ಚ ಯಶ್ಚೌರಃ ಸುರವಿಪ್ರಯೋಃ ।
ತಪ್ತಪಾಷಾಣಕುಂಡೇ ಚ ಸ್ವಲೋಮಾಬ್ದಂ ವಸೇದ್ಧ್ರುವಂ ॥ ೮೯ ॥

ತ್ರಿಜನ್ಮನಿ ಬಕಃ ಸೋಽಪಿ ಶ್ವೇತ ಹಂಸಸ್ತ್ರಿಜನ್ಮನಿ ।
ಜನ್ಮೈಕಂ ಶಂಖಚಿಲ್ಲಶ್ಚ ತತೋಽನ್ಯೇ ಶ್ವೇತಪಕ್ಷಿಣಃ ॥ ೯೦ ॥

---

೮೭. ಭರತಖಂಡದಲ್ಲಿ ದೇವರನ್ನೂ, ದೇವರ ದ್ರವ್ಯವನ್ನೂ ಅಪಹರಿಸುವವನು ತನ್ನ ಲೋಮಪ್ರಮಾಣಗಳಷ್ಟು ವರ್ಷಗಳ ಕಾಲ ವಜ್ರಕುಂಡವೆಂಬ ನರಕದಲ್ಲಿ ತೊಳಲುವನು.

೮೮. ಅಲ್ಲಿರುವ ವಜ್ರಕ್ರಿಮಿಗಳಿಂದ ಭಕ್ಷಿತನಾಗಿ ಆಹಾರವಿಲ್ಲದೆ ನರಳಿ ಯಮದೂತರಿಂದ ಶಿಕ್ಷೆಹೊಂದಿದಮೇಲೆ ಪೂತನಾಗುವನು.

೮೯. ಹಾಲು, ಮೊಸರು ಮುಂತಾದ ರಸದ್ರವ್ಯಗಳನ್ನೂ, ದೇವಬ್ರಾಹ್ಮಣರ ಬೆಳ್ಳಿಯ ವಸ್ತುಗಳನ್ನೂ ಮತ್ತು ವಸ್ತ್ರಾದಿಗಳನ್ನೂ ಅಪಹರಿಸುವವನು ತಪ್ತಪಾಷಾಣ ಕುಂಡದಲ್ಲಿ ತನ್ನ ಶರೀರದಲ್ಲಿರುವ ಲೋಮಗಳ ಪ್ರಮಾಣದಷ್ಟು ವರ್ಷಗಳು ಬೀಳುವನು.

೯೦. ಅನಂತರ ಮೂರು ಜನ್ಮಗಳಲ್ಲಿ ಬಕಪಕ್ಷಿಯಾಗಿಯೂ, ಮೂರು ಜನ್ಮಗಳಲ್ಲಿ ಬಿಳಿಯ ಹಂಸಪಕ್ಷಿಯಾಗಿಯೂ, ಒಂದು ಜನ್ಮದಲ್ಲಿ ಶಂಖಚಿಲ್ಲವಾಗಿಯೂ ಹುಟ್ಟುವುದಲ್ಲದೆ ಇತರ ಬೆಳ್ಳಕ್ಕಿಗಳ ಜನ್ಮವನ್ನೂ ಹೊಂದುವನು.

ತತೋ ರಕ್ತವಿಕಾರೀ ಚ ಶೂಲೀ ವೈ ಮಾನವೋ ಭವೇತ್ ।
ಸಪ್ತಜನ್ಮಸು ಚಾಲ್ಪಾಯುಸ್ತತಃ ಶುದ್ಧೋ ಭವೇನ್ನರಃ ॥ ೯೧ ॥

ರೈತ್ಯಕಾಂಸ್ಯಾದಿಪಾತ್ರಂ ಚ ಯೋ ಹರೇತ್ಸುರವಿಪ್ರಯೋಃ ।
ತೀಕ್ಷ್ಣಪಾಷಾಣಕುಂಡೇ ಚ ಸ್ವಲೋಮಾಬ್ದಂ ವಸೇದ್ಧ್ರುವಂ ॥ ೯೨ ॥

ಸ ಭವೇದಶ್ವಜಾತಿಶ್ಚ ಭಾರತೇ ಸಪ್ತಜನ್ಮಸು ।
ತತೋಽಧಿಕಾಂಗಯುಕ್ತಶ್ಚ ಪಾದರೋಗೀ ತತಃ ಶುಚಿಃ ॥ ೯೩ ॥

ಪುಂಶ್ಚಲ್ಯನ್ನಂ ಚ ಯೋ ಭುಂಕ್ತೇ ಪುಂಶ್ಚಲೀಜೀವ್ಯಜೀವಿನಃ ।
ಸ್ವಲೋಮಮಾನವರ್ಷಂ ಚ ಲಾಲಾಕುಂಡೇ ವಸೇದ್ಧ್ರುವಂ ॥ ೯೪ ॥

---

೯೧. ಅನಂತರ ರಕ್ತವಿಕಾರದಿಂದುಂಟಾಗುವ ರೋಗಗಳಿಂದಲೂ, ಶೂಲ ರೋಗದಿಂದಲೂ ನರಳುವನು. ಹೀಗೆ ಏಳು ಜನ್ಮಗಳೆತ್ತಿ ಅಲ್ಪಾಯುವಾಗಿದ್ದು ಕೊನೆಯಲ್ಲಿ ಶುದ್ಧನಾಗುವನು.

೯೨. ದೇವಬ್ರಾಹ್ಮಣರ ಹಿತ್ತಾಳೆ ಮತ್ತು ಕಂಚಿನ ಪಾತ್ರೆಗಳನ್ನು ಕದಿಯುವವನು ತೀಕ್ಷ್ಣಪಾಷಾಣವೆಂಬ ಕುಂಡದಲ್ಲಿ ತನ್ನ ಶರೀರದಲ್ಲಿರುವ ರೋಮಪ್ರಮಾಣಗಳಷ್ಟು ವರ್ಷ ನಿಜವಾಗಿಯೂ ವಾಸಿಸುವನು.

೯೩. ಅನಂತರ ಭಾರತದಲ್ಲಿ ಏಳುಸಾರಿ ಕುದುರೆಯ ಜನ್ಮವೆತ್ತಿ ಮುಂದೆ ಅಧಿಕಾವಯುವಗಳಿಂದಲೂ, ಪಾದರೋಗದಿಂದಲೂ ಕೂಡಿ ಕೊನೆಯಲ್ಲಿ ಪವಿತ್ರನಾಗುವನು.

೯೪. ವೇಶ್ಯೆಗೆ ಅಧೀನನಾಗಿದ್ದುಕೊಂಡು ಅವಳ ಅನ್ನದಿಂದ ಬಾಳುವವನು ತನ್ನ ಶರೀರದ ಲೋಮಗಳ ಪ್ರಮಾಣದಷ್ಟು ವರ್ಷಗಳು ಲಾಲಾ (ಜೊಲ್ಲು) ಕುಂಡದಲ್ಲಿ ನರಳುವನು.

ತಾಡಿತೋ ಯಮದೂತೇನ ತದ್ಭೋಜೀ ತತ್ರ ತಿಷ್ಠತಿ ।
ತತಶ್ಚಕ್ಷುಶ್ಶೂಲರೋಗೀ ತತಃ ಶುದ್ಧಃ ಕ್ರಮೇಣ ಸಃ ॥ ೯೫ ॥

ಮ್ಲೇಚ್ಛಸೇವೀ ಮಷೀಜೀವೀ ಯೋ ವಿಪ್ರೋ ಭಾರತೇ ಭುವಿ ।
ಸ ಚ ತಪ್ತಮಷೀಕುಂಡೇ ಸ್ವಲೋಮಾಬ್ದಂ ವಸೇದ್ಧ್ರುವಂ ॥ ೯೬ ॥

ತಾಡಿತೋ ಯಮದೂತೇನ ತದ್ಭೋಜೀ ತತ್ರ ತಿಷ್ಠತಿ ।
ತತಸ್ತ್ರಿಜನ್ಮನಿ ಭವೇತ್ಕೃಷ್ಣವರ್ಣಃ ಪಶುಃ ಸತಿ ॥ ೯೭ ॥

ತ್ರಿಜನ್ಮನಿ ಭವೇಚ್ಛಾಗಃ ಕೃಷ್ಣಸರ್ಪಸ್ತ್ರಿಜನ್ಮನಿ ।
ತತಶ್ಚ ತಾಲವೃಕ್ಷಶ್ಚ ತತಃ ಶುದ್ಧೋ ಭವೇನ್ನರಃ ॥ ೯೮ ॥

ಧಾನ್ಯಾನಿ ಸಸ್ಯಂ ತಾಂಬೂಲಂ ಯೋ ಹರೇತ್ಸುರವಿಪ್ರಯೋಃ ।
ಆಸನಂ ಚ ತಥಾ ತಲ್ಪಂ ಚೂರ್ಣ ಕುಂಡಂ ಪ್ರಯಾತಿ ಸಃ ॥ ೯೯ ॥

---

೯೫. ಅಲ್ಲಿ ಯಮದೂತರಿಂದ ದಂಡಿತನಾಗಿ ಆ ಜೊಲ್ಲುಗಳನ್ನೇ ತಿಂದು ಜೀವಿಸುತ್ತ ಕೆಲವು ಕಾಲದಮೇಲೆ ನೇತ್ರರೋಗಿಯೂ, ಶೂಲರೋಗಿಯೂ ಆಗಿ ನರಳಿ ಪುನಃ ಶುಚಿಯಾಗುವನು.

೯೬. ಮ್ಲೇಚ್ಛರ ಸೇವೆಯಿಂದಲೂ, ಬರೆವಣಿಗೆಯಿಂದಲೂ ಜೀವಿಸುವ ಬ್ರಾಹ್ಮಣನು ಚೆನ್ನಾಗಿ ಕಾದಿಯುತ್ತಿರುವ ಮಷೀಕುಂಡದಲ್ಲಿ ತನ್ನ ಲೋಮಗಳಿರುವಷ್ಟು ವರ್ಷಗಳು ಜೀವಿಸುವನು.

೯೭. ಅಲ್ಲಿ ಯಮದೂತರಿಂದ ಶಿಕ್ಷೆಹೊಂದುತ್ತ ಆ ಮಷಿಯನ್ನೇ ತಿಂದು ಜೀವಿಸಿಕೊಂಡು ಮುಂದೆ ಮೂರು ಜನ್ಮದಲ್ಲಿ ಕಪ್ಪುಬಣ್ಣದ ಪಶುವಾಗಿ ಜನಿಸುವನು.

೯೮ ಮುಂದೆ ಮೂರು ಜನ್ಮಗಳು ಹೋತನಾಗಿಯೂ, ಮೂರು ಜನ್ಮಗಳು ಕಾಳಿಂಗಸರ್ಪನಾಗಿಯೂ, ಅನಂತರ ತಾಳೆಯಮರವಾಗಿಯೂ ಹುಟ್ಟಿ ಶುಚಿಯಾಗುವನು.

೯೯ ದೇವಬ್ರಾಹ್ಮಣರ ಸಸ್ಯ, ಧಾನ್ಯ, ಆಸನ, ಶಯ್ಯೆ ಮತ್ತು ತಾಂಬೂಲಾದಿಗಳನ್ನು ಅಪಹರಿಸುವವನು ಚೂರ್ಣಕುಂಡವೆಂಬ ನರಕಕ್ಕೆ ಹೋಗುವನು.

ಶತಾಬ್ದಂ ತತ್ರ ನಿವಸೇದ್ಯಮದೂತೇನ ತಾಡಿತಃ ।
ತತೋ ಭವೇನ್ಮೇಷಜಾತಿಃ ಕುಕ್ಕುಟಶ್ಚ ತ್ರಿಜನ್ಮನಿ ॥ ೧೦೦ ॥

ತತೋ ಭವೇನ್ಮಾನವಶ್ಚ ಕಾಸವ್ಯಾಧಿಯುತೋ ಭುವಿ ।
ವಂಶಹೀನೋ ದರಿದ್ರಶ್ಚಾಪ್ಯಲ್ಪಾಯುಶ್ಚ ತತಃ ಶುಚಿಃ ॥ ೧೦೧ ॥

ಚಕ್ರಂ ಕರೋತಿ ವಿಪ್ರಾಣಾಂ ಹೃತ್ವಾ ದ್ರವ್ಯಂ ಚ ಯೋ ನರಃ ।
ಸ ವಸೇಚ್ಚಕ್ರಕುಂಡೇ ಚ ಶತಾಬ್ದಂ ದಂಡತಾಡಿತಃ ॥ ೧೦೨ ॥

ತತೋ ಭವೇನ್ಮಾನವಶ್ಚ ತೈಲಕಾರಸ್ತ್ರಿಜನ್ಮನಿ ।
ವ್ಯಾಧಿಯುಕ್ತೋ ಭವೇದ್ರೋಗೀ ವಂಶಹೀನಸ್ತತಃ ಶುಚಿಃ ॥ ೧೦೩ ॥

---

೧೦೦. ಅಲ್ಲಿ ಯಮದೂತರಿಂದ ಶಿಕ್ಷೆಹೊಂದುತ್ತ ನೂರುವರ್ಷಗಳ ಕಾಲ ಬಿದ್ದು ಮುಂದೆ ಮೂರು ಜನ್ಮದಲ್ಲಿ ಕುರಿಯಾಗಿಯೂ, ಕೋಳಿಯಾಗಿಯೂ ಹುಟ್ಟುವನು.

೧೦೧. ಅನಂತರ ಭೂಲೋಕದಲ್ಲಿ ಮನುಷ್ಯನಾಗಿ ಹುಟ್ಟಿದರೂ ಹುಣ್ಣು ಮುಂತಾದ ರೋಗಗಳಿಂದ ನರಳುತ್ತ ವಂಶಹೀನನೂ, ದರಿದ್ರನೂ, ಅಲ್ಪಾಯುವೂ ಆಗಿ ಪುನಃ ಶುಚಿಹೊಂದುವನು.

೧೦೨. ಬ್ರಾಹ್ಮಣರ ದ್ರವ್ಯವನ್ನು ಅಪಹರಿಸಿ ಅದರಿಂದ ಚಕ್ರಗಳನ್ನು ಮಾಡಿ ಮಾರಿ ಜೀವಿಸುವವನು ನೂರುವರ್ಷಗಳ ಕಾಲ ಚಕ್ರಕುಂಡಕ್ಕೆ ಬಿದ್ದು ದಂಡಕ್ಕೆ ಒಳಗಾಗುವನು.

೧೦೩. ಅನಂತರ ಮನುಷ್ಯಜನ್ಮವೆತ್ತಿದರೂ ಮೂರು ಜನ್ಮಗಳು ಕಳೆಯುವ ವರೆಗೆ ರೋಗಗ್ರಸ್ತನೂ, ವಂಶಹೀನನೂ ಆದ ಗಾಣಿಗನಾಗಿ ಮುಂದೆ ಶುಚಿಯಾಗುವನು.

ಬಾಂಧವೇಷು ಚ ವಿಪ್ರೇಷು ಕುರುತೇ ವಕ್ರತಾಂ ನರಃ ।
ಪ್ರಯಾತಿ ವಜ್ರಕುಂಡಂ ಚ ವಸೇತ್ತತ್ರ ಯುಗಂ ಸತಿ ॥ ೧೦೪ ॥

ತತೋ ಭವೇತ್ಸ ವಕ್ರಾಂಗೋ ಹೀನಾಂಗಃ ಸಪ್ತಜನ್ಮಸು ।
ದರಿದ್ರೋ ವಂಶಹೀನಶ್ಚ ಭಾರ್ಯಾಹೀನಸ್ತತಃ ಶುಚಿಃ ॥ ೧೦೫ ॥

ಶಯನೇ ಕೂರ್ಮಮಾಂಸಂ ಚ ಬ್ರಾಹ್ಮಣೋಯೋಹಿ ಭಕ್ಷತಿ ।
ಕೂರ್ಮಕುಂಡೇ ವಸೇತ್ಸೋಽಪಿ ಶತಾಬ್ದಂ ಕೂರ್ಮಭಕ್ಷಿತಃ ॥ ೧೦೬ ॥

ತತೋ ಭವೇತ್ಕೂರ್ಮಜನ್ಮ ತ್ರಿಜನ್ಮನಿ ಚ ಸೂಕರಃ ।
ತ್ರಿಜನ್ಮನಿ ಬಿಡಾಲಶ್ಚ ಮಯೂರಶ್ಚ ತ್ರಿಜನ್ಮನಿ ॥ ೧೦೭ ॥

---

೧೦೪. ಆಪ್ತಬಂಧುವಾದ ಬ್ರಾಹ್ಮಣನಿಗೆ ಮೋಸಮಾಡಿ ಜೀವಿಸುವ ಮನುಷ್ಯನು ವಜ್ರಕುಂಡವೆಂಬ ನರಕಕ್ಕೆ ಹೋಗಿ ಅಲ್ಲಿ ಒಂದು ಯುಗಕಾಲ ವಾಸಿಸುವನು.

೧೦೫. ಮುಂದೆ ಏಳು ಜನ್ಮಗಳಲ್ಲಿ ವಕ್ರಾಂಗನೂ, ಅಂಗಹೀನನೂ ಆಗುವುದಲ್ಲದೆ ವಂಶರಹಿತನೂ, ಭಾರ್ಯಾರಹಿತನೂ ಮತ್ತು ದರಿದ್ರನೂ ಆಗಿ ಕಷ್ಟವನ್ನು ಅನುಭವಿಸಿ ಶುಚಿಯಾಗುವನು.

೧೦೬. ಚಾತುರ್ಮಾಸ್ಯದಲ್ಲಿ ಆಮೆಯ ಮಾಂಸವನ್ನು ತಿನ್ನುವ ಬ್ರಾಹ್ಮಣನು ಕೂರ್ಮಕುಂಡವೆಂಬ ನರಕದಲ್ಲಿ ನೂರು ವರ್ಷಗಳ ಕಾಲ ಆಮೆಯ ಆಹಾರವಾಗಿ ಬಿದ್ದಿರುವನು.

೧೦೭. ಅನಂತರ ಮೂರು ಸಾರಿ ಆಮೆಯ ಜನ್ಮವನ್ನೂ, ಮೂರು ಸಾರಿ ಹಂದಿಯ ಜನ್ಮವನ್ನೂ, ಮೂರು ಸಾರಿ ಬೆಕ್ಕಿನ ಜನ್ಮವನ್ನೂ, ಮೂರು ಸಾರಿ ನವಿಲಿನ ಜನ್ಮವನ್ನೂ ಪಡೆದು ಮುಂದೆ ಶುಚಿಯಾಗುವನು.

ಘೃತತೈಲಾದಿಕಂ ಚೈವ ಯೋ ಹರೇತ್ಸುರವಿಪ್ರಯೋಃ ।
ಜ್ವಾಲಕುಂಡಂ ಸ ವೈ ಯಾತಿ ಭಸ್ಮಕುಂಡಂ ಚ ಪಾತಕೀ ॥ ೧೦೮ ॥

ತತ್ರ ಸ್ಥಿತ್ವಾ ಶತಾಬ್ದಂ ಚ ಸ ಭವೇತ್ತೈಲಪಾಯಿಕಃ ।
ಸಪ್ತಜನ್ಮಸು ಮತ್ಸ್ಯಃ ಸ್ಯಾನ್ಮೂಷಕಶ್ಚ ತತಃ ಶುಚಿಃ ॥ ೧೦೯ ॥

ಸುಗಂಧಿತೈಲಂ ಧಾತ್ರೀಂ ಚ ಗಂಧದ್ರವ್ಯಂ ತಥೈವ ವಾ ।
ಭಾರತೇ ಪುಣ್ಯವರ್ಷೇ ಚ ಯೋ ಹರೇತ್ಸುರವಿಪ್ರಯೋಃ ॥ ೧೧೦ ॥

ವಸೇದ್ದುರ್ಗಂಧಕುಂಡೇ ಚ ದುರ್ಗಂಧಂ ಚ ಲಭೇತ್ಸದಾ ।
ಸ್ವಲೋಮಮಾನವರ್ಷಂ ಚ ತತೋ ದುರ್ಗಂಧಿಕೋ ಭವೇತ್ ॥ ೧೧೧ ॥

ದುರ್ಗಂಧಿಕಃ ಸಪ್ತಜನ್ಮೌ ಮೃಗನಾಭಿಸ್ತ್ರಿಜನ್ಮನಿ ।
ಸಪ್ತಜನ್ಮಸು ಗಂಧಿಶ್ಚ ತತೋ ವೈ ಮಾನವೋ ಭವೇತ್ ॥ ೧೧೨ ॥

---

೧೦೮. ದೇವಬ್ರಾಹ್ಮಣರಿಗೆ ಸಂಬಂಧಪಟ್ಟ ತುಪ್ಪ, ಎಣ್ಣೆ ಮುಂತಾದ ರಸ ದ್ರವ್ಯಗಳನ್ನು ಅಪಹರಿಸುವ ಪಾಪಿಯು ಜ್ವಾಲಾಕುಂಡದಲ್ಲಿಯೂ, ಭಸ್ಮಕುಂಡ ದಲ್ಲಿಯೂ ಬಿದ್ದು ನರಳುವನು.

೧೦೯. ಅಲ್ಲಿ ನೂರುವರ್ಷ ಎಣ್ಣೆ, ತುಪ್ಪಗಳನ್ನೇ ಕುಡಿದು ಜೀವಿಸುವುದಲ್ಲದೆ ಮುಂದೆ ಏಳು ಜನ್ಮಗಳಲ್ಲಿ ಮೀನಾಗಿಯೂ, ಇಲಿಯಾಗಿಯೂ, ಜನಿಸಿ ಅನಂತರ ಶುಚಿಹೊಂದುವನು.

೧೧೦–೧೧೧. ಪುಣ್ಯಕರವಾದ ಭರತವರ್ಷದಲ್ಲಿ ದೇವಬ್ರಾಹ್ಮಣರಿಗೆ ಸಲ್ಲುವ ಸುಗಂಧತೈಲವನ್ನೂ, ಭೂಮಿಯನ್ನೂ, ಗಂಧದ್ರವ್ಯಗಳನ್ನೂ, ಅಪಹರಿಸುವವನು ದುರ್ಗಂಧಕುಂಡದಲ್ಲಿ ತನ್ನ ಶರೀರದ ಲೋಮಗಳ ಪ್ರಮಾಣದಷ್ಟು ವರ್ಷ ದುರ್ಗಂಧ ವನ್ನು ಅನುಭವಿಸಿ ಮುಂದೆ ದುರ್ಗಂಧ ಶರೀರಿಯಾಗುವನು.

೧೧೨. ಈ ರೀತಿ ಏಳು ಜನ್ಮಗಳಲ್ಲಿ ದುರ್ಗಂಧಿಯಾಗಿಯೂ, ಮೂರು ಜನ್ಮಗಳಲ್ಲಿ ಕಸ್ತೂರಿಯಾಗಿಯೂ, ಮುಂದೆ ಏಳು ಜನ್ಮಗಳಲ್ಲಿ ಸುಗಂಧಿಯಾಗಿಯೂ ಇದ್ದು ನಂತರ ಮನುಷ್ಯನಾಗುವನು.

ಬಲೇನೈವ ಖಲತ್ವೇನ ಹಿಂಸಾರೂಪೇಣ ವಾ ಸತಿ ।
ಬಲೀ ಚ ಯೋ ಹರೇದ್ಭೂಮಿಂ ಭಾರತೇ ಪರಸ್ಯೈತ್ಯಕೀಂ ॥ ೧೧೩ ॥

ಸ ವಸೇತ್ತಪ್ತಶೂಲೇ ಚ ಭವೇತ್ತಪ್ತೋ ದಿವಾನಿಶಂ ।
ತಪ್ತತೈಲೇ ಯಥಾ ಜೀವೋ ದಗ್ಧೋ ಭ್ರಮತಿ ಸಂತತಂ ॥ ೧೧೪ ॥

ಭಸ್ಮಸಾನ್ನ ಭವತ್ಯೇವ ಭೋಗದೇಹೋ ನ ನಶ್ಯತಿ ।
ಸಪ್ತಮನ್ವಂತರಂ ಪಾಪೀ ಸಂತಪ್ತಸ್ತತ್ರ ತಿಷ್ಠತಿ ॥ ೧೧೫ ॥

ಶಬ್ದಂ ಕರೋತ್ಯನಾಹಾರೋ ಯಮದೂತೇನ ತಾಡಿತಃ ।
ಷಷ್ಟಿವರ್ಷಸಹಸ್ರಾಣಿ ವಿಟ್ಕೃಮಿರ್ಭಾರತೇ ತತಃ ॥ ೧೧೬ ॥

ತತೋ ಭವೇದ್ಭೂಮಿಹೀನೋ ದರಿದ್ರಶ್ಚ ತತಃ ಶುಚಿಃ ।
ತತಃ ಸ್ವಯೋನಿಂ ಸಂಪ್ರಾಪ್ಯ ಶುಭಕರ್ಮಾ ಭವೇತ್ಪುನಃ ॥ ೧೧೭ ॥

೧೧೩–೧೧೪. ಭಾರತದಲ್ಲಿ ಬಲಿಷ್ಠನಾದ ಮನುಷ್ಯನು ಬಲಹೀನನ ಭೂಮಿಯನ್ನು ಹಿಂಸೆಪಡಿಸಿಯಾಗಲೀ, ಮೋಸಮಾಡಿಯಾಗಲೀ, ಅಪಹರಿಸಿದರೆ ಅವನು ತಪ್ತಶೂಲವೆಂಬ ನರಕದಲ್ಲಿ ಸಿಲುಕಿ ಹಗಲುರಾತ್ರಿ ನರಳುವುದಲ್ಲದೆ ಚೆನ್ನಾಗಿ ಕುದಿಯುತ್ತಿರುವ ಎಣ್ಣೆಯಿಂದ ದಗ್ಧ ಜೀವನಾಗುವನು.

೧೧೫. ಆದರೆ ಕರ್ಮಭೋಗಕ್ಕೆ ಕಾರಣವಾದ ಅವನ ಪಾಂಚಭೌತಿಕ ದೇಹವು ನಾಶಹೊಂದುವುದಿಲ್ಲ. ಆ ಪಾಪಿಯು ಏಳು ಮನ್ವಂತರಗಳ ಕಾಲ ದುಃಖ ಸಂತಪ್ತನಾಗಿ ಅಲ್ಲಿಯೇ ನರಳುವನು.

೧೧೬. ಅನಂತರ ಯಮದೂತರಿಂದ ಶಿಕ್ಷೆಹೊಂದುತ್ತ, ಆಹಾರವಿಲ್ಲದೆ ಸಂಕಟಪಡುತ್ತ ಕೆಲವು ಕಾಲಗಳಿದ್ದು ಮುಂದೆ ಭಾರತದಲ್ಲಿ ಅರವತ್ತುಸಾವಿರ ವರ್ಷ ಮಲಕ್ರಿಮಿಯಾಗಿ ಜನಿಸುವನು.

೧೧೭. ಅಲ್ಲದೆ ಭೂಮಿರಹಿತನೂ, ಧನರಹಿತನೂ ಆಗಿದ್ದು ಶುಚಿಹೊಂದಿ ಮತ್ತೆ ತನ್ನ ಹಿಂದಿನ ಜನ್ಮವನ್ನೇ ಪಡೆದು ಶುಭಕರ್ಮಗಳಲ್ಲಿ ತೊಡಗುವನು.

ಛಿನತ್ತಿ ಜೀವಿನಃ ಖಡ್ಗೈರ್ದಯಾಹೀನಃ ಸುದಾರುಣಃ ।
ನರಘಾತೀ ಹಂತಿ ನರಮರ್ಥಲೋಭೇನ ಭಾರತೇ ॥ ೧೧೮ ॥

ಅಸಿಪತ್ರೇ ಚ ಸ ವಸೇದ್ಯಾವದಿಂದ್ರಾಶ್ಚತುರ್ದಶ ।
ತೇಷು ಚೇದ್ಬ್ರಾಹ್ಮಣಾನ್ಹಂತಿ ಶತಮನ್ವಂತರಂ ತದಾ ॥ ೧೧೯ ॥

ಛಿನ್ನಾಂಗಶ್ಚ ಭವೇತ್ಪಾಪೀ ಖಡ್ಗಧಾರೇಣ ಸಂತತಂ ।
ಅನಾಹಾರಃ ಶಬ್ದಕೃಚ್ಚ ಯಮದೂತೇನ ತಾಡಿತಃ ॥ ೧೨೦ ॥

ಚಂಡಾಲಃ ಶತಜನ್ಮಾನಿ ಭಾರತೇ ಸೂಕರೋ ಭವೇತ್ ।
ಕುಕ್ಕುರಃ ಶತಜನ್ಮಾನಿ ಸೃಗಾಲಃ ಸಪ್ತಜನ್ಮಸು ॥ ೧೨೧ ॥

ವ್ಯಾಘ್ರಶ್ಚ ಸಪ್ತಜನ್ಮಾನಿ ವೃಕಶ್ಚೈವ ತ್ರಿಜನ್ಮನಿ ।
ಜನ್ಮಸಪ್ತಸುಂಗಡೀ ಸ್ಯಾನ್ಮಹಿಷಶ್ಚ ತ್ರಿಜನ್ಮನಿ ॥ ೧೨೨ ॥

೧೧೮–೧೧೯. ಭರತಖಂಡದಲ್ಲಿ ಹಣದಾಸೆಗಾಗಿ ಜೀವಿಗಳನ್ನು ಕತ್ತಿಯಿಂದ ನಿರ್ದಯನಾಗಿ ಕತ್ತರಿಸುವ ಘಾತುಕನು ಚತುರ್ದಶೇಂದ್ರರ ಜೀವಿತಕಾಲದವರೆಗೆ ಅಸಿಪತ್ರವೆಂಬ ನರಕದಲ್ಲಿ ತೊಳಲುವನು. ಅದರಲ್ಲೂ ಬ್ರಾಹ್ಮಣನನ್ನು ಕೊಂದ ಪಾಪಿಯು ನೂರು ಮನ್ವಂತರಗಳ ಕಾಲ ನರಳುವನು.

೧೨೦. ಅಲ್ಲಿ ಆ ಪಾಪಿಯು ಕತ್ತಿಯ ಅಲುಗಿನಿಂದ ಕತ್ತರಿಸಿ ಹೋದ ಅವಯುಗಳುಳ್ಳವನಾಗಿ ಆಹಾರವಿಲ್ಲದೆ ಕಿರಿಚುತ್ತ ಯಮದೂತರ ಶಿಕ್ಷೆಗೆ ಗುರಿಯಾಗುವನು.

೧೨೧. ಅಲ್ಲದೆ ಭಾರತದಲ್ಲಿ ನೂರು ಜನ್ಮಗಳು ಚಂಡಾಲನಾಗಿಯೂ, ನೂರು ಜನ್ಮಗಳು ನಾಯಿಯಾಗಿಯೂ, ಏಳು ಜನ್ಮಗಳು ಹಂದಿಯಾಗಿಯೂ ಹುಟ್ಟುವನು.

೧೨೨. ಮುಂದೆ ಏಳು ಜನ್ಮಗಳಲ್ಲಿ ಹುಲಿಯಾಗಿಯೂ, ಮೂರು ಜನ್ಮಗಳಲ್ಲಿ ತೋಳನಾಗಿಯೂ, ಏಳು ಜನ್ಮಗಳಲ್ಲಿ ಖಡ್ಗಮೃಗವಾಗಿಯೂ, ಮೂರು ಜನ್ಮಗಳಲ್ಲಿ ಎಮ್ಮೆಯಾಗಿಯೂ ಹುಟ್ಟುವನು.

ಗ್ರಾಮಂ ವಾ ನಗರಂ ವಾಪಿ ದಾಹನಂ ಯಃ ಕರೋತಿ ಚ ।
ಕ್ಷುರಧಾರೇ ವಸೇತ್ಸೋಽಪಿ ಛಿನ್ನಾಂಗಸ್ತ್ರಿಯುಗಂ ಸತಿ ॥ ೧೨೩ ॥

ತತಃ ಪ್ರೇತೋ ಭವೇತ್ಸದ್ಯೋ ವಹ್ನಿವಕ್ತ್ರೋ ಭ್ರಮೇನ್ಮಹೀಂ ।
ಸಪ್ತಜನ್ಮಾಮೇಧ್ಯಭೋಜೀ ಖದ್ಯೋತಃ ಸಪ್ತಜನ್ಮಸು ॥ ೧೨೪ ॥

ತತೋ ಭವೇನ್ಮಹಾಶೂಲೀ ಮಾನವಃ ಸಪ್ತಜನ್ಮಸು ।
ಸಪ್ತಜನ್ಮಗಲತ್ಕುಷ್ಠೀ ತತಃ ಶುದ್ಧೋ ಭವೇನ್ನರಃ ॥ ೧೨೫ ॥

ಪರಕರ್ಣೋಪಜಾಪೇನ ಪರನಿಂದಾಂ ಕರೋತಿ ಯಃ ।
ಪರದೋಷೇ ಮಹಾತೋಷೀ ದೇವಬ್ರಾಹ್ಮಣನಿಂದಕಃ ॥ ೧೨೬ ॥

ಸೂಚೀಮುಖೇ ಸ ಚ ವಸೇತ್ಸೂಚೀವಿದ್ಧೋ ಯುಗತ್ರಯಂ ।
ತತೋ ಭವೇದ್ವೃಶ್ಚಿಕಶ್ಚ ಸರ್ಪಸ್ಸ್ಯಾತ್ಸಪ್ತಜನ್ಮಸು ॥ ೧೨೭ ॥

---

೧೨೩. ಎಲೌ ಪತಿವ್ರತೆಯಾದ ಸಾವಿತ್ರಿಯೇ, ಹಳ್ಳಿಯನ್ನಾಗಲೀ, ಪಟ್ಟಣವನ್ನಾಗಲೀ ದಾಹಮಾಡಿಸುವವನು ಕ್ಷುರಧಾರವೆಂಬ ನರಕದಲ್ಲಿ ಕತ್ತರಿಸಲ್ಪಟ್ಟ ಅವಯವಗಳುಳ್ಳವನಾಗಿ ಮೂರುಯುಗಗಳಕಾಲ ವಾಸಿಸುವನು.

೧೨೪. ಅನಂತರ ಪ್ರೇತನಾಗಿ ಬಾಯಿಯಲ್ಲಿ ಬೆಂಕಿಯನ್ನುಗುಳುತ್ತ ಭೂಮಿಯಲ್ಲಿ ಅಲೆಯುವನು. ಅಲ್ಲದೆ ಏಳು ಜನ್ಮಗಳಲ್ಲಿ ಅಮೇಧ್ಯಭಕ್ಷಕನಾಗಿಯೂ, ಏಳು ಜನ್ಮಗಳಲ್ಲಿ ಮಿಣುಕುಹುಳುವಾಗಿಯೂ ಕಷ್ಟಪಡುವನು.

೧೨೫. ಮುಂದೆ ಏಳು ಜನ್ಮಗಳಲ್ಲಿ ಮಹಾಶೂಲರೋಗಿಯೂ, ಏಳು ಜನ್ಮಗಳಲ್ಲಿ ಕುಷ್ಠರೋಗಿಯೂ ಆಗಿ ನರಳಿ ನಂತರ ಶುದ್ಧನಾಗುವನು.

೧೨೬–೧೨೭. ಚಾಡಿಯ ಮಾತನ್ನು ಕೇಳಿ ಇತರರನ್ನು ದೂಷಿಸುವವನೂ, ಪರನಿಂದೆಯಿಂದ ಅತ್ಯಾನಂದಪಡುವವನೂ, ದೇವಬ್ರಾಹ್ಮಣರನ್ನು ಅಲ್ಲಗಳೆಯುವವನೂ, ಸೂಚೀಮುಖವೆಂಬ ನರಕದಲ್ಲಿ ಸೂಜಿಯಿಂದ ಗಾಯಹೊಂದಿ ಮೂರು ಯುಗಗಳ ಕಾಲ ತೊಳಲುವನು. ಮುಂದೆ ಏಳು ಜನ್ಮಗಳಲ್ಲಿ ಚೇಳು ಮತ್ತು ಹಾವಾಗಿ ಹುಟ್ಟಿ ನರಳುವನು.

ವಜ್ರಕೀಟಃ ಸಪ್ತಜನೌ ಭಸ್ಮಕೀಟಸ್ತತಃ ಪರಂ ।
ತತೋ ಭವೇನ್ಮಾನವಶ್ಚ ಮಹಾವ್ಯಾಧಿಸ್ತತಃ ಶುಚಿಃ ॥ ೧೨೮ ॥

ಗೃಹಿಣಾಂ ಚ ಗೃಹಂ ಭಿತ್ವಾ ವಸ್ತುಸ್ತೇಯಂ ಕರೋತಿ ಯಃ ।
ಗಾಶ್ಚಚ್ಛಾಗಾಂಶ್ಚ ಮೇಷಾಂಶ್ಚ ಯಾತಿ ಗೋಧಾಮುಖಂ ಚ ಸಃ ॥ ೧೨೯ ॥

ತತೋ ಭವೇತ್ಸಪ್ತಜನೌ ಗೋಜಾತಿರ್ವ್ಯಾಧಿಸಂಯುತಃ ।
ತ್ರಿಜನ್ಮ ಮೇಷಜಾತಿಶ್ಚ ಚ್ಛಾಗಜಾತಿಸ್ತ್ರಿಜನ್ಮನಿ ॥ ೧೩೦ ॥

ತತೋ ಭವೇನ್ಮಾನವಶ್ಚ ನಿತ್ಯರೋಗೀ ದರಿದ್ರಕಃ ।
ಭಾರ್ಯಾಹೀನೋ ಬಂಧುಹೀನೋ ಸಂತಾಪೀ ಚ ತತಃ ಶುಚಿಃ ॥ ೧೩೧ ॥

ಸಾಮಾನ್ಯದ್ರವ್ಯಚೌರಶ್ಚ ಯಾತಿ ನಕ್ರಮುಖಂ ಯುಗಂ ।
ತತೋ ಭವೇನ್ಮಾನವಶ್ಚ ಮಹಾರೋಗೀ ತತಃ ಶುಚಿಃ ॥ ೧೩೨ ॥

---

೧೨೮. ಅಲ್ಲದೆ ಏಳು ಜನ್ಮಗಳಲ್ಲಿ ವಜ್ರಕೀಟವಾಗಿಯೂ, ಮತ್ತೇಳು ಜನ್ಮಗಳಲ್ಲಿ ಭಸ್ಮಕೀಟವಾಗಿಯೂ, ಅನಂತರ ಮಹಾವ್ಯಾಧಿಯುಳ್ಳ ಮನುಜನಾಗಿಯೂ ಹುಟ್ಟಿ ಪಾಪನಿರ್ಮುಕ್ತನಾಗುವನು.

೧೨೯. ಸಂಸಾರಿಗಳ ಮನೆಗೆ ಕನ್ನಹಾಕಿ ಪದಾರ್ಥಗಳನ್ನೂ, ಹಸು, ಆಡು, ಕುರಿ ಮುಂತಾದ ಪ್ರಾಣಿಗಳನ್ನೂ ಅಪಹರಿಸುವವನು ಗೋಧಾಮುಖವೆಂಬ ನರಕಕ್ಕೆ ಹೋಗುವನು.

೧೩೦. ಅಲ್ಲಿ ನರಳಿದ ನಂತರ ಏಳು ಜನ್ಮಗಳಲ್ಲಿ ರೋಗಿಯಾದ ಹಸುವಾಗಿಯೂ, ಮೂರು ಜನ್ಮದಲ್ಲಿ ಟಗರಾಗಿಯೂ, ಮೂರು ಜನ್ಮದಲ್ಲಿ ಹೋತನಾಗಿಯೂ ಹುಟ್ಟಿ ನರಳುವನು.

೧೩೧. ಅನಂತರ ನಿತ್ಯರೋಗಿಯೂ, ದರಿದ್ರನೂ, ಭಾರ್ಯಾಬಂಧುವಿರಹಿತನೂ ಆದ ಮಾನವನಾಗಿ ಸಂತಪಿಸಿ ಕೊನೆಯಲ್ಲಿ ಶುದ್ಧನಾಗುವನು.

೧೩೨. ಮನುಜರ ಸಾಮಾನ್ಯ ದ್ರವ್ಯಗಳನ್ನು ಅಪಹರಿಸುವವನು ನಕ್ರಮುಖವೆಂಬ ನರಕದಲ್ಲಿ ಒಂದು ಯುಗಕಾಲವಿರುವನು. ಅನಂತರ ಮಾನವನಾಗಿ ಹುಟ್ಟಿ ಮಹಾರೋಗದಿಂದ ನರಳಿ ಶುಚಿಹೊಂದುವನು.

ಹಂತಿ ಗಾಶ್ಚ ಗಜಾಂಶ್ಚೈವ ತುರಗಾಂಶ್ಚ ನರಾಂಸ್ತಥಾ ।
ಸ ಯಾತಿ ಗಜದಂಶಂ ಚ ಮಹಾಪಾಪೀ ಯುಗತ್ರಯಂ ॥ ೧೩೩ ॥

ತಾಡಿತೋ ಯಮದೂತೇನ ಗಜದಂತೇನ ಸಂತತಂ ।
ಸ ಭವೇದ್ಗಜಜಾತಿಶ್ಚ ತುರಗಶ್ಚ ತ್ರಿಜನ್ಮನಿ ।
ಗೋಜಾತಿರ್ಮ್ಲೇಚ್ಛಜಾತಿಶ್ಚ ತತಃ ಶುದ್ಧೋ ಭವೇನ್ನರಃ ॥ ೧೩೪ ॥

ಜಲಂ ಪಿಬಂತೀಂ ತೃಷಿತಾಂ ಗಾಂ ವಾರಯತಿ ಯೋ ನರಃ ।
ತಚ್ಛುಶ್ರೂಷಾವಿಹೀನಶ್ಚ ಗೋಮುಖಂ ಯಾತಿ ಮಾನವಃ ॥ ೧೩೫ ॥

ನರಕಂ ಗೋಮುಖಾಕಾರಂ ಕೃಮಿತಪ್ತೋದಕಾನ್ವಿತಂ ।
ತತ್ರ ತಿಷ್ಠತಿ ಸಂತಪ್ತೋ ಯಾವನ್ಮನ್ವಂತರಾವಧಿ ॥ ೧೩೬ ॥

ತತೋ ನರೋಽಪಿ ಗೋಹೀನೋ ಮಹಾರೋಗೀ ದರಿದ್ರಕಃ ।
ಸಪ್ತಜನ್ಮನ್ಯಂತ್ಯಜಾತಿಃ ತತಃ ಶುದ್ಧೋ ಭವೇನ್ನರಃ ॥ ೧೩೭ ॥

---

೧೩೩. ಹಸುಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ ಮತ್ತು ಮನುಷ್ಯರನ್ನೂ ಸಂಹರಿಸುವ ಮಹಾಪಾಪಿಯು ಗಜದಂಶವೆಂಬ ನರಕದಲ್ಲಿ ಮೂರು ಯುಗಗಳ ಕಾಲ ನರಳುವನು.

೧೩೪. ಅಲ್ಲಿ ಅವನನ್ನು ಯಮದೂತರು ಆನೆಯ ದಂತದಿಂದ ಹೊಡೆಯುವರು. ಅನಂತರ ಆ ಮನುಷ್ಯನು ಆನೆ, ಕುದುರೆ, ಹಸು ಮತ್ತು ಮ್ಲೇಚ್ಛ ಜಾತಿಗಳಲ್ಲಿ ಕ್ರಮವಾಗಿ ಮೂರು ಮೂರು ಜನ್ಮಗಳೆತ್ತಿ ಮುಂದೆ ಶುದ್ಧನಾಗುವನು.

೧೩೫. ಗೋಸೇವೆಮಾಡುವುದಕ್ಕೆ ಪ್ರತಿಯಾಗಿ ಬಾಯಾರಿ ನೀರು ಕುಡಿಯುತ್ತಿರುವ ಹಸುವನ್ನು ತಡೆಯುವ ಮನುಷ್ಯನು ಗೋಮುಖವೆಂಬ ನರಕಕ್ಕೆ ಹೋಗಿ ತೊಳಲುವನು.

೧೩೬. ಕ್ರಿಮಿಗಳಿಂದಲೂ, ಕುದಿಯುತ್ತಿರುವ ನೀರಿನಿಂದಲೂ ಕೂಡಿರುವ ಆ ಗೋಮುಖ ನರಕದಲ್ಲಿ ಮನ್ವಂತರ ಕಾಲ ಪರಿತಪಿಸುವನು.

೧೩೭. ಅನಂತರ ಮನುಜನಾಗಿ ಹುಟ್ಟಿದರೂ, ಗೋವುಗಳ ಸುಖವಿಲ್ಲದವನಾಗಿ, ಮಹಾರೋಗಿಯೂ, ದರಿದ್ರನೂ, ಚಂಡಾಲನೂ ಆಗಿ ಏಳು ಜನ್ಮಗಳೆತ್ತಿ ಮುಂದೆ ಶುಚಿಹೊಂದುವನು.

ಗೋಹತ್ಯಾಂ ಬ್ರಹ್ಮಹತ್ಯಾಂ ಚ ಯಃ ಕರೋತ್ಯತಿದೇಶಿಕೀಂ ।
ಯೋ ಹಿ ಗಚ್ಛೇದಗಮ್ಯಾಂ ಚ ಸಂಧ್ಯಾಹೀನೋಽಪ್ಯದೀಕ್ಷಿತಃ ॥ ೧೩೮ ॥

ಪ್ರತಿಗ್ರಾಹೀ ಚ ತೀರ್ಥೇಷು ಗ್ರಾಮಯಾಜೀ ಚ ದೇವಲಃ ।
ಶೂದ್ರಾಣಾಂ ಸೂಪಕಾರಶ್ಚ ಪ್ರಮತ್ತೋ ವೃಷಲೀಪತಿಃ ॥ ೧೩೯ ॥

ಗೋಹತ್ಯಾಂ ಬ್ರಹ್ಮಹತ್ಯಾಂ ಚ ಸ್ತ್ರೀಹತ್ಯಾಂ ಚ ಕರೋತಿ ಯಃ ।
ಮಿತ್ರಹತ್ಯಾಂ ಭ್ರೂಣಹತ್ಯಾಂ ಮಹಾಪಾಪೀ ಚ ಭಾರತೇ ॥ ೧೪೦ ॥

ಕುಂಭೀಪಾಕೇ ಸ ಚ ವಸೇದ್ಯಾವದಿಂದ್ರಾಶ್ಚತುರ್ದಶ ।
ತಾಡಿತೋ ಯಮದೂತೇನ ಚೂರ್ಣ್ಯಮಾನಶ್ಚ ಸಂತತಂ ॥ ೧೪೧ ॥

ಕ್ಷಣಂ ಪತತಿ ವಹ್ನೌ ಚ ಕ್ಷಣಂ ಪತತಿ ಕಂಟಕೇ ।
ಕ್ಷಣಂ ಚ ತಪ್ತತೈಲೇಷು ತಪ್ತತೋಯೇಷು ಚ ಕ್ಷಣಂ ॥ ೧೪೨ ॥

ಕ್ಷಣಂ ಚ ತಪ್ತಪಾಷಾಣೇ ತಪ್ತಲೋಹೇ ಕ್ಷಣಂ ತತಃ ।
ಗೃಧ್ರಃ ಕೋಟಿಸಹಸ್ರಾಣಿ ಶತಜನ್ಮಾನಿ ಸೂಕರಃ ॥ ೧೪೩ ॥

೧೩೮–೧೪೧. ಆತಿದೇಶಿಕವಾದ ಗೋಹತ್ಯೆ ಮತ್ತು ಬ್ರಹ್ಮಹತ್ಯೆ ಮಾಡುವವನೂ, ಆಗಮ್ಯಾಗಮನಮಾಡುವವನೂ, ಸಂಧ್ಯಾವಂದನೆಮಾಡದವನೂ, ಯಜ್ಞದೀಕ್ಷೆಯನ್ನು ಕೈಗೊಳ್ಳದವನೂ, ಪುಣ್ಯಕ್ಷೇತ್ರದಲ್ಲಿ ದಾನವನ್ನು ಸ್ವೀಕರಿಸುವವನೂ, ಗ್ರಾಮಯಾಜಕನೂ, ದೇವಾಲಯದ ಪೂಜಾರಿಯೂ, ಶೂದ್ರರ ಮನೆಯಲ್ಲಿ ಅಡಿಗೆ ಮಾಡುವವನೂ, ಮದದಿಂದ ಶೂದ್ರಸ್ತ್ರೀಯನ್ನು ವರಿಸುವವನೂ, ಸ್ತ್ರೀಹತ್ಯೆ, ಶಿಶುಹತ್ಯೆ ಮತ್ತು ಮಿತ್ರಹತ್ಯೆ ಮಾಡುವವನೂ ಆದ ಮಹಾಪಾಪಿಯು ಚತುರ್ದಶೇಂದ್ರರ ಜೀವಿತಕಾಲದವರೆಗೆ ಕುಂಭೀಪಾಕವೆಂಬ ನರಕದಲ್ಲಿ ಯಮದೂತರಿಂದ ಶಿಕ್ಷೆಹೊಂದುತ್ತ ನರಳುವನು.

೧೪೨–೧೪೪. ಅಲ್ಲದೆ ಬೆಂಕಿಯಲ್ಲೂ, ಮುಳ್ಳಿನ ಮೇಲೂ, ಕಾದ ಎಣ್ಣೆಯೊಳಗೂ, ಕುದಿಯುತ್ತಿರುವ ನೀರಿನಲ್ಲೂ, ಕಾದ ಕಲ್ಲಿನ ಮೇಲೂ, ಲೋಹದ ಮೇಲೂ ಕ್ಷಣಕ್ಷಣಕ್ಕೂ ಬಿದ್ದು ನರಳಿದ ನಂತರ ಕೋಟಿಸಹಸ್ರ ಜನ್ಮಗಳಲ್ಲಿ ಹದ್ದಾಗಿಯೂ, ನೂರು ಜನ್ಮಗಳಲ್ಲಿ ಹಂದಿಯಾಗಿಯೂ, ಏಳು ಜನ್ಮಗಳಲ್ಲಿ ಕಾಗೆ

ಕಾಕಶ್ಚ ಸಪ್ತಜನ್ಮಾನಿ ಸರ್ಪಸ್ಸ್ಯಾತ್ಸಪ್ತಜನ್ಮಸು ।
ಷಷ್ಠಿವರ್ಷಸಹಸ್ರಾಣಿ ತತೋ ವೈ ವಿಟ್ಕ್ರಿಮಿರ್ಭವೇತ್ ॥ ೧೪೪ ॥

ತತೋ ಭವೇತ್ಸವೃಷಲೋ ಗಲತ್ಕುಷ್ಠೀ ದರಿದ್ರಕಃ ।
ಯಕ್ಷ್ಮಗ್ರಸ್ತೋ ವಂಶಹೀನೋ ಭಾರ್ಯಾಹೀನಸ್ತತಃ ಶುಚಿಃ ॥ ೧೪೫ ॥

॥ ಸಾವಿತ್ರ್ಯುವಾಚ ॥

ಬ್ರಹ್ಮಹತ್ಯಾ ಚ ಗೋಹತ್ಯಾ ಕಿಂ ವಿಧಾ ವಾತಿದೇಶಿಕೀ ।
ಕಾ ವಾ ನೃಣಾಮಗಮ್ಯಾ ವಾ ಕೋ ವಾ ಸಂಧ್ಯಾವಿಹೀನಕಃ ॥ ೧೪೬ ॥

ಅದೀಕ್ಷಿತಃ ಪುಮಾನ್ಕೋ ವಾ ಕೋ ವಾ ತೀರ್ಥೆ ಪ್ರತಿಗ್ರಹೀ ।
ದ್ವಿಜಃ ಕೋ ವಾ ಗ್ರಾಮಯಾಜೀ ಕೋ ವಾ ವಿಪ್ರಶ್ಚ ದೇವಲಃ ॥ ೧೪೭ ॥

ಶೂದ್ರಾಣಾಂ ಸೂಪಕಾರಃ ಕಃ ಪ್ರಮತ್ತೋ ವೃಷಲೀ ಪತಿಃ ।
ಏತೇಷಾಂ ಲಕ್ಷಣಂ ಸರ್ವಂ ವದ ವೇದವಿದಾಂ ವರ ॥ ೧೪೮ ॥

ಯಾಗಿಯೂ, ಏಳು ಜನ್ಮಗಳಲ್ಲಿ ಹಾವಾಗಿಯೂ, ಹುಟ್ಟಿ ಅನಂತರ ಅರವತ್ತು ಸಾವಿರ ವರ್ಷಗಳವರೆಗೆ ಮಲಕ್ರಿಮಿಯಾಗಿ ತೊಳಲುವನು.

೧೪೫ ಅನಂತರ ಕುಷ್ಠರೋಗಿಯೂ, ಕ್ಷಯರೋಗಿಯೂ ಆದ ಶೂದ್ರನಾಗಿ ಜನಿಸಿ ದರಿದ್ರನೂ, ಭಾರ್ಯಾಹೀನನೂ, ವಂಶಹೀನನೂ ಆಗಿ ನರಳಿ ಮುಂದೆ ಶುಚಿ ಹೊಂದುವನು.

೧೪೬-೧೪೮. ಸಾವಿತ್ರಿ :–ಎಲೈ ವೇದಜ್ಞರಲ್ಲಿ ಶ್ರೇಷ್ಠನಾದ ಧರ್ಮರಾಯನೇ. ಆತಿದೇಶಿಕವಾದ ಬ್ರಹ್ಮಹತ್ಯೆ ಮತ್ತು ಗೋಹತ್ಯೆಯ ಸ್ವರೂಪವನ್ನು ನನಗೆ ತಿಳಿಸುವವನಾಗು. ಮನುಜನಿಗೆ ಅಗಮ್ಯಳಾದ ಸ್ತ್ರೀಯಾರು ?. ಸಂಧ್ಯಾಹೀನನಾದ ಪುರುಷನಿಗೆ ಏನು ಶಿಕ್ಷೆಯಾಗುವುದು ? ಯಜ್ಞದೀಕ್ಷೆಯನ್ನು ಕೈಗೊಳ್ಳದವನಾರು ? ಪುಣ್ಯತೀರ್ಥದಲ್ಲಿ ದಾನವನ್ನು ಸ್ವೀಕರಿಸುವವನ ಲಕ್ಷಣವೇನು ? ಗ್ರಾಮಯಾಜಿಯೂ, ದೇವಲನೂ, ಶೂದ್ರರ ಮನೆಯಲ್ಲಿ ಅಡಿಗೆಮಾಡುವವನೂ, ಶೂದ್ರಸ್ತ್ರೀಗೆ ಪತಿಯಾಗುವವನೂ ಯಾವ ಲಕ್ಷಣಗಳಿಂದ ಕೂಡಿರುವರು.

|| ಯಮ ಉವಾಚ ||

ಶ್ರೀ ಕೃಷ್ಣೇ ಚ ತದರ್ಚಾಯಾಂ ಮೃನ್ಮಯ್ಯಾಂ ಪ್ರಕೃತೌ ತಥಾ |
ಶಿವೇ ಚ ಶಿವಲಿಂಗೇ ವಾ ಸೂರ್ಯೇ ಸೂರ್ಯಮಣೌ ತಥಾ || ೧೪೯ ||

ಗಣೇಶೇ ವಾ ತದರ್ಚಾಯಾಮೇವಂ ಸರ್ವತ್ರ ಸುಂದರಿ |
ಕರೋತಿ ಭೇದಬುದ್ಧಿಂ ಯೋ ಬ್ರಹ್ಮಹತ್ಯಾಂ ಲಭೇತ್ತು ಸಃ || ೧೫೦ ||

ಸ್ವಗುರೌ ಸ್ವೇಷ್ಟದೇವೇ ವಾ ಜನ್ಮದಾತರಿ ಮಾತರಿ |
ಕರೋತಿ ಭೇದಬುದ್ಧಿಂ ಯೋ ಬ್ರಹ್ಮಹತ್ಯಾಂ ಲಭೇತ್ತು ಸಃ || ೧೫೧ ||

ವೈಷ್ಣವೇಷ್ವನ್ಯಭಕ್ತೇಷು ಬ್ರಾಹ್ಮಣೇಷ್ವಿತರೇಷು ಚ |
ಕರೋತಿ ಸಮತಾಂ ಯೋ ಹಿ ಬ್ರಹ್ಮಹತ್ಯಾಂ ಲಭೇತ್ತು ಸಃ || ೧೫೨ ||

ಯೋ ಮೂಢೋ ವಿಷ್ಣುನೈವೇದ್ಯೇ ಚಾನ್ಯನೈವೇದ್ಯಕೇ ತಥಾ |
ಹರೇಃ ಪಾದೋದಕೇಷ್ವನ್ಯದೇವಪಾದೋದಕೇ ತಥಾ |
ಕರೋತಿ ಸಮತಾಂ ಯೋ ಹಿ ಬ್ರಹ್ಮಹತ್ಯಾಂ ಲಭೇತ್ತು ಸಃ || ೧೫೩ ||

೧೪೯–೧೫೦. ಯಮ :—ಶ್ರೀಕೃಷ್ಣಪರಮಾತ್ಮನಿಗೂ ಅವನ ವಿಗ್ರಹಕ್ಕೂ, ಪ್ರಕೃತಿಗೂ ಅದರ ವಿಕಾರಗಳಿಗೂ, ಶಿವನಿಗೂ, ಶಿವಲಿಂಗಕ್ಕೂ, ಸೂರ್ಯನಿಗೂ, ಸೂರ್ಯಕಾಂತಾಮಣಿಗೂ, ಗಣೇಶನಿಗೂ ಅವನ ವಿಗ್ರಹಕ್ಕೂ ಭೇದವೆಣಿಸುವವನು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವನು.

೧೫೧. ತನ್ನ ಗುರುವಿಗೂ, ಇಷ್ಟದೇವತೆಗೂ, ಜನ್ಮದಾತೆಯಾದ ಮಾತೆಗೂ ಭೇದವೆಣಿಸುವವನು ಬ್ರಹ್ಮಹತ್ಯಾದೋಷಕ್ಕೆ ಭಾಗಿಯಾಗುವನು.

೧೫೨. ವಿಷ್ಣುವಿನ ಭಕ್ತರಿಗೂ, ಇತರ ದೇವತೆಗಳ ಭಕ್ತರಿಗೂ, ಬ್ರಾಹ್ಮಣರಿಗೂ, ಬ್ರಾಹ್ಮಣೇತರರಿಗೂ ಸಮಾನತೆಯನ್ನು ತೋರುವವನು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವನು.

೧೫೩. ವಿಷ್ಣುವಿಗೆ ನಿವೇದಿಸಿದ ಮತ್ತು ಇತರ ದೇವತೆಗಳಿಗೆ ನಿವೇದಿಸಿದ ವಸ್ತುಗಳಲ್ಲೂ, ವಿಷ್ಣುಪಾದೋದಕ ಮತ್ತು ಇತರ ದೇವತೆಗಳ ಪಾದೋದಕದಲ್ಲೂ ಸಮಭಾವನೆಯನ್ನು ಇಟ್ಟಿರುವವನು ಬ್ರಹ್ಮಹತ್ಯಾದೋಷಕ್ಕೆ ಭಾಗಿಯಾಗುವನು.

ಸರ್ವೇಶ್ವರೇಶ್ವರೇ ಕೃಷ್ಣೇ ಸರ್ವಕಾರಣಕಾರಣೇ ।
ಸರ್ವಾದ್ಯೇ ಸರ್ವದೇವಾನಾಂ ಸೇವ್ಯೇ ಸರ್ವಾಂತರಾತ್ಮನಿ || ೧೫೪ ||

ಮಾಯಯಾಽನೇಕರೂಪೇ ವಾಪ್ಯೇಕ ಏವ ಹಿ ನಿರ್ಗುಣೇ ।
ಕರೋತ್ಯನ್ಯೇನ ಸಮತಾಂ ಬ್ರಹ್ಮಹತ್ಯಾಂ ಲಭೇತ್ತು ಸಃ || ೧೫೫ ||

ಪಿತೃದೇವಾರ್ಚನಾಂ ಪೌರ್ವಾಪರಾಂ ವೇದವಿನಿರ್ಮಿತಾಂ ।
ಯಃ ಕರೋತಿ ನಿಷೇಧಂ ಚ ಬ್ರಹ್ಮಹತ್ಯಾಂ ಲಭೇತ್ತು ಸಃ || ೧೫೬ ||

ಯೇ ನಿಂದಂತಿ ಹೃಷೀಕೇಶಂ ತನ್ಮಂತ್ರೋಪಾಸಕಂ ತಥಾ ।
ಪವಿತ್ರಾಣಾಂ ಪವಿತ್ರಂ ಚ ಬ್ರಹ್ಮಹತ್ಯಾಂ ಲಭಂತಿ ತೇ || ೧೫೭ ||

ಶಿವಂ ಶಿವಸ್ವರೂಪಂ ಚ ಕೃಷ್ಣಪ್ರಾಣಾಧಿಕಂ ಪ್ರಿಯಂ ।
ಪವಿತ್ರಾಣಾಂ ಪವಿತ್ರಂ ಚ ಜ್ಞಾನಾನಂದಂ ಸನಾತನಂ || ೧೫೮ ||

ಪ್ರಧಾನಂ ವೈಷ್ಣವಾನಾಂ ಚ ದೇವಾನಾಂ ಸ್ವಮೀಶ್ವರಂ ।
ಯೇನಾರ್ಚಯಂತಿ ನಿಂದಂತಿ ಬ್ರಹ್ಮಹತ್ಯಾಂ ಲಭಂತಿ ತೇ || ೧೫೯ ||

೧೫೪–೧೫೫. ಕಾರಣಗಳಿಗೆಲ್ಲ ಆದಿಕಾರಣನೂ, ಸಕಲ ದೇವತೆಗಳಿಂದ ಸೇವ್ಯನೂ, ಸರ್ವಾಂತರ್ಯಾಮಿಯೂ, ಮಾಯಾಮಹಿಮೆಯಿಂದ ಅನೇಕ ರೂಪವನ್ನು ಧರಿಸಬಲ್ಲವನಾದರೂ, ರೂಪರಹಿತನೂ, ನಿರ್ಗುಣನೂ, ಸರ್ವೇಶ್ವರನೂ ಆದ ಶ್ರೀಕೃಷ್ಣಪರಮಾತ್ಮನನ್ನು ಇತರ ದೇವತೆಯೊಡನೆ ಸಮನೆಂದು ತಿಳಿಯುವವನು ಬ್ರಹ್ಮಹತ್ಯಾದೋಷವನ್ನು ಹೊಂದುವನು.

೧೫೬. ವೇದವಿಹಿತವೂ, ಕ್ರಮಬದ್ಧವೂ ಆದ ಪಿತೃದೇವತಾದಿಕರ್ಮಗಳನ್ನು ನಿಷೇಧಿಸುವಾತನು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವನು

೧೫೭. ಪಾವನಕೆ ಪಾವನನಾದ ಶ್ರೀಕೃಷ್ಣಪರಮಾತ್ಮನನ್ನೂ, ಆತನ ಮಂತ್ರೋಪಾಸಕರನ್ನೂ ನಿಂದಿಸುವವರು ಬ್ರಹ್ಮಹತ್ಯಾದೋಷಕ್ಕೆ ಭಾಗಿಗಳಾಗುವರು

೧೫೮–೧೫೯. ಶ್ರೀಕೃಷ್ಣಪರಮಾತ್ಮನ ಪ್ರಾಣಕ್ಕಿಂತ ಪ್ರಿಯನೂ, ಮಂಗಳಸ್ವರೂಪನೂ, ಪವಿತ್ರರಿಗೆಲ್ಲ ಪವಿತ್ರನೂ. ಜ್ಞಾನಾನಂದಮಯನೂ, ಅನಾದಿಯೂ, ವಿಷ್ಣುಭಕ್ತರಲ್ಲಿ ಶ್ರೇಷ್ಠನೂ, ದೇವತೋತ್ತಮನೂ ಆದ ಶಿವನನ್ನು ಪೂಜಿಸದೆ ನಿಂದಿಸುವವರೂ ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವರು.

ಯೇ ವಿಷ್ಣುಮಾಯಾಂ ನಿಂದಂತಿ ವಿಷ್ಣುಭಕ್ತಿಪ್ರದಾಂ ಸತೀಂ ।
ಸರ್ವಶಕ್ತಿಸ್ವರೂಪಾಂ ಚ ಪ್ರಕೃತಿಂ ಸರ್ವಮಾತರಂ ॥ ೧೬೦ ॥

ಸರ್ವದೇವೀಸ್ವರೂಪಾಂ ಚ ಸರ್ವಾದ್ಯಾಂ ಸರ್ವವಂದಿತಾಂ ।
ಸರ್ವಕಾರಣರೂಪಾಂ ಚ ಬ್ರಹ್ಮಹತ್ಯಾಂ ಲಭಂತಿ ತೇ ॥ ೧೬೧ ॥

ಕೃಷ್ಣಜನ್ಮಾಷ್ಟಮೀಂ ರಾಮನವಮೀಂ ಪುಣ್ಯದಾಂ ಪರಾಂ ।
ಶಿವರಾತ್ರಿಂ ತಥಾ ಚೈಕಾದಶೀಂ ವಾರಂ ರವೇಸ್ತಥಾ ॥ ೧೬೨ ॥

ಪಂಚಪರ್ವಾಣಿ ಪುಣ್ಯಾನಿ ಯೇನ ಕುರ್ವಂತಿ ಮಾನವಾಃ ।
ಲಭಂತೇ ಬ್ರಹ್ಮಹತ್ಯಾಂ ತೇ ಚಾಂಡಾಲಾಧಿಕಪಾಪಿನಃ ॥ ೧೬೩ ॥

ಅಂಬುವೀಚ್ಯಾಂಬುಖನನೇ ಜಲೇ ಶೌಚಾದಿಕಂ ಚ ಯೇ ।
ಕುರ್ವಂತಿ ಭಾರತೇ ವತ್ಸೇ ಬ್ರಹ್ಮಹತ್ಯಾಂ ಲಭಂತಿ ತೇ ॥ ೧೬೪ ॥

೧೬೦-೧೬೧. ಎಲ್ಲರಿಗೂ ವಿಷ್ಣುಭಕ್ತಿಯನ್ನು ಕೊಡುವ ವಿಷ್ಣುಮಾಯೆಯನ್ನೂ, ಸರ್ವಶಕ್ತಿಸ್ವರೂಪಳೂ, ಸರ್ವಮಾತೆಯೂ, ಸರ್ವದೇವೀಸ್ವರೂಪಳೂ, ಸರ್ವಾದ್ಯಳೂ. ಸರ್ವವಂದಿತಳೂ, ಸರ್ವಕಾರಣರೂಪಳೂ ಆದ ಪ್ರಕೃತಿಮಾತೆಯನ್ನೂ ನಿಂದಿಸುವವರು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವರು.

೧೬೨-೧೬೩. ಪುಣ್ಯಕರವಾದ ಶ್ರೀಕೃಷ್ಣಜನ್ಮಾಷ್ಟಮೀ, ಶ್ರೀರಾಮನವಮೀ, ಶಿವರಾತ್ರಿ ಮತ್ತು ಏಕಾದಶೀವ್ರತಗಳನ್ನೂ, ರವಿವಾರವ್ರತವನ್ನೂ, ಪುಣ್ಯಪ್ರದವಾದ ಅಮಾವಾಸ್ಯಾ, ಪೂರ್ಣಿಮಾ, ಸಂಕ್ರಮಣ, ವೈಧೃತಿ ಮತ್ತು ವ್ಯತೀಪಾತ (ಪಂಚಪರ್ವ) ಗಳನ್ನೂ ಆಚರಿಸದವನು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವುದಲ್ಲದೆ ಕರ್ಮಚಂಡಾಲನೆನಿಸುವನು.

೧೬೪. ಆಷಾಢ ಬಹುಳ ದಶಮಿಯಿಂದ ಚತುರ್ದಶಿಯವರೆಗೆ ನಾಲ್ಕು ದಿವಸಗಳು (ಭೂಮಿಯು ರಜಸ್ವಲೆಯಾಗಿರುವಾಗ) ಭೂಮಿಯನ್ನು ಉಳುವವನೂ, ನೀರಿನಲ್ಲಿ ಮಲಮೂತ್ರಾದಿಗಳನ್ನು ವಿಸರ್ಜಿಸುವವನೂ ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವನು.

ಗುರುಂ ಚ ಮಾತರಂ ತಾತಂ ಸಾಧ್ವೀಂ ಭಾರ್ಯಾಂ ಸುತಂ ಸುತಾಂ ।
ಅನಾಥಾನ್ಯೋ ನ ಪುಷ್ಣಾತಿ ಬ್ರಹ್ಮಹತ್ಯಾಂ ಲಭೇತ್ತು ಸಃ ॥ ೧೬೫ ॥

ವಿವಾಹೋ ಯಸ್ಯ ನ ಭವೇನ್ನ ಪಶ್ಯತಿ ಸುತಂ ಚ ಯಃ ।
ಹರಿಭಕ್ತಿವಿಹೀನೋ ಯೋ ಬ್ರಹ್ಮಹತ್ಯಾಂ ಲಭೇತ್ತು ಸಃ ॥ ೧೬೬ ॥

ಹರೇರನ್ನೈವೇದ್ಯಭೋಜೀ ನಿತ್ಯಂ ವಿಷ್ಣುಂ ನ ಪೂಜಯೇತ್ ।
ಪುಣ್ಯಂ ಪಾರ್ಥಿವಲಿಂಗಂ ವಾ ಬ್ರಹ್ಮಹತ್ಯಾಂ ಲಭೇತ್ತು ಸಃ ॥ ೧೬೭ ॥

ಆಹಾರಂ ಕುರ್ವತೀಂ ಗಾಂ ಚ ಪಿಬಂತೀಂ ಯೋ ನಿವಾರಯೇತ್ ।
ಯಾತಿ ಗೋವಿಪ್ರಯೋರ್ಮಧ್ಯೇ ಗೋಹತ್ಯಾಂ ಚ ಲಭೇತ್ತು ಸಃ ॥ ೧೬೮ ॥

---

೧೬೫. ಅನಾಥರಾದ ಗುರು, ತಾಯಿತಂದೆಗಳು, ಪತಿವ್ರತೆಯಾದ ಪತ್ನಿ ಮತ್ತು ಮಕ್ಕಳುಗಳನ್ನು ಪೋಷಿಸದಿರುವ ಮನುಜನು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವನು.

೧೬೬. ಯಾರು ಅವಿವಾಹಿತರಾಗಿರುವರೋ, ಯಾರಿಗೆ ಮಕ್ಕಳಿರುವುದಿಲ್ಲವೋ ಮತ್ತು ಯಾರು ಹರಿಭಕ್ತಿವಿಹೀನರಾಗಿರುವರೋ ಅವರು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವರು.

೧೬೭. ವಿಷ್ಣುವಿಗೆ ನಿವೇದಿಸದಿರುವ ಭಕ್ಷ್ಯಭೋಜ್ಯಗಳನ್ನು ತಿನ್ನುವವನೂ, ವಿಷ್ಣುವಿನ ಪ್ರತಿಮೆಯನ್ನಾಗಲೀ, ಮಣ್ಣಿನಲ್ಲಿ ಮಾಡಿದ ಶಿವಲಿಂಗವನ್ನಾಗಲೀ ಪ್ರತಿದಿನವೂ ಪೂಜಿಸದವನೂ ಬ್ರಹ್ಮಹತ್ಯಾದೋಷಿಯಾಗುವನು.

೧೬೮. ಹುಲ್ಲು ತಿನ್ನುತ್ತಿರುವ ಮತ್ತು ನೀರು ಕುಡಿಯುತ್ತಿರುವ ಹಸುಗಳನ್ನು ತಡೆಯುವವನೂ, ಹಸುವಿಗೂ, ಬ್ರಾಹ್ಮಣರಿಗೂ ಮಧ್ಯೆ ಹೋಗುವವನೂ, ಗೋಹತ್ಯಾದೋಷಕ್ಕೆ ಗುರಿಯಾಗುವನು

ದಂಡೈರ್ಗಾಸ್ತಾಡಯೇನ್ಮೂಢೋ ಯೋ ವಿಪ್ರೋ ವೃಷವಾಹಕಃ ।
ದಿನೇ ದಿನೇ ಗವಾಂ ಹತ್ಯಾಂ ಲಭತೇ ನಾತ್ರ ಸಂಶಯಃ ॥ ೧೬೯ ॥

ದದಾತಿ ಗೋಭ್ಯ ಉಚ್ಛಿಷ್ಟಂ ಯೋಜಯೇದ್ವೃಷವಾಹಕಂ ।
ಭೋಜಯೇದ್ವೃಷವಾಹಾನ್ನಂ ಸ ಗೋಹತ್ಯಾಂ ಲಭೇದ್ಧ್ರುವಂ ॥ ೧೭೦ ॥

ವೃಷಲೀಪತಿಂ ಯಾಜಯೇದ್ಯೋ ಭುಂಕ್ತೇನ್ನಂ ತಸ್ಯ ಯೋ ನರಃ ।
ಗೋಹತ್ಯಾಶತಕಂ ಸೋಪಿ ಲಭತೇ ನಾತ್ರ ಸಂಶಯಃ ॥ ೧೭೧ ॥

ಪಾದಂ ದದಾತಿ ವಹ್ನೌ ಚ ಗಾಶ್ಚ ಪಾದೇನ ತಾಡಯೇತ್ ।
ಗೃಹಂ ವಿಶೇದಧೌತಾಂಘ್ರಿಃ ಸ್ನಾತ್ವಾ ಗೋವಧಮಾಪ್ನುಯಾತ್ ॥ ೧೭೨ ॥

---

೧೬೯. ಗೋವುಗಳನ್ನು ದಂಡದಿಂದ ದಂಡಿಸುವ ಮೂಢನೂ, ಗೂಳಿಯನ್ನು ವಾಹನವನ್ನಾಗಿಮಾಡಿಕೊಂಡಿರುವ ವಿಪ್ರನೂ ಗೋಹತ್ಯಾದೋಷವನ್ನು ಪಡೆಯು ವುದರಲ್ಲಿ ಸಂಶಯವಿಲ್ಲ.

೧೭೦. ಗೋವುಗಳಿಗೆ ಎಂಜಲನ್ನು ಕೊಡುವವನೂ, ವೃಷಭವನ್ನು ವಾಹನ ಮಾಡಿಕೊಳ್ಳುವಂತೆ ಪ್ರೇರಿಸುವವನೂ, ವೃಷವಾಹಕನ ಅನ್ನವನ್ನು ತಿನ್ನುವವನೂ ಗೋಹತ್ಯಾದೋಷಕ್ಕೆ ಒಳಗಾಗುವನು.

೧೭೧. ವಿವಾಹಕ್ಕೆ ಮೊದಲೇ ಋತುಮತಿಯಾಗುವ ಕನ್ಯೆಯನ್ನು ವೃಷಳೀ ಎನ್ನುವರು. ಅವಳನ್ನು ವಿವಾಹಮಾಡಿಕೊಂಡವನಿಂದ ಯಾಗಮಾಡಿಸುವವನೂ, ಅವನ ಅನ್ನವನ್ನು ತಿನ್ನುವವನೂ ನೂರು ಗೋವುಗಳನ್ನು ಹತ್ಯೆಮಾಡಿದ ದೋಷಕ್ಕೆ ಗುರಿಯಾಗುವುದರಲ್ಲಿ ಸಂದೇಹವಿಲ್ಲ.

೧೭೨. ಬೆಂಕಿಯಲ್ಲಿ ಕಾಲನ್ನು ಕಾಯಿಸುವವನೂ, ಗೋವುಗಳನ್ನು ಒದೆಯು ವವನೂ, ಸ್ನಾನಮಾಡಿ ಕಾಲು ತೊಳೆಯದೆ ಮನೆಯೊಳಕ್ಕೆ ಹೋಗುವವನೂ ಗೋವಧೆಯ ಪಾಪಕ್ಕೆ ಗುರಿಯಾಗುವನು.

ಯೋ ಭುಂಕ್ತೇ ಸ್ನಿಗ್ಧಪಾದೇನ ಶೇತೇ ಸ್ನಿಗ್ಧಾಂಘ್ರಿರೇವ ಚ ।
ಸೂರ್ಯೋದಯೇ ಚ ದ್ವಿರ್ಭೋಜೀ ಸ ಗೋಹತ್ಯಾಂ ಲಭೇದ್ಧ್ರುವಂ ॥

ಅವೀರಾನ್ನಂ ಚ ಯೋ ಭುಂಕ್ತೇ ಯೋನಿಜೀವೀ ಚ ವೈ ದ್ವಿಜಃ ।
ಯಸ್ತ್ರಿಸಂಧ್ಯಾವಿಹೀನಶ್ಚ ಸ ಗೋಹತ್ಯಾಂ ಲಭೇದ್ಧ್ರುವಂ ॥ ೧೭೪ ॥

ಪಿತೄಂಶ್ಚ ಪರ್ವಕಾಲೇ ಚ ತಿಥಿಕಾಲೇ ಚ ದೇವತಾಂ ।
ನ ಸೇವತೇಽತಿಥಿಂ ಯೋ ಹಿ ಗೋಹತ್ಯಾಂ ಸ ಲಭೇದ್ಧ್ರುವಂ ॥ ೧೭೫ ॥

ಸ್ವಭರ್ತರಿ ಚ ಕೃಷ್ಣೇ ಚ ಭೇದಬುದ್ಧಿಂ ಕರೋತಿ ಯಾ ।
ಕಟೂಕ್ತ್ಯಾ ತಾಡಯೇತ್ಕಾಂತಂ ಸಾ ಗೋಹತ್ಯಾಂ ಲಭೇದ್ಧ್ರುವಂ ॥ ೧೭೬ ॥

---

೧೭೩. ಕಾಲಿಗೆ ಎಣ್ಣೆ ಹಚ್ಚಿಕೊಂಡು ಊಟಮಾಡುವವನೂ ಮತ್ತು ಮಲಗುವವನೂ, ಹಗಲಿನಲ್ಲಿ ಎರಡುಸಾರಿ ಊಟಮಾಡುವವನೂ ಗೋಹತ್ಯಾ ದೋಷಕ್ಕೆ ಗುರಿಯಾಗುವನು.

೧೭೪. ಪತಿಪುತ್ರರಹಿತಳಾದ ಹೆಂಗಸಿನ ಅನ್ನವನ್ನು ತಿನ್ನುವವನೂ, ಹೆಂಡತಿಯ ಹಣದಿಂದ ಜೀವನ ನಡೆಸುವ ಬ್ರಾಹ್ಮಣನೂ, ತ್ರಿಕಾಲದಲ್ಲಿ ಸಂಧ್ಯಾವಂದನೆಯನ್ನು ಮಾಡದವನೂ ಗೋಹತ್ಯಾಪಾಪಕ್ಕೆ ಗುರಿಯಾಗುವನು.

೧೭೫. ಅಮಾವಾಸ್ಯಾದಿ ಪರ್ವಕಾಲಗಳಲ್ಲಿ ಪಿತೃದೇವತೆಗಳನ್ನೂ, ಪುಣ್ಯತಿಥಿಗಳಲ್ಲಿ ದೇವತೆಗಳನ್ನೂ ಮತ್ತು ಅತಿಥಿಗಳನ್ನೂ ಸೇವೆಮಾಡದವನು ಗೋಹತ್ಯಾದೋಷಿಯಾಗುವನು.

೧೭೬. ತನ್ನ ಪತಿದೇವನಿಗೂ, ಶ್ರೀಕೃಷ್ಣಪರಮಾತ್ಮನಿಗೂ ಭೇದವನ್ನೆಣಿಸಿ ಕಟುವಾಕ್ಯಗಳಿಂದ ಪತಿಯನ್ನು ನಿಂದಿಸುವ ಹೆಂಗುಸು ಗೋಹತ್ಯೆಯ ಪಾಪಕ್ಕೆ ಗುರಿಯಾಗುವಳು

ಗೋಮಾರ್ಗಖನನಂ ಕೃತ್ವಾ ವಪಶೇ ಸಸ್ಯಮೇವ ಚ ।
ತಡಾಗೇ ವಾ ತದೂರ್ಧ್ವಂ ವಾ ಸ ಗೋಹತ್ಯಾಂ ಲಭೇದ್ಧ್ರುವಂ ॥ ೧೭೭ ॥

ಪ್ರಾಯಶ್ಚಿತ್ತಂ ಗೋವಧಸ್ಯ ಯಃ ಕರೋತಿ ವ್ಯತಿಕ್ರಮಂ ।
ಅರ್ಥಲೋಭಾದಥಾಜ್ಞಾನಾತ್ಸ ಗೋಹತ್ಯಾಂ ಲಭೇದ್ಧ್ರುವಂ ॥ ೧೭೮ ॥

ರಾಜಕೇ ದೈವಕೇ ಯತ್ನಾದ್ಗೋಸ್ವಾಮೀ ಗಾಂ ನ ಪಾಲಯೇತ್ ।
ದುಃಖಂ ದದಾತಿ ಯೋ ಮೂಢೋ ಗೋಹತ್ಯಾಂ ಸ ಲಭೇದ್ಧ್ರುವಂ ॥೧೭೯॥

ಪ್ರಾಣಿನಂ ಲಂಘಯೇದ್ಯೋ ಹಿ ದೇವಾರ್ಚಾಯಾಂ ರತಂ ಜಲಂ ।
ನೈವೇದ್ಯಂ ಪುಷ್ಪಮನ್ನಂ ಚ ಸ ಗೋಹತ್ಯಾಂ ಲಭೇದ್ಧ್ರುವಂ ॥ ೧೮೦ ॥

---

೧೭೭. ಗೋಮಾಳಗಳನ್ನು ಉತ್ತುಬಿತ್ತುವವರೂ, ಕೆರೆಯ ಅಂಗಳಗಳನ್ನೂ, ಏರಿಗಳನ್ನೂ ಉತ್ತು ಸಸ್ಯಗಳನ್ನು ಬೆಳೆಯುವವರೂ ಗೋಹತ್ಯಾದೋಷಕ್ಕೆ ಗುರಿಯಾಗುವರು.

೧೭೮. ಹಣದಾಸೆಯಿಂದಾಗಲೀ. ಅಜ್ಞಾನದಿಂದಾಗಲೀ ಗೋಹತ್ಯಾಪಾಪಕ್ಕೆ ಅಕ್ರಮವಾಗಿ ಪ್ರಾಯಶ್ಚಿತ್ತಮಾಡಿಸುವವನು ಗೋವಧೆಯ ದೋಷಕ್ಕೆ ಗುರಿಯಾಗುವನು.

೧೭೯. ಗೋವುಗಳ ಒಡೆಯನು ರಾಜಕಾರ್ಯ ಅಥವಾ ದೇವಕಾರ್ಯಕ್ಕೆ ಅಧೀನನಾಗಿ ಗೋವುಗಳನ್ನು ಪೋಷಿಸದೆ ಪೀಡಿಸುವುದಾದರೆ ಅವನು ಗೋಹತ್ಯಾಪಾಪಕ್ಕೆ ಗುರಿಯಾಗುವನು.

೧೮೦ ದೇವಪೂಜೆಯಲ್ಲಿ ನಿರತನಾದ ಮನುಜನನ್ನೂ, ಅನ್ನೋದಕಗಳನ್ನೂ. ಫಲಪುಷ್ಪಗಳನ್ನೂ, ಶ್ರೀಹರಿಗೆ ನಿವೇದಿಸಿದ ದ್ರವ್ಯಗಳನ್ನೂ ತಿರಸ್ಕರಿಸುವಾತನು ಗೋಹತ್ಯಾದೋಷಿಯಾಗುವನು.

ಶಶ್ವನ್ನಾಸ್ತೀತಿ ವಾದೀ ಯೋ ಮಿಥ್ಯಾವಾದೀ ಪ್ರತಾರಕಃ ।
ದೇವದ್ವೇಷೀ ಗುರುದ್ವೇಷೀ ಸ ಗೋಹತ್ಯಾಂ ಲಭೇದ್ಧ್ರುವಂ ॥ ೧೮೧ ॥

ದೇವತಾಪ್ರತಿಮಾಂ ದೃಷ್ಟ್ವಾ ಗುರುಂ ವಾ ಬ್ರಾಹ್ಮಣಂ ಸತಿ ।
ಸಂಭ್ರಮಾನ್ನನಮೇದ್ಯೋ ಹಿ ಸ ಗೋಹತ್ಯಾಂ ಲಭೇದ್ಧ್ರುವಂ ॥ ೧೮೨ ॥

ನ ದದಾತ್ಯಾಶಿಷಂ ಕೋಪಾತ್ಪ್ರಣತಾಯ ಚ ಯೋ ದ್ವಿಜಃ ।
ವಿದ್ಯಾರ್ಥಿನೇ ಚ ವಿದ್ಯಾಂ ವೈ ಸ ಗೋಹತ್ಯಾಂ ಲಭೇದ್ಧ್ರುವಂ ॥ ೧೮೩ ॥

ಗೋಹತ್ಯಾ ಬ್ರಹ್ಮಹತ್ಯಾ ಚ ಕಥಿತಾ ಚಾತಿದೇಶಿಕೀ ।
ಯಥಾ ಶ್ರುತಂ ಸೂರ್ಯವಕ್ತ್ರಾತ್ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೮೪ ॥

---

೧೮೧. ಏನು ಕೇಳಿದರೂ ಇಲ್ಲವೆನ್ನುವವನೂ, ಸುಳ್ಳಾಡುವವನೂ, ವಂಚಕನೂ ದೇವರು ಮತ್ತು ಗುರುಗಳನ್ನು ದ್ವೇಷಿಸುವವನೂ, ನಿಶ್ಚಯವಾಗಿಯೂ ಗೋಹತ್ಯಾ ಪಾಪಕ್ಕೆ ಗುರಿಯಾಗುವನು.

೧೮೨. ಎಲೌ ಸಾಧ್ವೀಮಣಿಯೇ, ದೇವತಾಪ್ರತಿಮೆಯನ್ನೂ, ಗುರುವನ್ನೂ, ಬ್ರಾಹ್ಮಣನನ್ನೂ ನೋಡಿ ವಿನಯದಿಂದ ವಂದಿಸದಿರುವವನೂ ಗೋಹತ್ಯಾ ದೋಷಕ್ಕೆ ಒಳಗಾಗುವನು.

೧೮೩. ನಮಸ್ಕಾರಮಾಡಿದವನಿಗೆ ಕೋಪದಿಂದ ಆಶೀರ್ವದಿಸದಿರುವ ಬ್ರಾಹ್ಮಣನೂ, ವಿದ್ಯೆಯನ್ನು ಕಲಿಯಬಯಸುವವನಿಗೆ ವಿದ್ಯಾದಾನಮಾಡದವನೂ, ಗೋಹತ್ಯಾದೋಷಕ್ಕೆ ಗುರಿಯಾಗುವನು.

೧೮೪. ಸೂರ್ಯನ ಮುಖದಿಂದ ಕೇಳಿದ 'ಅತಿದೇಶಿಕ'ವಾದ ಗೋಹತ್ಯಾ ಮತ್ತು ಬ್ರಹ್ಮಹತ್ಯಾಸ್ವರೂಪವನ್ನು ಯಥಾಶ್ರುತವಾಗಿ ನಿನಗೆ ವಿವರಿಸಿಯಾಯಿತು. ಇನ್ನೇನನ್ನು ಕೇಳಲು ನಿನಗೆ ಆಶೆಯಿದೆ.

॥ ಸಾವಿತ್ರ್ಯುವಾಚ ॥

ವಾಸ್ತವೇ ಚಾತಿದೇಶೇ ಚ ಸಂಬಂಧೇ ಪಾಪಪುಣ್ಯಯೋಃ ।
ನ್ಯೂನಾಧಿಕೇ ಚ ಕೋ ಭೇದಸ್ತನ್ಮಾಂ ವ್ಯಾಖ್ಯಾತುಮರ್ಹಸಿ ॥ ೧೮೫ ॥

॥ ಯಮ ಉವಾಚ ॥

ಕುತ್ರಾಪಿ ವಾಸ್ತವಃ ಶ್ರೇಷ್ಠೋ ನ್ಯೂನೋತಿದೇಶಿಕಸ್ಸದಾ ।
ಕುತ್ರಾತಿದೇಶಿಕಃ ಶ್ರೇಷ್ಠೋ ವಾಸ್ತವೋ ನ್ಯೂನ ಏವ ಚ ॥ ೧೮೬ ॥

ಕುತ್ರ ವಾ ಸಮತಾ ಸಾಧ್ವಿ ತಯೋರ್ವೇದಪ್ರಮಾಣತಃ ।
ಕರೋತಿ ತತ್ರ ನಾಸ್ಥಾಂ ಯೋ ಗುರುಹತ್ಯಾಂ ಲಭೇತ್ತು ಸಃ ॥ ೧೮೭ ॥

ಪುರಾ ಪರಿಚಿತೇ ವಿಪ್ರೇ ವಿದ್ಯಾಮಂತ್ರಪ್ರದಾತರಿ ।
ಗುರೌ ಪಿತೃತ್ವಮಾರೋಪಾದ್ವಸ್ತುತಶ್ಶ್ರೇಷ್ಠ ಉಚ್ಯತೇ ॥ ೧೮೮ ॥

---

೧೮೫. ಸಾವಿತ್ರಿ :—ಸತ್ಯವಾದ ಮತ್ತು ಆರೋಪಿತವಾದ ಪುಣ್ಯಪಾಪಗಳಲ್ಲಿ ಪ್ರಬಲ ಮತ್ತು ದುರ್ಬಲವಾದ ಪುಣ್ಯಪಾಪಗಳಾವುವೆಂಬುದನ್ನೂ ಅವುಗಳಿಗೆ ಪರಸ್ಪರ ಭೇದವೇನೆಂಬುದನ್ನೂ ನನಗೆ ದಯವಿಟ್ಟು ವಿಸ್ತರಿಸಿ ಹೇಳು.

೧೮೬. ಯಮ :—ಕೆಲವು ಸಂದರ್ಭದಲ್ಲಿ ವಾಸ್ತವವಾದ ಪುಣ್ಯಪಾಪಗಳು ಪ್ರಬಲವಾಗಿ ಆರೋಪಿತವಾದ ಪುಣ್ಯಪಾಪಗಳು ದುರ್ಬಲವೆನಿಸುವುವು. ಮತ್ತೆ ಕೆಲವು ಸಂದರ್ಭದಲ್ಲಿ ಆರೋಪಿತವಾದ ಪುಣ್ಯಪಾಪಗಳೇ ಪ್ರಬಲವಾಗಿ ವಾಸ್ತವವಾದ ಪಾಪಪುಣ್ಯಗಳು ದುರ್ಬಲವೆನಿಸುವುವು.

೧೮೭. ಎಲೌ ಸಾಧ್ವೀಮಣಿಯೇ, ವಾಸ್ತವ ಮತ್ತು ಆರೋಪಿತವಾದ ಪಾಪಪುಣ್ಯಗಳಿಗೆ ಕೆಲವೆಡೆ ಸಮಾನತೆಯೂ ವೇದೋಕ್ತವಾಗಿದೆ. ಇವುಗಳಲ್ಲಿ ನಂಬಿಕೆಯಿಲ್ಲದಿರುವ ಮನುಜನು ಗುರುಹತ್ಯಾದೋಷಕ್ಕೆ ಗುರಿಯಾಗುವನು.

೧೮೮. ಪೂರ್ವದಿಂದ ಪರಿಚಿತನೂ, ವಿದ್ಯಾಮಂತ್ರೋಪದೇಶಕನೂ ಆದ ಬ್ರಾಹ್ಮಣಗುರುವನ್ನು ತಂದೆಯೆಂದು ತಿಳಿಯುವುದು ಆರೋಪಿತವಾದರೂ ಶ್ರೇಷ್ಠವೆನಿಸುವುದು.

ಪಿತುಃ ಶತಗುಣಾಮಾತಾ ಮಾತುಃ ಶತಗುಣಸ್ತಥಾ ।
ವಿದ್ಯಾಮಂತ್ರಪ್ರದಾತಾ ಚ ಗುರುಃ ಪೂಜ್ಯಃ ಶ್ರುತೇರ್ಮತಃ ॥ ೧೮೯ ॥

ಗುರುತೋ ಗುರುಪತ್ನೀ ಚ ಗೌರವೇ ಚ ಗರೀಯಸೀ ।
ಯಥೇಷ್ಟಂ ದೇವಪತ್ನೀ ಚ ಪೂಜ್ಯಾ ಚಾಭೀಷ್ಟದೇವತಾ ॥ ೧೯೦ ॥

ವಿಪ್ರಃ ಶಿವಸಮೋ ಯಶ್ಚ ವಿಷ್ಣುತುಲ್ಯಪರಾಕ್ರಮಃ ।
ರಾಜಾತಿದೇಶಿಕಾಚ್ಛ್ರೇಷ್ಠೋ ವಾಸ್ತವೋ ಗುಣಲಕ್ಷಕಃ ॥ ೧೯೧ ॥

ಸರ್ವಂ ಗಂಗಾಸಮಂ ತೋಯಂ ಸರ್ವೇ ವ್ಯಾಸಸಮಾ ದ್ವಿಜಾಃ ।
ಗ್ರಹಣೇ ಸೂರ್ಯಶಶಿನೋಶ್ಚೈತ್ರ್ಯೈವ ಸಮತಾ ತಯೋಃ ॥ ೧೯೨ ॥

ಆತಿದೇಶಿಕಹತ್ಯಾಯಾ ವಾಸ್ತವಶ್ಚ ಚತುರ್ಗುಣಃ ।
ಸಮ್ಮತಃ ಸರ್ವವೇದಾನಾಮಿತ್ಯಾಹ ಕಮಲೋದ್ಭವಃ ॥ ೧೯೩ ॥

---

೧೮೯. ತಂದೆಗಿಂತ ತಾಯಿಯೂ, ತಾಯಿಗಿಂತ ವಿದ್ಯಾಮಂತ್ರೋಪದೇಶಕನಾದ ಗುರುವೂ ನೂರರಷ್ಟು ಶ್ರೇಷ್ಠರೆಂದು ವೇದೋಕ್ತವಾಗಿದೆ.

೧೯೦. ಗುರುಪತ್ನಿಯು ಗುರುವಿಗಿಂತ ಹೆಚ್ಚು ಗೌರವಾರ್ಹಳು. ಅವರಿಬ್ಬರಿಗಿಂತ ಅಭೀಷ್ಟದೇವತೆಯೂ, ಇಷ್ಟದೇವತಾಪತ್ನಿಯರೂ, ಅತ್ಯಂತ ಗೌರವಾರ್ಹರು.

೧೯೧. ಆರೋಪಿತ ಬ್ರಾಹ್ಮಣ ಮತ್ತು ಕ್ಷತ್ರಿಯರಿಗಿಂತ ಶಿವನಂತೆ ಸರ್ವಜ್ಞನಾದ ವಾಸ್ತವಬ್ರಾಹ್ಮಣನೂ, ವಿಷ್ಣುವಿನಂತೆ ಪರಾಕ್ರಮಿಯಾದ ವಾಸ್ತವ ಕ್ಷತ್ರಿಯನೂ ಲಕ್ಷಗುಣ ಶ್ರೇಷ್ಠರೆನಿಸುವರು.

೧೯೨. ಚಂದ್ರಸೂರ್ಯರ ಗ್ರಹಣಸಂದರ್ಭದಲ್ಲಿ ಸಕಲ ವಾಪೀಕೂಪತಟಾಕಾದಿಗಳ ನೀರೂ ಗಂಗೆಗೆ ಸಮಾನವೆನಿಸುವುದು. ಆ ಕಾಲದಲ್ಲಿ ದೊರಕಿದ ದ್ವಿಜರೆಲ್ಲರೂ ವ್ಯಾಸಮಹರ್ಷಿಗಳಿಗೆ ಸದೃಶರೆನಿಸುವರು

೧೯೩. ಆರೋಪಿತವಾದ ಹತ್ಯೆಗಿಂತ ವಾಸ್ತವವಾದ ಹತ್ಯೆಯು ನಾಲ್ಕರಷ್ಟು ಪ್ರಬಲವಾದುದೆಂಬುದು ಸಕಲ ವೇದಗಳಿಗೂ ಸಮ್ಮತವೆಂದು ಬ್ರಹ್ಮದೇವನು ಹೇಳಿರುವನು.

ಆತಿದೇಶಿಕಹತ್ಯಾಯಾ ಭೇದಶ್ಚ ಕಥಿತಃ ಸತಿ ।
ಯಾ ಯೋಗಮ್ಯಾ ನೃಣಾಮೇವ ನಿಬೋಧ ಕಥಯಾಮಿ ತೇ ॥ ೧೯೪ ॥

ಸ್ವಸ್ತ್ರೀ ಗಮ್ಯಾ ಚ ಸರ್ವೇಷಾಮಿತಿ ವೇದೇ ನಿರೂಪಿತಾ ।
ಅಗಮ್ಯಾ ಚ ತದನ್ಯಾಯಾ ಚೇತಿ ವೇದವೇದೋ ವಿದುಃ ॥ ೧೯೫ ॥

ಸಾಮಾನ್ಯಂ ಕಥಿತಂ ಸರ್ವಂ ವಿಶೇಷಂ ಶೃಣು ಸುಂದರಿ ।
ಅತ್ಯಗಮ್ಯಾಶ್ಚ ಯಾ ಯಾ ವೈ ನಿಬೋಧ ಕಥಯಾಮಿ ತೇ ॥ ೧೯೬ ॥

ಶೂದ್ರಾಣಾಂ ವಿಪ್ರಪತ್ನೀ ಚ ವಿಪ್ರಾಣಾಂ ಶೂದ್ರಕಾಮಿನೀ ।
ಅತ್ಯಗಮ್ಯಾತಿನಿಂದ್ಯಾ ಚ ಲೋಕೇ ವೇದೇ ಪತಿವ್ರತೇ ॥ ೧೯೭ ॥

---

೧೯೪. ಎಲೌ ಪತಿವ್ರತೆಯೇ, ಆರೋಪಿತವಾದ ಹತ್ಯೆಯ ಅನೇಕ ಭೇದಗಳನ್ನು ತಿಳಿಸಿದುದಾಯಿತು. ಈಗ ಮನುಷ್ಯರಿಗೆ ಅಗಮ್ಯರಾದ ಸ್ತ್ರೀಯರು ಯಾರೆಂಬುದನ್ನು ವಿಸ್ತರಿಸಿ ಹೇಳುವೆನು ಕೇಳು.

೧೯೫. ಎಲ್ಲರಿಗೂ ಅವರವರ ಪತ್ನಿಯರು ಗಮ್ಯರೆಂಬುದು ವೇದೋಕ್ತವಾಗಿದೆ. ಅವರನ್ನು ಬಿಟ್ಟು ಉಳಿದ ಸ್ತ್ರೀಯರೆಲ್ಲರೂ ಅಗಮ್ಯರೆಂಬುದನ್ನು ವೇದವೇತ್ತೃಗಳು ತಿಳಿಸುವರು.

೧೯೬. ಎಲೌ ಸುಂದರಿಯೇ, ಇದು ಸರ್ವಸಾಮಾನ್ಯವಾದ ನ್ಯಾಯವಾಯಿತು. ಯಾವ ಯಾವ ಸ್ತ್ರೀಯರು ಖಂಡಿತವಾಗಿಯೂ. ಅಗಮ್ಯರೆಂಬುದನ್ನು ಈಗ ವಿಶೇಷವಾಗಿ ಹೇಳುವೆನು ಕೇಳು.

೧೯೭. ಎಲೌ ಪತಿವ್ರತೆಯೇ, ಶೂದ್ರರಿಗೆ ಬ್ರಾಹ್ಮಣಸ್ತ್ರೀಯರೂ, ಬ್ರಾಹ್ಮಣರಿಗೆ ಶೂದ್ರಸ್ತ್ರೀಯರೂ, ಅತ್ಯಂತ ಅಗಮ್ಯರೂ, ಅತಿನಿಂದ್ಯರೂ ಎಂಬುದು ವೇದವಿಹಿತವೂ, ಲೋಕಸಾಮಾನ್ಯವೂ ಆಗಿದೆ.

ಶೂದ್ರಶ್ಚೇದ್ಬ್ರಾಹ್ಮಣೀಂ ಗಚ್ಛೇದ್ಬ್ರಹ್ಮಹತ್ಯಾಶತಂ ಲಭೇತ್ ।
ತತ್ಸಮಂ ಬ್ರಾಹ್ಮಣೀ ಚಾಪಿ ಕುಂಭೀಪಾಕಂ ವ್ರಜೇದ್ಧ್ರುವಂ ॥ ೧೯೮ ॥

ಯದಿ ಶೂದ್ರಾಂ ವ್ರಜೇದ್ವಿಪ್ರೋ ವೃಷಲೀಪತಿರೇವ ಸಃ ।
ಸ ಭ್ರಷ್ಟೋ ವಿಪ್ರಜಾತೇಶ್ಚ ಚಂಡಾಲಾತ್ಸೋಽಧಮಃ ಸ್ಮೃತಃ ॥ ೧೯೯ ॥

ವಿಷ್ಠಾಸಮಶ್ಚ ತತ್ಪಿಂಡೋ ಮೂತ್ರತುಲ್ಯಂ ಚ ತರ್ಪಣಂ ।
ತತ್ಪಿತ್ರೂಣಾಂ ಸುರಾಣಾಂ ಚ ಪೂಜನೇ ತತ್ಸಮಂ ಸತಿ ॥ ೨೦೦ ॥

ಕೋಟಿಜನ್ಮಾರ್ಜಿತಂ ಪುಣ್ಯಂ ಸಂಧ್ಯಾರ್ಚಾತಪಸಾರ್ಜಿತಂ ।
ದ್ವಿಜಸ್ಯ ವೃಷಲೀಭೋಗಾನ್ನಶ್ಯತ್ಯೇವ ನ ಸಂಶಯಃ ॥ ೨೦೧ ॥

---

೧೯೮. ಶೂದ್ರನು ಬ್ರಾಹ್ಮಣಸ್ತ್ರೀಯ ಸಂಗಮಮಾಡಿದರೆ ನೂರು ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗುವನು. ಅದರಂತೆ ಶೂದ್ರನ ಸಂಗಮಾಡಿದ ಬ್ರಾಹ್ಮಣಸ್ತ್ರೀಯೂ ಕುಂಭೀಪಾಕವೆಂಬ ನರಕಕ್ಕೆ ಬೀಳುವಳು.

೧೯೯. ಶೂದ್ರಸ್ತ್ರೀಯ ಸಂಗಮಮಾಡಿದ ಬ್ರಾಹ್ಮಣನು 'ವೃಷಳೀಪತಿ' ಎನಿಸಿಕೊಳ್ಳುವನು. ಅಲ್ಲದೆ ಬ್ರಾಹ್ಮಣ ಜಾತಿಯಿಂದ ಅವನು ಭ್ರಷ್ಟನಾಗಿ ಚಂಡಾಲನಿಗಿಂತಲೂ ಅಧಮನೆನಿಸಿಕೊಳ್ಳುವನು.

೨೦೦. ಅಂಥ ಬ್ರಾಹ್ಮಣನಿಂದ ದತ್ತವಾದ ಪಿಂಡವು ಮಲಸದೃಶವೂ, ತಿಲೋದಕವು ಮೂತ್ರಸದೃಶವೂ ಆಗುವುದು. ಅವನು ಮಾಡುವ ದೇವಪಿತೃಗಳ ಆರಾಧನೆಯು ವ್ಯರ್ಥವಾಗುವುದು.

೨೦೧. ಬ್ರಾಹ್ಮಣನು ಸಂಧ್ಯಾವಂದನೆ, ದೇವತಾರ್ಚನೆ ಮತ್ತು ತಪಸ್ಸುಗಳಿಂದ ಸಂಪಾದಿಸಿದ ಪುಣ್ಯವೆಲ್ಲವೂ ಶೂದ್ರಸ್ತ್ರೀಯ ಸಂಗಮಮಾತ್ರದಿಂದ ನಾಶವಾಗುವುದರಲ್ಲಿ ಸಂಶಯವಿಲ್ಲ.

ಬ್ರಾಹ್ಮಣಶ್ಚ ಸುರಾಪೀತೀ ವಿಡ್ಭೋಜೀ ವೃಷಲೀಪತಿಃ !
ಹರಿವಾಸರಭೋಜೀ ಚ ಕುಂಭೀಪಾಕಂ ವ್ರಜೇದ್ಧ್ರುವಂ ‖ ೨೦೨ ‖

ಗುರುಪತ್ನೀಂ ರಾಜಪತ್ನೀಂ ಸಪತ್ನೀಮಾತರಂ ಪ್ರಸೂಂ ।
ಸುತಾಂ ಪುತ್ರವಧೂಂ ಶ್ವಶ್ರೂಂ ಸಗರ್ಭಾಂ ಭಗಿನೀಂ ಸತಿ ‖ ೨೦೩ ‖

ಸೋದರಭ್ರಾತೃಜಾಯಾಂ ಚ ಮಾತುಲಾನೀಂ ಪಿತೃಪ್ರಸೂಂ ।
ಮಾತುಃ ಪ್ರಸೂಂ ತತ್ಸ್ವಸಾರಂ ಭಗಿನೀಂ ಭ್ರಾತೃಕನ್ಯಕಾಂ ‖ ೨೦೪ ‖

ಶಿಷ್ಯಾಂ ಚ ಶಿಷ್ಯಪತ್ನೀಂ ಚ ಭಾಗಿನೇಯಸ್ಯ ಕಾಮಿನೀಂ ।
ಭ್ರಾತುಃ ಪುತ್ರಪ್ರಿಯಾಂ ಚೈವಾಪ್ಯಗಮ್ಯಾಮಾಹ ಪದ್ಮಜಃ ‖ ೨೦೫ ‖

ಏತಾಸ್ವೇಕಾಮನೇಕಾಂ ವಾ ಯೋ ವ್ರಜೇನ್ಮಾನವೋಽಧಮಃ ।
ಸ್ವಮಾತೃಗಾಮೀ ವೇದೇಷು ಬ್ರಹ್ಮಹತ್ಯಾಶತಂ ಲಭೇತ್ ‖ ೨೦೬ ‖

---

೨೦೨. ಬ್ರಾಹ್ಮಣನಾಗಿ ಮದ್ಯಪಾನಮಾಡುವವನೂ, ಅಯೋಗ್ಯವಾದ ಪದಾರ್ಥಗಳನ್ನು ತಿನ್ನುವವನೂ, ಹರಿವಾಸರಗಳಲ್ಲಿ ಊಟಮಾಡುವವನೂ, ಶೂದ್ರ ಸ್ತ್ರೀಯ ಸಂಗಮಾಡುವವನೂ ಕುಂಭೀಪಾಕವೆಂಬ ನರಕಕ್ಕೆ ಹೋಗುವನು.

೨೦೩-೨೦೫. ಎಲೌ ಪತಿವ್ರತೆಯೇ, ಗುರು ಮತ್ತು ರಾಜನ ಪತ್ನಿಯರೂ, ಸವತಿತಾಯಿ ಮತ್ತು ಹೆತ್ತತಾಯಿಯರೂ, ಮಗಳು, ಸೊಸೆ, ಅತ್ತೆ ಮತ್ತು ಸಹೋದರಿಯರೂ, ಸಹೋದರನ ಮತ್ತು ಸೋದರಮಾವನ ಹೆಂಡತಿಯರೂ, ತಂದೆಯ ಮತ್ತು ತಾಯಿಯ ತಾಯಿಯರೂ, ತಾಯಿಯ ತಂಗಿ ಮತ್ತು ಸಹೋದರನ ಪುತ್ರಿಯರೂ, ಶಿಷ್ಯೆ ಮತ್ತು ಶಿಷ್ಯನ ಹೆಂಡತಿಯರೂ, ಸೋದರಳಿಯನ ಹೆಂಡತಿ ಮತ್ತು ಸಹೋದರನ ಸೊಸೆಯರೂ, ಪುರುಷನಿಗೆ ಅಗಮ್ಯರೆಂದು ಬ್ರಹ್ಮದೇವನೇ ಹೇಳಿರುವನು.

೨೦೬. ಮೇಲೆ ಹೇಳಿರುವವರಲ್ಲಿ ಒಬ್ಬರೊಡನಾಗಲೀ, ಅನೇಕರೊಡನಾಗಲೀ ಸಂಗಮಾಡುವ ಮಾನವಾಧಮನು ತನ್ನ ಮಾತೃವಿನೊಡನೆ ಸಂಗಮಾಡಿದ ಮಹಾ ಪಾಪಕ್ಕೆ ಗುರಿಯಾಗುವುದಲ್ಲದೆ ನೂರು ಬ್ರಹ್ಮಹತ್ಯಾದೋಷಕ್ಕೆ ಭಾಗಿಯಾಗುವನೆಂದು ವೇದೋಕ್ತವಾಗಿದೆ.

ಅಕರ್ಮಾರ್ಹೋಽಪಿ ಸೋಽಸ್ಪೃಶ್ಯೋ ಲೋಕೇ ವೇದೇಽತಿನಿಂದಿತಃ ।
ಸ ಯಾತಿ ಕುಂಭೀಪಾಕಂ ಚ ಮಹಾಪಾಪೀ ಸುದುಸ್ತರಂ　　॥ ೨೦೭ ॥

ಕರೋತ್ಯಶುದ್ಧಾಂ ಸಂಧ್ಯಾಂ ಚ ಸಂಧ್ಯಾಂ ವಾ ನ ಕರೋತಿ ಯಃ ।
ತ್ರಿಸಂಧ್ಯಾಂ ವರ್ಜಯೇದ್ಯೋ ಹಿ ಸಂಧ್ಯಾಹೀನಶ್ಚ ಸ ದ್ವಿಜಃ　　॥ ೨೦೮ ॥

ವೈಷ್ಣವಂ ಚ ತಥಾ ಶೈವಂ ಶಾಕ್ತಂ ಸೌರಂ ಚ ಗಾಣಪಂ ।
ಯೋಽಹಂಕಾರಾನ್ನ ಗೃಹ್ಣಾತಿ ಮಂತ್ರಂ ಸೋಽದೀಕ್ಷಿತಃ ಸ್ಮೃತಃ　॥ ೨೦೯ ॥

ಪ್ರವಾಹಮವಧಿಂ ಕೃತ್ವಾ ಯಾವದ್ಧಸ್ತಚತುಷ್ಟಯಂ ।
ತತ್ರ ನಾರಾಯಣಃ ಸ್ವಾಮೀ ಗಂಗಾಗರ್ಭಾಂತರೇ ವರೇ　　॥ ೨೧೦ ॥

---

೨೦೭. ಲೋಕದಿಂದಲೂ, ವೇದದಿಂದಲೂ, ನಿಂದಿತನಾದ ಆ ಪಾಪಿಯು ಸತ್ಕರ್ಮಗಳಿಗೆ ಅನರ್ಹನಾಗಿ ಅಸ್ಪೃಶ್ಯನೆನಿಸುವನು. ಅಲ್ಲದೆ ಆ ಮಹಾಪಾಪಿಯು ಅತಿದುಸ್ತರವಾದ ಕುಂಭೀಪಾಕನರಕಕ್ಕೆ ಬೀಳುವನು.

೨೦೮. ಯಾರು ತನ್ನ ನೀಚಕರ್ಮಗಳಿಂದ ಸಂಧ್ಯೆಯನ್ನು ಅಶುದ್ಧಗೊಳಿಸುವರೋ, ಯಾರು ತ್ರಿಸಂಧ್ಯೆಯಲ್ಲೂ ಸಂಧ್ಯಾವಂದನೆಯನ್ನು ಆಚರಿಸುವುದಿಲ್ಲವೋ ಆ ಬ್ರಾಹ್ಮಣನು 'ಸಂಧ್ಯಾಹೀನ'ನೆನಿಸುವನು.

೨೦೯. ಶೈವ ವೈಷ್ಣವಮಂತ್ರಗಳನ್ನೂ, ಶಾಕ್ತ. ಸೌರ ಮತ್ತು ಗಾಣಪ ಮಂತ್ರಗಳನ್ನೂ ಯಾರು ಅಹಂಕಾರದಿಂದ ಸ್ವೀಕರಿಸುವುದಿಲ್ಲವೋ ಅವನು ದೀಕ್ಷಿತನೆನಿಸುವುದಿಲ್ಲ.

೨೧೦. ಗಂಗಾಗರ್ಭದಲ್ಲಿ ನಾಲ್ಕುಹಸ್ತ ಪ್ರಮಾಣವುಳ್ಳ ಪ್ರವಾಹದಲ್ಲಿ ಶ್ರೀಮನ್ನಾರಾಯಣನು ಎಲ್ಲಿ ನೆಲೆಸಿರುವನೋ ಅದೇ ನಾರಾಯಣಕ್ಷೇತ್ರವೆನಿಸುವುದು.

ತತ್ರ ನಾರಾಯಣಕ್ಷೇತ್ರೇ ಕುರುಕ್ಷೇತ್ರೇ ಹರೇಃ ಪದೇ ।
ವಾರಾಣಸ್ಯಾಂ ಬದರ್ಯಾಂ ಚ ಗಂಗಾಸಾಗರಸಂಗಮೇ ॥ ೨೧೧ ॥

ಪುಷ್ಕರೇ ಭಾಸ್ಕರಕ್ಷೇತ್ರೇ ಪ್ರಭಾಸೇ ರಾಸಮಂಡಲೇ ।
ಹರಿದ್ವಾರೇ ಚ ಕೇದಾರೇ ಸೋಮೇ ಬದರಪಾವನೇ ॥ ೨೧೨ ॥

ಸರಸ್ವತೀನದೀತೀರೇ ಪುಣ್ಯೇ ವೃಂದಾವನೇ ವನೇ ।
ಗೌದಾವರ್ಯಾಂ ಚ ಕೌಶಿಕ್ಯಾಂ ತ್ರಿವೇಣ್ಯಾಂ ಚ ಹಿಮಾಲಯೇ ॥ ೨೧೩ ॥

ವಿಷ್ವನ್ಯತ್ರ ಚ ಯೋ ದಾನಂ ಪ್ರತಿಗೃಹ್ಣಾತಿ ಕಾಮತಃ ।
ಸ ಚ ತೀರ್ಥಪ್ರತಿಗ್ರಾಹೀ ಕುಂಭೀಪಾಕಂ ಪ್ರಯಾತಿ ಚ ॥ ೨೧೪ ॥

ಶೂದ್ರಾತಿರಿಕ್ತಯಾಜೀ ಯೋ ಗ್ರಾಮಯಾಜೀ ಚ ಕೀರ್ತಿತಃ ।
ತಥಾ ದೇವೋಪಜೀವೀ ಯೋ ದೇವಲಃ ಪರಿಕೀರ್ತಿತಃ ॥ ೨೧೫ ॥

೨೧೧–೨೧೪. ಆ ನಾರಾಯಣಕ್ಷೇತ್ರದಲ್ಲಾಗಲೀ, ಕುರುಕ್ಷೇತ್ರದಲ್ಲಾಗಲೀ, ವಿಷ್ಣುಪಾದದಲ್ಲಾಗಲೀ, ಕಾಶಿ ಮತ್ತು ಬದರಿಕಾಶ್ರಮಗಳಲ್ಲಾಗಲೀ, ಗಂಗಾಸಾಗರ ಸಂಗಮದಲ್ಲಾಗಲೀ, ಪುಷ್ಕರ ಮತ್ತು ಭಾಸ್ಕರಕ್ಷೇತ್ರಗಳಲ್ಲಾಗಲೀ, ಪ್ರಭಾಸಕ್ಷೇತ್ರ ಮತ್ತು ರಾಸಮಂಡಲವಲ್ಲಾಗಲೀ, ಹರಿದ್ವಾರಕೇದಾರಗಳಲ್ಲಾಗಲೀ, ಪಾವನವಾದ ಸೋಮ ಮತ್ತು ಬದರಕ್ಷೇತ್ರಗಳಲ್ಲಾಗಲಿ, ಸರಸ್ವತೀನದಿಯ ತೀರದಲ್ಲಾಗಲೀ, ಪುಣ್ಯಕರವಾದ ಬೃಂದಾವನದಲ್ಲಾಗಲೀ, ಗೋದಾವರಿ, ಕೌಶಿಕಿ ಮತ್ತು ತ್ರಿವೇಣೀ ತೀರದಲ್ಲಾಗಲೀ, ಹಿಮಾಲಯದಲ್ಲಾಗಲೀ, ಅಂತೆಯೇ ಇತರ ಪುಣ್ಯಕ್ಷೇತ್ರಗಳಲ್ಲಾಗಲೀ ಯಾರು ಮನಃಪೂರ್ವಕವಾಗಿ ದಾನವನ್ನು ಸ್ವೀಕರಿಸುವರೋ, ಅವರು 'ತೀರ್ಥ ಪ್ರತಿಗ್ರಾಹಿ' ಗಳೆನಿಸಿಕೊಂಡು ಕುಂಭೀಪಾಕನರಕಕ್ಕೆ ಹೋಗಿ ಬೀಳುವರು.

೨೧೫. ಶೂದ್ರಾದಿ ಹೀನಕುಲದವರಿಗೆ ಪೌರೋಹಿತ್ಯಮಾಡಿಸುವವನು 'ಗ್ರಾಮಯಾಜಿ' ಎನಿಸಿಕೊಳ್ಳುವನು. ಹಾಗೆಯೇ ದೇವದ್ರವ್ಯದಿಂದ ಜೀವಿಸುವವನು 'ದೇವಲ'ನೆನಿಸಿಕೊಳ್ಳುವನು.

ಶೂದ್ರಪಾಕೋಪಜೀವೀ ಯಃ ಸೂಪಕಾರ ಇತಿ ಸ್ಮೃತಃ ।
ಸಂಧ್ಯಾಪೂಜಾವಿಹೀನಶ್ಚ ಪ್ರಮತ್ತಃ ಪತಿತಃ ಸ್ಮೃತಃ ॥ ೨೧೬ ॥

ಉಕ್ತಂ ಪೂರ್ವಪ್ರಕರಣೇ ಲಕ್ಷಣಂ ವೃಷಲೀಪತೇಃ ।
ಏತೇ ಮಹಾಪಾತಕಿನಃ ಕುಂಭೀಪಾಕಂ ಪ್ರಯಂತಿ ತೇ ॥ ೨೧೭ ॥

ಕುಂಡಾನ್ಯನ್ಯಾನಿ ಯೇ ಯಾಂತಿ ನಿಬೋಧ ಕಥಯಾಮಿ ತೇ ॥ ೨೧೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರಾಯಣನಾರದಸಂವಾದೇ ಸಾವಿತ್ರ್ಯುಪಾಖ್ಯಾನೇ ಯಮ
ಸಾವಿತ್ರೀಸಂವಾದೇ ಕರ್ಮವಿಪಾಕೇ ಪಾಪಿನರಕನಿರೂಪಣಂ
ಶಿವಪ್ರಶಸ್ತ್ಯಂ ಬ್ರಹ್ಮಹತ್ಯಾದಿ ಪದಾರ್ಥಪರಿಭಾಷಾ
ನಿರೂಪಣಂ ನಾಮ ತ್ರಿಂಶತ್ತಮೋಽಧ್ಯಾಯಃ

---

೨೧೬. ಶೂದ್ರನಿಗಾಗಿ ಅಡಿಗೆಮಾಡಿ ಅದರಿಂದ ಜೀವಿಸುವವನು 'ಸೂಪಕಾರ'ನೆನಿಸಿಕೊಳ್ಳುವನು. ಮದದಿಂದ ಸಂಧ್ಯಾವಂದನೆ ಮತ್ತು ದೇವತಾಪೂಜೆಗಳನ್ನು ಬಿಟ್ಟವನು 'ಪತಿತ'ನೆನಿಸಿಕೊಳ್ಳುವನು.

೨೧೭. ಹಿಂದಿನ ಪ್ರಕರಣದಲ್ಲಿ 'ವೃಷಲೀಪತಿ'ಯ ಲಕ್ಷಣವನ್ನು ವಿವರಿಸಿದೆನು. ಮೇಲೆ ಹೇಳಿದ ಈ ಮಹಾಪಾಪಿಗಳೆಲ್ಲರೂ ಕುಂಭೀಪಾಕಕ್ಕೆ ಹೋಗುವರು.

೨೧೮. ಇತರ ನರಕಕುಂಡಗಳಿಗೆ ಯಾರು ಯಾರು ಹೋಗುವರೆಂಬುದನ್ನು ನಿನಗೆ ಹೇಳುವೆನು. ಅವಧರಿಸು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಯಮಸಾವಿತ್ರಿಯರ
ಸಂವಾದಸಂದರ್ಭದಲ್ಲಿ ಕರ್ಮವಿಪಾಕ, ಪಾಪಿಗಳಿಗೆ ಪ್ರಾಪ್ತವಾಗುವ
ನರಕಗಳು, ಆತಿದೇಶಿಕವಾದ ಬ್ರಹ್ಮಹತ್ಯೆ ಮತ್ತು ಗೋಹತ್ಯೆ
ಮುಂತಾದವುಗಳನ್ನು ತಿಳಿಸುವ ಮೂವತ್ತನೆಯ
ಅಧ್ಯಾಯವು ಮುಗಿದುದು.

ಮೂವತ್ತನೆಯ ಅಧ್ಯಾಯದ ಸಾರಾಂಶವು

ಸದಾಚಾರನಿರತರಾದ ಜನರೆಲ್ಲರೂ ತಮ್ಮ ತಮ್ಮ ಸತ್ಕರ್ಮಾನುಗುಣವಾದ ಪುಣ್ಯಫಲವನ್ನು ಪಡೆದು ಸುಖಿಸುವರು. ದುರಾಚಾರನಿರತರಾದವರು ದುಷ್ಕರ್ಮಾನುಗುಣವಾದ ದುಷ್ಫಲವನ್ನು ಅನುಭವಿಸಲು ನರಕದಲ್ಲಿ ಬೀಳುವರು. ನೀಚಕರ್ಮಗಳು ಅಗಣಿತವಾಗಿರುವಂತೆ ಆ ಕರ್ಮಾನುಗುಣವಾದ ಫಲಗಳನ್ನು ಕೊಡುವ ನರಕಕುಂಡಗಳೂ ಅಗಣಿತವಾಗಿರುವುವು. ಅತಿದೇಶಿಕವಾದ ಬ್ರಹ್ಮಹತ್ಯೆ ಮತ್ತು ಗೋಹತ್ಯೆಗಳನ್ನು ಮಾಡುವವನೂ, ಅಗಮ್ಯಾಗಮನಮಾಡುವವನೂ, ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಆಚರಿಸದವನೂ, ಪುಣ್ಯಕ್ಷೇತ್ರದಲ್ಲಿ ದಾನವನ್ನು ತೆಗೆದುಕೊಳ್ಳುವವನೂ, ಗ್ರಾಮಯಾಜಕನೂ, ಸ್ತ್ರೀಹತ್ಯೆ, ಶಿಶುಹತ್ಯೆ ಮತ್ತು ಮಿತ್ರಹತ್ಯೆಯನ್ನು ಮಾಡುವ ಮಹಾಪಾಪಿಗಳೂ ಕುಂಭೀಪಾಕನರಕದಲ್ಲಿ ತೊಳಲುವರು. ಸತ್ಯವಾದ ಮತ್ತು ಆರೋಪಿತವಾದ ಪುಣ್ಯಪಾಪಗಳು ಕೆಲವು ಸಂದರ್ಭದಲ್ಲಿ ನ್ಯೂನಾಧಿಕಗಳಾಗಿಯೂ, ಕೆಲವು ಸಂದರ್ಭದಲ್ಲಿ ಸಮಪ್ರಧಾನಗಳಾಗಿಯೂ ಇರುವುವು. ಆದಕಾರಣ ಜನರು ದುಷ್ಕರ್ಮಗಳನ್ನಾಚರಿಸಿ ನರಕಭಾಜನರ ಗಬಾರದು.

: ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಏಕತ್ರಿಂಶತ್ತಮೋಽಧ್ಯಾಯಃ ॥

॥ ಯಮ ಉವಾಚ ॥

ಹರಿಸೇವಾಂ ವಿನಾ ಸಾಧ್ವಿ ನ ಲಭೇತ್ಕರ್ಮಖಂಡನಂ ।
ಶುಭಕರ್ಮ ಸ್ವರ್ಗಬೀಜಂ ನರಕಂ ಚ ಕುಕರ್ಮತಃ ॥ ೧ ॥

ಪುಂಶ್ಚಲ್ಯನ್ನಂ ಚ ಯೋ ಭುಂಕ್ತೇ ವೇಶ್ಯಾನ್ನಂ ಚ ಪತಿವ್ರತೇ ।
ತಾಂ ವ್ರಜೇತ್ತು ದ್ವಿಜೋ ಯೋ ಹಿ ಕಾಲಸೂತ್ರಂ ಪ್ರಯಾತಿ ಸಃ ॥ ೨ ॥

ಶತವರ್ಷಂ ಕಾಲಸೂತ್ರೇ ಸ್ಥಿತ್ವಾ ಶೂದ್ರೋ ಭವೇದ್ಧ್ರುವಂ ।
ತತ್ರ ಜನ್ಮನಿ ರೋಗೀ ಚ ತತಃ ಶುದ್ಧೋ ಭವೇದ್ದ್ವಿಜಃ ॥ ೩ ॥

ಮೂವತ್ತೊಂದನೆಯ ಅಧ್ಯಾಯವು

೧. ಯಮ:—ಎಲೌ ಸಾಧ್ವೀಮಣಿಯಾದ ಸಾವಿತ್ರಿಯೇ, ಶ್ರೀಹರಿಯ ನಿಷ್ಕಾಮಸೇವೆಯನ್ನು ಮಾಡದೆ ಯಾರ ಕರ್ಮಬಂಧನವೂ ಬಯಲಾಗುವುದಿಲ್ಲ. ಪುಣ್ಯಕರ್ಮವು ಸ್ವರ್ಗಕ್ಕೂ, ಪಾಪಕರ್ಮವು ನರಕಕ್ಕೂ ಬೀಜರೂಪವಾದುದು.

೨. ಎಲೌ ಪತಿವ್ರತೆಯೇ, ಪುಂಶ್ಚಲಿ ಮತ್ತು ವೇಶ್ಯೆಯರ ಅನ್ನವನ್ನು ತಿಂದು ಅವರೊಡನೆ ಸಂಗಮವಾಡುವ ಬ್ರಾಹ್ಮಣನು ಕಾಲಸೂತ್ರವೆಂಬ ನರಕಕ್ಕೆ ಹೋಗುವನು.

೩. ಅಲ್ಲಿ ನೂರು ವರ್ಷಗಳ ಕಾಲ ನರಳಿ, ಅನಂತರ ಶೂದ್ರನಾಗಿ ಜನಿಸಿ. ಜನ್ಮತಃ ರೋಗದಿಂದ ನರಳಿ, ಮುಂದೆ ಶುದ್ಧನಾಗುವನು.

ಪತಿವ್ರತಾ ಚೈಕಪತ್ನೀ ದ್ವಿತೀಯೇ ಕುಲಟಾ ಸ್ಮೃತಾ ।
ತೃತೀಯೇ ಧರ್ಷಿಣೀ ಜ್ಞೇಯಾ ಚತುರ್ಥೇ ಪುಂಶ್ಚಲೀ ಸ್ಮೃತಾ ॥ ೪ ॥

ವೇಶ್ಯಾ ಚ ಪಂಚಮೇ ಷಷ್ಠೇ ಯುಗ್ಮೀ ಚ ಪರಿಕೀರ್ತಿತಾ ।
ಅತ ಊರ್ಧ್ವಂ ಮಹಾವೇಶ್ಯಾ ಸಾಽಸ್ಪೃಶ್ಯಾ ಸರ್ವಜಾತಿಷು ॥ ೫ ॥

ಯೋ ದ್ವಿಜಃ ಕುಲಟಾಂ ಗಚ್ಛೇದ್ಧರ್ಷಿಣೀಂ ಪುಂಶ್ಚಲೀಮಪಿ ।
ವೇಶ್ಯಾಂ ಯುಗ್ಮೀಂ ಮಹಾವೇಶ್ಯಾಮವಟೋದಂ ಪ್ರಯಾತಿ ಸಃ ॥ ೬ ॥

ಶತಾಬ್ದಂ ಕುಲಟಾಗಾಮೀ ಧೃಷ್ಟಾಗಾಮೀ ಚತುರ್ಗುಣಂ ।
ಷಡ್ಗುಣಂ ಪುಂಶ್ಚಲೀಗಾಮೀ ವೇಶ್ಯಾಗಾಮೀ ಗುಣಾಷ್ಟಕಂ ॥ ೭ ॥

ಯುಗ್ಮೀಗಾಮೀ ದಶಗುಣಂ ವಸೇತ್ತತ್ರ ನ ಸಂಶಯಃ ।
ಮಹಾವೇಶ್ಯಾಕಾಮುಕಶ್ಚ ತತಃ ಶತಗುಣಂ ವಸೇತ್ ॥ ೮ ॥

೪-೫ ಒಬ್ಬನೇ ಪತಿಯುಳ್ಳ ಸ್ತ್ರೀಯು ಪತಿವ್ರತೆಯೆಂದೂ, ಇಬ್ಬರು ಪತಿಗಳುಳ್ಳವಳು ಕುಲಟೆಯೆಂದೂ, ಮೂವರಿದ್ದರೆ ಧರ್ಷಿಣಿಯೆಂದೂ, ನಾಲ್ವರಿದ್ದರೆ ಪುಂಶ್ಚಲಿಯೆಂದೂ, ಐವರಿದ್ದರೆ ವೇಶ್ಯೆಯೆಂದೂ, ಆರುಜನ ಪತಿಗಳಿದ್ದರೆ ಯುಗ್ಮಿಯೆಂದೂ, ಅದಕ್ಕಿಂತ ಹೆಚ್ಚು ಪತಿಗಳಿದ್ದರೆ ಮಹಾವೇಶ್ಯೆಯೆಂದೂ ಕರೆಯಲ್ಪಡುವಳು. ಈ ಮಹಾವೇಶ್ಯೆಯು ಎಲ್ಲರಿಂದಲೂ ಅಸ್ಪೃಶ್ಯಳು.

೬. ಮೇಲೆ ಹೇಳಿದ ಕುಲಟೆ, ದರ್ಷಿಣಿ, ಪುಂಶ್ಚಲಿ ವೇಶ್ಯೆ, ಯುಗ್ಮಿ ಮತ್ತು ಮಹಾವೇಶ್ಯೆಯರ ಸಮಾಗಮ ಮಾಡುವ ಬ್ರಾಹ್ಮಣನು ಅವಟೋದವೆಂಬ ನರಕಕ್ಕೆ ಹೋಗುವನು.

೭-೮. ಕುಲಟೆಯ ಸಹವಾಸ ಮಾಡಿದವನು ನೂರು ವರ್ಷಗಳೂ, ಧರ್ಷಿಣಿಯ ಸಂಗಮ ಮಾಡಿದವನು ನಾನೂರು ವರ್ಷಗಳೂ, ಪುಂಶ್ಚಲೀಗಾಮಿಯು ಅದರ ಆರರಷ್ಟು ವರ್ಷಗಳೂ, ವೇಶ್ಯಾಗಾಮಿಯು ಅದರ ಎಂಟರಷ್ಟು ವರ್ಷಗಳೂ, ಯುಗ್ಮಿಯೊಡಗೂಡಿದವನು ಅದರ ಹತ್ತರಷ್ಟು ವರ್ಷಗಳೂ ಆ ನರಕದಲ್ಲಿ ತೊಳಲುವನು. ಮಹಾವೇಶ್ಯೆಯ ಸಂಗಮಾಡಿದವನು ಅದರ ನೂರರಷ್ಟು ವರ್ಷಗಳ ಕಾಲ ನರಳಬೇಕಾಗುವುದು.

ತದಾ ಹಿ ಸರ್ವಗಾಮೀ ಚೇತ್ಯೇವಮಾಹ ಪಿತಾಮಹಃ ।
ತತ್ರೈವ ಯಾತನಾಂ ಭುಙ್ಕ್ತೇ ಯಮದೂತೇನ ತಾಡಿತಃ ॥ ೯ ॥

ತಿತ್ತಿರಿಃ ಕುಲಟಾಗಾಮೀ ಧೃಷ್ಟಾಗಾಮೀ ಚ ವಾಯಸಃ ।
ಕೋಕಿಲಃ ಪುಂಶ್ಚಲೀಗಾಮೀ ವೇಶ್ಯಾಗಾಮೀ ವೃಕಸ್ತಥಾ ॥ ೧೦ ॥

ಯುಗ್ಮೀಗಾಮೀ ಸೂಕರಶ್ಚ ಸಪ್ತಜನ್ಮಸು ಭಾರತೇ ।
ಮಹಾವೇಶ್ಯಾ ಕಾಮುಕಶ್ಚ ಶ್ಮಶಾನೇ ಶಾಲ್ಮಲಿಸ್ತರುಃ ॥ ೧೧ ॥

ಯೋ ಭುಙ್ಕ್ತೇ ಜ್ಞಾನಹೀನಶ್ಚ ಗ್ರಹಣೇ ಚಂದ್ರಸೂರ್ಯಯೋಃ ।
ಅರುಂತುದಂ ಸ ಯಾತ್ಯೇವ ಚಾಂದ್ರಮಾನಾಬ್ದಮೇವ ಚ ॥ ೧೨ ॥

---

೯. ಹೀಗೆಂದಮೇಲೆ ಮೇಲೆ ಹೇಳಿದ ಈ ನೀಚಸ್ತ್ರೀಯರೆಲ್ಲರ ಸಹವಾಸ ಮಾಡುವ ಬ್ರಾಹ್ಮಣನು ಅಗಣಿತಕಾಲ ಆ ನರಕದಲ್ಲಿಯೇ ಯಮದೂತರಿಂದ ಶಿಕ್ಷೆಹೊಂದುತ್ತ ನರಳುವನೆಂದು ಬ್ರಹ್ಮನು ಹೇಳಿರುವುದರಲ್ಲಿ ಆಶ್ಚರ್ಯವೇನಿದೆ ?

೧೦. ಈ ರೀತಿ ಶಿಕ್ಷೆಹೊಂದಿದ ಮೇಲೆ ಕುಲಟಾಗಾಮಿಯು ತಿತ್ತಿರಿ ಪಕ್ಷಿಯಾಗಿಯೂ, ಧರ್ಷಿಣಿಯೊಡಗೂಡಿದವನು ಕಾಗೆಯಾಗಿಯೂ, ಪುಂಶ್ಚಲೀ ಸಂಗಮಿಯು ಕೋಗಿಲೆಯಾಗಿಯೂ, ವೇಶ್ಯಾಗಾಮಿಯು ತೋಳನಾಗಿಯೂ ಹುಟ್ಟುವನು.

೧೧. ಅಂತೆಯೇ ಯುಗ್ಮಿಯ ಸಂಬಂಧಮಾಡಿದವನು ಹಂದಿಯಾಗಿ, ಭಾರತದಲ್ಲಿ ಏಳು ಜನ್ಮಗಳೆತ್ತುವನು ಮಹಾವೇಶ್ಯಾಗಾಮಿಯು ಶ್ಮಶಾನದಲ್ಲಿ ಮುಳ್ಳುಬೂರುಗದ ಮರವಾಗಿ ಹುಟ್ಟುವನು.

೧೨. ಚಂದ್ರಸೂರ್ಯರ ಗ್ರಹಣದ ದಿವಸಗಳಲ್ಲಿ ತಿಳಿವಳಿಕೆಯಿಲ್ಲದೆ ಊಟ ಮಾಡುವವನು ಒಂದು ಚಾಂದ್ರಮಾನ ಸಂವತ್ಸರ ಪೂರ್ತಿಯಾಗಿ ಅರುಂತುದವೆಂಬ ನರಕದಲ್ಲಿ ಬೀಳುವನು.

ತತೋ ಭವೇನ್ಮಾನವಸ್ಸ್ಯಾದುದರವ್ಯಾಧಿಸಂಯುತಃ ।
ಗುಲ್ಮಯುಕ್ತಶ್ಚ ಕಾಣಶ್ಚ ದಂತಹೀನಸ್ತತಃ ಶುಚಿಃ ॥ ೧೩ ॥

ವಾಕ್ಪ್ರದತ್ತಾಂ ಹಿ ಕನ್ಯಾಂ ಚ ಯಶ್ಚಾನ್ಯಸ್ಮೈ ದದಾತಿ ಚ ।
ಸ ವಸೇತ್ಪಾಂಶುಭೋಗೇ ಚ ತದ್ಭೋಜೀ ಚ ಶತಾಬ್ದಕಂ ॥ ೧೪ ॥

ದತ್ತಾಪಹಾರೀ ಯಃ ಸಾಧ್ವಿ ಪಾಶವೇಷ್ಟಂ ಶತಾಬ್ದಕಂ ।
ನಿವಸೇಚ್ಛರಶಯ್ಯಾಯಾಂ ಯಮದೂತೇನ ತಾಡಿತಃ ॥ ೧೫ ॥

ನ ಪೂಜಯೇದ್ಯೋ ಹಿ ಭಕ್ತ್ಯಾ ಶಿವಲಿಂಗಂ ಚ ಪಾರ್ಥಿವಂ ।
ಸ ಯಾತಿ ಶೂಲಿನಃ ಕೋಪಾಚ್ಛೂಲಪ್ರೋತಂ ಸುದಾರುಣಂ ॥ ೧೬ ॥

---

೧೩. ಅನಂತರ ಮನುಷ್ಯನಾಗಿ ಹುಟ್ಟಿದರೂ ಉದರವ್ಯಾಧಿಯಿಂದಲೂ, ಗುಲ್ಮರೋಗದಿಂದಲೂ, ಪೀಡಿತನಾಗಿರುವುದಲ್ಲದೆ ಕುರುಡನೂ, ದಂತಹೀನನೂ ಆಗಿದ್ದು ನಂತರ ಶುದ್ಧನಾಗುವನು.

೧೪. ಒಬ್ಬನಿಗೆ ಮಾತಾಡಿದ ಕನ್ಯೆಯನ್ನು ಮತ್ತೊಬ್ಬನಿಗೆ ಕೊಟ್ಟು ಮದುವೆ ಮಾಡುವವನು ಪಾಂಶುಭೋಗವೆಂಬ ನರಕದಲ್ಲಿ ಧೂಳುಗಳನ್ನೇ ತಿಂದುಕೊಂಡು ನೂರುವರ್ಷ ನರಳುವನು.

೧೫. ಎಲೌ ಸಾಧ್ವೀಮಣಿಯೇ, ದತ್ತಾಪಹಾರಮಾಡುವವನು ಪಾಶವೇಷ್ಟವೆಂಬ ನರಕದಲ್ಲಿ ಬಾಣದ ಹಾಸಿಗೆಯ ಮೇಲೆ ನೂರು ವರ್ಷಗಳಕಾಲ ಯಮದೂತರಿಂದ ಶಿಕ್ಷೆಹೊಂದುತ್ತ ಬಿದ್ದಿರುವನು.

೧೬. ಮಣ್ಣಿನಿಂದ ನಿರ್ಮಿತವಾದ ಶಿವಲಿಂಗವನ್ನು ಭಕ್ತಿಯಿಂದ ಪೂಜಿಸದವನು ಶೂಲಿಯ ಕೋಪಕ್ಕೊಳಗಾಗಿ ದಾರುಣವಾದ ಶೂಲಪ್ರೋತವೆಂಬ ನರಕಕ್ಕೆ ಹೋಗುವನು.

ಸ್ಥಿತ್ವಾ ಶತಾಬ್ದಂ ತತ್ರೈವ ಶ್ವಾಪದಃ ಸಪ್ತಜನ್ಮಸು ।
ತತೋ ಭವೇದ್ದೇವಲಶ್ಚ ಸಪ್ತಜನ್ಮಸ್ವತಃ ಶುಚಿಃ ॥ ೧೭ ॥

ಕರೋತಿ ದಂಡಂ ಯೋ ವಿಪ್ರೇ ಯದ್ಭಯಾತ್ಕಂಪತೇ ದ್ವಿಜಃ ।
ಪ್ರಕಂಪನೇ ವಸೇತ್ಸೋಽಪಿ ವಿಪ್ರಲೋಮಾಬ್ದಮೇವ ಚ ॥ ೧೮ ॥

ಪ್ರಕೋಪವದನಾ ಕೋಪಾತ್ಸ್ವಾಮಿನಂ ಯಾ ಚ ಪಶ್ಯತಿ ।
ಕಟೂಕ್ತಿಂ ತಂ ಚ ವದತಿ ಯಾತಿ ಚೋಲ್ಕಾಮುಖಂ ಚ ಸಾ ॥ ೧೯ ॥

ಉಲ್ಕಾಂ ಪದಾತಿ ವಕ್ತ್ರೇ ಚ ಸತತಂ ಯಮಕಿಂಕರಃ ।
ದಂಡೇನ ತಾಡಯೇನ್ಮೂರ್ಧ್ನಿ ತಲ್ಲೋಮಾಬ್ದಪ್ರಮಾಣಕಂ ॥ ೨೦ ॥

ತತೋ ಭವೇನ್ಮಾನವೀ ಚ ವಿಧವಾ ಸಪ್ತಜನ್ಮಸು ।
ಭುಕ್ತ್ವಾ ದುಃಖಂ ಚ ವೈಧವ್ಯಂ ವ್ಯಾಧಿಂ ಭುಕ್ತ್ವಾ ತತಃ ಶುಚಿಃ ॥ ೨೧ ॥

---

೧೭. ಅಲ್ಲಿ ನೂರು ವರ್ಷಗಳ ಕಾಲವಿದ್ದು ಅನಂತರ ಏಳು ಜನ್ಮಗಳಲ್ಲಿ ದುಷ್ಟಮೃಗವಾಗಿಯೂ, ಏಳು ಜನ್ಮಗಳಲ್ಲಿ ದೇವಲನಾಗಿಯೂ ಹುಟ್ಟಿ ಪುನಃ ಶುದ್ಧನಾಗುವನು.

೧೮. ಯಾರು ಬ್ರಾಹ್ಮಣರಿಗೆ ಶಿಕ್ಷೆಮಾಡುವರೋ ಮತ್ತು ಯಾರ ಭಯದಿಂದ ಬ್ರಾಹ್ಮಣರು ನಡುಗುವರೋ ಆ ಪಾಪಿಗಳು ಬ್ರಾಹ್ಮಣನ ಶರೀರದಲ್ಲಿರುವ ರೋಮಗಳಿರುವಷ್ಟುಕಾಲ ಪ್ರಕಂಪನವೆಂಬ ನರಕದಲ್ಲಿ ನರಳುವರು.

೧೯. ಯಾವ ಹೆಂಗಸು ಸಿಡುಕಲು ಮುಖದಿಂದ ತನ್ನ ಗಂಡನನ್ನು ನೋಡುವಳೋ ಮತ್ತು ಅವನೊಡನೆ ಕಟುನುಡಿಗಳನ್ನಾಡುವಳೋ ಅವಳು ಉಲ್ಕಾಮುಖವೆಂಬ ನರಕಕ್ಕೆ ಹೋಗುವಳು.

೨೦. ಅಲ್ಲಿ ಯಮನ ಸೇವಕರು ಅವಳ ಬಾಯನ್ನು ಸರ್ವದಾ ಕೊಳ್ಳಿಯಿಂದ ಸೀಯುವರು. ಅಲ್ಲದೆ ಅವಳ ಶರೀರದ ಲೋಮಪ್ರಮಾಣವಷ್ಟು ವರ್ಷಗಳು ದಂಡದಿಂದ ಅವಳ ತಲೆಯನ್ನು ದಂಡಿಸುವರು

೨೧. ಅನಂತರ ಏಳು ಜನ್ಮಗಳಲ್ಲಿ ವಿಧವೆಯಾಗಿದ್ದು ವೈಧವ್ಯದುಃಖದಿಂದಲೂ, ವ್ಯಾಧಿಯಿಂದಲೂ ನರಳಿ ಪುನಃ ಶುದ್ಧಳಾಗುವಳು.

ಯಾ ಬ್ರಾಹ್ಮಣೀ ಶೂದ್ರಭೋಗ್ಯಾ ಸಾಂಧಕೂಪಂ ಪ್ರಯಾತಿ ಚ ।
ತಪ್ತಶೌಚೋದಕೇ ಧ್ವಾಂತೇ ತದಾಹಾರಾ ದಿವಾನಿಶಂ ॥ ೨೨ ॥

ನಿವಸೇದತಿಸಂತಪ್ತಾ ಯಮದೂತೇನ ತಾಡಿತಾ ।
ಶೌಚೋದಕೇ ನಿಮಗ್ನಾ ಚ ಯಾವದಿಂದ್ರಾಶ್ಚತುರ್ದಶ ॥ ೨೩ ॥

ಕಾಕೀ ಜನ್ಮ ಸಹಸ್ರಾಣಿ ಶತಜನ್ಮಾನಿ ಶೂಕರೀ ।
ಕುಕ್ಕುಟೀ ಶತಜನ್ಮಾನಿ ಶೃಗಾಲೀ ಸಪ್ತಜನ್ಮಸು ॥ ೨೪ ॥

ಪಾರಾವತೀ ಸಪ್ತಜನೌ ವಾನರೀ ಸಪ್ತಜನ್ಮಸು ।
ತತೋ ಭವೇತ್ಸಾ ಚಂಡಾಲೀ ಸರ್ವಭೋಗ್ಯಾ ಚ ಭಾರತೇ ॥ ೨೫ ॥

ತತೋ ಭವೇಚ್ಚ ರಜಕೀ ಯಕ್ಷ್ಮಗ್ರಸ್ತಾ ಚ ಪುಂಶ್ಚಲೀ ।
ತತಃ ಕುಷ್ಠಯುತಾ ತೈಲಕಾರೀ ಶುದ್ಧಾ ಭವೇತ್ತತಃ ॥ ೨೬ ॥

---

೨೨. ಶೂದ್ರನ ಸಂಗಮಮಾಡುವ ಬ್ರಾಹ್ಮಣಸ್ತ್ರೀಯು ಅಂಧಕೂಪವೆಂಬ ನರಕದಲ್ಲಿ ಬಿದ್ದು, ಹಗಲೂ ರಾತ್ರಿ ಕತ್ತಲೆಯಲ್ಲಿ ಕೊರಗಿ, ಕುದಿಯುತ್ತಿರುವ 'ಶೌಚ' ಜಲವನ್ನು ಪಾನಮಾಡುವಳು.

೨೩. ಅಲ್ಲದೆ ಅತ್ಯಂತ ದುಃಖಪೀಡಿತಳಾಗಿ, ಯಮದೂತರಿಂದ ದಂಡಿತ ಳಾಗಿ ಚತುರ್ದಶೇಂದ್ರರ ಜೀವಿತಕಾಲದ ವರೆಗೆ ಅಲ್ಲಿ ನರಳುವಳು.

೨೪. ಅನಂತರ ಸಾವಿರ ಜನ್ಮಗಳಲ್ಲಿ ಹೆಣ್ಣು ಕಾಗೆಯಾಗಿಯೂ, ನೂರು ಜನ್ಮಗಳಲ್ಲಿ ಹೆಣ್ಣು ಹಂದಿಯಾಗಿಯೂ, ನೂರು ಜನ್ಮಗಳಲ್ಲಿ ಕೋಳಿಯಾಗಿಯೂ, ಏಳು ಜನ್ಮಗಳಲ್ಲಿ ಹೆಣ್ಣು ನರಿಯಾಗಿಯೂ ಕಷ್ಟಪಡುವಳು.

೨೫. ಮುಂದೆ ಏಳು ಜನ್ಮಗಳಲ್ಲಿ ಪಾರಿವಾಳವಾಗಿಯೂ, ಏಳು ಜನ್ಮಗಳಲ್ಲಿ ಹೆಣ್ಣು ಕೋತಿಯಾಗಿಯೂ, ನರಳುವುದಲ್ಲದೆ ಭಾರತದಲ್ಲಿ ಚಂಡಾಲಸ್ತ್ರೀಯಾಗಿ ಹುಟ್ಟಿ ಸರ್ವಭೋಗ್ಯಳಾಗುವಳು.

೨೬. ಅನಂತರ ಕ್ರಮವಾಗಿ ಕ್ಷಯರೋಗದಿಂದ ನರಳುವ ಅಗಸಿತಿ ಯಾಗಿಯೂ, ಕುಷ್ಠರೋಗದಿಂದ ನರಳುವ ಗಾಣಿಗಿತ್ತಿಯಾಗಿಯೂ ಹುಟ್ಟಿ ಪುನಃ ಶುದ್ಧಳಾಗುವಳು

ವೇಶ್ಯಾವಸೇದ್ವೇಧನೇ ಚ ಯುಗ್ಮೀ ವೈ ದಂಡತಾಡನೇ ।
ಜಾಲರಂಧ್ರೇ ಮಹಾವೇಶ್ಯಾ ಕುಲಟಾ ದೇಹಚೂರ್ಣಕೇ　　॥ ೨೭ ॥

ಸ್ವೈರಿಣೀ ದಲನೇ ಚೈವ ಧೃಷ್ಟಾ ವೈ ಶೋಷಣೇ ತಥಾ ।
ನಿವಸೇದ್ಯಾತನಾಯುಕ್ತಾ ಯಮದೂತೇನ ತಾಡಿತಾ　　॥ ೨೮ ॥

ವಿಣ್ಮೂತ್ರಭಕ್ಷಣಂ ತತ್ರ ಯಾವನ್ಮನ್ವಂತರಂ ಸತಿ ।
ತತೋ ಭವೇದ್ವಿಟ್ಕ್ರಿಮಿಶ್ಚ ವರ್ಷಲಕ್ಷಂ ತತಃ ಶುಚಿಃ　　॥ ೨೯ ॥

ಬ್ರಾಹ್ಮಣೋ ಬ್ರಾಹ್ಮಣೀಂ ಗಚ್ಛೇತ್ಕ್ಷತ್ರಿಯಾಮಪಿ ಕ್ಷತ್ರಿಯಃ ।
ವೈಶ್ಯೋ ವೈಶ್ಯಾಂ ಚ ಶೂದ್ರಾಂ ಚ ಶೂದ್ರೋ ವಾಪಿ ವ್ರಜೇದ್ಯದಿ　　॥ ೩೦ ॥

ಸ್ವವರ್ಣಪರದಾರೀ ಚ ಕಷಂ ಯಾತಿ ತಯಾ ಸಹ ।
ಭುಕ್ತ್ವಾ ಕಷಾಯತಪ್ತೋದಂ ನಿವಸೇದ್ದ್ವಾದಶಾಬ್ದಕಂ　　॥ ೩೧ ॥

೨೭–೨೮. ವೇಶ್ಯೆಯು ವೇಧನವೆಂಬ ನರಕದಲ್ಲೂ, ಯುಗ್ಮಿಯು 'ದಂಡತಾಡನ'ದಲ್ಲೂ, ಕುಲಟೆಯು 'ದೇಹಚೂರ್ಣಕ'ದಲ್ಲೂ, ಸ್ವೈರಿಣಿಯು 'ದಲನ'ದಲ್ಲೂ, ಧೃಷ್ಟೆಯು 'ಶೋಷಣ'ದಲ್ಲೂ ಯಮದೂತರಿಂದ ಶಿಕ್ಷೆಹೊಂದಿ ಯಾತನೆಯನ್ನು ಅನುಭವಿಸುವರು

೨೯. ಒಂದು ಮನ್ವಂತರವು ಮುಗಿಯುವವರೆಗೆ ಅಲ್ಲಿ ಮಲಮೂತ್ರಗಳನ್ನು ಭಕ್ಷಿಸಿಕೊಂಡಿದ್ದು ಅನಂತರ ಮಲಕ್ರಿಮಿಯಾಗಿ ಲಕ್ಷವರ್ಷ ನರಳಿ ಪಾಪದಿಂದ ಮುಕ್ತರಾಗುವರು

೩೦–೩೧. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರವರ್ಣದವರು ತಮ್ಮ ತಮ್ಮ ಜಾತಿಯಲ್ಲೇ ಪರಸ್ತ್ರೀಯರ ಸಂಗಮಾಡಿದರೂ ಅವರೊಡನೆ 'ಕಷ'ವೆಂಬ ನರಕಕ್ಕೆ ಹೋಗಿ ತೊಳಲುವರು. ಅಲ್ಲಿ ಕಷಾಯ ತಪ್ತೋದಕವನ್ನು ಪಾನ ಮಾಡುತ್ತಾ ಹನ್ನೆರಡು ವರ್ಷಗಳು ವಾಸಿಸುವರು.

ತತೋ ವಿಪ್ರೋ ಭವೇಚ್ಛುದ್ಧಶ್ಚೈವಂ ಚ ಕ್ಷತ್ರಿಯೋದಯಃ ।
ಯೋಷಿತಶ್ಚಾಪಿ ಶುಧ್ಯಂತೀತ್ಯೇವಮಾಹ ಪಿತಾಮಹಃ ॥ ೩೨ ॥

ಕ್ಷತ್ರಿಯೋ ಬ್ರಾಹ್ಮಣೀಂ ಗಚ್ಛೇದ್ವೈಶ್ಯೋ ವಾಽಪಿ ಪತಿವ್ರತೇ ।
ಮಾತೃಗಾಮೀ ಭವೇತ್ಸೋಽಪಿ ಶೂರ್ಪಂ ಚ ನರಕಂ ವ್ರಜೇತ್ ॥ ೩೩ ॥

ಶೂರ್ಪಾಕಾರೈಶ್ಚ ಕೃಮಿಭಿರ್ಬ್ರಾಹ್ಮಣ್ಯಾ ಸಹ ಭಕ್ಷಿತಃ ।
ಪ್ರತಪ್ತಮೂತ್ರಭೋಜೀ ಚ ಯಮದೂತೇನ ತಾಡಿತಃ ॥ ೩೪ ॥

ತತ್ರೈವ ಯಾತನಾಂ ಭುಂಕ್ತೇ ಯಾವದಿಂದ್ರಾಶ್ಚತುರ್ದಶ ।
ಸಪ್ತಜನ್ಮಸು ವಾರಾಹಃ ಛಾಗಲಶ್ಚ ತತಃ ಶುಚಿಃ ॥ ೩೫ ॥

---

೩೨. ಅನಂತರ ಪರಿಶುದ್ಧರಾಗಿ ಬ್ರಾಹ್ಮಣ ಮುಂತಾದ ಉಚಿತ ಜನ್ಮವನ್ನು ಪಡೆಯುವರು. ಹೆಂಗಸೂ ಅದೇ ರೀತಿಯಾಗಿ ಶುದ್ಧಿಹೊಂದುವಳು ಎಂದು ಬ್ರಹ್ಮನು ಹೇಳಿರುವನು.

೩೩. ಎಲೌ ಪತಿವ್ರತೆಯೇ, ಕ್ಷತ್ರಿಯನಾಗಲೀ. ವೈಶ್ಯನಾಗಲೀ, ಬ್ರಾಹ್ಮಣ ಸ್ತ್ರೀಯು ಸಂಗಮಮಾಡಿದರೆ ಅವನು ಮಾತೃಗಾಮಿಯ ದೋಷಕ್ಕೆ ಗುರಿಯಾಗಿ, ಶೂರ್ಪವೆಂಬ ನರಕಕ್ಕೆ ಬೀಳುವನು.

೩೪. ಅಲ್ಲಿ ಶೂರ್ಪಾಕಾರವಾದ ಕ್ರಿಮಿಗಳಿಂದ ಆ ಬ್ರಾಹ್ಮಣಿಯೊಡನೆ ಭಕ್ಷಿಸಲ್ಪಡುತ್ತಾ ಕುದಿಯುತ್ತಿರುವ ಮೂತ್ರವನ್ನು ಪಾನಮಾಡಿಕೊಂಡು ಯಮ ದೂತರಿಂದ ಶಿಕ್ಷೆಹೊಂದುವನು

೩೫. ಅಲ್ಲಿ ಚತುರ್ದಶೇಂದ್ರರಿರುವವರೆಗೆ ಯಾತನೆಯನ್ನನುಭವಿಸುತ್ತಿರುವನು. ಅನಂತರ ಏಳು ಜನ್ಮಗಳು ಹಂದಿಯಾಗಿಯೂ, ಹೋತನಾಗಿಯೂ ಹುಟ್ಟಿ ಶುದ್ಧರಾಗುವನು.

ಕರೇ ಧೃತ್ವಾ ಚ ತುಲಸೀಂ ಪ್ರತಿಜ್ಞಾಂ ಯೋ ನ ಪಾಲಯೇತ್ ।
ಮಿಥ್ಯಾ ವಾ ಶಪಥಂ ಕುರ್ಯಾತ್ಸ ಚ ಜ್ವಾಲಾಮುಖಂ ವ್ರಜೇತ್ ॥ ೩೬ ॥

ಗಂಗಾತೋಯಂ ಕರೇ ಧೃತ್ವಾ ಪ್ರತಿಜ್ಞಾಂ ಯೋ ನ ಪಾಲಯೇತ್ ।
ಶಿಲಾಂ ಚ ದೇವಪ್ರತಿಮಾಂ ಸ ಚ ಜ್ವಾಲಾಮುಖಂ ವ್ರಜೇತ್ ॥ ೩೭ ॥

ದತ್ವಾ ಚ ದಕ್ಷಿಣಂ ಹಸ್ತಂ ಪ್ರತಿಜ್ಞಾಂ ಯೋ ನ ಪಾಲಯೇತ್ ।
ಸ್ಥಿತ್ವಾ ದೇವಗೃಹೇ ವಾಽಪಿ ಸ ಚ ಜ್ವಾಲಾಮುಖಂ ವ್ರಜೇತ್ ॥ ೩೮ ॥

ಸ್ಪೃಷ್ಟ್ವಾ ಚ ಬ್ರಾಹ್ಮಣಂ ಗಾಂ ಚ ವಹ್ನಿಂ ವಿಷ್ಣುಸಮಂ ಸತಿ ।
ನ ಪಾಲಯೇತ್ಪ್ರತಿಜ್ಞಾಂ ಚ ಸ ಚ ಜ್ವಾಲಾಮುಖಂ ವ್ರಜೇತ್ ॥ ೩೯ ॥

---

೩೬. ಕೈಯಲ್ಲಿ ತುಳಸೀದಳವನ್ನು ಹಿಡಿದು ಮಾಡಿದ ಪ್ರತಿಜ್ಞೆಯನ್ನು ಪಾಲಿಸದವನೂ, ಸುಳ್ಳು ಸುಳ್ಳು ಶಪಥಮಾಡುವವನೂ, ಜ್ವಾಲಾಮುಖವೆಂಬ ನರಕಕ್ಕೆ ಹೋಗುವನು.

೩೭. ಕೈಯಲ್ಲಿ ಗಂಗೋದಕವನ್ನು ಹಿಡಿದು ಮಾಡಿದ ಪ್ರತಿಜ್ಞೆಯನ್ನು ಪಾಲಿಸದವನೂ ಮತ್ತು ಸಾಲಿಗ್ರಾಮ ಶಿಲೆಯನ್ನು ಹಿಡಿದು ಪ್ರತಿಜ್ಞೆಮಾಡಿ, ಪಾಲಿಸದವನೂ, ಜ್ವಾಲಾಮುಖವೆಂಬ ನರಕಕ್ಕೆ ಹೋಗುವನು.

೩೮. ಬಲಗೈಯನ್ನು ಮುಂದಿಟ್ಟಾಗಲೀ, ದೇವಮಂದಿರದಲ್ಲಿ ಇದ್ದು ಕೊಂಡಾಗಲೀ, ಪ್ರತಿಜ್ಞೆಮಾಡಿ ಪಾಲಿಸದವನು ಜ್ವಾಲಾಮುಖವೆಂಬ ನರಕಕ್ಕೆ ಹೋಗಿ ಬೀಳುವನು.

೩೯. ಬ್ರಾಹ್ಮಣನನ್ನೂ, ಹಸುವನ್ನೂ, ವಿಷ್ಣುಸಮಾನವಾದ ಅಗ್ನಿಯನ್ನೂ ಮುಟ್ಟಿ ಮಾಡಿದ ಪ್ರತಿಜ್ಞೆಯನ್ನು ಪಾಲಿಸದವನು ಜ್ವಾಲಾಮುಖವೆಂಬ ನರಕಕ್ಕೆ ಬೀಳುವನು.

ಮಿತ್ರದ್ರೋಹೀ ಕೃತಘ್ನಶ್ಚ ಯೋ ಹಿ ವಿಶ್ವಾಸಘಾತಕಃ ।
ಮಿಥ್ಯಾಸಾಕ್ಷ್ಯಪ್ರದಶ್ಚೈವ ಸ ಚ ಜ್ವಾಲಾಮುಖಂ ವ್ರಜೇತ್ ॥ ೪೦ ॥

ಏತೇ ತತ್ರ ವಸಂತ್ಯೇವ ಯಾವದಿಂದ್ರಾಶ್ಚತುರ್ದಶ ।
ಯಥಾಙ್ಗಾರ ಪ್ರದಗ್ಧಾಶ್ಚ ಯಮದೂತೈಶ್ಚ ತಾಡಿತಾಃ ॥ ೪೧ ॥

ಚಂಡಾಲಸ್ತುಲಸೀಸ್ಪರ್ಶೀ ಸಪ್ತಜನ್ಮಸ್ವತಃ ಶುಚಿಃ ।
ಮ್ಲೇಚ್ಛೋ ಗಂಗಾಜಲಸ್ಪರ್ಶೀ ಪಂಚಜನ್ಮಸ್ವತಃ ಶುಚಿಃ ॥ ೪೨ ॥

ಶಿಲಾಸ್ಪರ್ಶೀ ವಿಟ್ಕೃಮಿಶ್ಚ ಸಪ್ತಜನ್ಮಸು ಸುಂದರಿ ।
ಅರ್ಚಾಸ್ಪರ್ಶೀ ವ್ರಣಕೃಮಿ ಸ್ಸಪ್ತಜನ್ಮಸ್ವತಃ ಶುಚಿಃ ॥ ೪೩ ॥

---

೪೦. ಮಿತ್ರದ್ರೋಹಿಯೂ, ಉಪಕಾರಸ್ಮರಣೆಯಿಲ್ಲದವನೂ, ನಂಬಿಸಿ ಮೋಸಗೊಳಿಸುವವನೂ, ಸುಳ್ಳುಸಾಕ್ಷಿ ಹೇಳುವವನೂ, ಜ್ವಾಲಾಮುಖವೆಂಬ ನರಕಕ್ಕೆ ಹೋಗುವನು.

೪೧. ಇವರೆಲ್ಲರೂ ಆ ನರಕದಲ್ಲಿ ಬೆಂಕಿಯ ಕೆಂಡದಿಂದ ಸುಡಿಸಿಕೊಳ್ಳುತ್ತ, ಯಮದೂತರಿಂದ ಶಿಕ್ಷೆಹೊಂದುತ್ತ ಚತುರ್ದಶೇಂದ್ರರ ಜೀವಿತಕಾಲದವರೆಗೆ ಅಲ್ಲಿ ನೆಲೆಸಿರುವರು.

೪೨. ಅನಂತರ ತುಲಸಿಯನ್ನು ಮುಟ್ಟಿ ಪ್ರತಿಜ್ಞೆಮಾಡಿದವನು ಏಳು ಜನ್ಮಗಳು ಚಂಡಾಲನಾಗಿ ಕಷ್ಟಪಟ್ಟು ಪುನಃ ಶುಚಿಯಾಗುವನು. ಗಂಗಾನದಿಯ ನೀರನ್ನು ಮುಟ್ಟಿ ಪ್ರತಿಜ್ಞೆಮಾಡಿದವನು ಐದು ಜನ್ಮಗಳು ಮ್ಲೇಚ್ಛನಾಗಿ ಕಳೆದ ನಂತರ ಶುಚಿಯಾಗುವನು.

೪೩. ಸಾಲಿಗ್ರಾಮ ಶಿಲೆಯನ್ನು ಮುಟ್ಟಿ ಪ್ರತಿಜ್ಞೆಮಾಡಿದವನು ಏಳು ಜನ್ಮಗಳಲ್ಲಿ ಮಲಕ್ರಿಮಿಯಾಗಿ ಹುಟ್ಟಿ ನಂತರ ಶುಚಿಯಾಗುವನು. ದೇವತಾ ಪ್ರತಿಮೆಯನ್ನು ಸ್ಪರ್ಶಮಾಡಿ ಪ್ರತಿಜ್ಞೆಮಾಡಿದವನು ಏಳು ಜನ್ಮಗಳಲ್ಲಿ ಮಲಕ್ರಿಮಿಯಾಗಿ ಹುಟ್ಟಿ ನಂತರ ಶುಚಿಯಾಗುವನು.

ದಕ್ಷಹಸ್ತಪ್ರದಾತಾ ಚ ಸರ್ಪಸ್ಸ್ಯಾತ್ಸಪ್ತಜನ್ಮಸು ।
ತತೋ ಭವೇದ್ಧಸ್ತಹೀನೋ ಮಾನವಶ್ಚ ತತಃ ಶುಚಿಃ ॥ ೪೪ ॥

ಮಿಥ್ಯಾವಾದೀ ದೇವಗೃಹೇ ದೇವಲಃ ಸಪ್ತಜನ್ಮಸು ।
ವಿಪ್ರಾದಿಸ್ಪರ್ಶಕಾರೀ ಚ ಸೋಽಗ್ರದಾನೀ ಭವೇದ್ಧ್ರುವಂ ॥ ೪೫ ॥

ತತೋ ಭವಂತಿ ಮೂಕಾಸ್ತೇ ಬಧಿರಾಶ್ಚ ತ್ರಿಜನ್ಮಸು ।
ಭಾರ್ಯಾಹೀನಾ ವಂಶಹೀನಾ ಬುದ್ಧಿಹೀನಾಸ್ತತಃ ಶುಚಿಃ ॥ ೪೬ ॥

ಮಿತ್ರದ್ರೋಹೀ ಚ ನಕುಲಃ ಕೃತಘ್ನಶ್ಚಾಪಿ ಗಂಡಕಃ ।
ವಿಶ್ವಾಸಘಾತೀ ವ್ಯಾಘ್ರಶ್ಚ ಸಪ್ತಜನ್ಮಸು ಭಾರತೇ ॥ ೪೭ ॥

---

೪೪. ಬಲಗೈಯ್ಯನ್ನು ಮುಟ್ಟಿ ಪ್ರತಿಜ್ಞೆಮಾಡಿದವನು ಏಳು ಜನ್ಮಗಳಲ್ಲಿ ಸರ್ಪವಾಗಿ ಹುಟ್ಟುವನು. ಅನಂತರ ಕೈಯಿಲ್ಲದ ಮನುಷ್ಯನಾಗಿ ಹುಟ್ಟಿ, ನರಳಿ ಪುನಃ ಶುಚಿಯಾಗುವನು.

೪೫. ದೇವಮಂದಿರದಲ್ಲಿ ಪ್ರತಿಜ್ಞೆಮಾಡಿ ಪಾಲಿಸದವನು ದೇವಲನಾಗಿ ಏಳು ಜನ್ಮಗಳೆತ್ತಿ ಪುನಃ ಶುಚಿಯಾಗುವನು. ಬ್ರಾಹ್ಮಣಾದಿಗಳನ್ನು ಮುಟ್ಟಿ ಪ್ರತಿಜ್ಞೆಮಾಡಿದವನು ದಾನ ತೆಗೆದುಕೊಳ್ಳುವುದರಲ್ಲಿ ಮೊದಲಿಗನಾಗುವನು.

೪೬. ಅನಂತರ ಅವರೆಲ್ಲರೂ ಮೂರು ಜನ್ಮಗಳಲ್ಲಿ ಮೂಗರೂ, ಕಿವುಡರೂ ಆಗುವರು. ಅಲ್ಲದೆ ಭಾರ್ಯಾಹೀನರೂ, ವಂಶಹೀನರೂ, ಬುದ್ಧಿಹೀನರೂ ಆಗಿದ್ದು ಅನಂತರ ಶುಚಿಯಾಗುವರು.

೪೭. ಮಿತ್ರದ್ರೋಹಿಯು ಮುಂಗಸಿಯಾಗಿಯೂ, ಉಪಕಾರಸ್ಮರಣೆಯಿಲ್ಲದವನು ಖಡ್ಗಮೃಗವಾಗಿಯೂ, ನಂಬಿಸಿ ದ್ರೋಹಗೊಳಿಸುವವನು ಹುಲಿಯಾಗಿಯೂ, ಭಾರತದಲ್ಲಿ ಏಳು ಜನ್ಮವೆತ್ತುವರು.

ಮಿಥ್ಯಾಸಾಕ್ಷ್ಯಪ್ರದಶ್ಚೈವ ಭಲ್ಲೂಕಃ ಸಪ್ತಜನ್ಮಸು ।
ಪೂರ್ವಾನ್ಸಪ್ತ ಪರಾನ್ಸಪ್ತ ಪುರುಷಾನ್ಹನ್ತಿ ಚಾತ್ಮನಃ ॥ ೪೮ ॥

ನಿತ್ಯಕ್ರಿಯಾವಿಹೀನಶ್ಚ ಜಡತ್ವೇನ ಯುತೋ ದ್ವಿಜಃ ।
ಯಸ್ಯಾನಾಸ್ಥಾ ವೇದವಾಕ್ಯೇ ಮಂದಂ ಹಸತಿ ಸಂತತಂ ॥ ೪೯ ॥

ವ್ರತೋಪವಾಸಹೀನಶ್ಚ ಸದ್ವಾಕ್ಯಪರಿನಿಂದಕಃ ।
ಜಿಹ್ಮೇ ಜಿಹ್ಮೋ ವಸೇತ್ಸೋಽಪಿ ಶತಾಬ್ದಂ ಚ ಹಿಮೋದಕೇ ॥ ೫೦ ॥

ಜಲಜಂತುರ್ಭವೇತ್ಸೋಽಪಿ ಶತಜನ್ಮಕ್ರಮೇಣ ಚ ।
ತತೋ ನಾನಾಪ್ರಕಾರಾ ಚ ಮತ್ಸ್ಯಜಾತಿಸ್ತತಃ ಶುಚಿಃ ॥ ೫೧ ॥

ಯೋ ವಾ ಧನಸ್ಯಾಪಹಾರಂ ದೇವಬ್ರಾಹ್ಮಣಯೋಶ್ಚರೇತ್ ।
ಪಾತಯಿತ್ವಾ ಸ್ವಪುರುಷಾನ್ದಶಪೂರ್ವಾನ್ದಶಾಪರಾನ್ ॥ ೫೨ ॥

---

೪೮. ಸುಳ್ಳುಸಾಕ್ಷಿ ಹೇಳುವವನು ಏಳು ಜನ್ಮಗಳಲ್ಲಿ ಕರಡಿಯಾಗಿ ಹುಟ್ಟುವುದಲ್ಲದೆ ತನ್ನ ಹಿಂದೆ ಮತ್ತು ಮುಂದೆ ಹುಟ್ಟಿದ ಏಳೇಳು ತಲೆಯವರನ್ನು ನಾಶಗೊಳಿಸುವನು.

೪೯–೫೦. ನಿತ್ಯಕರ್ಮವನ್ನು ಬಿಟ್ಟು ಜಡವಾಗಿರುವ ಬ್ರಾಹ್ಮಣನೂ, ವೇದ ವಾಕ್ಯಗಳಲ್ಲಿ ನಂಬಿಕೆಯನ್ನಿಟ್ಟುಕೊಳ್ಳದೆ, ಯಾವಾಗಲೂ ಅಪಹಾಸ್ಯ ಮಾಡುತ್ತಿರುವವನೂ, ವ್ರತೋಪವಾಸಾದಿಗಳನ್ನು ಬಿಟ್ಟು ಒಳ್ಳೆಯ ಉಪದೇಶ ವಾಕ್ಯಗಳನ್ನು ನಿಂದಿಸುವವನೂ, ನೂರು ವರ್ಷಗಳ ಕಾಲ ಹಿಮಜಲಪೂರ್ಣವಾದ ಜಿಹ್ಮವೆಂಬ ನರಕದಲ್ಲಿ ವಾಸಿಸುವನು.

೫೧. ಅನಂತರ ಕ್ರಮವಾಗಿ ಅವನು ನೂರುಜನ್ಮ ಕಳೆಯುವವರೆಗೆ ಜಲ ಜಂತುವಾಗಿ ಹುಟ್ಟುವನು. ಅಲ್ಲದೆ ವಿಧವಿಧವಾದ ಮೀನಿನ ಜಾತಿಯಲ್ಲಿ ಹುಟ್ಟಿ ನಂತರ ಶುಚಿಯಾಗುವನು.

೫೨–೫೩. ದೇವಬ್ರಾಹ್ಮಣರ ದ್ರವ್ಯಾಪಹಾರಮಾಡುವವನು ತನ್ನ ಪೂರ್ವಜರಲ್ಲಿ ಹತ್ತು ಜನಗಳನ್ನೂ ಅವರಜರಲ್ಲಿ ಹತ್ತು ಜನಗಳನ್ನೂ ನರಕಕ್ಕೆ ಕೆಡವಿ ತಾನು

ಸ್ವಯಂ ಯಾತಿ ಚ ಧೂಮಾನ್ಧಂ ಧೂಮಧ್ವಾಂತಸಮನ್ವಿತಂ ।
ಧೂಮಕ್ಲಿಷ್ಟೋ ಧೂಮಭೋಜೀ ವಸೇತ್ತತ್ರ ಚತುರ್ಯುಗಂ　　|| ೫೩ ||

ತತೋ ಮೂಷಕಜಾತಿಶ್ಚ ಶತಜನ್ಮಾನಿ ಭಾರತೇ ।
ತತೋ ನಾನಾವಿಧಾಃ ಪಕ್ಷಿಜಾತಯಃ ಕೃಮಿಜಾತಯಃ　　|| ೫೪ ||

ತತೋ ನಾನಾವಿಧಾ ವೃಕ್ಷಜಾತಯಶ್ಚ ತತೋ ನರಃ ।
ಭಾರ್ಯಾಹೀನೋ ವಂಶಹೀನಃ ಶಬರೋ ವ್ಯಾಧಿಸಂಯುತಃ　　|| ೫೫ ||

ತತೋ ಭವೇತ್ಸ್ವರ್ಣಕಾರಃ ಸುವರ್ಣಸ್ಯ ವಣಿಕ್ತಥಾ ।
ತತೋ ಯವನಸೇವೀ ಚ ಬ್ರಾಹ್ಮಣೋ ಗಣಕಸ್ತತಃ　　|| ೫೬ ||

ವಿಪ್ರೋ ದೈವಜ್ಞೋಪಜೀವೀ ವೈದ್ಯಜೀವೀ ಚಿಕಿತ್ಸಕಃ ।
ವ್ಯಾಪಾರೀ ಲೋಹಲಾಕ್ಷಾದೇರಸಾದೇರ್ವಿಕ್ರಯೀ ಚ ಯಃ　　|| ೫೭ ||

ಕೂಡ, ಹೊಗೆಯಿಂದ ಕತ್ತಲಾಗಿರುವ ಧೂಮಾಂಧವೆಂಬ ನರಕಕ್ಕೆ ಹೋಗಿ ಹೊಗೆಯನ್ನೇ ಸೇವಿಸಿಕೊಂಡು, ಹೊಗೆಯೊಳಗೆ ಕಷ್ಟಪಡುತ್ತಾ ನಾಲ್ಕು ಯುಗಗಳ ಕಾಲ ವಾಸಿಸುವನು.

೫೪. ಅನಂತರ ಭಾರತದಲ್ಲಿ ನೂರು ಜನ್ಮಗಳು ಇಲಿಯಾಗಿ ಹುಟ್ಟುವುದಲ್ಲದೆ ನಾನಾವಿಧ ಪಕ್ಷಿಜಾತಿಗಳಲ್ಲೂ, ಕ್ರಿಮಿಜಾತಿಗಳಲ್ಲೂ ಹುಟ್ಟುವನು.

೫೫. ಮುಂದೆ ಅನೇಕ ವಿಧ ವೃಕ್ಷಜಾತಿಯಲ್ಲಿ ಹುಟ್ಟಿ ಅನಂತರ ಮನುಷ್ಯನಾಗಿ ಹುಟ್ಟುವುದಲ್ಲದೆ, ಪತ್ನಿಹೀನನೂ, ವಂಶಹೀನನೂ ಆಗಿ ರೋಗಗ್ರಸ್ತನಾದ ಬೇಡನಾಗುವನು.

೫೬. ಅನಂತರ ಅಕ್ಕಸಾಲೆಯೂ, ಸುವರ್ಣವ್ಯಾಪಾರಿಯೂ, ಯವನಾಧಿಕಾರಿಯನ್ನು ಸೇವಿಸುವವನೂ ಆಗಿ ಮತ್ತೆ ಬ್ರಾಹ್ಮಣನಾಗಿ ಹುಟ್ಟಿದರೂ (ಜ್ಯೌತಿಷಿಕ) ಗಣಕನಾಗುವನು.

೫೭-೫೮. ಜ್ಯೌತಿಷ್ಯದಿಂದ ಜೀವಿಸುವ ಬ್ರಾಹ್ಮಣನೂ, ವೈದ್ಯಚಿಕಿತ್ಸೆಮಾಡಿ ಜೀವಿಸುವವನೂ, ಲೋಹ ಮತ್ತು ಅರಗು ಮುಂತಾದುವುಗಳನ್ನು ವ್ಯಾಪಾರ ಮಾಡುವವನೂ, ರಸವಸ್ತುಗಳನ್ನು ಮಾರುವವನೂ, ಸರ್ಪಗಳಿಂದ ಪರಿವೃತವಾದ

ಸ ಯಾತಿ ನಾಗವೇಷ್ಟಂ ಚ ನಾಗೈರ್ವೇಷ್ಟಿತೆ ಏವ ಚ ।
ವಸೇತ್ಸ್ವಲೋಮಮಾನಾಬ್ದಂ ತತ್ರ ವೈ ನಾಗದಂಶಿತಃ ॥ ೫೮ ॥

ತತೋ ಭವೇತ್ಸ ಗಣಕೋ ವೈದ್ಯೋ ವೈ ಸಪ್ತಜನ್ಮಸು ।
ಗೋಪಶ್ಚ ಕರ್ಮಕಾರಶ್ಚ ಶಂಖಕಾರಸ್ತತಃ ಶುಚಿಃ ॥ ೫೯ ॥

ಪ್ರಸಿದ್ಧಾನಿ ಚ ಕುಂಡಾನಿ ಕಥಿತಾನಿ ಪತಿವ್ರತೇ ।
ಅನ್ಯಾನಿ ಚಾಪ್ರಸಿದ್ಧಾನಿ ತತ್ರ ಕ್ಷುದ್ರಾಣಿ ಸಂತಿ ವೈ ॥ ೬೦ ॥

ಸಂತಿ ಪಾತಕಿನಸ್ತೇಷು ಸ್ವಕರ್ಮಫಲಭೋಗಿನಃ ।
ಭ್ರಮಂತಿ ತಾವತ್ಸಂಸಾರೇ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೬೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಸಾವಿತ್ರ್ಯುಪಾಖ್ಯಾನೇ ಕರ್ಮ
ವಿಪಾಕೇ ಪಾಪಿನಾಂ ಕುಂಡನಿರ್ಣಯೋ ನಾಮ
ಏಕತ್ರಿಂಶತ್ತಮೋಽಧ್ಯಾಯಃ

ನಾಗವೇಷ್ಟವೆಂಬ ನರಕಕ್ಕೆ ಹೋಗಿ, ತನ್ನ ರೋಮಪ್ರಮಾಣದಷ್ಟು ವರ್ಷ ಹಾವುಗಳಿಂದ ಕಚ್ಚಿಸಿಕೊಂಡು ನರಳುವನು.

೫೯. ಅನಂತರ ಅವನು ಏಳು ಜನ್ಮಗಳಲ್ಲಿ ವೈದ್ಯನೂ, ಜೋತಿಷ್ಕನೂ ಆಗುವುದಲ್ಲದೆ ಗೋಪಾಲನೂ, ಕಮ್ಮಾರನೂ, ಬಳೆಗಾರನೂ ಆಗಿ ಹುಟ್ಟಿದನಂತರ ಶುಚಿಯಾಗುವನು.

೬೦. ಎಲೌ ಪತಿವ್ರತೆಯೇ, ಪ್ರಸಿದ್ಧವಾದ ನರಕಕುಂಡಗಳ ಹೆಸರನ್ನು ವಿವರಿಸಿದುದಾಯಿತು. ಅಪ್ರಸಿದ್ಧವೂ, ಕ್ಷುದ್ರವೂ ಆದ ಇತರ ನರಕಗಳು ಎಷ್ಟೋ ಇವೆ.

೬೧. ಪಾಪಿಗಳು ಅಲ್ಲಿ ತಮ್ಮ ತಮ್ಮ ಕರ್ಮಫಲವನ್ನು ಭುಜಿಸಿಕೊಂಡಿರುವರು. ಮತ್ತು ಜನನ ಮರಣಾತ್ಮಕವಾದ ಸಂಸಾರದಲ್ಲಿ ಭ್ರಮಣಮಾಡುವರು. ನಿನಗೆ ಇನ್ನೇನನ್ನು ಕೇಳಬೇಕೆಂಬ ಕುತೂಹಲವಿದೆ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಪಾಪಿಗಳ
ಪಾಪಾನುಗುಣವಾಗಿ ಪ್ರಾಪ್ತವಾಗುವ ನರಕಕುಂಡಗಳನ್ನು
ವಿವರಿಸುವ ಮೂವತ್ತೊಂದನೆಯ ಅಧ್ಯಾಯವು
ಮುಗಿದುದು.

ಮೂವತ್ತೊಂದನೆಯ ಅಧ್ಯಾಯದ ಸಾರಾಂಶವು

ಪ್ರತಿಫಲಾಪೇಕ್ಷೆಯಿಲ್ಲದೆ ಕರ್ತವ್ಯಬುದ್ಧಿಯಿಂದ ಪರಮಾತ್ಮನ ಸೇವೆಮಾಡುವವನು ಕರ್ಮಬಂಧನದಿಂದ ಮುಕ್ತನಾಗುವನು. ಫಲಾಪೇಕ್ಷೆಯಿಂದ ಆಚರಿಸಿದ ಪುಣ್ಯಕರ್ಮವು ಸ್ವರ್ಗಕ್ಕೂ, ಪಾಪಕರ್ಮವು ನರಕಕ್ಕೂ ಕಾರಣವಾಗುವುದು.

ಕುಲಟೆ ಮುಂತಾದ ದುಷ್ಟಸ್ತ್ರೀಯರೊಡಗೂಡುವ ಬ್ರಾಹ್ಮಣನು ಅವಟೋದವೆಂಬ ನರಕದಲ್ಲಿ ತನ್ನ ಪಾಪಕ್ಕೆ ಅನುಗುಣವಾಗಿ ಕಷ್ಟವನ್ನು ಅನುಭವಿಸಿ, ತಿತ್ತಿರಿ ಮುಂತಾದ ಪಕ್ಷಿಜಾತಿಯಲ್ಲಿ ಹುಟ್ಟಿ ನರಳುವನು. ಈರೀತಿ ಪಾಪಿಗಳೆಲ್ಲರೂ ತಮ್ಮ ತಮ್ಮ ಪಾಪಕ್ಕೆ ಅನುಗುಣವಾದ ನರಕಕುಂಡದಲ್ಲಿ ಬಿದ್ದು ತೊಳಲುವರು. 'ನಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ' ಎಂಬ ಸ್ಮೃತಿವಾಕ್ಯದಂತೆ ಕರ್ಮಫಲವನ್ನು ಭೋಗಿಸಿದ ಹೊರತೂ ಯಾರ ಕರ್ಮವೂ ಸವೆಯುವಂತಿಲ್ಲ. ಆದುದರಿಂದ 'ಅಕೃತ್ವಾ ಪರಸಂತಾಪಂ ಅಗತ್ವಾಖಲನಮ್ರತಾಂ । ಅನುತ್ಸೃಜ್ಯ ಸತಾಂ ವರ್ತ್ಮ ಯತ್ಸ್ವಲ್ಪಮಪಿ ತದ್ಬಹು' ಎಂಬ ನೀತಿವಾಕ್ಯದಂತೆ ಎಲ್ಲರೂ ಸ್ವಧರ್ಮನಿರತರಾಗಿ ನಿಷ್ಕಾಮಕರ್ಮವನ್ನಾಚರಿಸುವುದು ಒಳ್ಳೆಯದು.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ದ್ವಾತ್ರಿಂಶತ್ತಮೋಽಧ್ಯಾಯಃ ॥

॥ ಸಾವಿತ್ರ್ಯುವಾಚ ॥

ಧರ್ಮರಾಜ ಮಹಾಭಾಗ ವೇದವೇದಾಂಗಪಾರಗ ।
ನಾನಾಪುರಾಣೇತಿಹಾಸಪಾಂಚರಾತ್ರಪ್ರದರ್ಶಕ ॥ ೧ ॥

ಸರ್ವೇಷು ಸಾರಭೂತಂ ಯತ್ಸರ್ವೇಷ್ಟಂ ಸರ್ವಸಮ್ಮತಂ ।
ಕರ್ಮಚ್ಛೇದೇ ಬೀಜರೂಪಂ ಪ್ರಶಂಸ್ಯಂ ಸುಖದಂ ನೃಣಾಂ ॥ ೨ ॥

ಯಶಃಪ್ರದಂ ಧರ್ಮದಂ ಚ ಸರ್ವಮಂಗಲಮಂಗಲಂ ।
ಯೇನ ಯಾಮೀಂ ನ ತೇ ಯಾಂತಿ ಯಾತನಾಂ ಭವದುಃಖದಾಂ ॥ ೩ ॥

ಮೂವತ್ತೆರಡನೆಯ ಅಧ್ಯಾಯವು

೧–೩. ಸಾವಿತ್ರೀ :—ವೇದವೇದಾಂಗಪಾರಂಗತನೂ, ಅನೇಕ ಪುರಾಣ, ಇತಿಹಾಸ, ಪಾಂಚರಾತ್ರ ಮುಂತಾದವುಗಳಲ್ಲಿ ಪಂಡಿತನೂ, ಮಹಾಭಾಗನೂ ಆದ ಎಲೈ ಧರ್ಮರಾಜನೇ, ಸಮಸ್ತಕ್ಕೂ ಸಾರಭೂತವೂ, ಸಮಸ್ತರಮನೋಭಿಲಷಿತವೂ, ಕರ್ಮಬಂಧನವನ್ನು ಕತ್ತರಿಸಲು ಮೂಲಕಾರಣವೂ, ಹೊಗಳಲು ಯೋಗ್ಯವೂ, ಮನುಷ್ಯರಿಗೆ ಸುಖಪ್ರದವೂ, ಕೀರ್ತಿದಾಯಕವೂ, ಧರ್ಮಕಾರಣವೂ, ಮಂಗಳ ದಾಯಕವೂ ಆದ ಯಾವ ಪುಣ್ಯಕರ್ಮವನ್ನು ಮಾಡಿದರೆ ಯಮಲೋಕಸಂಬಂಧ ವಾದ ಯಾತನೆಯನ್ನೂ, ಸಂಸಾರದುಃಖವನ್ನೂ ಮನುಜರು ಅನುಭವಿಸುವುದಿಲ್ಲ?

ಕುಂಡಾನಿ ಚ ನ ಪಶ್ಯಂತಿ ತತ್ರ ನೈವ ಪತಂತಿ ಚ ।
ನ ಭವೇದ್ಯೇನ ಜನ್ಮಾದಿ ತತ್ಕರ್ಮ ವದ ಸುವ್ರತ ॥ ೪ ॥

ಕಿಮಾಕಾರಾಣಿ ಕುಂಡಾನಿ ಕಾನಿ ತೇಷಾಂ ಮತಾನಿ ಚ ।
ಕೇನ ರೂಪೇಣ ತತ್ರೈವ ಸದಾ ತಿಷ್ಠಂತಿ ಪಾಪಿನಃ ॥ ೫ ॥

ಸ್ವದೇಹೇ ಭಸ್ಮಸಾದ್ಭೂತೇ ಯಾನ್ತಿ ಲೋಕಾಂತರಂ ನರಾಃ ।
ಕೇನ ದೇಹೇನ ವಾ ಭೋಗಂ ಭುಂಜತೇ ವಾ ಶುಭಾಶುಭಂ ॥ ೬ ॥

ಸುಚಿರಂ ಕ್ಲೇಶಭೋಗೇನ ಕಥಂ ದೇಹೋ ನ ನಶ್ಯತಿ ।
ದೇಹೋ ವಾ ಕಿಂ ವಿಧೋ ಬ್ರಹ್ಮನ್ತನ್ಮೇ ವ್ಯಾಖ್ಯಾತುಮರ್ಹಸಿ ॥ ೭ ॥

---

೪. ಅಲ್ಲದೆ ನರಕಕುಂಡಗಳನ್ನು ನೋಡದಂತೆಯೂ, ಅಲ್ಲಿ ಬೀಳದಂತೆಯೂ, ಜನ್ಮಾದಿಗಳುಂಟಾಗದಂತೆಯೂ ಇರುವ ಸುಕರ್ಮವಾವುದೆಂಬುದನ್ನು ಸುವ್ರತನಾದ ನೀನು ನನಗೆ ಹೇಳು.

೫. ನರಕಕುಂಡಗಳು ಯಾವ ಆಕಾರದಲ್ಲಿವೆ? ಅವುಗಳ ಸ್ವರೂಪವೇನು? ಪಾಪಿಗಳು ಅಲ್ಲಿ ಯಾವಾಗಲೂ ಯಾವ ರೂಪದಿಂದ ನೆಲೆಸಿರುವರು?

೬. ಪಾಂಚಭೌತಿಕಶರೀರವು ಬೂದಿಯಾದನಂತರ ಮನುಜರು ಲೋಕಾಂತರವನ್ನೈದುವುದರಿಂದ ಶುಭಾಶುಭಕರ್ಮಗಳ ಫಲವನ್ನು ಯಾವ ಶರೀರದಿಂದ ಭೋಗಿಸುವರು?

೭. ಬಹುಕಾಲ ಕಷ್ಟಗಳನ್ನನುಭವಿಸಿದರೂ ಆ ಶರೀರವು ನಾಶವಾಗದಿರುವುದೆಂತು? ಆ ಶರೀರವು ಯಾವ ಪ್ರಕಾರವಾದುದೆಂಬುದನ್ನು ದಯವಿಟ್ಟು ನನಗೆ ವಿವರಿಸು.

॥ ನಾರಾಯಣ ಉವಾಚ ॥

ಸಾವಿತ್ರೀ ವಚನಂ ಶ್ರುತ್ವಾ ಧರ್ಮರಾಜೋ ಹರಿಂ ಸ್ಮರನ್ ।
ಕಥಾಂ ಕಥಿತುಮಾರೇಭೇ ಗುರುಂ ನತ್ವಾ ಚ ನಾರದ ॥ ೮ ॥

॥ ಯಮ ಉವಾಚ ॥

ವತ್ಸೇ ಚತುರ್ಷುವೇದೇಷು ಧರ್ಮೋ ವೈ ಸಂಹಿತಾಸು ಚ ।
ಪುರಾಣೇಷ್ವಿತಿಹಾಸೇಷು ಪಾಂಚರಾತ್ರಾದಿಕೇಷು ಚ ॥ ೯ ॥

ಅನ್ಯೇಷು ಸರ್ವಶಾಸ್ತ್ರೇಷು ವೇದಾಂಗೇಷು ಚ ಸುವ್ರತೇ ।
ಸರ್ವೇಷ್ಟಂ ಸಾರಭೂತಂ ಚ ಮಂಗಲಂ ಕೃಷ್ಣ ಸೇವನಂ ॥ ೧೦ ॥

ಜನ್ಮಮೃತ್ಯುಜರಾರೋಗ ಶೋಕಸಂತಾಪತಾರಣಂ ।
ಸರ್ವಮಂಗಲರೂಪಂ ಚ ಪರಮಾನಂದಕಾರಣಂ ॥ ೧೧ ॥

ಕಾರಣಂ ಸರ್ವಸಿದ್ಧೀನಾಂ ನರಕಾರ್ಣವತಾರಣಂ ।
ಭಕ್ತಿವೃಕ್ಷಾಙ್ಕುರಕರಂ ಕರ್ಮವೃಕ್ಷನಿಕೃಂತನಂ ॥ ೧೨ ॥

---

೮. ನಾರಾಯಣ :—ಎಲೈ ನಾರದನೇ, ಧರ್ಮರಾಜನು ಸಾವಿತ್ರಿಯ ಮಾತನ್ನು ಕೇಳಿ ಶ್ರೀಹರಿಯನ್ನು ಸ್ಮರಿಸಿಕೊಂಡು ಗುರುವಿಗೆ ವಂದಿಸಿ ನರಕದ ಕಥೆಯನ್ನು ಹೇಳಲಾರಂಭಿಸಿದನು.

೯-೧೦. ಯಮ :—ಎಲೌ ವತ್ಸೆಯಾದ ಸಾವಿತ್ರಿಯೇ, ಚತುರ್ವೇದಗಳಲ್ಲೂ, ಸಕಲ ಸಂಹಿತೆಗಳಲ್ಲೂ, ಪುರಾಣೇತಿಹಾಸಗಳಲ್ಲೂ, ಪಾಂಚರಾತ್ರಾದಿ ಆಗಮಗಳಲ್ಲೂ, ವೇದಾಂಗಭೂತವಾದ ಇತರ ಶಾಸ್ತ್ರಗಳಲ್ಲೂ ಶ್ರೀಕೃಷ್ಣಪರಮಾತ್ಮನ ಸೇವೆಯೇ ಧರ್ಮವೂ, ಸಕಲಾಭೀಷ್ಟದವೂ, ಸಾರಭೂತವೂ ಆಹುದೆಂದು ಹೇಳಿದೆ.

೧೧-೧೩. ಎಲೌ ಶುಭಕರಳೇ ಜನ್ಮಜರಾಮರಣಗಳನ್ನೂ ಶೋಕಸಂತಾಪಗಳನ್ನೂ ಪರಿಹರಿಸಿ ಸರ್ವಮಂಗಳವನ್ನೂ ಪರಮಾನಂದವನ್ನೂ ಉಂಟುಮಾಡಿಕೊಡುವ ಮತ್ತು ಸಕಲಾಭೀಷ್ಟಸಿದ್ಧಿಗಳನ್ನುಂಟುಮಾಡಿ ನರಕವೆಂಬ ಸಮುದ್ರದಿಂದ ದಾಟಿಸುವ ಶ್ರೀ ಕೃಷ್ಣಪರಮಾತ್ಮನ ಸೇವೆಯು ಭಕ್ತಿಯೆಂಬ ಮರಕ್ಕೆ ಅಂಕುರ

ಗೋಲೋಕಮಾರ್ಗಸೋಪಾನಮವಿನಾಶಿಪದಪ್ರದಂ ।
ಸಾಲೋಕ್ಯಸಾರ್ಷ್ಟಿ ಸಾರೂಪ್ಯ ಸಾಮೀಪ್ಯಾದಿಪ್ರದಂ ಶುಭೇ || ೧೩ ||

ಕುಂಡಾನಿ ಯಮದೂತಂ ಚ ಯಮಂ ಚ ಯಮಕಿಂಕರಾನ್ ।
ಸ್ವಪ್ನೇಽಪಿ ನ ಹಿ ಪಶ್ಯಂತಿ ಸತಿ ಶ್ರೀಕೃಷ್ಣಕಿಂಕರಾಃ || ೧೪ ||

ಹರಿವ್ರತಂ ಯೇ ಕುರ್ವಂತಿ ಗೃಹಿಣಃ ಕರ್ಮಭೋಗಿನಃ ।
ಯೇ ಸ್ನಾಂತಿ ಹರಿತೀರ್ಥೇ ಚ ನಾಶ್ನಂತಿ ಹರಿವಾಸರೇ || ೧೫ ||

ಪ್ರಣಮಂತಿ ಹರಿಂ ನಿತ್ಯಂ ಹರ್ಯರ್ಚಾಂ ಪೂಜಯಂತಿ ಚ ।
ನ ಯಾಂತಿ ತೇ ಚ ಘೋರಾಂ ಚ ಮಮ ಸಂಯಮನೀಂ ಪುರೀಂ || ೧೬ ||

ತ್ರಿಸಂಧ್ಯಪೂತಾ ವಿಪ್ರಾಶ್ಚ ಶುದ್ಧಾಚಾರಸಮನ್ವಿತಾಃ ।
ಸ್ವಧರ್ಮನಿರತಾಃ ಶಾಂತಾ ನ ಯಾಂತಿ ಯಮಮಂದಿರಂ || ೧೭ ||

ಪ್ರದವೂ, ಕರ್ಮವೆಂಬ ವೃಕ್ಷಕ್ಕೆ ಕುಠಾರ ಸದೃಶವೂ ಆಗಿ, ಗೋಲೋಕದ ಮಾರ್ಗಕ್ಕೆ ಸೋಪಾನರೂಪವಾಗಿ ಶಾಶ್ವತ ಸ್ಥಾನವನ್ನು ಕೊಡುವ ಸಾಲೋಕ್ಯ, ಸಾರ್ಷ್ಟಿ, ಸಾರೂಪ್ಯ, ಸಾಮೀಪ್ಯಾದಿ ಮುಕ್ತಿಯನ್ನು ಕೊಡುವುದರಿಂದ ಆ ಸೇವೆಯನ್ನು ಬಿಟ್ಟು ಭಕ್ತರಿಗೆ ಬೇರಾವುದೂ ಮುಕ್ತಿಸಾಧನವಿಲ್ಲ.

೧೪. ಎಲೌ ಪತಿವ್ರತೆಯೇ ಶ್ರೀ ಕೃಷ್ಣನ ಕಿಂಕರರು ನರಕಕುಂಡಗಳನ್ನೂ ಯಮದೂತರನ್ನೂ, ಯಮನನ್ನೂ, ಯಮ ಕಿಂಕರರನ್ನೂ, ಸ್ವಪ್ನದಲ್ಲಿಯೂ ಕೂಡ ನೋಡುವ ಸಂದರ್ಭ ಒದಗುವುದಿಲ್ಲ.

೧೫-೧೬. ಕರ್ಮಫಲಭೋಗಿಗಳಾದ ಸಂಸಾರಿಗಳು ಹರಿವ್ರತವನ್ನಾಚರಿಸುತ್ತ, ಪುಣ್ಯತೀರ್ಥಗಳಲ್ಲಿ ಸ್ನಾನಮಾಡುತ್ತ, ಹರಿವಾಸರದಲ್ಲಿ ಊಟಮಾಡದೆ, ನಿತ್ಯವೂ ಶ್ರೀ ಹರಿಯನ್ನು ಭಕ್ತಿಯಿಂದ ಪೂಜಿಸಿ ನಮಿಸುತ್ತಿದ್ದರೆ ಅವರೆಲ್ಲರೂ ಭಯಂಕರವಾದ ನನ್ನ ಸಂಯಮಿನೀ ಪಟ್ಟಣಕ್ಕೆ ಖಂಡಿತ ಬರುವುದಿಲ್ಲ.

೧೭. ತ್ರಿಕಾಲ ಸಂಧ್ಯಾಚರಣೆಯಿಂದ ಶುದ್ಧರೂ, ಶುದ್ಧಾಚಾರಯುತರೂ, ಸ್ವಧರ್ಮಸಕ್ತರೂ, ಶಾಂತರೂ ಆದ ಬ್ರಾಹ್ಮಣರು ಯಮನಗರಿಗೆ ಬರುವುದಿಲ್ಲ.

ತೇ ಸ್ವರ್ಗಭೋಗಿನೋಽನ್ಯೇ ಚ ಶುದ್ಧಾ ದೇವಾನ್ಯಕಿಂಕರಾಃ ।
ಯಾಂತ್ಯಾಯಾಂತಿ ಚ ಮರ್ತ್ಯಂ ಚ ಸ್ವರ್ಗಂ ಚ ನ ಹಿ ನಿರ್ವೃತಾಃ ।
ನಿವೃತ್ತಿಂ ನ ಹಿ ಲಿಪ್ಸಂತಿ ಕೃಷ್ಣಸೇವಾಂ ವಿನಾ ನರಾಃ ॥ ೧೮ ॥

ಸ್ವಧರ್ಮನಿರತಾಶ್ಚಾಪಿ ಸ್ವಧರ್ಮವಿರತಾಸ್ತಥಾ ।
ಗಚ್ಛಂತೋ ಮರ್ತ್ಯಲೋಕಂ ಚ ದುರ್ಧರ್ಷಾ ಯಮಕಿಂಕರಾಃ ॥ ೧೯ ॥

ಭೀತಾಃ ಕೃಷ್ಣೋಪಾಸಕಾಚ್ಚ ವೈನತೇಯಾ ದಿವೋರಗಾಃ ।
ಸ್ವದೂತಂ ಪಾಶಹಸ್ತಂ ಚ ಗಚ್ಛಂತಂ ತಂ ವದಾಮ್ಯಹಂ ॥ ೨೦ ॥

ಯಾಸ್ಯಸೀತಿ ಚ ಸರ್ವತ್ರ ಹರಿಭಕ್ತಾಶ್ರಮಂ ವಿನಾ ।
ಕೃಷ್ಣಮಂತ್ರೋಪಾಸಕಾನಾಂ ನಾಮಾನಿ ಚ ನಿಕೃಂತನಂ ॥ ೨೧ ॥

ಕರೋತಿ ನಖರಾಂಜಲ್ಯಾ ಚಿತ್ರಗುಪ್ತಶ್ಚ ಭೀತವತ್ ।
ಮಧುಪರ್ಕಾದಿಕಂ ಬ್ರಹ್ಮಾ ತೇಷಾಂ ಚ ಕುರುತೇ ಪುನಃ ॥ ೨೨ ॥

---

೧೮. ಅಂಥವರೂ ಮತ್ತು ಇತರ ದೇವತಾಭಕ್ತರೂ ಕೂಡ ಸ್ವರ್ಗಭೋಗಿಗಳಾಗಿ, ಸ್ವರ್ಗ ಮರ್ತ್ಯಗಳಿಗೆ ಹೋಗಿಬರುವುದರಲ್ಲಿ ತೊಡಗಿರುವರೇ ಹೊರತು, ಶ್ರೀ ಕೃಷ್ಣಪರಮಾತ್ಮನ ಸೇವೆಗೈಯ್ಯದೆ ಅವರಿಗೆ ಎಂದಿಗೂ ಮುಕ್ತಿಯು ಲಭಿಸುವುದಿಲ್ಲ

೧೯-೨೧. ಸ್ವಧರ್ಮಾಚರಣೆಯಲ್ಲಿ ಆಸಕ್ತರಿಗೂ, ಅನಾಸಕ್ತರಿಗೂ, ಶ್ರೀ ಕೃಷ್ಣ ಸೇವೆಯೇ ಮುಕ್ತಿಯ ಮಾರ್ಗ. ಭೂಲೋಕಕ್ಕೆ ಹೋಗುವ ಅಪ್ರತಿಹತರಾದ ಯಮಕಿಂಕರರೆಲ್ಲರೂ. ಕೃಷ್ಣಪರಮಾತ್ಮನ ಉಪಾಸಕರಿಗೆ ಹೆದರಿ ಗರುಡನನ್ನು ನೋಡಿದ ಹಾವು ಓಡುವಂತೆ ಓಡುವರು. ಪಾಶಹಸ್ತನಾಗಿ ಹೊರಡುವ ನನ್ನ ದೂತರನ್ನು ಕುರಿತು 'ಹರಿಭಕ್ತರ ಆಶ್ರಮವನ್ನು ಬಿಟ್ಟು ಉಳಿದಕಡೆಗೆ ಮಾತ್ರ ಹೋಗಿರಿ. ಶ್ರೀ ಕೃಷ್ಣಮಂತ್ರೋಪಾಸನೆ ಮಾಡುವವರ ದಿವ್ಯ ನಾಮಗಳೇ ನಿಮ್ಮನ್ನು ಕತ್ತರಿಸಲು ಸಮರ್ಥವಾಗಿರುವುವು' ಎಂದು ನಾನು ಹೇಳುವೆನು.

೨೨. ಚಿತ್ರಗುಪ್ತನೂ ಕೂಡ ಅವರನ್ನು ನೋಡಿ ಹೆದರಿ ಕೈಗಳನ್ನು ಜೋಡಿಸಿ ಅಂಜಲಿಬದ್ಧನಾಗುವನು ಆ ಹರಿಭಕ್ತರನ್ನು ಬ್ರಹ್ಮನು ಮಧುಪರ್ಕಾದಿಗಳಿಂದ ಸತ್ಕರಿಸುವನು.

ವಿಲಂಘ್ಯ ಬ್ರಹ್ಮಲೋಕಂ ಚ ಗೋಲೋಕೇ ಗಚ್ಛತಾಂ ಸತಾಂ ।
ದುರಿತಾನಿ ಚ ನಶ್ಯಂತಿ ತೇಷಾಂ ಸಂಸ್ಪರ್ಶಮಾತ್ರತಃ ॥ ೨೩ ॥

ಯಥಾ ಸುಪ್ರಜ್ವಲದ್ವಹ್ನೌ ಕಾಷ್ಠಾನಿ ಚ ತೃಣಾನಿ ಚ ।
ಪ್ರಾಪ್ನೋತಿ ಮೋಹಃ ಸಂಮೋಹಂ ತಾಂಶ್ಚ ದೃಷ್ಟ್ವಾತಿಭೀತವತ್ ॥ ೨೪ ॥

ಕಾಮಶ್ಚ ಕಾಮಿನೋ ಯಾತಿ ಲೋಭಕ್ರೋಧೌ ತತಃ ಸತಿ ।
ಮೃತ್ಯುಃ ಪಲಾಯತೇ ರೋಗೋ ಜರಾ ಶೋಕೋ ಭಯಂ ತಥಾ ॥ ೨೫ ॥

ಕಾಲಃ ಶುಭಾಶುಭಂ ಕರ್ಮ ಹರ್ಷೋ ಭೋಗಸ್ತಥೈವ ಚ ।
ಯೇ ಯೇ ನ ಯಾಂತಿ ಯಾಮೀಂ ಚ ಕಥಿತಾಸ್ತೇ ಮಯಾ ಸತಿ ॥ ೨೬ ॥

ಶೃಣು ದೇಹಸ್ಯ ವಿವೃತಿಂ ಕಥಯಾಮಿ ಯಥಾಗಮಂ ।
ಪೃಥಿವೀ ವಾಯುರಾಕಾಶಂ ತೇಜಸ್ತೋಯಮಿತಿ ಸ್ಫುಟಂ ॥ ೨೭ ॥

---

೨೩. ಬ್ರಹ್ಮಲೋಕವನ್ನು ದಾಟಿ ಗೋಲೋಕಕ್ಕೆ ತೆರಳುವ ಹರಿಭಕ್ತರ ಸಂಸ್ಪರ್ಶಮಾತ್ರದಿಂದ ಪಾಪಗಳೆಲ್ಲವೂ ಪರಿಹಾರವಾಗುವುವು

೨೪. ಚೆನ್ನಾಗಿ ಉರಿಯುತ್ತಿರುವ ಬೆಂಕಿಯಲ್ಲಿ ಕಾಷ್ಠವೂ, ತೃಣವೂ ಕ್ಷಣ ಕಾಲದಲ್ಲಿ ಭಸ್ಮವಾಗುವಂತೆ ಹರಿಭಕ್ತರನ್ನು ನೋಡಿದ ಕೂಡಲೇ ಅಜ್ಞಾನವು ಮಾಯವಾಗಿ ದಿವ್ಯಜ್ಞಾನವುಂಟಾಗುವುದು.

೨೫. ಎಲೌ ಪತಿವ್ರತೆಯೇ. ಅವರ ಸಂಸರ್ಗದಿಂದ ಕಾಮಿಗಳ ಕಾಮವೂ. ಲೋಭಕ್ರೋಧವೂ ದೂರವಾಗುವುವು. ಜರಾಮರಣಗಳೂ, ರೋಗಶೋಕಗಳೂ ಅವರ ದರ್ಶನ ಮಾತ್ರದಿಂದ ದೂರ ಓಡುವುವು.

೨೬. ಅಂತೆಯೇ ಕಾಲಪುರುಷನೂ, ಶುಭಾಶುಭ ಕರ್ಮಗಳೂ, ಹರ್ಷ ಭೋಗಗಳೂ ದೂರವಾಗುವುವು. ಎಲೌ ಸಾವಿತ್ರಿಯೇ, ಯಮಲೋಕಕ್ಕೆ ಬರದಿರುವವರು ಯಾರು ಎಂಬುದನ್ನು ನಾನು ನಿನಗೆ ತಿಳಿಸಿದೆನು.

೨೭–೨೯. ಈಗ ಶರೀರದ ರಚನಾಕ್ರಮವನ್ನು ಶಾಸ್ತ್ರೋಕ್ತವಾಗಿ ವಿವರಿಸುವೆನು. ಪೃಥಿವೀ, ವಾಯು, ಆಕಾಶ, ತೇಜಸ್ಸು ಮತ್ತು ನೀರು ಎಂಬ ಈ ಪಂಚ

ದೇಹಿನಾಂ ದೇಹಬೀಜಂ ಚ ಸ್ರಷ್ಟುಃ ಸೃಷ್ಟಿವಿಧೌ ಪರಂ ।
ಪೃಥ್ವ್ಯಾದಿಪಂಚಭೂತೈಶ್ಚ ಯೋ ದೇಹೋ ನಿರ್ಮಿತೋ ಭವೇತ್ ॥ ೨೮ ॥

ಸ ಕೃತ್ರಿಮೋ ನಶ್ವರಶ್ಚ ಭಸ್ಮಸಾಚ್ಚ ಭವೇದಿಹ ।
ವೃದ್ಧಾಂಗುಷ್ಠಪ್ರಮಾಣೇನ ಯೋ ಜೀವಃ ಪುರುಷಾಕೃತಿಃ ॥ ೨೯ ॥

ಬಿಭರ್ತಿ ಸೂಕ್ಷ್ಮದೇಹಂ ಚ ತದ್ರೂಪಂ ಭೋಗಹೇತವೇ ।
ಸ ದೇಹೋ ನ ಭವೇದ್ಭಸ್ಮ ಜ್ವಲದಗ್ನೌ ಯಮಾಲಯೇ ॥ ೩೦ ॥

ಜಲೇನ ನಷ್ಟೋ ದೇಹೋ ವಾ ಪ್ರಹಾರೇ ಸುಚಿರಂ ಕೃತೇ ।
ನ ಶಸ್ತ್ರೇ ಚ ನ ಚಾಸ್ತ್ರೇ ಚ ಸುತೀಕ್ಷ್ಣೇ ಕಂಟಕೇ ತಥಾ ॥ ೩೧ ॥

ತಪ್ತದ್ರವೇ ತಪ್ತಲೌಹೇ ತಪ್ತಪಾಷಾಣ ಏವ ಚ ।
ಪ್ರತಪ್ತಪ್ರತಿಮಾಶ್ಲೇಷೇಽಪ್ಯತ್ಯೂರ್ಧ್ವಪತನೇಽಪಿ ಚ ॥ ೩೨ ॥

ತನ್ಮಾತ್ರಗಳು ಬ್ರಹ್ಮನ ಸೃಷ್ಟಿಯಲ್ಲಿ ದೇಹಿಗಳ ದೇಹನಿರ್ಮಾಣಕ್ಕೆ ಬೀಜರೂಪವಾಗುವುವು. ಈ ಪೃಥಿವ್ಯಾದಿ ಪಂಚಮಹಾಭೂತಗಳಿಂದಲೇ ದೇಹವು ನಿರ್ಮಿಸಲ್ಪಡುವುದು.

೨೯. ಆದರೆ ಈ ಶರೀರವು ಕೃತ್ರಿಮವಾದುದರಿಂದ ನಾಶಹೊಂದುವುದಲ್ಲದೆ ಬೂದಿಯೂ ಆಗುವುದು. ಆದರೆ ಆ ದೇಹದೊಳಗೆ ಜೀವನು ಅಂಗುಷ್ಠಮಾತ್ರ ಪ್ರಮಾಣವುಳ್ಳ ಪುರುಷನಾಗಿರುವನು.

೩೦. ಆ ಜೀವನು ಪರಲೋಕದ ಸುಖದುಃಖಗಳ ಭೋಗಕ್ಕಾಗಿ ಸೂಕ್ಷ್ಮ ದೇಹವೊಂದನ್ನು ಧರಿಸುವನು. ಆ ದೇಹವು ಯಮಾಲಯದಲ್ಲಿ ಬೆಂಕಿಯ ಉರಿಯ ಮಧ್ಯದಲ್ಲಿ ಸಿಲುಕಿದರೂ ಭಸ್ಮವಾಗುವುದಿಲ್ಲ.

೩೧–೩೩. ಆ ಸೂಕ್ಷ್ಮ ಶರೀರವು ನೀರಿನಿಂದ ನಾಶಹೊಂದುವುದಿಲ್ಲ. ಏಟುಗಳಿಗೆ ಸೋಲುವುದಿಲ್ಲ ಶಸ್ತ್ರಾಸ್ತ್ರಗಳಿಂದಾಗಲೀ. ತೀಕ್ಷ್ಣವಾದ ಮುಳ್ಳುಗಳಿಂದಾಗಲಿ ಚೆನ್ನಾಗಿ ಕಾದ ದ್ರವ ಮತ್ತು ಲೋಹಗಳಿಂದಾಗಲೀ, ಕಾದ ಕಲ್ಲಿನಿಂದಾಗಲೀ, ನಾಶ ಹೊಂದುವುದಿಲ್ಲ, ಕೇವಲ ಸಂತಾಪವನ್ನು ಮಾತ್ರ ಅನುಭವಿಸುತ್ತಿರುವುದು. ಪಾಂಚ

ನ ಚ ದಗ್ಧೋ ನ ಭಗ್ನಶ್ಚ ಭುಂಕ್ತೇ ಸಂತಾಪಮೇವ ಚ ।
ಕಥಿತಂ ದೇವಿ ವೃತ್ತಾಂತಂ ಕಾರಣಂ ಚ ಯಥಾಗಮಂ ।
ಕುಂಡಾನಾಂ ಲಕ್ಷಣಂ ಸರ್ವಂ ನಿಬೋಧ ಕಥಯಾಮಿ ತೇ　　　　॥ ೩೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರಾಯಣನಾರದಸಂವಾದೇ ಸಾವಿತ್ರ್ಯುಪಾಖ್ಯಾನೇ
ದ್ವಾತ್ರಿಂಶತ್ತಮೋಽಧ್ಯಾಯಃ

ಭೌತಿಕ ಶರೀರವು ನಷ್ಟವಾದ ಮೇಲೂ ಪರಲೋಕದಲ್ಲಿ ದುಃಖವನ್ನನುಭವಿಸುವುದಕ್ಕೆ ಕಾರಣವನ್ನು ಶಾಸ್ತ್ರೋಕ್ತವಾಗಿ ತಿಳಿಸಿದೆನು. ಈಗ ನರಕಕುಂಡಗಳ ಲಕ್ಷಣವನ್ನು ವಿವರಿಸುವೆನು ಅವಧರಿಸು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಯಮ
ಸಾವಿತ್ರಿಯರ ಪ್ರಶ್ನೋತ್ತರ ರೂಪವಾದ ಮೂವತ್ತೆರಡನೆಯ
ಅಧ್ಯಾಯವು ಮುಗಿದುದು.

ಮೂವತ್ತೆರಡನೆಯ ಅಧ್ಯಾಯದ ಸಾರಾಂಶ

'ಎಲೈ ಧರ್ಮರಾಜನೇ, ನರಕಕುಂಡಗಳ ಕಷ್ಟಕ್ಕೆ ಸಿಲುಕದಿರಬೇಕಾದರೆ ಯಾವ ಪುಣ್ಯಕರ್ಮವನ್ನಾಚರಿಸಬೇಕು. ಯಾವ ಸುಕರ್ಮವನ್ನಾಚರಿಸಿದರೆ ನರಕ ಯಾತನೆಯೂ ಪುನರ್ಜನ್ಮವೂ ಇರುವುದಿಲ್ಲ. ನರಕ ಕುಂಡಗಳ ಲಕ್ಷಣವಾವುದು. ಅಲ್ಲಿ ಪಾಪಿಗಳು ಯಾವ ರೂಪದಿಂದಿರುವರು. ಮನುಜರ ಪಾಂಚಭೌತಿಕ ಶರೀರವು ನಷ್ಟವಾದ ಮೇಲೆ ಪುಣ್ಯಪಾಪಕರ್ಮಗಳನ್ನು ಯಾವ ಶರೀರದಿಂದುಪಭೋಗಿಸುವರು. ಆ ಶರೀರವು ಎಷ್ಟು ಯಾತನೆಯನ್ನನುಭವಿಸಿದರೂ ನಷ್ಟವಾಗದಿರುವುದೆಂತು? ಇವುಗಳನ್ನು ನನಗೆ ವಿವರಿಸು?' ಎಂದು ಸಾವಿತ್ರಿಯು ಕೇಳಲು, ಧರ್ಮರಾಜನು ಈ ರೀತಿ ಹೇಳಿದನು—'ಎಲೌ ಸಾವಿತ್ರಿಯೇ, ಶ್ರೀಕೃಷ್ಣಪರಮಾತ್ಮನ ಸೇವೆಯೇ, ಅತ್ಯುತ್ತಮವಾದುದೆಂದೂ, ಅದರಿಂದ ಮನುಜನು ಯಾವ ಕರ್ಮ ಬಂಧನಗಳಿಗೂ ಸಿಲುಕದೆ ಮುಕ್ತನಾಗುವನೆಂದೂ ಸಕಲ ನಿಗಮಾಗಮಗಳೂ ಸ್ಪಷ್ಟವಾಗಿ ಹೇಳಿವೆ. ಶ್ರೀಕೃಷ್ಣಪರಮಾತ್ಮನ ಸೇವಕರು ಎಂದೂ ನರಕಕುಂಡಗಳನ್ನೂ ಯಮದೂತರನ್ನೂ ನೋಡುವ ಸಂಭವವಿಲ್ಲ. ಹರಿಭಕ್ತರಾರೂ ನನ್ನ ಲೋಕಕ್ಕೆ ಬರುವುದಿಲ್ಲ. ಶ್ರೀಕೃಷ್ಣಸೇವೆಯೊಂದನ್ನುಳಿದು ಯಾವ ಪುಣ್ಯಕರ್ಮವನ್ನಾಚರಿಸಿದರೂ ಅವರಿಗೆ ಜನನ ಮರಣಾತ್ಮಕವಾದ ಸಂಸಾರದಲ್ಲಿ ತೊಳಲಿಕೆ ತಪ್ಪುವುದಿಲ್ಲ. ಶ್ರೀಕೃಷ್ಣಭಕ್ತರ ಸಮೀಪಕ್ಕೆ ಯಮಕಿಂಕರರು ಸುಳಿಯುವುದಿಲ್ಲ. ಆ ಹರಿಭಕ್ತರ ಸ್ಪರ್ಶಮಾತ್ರದಿಂದ ಸಕಲ ಪಾಪವೂ ಪರಿಹಾರವಾಗುವುದು ಪೃಥಿವ್ಯಾದಿ ಪಂಚಮಹಾಭೂತಗಳಿಂದ ಮನುಜರ ಪಾಂಚಭೌತಿಕ ಶರೀರವು ನಿರ್ಮಿತವಾಗಿ ನಶ್ವರವಾಗಿದ್ದರೂ, ಅಂಗುಷ್ಠಮಾತ್ರ ಪ್ರಮಾಣವುಳ್ಳ ಜೀವನಿಗೆ ಸೂಕ್ಷ್ಮವಾದೊಂದು ಶರೀರವಿರುವುದು. ಅದು ಅಗ್ನಿಯಿಂದ ನಾಶವಾಗದೆ, ಪರಲೋಕದಲ್ಲಿ ನರಕಯಾತನೆಗಳನ್ನೆಲ್ಲಾ ಅನುಭವಿಸಿದರೂ ಹಾಳಾಗದೆ, ದೃಢವಾಗಿರುವುದು. ಆದುದರಿಂದಲೇ ಆ ಸೂಕ್ಷ್ಮದೇಹದಿಂದ ಸಕಲ ಶಿಕ್ಷೆಗಳನ್ನು ಅನುಭವಿಸಬಹುದು' ಎಂದು ಹೇಳಿ ನರಕಕುಂಡಗಳ ಲಕ್ಷಣಗಳನ್ನು ವಿವರಿಸಲಾರಂಭಿಸಿದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ತ್ರಯಸ್ತ್ರಿಂಶತ್ತಮೋಽಧ್ಯಾಯಃ ||

|| ಯಮ ಉವಾಚ ||

ಪೂರ್ಣೇಂದುಮಂಡಲಾಕಾರಂ ಸರ್ವಕುಂಡಂ ಚ ವರ್ತುಲಂ |
ಅತೀವನಿಮ್ನಂ ಪಾಷಾಣಭೇದೈಶ್ಚ ಖಚಿತಂ ಸತಿ || ೧ ||

ನ ನಶ್ವರಂ ಚಾಪ್ರಲಯಂ ನಿರ್ಮಿತಂ ಚೇಶ್ವರೇಚ್ಛಯಾ |
ಕ್ಲೇಶದಂ ವೈ ಪಾತಕಿನಾಂ ನಾನಾರೂಪಂ ತದಾಲಯಂ || ೨ ||

ಜ್ವಲದಂಗಾರರೂಪಂ ಚ ಶತಹಸ್ತಶಿಖಾನ್ವಿತಂ |
ಪರಿತಃ ಕ್ರೋಶಮಾನಂ ಚ ವಹ್ನಿಕುಂಡಂ ಪ್ರಕೀರ್ತಿತಂ || ೩ ||

ಮೂವತ್ತಮೂರನೆಯ ಅಧ್ಯಾಯವು

೧. ಯಮ :—ಎಲೌ ಸಾವಿತ್ರಿದೇವಿಯೇ, ಸಮಸ್ತ ನರಕಕುಂಡಗಳೂ, ಪೂರ್ಣ ಚಂದ್ರನಂತೆ ಮಂಡಲಾಕಾರವಾಗಿಯೂ, ಬಹಳ ಗಂಭೀರವಾಗಿಯೂ ವಿವಿಧ ಕಲ್ಲುಗಳಿಂದ ಖಚಿತವಾಗಿಯೂ ಇವೆ.

೨. ಪ್ರಳಯದವರೆಗೂ ನಾಶವಾಗದಂತೆ ಈಶ್ವರೇಚ್ಛೆಯಿಂದಲೇ ನಿರ್ಮಿತವಾಗಿರುವ ಆ ಕುಂಡಗಳು ಪಾಪಿಗಳಿಗೆ ನಾನಾರೂಪವಾಗಿ ಕಷ್ಟವನ್ನು ಕೊಡುವ ತೌರುಮನೆಯಾಗಿವೆ.

೩–೪. ನೂರು ಮೊಳ ದೀರ್ಘವಾದ ಜ್ವಾಲೆಯಿಂದಲೂ, ಧಗಧಗಿಸುವ ಕೆಂಡದಿಂದಲೂ, ಒಂದು ಹರಿದಾರಿಯಷ್ಟು ಸುತ್ತಳತೆಯಿಂದಲೂ ಕೂಡಿರುವುದೇ ವಹ್ನಿ

ಮಹಚ್ಛಬ್ದಂ ಪ್ರಕುರ್ವದ್ಭಿಃ ಪಾಪಿಭಿಃ ಪರಿಪೂರಿತಂ ।
ರಕ್ಷಿತಂ ಮಮ ದೂತೈಶ್ಚ ತಾಡಿತೈಶ್ಚಾಪಿ ಸಂತತಂ ॥ ೪ ॥

ಪ್ರತಪ್ತೋದಕಪೂರ್ಣಂ ಚ ಹಿಂಸ್ರಜಂತುಸಮನ್ವಿತಂ ।
ಮಹಾಘೋರಾಂಧಕಾರಂ ಚ ಪಾಪಿಸಂಘೇನ ಸಂಕುಲಂ ॥ ೫ ॥

ಪ್ರಕುರ್ವತಾ ಕಾಕುಶಬ್ದಂ ಪ್ರಹಾರೈರ್ಘೂರ್ಣಿತೇನ ಚ ।
ಕ್ರೋಶಾರ್ಧಮಾನಂ ಮದ್ದೂತೈಸ್ತಾಡಿತೇನ ಚ ರಕ್ಷಿತಂ ॥ ೬ ॥

ತಪ್ತಕ್ಷಾರೋದಕೈಃ ಪೂರ್ಣಂ ನಕ್ರೈಶ್ಚ ಪರಿವೇಷ್ಟಿತಂ ।
ಸಂಕುಲಂ ಪಾಪಿಭಿಶ್ಚೈವ ಕ್ರೋಶಮಾನಂ ಭಯಾನಕಂ ॥ ೭ ॥

ತ್ರಾಹೀತಿ ಶಬ್ದಂ ಕುರ್ವದ್ಭಿರ್ಯಮ ದೂತೈಶ್ಚ ತಾಡಿತೈಃ ।
ಪ್ರಚಲದ್ಭಿರನಾಹಾರೈಃ ಶುಷ್ಕಕಂಠೌಷ್ಠತಾಲುಕೈಃ ॥ ೮ ॥

ಕುಂಡವೆನಿಸುವುದು. ಅಲ್ಲಿ ಯಾವಾಗಲೂ ನನ್ನ ದೂತರಿಂದ ಏಟುತಿಂದು ಗಟ್ಟಿಯಾಗಿ ಕಿರಚಿಕೊಳ್ಳುತ್ತಿರುವ ಪಾಪಿಗಳ ದೀನಧ್ವನಿಯು ಕೇಳುತ್ತಿರುವುದು.

೫-೬. ಕುದಿಯುತ್ತಿರುವ ನೀರಿನಿಂದಲೂ, ದುಷ್ಟಪ್ರಾಣಿಗಳಿಂದಲೂ, ಪರಿಪೂರ್ಣವಾಗಿ, ಘೋರಾಂಧಕಾರ ನಿಬಿಡವಾಗಿ ಅರ್ಧಕೋಶಪರಿಮಾಣವುಳ್ಳದ್ದು ತಪ್ತಕುಂಡವೆನಿಸುವುದು. ಅಲ್ಲಿಯೂ ಪಾಪಿಗಳು ನನ್ನ ದೂತರಿಂದ ಶಿಕ್ಷೆಹೊಂದಿ ದೀನಧ್ವನಿಯಿಂದ ಕಿರಿಚಿಕೊಳ್ಳುತ್ತಿರುವರು.

೭-೮. ಒಂದು ಕ್ರೋಶಪರಿಮಾಣವುಳ್ಳದ್ದಾಗಿ, ಚೆನ್ನಾಗಿ ಕುದಿಯುತ್ತಿರುವ ಉಪ್ಪುನೀರಿನಿಂದಲೂ, ಕ್ರೂರವಾದ ಮೊಸಳೆಗಳಿಂದಲೂ ಪರಿಪೂರ್ಣವಾಗಿ, ನನ್ನ ದೂತರ ಏಟನಿಂದ ವಿಕಾರವಾಗಿ ಕಿರಿಚಿಕೊಳ್ಳುತ್ತಿರುವ ಪಾಪಿಗಳಿಂದ ತುಂಬಿರುವುದೇ ಕ್ಷಾರಕಾಂಡವೆನಿಸುವುದು. ಅಲ್ಲಿ ಪಾಪಿಗಳು ಆಹಾರವಿಲ್ಲದೆ ಒಣಗಿದ ಗಂಟಲಿನಿಂದ ವ್ಯಥೆಪಡುವರು.

ವಿಣ್ಮೂತ್ರೈರೇವಪೂರ್ಣಂ ಚ ಕ್ರೋಶಮಾನಂ ಚ ಕುತ್ಸಿತಂ ।
ಅತಿದುರ್ಗಂಧಿಸಂಯುಕ್ತಂ ವ್ಯಾಪ್ತಂ ಪಾಪಿಭಿರೇವ ಚ　　॥ ೯ ॥

ತಾಡಿತೈರ್ಮಮ ದೂತೈಶ್ಚ ತದಾಕಾರೈರುಪದ್ರವೈಃ ।
ರಕ್ಷೇತಿ ಶಬ್ದಂ ಕುರ್ವದ್ಭಿಸ್ತತ್ಕೀಟೈರೇವ ಭಕ್ಷಿತಂ　　॥ ೧೦ ॥

ತಪ್ತಮೂತ್ರದ್ರವೈಃ ಪೂರ್ಣಂ ಮೂತ್ರಕೀಟೈಶ್ಚ ಸಂಕುಲಂ ।
ಯುಕ್ತಂ ಮಹಾಪಾಪಿಭಿಶ್ಚ ತತ್ಕೀಟೈರ್ದಂಶಿತಂ ಸದಾ　　॥ ೧೧ ॥

ಗವ್ಯೂತಿಮಾನಂ ಧ್ವಾಂತಾಕ್ತಂ ಶಬ್ದಕೃದ್ಭಿಶ್ಚ ಸಂತತಂ ।
ಮದ್ದೂತೈಸ್ತಾಡಿತೈರ್ಘೋರೈಃ ಶುಷ್ಕಕಂಠೌಷ್ಠತಾಲುಕೈಃ　　॥ ೧೨ ॥

ಶ್ಲೇಷ್ಮಪೂರ್ಣಂ ಕ್ರೋಶಮಿತಂ ವೇಷ್ಟಿತಂ ಚೇಷ್ಟಿತೈಃ ಸದಾ ।
ತದ್ಭೋಜಿಭಿಃ ಪಾಪಿಭಿಶ್ಚ ತತ್ಕೀಟೈರ್ಭಕ್ಷಿತೈಃ ಸದಾ　　॥ ೧೩ ॥

೯–೧೦. ಮಲಮೂತ್ರಗಳಿಂದ ಪೂರ್ಣವಾಗಿ ಕ್ರೋಶಪರಿಮಾಣವುಳ್ಳದ್ದಾಗಿ ಅತಿ ದುರ್ಗಂಧದಿಂದ ಕುತ್ಸಿತವಾಗಿರುವುದೇ ವಿಟ್‌ಕುಂಡವೆನಿಸುವುದು. ಅಲ್ಲಿ ಪಾಪಿಗಳು ಆಹಾರವಿಲ್ಲದೆ ಹಸಿವಿನಿಂದ ಪೀಡಿತರಾಗಿ, ರಕ್ಷ, ರಕ್ಷ ಎಂದು ಬೇಡಿಕೊಳ್ಳುತ್ತಿದ್ದರೂ, ನನ್ನ ದೂತರಿಂದ ನಿರ್ದಯವಾಗಿ ಹೊಡೆತ ತಿನ್ನುತ್ತಲೂ, ಕೀಟಗಳಿಂದ ಭಕ್ಷಿಸಲ್ಪಡುತ್ತಲೂ ಇರುವರು.

೧೧. ಕುದಿಯುತ್ತಿರುವ ಮೂತ್ರೋದಕದಿಂದಲೂ, ಮೂತ್ರಕೀಟಗಳಿಂದಲೂ ಕೂಡಿ ಆ ಕೀಟದಷ್ಟರಾದ ಮಹಾಪಾಪಿಗಳಿಂದ ಪರಿಪೂರ್ಣವಾಗಿರುವುದೇ ಮೂತ್ರಕುಂಡವೆನಿಸುವುದು.

೧೨. ಅದು ಎರಡು ಹರಿದಾರಿ ಸುತ್ತಳತೆಯಿಂದ ಕೂಡಿ, ನನ್ನ ದೂತರಿಂದ ಏಟು ತಿನ್ನುತ್ತಿರುವ ಪಾಪಿಗಳ ಹಾಹಾಕಾರದಿಂದ ಭಯಂಕರವಾಗಿರುವುದು.

೧೩. ಶ್ಲೇಷ್ಮದಿಂದ ಪರಿಪೂರ್ಣವಾಗಿ ಒಂದು ಕ್ರೋಶಪರಿಮಾಣವುಳ್ಳದ್ದಾಗಿರುವ ಶ್ಲೇಷ್ಮಕುಂಡದಲ್ಲಿ ಶ್ಲೇಷ್ಮವನ್ನೇ ತಿನ್ನುವ ಪಾಪಿಗಳನ್ನು ಆ ಶ್ಲೇಷ್ಮಕೀಟಗಳು ಕಿತ್ತು ತಿನ್ನುತ್ತಿರುವುವು.

ಕ್ರೋಶಾರ್ಧಂ ಗರಪೂರ್ಣಂ ಚ ಗರಭೋಜಿಭಿರನ್ವಿತಂ ।
ಗರಕೀಟೈರ್ಭಕ್ಷಿತೈಶ್ಚ ಪಾಪಿಭಿಃ ಪೂರ್ಣಮೇವ ಚ ॥ ೧೪ ॥

ತಾಡಿತೈರ್ಯಮ ದೂತೈಶ್ಚ ಶಬ್ದಕೃದ್ಭಿಶ್ಚ ಕಂಪಿತೈಃ ।
ಸರ್ಪಾಕಾರೈರ್ವಜ್ರದಂಷ್ಟ್ರೈಃ ಶುಷ್ಕಕಂಠೈಃ ಸುದಾರುಣೈಃ ॥ ೧೫ ॥

ನೇತ್ರಯೋರ್ಮಲಪೂರ್ಣಂ ಚ ಕ್ರೋಶಾರ್ಧಂ ಕೀಟಸಂಯುತಂ ।
ಪಾಪಿಭಿಃ ಸಂಕುಲಂ ಶಶ್ವದ್ದ್ರವದ್ಭಿಃ ಕೀಟಭಕ್ಷಿತೈಃ ॥ ೧೬ ॥

ವಸಾರಸೇನ ಪೂರ್ಣಂ ಚ ಕ್ರೋಶತುರ್ಯಂ ಸುದುಸ್ಸಹಂ ।
ತದ್ಭೋಜಿಭಿಃ ಪಾತಕಿಭಿರ್ವ್ಯಾಪ್ತಂ ದೂತೈಶ್ಚ ತಾಡಿತೈಃ ॥ ೧೭ ॥

---

೧೪. ಗರಕುಂಡವು, ಅರ್ಧಕ್ರೋಶಪರಿಮಿತವಾಗಿಯೂ, ವಿಷಪೂರ್ಣವಾಗಿಯೂ, ವಿಷವನ್ನೇ ತಿನ್ನುತ್ತ ವಿಷಕೀಟಗಳಿಂದ ಭಕ್ಷಿಸಲ್ಪಡುತ್ತಿರುವ ಪಾಪಿಗಳಿಂದ ಪರಿಪೂರ್ಣವಾಗಿಯೂ ಇರುವುದು.

೧೫. ವಜ್ರದಂಷ್ಟ್ರಕುಂಡವು ಸರ್ಪಾಕಾರವಾಗಿರುವ ವಜ್ರದಂಷ್ಟ್ರಗಳಿಂದಲೂ, ಯಮದೂತರಿಂದ ಏಟುತಿಂದು ನಡುಗುತ್ತಿರುವ ಪಾಪಿಗಳಿಂದಲೂ, ಪರಿಪೂರ್ಣವಾಗಿ ಭಯಂಕರವಾಗಿರುವುದು.

೧೬. ಕಣ್ಣಿನ ಕೊಳೆಯಿಂದಲೂ, ಕೀಟಗಳಿಂದಲೂ ಪೂರ್ಣವಾಗಿ, ಅರ್ಧ ಕ್ರೋಶ ಸುತ್ತಳತೆಯುಳ್ಳದ್ದಾಗಿ, ಕೀಟಭಕ್ಷಿತರಾದ ಪಾಪಿಗಳಿಂದ ಪರಿಪೂರ್ಣವಾಗಿರುವುದೇ ನೇತ್ರಮಲಕುಂಡವೆನಿಸುವುದು.

೧೭. ನಾಲ್ಕುಕ್ರೋಶವಿಸ್ತೀರ್ಣವಾಗಿ, ವಸಾರಸದಿಂದ ಪೂರ್ಣವಾಗಿ, ದುಸ್ಸಹವಾಗಿಯೂ, ಅದನ್ನೇ ತಿನ್ನುತ್ತ ಯಮದೂತರಿಂದ ಶಿಕ್ಷಿಸಲ್ಪಡುತ್ತಿರುವ ಪಾಪಿಗಳಿಂದ ಪೂರ್ಣವಾಗಿಯೂ ಇರುವುದೇ ವಸಾಕುಂಡವೆನಿಸುವುದು.

ಶುಕ್ರಪೂರ್ಣಂ ಕ್ರೋಶತುರ್ಯಂ ಶುಕ್ರಕೀಟೈಶ್ಚ ಭಕ್ಷಿತೈಃ ।
ಕ್ರಂದದ್ಭಿಃ ಪಾಪಿಭಿಃ ಶಶ್ವತ್ಸಂಕುಲಂ ವ್ಯಾಕುಲೈರ್ಭಿಯಾ ॥ ೧೮ ॥

ದುರ್ಗಂಧಿರಕ್ತಪೂರ್ಣಂ ಚ ವಾಪೀಮಾನಂ ಗಭೀರಕಂ ।
ತದ್ಭೋಜಿಭಿಃ ಪಾಪಿಭಿಶ್ಚ ಸಂಕುಲಂ ಕೀಟಭಕ್ಷಿತೈಃ ॥ ೧೯ ॥

ಪೂರ್ಣಂ ನೇತ್ರಾಶ್ರುಭಿರ್ನೄಣಾಂ ವಾಪ್ಯರ್ಧಂ ಪಾಪಿಭಿರ್ಯುತಂ ।
ತಾಡಿತೈರ್ಮಮ ದೂತೈಶ್ಚ ತದ್ಭಕ್ಷೈಃ ಕೀಟಭಕ್ಷಿತೈಃ ॥ ೨೦ ॥

ನೄಣಾಂ ಗಾತ್ರಮಲೈಃ ಪೂರ್ಣಂ ತದ್ಭಕ್ಷೈಃ ಪಾಪಿಭಿರ್ಯುತಂ ।
ತಾಡಿತೈರ್ಮಮದೂತೈಶ್ಚ ವ್ಯಗ್ರೈಶ್ಚ ಕೀಟಭಕ್ಷಿತೈಃ ॥ ೨೧ ॥

---

೧೮. ಪಾಪಿಗಳು ಭಯದಿಂದ ಚೀರಿಕೊಳ್ಳುತ್ತಾ, ಶುಕ್ರಕೀಟಗಳಿಂದ ಭಕ್ಷಿತರಾಗಿ ಸಂಕಟಪಡುತ್ತಿರುವ ಶುಕ್ರಪೂರಿತವಾದ ನಾಲ್ಕು ಹರಿದಾರಿಯುಳ್ಳ ಕುಂಡವೇ ಶುಕ್ರಕುಂಡವೆನಿಸುವುದು.

೧೯. ದುರ್ಗಂಧವಾದ ರಕ್ತದಿಂದ ಪೂರಿತವಾಗಿ ಭಾವಿಯಷ್ಟು ಆಳವಾಗಿದ್ದು ಅದೇ ರಕ್ತವನ್ನು ಭುಜಿಸುವ ಪಾಪಿಗಳಿಂದ ಪರಿಪೂರ್ಣವಾಗಿರುವುದೇ ರಕ್ತಕುಂಡವೆನಿಸುವುದು.

೨೦. ಮನುಜರ ಕಣ್ಣೀರುಗಳಿಂದ ಪರಿಪೂರ್ಣವಾಗಿ, ಭಾವಿಯ ಅರ್ಧದಷ್ಟು ಮಾತ್ರ ಆಳವಾಗಿದ್ದು, ನನ್ನ ದೂತರಿಂದ ಶಿಕ್ಷಿಸಲ್ಪಡುತ್ತಿರುವ ಪಾಪಿಗಳಿಂದ ಪೂರ್ಣವಾದುದೇ ಅಶ್ರುಕುಂಡವೆನಿಸುವುದು.

೨೧. ಶರೀರಮಲಕುಂಡವು ಮನುಜರ ಶರೀರ ಮಲದಿಂದ ತುಂಬಿ, ಅದನ್ನು ತಿನ್ನುತ್ತಿರುವ ಪಾಪಿಗಳಿಂದಲೂ, ಅವರನ್ನು ಹೊಡೆಯುತ್ತಿರುವ ನನ್ನ ದೂತರಿಂದಲೂ ಮತ್ತು ಅವರನ್ನು ತಿನ್ನುತ್ತಿರುವ ಕೀಟಗಳಿಂದಲೂ ಪೂರ್ಣವಾಗಿರುವುದು.

ಕರ್ಣವಿಟ್ಪರಿಪೂರ್ಣಂ ಚ ತದ್ಭಕ್ಷೈಃ ಪಾಪಿಭಿರ್ಯುತಂ ।
ವಾಪೀತುರ್ಯಪ್ರಮಾಣಂ ಚ ರುದದ್ಭಿಃ ಕೀಟಭಕ್ಷಿತೈಃ ॥ ೨೨ ॥

ಮಜ್ಜಾಪೂರ್ಣಂ ನರಾಣಾಂ ಚ ಮಹಾದುರ್ಗಂಧಿ ಸಂಯುತಂ ।
ಮಹಾಪಾತಕಿಭಿರ್ಯುಕ್ತಂ ವಾಪೀತುರ್ಯಪ್ರಮಾಣಕಂ ॥ ೨೩ ॥

ಪರಿಪೂರ್ಣಂ ಸ್ನಿಗ್ಧಮಾಂಸೈರ್ಯಮದೂತೈಶ್ಚ ತಾಡಿತೈಃ ।
ಪಾಪಿಭಿಃ ಸಂಕುಲಂ ಚೈವ ವಾಪೀಮಾನಂ ಭಯಾನಕಂ ॥ ೨೪ ॥

ಕನ್ಯಾವಿಕ್ರಯಿಭಿಶ್ಚೈವ ತದ್ಭಕ್ಷೈಃ ಕೀಟಭಕ್ಷಿತೈಃ ।
ತ್ರಾಹೀತಿ ಶಬ್ದಂ ಕುರ್ವದ್ಭಿಸ್ತ್ರಾಸಿತೈಶ್ಚ ಭಯಾನಕಂ ॥ ೨೫ ॥

ವಾಪೀತುರ್ಯಪ್ರಮಾಣಂ ಚ ನಖಾದಿಕಚತುಷ್ಟಯಂ ।
ಪಾಪಿಭಿಃ ಸಂಕುಲಂ ಶಶ್ವನ್ಯಮದೂತೈಶ್ಚ ತಾಡಿತೈಃ ॥ ೨೬ ॥

---

೨೨. ಕರ್ಣಮಲಕುಂಡವು, ಕಿವಿಯ ಕೊಳೆಯಿಂದ ಪೂರಿತವಾಗಿ ಅದನ್ನು ತಿನ್ನುತ್ತಿರುವ ಪಾಪಿಗಳಿಂದಲೂ, ನಾಲ್ಕು ಭಾವಿಯಷ್ಟು ಪರಿಮಾಣದಿಂದಲೂ ಕೂಡಿ, ಕೀಟಭಕ್ಷಿತರಾದ ಪಾಪಿಗಳ ಗೋಳಾಟದಿಂದ ತುಂಬಿರುವುದು.

೨೩. ಮನುಷ್ಯರ ಮಜ್ಜೆಯಿಂದ ತುಂಬಿ ದುರ್ಗಂಧಯುತವಾಗಿ, ನಾಲ್ಕು ಭಾವಿಗಳಷ್ಟು ಪರಿಮಾಣವುಳ್ಳದ್ದಾಗಿ ಮಹಾ ಪಾಪಿಗಳಿಂದ ಕೂಡಿರುವುದೇ ಮಜ್ಜಾ ಕುಂಡವೆನಿಸುವುದು.

೨೪. ಹಳೆಯ ಮಾಂಸದಿಂದ ತುಂಬಿ, ನನ್ನ ದೂತರಿಂದ ಶಿಕ್ಷಿಸಲ್ಪಡುತ್ತಿರುವ ಪಾಪಿಗಳಿಂದ ಪರಿಪೂರ್ಣವಾಗಿ ಒಂದು ಭಾವಿಯಷ್ಟು ಪರಿಮಾಣವುಳ್ಳದ್ದೇ ಮಾಂಸಕುಂಡವೆನಿಸುವುದು.

೨೫–೨೬. ಕ್ರಿಮಿಗಳಿಂದ ಭಕ್ಷಿತರಾಗಿ 'ತ್ರಾಹಿ, ತ್ರಾಹಿ' ಎಂದು ಕೂಗುತ್ತಿರುವ ಕನ್ಯಾವಿಕ್ರಯಿಗಳಿಂದ ತುಂಬಿ ಭಯಾನಕವಾಗಿಯೂ, ನಾಲ್ಕು ಭಾವಿಗಳಷ್ಟು ಪ್ರಮಾಣವುಳ್ಳದ್ದಾಗಿಯೂ, ಯಮದೂತರಿಂದ ತಾಡಿತರಾದ ಪಾಪಿಗಳಿಂದ ಪರಿಪೂರ್ಣವಾಗಿಯೂ, ಇರುವುದೇ ನಖಕುಂಡವೆನಿಸುವುದು.

ಪ್ರತಪ್ತತಾಮ್ರಕುಂಡಂ ಚ ತಾಮ್ರಪರ್ಯನ್ಮಖಾನ್ವಿತಂ ।
ತಾಮ್ರಾಣಾಂ ಪ್ರತಿಮಾಲಕ್ಷೈಃ ಪ್ರತಪ್ತೈರಾವೃತಂ ಸದಾ ॥ ೨೭ ॥

ಪ್ರತ್ಯೇಕಂ ಪ್ರತಿಮಾಶ್ಲಿಷ್ಟೈರುದದ್ಭಿಃ ಪಾಪಿಭಿರ್ಯುತಂ ।
ಗವ್ಯೂತಿಮಾನಂ ವಿಸ್ತೀರ್ಣಂ ಮಮ ದೂತೈಶ್ಚ ತಾಡಿತೈಃ ॥ ೨೮ ॥

ಪ್ರತಪ್ತಲೋಹಧಾರಂ ಚ ಜ್ವಲದಙ್ಗಾರಸಂಯುತಂ ।
ಲೋಹಾನಾಂ ಪ್ರತಿಮಾಲಕ್ಷೈಃ ಪ್ರತಪ್ತೈರಾವೃತಂ ಸದಾ ॥ ೨೯ ॥

ಪ್ರತ್ಯೇಕಂ ಸರ್ವಸಂಶ್ಲಿಷ್ಟೈಃ ಶಶ್ವದ್ವಿಚಲಿತೈರ್ಭಯಾ ।
ರಕ್ಷ ರಕ್ಷೇತಿ ಶಬ್ದಂ ಚ ಕುರ್ವದ್ಭಿರ್ದೂತತಾಡಿತೈಃ ॥ ೩೦ ॥

ಮಹಾಪಾತಕಿಭಿರ್ಯುಕ್ತಂ ದ್ವಿಗವ್ಯೂತಿಪ್ರಮಾಣಕಂ ।
ಭಯಾನಕಂ ಧ್ವಾಂತಯುಕ್ತಂ ಲೌಹಕುಂಡಂ ಪ್ರಕೀರ್ತಿತಂ ॥ ೩೧ ॥

ಘರ್ಮಕುಂಡಂ ತಪ್ತಸುರಾಕುಂಡಂ ವಾಪ್ಯರ್ಧಮೇವ ಚ ।
ತದ್ಭೋಜಿಭಿಃ ಪಾಪಿಭಿಶ್ಚ ವ್ಯಾಪ್ತಂ ಮದ್ದೂತತಾಡಿತೈಃ ॥ ೩೨ ॥

೨೭–೨೮. ಚೆನ್ನಾಗಿ ಕಾದು ಕುದಿಯುತ್ತಿರುವ ತಾಮ್ರದ ಲಕ್ಷ ಪ್ರತಿಮೆಗಳಿಂದಲೂ, ಒಂದೊಂದು ಪ್ರತಿಮೆಯನ್ನೂ ತಬ್ಬಿಕೊಂಡು ಗೋಳಾಡುತ್ತಿರುವ ಪಾಪಿಗಳಿಂದಲೂ, ಕೂಡಿ ಕ್ರೋಶದ್ವಯವಿಸ್ತೀರ್ಣವುಳ್ಳದ್ದಾಗಿರುವುದೇ ಪ್ರತಪ್ತತಾಮ್ರಕುಂಡವೆನಿಸುವುದು.

೨೯–೩೧. ಕೆಂಡದಂತೆ ಕಾದಿರುವ ಲೋಹಧಾರೆಗಳಿಂದಲೂ, ಚೆನ್ನಾಗಿ ತಪ್ತವಾದ ಲಕ್ಷ ಲೋಹಪ್ರತಿಮೆಗಳಿಂದಲೂ ಆವೃತವಾಗಿ, ಪ್ರತಿಯೊಂದು ಪ್ರತಿಮೆಗಳನ್ನೂ ಅಪ್ಪಿಕೊಂಡು ಯಮದೂತರಿಂದ ತಾಡಿತರಾಗಿ 'ರಕ್ಷ, ರಕ್ಷ' ಎಂದು ಚೀತ್ಕರಿಸುತ್ತಿರುವ ಮಹಾ ಪಾಪಿಗಳಿಂದ ಕೂಡಿ, ನಾಲ್ಕು ಕ್ರೋಶ ಪರಿಮಿತಿಯುಳ್ಳದ್ದಾಗಿ, ಅಂಧಕಾರದಿಂದ ಭಯಂಕರವಾಗಿರುವುದೇ ಲೋಹಕುಂಡವೆನಿಸುವುದು.

೩೨. ಘರ್ಮಕುಂಡ ಮತ್ತು ತಪ್ತಸುರಾಕುಂಡಗಳೆರಡೂ, ವಾಪಿಯ ಅರ್ಧಪರಿಮಾಣವುಳ್ಳದ್ದಾಗಿ. ಅದನ್ನು ಸೇವಿಸುತ್ತ ಯಮದೂತರಿಂದ ತಾಡಿತರಾಗುತ್ತಿರುವ ಪಾಪಿಗಳಿಂದ ಪರಿಪೂರ್ಣವಾಗಿರುವುವು.

ಅಧಃ ಶಾಲ್ಮಲಿವೃಕ್ಷಸ್ಯ ತೀಕ್ಷ್ಣಕಂಟಕಕುಂಡಕಂ ।
ಲಕ್ಷಪೌರುಷಮಾನಂ ಚ ಕ್ರೋಶಮಾನಂ ಚ ದುಃಖದಂ ॥ ೩೩ ॥

ಧನುರ್ಮಾನೈಃ ಕಂಟಕೈಶ್ಚ ಸುತೀಕ್ಷ್ಣೈಃ ಪರಿವೇಷ್ಟಿತಂ ॥ ೩೪ ॥

ಪ್ರತ್ಯೇಕಂ ಕಂಟಕೈರ್ವಿದ್ಧಂ ಮಹಾಪಾತಕಿಭಿರ್ಯುತಂ ।
ವೃಕ್ಷಾಗ್ರಾನ್ನಿಪತದ್ಭಿಶ್ಚ ಮಮ ದೂತೈಶ್ಚ ತಾಡಿತೈಃ ॥ ೩೫ ॥

ಜಲಂ ದೇಹೀತೀ ಶಬ್ದಂ ಚ ಕುರ್ವದ್ಭಿಃ ಶುಷ್ಕತಾಲುಕೈಃ ।
ಮಹಾಭಯಾತಿವ್ಯಗ್ರೈಶ್ಚ ದಂಡಸಂಭಿನ್ನಮಸ್ತಕೈಃ ।
ಪ್ರಚಲದ್ಭಿರ್ಯಥಾ ತಪ್ತತೈಲಜೀವಿಭಿರೇವ ಚ ॥ ೩೬ ॥

ವಿಷೌಘೈಸ್ತಕ್ಷಕಾದೀನಾಂ ಪೂರ್ಣಂ ಚ ಕ್ರೋಶಮಾನಕಂ ।
ತದ್ಭಕ್ಷೈಃ ಪಾಪಿಭಿರ್ಯುಕ್ತಂ ಮಮ ದೂತೈಶ್ಚ ತಾಡಿತೈಃ ॥ ೩೭ ॥

---

೩೩. ಮುಳ್ಳುಬೂರುಗದ ಮರದ ಕೆಳಗಿರುವ ತೀಕ್ಷ್ಣಕಂಟಕಕುಂಡವು ಲಕ್ಷ ಪುರುಷ ಮಾನದಷ್ಟು ಆಳವಾಗಿಯೂ ಒಂದು ಹರಿದಾರಿ ವಿಸ್ತೀರ್ಣವಾಗಿಯೂ ದುಃಖಕರವಾಗಿಯೂ ಇದೆ.

೩೪-೩೫. ಅಲ್ಲದೆ ಧನುಸ್ಸಿನಷ್ಟು ಉದ್ದವಾಗಿರುವ ತೀಕ್ಷ್ಣಕಂಟಕಗಳಿಂದ ವೇಷ್ಟಿತವಾಗಿ ಪ್ರತಿಯೊಂದು ಮುಳ್ಳಿನಿಂದಲೂ ಚುಚ್ಚಿಸಿಕೊಳ್ಳುತ್ತಿರುವ ಮತ್ತು ಮರದ ತುದಿಯಿಂದ ಬೀಳುತ್ತಾ ನನ್ನ ದೂತರಿಂದ ಹೊಡೆಸಿಕೊಳ್ಳುತ್ತಿರುವ ಮಹಾ ಪಾಪಿಗಳಿಂದ ಪರಿವೃತವಾಗಿರುವುದು.

೩೬. ಒಣಗಿಹೋದ ಗಂಟಲಿನಲ್ಲೇ 'ನೀರನ್ನು ಕೊಡಿ' ಎಂದು ಕಿರಿಚಿಕೊಳ್ಳುತ್ತಾ, ಏಟಿನಿಂದ ಸೀಳಿಹೋದ ತಲೆಯುಳ್ಳವರಾಗಿ, ಕುದಿಯುತ್ತಿರುವ ಎಣ್ಣೆಯೊಳಗೆ ಬಿದ್ದು ಒದ್ದಾಡುತ್ತಿರುವ ಮಹಾ ಪಾಪಿಗಳಿಂದ ಕೂಡಿರುವುದೇ ತಪ್ತತೈಲ ಕುಂಡವೆನಿಸುವುದು.

೩೭. ತಕ್ಷಕಾದಿ ಸರ್ಪಗಳ ವಿಷಸಮೂಹದಿಂದ ತುಂಬಿ ಕ್ರೋಶಪರಿಮಾಣವುಳ್ಳದ್ದಾಗಿ, ನನ್ನ ದೂತರಿಂದ ಏಟುತಿಂದು, ಆ ವಿಷವನ್ನು ತಿನ್ನುತ್ತಿರುವ ಪಾಪಿಗಳಿಂದ ಪರಿಪೂರ್ಣವಾದುದೇ ವಿಷಕುಂಡವೆನಿಸುವುದು.

ಪ್ರತಪ್ತತೈಲಪೂರ್ಣಂ ಚ ಕೀಟಾದಿಪರಿವರ್ಜಿತಂ ।
ತದ್ಭಕ್ಷ್ಯೈಃ ಪಾಪಿಭಿರ್ಯುಕ್ತಂ ಸ್ನಿಗ್ಧಗಾತ್ರೈಶ್ಚ ವೇಷ್ಟಿತೈಃ ॥ ೩೮ ॥

ಕಾಕುಶಬ್ದಂಪ್ರಕುರ್ವದ್ಭಿಃ ಚಲದ್ಭಿರ್ದೂತತಾಡಿತೈಃ ।
ಮಹಾಪಾತಕಿಭಿರ್ಯುಕ್ತಂ ದ್ವಿಗವ್ಯೂತಿಪ್ರಮಾಣಕಂ ॥ ೩೯ ॥

ಶಸ್ತ್ರಕುಂಡಂ ಧ್ವಾಂತಯುಕ್ತಂ ಕ್ರೋಶಮಾನಂ ಭಯಾನಕಂ ।
ಶೂಲಾಕಾರೈಃ ಸುತೀಕ್ಷ್ಣಾಗ್ರೈಃ ಲೌಹಶಸ್ತ್ರೈಶ್ಚ ವೇಷ್ಟಿತಂ ॥ ೪೦ ॥

ಶಸ್ತ್ರತಲ್ಪಸ್ವರೂಪಂ ಚ ಕ್ರೋಶತುರ್ಯಪ್ರಮಾಣಕಂ ।
ಪಾತಕಿಭಿರ್ವೇಷ್ಟಿತಂ ಚ ಕುಂತವಿದ್ಧೈಶ್ಚ ವೇಷ್ಟಿತಂ ॥ ೪೧ ॥

ತಾಡಿತೈರ್ಯಮದೂತೈಶ್ಚ ಶುಷ್ಕಕಂಠೌಷ್ಠತಾಲುಕೈಃ ।
ಕೀಟೈಃ ಸಂಪೀಡ್ಯಮಾನೈಶ್ಚ ಸರ್ಪಯಾನೈರ್ಭಯಂಕರೈಃ ॥ ೪೨ ॥

೩೮–೩೯. ಯಮದೂತರಿಂದ ಏಟುತಿಂದು ವಿಕಾರಸ್ವರದಿಂದ ಕಿರಚಿಕೊಳ್ಳುತ್ತಿರುವ ಸ್ನಿಗ್ಧ ಶರೀರವುಳ್ಳ ಪಾಪಿಗಳಿಂದಲೂ ಅವರನ್ನು ಕಿತ್ತು ತಿನ್ನುವ ಕೀಟಗಳಿಂದಲೂ ಕೂಡಿ, ಚೆನ್ನಾಗಿ ಕುದಿಯುತ್ತಿರುವ ಎಣ್ಣೆಯಿಂದ ಪರಿಪೂರ್ಣವಾಗಿ, ನಾಲ್ಕು ಕ್ರೋಶ ಪ್ರಮಾಣ ವಿಸ್ತೀರ್ಣವುಳ್ಳದ್ದೇ ತಪ್ತತೈಲಕುಂಡವೆನಿಸುವುದು.

೪೦. ಶಸ್ತ್ರಕುಂಡವು ಅಂಧಕಾರಮಯವೂ, ಕ್ರೋಶಪರಿಮಾಣಯುತವೂ, ಭಯಂಕರವೂ, ಶೂಲದಂತೆ ಹರಿತವಾದ ಅಗ್ರಭಾಗವುಳ್ಳ ಲೋಹಶಸ್ತ್ರಗಳಿಂದ ಭರಿತವೂ ಆಗಿರುವುದು.

೪೧. ಶಸ್ತ್ರಶಯ್ಯೆಯಿಂದ ಭಯಂಕರವಾಗಿಯೂ, ನಾಲ್ಕು ಹರಿದಾರಿ ಪ್ರಮಾಣವುಳ್ಳದ್ದಾಗಿಯೂ, ಕುಂತಾಯುಧದಿಂದ ಪೀಡಿತರಾದ ಪಾಪಿಗಳಿಂದ ಪೂರ್ಣವಾಗಿಯೂ ಇರುವುದೇ ಕುಂತಕುಂಡವೆನಿಸುವುದು.

೪೨. ಅಲ್ಲಿ ಪಾಪಿಗಳು ನನ್ನ ದೂತರಿಂದ ಏಟುತಿಂದು ಒಣಗಿದ ಗಂಟಲಿನಿಂದ ಕಿರಿಚಿಕೊಳ್ಳುತ್ತಾ ಪೀಡಿಸುವ ಕೀಟಗಳಿಂದಲೂ, ಭಯಂಕರವಾದ ಸರ್ಪಗಳಿಂದಲೂ ಪರಿವೃತರಾಗಿರುತ್ತಾರೆ.

ತೀಕ್ಷ್ಣದಂತೈಶ್ಚ ವಿಕೃತೈರ್ವ್ಯಾಪ್ತಂ ಧ್ವಾಂತೆಯುತಂ ಸತಿ ।
ಮಹಾಪಾತಕಿಭಿರ್ಯುಕ್ತಂ ಭೀತೈರ್ವಾಕೀಟಭಕ್ಷಿತೈಃ ।
ರುದದ್ಭಿಃ ಕ್ರೋಶಮಾನಂ ಚ ಯಮದೂತೈಶ್ಚ ತಾಡಿತೈಃ ॥ ೪೩ ॥

ಅತಿದುರ್ಗಂಧಿಸಂಯುಕ್ತಂ ಕ್ರೋಶಾರ್ಧಂ ಪೂಯಸಂಯುತಂ ।
ತದ್ಭಕ್ಷ್ಯೈಃ ಪಾಪಿಭಿರ್ಯುಕ್ತಂ ಯಮದೂತೈಶ್ಚ ತಾಡಿತೈಃ ॥ ೪೪ ॥

ದ್ವಿಗವ್ಯೂತಿಪ್ರಮಾಣಂ ಚ ಹಿಮತೋಯಪ್ರಪೂರಿತಂ ।
ತಾಲವೃಕ್ಷಪ್ರಮಾಣೈಶ್ಚ ಸರ್ಪಕೋಟಿಭಿರಾವೃತಂ ॥ ೪೫ ॥

ಸರ್ಪವೇಷ್ಟಿತಗಾತ್ರೈಶ್ಚ ಪಾಪಿಭಿಃ ಸರ್ಪಭಕ್ಷಿತೈಃ ।
ಸಂಕುಲಂ ಶಬ್ದಕೃದ್ಭಿಶ್ಚ ಯಮದೂತೈಶ್ಚ ತಾಡಿತೈಃ ॥ ೪೬ ॥

ಕುಂಡತ್ರಯಂ ಮಶಾದೀನಾಂ ಪೂರ್ಣಂ ಚ ಮಶಕಾದಿಭಿಃ ।
ಸರ್ವಂ ಕ್ರೋಶಾರ್ಧಮಾನಂ ಚ ಮಹಾಪಾತಕಿಭಿರ್ಯುತಂ ॥ ೪೭ ॥

---

೪೩. ಯಮದೂತರಿಂದ ತಾಡಿತರೂ, ಕೀಟಗಳಿಂದ ಭಕ್ಷಿತರೂ ಆಗಿ ಗೋಳಾಡುತ್ತಿರುವ ಮಹಾ ಪಾಪಿಗಳನ್ನು ಪೀಡಿಸಲು ವಿಕಾರವಾದ ತೀಕ್ಷ್ಣದಂತಗಳಿಂದಲೂ ಗಾಢಾಂಧಕಾರದಿಂದಲೂ ತುಂಬಿರುವುದೇ ತೀಕ್ಷ್ಣದಂತಕುಂಡವೆನಿಸುವುದು. ಇದು ಒಂದು ಕ್ರೋಶಪರಿಮಾಣವುಳ್ಳದ್ದಾಗಿರುವುದು.

೪೪. ಅರ್ಧಕ್ರೋಶಪರಿಮಾಣವುಳ್ಳದ್ದಾಗಿ, ಅತಿ ದುರ್ಗಂಧಯುತವಾದ ಕೀವುಗಳನ್ನು ತಿನ್ನುತ್ತಿರುವ ಮಹಾಪಾಪಿಗಳಿಂದ ಕೂಡಿರುವ ಪೂಯಕುಂಡದಲ್ಲಿ ಯಮದೂತರು ಆ ಪಾಪಿಗಳನ್ನು ಹೊಡೆಯುತ್ತಿರುವರು.

೪೫–೪೬. ನಾಲ್ಕು ಕ್ರೋಶಪರಿಮಾಣವುಳ್ಳದ್ದಾಗಿ, ಹಿಮಜಲದಿಂದ ತುಂಬಿ ತಾಳೆಯ ಮರದಷ್ಟು ಎತ್ತರವಿರುವ ಕೋಟ್ಯಂತರ ಸರ್ಪಗಳಿಂದ ಪರಿವೃತವಾಗಿ, ಆ ಸರ್ಪಗಳಿಂದ ಕಚ್ಚಿಸಿಕೊಂಡು ಯಮದೂತರಿಂದ ಪೆಟ್ಟುತಿನ್ನುತ್ತ ಕಿರಿಚಿಕೊಳ್ಳುವ ಮಹಾ ಪಾಪಿಗಳುಳ್ಳದ್ದೇ ಹಿಮಕುಂಡವೆನಿಸುವುದು.

೪೭. ನೊಣ, ಸೊಳ್ಳೆ ಮತ್ತು ವಿಷಗಳಿಂದ ಕೂಡಿದ ಮೂರು ಕುಂಡಗಳು, ಒಂದೊಂದೂ ಅರ್ಧಕ್ರೋಶಪರಿಮಾಣವುಳ್ಳದ್ದಾಗಿ ಮಹಾಪಾಪಿಗಳಿಂದ ಪರಿಪೂರ್ಣವಾಗಿರುವುದು.

ಹಸ್ತಪಾದಾದಿಭಿರ್ಬದ್ಧೈಃ ಕ್ಷತೈಃ ಕ್ಷತಜಲೋಹಿತೈಃ ।
ಹಾಹೇತಿಶಬ್ದಂ ಕುರ್ವದ್ಭಿಃ ಪ್ರಚಲದ್ಭಿಶ್ಚ ಸಂತತಂ || ೪೮ ||

ವಜ್ರವೃಶ್ಚಿಕಯೋಃ ಕುಂಡಂ ತಾಭ್ಯಾಂ ಚ ಪರಿಪೂರಿತಂ ।
ವಾಪ್ಯರ್ಧಂ ಪಾಪಿಭಿರ್ಯುಕ್ತಂ ವಜ್ರವೃಶ್ಚಿಕದಂಶಿತೈಃ || ೪೯ ||

ಕುಂಡತ್ರಯಂ ಶರಾದೀನಾಂ ತೈರೇವ ಪರಿಪೂರಿತಂ ।
ತೈರ್ವಿದ್ಧೈಃ ಪಾಪಿಭಿರ್ಯುಕ್ತಂ ವಾಪ್ಯರ್ಧಂ ರಕ್ತಲೋಹಿತೈಃ || ೫೦ ||

ತಪ್ತಪಂಕೋದಕೈಃ ಪೂರ್ಣಂ ಸಧ್ವಾಂತಂ ಗೋಲಕುಂಡಕಂ ।
ಕೀಟೈಃ ಸಂಪೀಡ್ಯಮಾನೈಶ್ಚ ಭಕ್ಷಿತೈಃ ಪಾಪಿಭಿರ್ಯುತಂ || ೫೧ ||

---

೪೮. ಆ ಪಾಪಿಗಳು ಕೈಕಾಲುಗಳನ್ನು ಕಟ್ಟಿಸಿಕೊಂಡು ಏಟುತಿನ್ನುತ್ತ ಗಾಯಗಳಿಂದ ಹೊರಬರುವ ರಕ್ತವನ್ನು ನೋಡಿ ಹಾಹಾಕಾರ ಮಾಡುವರು.

೪೯. ವಜ್ರಕೀಟ ಮತ್ತು ವೃಶ್ಚಿಕ ಕುಂಡಗಳು ವಾಪಿಯ ಅರ್ಧದಷ್ಟು ಆಳವಾಗಿ, ವಜ್ರಕೀಟ ಮತ್ತು ಚೇಳುಗಳಿಂದ ಕಚ್ಚಿಸಿಕೊಳ್ಳುತ್ತಿರುವ ಪಾಪಿಗಳಿಂದ ಪೂರಿತವಾಗಿರುವುದು.

೫೦. ಶರ, ಶೂಲ, ಮತ್ತು ಖಡ್ಗವೆಂಬ ಕುಂಡಗಳಲ್ಲಿ ಕ್ರಮವಾಗಿ ಬಾಣ, ಶೂಲ ಮತ್ತು ಕತ್ತಿಗಳು ತುಂಬಿರುವುವು. ಆ ಬಾಣ, ಶೂಲ, ಕತ್ತಿಗಳು ಚುಚ್ಚಿಕೊಂಡು ಪಾಪಿಗಳಿಗೆ ಗಾಯಮಾಡಿ ರಕ್ತವನ್ನು ಸುರಿಸುವುವು. ಅ ಕುಂಡಗಳು ಭಾವಿಯ ಅರ್ಧದಷ್ಟು ಪರಿಮಾಣವುಳ್ಳದ್ದಾಗಿರುವುವು.

೫೧. ಗೋಲಕುಂಡವು ಕುದಿಯುತ್ತಿರುವ ಕೆಸರಿನಿಂದ ಪೂರ್ಣವಾಗಿ, ಅಂಧಕಾರಮಯವಾಗಿರುವುವಲ್ಲದೆ ಕೀಟಗಳಿಂದ ಕಚ್ಚಿಸಿಕೊಳ್ಳುತ್ತಿರುವ ಪಾಪಿಗಳಿಂದ ಪೂರಿತವಾಗಿರುವುದು.

ವಾಪ್ಯರ್ದ್ಧಂ ಪರಿಪೂರ್ಣಂ ಚ ಜಲಸ್ಥೈಃ ನಕ್ರಕೋಟಿಭಿಃ ।
ದಾರುಣೈಃ ವಿಕೃತಾಕಾರೈಃ ಭಕ್ಷಿತೈಃ ಪಾಪಿಭಿರ್ಯುತಂ ॥ ೫೨ ॥

ವಿಣ್ಮೂತ್ರಶ್ಲೇಷ್ಮಭಕ್ಷ್ಯೈಶ್ಚ ಸಂಯುಕ್ತಂ ಶತಕೋಟಿಭಿಃ ।
ಕಾಕೈಶ್ಚ ವಿಕೃತಾಕಾರೈಃ ಧನುರ್ಲಕ್ಷಂ ಚ ಪಾಪಿಭಿಃ ॥ ೫೩ ॥

ಸಂಚಾಲವಾಜಯೋಃ ಕುಂಡಂ ತಾಭ್ಯಾಂ ಚ ಪರಿಪೂರಿತಂ ।
ಭಕ್ಷಿತೈಃ ಪಾಪಿಭಿರ್ಯುಕ್ತಂ ಶಬ್ದಕೃದ್ಭಿಶ್ಚ ಸಂತತಂ ॥ ೫೪ ॥

ಧನುಃ ಶತಂ ವಜ್ರಯುಕ್ತಂ ಪಾಪಿಭಿಃ ಸಂಕುಲಂ ಸದಾ ।
ಶಬ್ದಕೃದ್ಭಿರ್ವಜ್ರದಗ್ಧೈಃರಂತೆಧ್ವಾಂತಮಯಂ ಸದಾ ॥ ೫೫ ॥

ವಾಪೀ ದ್ವಿಗುಣಮಾನಂಚ ತಪ್ತಪ್ರಸ್ತರ ನಿರ್ಮಿತಂ ।
ಜ್ವಲದಂಗಾರಸದೃಶಂ ಚಲದ್ಭಿಃ ಪಾಪಿಭಿರ್ಯುತಂ ॥ ೫೬ ॥

---

೫೨. ನಕ್ರಕುಂಡವು ವಾಪಿಯ ಅರ್ಧಪ್ರಮಾಣವುಳ್ಳದ್ದಾಗಿ, ನೀರಿನಲ್ಲಿ ವಾಸಿಸುವ ಕೋಟ್ಯಂತರ ಮೊಸಳೆಗಳಿಂದ ಕೂಡಿರುವುದು. ಆ ಮೊಸಳೆಗಳು ಭಯಂಕರವೂ ವಿಕಾರರೂಪವೂ ಉಳ್ಳದ್ದಾಗಿರುವುದಲ್ಲದೆ ಪಾಪಿಗಳನ್ನು ಕಚ್ಚುತ್ತಿರುವುವು.

೫೩. ಕಾಕಕುಂಡವಲ್ಲಿ ವಿಕಾರವಾದ ಕಾಗೆಗಳು ಮಲಮೂತ್ರ ಶ್ಲೇಷ್ಮಗಳನ್ನು ಭಕ್ಷಿಸುತ್ತಿರುವ ಪಾಪಿಗಳನ್ನು ಕುಕ್ಕಿ ತೊಂದರೆಗೊಳಿಸುವುವು.

೫೪. ಸಂಚಾಲ ವಾಜಕುಂಡಗಳು ಆಯಾ ದುಷ್ಟ ಪ್ರಾಣಿಗಳಿಂದಲೇ ತುಂಬಿವೆ. ಅಲ್ಲಿರುವ ಪಾಪಿಗಳನ್ನು ಅವು ತಿನ್ನುತ್ತಿರುವುದರಿಂದ ಆ ಪಾಪಿಗಳು ಯಾವಾಗಲೂ ಕಿರಚುತ್ತಿರುವರು.

೫೫. ಬಂಧಕುಂಡವು ವಜ್ರಕ್ರಿಮಿಗಳಿಂದ ಕೂಡಿ ಅವುಗಳಿಂದ ಕಚ್ಚಿಸಿಕೊಂಡು ಕಿರಿಚುತ್ತಿರುವ ಪಾಪಿಗಳಿಂದ ಸರ್ವದಾಸಂಕುಲವಾಗಿ, ಯಾವಾಗಲೂ ಒಳಗೆ ಅಂಧಕಾರಮಯವಾಗಿರುವುದು.

೫೬. ಎರಡು ಭಾವಿಯಷ್ಟು ಪರಿಮಾಣವುಳ್ಳದ್ದಾಗಿ ತಪ್ತವಾದ ಕಲ್ಲುಗಳಿಂದ ಕೂಡಿ ಸಂಚರಿಸುವ ಪಾಪಿಗಳಿಂದ ಪರಿವೃತವಾದುದೇ ತಪ್ತಪಾಷಾಣಕುಂಡವೆನಿಸುವುದು.

ಕ್ಷುರಧಾರೋಪಮೈಸ್ತೀಕ್ಷ್ಣೈಃ ಪಾಷಾಣೈ ರ್ನಿರ್ಮಿತಂ ಪರಂ |
ಮಹಾಪಾತಕಿಭಿರ್ಯುಕ್ತಂ ಕ್ಷತಂ ಕ್ಷತಜ ಲೋಹಿತೈಃ || ೫೭ ||

ದುರ್ಗಂಧಿ ಲಾಲಾಪೂರ್ಣಂ ಚ ತದ್ಭಕ್ಷೈಃ ಪಾಪಿಭಿರ್ಯುತಂ |
ಕ್ರೋಶಮಾನಂ ಗಭೀರಂಚ ಯಮದೂತೈಶ್ಚ ತಾಡಿತೈಃ || ೫೮ ||

ತಪ್ತತೋಯೇಂಜನಾಕಾರೈಃ ಪರಿಪೂರ್ಣಂ ಧನುಶ್ಶತಂ |
ಚಲದ್ಭಿಃ ಪಾಪಿಭಿರ್ಯುಕ್ತಂ ಯಮದೂತೇನ ತಾಡಿತೈಃ || ೫೯ ||

ಪೂರ್ಣಂ ಚೂರ್ಣದ್ರವೈಃ ಕ್ರೋಶಮಾನಂ ಪಾಪಿಭಿರನ್ವಿತಂ |
ತದ್ಭೋಜಭಿಃ ಪ್ರದಗ್ಧೈಶ್ಚ ಯಮದೂತೈಶ್ಚ ತಾಡಿತೈಃ || ೬೦ ||

---

೫೭. ತೀಕ್ಷ್ಣ ಪಾಷಾಣಕುಂಡವು ಕತ್ತಿಯ ಧಾರೆಯಂತೆ ತೀಕ್ಷ್ಣವಾದ ಪಾಷಾಣಗಳಿಂದ ನಿರ್ಮಿತವಾಗಿರುವುದು. ಮಹಾ ಪಾಪಿಗಳು ಅದರ ಮೇಲೆ ಬಿದ್ದು ಗಾಯಮಾಡಿಕೊಂಡು ಹರಿಯುತ್ತಿರುವ ರಕ್ತಧಾರೆಗಳಿಂದ ಕೂಡಿರುವರು.

೫೮. ಲಾಲಾಕುಂಡವು ದುರ್ವಾಸನೆಯನ್ನು ಕೊಡುವ ಜೊಲ್ಲಿನಿಂದ ಪೂರ್ಣವಾಗಿರುವುದು. ಅಲ್ಲಿ ಪಾಪಿಗಳು ಯಮದೂತರಿಂದ ಏಟುತಿಂದು ಆ ಜೊಲ್ಲನ್ನು ತಿನ್ನುತ್ತಿರುವರು ಆ ಕುಂಡವು ಒಂದು ಹರಿದಾರಿ ಪರಿಮಾಣವುಳ್ಳದ್ದಾಗಿ, ಆಳವಾಗಿರುವುದು.

೫೯. ಅಸಿಕುಂಡವು ಕುದಿಯುವ ನೀರಿನಿಂದ ತುಂಬಿರುವುದು. ಅಲ್ಲಿ ಚಲಿಸುತ್ತಿರುವ ಪಾಪಿಗಳನ್ನು ಯಮದೂತರು ಬಲವಾಗಿ ಹೊಡೆಯುವರು.

೬೦. ಚೂರ್ಣಕುಂಡವು ಚೂರ್ಣದ್ರವಗಳಿಂದ ಪೂರ್ಣವಾಗಿ ಒಂದು ಕ್ರೋಶಪರಿಮಾಣವುಳ್ಳದ್ದಾಗಿ, ಪಾಪಿಗಳಿಂದ ಯುಕ್ತವಾಗಿರುವುದು. ಆ ಪಾಪಿಗಳು ಚೂರ್ಣದ್ರವವನ್ನೇ ಸೇವಿಸಿಕೊಂಡು ಯಮದೂತರಿಂದ ಏಟು ತಿನ್ನುತ್ತಿರುವರು.

ಕುಂಡಂ ಕುಲಾಲಚಕ್ರಾಭಂ ಘೂರ್ಣ್ಯಮಾನಂ ಚ ಸಂತತಂ ।
ಸುತೀಕ್ಷ್ಣ ಷೋಡಶಾರಂ ಚ ಘೂರ್ಣಿತೈಃ ಪಾಪಿಭಿರ್ಯುತಂ ॥ ೬೧ ॥

ಅತೀವ ವಕ್ರಂ ನಿಮ್ನಂ ಚ ದ್ವಿಗವ್ಯೂತಿ ಪ್ರಮಾಣಕಂ ।
ಕಂದರಾಕಾರನಿರ್ಮಾಣಂ ತಪ್ತೋದಕ ಸಮನ್ವಿತಂ ॥ ೬೨ ॥

ಮಹಾಪಾತಕಿಭಿರ್ಯುಕ್ತಂ ಭಕ್ಷಿತೈ ರ್ಜಲಜಂತುಭಿಃ ।
ಪ್ರಚಲದ್ಭಿಃ ಶಬ್ದಕೃದ್ಭಿರ್ಧ್ವಾಂತಯುಕ್ತಂ ಭಯಾನಕಂ ॥ ೬೩ ॥

ಕೋಟಿಭಿರ್ವಿಕೃತಾಕಾರೈಃ ಕಚ್ಛಪೈಶ್ಚ ಸುದಾರುಣೈಃ ।
ಜಲಸ್ಥೈಃ ಸಂಯುತಂ ತೈಶ್ಚ ಭಕ್ಷಿತೈಃ ಪಾಪಿಭಿರ್ಯುತಂ ॥ ೬೪ ॥

ಜ್ವಾಲಾ ಕಲಾಪೈಸ್ತೇಜೋಭಿ ರ್ನಿರ್ಮಿತಂ ಕ್ರೋಶಮಾನಕಂ ।
ಶಬ್ದಕೃದ್ಭಿಃ ಪಾಪಿಭಿಶ್ಚ ಚಲದ್ಭಿಃ ಸಂಯುತಂ ಸದಾ ॥ ೬೫ ॥

---

೬೧. ಚಕ್ರಕುಂಡವು ಕುಂಬಾರನ ಚಕ್ರದಂತೆ ಯಾವಾಗಲೂ ಸುತ್ತುತ್ತಿರುವುದು. ಆ ಚಕ್ರಗಳಲ್ಲಿ ಅತಿ ತೀಕ್ಷ್ಣವಾದ ಹದಿನಾರು ಹಾರೆಕಾಲುಗಳಿರುತ್ತವೆ. ಮಹಾಪಾಪಿಗಳು ಅದರಲ್ಲಿ ಸಿಕ್ಕಿ ನರಳುತ್ತಿರುವರು.

೬೨. ಅತಿ ವಕ್ರವಾಗಿಯೂ, ಆಳವಾಗಿಯೂ, ಎರಡು ಹರಿದಾರಿ ಪರಿಮಾಣವುಳ್ಳದ್ದಾಗಿಯೂ ಇರುವ ವಜ್ರಕುಂಡವು ಕುದಿಯುವ ನೀರಿನಿಂದ ತುಂಬಿದ ಗುಹೆಯಂತೆ ನಿರ್ಮಿತವಾಗಿರುವುದು.

೬೩. ಜಲಜಂತುಗಳ ಉಪಟಳಕ್ಕೆ ಸಿಲುಕಿ ಅರಿಚಿಕೊಂಡು ಓಡಾಡುತ್ತಿರುವ ಮಹಾಪಾಪಿಗಳಿಂದ ಪೂರಿತವಾದ ಆ ಕುಂಡವು ಅಂಧಕಾರದಿಂದ ಭಯಂಕರವಾಗಿರುವುದು.

೬೪. ಜಲಪೂರ್ಣವಾಗಿ ವಿಕಾರವಾದ ಕೋಟಿ ಕೂರ್ಮಗಳಿಂದ ಕೂಡಿದ ಕೂರ್ಮಕುಂಡದಲ್ಲಿರುವ ಪಾಪಿಗಳು ಆ ಕೂರ್ಮಗಳಿಗೇ ಆಹಾರವಾಗಿರುವರು.

೬೫. ತೇಜಃಪೂರ್ಣವಾದ ಜ್ವಾಲಾಕಲಾಪದಿಂದ ನಿರ್ಮಿತವಾಗಿ ಒಂದು ಹರಿದಾರಿ ಪರಿಮಾಣವುಳ್ಳ ಜ್ವಾಲಾಕುಂಡವು ಸಂಕಟಪಟ್ಟುಕೊಂಡು ಓಡಾಡುತ್ತಿರುವ ಪಾಪಿಗಳಿಂದ ಪೂರ್ಣವಾಗಿರುವುದು.

ಕ್ರೋಶಮಾನಂ ಗಭೀರಂ ಚ ತಪ್ತ ಭಸ್ಮಭಿರನ್ವಿತಂ |
ಶಶ್ವಚ್ಚಲದ್ಭಿಃ ಸಂಯುಕ್ತಂ ಪಾಪಿಭಿ ರ್ಭಸ್ಮಭಕ್ಷಿತೈಃ || ೬೬ ||

ತಪ್ತಪಾಷಾಣ ಲೋಷ್ಟಾನಾಂ ಸಮೂಹ್ಯೈಃ ಪರಿಪೂರಿತಂ |
ಪ್ರಾಣಿಭಿರ್ದಗ್ಧಗಾತ್ರೈಶ್ಚ ಯುಕ್ತಂ ವೈ ಶುಷ್ಕತಾಕುಲೈಃ || ೬೭ ||

ಕ್ರೋಶಮಾನಂ ಧ್ವಾಂತಮಯಂ ಗಭೀರಮತಿದಾರುಣೈಃ |
ತಾಡಿತೈ ರ್ಯಮ ದೂತೈಶ್ಚ ದಗ್ಧಕುಂಡಂ ಪ್ರಕೀರ್ತಿತಂ || ೬೮ ||

ಅತ್ಯೂರ್ಮಿಯುಕ್ತತೋಯಂ ಚ ಪ್ರತಪ್ತಕ್ಷಾರಸಂಯುತಂ |
ನಾನಾಪ್ರಕಾರವಿಕೃತಂ ಜಲಜಂತುಸಮನ್ವಿತಂ || ೬೯ ||

ದ್ವಿಗವ್ಯೂತಿಪ್ರಮಾಣಂ ಚ ಗಭೀರಂ ಧ್ವಾಂತಸಂಯುತಂ |
ತದ್ಭಕ್ಷ್ಯೈಃ ಪಾಪಿಭಿರ್ಯುಕ್ತಂ ದಂಶಿತೈರ್ಜಲಜಂತುಭಿಃ || ೭೦ ||

ಚಲದ್ಭಿಃ ಕ್ರಂದಮಾನೈಶ್ಚ ನ ಪಶ್ಯದ್ಭಿಃ ಪರಸ್ಪರಂ |
ಉತ್ತಪ್ತಸೂರ್ಮಿಕುಂಡಂ ಚ ಕೀರ್ತಿತಂ ಚ ಭಯಾನಕಂ || ೭೧ ||

---

೬೬. ಭಸ್ಮಕುಂಡವು ಒಂದು ಹರಿದಾರಿ ಪರಿಮಾಣವುಳ್ಳದ್ದಾಗಿಯೂ, ಗಂಭೀರವಾಗಿಯೂ ಇದ್ದು ಕುದಿಯುತ್ತಿರುವ ಬೂದಿಯಿಂದ ತುಂಬಿರುವುದು. ಪಾಪಿಗಳು ಆ ಭಸ್ಮವನ್ನು ತಿಂದುಕೊಂಡು ಅಲ್ಲಿ ತೊಳಲುತ್ತಿರುವರು.

೬೭-೬೮. ಚೆನ್ನಾಗಿ ಕಾಯಿಸಲ್ಪಟ್ಟ ಕಲ್ಲು ಮತ್ತು ಮಣ್ಣು ಹೆಂಟೆಗಳಿಂದ ತುಂಬಿ, ಬೆಂದು ಒಣಗಿಹೋದ ಶರೀರವುಳ್ಳ ಪ್ರಾಣಿಗಳಿಂದ ಪರಿಪೂರಿತವಾಗಿ, ಒಂದು ಕ್ರೋಶಪರಿಮಾಣವುಳ್ಳದ್ದಾಗಿಯೂ, ಗಾಢಾಂಧಕಾರದಿಂದ ಭಯಂಕರವಾಗಿಯೂ, ಕ್ರೂರಿಗಳಾದ ಯಮದೂತರಿಂದ ಪರಿವೃತವಾಗಿಯೂ, ಇರುವುದೇ ದಗ್ಧಕುಂಡವೆನಿಸುವುದು.

೬೯-೭೧. ಅನೇಕ ಅಲೆಗಳಿಂದ ಕೂಡಿ ಕುದಿಯುವ ಉಪ್ಪುನೀರಿನಿಂದಲೂ, ವಿವಿಧವಿಕಾರದಿಂದ ಕೂಡಿರುವ ಜಲಜಂತುಗಳಿಂದಲೂ, ಭಯಂಕರವಾಗಿ, ಎರಡು ಕ್ರೋಶಪರಿಮಾಣವೂ, ಗಾಢಾಂಧಕಾರಯುತವೂ, ಆಗಿರುವುದೇ 'ಉತ್ತಪ್ತಸೂರ್ಮಿಕುಂಡ' ವೆನಿಸುವುದು. ಅಲ್ಲಿ ಪಾಪಿಗಳು ಆ ಕುದಿಯುವ ನೀರನ್ನೇ ಕುಡಿದುಕೊಂಡು, ಜಲಜಂತುಗಳಿಂದ ಕಚ್ಚಿಸಿಕೊಂಡು, ಒಬ್ಬರಮುಖವನ್ನೊಬ್ಬರು ನೋಡಲಾಗದೆ ಅರಚುತ್ತಿರುವರು.

ಅಸಿಪತ್ರವನಸ್ಯೈವಾಪ್ಯುಚ್ಚೈಸ್ತಾಲತರೋರಧಃ ।
ಕ್ರೋಶಾರ್ಧಮಾನಕುಂಡಂ ಚ ಪತತ್ಪತ್ರಸಮನ್ವಿತಂ ॥ ೭೨ ॥

ಪಾಪಿನಾಂ ರಕ್ತಪೂರ್ಣಂ ಚ ವೃಕ್ಷಾಗ್ರಾತ್ಪತತಾಂ ವರಂ ।
ಪರಿತ್ರಾಹೀತಿ ಶಬ್ದಂ ಚ ಕುರ್ವತಾಮುಸತಾಮಪಿ ॥ ೭೩ ॥

ಗಭೀರಂ ಧ್ವಾಂತಸಂಯುಕ್ತಂ ರಕ್ತಕೀಟಸಮನ್ವಿತಂ ।
ತದಸೀಪತ್ರಕುಂಡಂ ಚ ಕೀರ್ತಿತಂ ಚ ಭಯಾನಕಂ ॥ ೭೪ ॥

ಧನುಶ್ಶತಪ್ರಮಾಣಂ ಚ ಕ್ಷುರಾಕಾರಾಸ್ತ್ರಸಂಕುಲಂ ।
ಪಾಪಿನಾಂ ರಕ್ತಪೂರ್ಣಂ ಚ ಕ್ಷುರಧಾರಂ ಭಯಾನಕಂ ॥ ೭೫ ॥

ಸೂಚೀವಾಶ್ಯಾಸ್ತ್ರಸಂಯುಕ್ತಂ ಪಾಪಿರಕ್ತೌಘಪೂರಿತಂ ।
ಪಂಚಾಶದ್ಧನುರಾಯಾಮಂ ಕ್ಲೇಶದಂ ಸೂಚಿಕಾಮುಖಂ ॥ ೭೬ ॥

೭೨–೭೪. ಕತ್ತಿಯ ಅಲುಗಿನಂತೆ ಹರಿತವಾದ ಉಕ್ಕಿನ ಎಲೆಗಳಿಂದ ಕೂಡಿರುವ ಅಸಿಪತ್ರವನದಲ್ಲಿ ಉನ್ನತವಾದ ತಾಳೆಯ ಮರದ ಕೆಳಗೆ ಅರ್ಧಕ್ರೋಶಪರಿಮಾಣದಿಂದ ಕೂಡಿ ಗಾಢಾಂಧಕಾರದಿಂದ ಭಯಂಕರವಾಗಿರುವ ಕುಂಡಕ್ಕೆ ಅಸಿಪತ್ರಕುಂಡವೆಂದು ಹೆಸರು. ಅಲ್ಲಿ ಪಾಪಿಗಳು ಆ ಮರದ ಎಲೆಗಳಿಂದ ಗಾಯಗೊಂಡು ಕೆಳಕ್ಕೆ ಬಿದ್ದು ರಕ್ತಮಯರಾಗಿ, ರಕ್ತಕೀಟಗಳಿಂದ ಕಚ್ಚಿಸಿಕೊಂಡು 'ಕಾಪಾಡು, ಕಾಪಾಡು' ಎಂದು ಕಿರಿಚಿಕೊಳ್ಳುತ್ತಿರುವರು.

೭೫. ನೂರು ಧನುಸ್ಸಿನಷ್ಟು ಪ್ರಮಾಣವುಳ್ಳದ್ದಾಗಿ, ಕ್ಷೌರದ ಕತ್ತಿಯಂತಿರುವ ಅಸ್ತ್ರಗಳಿಂದ ತುಂಬಿ, ಪಾಪಿಗಳ ರಕ್ತದಿಂದ ಪರಿಪೂರ್ಣವಾಗಿ ಭಯಂಕರವಾಗಿರುವುದೇ ಕ್ಷುರಧಾರಾಕುಂಡವೆನಿಸುವುದು.

೭೬. ಸೂಜಿಯಂತೆ ತೀಕ್ಷ್ಣವಾದ ಅಸ್ತ್ರಗಳಿಂದ ತುಂಬಿ, ಪಾಪಿಗಳ ರಕ್ತದಿಂದ ಪರಿಪೂರ್ಣವಾಗಿ ಐವತ್ತು ಧನುಸ್ಸಿನ ಪರಿಮಾಣವುಳ್ಳ ಕುಂಡವನ್ನು 'ಸೂಚಿಕಾಮುಖ' ವೆನ್ನುವರು.

ಗೋಧಾಹ್ವಜಂತುಭೇದಸ್ಯ ಮುಖಾಕೃತಿ ಭಯಾನಕಂ |
ಕೂಪರೂಪಂ ಗಭೀರಂ ಚ ಧನುರ್ವಿಂಶತಿಮಾನಕಂ || ೭೭ ||

ಮಹಾಪಾತಕಿನಾಂ ಚೈವ ಮಹಾಕ್ಲೇಶಕರಂ ಪರಂ |
ತತ್ಕೀಟಭಕ್ಷಿತಾನಾಂ ಚ ನಮ್ರಾಸ್ಯಾನಾಂ ಚ ಸಂತತಂ || ೭೮ ||

ಕುಂಡಂ ನರಮುಖಾಕಾರಂ ಧನುಷ್ಷೋಡಶಮಾನಕಂ |
ಗಭೀರಂ ಕೂಪರೂಪಂ ಚ ಪಾಪಿಷ್ಠೈಃ ಸಂಕುಲಂ ಸದಾ || ೭೯ ||

ಗಜೇಂದ್ರಾಣಾಂ ಸಮೂಹೇನ ವ್ಯಾಪ್ತಂ ಕುಂಡಾಕೃತಿಸ್ಥಲಂ |
ಗಜದಂತಹತಾನಾಂ ಚ ಪಾಪಿನಾಂ ರಕ್ತಪೂರಿತಂ || ೮೦ ||

ತತ್ಕೀಟಭಕ್ಷಿತಾನಾಂ ಚ ದೀನಶಬ್ದಕೃತಾಂ ಸದಾ |
ಧನುಶ್ಶತಪ್ರಮಾಣಂ ಚ ಕೀರ್ತಿತಂ ಗಜದಂಶನಂ || ೮೧ ||

೭೭–೭೮. ಹೆಂಟಿಗೊದ್ದವೆಂಬ ಜಂತುವಿನ ಮುಖದ ಆಕಾರದಿಂದ ಕೂಡಿ ಭಯಂಕರವಾಗಿಯೂ, ಇಪ್ಪತ್ತು ಧನುಸ್ಸಿನ ಪರಿಮಾಣವುಳ್ಳ ಗಂಭೀರವಾದ ಕೂಪ ರೂಪವಾಗಿಯೂ, ತಲೆತಗ್ಗಿಸಿಕೊಂಡು ಕೀಟಗಳಿಂದ ಭಕ್ಷಿಸಲ್ಪಡುತ್ತಿರುವ ಮಹಾ ಪಾಪಿಗಳಿಗೆ ಹೆಚ್ಚು ಕ್ಲೇಶದಾಯಕವಾಗಿಯೂ ಇರುವುದೇ ' ಗೋಧಾಮುಖಕುಂಡ ' ವೆನಿಸುವುದು.

೭೯. ಹದಿನಾರು ಧನುಸ್ಸಿನ ಪರಿಮಾಣವುಳ್ಳದ್ದಾಗಿ, ಪಾಪಿಗಳಿಂದ ಪೂರಿತ ವಾಗಿ ಮನುಷ್ಯನ ಮುಖಾಕಾರವುಳ್ಳ ಗಂಭೀರವಾದ ಕುಂಡವೇ ' ನರಮುಖಕುಂಡ ' ವೆನಿಸುವುದು.

೮೦–೮೧. ಅನೇಕ ದುಷ್ಟಗಜಗಳಿಂದ ಕೂಡಿ, ಗಜದಂತಗಳಿಂದ ಹತರಾದ ಪಾಪಿಗಳ ರಕ್ತಗಳಿಂದ ಪೂರಿತವಾಗಿ, ನೂರು ಧನುಸ್ಸಿನ ಪರಿಮಾಣವುಳ್ಳದ್ದಾಗಿ, ಕೀಟಭಕ್ಷಿತರಾದ ಪಾಪಿಗಳ ಕೋಲಾಹಲ ಧ್ವನಿಯಿಂದ ವ್ಯಾಕುಲವಾಗಿರುವುದೇ ' ಗಜದಂಶನಕುಂಡ ' ವೆನಿಸುವುದು.

ಧನುಸ್ತ್ರಿಂಶತ್ಪ್ರಮಾಣಂ ಚ ಕುಂಡಂ ವೈ ಗೋಮುಖಾಕೃತಿ |
ಪಾಪಿನಾಂ ದುಃಖದಂ ಚೈವ ಗೋಮುಖಂ ಪರಿಕೀರ್ತಿತಂ || ೮೨ ||

ಭ್ರಮಿತಂ ಕಾಲಚಕ್ರೇಣ ಸಂತತಂ ಚ ಭಯಾನಕಂ |
ಕುಂಭಾಕಾರಂ ಧ್ವಾಂತಯುಕ್ತಂ ದ್ವಿಗವ್ಯೂತಿಪ್ರಮಾಣಕಂ || ೮೩ ||

ಲಕ್ಷಮಾನವಮಾನಂ ಚ ಗಭೀರಮತಿವಿಸ್ತೃತಂ |
ಕುತ್ರಚಿತ್ತಪ್ತತೈಲಂ ಚ ಕುಂಡಾಭ್ಯಂತರಮಂತಿಕೇ || ೮೪ ||

ಕುತ್ರಚಿತ್ತಪ್ತಲೌಹಾದಿ ಕುಂಡಂ ತಾಮ್ರಾದಿಕಂ ತಥಾ |
ಕುತ್ರಚಿತ್ತಪ್ತಪಾಷಾಣಕುಂಡಾಭ್ಯಂತರಮಂತಿಕೇ || ೮೫ ||

ಪಾಪಿನಾಂ ಚ ಪ್ರಧಾನೈಶ್ಚ ಮಹಾಪಾತಕಿಭಿರ್ಯುತಂ |
ಪರಸ್ಪರಂ ನ ಪಶ್ಯದ್ಭಿಃ ಶಬ್ದಕೃದ್ಭಿಶ್ಚ ಸಂತತಂ || ೮೬ ||

ತಾಡಿತೈರ್ಯಮದೂತೈಶ್ಚ ದಂಡೈಶ್ಚ ಮುಸಲೈಸ್ತಥಾ || ೮೭ ||

---

೮೨. ಮುವತ್ತು ಧನುಸ್ಸಿನ ಪ್ರಮಾಣವುಳ್ಳದ್ದಾಗಿ, ಪಾಪಿಗಳಿಗೆ ದುಃಖದಾಯಕವಾಗಿ, ಗೋಮುಖಾಕಾರವುಳ್ಳದ್ದು 'ಗೋಮುಖಕುಂಡ' ವೆನಿಸುವುದು.

೮೩–೮೫. ಕಾಲಚಕ್ರದಿಂದ ಭ್ರಮಿತವಾಗಿ, ನಾಲ್ಕುಕ್ರೋಶ ಪ್ರಮಾಣವುಳ್ಳದ್ದಾಗಿ, ಗಾಢಾಂಧಕಾರದಿಂದ ಭಯಂಕರವಾಗಿ, ಲಕ್ಷಮಾನವರ ಪರಿಮಾಣವಷ್ಟು ಗಂಭೀರವಾಗಿರುವುದೇ 'ಕುಂಭೀಪಾಕ' ವೆನಿಸುವುದು. ಆ ಕುಂಡದ ಒಳಭಾಗದಲ್ಲಿ ಕೆಲವು ಕಡೆ ಕುದಿಯುತ್ತಿರುವ ತೈಲವೂ, ಕೆಲವು ಕಡೆ ಕುದಿಯುತ್ತಿರುವ ತಾಮ್ರಾದಿ ಲೋಹಗಳೂ, ಮತ್ತೆ ಕೆಲವು ಕಡೆ ಕುದಿಯುತ್ತಿರುವ ಪಾಷಾಣಗಳೂ ತುಂಬಿ ಭಯಂಕರವಾಗಿದೆ.

೮೬–೮೭. ಅಲ್ಲಿ ಅನೇಕ ಪಾತಕಿಗಳು ಒಬ್ಬರನ್ನೊಬ್ಬರು ನೋಡಲಾಗದೆ ಸಂತತವಾಗಿ ರೋದನಮಾಡುತ್ತಿರುವರು. ಅಲ್ಲದೆ ಯಮದೂತರ ಕೈಲಿರುವ ದಂಡದಿಂದಲೂ, ಒನಕೆಯಿಂದಲೂ ಹೊಡೆಯಲ್ಪಟ್ಟವರಾಗಿ ಕ್ಷಣಕ್ಷಣಕ್ಕೂ ಬಿದ್ದೇಳುತ್ತ ಮೂರ್ಛೆಗೊಳ್ಳುವರು.

ಘೂರ್ಣಮಾನಂ ಪತದ್ಭಿಶ್ಚ ಮೂರ್ಛಿತೈಶ್ಚ ಮುಹುರ್ಮುಹುಃ ।
ಘಾತಿತೈರ್ಮಮ ದೂತೈಶ್ಚಾಪ್ಯತ್ಯೂರ್ಧ್ವಾತ್ಪತಿತೈಃ ಕ್ಷಣಂ ॥ ೮೮ ॥

ಯಾವಂತಃ ಪಾಪಿನಃ ಸಂತಿ ಸರ್ವಕುಂತೇಷು ಸುಂದರಿ ।
ಚತುರ್ಗುಣಾಃ ಸಂತಿ ತತ್ರ ಕುಂಭೀಪಾಕೇ ಚ ದುಸ್ತರೇ ॥ ೮೯ ॥

ಸುಚಿರಂ ಪತಿತಾಶ್ಚೈವ ಭೋಗದೇಹವಿವರ್ಜಿತಾಃ ।
ಸರ್ವಕುಂಡಪ್ರಧಾನಂ ಚ ಕುಂಭೀಪಾಕಂ ಪ್ರಕೀರ್ತಿತಂ ॥ ೯೦ ॥

ಕಾಲನಿರ್ಮಿತಸೂತ್ರೇಣ ನಿಬದ್ಧಾ ಯತ್ರ ಪಾಪಿನಃ ।
ಉತ್ಥಾಪಿತಾಶ್ಚ ಮದ್ದೂತೈಃ ಕ್ಷಣಮೇವ ನಿಮಜ್ಜಿತಾಃ ॥ ೯೧ ॥

ನಿಃಶ್ವಾಸಬಂಧಾಃ ಸುಚಿರಂ ಕುಂಡಾನಾಮಂತರೇ ತಥಾ ।
ಅತೀವಕ್ಲೇಶಯುಕ್ತಾಶ್ಚ ಭೋಗದೇಹಾ ಅನಶ್ವರಾಃ ॥ ೯೨ ॥

---

೮೮. ನನ್ನ ದೂತರು ಬಹಳ ಎತ್ತರದಿಂದ ಆ ಪಾಪಿಗಳನ್ನು ಕೆಳಕ್ಕೆ ತಳ್ಳುವರು. ಆಗ ಆ ಪಾಪಿಗಳು ಮೂರ್ಛೆಗೊಂಡು ಕ್ಷಣಕ್ಷಣಕ್ಕೂ ಒದ್ದಾಡುವರು.

೮೯. ಎಲೌ ಸುಂದರಿಯೇ, ಇತರ ಎಲ್ಲ ನರಕಕುಂಡಗಳಲ್ಲೂ ಒಟ್ಟು ಎಷ್ಟು ಪಾಪಿಗಳಿದ್ದಾರೋ ಅದರ ನಾಲ್ಕರಷ್ಟುಜನ ದುಸ್ತರವಾದ ಕುಂಭೀಪಾಕವೆಂಬ ನರಕದಲ್ಲಿದ್ದಾರೆ.

೯೦. ಕುಂಭೀಪಾಕದಲ್ಲಿ ನರಳುವ ಪಾಪಿಗಳಿಗೆ ಸುಖಾನುಭವ ಮಾಡುವ ದೇಹವಿರುವುದಿಲ್ಲ. ಈ ಕುಂಭೀಪಾಕ ನರಕವು ಎಲ್ಲ ನರಕಕುಂಡಗಳಿಗೂ ಪ್ರಧಾನವಾದುದೆಂದು ಪ್ರಸಿದ್ಧವಾಗಿದೆ.

೯೧. ಎಲ್ಲಿ ಪಾಪಿಗಳು ಕಾಲಪುರುಷನ ಪಾಶದಿಂದ ಬದ್ಧರಾಗಿ ನನ್ನ ದೂತರಿಂದ ಕ್ಷಣಕ್ಷಣಕ್ಕೂ ಮುಳುಗಿಸಿ ಏಳಿಸಲ್ಪಡುವರೋ ಆ ಕುಂಡವನ್ನು ಕಾಲಸೂತ್ರವೆನ್ನುವರು.

೯೨. ಆ ಕುಂಡದಲ್ಲಿರುವ ಪಾಪಿಗಳು ನಿಃಶ್ವಾಸೋಚ್ಛ್ವಾಸಗಳನ್ನು ತಡೆದು ಚಿರಕಾಲ ಕಷ್ಟವನ್ನು ಅನುಭವಿಸಬೇಕಾದ ಶರೀರವನ್ನು ಮಾತ್ರ ಧರಿಸಿರುವರು.

ದಂಡೇನ ಮುಸಲೇನೈವ ಮಮ ದೂತೈಶ್ಚ ತಾಡಿತಾಃ ।
ಪ್ರತಪ್ತತೋಯಯುಕ್ತಂ ಚ ಕಾಲಸೂತ್ರಂ ಪ್ರಕೀರ್ತಿತಂ ॥ ೯೩ ॥

ಅವಟಃ ಕೂಪಭೇದಶ್ಚ ಯತ್ರೋದಂ ಚ ತದಾಕೃತಿ ।
ಪ್ರತಪ್ತತೋಯಪೂರ್ಣಂ ಚ ಧನುರ್ವಿಂಶತ್ಪ್ರಮಾಣಕಂ ॥ ೯೪ ॥

ವ್ಯಾಪ್ತಂ ಮಹಾಪಾಪಿಭಿಶ್ಚ ದಗ್ಧಗಾತ್ರೈಶ್ಚ ಸಂತತಂ ।
ಮದ್ದೂತೈಸ್ತಾಡಿತೈಶ್ಚೈವದವಟೋದಂ ಪ್ರಕೀರ್ತಿತಂ ॥ ೯೫ ॥

ಯತ್ತೋಯಸ್ಪರ್ಶಮಾತ್ರೇಣ ಸರ್ವವ್ಯಾಧಿಶ್ಚ ಪಾಪಿನಾಂ ।
ಭವೇದಕಸ್ಮಾತ್ಪತತಾಂ ಯತ್ರ ಕುಂಡೇ ಧನುಶ್ಶತೇ ॥ ೯೬ ॥

ಸರ್ವೇ ರುದ್ಧಾಃ ಪಾಪಿನಶ್ಚ ಮೃತಂತೇ ಯತ್ರ ಸಂತತಂ ।
ಹಾ ಹೇತಿ ಶಬ್ದಂ ಕುರ್ವಂತಸ್ತದೇವಾರುಂತುದಂ ವಿದುಃ ॥ ೯೭ ॥

---

೯೩. ನನ್ನ ದೂತರು ಆ ಪಾಪಿಗಳನ್ನು ದಂಡದಿಂದಲೂ ಒನಕೆಯಿಂದಲೂ ಹೊಡೆಯುವರು. ಇಂಥ ಪಾಪಿಗಳಿಂದ ಕೂಡಿ ಕುದಿಯುವ ನೀರಿನಿಂದ ತುಂಬಿರುವುದೇ 'ಕಾಲಸೂತ್ರ' ವೆನಿಸುವುದು.

೯೪–೯೫. ಕುದಿಯುವ ನೀರಿನಿಂದ ಪರಿಪೂರ್ಣವಾಗಿ, ಸುಡುತ್ತಿರುವ ಶರೀರವುಳ್ಳ, ಯಮದೂತರಿಂದ ಶಿಕ್ಷೆ ಹೊಂದುತ್ತಿರುವ, ಮಹಾ ಪಾಪಿಗಳಿಂದ ವ್ಯಾಪ್ತವಾಗಿ, ಇಪ್ಪತ್ತು ಧನುಸ್ಸುಗಳಷ್ಟು ಪರಿಮಾಣವುಳ್ಳ ಭಾವಿಯನ್ನು 'ಅವಟೋದ' ವೆನ್ನುವರು.

೯೬–೯೭. ಯಾವ ನರಕಕುಂಡದಲ್ಲಿರುವ ನೀರನ್ನು ಮುಟ್ಟಿದ ಮಾತ್ರದಿಂದಲೇ ಪಾಪಿಗಳಿಗೆ ಸಕಲ ರೋಗಗಳೂ ವ್ಯಾಪಿಸುವುವೋ, ನೂರು ಧನುಸ್ಸಿನಷ್ಟು ಪ್ರಮಾಣವುಳ್ಳ ಯಾವ ಕುಂಡದಲ್ಲಿ ಪತಿತರಾದ ಪಾಪಿಗಳು ಕಷ್ಟದಿಂದ ಸಂತತವಾಗಿ ಹಾಹಾಕಾರ ಮಾಡುತ್ತಿರುವರೋ ಆ ಕುಂಡವನ್ನು 'ಅರುಂತುದ' ವೆನ್ನುವರು.

ತಪ್ತಪಾಂಸುಭಿರಾಕೀರ್ಣಂ ಜ್ವಲದಗ್ನಿಸ್ತು ದಗ್ಧಕೈಃ ।
ತದ್ಭಕ್ಷ್ಯೈಃ ಪಾಪಿಭಿರ್ಯುಕ್ತಂ ಪಾಂಸುಭೋಜಂ ಧನುಶ್ಶತಂ ॥ ೯೮ ॥

ಪತತಾಂ ಪಾಪಿನಾಂ ಯತ್ರ ಭವೇದೇವ ಪ್ರಕಮ್ಪನಂ ।
ಪಾತಮಾತ್ರೇಣ ಪಾಪೀ ವೈ ಭವೇತ್ಪಾಶೇನ ವೇಷ್ಟಿತಃ ॥ ೯೯ ॥

ಕ್ರೋಶಮಾನೇ ಚ ಕುಂಡೇ ವೈ ವಿದುಸ್ತತ್ಪಾಶವೇಷ್ಟನಂ ।
ಧನುರ್ವಿಂಶತಿಮಾನಂ ಚ ಶೂಲಪ್ರೋತಂ ಪ್ರಕೀರ್ತಿತಂ ॥ ೧೦೦ ॥

ಪಾತಮಾತ್ರೇಣ ಪಾಪೀಚ ಶೂಲೇನ ಗ್ರಥಿತೋ ಭವೇತ್ ।
ಪತತಾಂ ಪಾಪಿನಾಂ ಯತ್ರ ಭವೇದೇವ ಪ್ರಕಂಪನಂ ॥ ೧೦೧ ॥

ಅತೀವ ಹಿಮತೋಯೇ ಚ ಕೋಶಾರ್ಧಂ ಚ ಪ್ರಕಂಪನಂ ।
ದದತ್ಯೇವ ಹಿಮಾದ್ದೂತಾ ಯತ್ರೋಲ್ಕಾಃ ಪಾಪಿನಾಂ ಮುಖೇ ॥ ೧೦೨ ॥

---

೯೮. ಅಗ್ನಿಜ್ವಾಲೆಯಿಂದ ದಗ್ಧವಾಗಿ, ಕುದಿಯುತ್ತಿರುವ ಮರಳಿನಿಂದ ಪೂರ್ಣವಾಗಿ, ಆ ಮರಳನ್ನೇ ತಿನ್ನುವ ಪಾಪಿಗಳಿಂದ ಕೂಡಿ ನೂರು ಧನುಸ್ಸಿನಷ್ಟು ಪ್ರಮಾಣವುಳ್ಳ ಕುಂಡವನ್ನೇ ' ಪಾಂಸುಭೋಜ ' ವೆನ್ನುವರು.

೯೯–೧೦೦. ಯಾವ ಕುಂಡದಲ್ಲಿ ಬಿದ್ದ ಕೂಡಲೇ ಪಾಪಿಗಳು ನಡುಗುತ್ತಿರುವರೋ, ಮತ್ತು ಪಾಶದಿಂದ ಪರಿವೇಷ್ಟಿತರಾಗುವರೋ, ಒಂದು ಕ್ರೋಶ ಪ್ರಮಾಣವುಳ್ಳ ಆ ಕುಂಡವನ್ನು ' ಪಾಶವೇಷ್ಟನ ' ವೆನ್ನುವರು. ಇಪ್ಪತ್ತು ಧನುಸ್ಸಿನಷ್ಟು ಪ್ರಮಾಣವುಳ್ಳ ನರಕವೇ ' ಶೂಲಪ್ರೋತ ' ವೆನಿಸುವುದು.

೧೦೧–೧೦೨. ಅಲ್ಲಿ ಬಿದ್ದಮಾತ್ರದಿಂದಲೇ ಪಾಪಿಯು ಶೂಲದ ಇರಿತಕ್ಕೆ ಸಿಲುಕುವನು. ಅರ್ಧಕ್ರೋಶ ಪರಿಮಾಣದಿಂದ ಕೂಡಿ, ಹಿಮಪೂರಿತವಾಗಿ ಅಲ್ಲಿ ಪತಿತರಾದ ಪಾಪಿಗಳಿಗೆ ನಡುಕವನ್ನುಂಟುಮಾಡುವುದೇ ' ಪ್ರಕಂಪನ ' ಕುಂಡವೆನಿಸುವುದು.

ಧನುರ್ವಿಂಶತಿಮಾನಂ ಚ ತದುಲ್ಕಾಭಿಶ್ಚ ಸಂಕುಲಂ ।
ಲಕ್ಷಮಾನವಮಾನಂ ಚ ಗಭೀರಂ ಚ ಧನುಶ್ಶತಂ ॥ ೧೦೩ ॥

ನಾನಾಪ್ರಕಾರಕ್ರಿಮಿಭಿಃ ಸಂಯುಕ್ತಂ ಚ ಭಯಾನಕೈಃ ।
ಅತ್ಯಂಧಕಾರವ್ಯಾಪ್ತಂ ಯತ್ಕೂಪಾಕಾರಂ ಚ ವರ್ತುಲಂ ॥ ೧೦೪ ॥

ತದ್ಭಕ್ಷ್ಯೈಃ ಪಾಪಿಭಿರ್ಯುಕ್ತಂ ನ ಪಶ್ಯದ್ಭಿಃ ಪರಸ್ಪರಂ ।
ತಪ್ತತೋಯಪ್ರದಗ್ಧೈಶ್ಚ ಚಲದ್ಭಿಃ ಕೀಟಭಕ್ಷಿತೈಃ ।
ಧ್ವಾಂತೇನ ಚಕ್ಷುಷಾ ಚಾಂಧ್ಯೈರಂಧಕೂಪಂ ಪ್ರಕೀರ್ತಿತಂ ॥ ೧೦೫ ॥

ನಾನಾಪ್ರಕಾರಶಸ್ತ್ರೌಘೈರ್ಯತ್ರ ವಿದ್ಧಾಶ್ಚ ಪಾಪಿನಃ ।
ಧನುರ್ವಿಂಶತಿಮಾನಂ ಚ ವೇಧನಂ ತತ್ಪ್ರಕೀರ್ತಿತಂ ॥ ೧೦೬ ॥

ದಂಡೇನ ತಾಡಿತಾ ಯತ್ರ ಮಮದೂತೈಶ್ಚ ಪಾಪಿನಃ ।
ಧನುಃಷೋಡಶಮಾನಂ ಚ ತತ್ಕುಂಡಂ ದಂಡತಾಡನಂ ॥ ೧೦೭ ॥

---

೧೦೩. ಇಪ್ಪತ್ತು ಧನುಸ್ಸಿನ ಪರಿಮಾಣವುಳ್ಳದ್ದಾಗಿಯೂ, ಲಕ್ಷಮಾನವರಷ್ಟು ಆಳವುಳ್ಳದ್ದಾಗಿಯೂ ಇರುವ ಉಲ್ಕಾ (ಕೊಳ್ಳಿ) ಕುಂಡದಲ್ಲಿ ನನ್ನ ದೂತರು ಪಾಪಿಗಳ ಬಾಯನ್ನು ಕೊಳ್ಳಿಯಿಂದ ಸುಡುತ್ತಿರುವರು.

೧೦೪–೧೦೫. ಭಯಂಕರವಾದ ವಿವಿಧಕ್ರಿಮಿಗಳಿಂದ ಕೂಡಿ, ಅಂಧಕಾರಪೂರಿತವಾಗಿ, ಕೂಪದಂತೆ ವರ್ತುಲಾಕಾರವಾಗಿರುವ ಅಂಧಕೂಪ ಕುಂಡದಲ್ಲಿ ಪಾಪಿಗಳು ಕ್ರಿಮಿಗಳಿಂದ ಭಕ್ಷಿತರಾಗಿ, ಕುದಿಯುವ ನೀರಿನಲ್ಲಿ ಬೆಂದು ಗಾಢಾಂಧಕಾರದಿಂದ ಅನ್ಯೋನ್ಯ ದರ್ಶನ ಮಾಡಲಾರದೆ ನರಳುತ್ತಿರುವರು.

೧೦೬. ನಾನಾವಿಧವಾದ ಆಯುಧಗಳಿಂದ ಪೀಡಿತರಾದ ಪಾಪಿಗಳಿಂದ ಪರಿಪೂರ್ಣವಾಗಿ ಇಪ್ಪತ್ತು ಧನುಸ್ಸಿನ ಪ್ರಮಾಣವುಳ್ಳ ಕುಂಡವೇ ವೇಧನಕುಂಡವೆನಿಸುವುದು.

೧೦೭. ದಂಡಧಾರಿಗಳಾದ ನನ್ನ ದೂತರಿಂದ ಹೊಡೆಯಲ್ಪಟ್ಟ ಪಾಪಿಗಳಿಂದ ಪೂರ್ಣವಾಗಿ, ಹದಿನಾರು ಧನುಸ್ಸಿನ ಪ್ರಮಾಣವುಳ್ಳ ಕುಂಡವೇ ದಂಡತಾಡನವೆನಿಸುವುದು.

ನಿಬದ್ಧಾಶ್ಚ ಮಹಾಜಾಲೈರ್ಯಥಾ ಮೀನಾಶ್ಚ ಪಾಪಿನಃ ।
ಧನುಸ್ತ್ರಿಂಶತ್ಪ್ರಮಾಣಂ ಚ ಜಾಲಬದ್ಧಂ ಪ್ರಕೀರ್ತಿತಂ ॥ ೧೦೮ ॥

ಪತತಾಂ ಪಾಪಿನಾಂ ಕುಂಡೇ ದೇಹಾಶ್ಚೂರ್ಣಾ ಭವಂತಿ ಚ ।
ಲೌಹವೇದಿನಿಬದ್ಧಾಂತಃ ಕೋಟಿಮಾನವಮಾನಕಂ ॥ ೧೦೯ ॥

ಗಭೀರಂ ಧ್ವಾಂತಯುಕ್ತಂ ಚ ಧನುರ್ವಿಂಶತಿ ಮಾನಕಂ ।
ಮೂರ್ಛಿತಾನಾಂ ಜಡಾನಾಂ ತದ್ದೇಹ ಚೂರ್ಣಂ ಪ್ರಕೀರ್ತಿತಂ ॥ ೧೧೦ ॥

ದಲಿತಾಃ ಪಾಪಿನೋ ಯತ್ರ ಮದ್ದೂತೈರ್ಮುಸಲೈಃ ಸದಾ ।
ಧನುಷ್ಷೋಡಶಮಾನಂ ಚ ತತ್ಕುಂಡಂ ದಲನಂ ಸ್ಮೃತಂ ॥ ೧೧೧ ॥

ಪಾತಮಾತ್ರೇ ಯತ್ರಪಾಪೀ ಶುಷ್ಕಕಂಠೌಷ್ಠತಾಲುಕಃ ।
ವಾಲುಕಾಸು ಚ ತಪ್ತಾಸು ಧನುಸ್ತ್ರಿಂಶತ್ಪ್ರಮಾಣಕಂ ॥ ೧೧೨ ॥

---

೧೦೮. ಮೀನಿನಂತೆ ದೊಡ್ಡ ದೊಡ್ಡ ಬಲೆಗಳಿಗೆ ಸಿಕ್ಕಿದ ಪಾಪಿಗಳಿಂದ ಪೂರ್ಣವಾಗಿ ಮೂವತ್ತು ಧನುಸ್ಸಿನ ಪ್ರಮಾಣವುಳ್ಳ ಕುಂಡವೇ ಜಾಲಬದ್ಧವೆನಿಸುವುದು.

೧೦೯-೧೧೦. ಲೋಹದ ಕೋಟೆಯಿಂದ ಪರಿವೃತವಾಗಿ, ಕೋಟಿ ಮನುಜರ ಪ್ರಮಾಣದಷ್ಟು ಆಳವಾಗಿಯೂ, ಇಪ್ಪತ್ತು ಧನುಸ್ಸಿನಷ್ಟು ವಿಸ್ತಾರವಾಗಿಯೂ, ಗಾಢಾಂಧಕಾರಯುತವಾಗಿಯೂ ಇರುವ ಚೂರ್ಣಕುಂಡದಲ್ಲಿ ಪತಿತರಾಗಿ ಮೂರ್ಛಿತರಾದ ಪಾಪಿಗಳ ದೇಹವು ಪುಡಿಪುಡಿಯಾಗುತ್ತಿರುತ್ತದೆ.

೧೧೧. ನನ್ನ ದೂತರ ಮುಸಲಪ್ರಹಾರದ ಪೆಟ್ಟಿನಿಂದ ಪೀಡಿತರಾಗಿ ನರಳುತ್ತಿರುವ ಪಾಪಿಗಳಿಂದ ಪೂರ್ಣವಾಗಿ ಹದಿನಾರು ಧನುಸ್ಸಿನ ಪ್ರಮಾಣವುಳ್ಳ ಕುಂಡವನ್ನೇ ದಲನ ಕುಂಡವೆನ್ನುವರು.

೧೧೨-೧೧೩. ಕುದಿಯುತ್ತಿರುವ ಮರಳಿನ ರಾಶಿಯ ಮೇಲೆ ಬಿದ್ದ ಕೂಡಲೇ ಎಲ್ಲಿ ಪಾಪಿಯು ಶುಷ್ಕಕಂಠನಾಗುವನೋ, ಮೂವತ್ತು ಧನುಸ್ಸಿನಷ್ಟು ವಿಸ್ತಾರ

ಶತಮಾನವಮಾನಂ ಚ ಗಭೀರಂ ಧ್ವಾಂತಸಂಯುತಂ ।
ಜಲಾಹಾರೈರ್ವಿರಹಿತಂ ಶೋಷಣಂ ತತ್ರ ಕೀರ್ತಿತಂ ॥ ೧೧೩ ॥

ನಾನಾ ಚರ್ಮಕಷಾಯೋದೈಃ ಪರಿಪೂರ್ಣಂ ಧನುಃಶತಂ ।
ದುರ್ಗಂಧಿಯುಕ್ತಂ ತದ್ಭಕ್ಷೈಃ ಪಾಪಿಭಿಃ ಸಂಕುಲಂ ಮಹತ್ ॥ ೧೧೪ ॥

ಶೂರ್ಪಾಕಾರಮುಖಂ ಕುಂಡಂ ಧನುರ್ದ್ವಾದಶಮಾನಕಂ ।
ತಪ್ತಲೌಹೀವಾಲುಕಾಭಿಃ ಪೂರ್ಣಂ ಪಾತಕಿಭಿರ್ಯುತಂ ॥ ೧೧೫ ॥

ಅಂತರಾಗ್ನಿಶಿಖಾನಾಂ ಚ:ಜ್ವಾಲಾವ್ಯಾಪ್ತಮುಖಂ ಸದಾ ।
ಧನುರ್ವಿಂಶತಿಮಾನಂ ಚ ಯಸ್ಯ ಕುಂಡಸ್ಯ ಸುಂದರಿ ॥ ೧೧೬ ॥

ಜ್ವಾಲಾಭಿರ್ದಗ್ಧಗಾತ್ರೈಶ್ಚ ಪಾಪಿಭಿರ್ವ್ಯಾಪ್ತಮೇವ ಯತ್ ।
ತನ್ಮಹತ್ಕ್ಲೇಶದಂ ಶಶ್ವತ್ಕುಂಡಂ ಜ್ವಾಲಾಮುಖಂ ಸ್ಮೃತಂ ॥ ೧೧೭ ॥

ಪಾತಮಾತ್ರಾದ್ಯತ್ರಪಾಪೀ ಮೂರ್ಛಿತೋ ವ್ಯಥಿತೋ ಭವೇತ್ ।
ತಪ್ತೇಷ್ಟಕಾಭ್ಯಂತರಿತಂ ವಾಪ್ಯರ್ಧಂ ಜಿಹ್ಮಕುಂಡಕಂ ॥ ೧೧೮ ॥

ವಾಗಿಯೂ, ನೂರು ಮಾಸವರ ಪ್ರಮಾಣದಷ್ಟು ಗಂಭೀರವಾಗಿಯೂ, ಗಾಢಾಂಧಕಾರ ಸಹಿತವಾಗಿಯೂ, ಅನ್ನಪಾನ ವಿರಹಿತವಾಗಿಯೂ ಯಾವದಿರುವುದೋ ಅದೇ ಶೋಷಣಕುಂಡವೆನಿಸುವುದು

೧೧೪. ವಿವಿಧ ಚರ್ಮಗಳ ಕಷಾಯೋದಕದಿಂದ ದುರ್ಗಂಧ ಪೂರ್ಣವಾಗಿ ಅದನ್ನೇ ಪಾನಮಾಡುವ ಪಾಪಿಗಳಿಂದ ಪೂರಿತವಾಗಿ, ನೂರು ಧನುಸ್ಸಿನ ಪರಿಮಾಣವುಳ್ಳದ್ದೇ ಕಷಕುಂಡವೆನಿಸುವುದು.

೧೧೫. ಕುದಿಯುತ್ತಿರುವ ಲೋಹದ ಪುಡಿಗಳಿಂದ ಪೀಡಿತರಾದ ಪಾಪಿಗಳಿಂದ ಪೂರ್ಣವಾಗಿ, ಹನ್ನೆರಡು ಧನುಸ್ಸಿನ ಪರಿಮಾಣವುಳ್ಳ, ಶೂರ್ಪಾಕಾರವಾದ ಕುಂಡವು ಶೂರ್ಪಕುಂಡವೆನಿಸಿಕೊಳ್ಳುವುದು.

೧೧೬–೧೧೭. ಎಲೌ ಸುಂದರಿಯೇ, ಯಾವ ಕುಂಡದಲ್ಲಿ ಸರ್ವದಾ ಧಗಧಗಿಸುತ್ತಿರುವ ಅಗ್ನಿಜ್ವಾಲೆಯಿಂದ ದಗ್ಧರಾದ ಪಾಪಿಗಳು ಕಿರಿಚುತ್ತಿರುವರೋ ಇಪ್ಪತ್ತು ಧನುಸ್ಸಿನಷ್ಟು ಪ್ರಮಾಣವುಳ್ಳ ಆ ಕುಂಡವು ಜ್ವಾಲಾಮುಖವೆನಿಸುವುದು.

೧೧೮. ಎಲ್ಲಿ ಬಿದ್ದಮಾತ್ರದಿಂದಲೇ ಪಾಪಿಯು ಮೂರ್ಛಿತನಾಗಿ ವ್ಯಥೆಗೊಳ್ಳುವನೋ, ಯಾವುದು ಕುದಿಯುತ್ತಿರುವ ಇಟ್ಟಿಗೆಗಳಿಂದ ಕೂಡಿ ವಾಪಿಯ ಅರ್ಧಪ್ರಮಾಣವುಳ್ಳದ್ದೋ ಅದನ್ನು ಜಿಹ್ಮಕುಂಡವೆನ್ನುವರು.

ಧೂಮಾಂಧಕಾರಯುಕ್ತಂ ಚ ಧೂಮಾಂಧೈಃ ಪಾಪಿಭಿರ್ಯುತಂ
ಧನುಶ್ಶತಂ ಶ್ವಾಸಬದ್ಧೈರ್ಧೂಮಾಂಧಂ ಪರಿಕೀರ್ತಿತಂ　　॥ ೧೧೯ ॥

ಪಾತಮಾತ್ರಾದ್ಯತ್ರ ಪಾಪೀ ನಾಗೈಃ ಸಂವೇಷ್ಟಿತೋ ಭವೇತ್ ।
ಧನುಶ್ಶತಂ ನಾಗಪೂರ್ಣಂ ನಾಗವೇಷ್ಟನ ಕುಂಡಕಂ　　॥ ೧೨೦ ॥

ಷಡಶೀತಿಶ್ಚ ಕುಂಡಾನಿ ಮಯೋಕ್ತಾನಿ ನಿಶಾಮಯ ।
ಲಕ್ಷಣಂ ಚಾಪಿ ತೇಷಾಂ ಚ ಕಿಂ ಭೂಯಃ ಶ್ರೋತುಮಿಚ್ಛಸಿ　　॥ ೧೨೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಸಾವಿತ್ರ್ಯುಪಾಖ್ಯಾನೇ ಯಮಲೋಕಸ್ಥ ನರಕಕುಂಡಲಕ್ಷಣ ಪ್ರಕಥನಂ ನಾಮ ತ್ರಯಸ್ತ್ರಿಂಶತ್ತಮೋಽಧ್ಯಾಯಃ

---

೧೧೯. ಹೊಗೆಯೊಳಗೆ ಸಿಲುಕಿ ಉಸಿರುಕಟ್ಟಿರುವ ಪಾಪಿಗಳಿಂದ ಪೂರ್ಣನಾಗಿ ನೂರು ಧನುಸ್ಸಿನ ಪ್ರಮಾಣವುಳ್ಳ ಕುಂಡವನ್ನು ಧೂಮಾಂಧಕುಂಡವೆನ್ನುವರು.

೧೨೦. ಎಲ್ಲಿ ಬಿದ್ದಮಾತ್ರದಿಂದಲೇ ಪಾಪಿಯು ಸರ್ಪಗಳಿಂದ ಪರಿವೇಷ್ಟಿತನಾಗುವನೋ, ನೂರು ಧನುಸ್ಸಿನ ಪ್ರಮಾಣವುಳ್ಳದ್ದಾಗಿಯೂ ಸರ್ಪಪೂರ್ಣವಾಗಿಯೂ ಇರುವ ಆ ಕುಂಡವನ್ನು 'ನಾಗವೇಷ್ಟನ' ವೆನ್ನುವರು.

೧೨೧ ನಾನು ಹೇಳಿದ ಎಂಭತ್ತಾರು ನರಕ ಕುಂಡಗಳನ್ನೂ ಅವುಗಳ ಲಕ್ಷಣಗಳನ್ನೂ ನೀನು ತಿಳಿದಂತಾಯಿತು- ಇನ್ನು ಏನನ್ನು ಕೇಳಬೇಕೆಂದು ನಿನಗೆ ಇಚ್ಛೆಯಿದೆ ? ತಿಳಿಸು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿ ಖಂಡದಲ್ಲಿ ಯಮಲೋಕದಲ್ಲಿರುವ ನರಕಕುಂಡಗಳ ಲಕ್ಷಣಗಳನ್ನು ತಿಳಿಸುವ ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

ಮೂವತ್ತುಮೂರನೆಯ ಅಧ್ಯಾಯದ ಸಾರಾಂಶವು

ಈ ಅಧ್ಯಾಯದಲ್ಲಿ ಎಂಭತ್ತಾರು ನರಕಕುಂಡಗಳ ಭಯಂಕರವಾದ ದೃಶ್ಯವು ಕಣ್ಣಿಗೆ ಕಾಣುವಂತೆ ವರ್ಣಿತವಾಗಿದೆ. ಪ್ರತಿಯೊಂದು ಕುಂಡವೂ ಅತಿ ಭಯಂಕರ ವಾಗಿಯೂ ಅನ್ವರ್ಥವಾಗಿಯೂ ಇದೆ. ಪಾಪಿಗಳು ತಮ್ಮ ತಮ್ಮ ಪಾಪಕ್ಕೆ ಅನುಗುಣವಾದ ನರಕಕುಂಡದಲ್ಲಿ ಬಿದ್ದು ನರಳುವರು. ಮಾನವರು ಇದನ್ನು ಪದೇ ಪದೇ ಅನುಸಂಧಾನ ಮಾಡುವುದರಿಂದ ಪಾಪವಿದೂರರಾಗುವುದರಲ್ಲಿ ಸಂಶಯವಿಲ್ಲ.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಚತುಸ್ತ್ರಿಂಶತ್ತಮೋಽಧ್ಯಾಯಃ ||

ಸಾವಿತ್ರ್ಯುವಾಚ

ಹರಿಭಕ್ತಿಂ ದೇಹಿ ಮಹ್ಯಂ ಸಾರಭೂತಾಂ ಸುದುರ್ಲಭಾಂ |
ತ್ವತ್ತಃ ಸರ್ವಂ ಶ್ರುತಂ ದೇವ ನಾವಶಿಷ್ಟೋಽಧುನಾ ಮಮ || ೧ ||

ಕಿಂಚಿತ್ಕಥಯ ಮೇ ಧರ್ಮಂ ಶ್ರೀಕೃಷ್ಣಗುಣಕೀರ್ತನಂ |
ಪುಂಸಾಂ ಲಕ್ಷೋದ್ಧಾರಬೀಜಂ ನರಕಾರ್ಣವತಾರಕಂ || ೨ ||

ಮೂವತ್ತನಾಲ್ಕನೆಯ ಅಧ್ಯಾಯವು

೧. ಸಾವಿತ್ರಿ—ಎಲೈ ಯಮಧರ್ಮರಾಯನೇ, ನಿನ್ನಿಂದ ಸಮಸ್ತ ಧರ್ಮವನ್ನೂ ತಿಳಿದಂತಾಯಿತು. ಶ್ರುತಿಸಾರವೂ, ಅತಿ ದುರ್ಲಭವೂ ಆದ ಹರಿಭಕ್ತಿಯೊಂದನ್ನು ನನಗೆ ದಯಪಾಲಿಸಿದರೆ ಇನ್ನೇನೂ ನನ್ನ ಅಪೇಕ್ಷೆಯಿರುವುದಿಲ್ಲ.

೨. ಲಕ್ಷಾಂತರ ಪುರುಷರನ್ನು ಉದ್ಧಾರಮಾಡಲು ಬೀಜಸ್ವರೂಪವಾಗಿಯೂ ನರಕವೆಂಬ ಸಮುದ್ರವನ್ನು ದಾಟಿಸತಕ್ಕದ್ದಾಗಿಯೂ ಇರುವ ಶ್ರೀಕೃಷ್ಣಪರಮಾತ್ಮನ ಗುಣಕೀರ್ತನ ರೂಪವಾದ ಧರ್ಮವನ್ನು ನನಗೆ ಉಪದೇಶಿಸು.

ಕಾರಣಂ ಮುಕ್ತಿಕಾರ್ಯಾಣಾಂ ಸರ್ವಾಶುಭನಿವಾರಣಂ ।
ದಾರಣಂ ಕರ್ಮವೃಕ್ಷಾಣಾಂ ಕೃತಪಾಪೌಘಹಾರಕಂ ॥ ೩ ॥

ಮುಕ್ತಯಃ ಕತಿಧಾ ಸಂತಿ ಕಿಂ ವಾ ತಾಸಾಂ ಚ ಲಕ್ಷಣಂ ।
ಹರಿಭಕ್ತೇರ್ಮೂರ್ತಿಭೇದಂ ನಿಷೇಕಸ್ಯಾಪಿ ಲಕ್ಷಣಂ ॥ ೪ ॥

ತತ್ವಜ್ಞಾನವಿಹೀನಾ ಚ ಸ್ತ್ರೀಜಾತಿರ್ವಿಧಿನಿರ್ಮಿತಾ ।
ಕಿಂ ತಜ್ಜ್ಞಾನಂ ಸಾರಭೂತಂ ವದ ವೇದವಿದಾಂ ವರ ॥ ೫ ॥

ಸರ್ವದಾನಂ ಹ್ಯನಶನಂ ತೀರ್ಥಸ್ನಾನಂ ವ್ರತಂ ತಪಃ ।
ಅಜ್ಞಾನೇ ಜ್ಞಾನದಾನಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೬ ॥

---

೩. ಪರಮಾತ್ಮನ ಗುಣಕೀರ್ತನವು, ಮುಕ್ತಿರೂಪವಾದ ಕಾರ್ಯಕ್ಕೆ ಕಾರಣವಾಗಿಯೂ. ಸಕಲ ಅಶುಭಗಳನ್ನು ನಿವಾರಣಮಾಡತಕ್ಕದಾಗಿಯೂ, ಕರ್ಮವೆಂಬ ಮರವನ್ನು ಕತ್ತರಿಸತಕ್ಕದ್ದಾಗಿಯೂ, ಸಮಸ್ತ ಪಾಪಗಳನ್ನು ಅಪಹರಿಸತಕ್ಕದ್ದಾಗಿಯೂ ಇದೆ.

೪. ಮುಕ್ತಿಗಳೆಷ್ಟು ವಿಧ ? ಅವುಗಳ ಲಕ್ಷಣವೇನು ? ಹರಿಭಕ್ತಿಯಲ್ಲಿ ಭಿನ್ನ ಮಾರ್ಗಗಳಾವುವು ? ನಿಷೇಕದ ಲಕ್ಷಣವೇನು ?

೫. ಸ್ತ್ರೀಜಾತಿಗೆ ಪರಮಾತ್ಮ ತತ್ವಜ್ಞಾನವುಂಟಾಗದಂತೆ ಬ್ರಹ್ಮನು ನಿರ್ಮಿಸಿರುವನು. ಆದ್ದರಿಂದ ವೇದಜ್ಞರಲ್ಲಿ ಶ್ರೇಷ್ಠನಾದ ನೀನು ಸಾರಭೂತವಾದ ಆ ಜ್ಞಾನವನ್ನು ಉಪದೇಶಿಸು.

೬. ಸಕಲ ದಾನಗಳನ್ನು ಮಾಡುವುದು, ಅನಶನವ್ರತವನ್ನಾಚರಿಸುವುದು, ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವುದು, ತಪಸ್ಸು ವ್ರತ ಮುಂತಾದವುಗಳನ್ನಾಚರಿಸುವುದು, ಇವೆಲ್ಲವೂ ಅಜ್ಞಾನಿಗಳಿಗೆ ಜ್ಞಾನೋಪದೇಶಮಾಡುವ ಪುಣ್ಯದ ಹದಿನಾರನೆಯ ಒಂದು ಭಾಗದಷ್ಟು ಪುಣ್ಯವನ್ನು ಕೊಡುವುದಿಲ್ಲ.

ಪಿತುಶ್ಶತಗುಣಾ ಮಾತಾ ಗೌರವೇಣಾತಿರಿಚ್ಯತೇ ।
ಮಾತುಃ ಶತಗುಣೈಃ ಪೂಜ್ಯೋ ಜ್ಞಾನದಾತಾ ಗುರುಃ ಪ್ರಭೋ ॥ ೭ ॥

॥ ಯಮ ಉವಾಚ ॥

ಪೂರ್ವಂ ಸರ್ವೋ ವರೋ ದತ್ತೋ ಯಸ್ತೇ ಮನಸಿ ವಾಂಛಿತಃ ।
ಅಧುನಾ ಹರಿಭಕ್ತಿಸ್ತೇ ವತ್ಸೇ ಭವತು ಮದ್ವರಾತ್ ॥ ೮ ॥

ಶ್ರೋತುಮಿಚ್ಛಸಿ ಕಲ್ಯಾಣಿ ಶ್ರೀಕೃಷ್ಣಗುಣಕೀರ್ತನಂ ।
ವಕ್ತೄಣಾಂ ಪ್ರಶ್ನಕರ್ತೄಣಾಂ ಶ್ರೋತೄಣಾಂ ಕುಲತಾರಕಂ ॥ ೯ ॥

ಶೇಷೋ ವಕ್ತ್ರಸಹಸ್ರೇಣ ನ ಹಿ ಯದ್ವಕ್ತುಮೀಶ್ವರಃ ।
ಮೃತ್ಯುಂಜಯೋ ನ ಕ್ಷಮಶ್ಚ ವಕ್ತುಂ ಪಂಚಮುಖೇನ ಚ ॥ ೧೦ ॥

ಧಾತಾ ಚತುರ್ಣಾಂ ವೇದಾನಾಂ ವಿಧಾತಾ ಜಗತಾಮಪಿ ।
ಬ್ರಹ್ಮಾ ಚತುರ್ಮುಖೇನೈವ ನಾಲಂ ವಿಷ್ಣುಶ್ಚ ಸರ್ವವಿತ್ ॥ ೧೧ ॥

---

೭. ತಾಯಿಯು ತಂದೆಗಿಂತ ನೂರರಷ್ಟು ಗೌರವಕ್ಕೆ ಪಾತ್ರಳು. ಅಂಥ ತಾಯಿಗಿಂತಲೂ ಜ್ಞಾನೋಪದೇಶಕನಾದ ಗುರುವು ನೂರುಮಡಿ ಪೂಜ್ಯನೆನಿಸುವನು.

೮. ಯಮ :—ಮೊದಲು ನಿನಗೆ ಅಭಿಲಷಿತವಾದ ಸಕಲ ವರಗಳನ್ನೂ ದಯಪಾಲಿಸಿದೆನು. ಎಲೌ ವತ್ಸೆಯೇ, ಈಗ ಹರಿಭಕ್ತಿರೂಪವಾದ ವರವು ನಿನಗೆ ನನ್ನ ಆಶೀರ್ವಾದದಿಂದ ಸಿದ್ಧಿಸಲಿ.

೯. ಪ್ರಶ್ನೆ ಕೇಳುವವರ, ಉತ್ತರ ಹೇಳುವವರ ಮತ್ತು ಆ ಉತ್ತರವನ್ನು ಕೇಳುವವರ ಕುಲೋದ್ಧಾರಕವಾದ ಶ್ರೀಕೃಷ್ಣಪರಮಾತ್ಮನ ಗುಣಕೀರ್ತನೆಯನ್ನು ನೀನು ಕೇಳ ಬಯಸುವೆಯಲ್ಲವೇ ?

೧೦. ಯಾವ ಪರಮಾತ್ಮನ ದಿವ್ಯಗುಣಗಾನವನ್ನು ಆದಿಶೇಷನು ತನ್ನ ಸಾವಿರ ಬಾಯಿಗಳಿಂದಲೂ, ಮೃತ್ಯುಂಜಯನು ಐದು ಬಾಯಿಗಳಿಂದಲೂ ವರ್ಣಿಸಲಶಕ್ತರು.

೧೧. ಚತುರ್ವೇದಗಳ ಸೃಷ್ಟಿಕರ್ತನೂ, ಜಗತ್ಸ್ರಷ್ಟೃವೂ ಆದ ಬ್ರಹ್ಮನು ತನ್ನ ಚತುರ್ಮುಖಗಳಿಂದಲೂ ವರ್ಣಿಸಲಾರನು. ಸರ್ವಜ್ಞನಾದ ವಿಷ್ಣುವೂ ಅಸಮರ್ಥನು.

ಕಾರ್ತಿಕೇಯಃ ಷಣ್ಮುಖೇನ ನಾಪಿ ವಕ್ತುಮಲಂ ಧ್ರುವಂ ।
ನ ಗಣೇಶಃ ಸಮರ್ಥಶ್ಚ ಯೋಗೀಂದ್ರಾಣಾಂ ಗುರೋರ್ಗುರುಃ ॥ ೧೨ ॥

ಸಾರಭೂತಾಶ್ಚ ಶಾಸ್ತ್ರಾಣಾಂ ವೇದಾಶ್ಚತ್ವಾರ ಏವ ಚ ।
ಕಲಾಮಾತ್ರಂ ಯದ್ಗುಣಾನಾಂ ನ ವಿದಂತಿ ಬುಧಾಶ್ರಯೇ ॥ ೧೩ ॥

ಸರಸ್ವತೀ ಚ ಯತ್ನೇನ ನಾಲಂ ಯದ್ಗುಣವರ್ಣನೇ ।
ಸನತ್ಕುಮಾರೋ ಧರ್ಮಶ್ಚ ಸನಕಶ್ಚ ಸನಾತನಃ ॥ ೧೪ ॥

ಸನಂದಃ ಕಪಿಲೋ ಸೂರ್ಯೋ ಯೇ ಚಾನ್ಯೇ ಬ್ರಹ್ಮಣಃ ಸುತಾಃ ।
ವಿಚಕ್ಷಣಾ ನ ಯದ್ವಕ್ತುಂ ಕೇ ವಾನ್ಯೇ ಜಡಬುದ್ಧಯಃ ॥ ೧೫ ॥

---

೧೨. ಸ್ಕಂದದೇವನು ತನ್ನ ಷಣ್ಮುಖಗಳಿಂದಲೂ, ಪರಮಾತ್ಮನ ಗುಣ ಕೀರ್ತನವನ್ನು ಮಾಡಲಾರನು. ಯೋಗಿಶ್ರೇಷ್ಠರಿಗೂ ಗುರುವೆನಿಸಿದ ಗಣೇಶನೂ ಕೂಡ ಸಮರ್ಥನಾಗುವುದಿಲ್ಲ.

೧೩. ಶಾಸ್ತ್ರಗಳ ಸಾರರೂಪವಾದ ಚತುರ್ವೇದಗಳೂ ಕೂಡ ಆ ಪರಮಾತ್ಮನ ಗುಣಗಳ ಒಂದು ಕಲೆಯನ್ನೂ ಕೂಡ ಅರಿಯವು. ಇನ್ನು ಪಂಡಿತರ ಮಾತೇನು ?

೧೪. ಸರಸ್ವತೀ ದೇವಿಯು ಪ್ರಯತ್ನಪಟ್ಟರೂ ಯಾವ ಪರಮಾತ್ಮನ ಗುಣವನ್ನು ವರ್ಣಿಸಲಾಗದಿರುವಾಗ, ಸನತ್ಕುಮಾರ, ಧರ್ಮ, ಸನಕ, ಸನಾತನಾದಿಗಳು ವರ್ಣಿಸಲು ಸಾಧ್ಯವೇ ?

೧೫. ಸನಂದ, ಕಪಿಲ, ಸೂರ್ಯ ಮುಂತಾದವರೂ, ಬ್ರಹ್ಮನ ಇತರ ಪುತ್ರರೂ, ವಿಚಕ್ಷಣರಾದರೂ ಆ ಪರಮಾತ್ಮನ ಗುಣವರ್ಣನೆಯಲ್ಲಿ ಅಸಮರ್ಥರಾಗಿರುವಾಗ ಇತರ ಜಡಬುದ್ಧಿಗಳ ಗತಿಯೇನು ?

ನ ಯದ್ವಕ್ತುಂ ಕ್ಷಮಾಃ ಸಿದ್ಧಾ ಮುನೀಂದ್ರಾ ಯೋಗಿನಸ್ತಥಾ ।
ಕೇ ವಾನ್ಯೇ ಚ ವಯಂ ಕೇ ವಾ ಭಗವದ್ಗುಣವರ್ಣನೇ ॥ ೧೬ ॥

ಧ್ಯಾಯಂತಿ ಯತ್ಪದಾಂಭೋಜಂ ಬ್ರಹ್ಮವಿಷ್ಣುಶಿವಾದಯಃ ।
ಅತಿಸಾಧ್ಯಂ ಸ್ವಭಕ್ತಾನಾಂ ತದನ್ಯೇಷಾಂ ಸುದುರ್ಲಭಂ ॥ ೧೭ ॥

ಕಶ್ಚಿತ್ಕಿಂಚಿದ್ವಿಜಾನಾತಿ ತದ್ಗುಣೋತ್ಕೀರ್ತನಂ ಮಹತ್ ।
ಅತಿರಿಕ್ತಂ ವಿಜಾನಾತಿ ಬ್ರಹ್ಮಾ ಬ್ರಹ್ಮಸುತಾದಯಃ ॥ ೧೮ ॥

ತತೋಽತಿರಿಕ್ತಂ ಜಾನಾತಿ ಗಣೇಶೋ ಜ್ಞಾನಿನಾಂ ಗುರುಃ ।
ಸರ್ವಾತಿರಿಕ್ತಂ ಜಾನಾತಿ ಸರ್ವಜ್ಞಃ ಶಂಭುರೇವ ಚ ॥ ೧೯ ॥

ತಸ್ಮೈ ದತ್ತಂ ಪುರಾ ಜ್ಞಾನಂ ಕೃಷ್ಣೇನ ಪರಮಾತ್ಮನಾ ।
ಅತೀವ ನಿರ್ಜನೇ ರಮ್ಯೇ ಗೋಲೋಕೇ ರಾಸಮಂಡಲೇ ॥ ೨೦ ॥

---

೧೬. ಸಿದ್ಧರೂ, ಮುನಿಶ್ರೇಷ್ಠರೂ ಮತ್ತು ಯೋಗಿಗಳೂ ಭಗವಂತನ ಗುಣವನ್ನು ವರ್ಣಿಸಲಾಗದಿರುವಾಗ ನಾವಾಗಲೀ, ಇತರರಾಗಲಿ, ಭಗವದ್ವರ್ಣನೆಯಲ್ಲಿ ಎಷ್ಟರವರು ?

೧೭. ಬ್ರಹ್ಮವಿಷ್ಣುಶಿವಾದಿ ದೇವತೆಗಳು ಯಾವ ಪರಮಾತ್ಮನ ಪಾದಕಮಲಗಳನ್ನು ಧ್ಯಾನಮಾಡುವರೋ ಆ ಪರಮಾತ್ಮನು ಭಕ್ತರಿಗೆ ಮಾತ್ರ ಸಾಧ್ಯನಾಗಿಯೂ ಇತರರಿಗೆ ದುರ್ಲಭನಾಗಿಯೂ ಇರುವನು

೧೮. ಒಬ್ಬ ಮಹಾತ್ಮನು ಪರಮಾತ್ಮನ ಅಲ್ಪಸ್ವಲ್ಪ ಗುಣವರ್ಣನೆಯನ್ನು ಮಾಡಬಲ್ಲನು. ಬ್ರಹ್ಮನೂ ಬ್ರಹ್ಮಪುತ್ರಾದಿಗಳೂ ಇನ್ನೂ ಹೆಚ್ಚಿಗೆ ಅರಿತಿರುವರು.

೧೯. ಜ್ಞಾನಿಗಳಿಗೆ ಗುರುವಾದ ಗಣೇಶನು ಅದಕ್ಕಿಂತಲೂ ಹೆಚ್ಚಿಗೆ ತಿಳಿದಿರುವನು. ಸರ್ವಜ್ಞನಾದ ಶಂಭುವು ಎಲ್ಲರಿಗಿಂತಲೂ ಅತಿಶಯವಾಗಿ ಬಲ್ಲನು.

೨೦. ಆ ಶಂಭುವಿಗೆ ಕೃಷ್ಣಪರಮಾತ್ಮನು ನಿರ್ಜನವೂ ರಮ್ಯವೂ ಆದ ಗೋಲೋಕದ ರಾಸಮಂಡಲದಲ್ಲಿ ಹಿಂದೆ ದಿವ್ಯಜ್ಞಾನವನ್ನು ಬೋಧಿಸಿದನು.

ತತ್ರೈವ ಕಥಿತಂ ಕಿಂಚಿದ್ಯದ್ಗುಣೋತ್ಕೀರ್ತನಂ ಪುನಃ ।
ಧರ್ಮಾಯ ಕಥಯಾಮಾಸ ಶಿವಲೋಕೇ ಶಿವಃ ಸ್ವಯಂ ॥ ೨೧ ॥

ಧರ್ಮಸ್ತತ್ಕಥಯಾಮಾಸ ಪುಷ್ಕರೇ ಭಾಸ್ಕರಾಯ ಚ ।
ಪಿತಾ ಮಮ ಯಮಾರಾಧ್ಯ ಮಾಂ ಪ್ರಾಪ ತಪಸಾ ಸತಿ ॥ ೨೨ ॥

ಪೂರ್ವಂ ಸ್ವವಿಷಯಂ ಚಾಹಂ ನ ಗೃಹ್ಣಾಮಿ ಪ್ರಯತ್ನತಃ ।
ವೈರಾಗ್ಯಯುಕ್ತಸ್ತಪಸೇ ಗಂತುಮಿಚ್ಛಾಮಿ ಸುವ್ರತೇ ॥ ೨೩ ॥

ತದಾ ಮಾಂ ಕಥಯಾಮಾಸ ಪಿತಾ ತದ್ಗುಣಕೀರ್ತನಂ ।
ಯಥಾಗಮಂ ತದ್ವದಾಮಿ ನಿಬೋಧಾತೀವ ದುರ್ಗಮಂ ॥ ೨೪ ॥

ತದ್ಗುಣಂ ಸ ನ ಜಾನಾತಿ ತದನ್ಯಸ್ಯ ಚ ಕಾ ಕಥಾ ।
ಯಥಾಕಾಶಂ ನ ಜಾನಾತಿ ಸ್ವಾಂತಮೇವ ವರಾನನೇ ॥ ೨೫ ॥

---

೨೧. ಆ ಸಂದರ್ಭದಲ್ಲಿಯೇ ಪರಮಾತ್ಮನ ದಿವ್ಯಗುಣೋತ್ಕೀರ್ತನವನ್ನೂ ಉಪದೇಶಿಸಿದನು. ಸ್ವಯಂ ಶಂಭುವೂ ಕೂಡ ಶಿವಲೋಕದಲ್ಲಿ ಧರ್ಮದೇವನಿಗೆ ಬೋಧಿಸಿದನು.

೨೨. ಧರ್ಮದೇವನು ಪುಷ್ಕರಕ್ಷೇತ್ರದಲ್ಲಿ ಸೂರ್ಯನಿಗೆ ಉಪದೇಶಿಸಿದನು. ಎಲೌ ಪತಿವ್ರತೆಯೇ, ಯಾವ ಸೂರ್ಯನನ್ನು ಆರಾಧಿಸಿಯೇ ನನ್ನ ತಂದೆಯು ನನ್ನನ್ನು ಪಡೆದುದು.

೨೩. ಎಲೌ ವ್ರತಪರಳೇ, ಮೊದಲು ನಾನು ನನ್ನ ಕರ್ತವ್ಯದಲ್ಲಿ ಪರಾಙ್ಮುಖ ನಾಗಿದ್ದೆನು. ಕೇವಲ ವೈರಾಗ್ಯದಿಂದ ಕೂಡಿ ತಪಸ್ಸಿಗೆ ಹೋಗಲು ಇಚ್ಛಿಸುತ್ತಿದ್ದೆನು.

೨೪. ಆಗ ನನ್ನ ತಂದೆಯು ನನ್ನನ್ನು ಕುರಿತು ಆ ಪರಮಾತ್ಮನ ಗುಣ ಕೀರ್ತನೆಯನ್ನು ಬೋಧಿಸಿದನು. ಅತಿ ದುರ್ಗಮವಾದ ಆ ಗುಣೋತ್ಕೀರ್ತನವನ್ನು ಶಾಸ್ತ್ರೋಕ್ತವಾಗಿ ಹೇಳುವೆನು ಕೇಳು.

೨೫. ಆಕಾಶವು ತನ್ನ ಪರಿಮಿತಿಯನ್ನು ಅರಿಯದಿರುವಂತೆ ಆ ಪರಮಾತ್ಮನೇ ತನ್ನ ಗುಣಗಣಗಳನ್ನು ಅರಿಯದಿರುವಾಗ ಇತರರ ಪಾಡೇನು ?

ಸರ್ವಾಂತರಾತ್ಮಾ ಭಗವಾನ್ಸರ್ವಕಾರಣಕಾರಣಂ ।
ಸರ್ವೇಶ್ವರಶ್ಚ ಸರ್ವಾದ್ಯಃ ಸರ್ವವಿತ್ಸರ್ವರೂಪಧೃಕ್ || ೨೬ ||

ನಿತ್ಯರೂಪೀ ನಿತ್ಯದೇಹೀ ನಿತ್ಯಾನಂದೋ ನಿರಾಕೃತಿಃ ।
ನಿರಂಕುಶಶ್ಚ ನಿಶ್ಶಂಕೋ ನಿರ್ಗುಣಶ್ಚ ನಿರಾಶ್ರಯಃ || ೨೭ ||

ನಿರ್ಲಿಪ್ತಃ ಸರ್ವಸಾಕ್ಷೀ ಚ ಸರ್ವಾಧಾರಃ ಪರಾತ್ಪರಃ ।
ಪ್ರಕೃತಿಸ್ತದ್ವಿಕಾರಾ ಚ ಪ್ರಾಕೃತಾಸ್ತದ್ವಿಕಾರಜಾಃ || ೨೮ ||

ಸ್ವಯಂ ಪುಮಾಂಶ್ಚ ಪ್ರಕೃತಿಃ ಸ್ವಯಂ ಚ ಪ್ರಕೃತೇಃ ಪರಃ ।
ರೂಪಂ ವಿಧತ್ತೇಽರೂಪಶ್ಚ ಭಕ್ತಾನುಗ್ರಹಹೇತವೇ || ೨೯ ||

ಅತೀವ ಕಮನೀಯಂ ಚ ಸುಂದರಂ ಸುಮನೋಹರಂ ।
ನವೀನನೀರದಶ್ಯಾಮಂ ಕಿಶೋರಂ ಗೋಪವೇಷಕಂ || ೩೦ ||

---

೨೬. ಭಗವಂತನು ಸರ್ವಾಂತರ್ಯಾಮಿಯೂ, ಕಾರಣಗಳಿಗೆಲ್ಲ ಆದಿಕಾರಣನೂ ಸರ್ವೇಶ್ವರನೂ, ಅನಾದಿಯೂ, ಸರ್ವಜ್ಞನೂ, ಸರ್ವರೂಪಿಯೂ ಆಗಿರುವನು.

೨೭. ನಿತ್ಯವಾದ ರೂಪವುಳ್ಳವನೂ. ನಿತ್ಯದೇಹವುಳ್ಳವನೂ ಆಗಿದ್ದರೂ ನಿತ್ಯಾನಂದನೂ ನಿರಾಕೃತಿಯೂ ಆಗಿರುವನು ನಿರಂಕುಶನೂ ನಿಃಶಂಕನೂ ಆದ ಆ ಪರಮಾತ್ಮನು ನಿರ್ಗುಣನೂ ನಿರಾಶ್ರಯನೂ ಆಗಿದ್ದಾನೆ.

೨೮. ಆ ಪರಮಾತ್ಮನು ಯಾವ ಕರ್ಮಗಳ ಲೇಪವೂ ಇಲ್ಲದೆ ಸಾಕ್ಷಿಮಾತ್ರನಾಗಿರುವನು. ಸರ್ವಾಧಾರನೂ ಪರಾತ್ಪರನೂ ಆದ ಆ ಪರಮಾತ್ಮನ ವಿಕಾರರೂಪವೇ ಪ್ರಕೃತಿ ಎನಿಸುವುದು. ಅದರ ವಿಕಾರದಿಂದ ಹುಟ್ಟಿದವರೆಲ್ಲ ಪ್ರಾಕೃತರೆನಿಸುವರು.

೨೯. ಪುರುಷನು ಸ್ವಯಂ ಪ್ರಕೃತಿಯಾಗಿಯೂ, ಪ್ರಕೃತಿಗೆ ಪರನಾಗಿಯೂ, ರೂಪರಹಿತನಾಗಿಯೂ, ಭಕ್ತಾನುಗ್ರಹಕ್ಕಾಗಿ ಸುರೂಪನಾಗಿಯೂ ಇರುವನು.

೩೦. ಆ ಪರಮಾತ್ಮನ ಸಾಕಾರರೂಪವು ಅತ್ಯಂತಸುಂದರವೂ, ಮನೋಹರವೂ ಆಗಿರುವುದು. ನವಮೇಘದಂತೆ ಶ್ಯಾಮಲಕಾಂತಿಯಿಂದಲೂ ಗೋಪಕಿಶೋರವೇಷದಿಂದಲೂ ಅವನು ರಮ್ಯವಾಗಿರುವನು.

ಕಂದರ್ಪಕೋಟಿಲಾವಣ್ಯಲೀಲಾಧಾಮಮನೋಹರಂ ।
ಶರನ್ಮಧ್ಯಾಹ್ನಪದ್ಮಾನಾಂ ಶೋಭಾಮೋಷಕಲೋಚನಂ ॥ ೩೧ ॥

ಶರತ್ಪಾರ್ವಣಕೋಟೀಂದುಶೋಭಾಸಂಶೋಭಿತಾನನಂ ।
ಅಮೂಲ್ಯರತ್ನಖಚಿತಂ ರತ್ನಾಭರಣಭೂಷಿತಂ ॥ ೩೨ ॥

ಸಸ್ಮಿತಂ ಶೋಭಿತಂ ಶಶ್ವದಮೂಲ್ಯಾಪೀತವಾಸಸಾ ।
ಪರಂ ಬ್ರಹ್ಮಸ್ವರೂಪಂ ಚ ಜ್ವಲಂತಂ ಬ್ರಹ್ಮತೇಜಸಾ ॥ ೩೩ ॥

ಸುಖದೃಶ್ಯಂ ಚ ಶಾಂತಂ ಚ ರಾಧಾಕಾಂತಮನಂತಕಂ ।
ಗೋಪೀಭಿರ್ವೀಕ್ಷ್ಯಮಾಣಂ ಚ ಸಸ್ಮಿತಾಭಿಃ ಸಮಂತತಃ ॥ ೩೪ ॥

ರಾಸಮಂಡಲಮಧ್ಯಸ್ಥಂ ರತ್ನಸಿಂಹಾಸನಸ್ಥಿತಂ ।
ವಂಶೀಂ ಕ್ವಣಂತಂ ದ್ವಿಭುಜಂ ವನಮಾಲಾವಿಭೂಷಿತಂ ॥ ೩೫ ॥

---

೩೧. ಕೋಟಿಮನ್ಮಥರ ದಿವ್ಯಸೌಂದರ್ಯಕ್ಕೆ ಆಕರನಾದ ಆ ಪರಮಾತ್ಮನು ಶರದೃತುವಿನ ಮಧ್ಯಾಹ್ನಕಾಲದ ಪದ್ಮದ ಕಾಂತಿಯನ್ನು ಅಲ್ಲಗಳೆಯುವ ಕಣ್ಣುಗಳಿಂದ ಮನೋಹರನಾಗಿರುವನು.

೩೨. ಶರತ್ಪೂರ್ಣಿಮೆಯ ಕೋಟಿಚಂದ್ರರ ಕಾಂತಿಯಿಂದ ಮೆರೆಯುವ ಮುಖದಿಂದ ಶೋಭಿತನಾದ ಅವನು ಅಮೂಲ್ಯರತ್ನಖಚಿತವಾದ ರತ್ನಾಭರಣಗಳಿಂದ ಭೂಷಿತನಾಗಿರುವನು.

೩೩. ಸ್ಮಿತವದನನಾದ ಪರಮಾತ್ಮನು ಅಮೂಲ್ಯವಾದ ಪೀತಾಂಬರದಿಂದ ಶೋಭಿತನಾಗಿಯೂ, ಬ್ರಹ್ಮತೇಜಸ್ಸಿನಿಂದ ಉಜ್ವಲನಾಗಿಯೂ ಇದ್ದು ಪರಬ್ರಹ್ಮನೆನಿಸುವನು.

೩೪. ಸುತ್ತಲೂ ಸ್ಮಿತಮುಖಿಯರಾದ ಗೋಪಿಯರಿಂದ ಪರಿವೃತನಾಗಿ ಸುಖದೃಶ್ಯನೂ, ಶಾಂತನೂ ಆದ ಆ ರಾಧಾರಮಣನು ನಾಶರಹಿತನಾಗಿರುವನು.

೩೫. ಭುಜದ್ವಯಶೋಭಿತನಾದ ಆ ಪರಮಾತ್ಮನು, ವನಮಾಲಾಧರನಾಗಿ, ಕೈಯಲ್ಲಿ ಕೊಳಲನ್ನು ಹಿಡಿದು ಬಾರಿಸುತ್ತಾ, ರಾಸಮಂಡಲದ ಮಧ್ಯದಲ್ಲಿರುವ ರತ್ನಸಿಂಹಾಸನದಲ್ಲಿ ಮಂಡಿಸಿರುವನು.

ಕೌಸ್ತುಭೇನ ಮಣೀಂದ್ರೇಣ ಸುಂದರಂ ವಕ್ಷಸೋಜ್ಜ್ವಲಂ ।
ಕುಂಕುಮಾಗರುಕಸ್ತೂರೀಚಂದನಾರ್ಚಿತವಿಗ್ರಹಂ　　|| ೩೬ ||

ಚಾರುಚಮ್ಪಕಮಾಲಾಬ್ಜಮಾಲತೀಮಾಲ್ಯಮಂಡಿತಂ ।
ಚಾರುಚಂಪಕಶೋಭಾಢ್ಯಚೂಡಾವಕ್ರಮರಾಜಿತಂ　　|| ೩೭ ||

ಧ್ಯಾಯಂತಿ ಚೈವಂ ಭೂತಂ ವೈ ಭಕ್ತಾ ಭಕ್ತಿಪರಿಪ್ಲುತಾಃ ।
ಯದ್ಭಯಾಜ್ಜಗತಾಂ ಧಾತಾ ವಿಧತ್ತೇಽಸೃಷ್ಟಿಮೇವ ಚ　　|| ೩೮ ||

ಕರೋತಿ ಲೇಖನಂ ಕರ್ಮಾನುರೂಪಂ ಸರ್ವದೇಹಿನಾಂ ।
ತಪಸಾಂ ಫಲದಾತಾ ಚ ಕರ್ಮಣಾಂ ಚ ಯದಾಜ್ಞಯಾ　　|| ೩೯ ||

ವಿಷ್ಣುಃ ಪಾತಾ ಚ ಸರ್ವೇಷಾಂ ಯದ್ಭಯಾತ್ಪಾತಿ ಸಂತತಂ ।
ಕಾಲಾಗ್ನಿರುದ್ರಃ ಸಂಹರ್ತಾ ಸರ್ವವಿಶ್ವೇಷು ಯದ್ಭಯಾತ್　　|| ೪೦ ||

೩೬–೩೭. ಶ್ರೇಷ್ಠವಾದ ಕೌಸ್ತುಭಮಣಿಯಿಂದ ಭೂಷಿತವಾದ ವಕ್ಷಃಸ್ಥಲದಿಂದ ಉಜ್ವಲನಾಗಿಯೂ, ಕುಂಕುಮ, ಅಗುರು, ಕಸ್ತೂರಿ, ಚಂದನ ಮುಂತಾದವುಗಳಿಂದ ಲಿಪ್ತಶರೀರನಾಗಿಯೂ, ಇರುವ ಆ ಪರಮಾತ್ಮನು ಸುಂದರವಾದ ಸಂಪಿಗೆ, ತಾವರೆ, ಜಾಜಿ ಮುಂತಾದ ಪುಷ್ಪಹಾರಗಳಿಂದ ಮಂಡಿತನಾಗಿರುವನು.

೩೮. ಈ ರೀತಿಯಾದ ಪರಮಾತ್ಮನನ್ನು ಭಕ್ತರು ಭಕ್ತಿಪೂರ್ವಕವಾಗಿ ಧ್ಯಾನಿಸುವರು. ಆತನ ಭಯದಿಂದಲೇ ಚತುರ್ಮುಖಬ್ರಹ್ಮನು ಸೃಷ್ಟಿಕಾರ್ಯದಲ್ಲಿ ತೊಡಗುವನು.

೩೯. ಅಲ್ಲದೆ ಸಮಸ್ತ ಪ್ರಾಣಿಗಳ ಕರ್ಮಾನುಗುಣವಾಗಿ ಅವರವರ ಫಲವನ್ನು ಹಣೆಯಲ್ಲಿ ಬರೆದು ಪರಮಾತ್ಮನ ಆಜ್ಞೆಯಂತೆ ಕರ್ಮ ಮತ್ತು ತಪಸ್ಸಿನ ಫಲವನ್ನು ಕೊಡುವನು.

೪೦. ಜಗತ್ಪಾಲಕನಾದ ವಿಷ್ಣುವೂ ಕೂಡ ಪರಮಾತ್ಮನ ಭಯದಿಂದಲೇ ಜಗತ್ತನ್ನು ಪಾಲಿಸುವನು. ಕಾಲಾಗ್ನಿ ರುದ್ರನೂ ಕೂಡ ಅವನ ಭಯದಿಂದಲೇ ಜಗತ್ಸಂಹಾರಕಾರ್ಯದಲ್ಲಿ ತೊಡಗುವನು.

ಶಿವೋ ಮೃತ್ಯುಂಜಯಶ್ಚೈವ ಜ್ಞಾನಿನಾಂ ಚ ಗುರೋರ್ಗುರುಃ ।
ಯಜ್ಜ್ಞಾನದಾನಾತ್ಸಿದ್ಧೇಶೋ ಯೋಗೀಶಃ ಸರ್ವವಿತ್ಸ್ವಯಂ ॥ ೪೧ ॥

ಪರಮಾನಂದಯುಕ್ತಶ್ಚ ಭಕ್ತಿವೈರಾಗ್ಯಸಂಯುತಃ ।
ಯತ್ಪ್ರಸಾದಾದ್ವಾತಿ ವಾತಃ ಪ್ರವರಃ ಶೀಘ್ರಗಾಮಿನಾಂ ॥ ೪೨ ॥

ತಪನಶ್ಚ ಪ್ರತಪತಿ ಯದ್ಭಯಾತ್ಸಂತತಂ ಸತಿ ।
ಯದಾಜ್ಞಯಾ ವರ್ಷತೀಂದ್ರೋ ಮೃತ್ಯುಶ್ಚರತಿ ಜಂತುಷು ॥ ೪೩ ॥

ಯದಾಜ್ಞಯಾ ದಹೇದ್ವಹ್ನಿರ್ಜಲಮೇವ ಸುಶೀತಲಂ ।
ದಿಶೋ ರಕ್ಷಂತಿ ದಿಕ್ಪಾಲಾಃ ಮಹಾಭೀತಾ ಯದಾಜ್ಞಯಾ ॥ ೪೪ ॥

ಭ್ರಮಂತಿ ರಾಶಿಚಕ್ರಾಣಿ ಗ್ರಹಾ ವೈ ಯದ್ಭಯೇನ ಚ ।
ಭಯಾತ್ಫಲಂತಿ ವೃಕ್ಷಾಶ್ಚ ಪುಷ್ಪಂತ್ಯಪಿ ಚ ಯದ್ಭಯಾತ್ ॥ ೪೫ ॥

---

೪೧. ಮೃತ್ಯುಂಜಯನಾದ ಶಿವನೂ ಕೂಡ ಯಾವ ಪರಮಾತ್ಮನಿಂದ ದಿವ್ಯ ಜ್ಞಾನವನ್ನು ಪಡೆದು ಸಿದ್ಧೇಶ್ವರನೂ, ಸರ್ವಜ್ಞನೂ ಜ್ಞಾನಿಗಳಿಗೆಲ್ಲ ಗುರುವೂ ಎನಿಸಿ ಕೊಂಡಿರುವನು.

೪೨. ಶೀಘ್ರಗಾಮಿಗಳಲ್ಲಿ ಶ್ರೇಷ್ಠನಾದ ವಾಯುದೇವನೂ ಕೂಡ ಪರಮಾತ್ಮನ ಅನುಗ್ರಹದಿಂದ ಪರಮಾನಂದಭರಿತನೂ ಭಕ್ತಿವೈರಾಗ್ಯಯುತನೂ ಆಗಿ ವಿಶ್ವವ್ಯಾಪಿಯಾಗಿರುವನು.

೪೩. ಎಲೌ ಸತೀದೇವಿಯೇ, ಸೂರ್ಯನು ಯಾವಾಗಲೂ ಲೋಕವನ್ನು ಬೆಳಗುವುದು, ದೇವೇಂದ್ರನು ಮಳೆಗರೆಯುವುದು, ಮೃತ್ಯುವು ಪ್ರಾಣಿಗಳಿಗೆ ಸನ್ನಿಹಿತನಾಗಿರುವುದೂ ಪರಮಾತ್ಮನ ಭಯದಿಂದಲೇ.

೪೪. ಅಗ್ನಿಯು ಸುಡುವುದೂ, ನೀರು ಶೀತಲವಾಗಿರುವುದೂ, ದಿಕ್ಪಾಲಕರು ತಮ್ಮ ದಿಕ್ಕುಗಳನ್ನು ರಕ್ಷಿಸುವುದೂ ಪರಮಾತ್ಮನ ಭಯದಿಂದಲೇ.

೪೫. ದ್ವಾದಶರಾಶಿಚಕ್ರಗಳೂ ನವಗ್ರಹಗಳೂ ಪರಮಾತ್ಮನ ಭಯದಿಂದಲೇ ಚಲಿಸುವುವು. ಮರಗಿಡಗಳು ಹೂಹಣ್ಣುಗಳಿಂದ ಪರಿಪೂರ್ಣವಾಗುವುದೂ ಪರಮಾತ್ಮನ ಭಯದಿಂದಲೇ.

ಭಯೋತ್ಫಲಾನಿ ಪಕ್ವಾನಿ ನಿಷ್ಫಲಾಸ್ತರವೋ ಭಯಾತ್ ।
ಯದಾಜ್ಞಯಾ ಸ್ಥಲಸ್ಥಾಶ್ಚ ನ ಜೀವಂತಿ ಜಲೇಷು ಚ । ॥ ೪೬ ॥

ತಥಾ ಸ್ಥಲೇ ಜಲಸ್ಥಾಶ್ಚ ನ ಜೀವಂತಿ ಯದಾಜ್ಞಯಾ ।
ಅಹಂ ನಿಯಮಕರ್ತಾ ಚ ಧರ್ಮಾಧರ್ಮೇ ಚ ಯದ್ಭಯಾತ್ ॥ ೪೭ ॥

ಕಾಲಶ್ಚ ಕಲಯೇತ್ಸರ್ವಂ ಭ್ರಮತ್ಯೇವ ಯದಾಜ್ಞಯಾ ।
ಅಕಾಲೇ ನ ಹರೇತ್ಕಾಲೋ ಮೃತ್ಯುರ್ಯ್ಯದ್ಭಯೇನ ಚ ॥ ೪೮ ॥

ಜ್ವಲದಗ್ನೌ ಪತಂತಂ ಚ ಗಭೀರೇ ಚ ಜಲಾರ್ಣವೇ ।
ವೃಕ್ಷಾಗ್ರಾತ್ತೀಕ್ಷ್ಣಖಡ್ಗೇ ಚ ಸರ್ಪಾದಿನಾಂ ಮುಖೇಷು ಚ ॥ ೪೯ ॥

ನಾನಾ ಶಸ್ತ್ರಾಸ್ತ್ರವಿದ್ಧಂ ಚ ರಣೇಷು ವಿಷಮೇಷು ಚ ।
ಪುಷ್ಪಚಂದನತಲ್ಪೇಷು ಬಂಧುವರ್ಗೈಶ್ಚ ರಕ್ಷಿತಂ ೫೦ ॥

ಶಯಾನಂ ತಂತ್ರಮಂತ್ರೈಶ್ಚ ಕಾಲೇ ಕಾಲೋ ಹರೇದ್ಭಯಾತ್ ।

---

೪೬. ಕಾಯಿಗಳು ಹಣ್ಣಾಗುವುದೂ, ಕೆಲವು ಮರಗಳು ಫಲಿತವಾಗದಿರುವುದೂ, ನೆಲದ ಮೇಲೆ ವಾಸಿಸುವ ಪ್ರಾಣಿಗಳು ನೀರಿನಲ್ಲಿ ಜೀವಿಸದಿರುವುದೂ ಪರಮಾತ್ಮನ ಭಯದಿಂದಲೇ.

೪೭. ನೀರಿನ ಪ್ರಾಣಿಗಳು, ನೆಲದ ಮೇಲೆ ಜೀವಿಸಲಾಗದಿರುವುದೂ. ಪರಮಾತ್ಮನ ಆಜ್ಞೆಯಿಂದಲೇ. ನಾನೂ ಕೂಡ ಪರಮಾತ್ಮನ ಭಯದಿಂದ ಧರ್ಮಾಧರ್ಮಗಳ ನಿಯಾಮಕನಾಗಿರುವೆನು.

೪೮. ಕಾಲಪುರುಷನೂ ಕೂಡ ಪರಮಾತ್ಮನ ಆಜ್ಞೆಯಂತೆ ಕಾಲಗಣನೆಯನ್ನು ಮಾಡುತ್ತಾ ಭ್ರಮಿಸುತ್ತಿರುವನು. ಮೃತ್ಯುವು ಕಾಲ ಒದಗದೆ ಯಾರನ್ನು ಹರಣಮಾಡದಿರುವುದೂ ಪರಮಾತ್ಮನ ಆಜ್ಞಾನುಗುಣವಾಗಿಯೇ.

೪೯–೫೦. ಉರಿಯುವ ಬೆಂಕಿಯಲ್ಲಿ ಬೀಳುವವನನ್ನೂ, ಅತಿ ಆಳವಾದ ಜಲಾಶಯದಲ್ಲಿ ಬೀಳುವವನನ್ನೂ, ಮರದ ತುದಿಯಿಂದ ಬೀಳುವವನನ್ನೂ, ಹರಿತವಾದ ಕತ್ತಿಯ ಅಲುಗಿನಲ್ಲೂ, ಕ್ರೂರಸರ್ಪದ ಮುಖದಲ್ಲೂ ಬೀಳುವವನನ್ನೂ, ವಿಷಮವಾದ ಯುದ್ಧಾಂಕಣದಲ್ಲಿ ವಿವಿಧ ಶಸ್ತ್ರಾಸ್ತ್ರಗಳಿಂದ ವಿದ್ಧನಾದವನನ್ನೂ, ಬಂಧುಗಳ ಸಮೂಹದಿಂದ ಪಾಲಿತನಾಗಿ ಪುಷ್ಪ ಚಂದನಗಳಿಂದಲಂಕೃತವಾದ ಹಾಸಿಗೆಯಲ್ಲಿ ಮಲಗಿರುವವನನ್ನೂ, ಮಂತ್ರತಂತ್ರಗಳಿಂದ ಆತ್ಮರಕ್ಷಣೆಗೆ ಪ್ರಯತ್ನ ಮಾಡುತ್ತಿರುವವನನ್ನೂ ಮೃತ್ಯುವು ಅಪಹರಿಸುವುದೂ ಪರಮಾತ್ಮನ ಭಯದಿಂದಲೇ.

ಧತ್ತೇ ವಾಯುಸ್ತೋಯರಾಶಿಂ ತೋಯಂ ಕೂರ್ಮಂ ಯದಾಜ್ಞಯಾ ||

ಕೂರ್ಮೋಽನಂತಂ ಸ ಚ ಕ್ಷೋಣೀಂ ಸಮುದ್ರಾನ್ ಸಪ್ತಪರ್ವತಾನ್ |
ಸರ್ವಾಂಶ್ಚೈವ ಕ್ಷಮಾರೂಪೋ ನಾನಾರೂಪಂ ಬಿಭರ್ತಿ ಸಃ || ೫೨ ||

ಯತಃ ಸರ್ವಾಣಿ ಭೂತಾನಿ ಲೀಯಂತೇಽನ್ತೇ ಚ ತತ್ರ ವೈ |
ಇಂದ್ರಾಯುಶ್ಚೈವ ದಿವ್ಯಾನಾಂ ಯುಗಾನಾಮೇಕಸಪ್ತತಿಃ || ೫೩ ||

ಅಷ್ಟಾವಿಂಶಚ್ಛಕ್ರಪಾತೇ ಬ್ರಹ್ಮಣಸ್ಸ್ಯಾದಹರ್ನಿಶಂ |
ಷಷ್ಟ್ಯಧಿಕೇ ಪಂಚಶತೇ ಸಹಸ್ರೇ ಪಂಚವಿಂಶತೌ || ೫೪ ||

ಯುಗೇ ನರಾಣಾಂ ಶಕ್ರಾಯುರೇವಂ ಸಂಖ್ಯಾವಿದೋ ವಿದುಃ |
ಏವಂ ತ್ರಿಂಶದ್ದಿನೈರ್ಮಾಸೋ ದ್ವಾಭ್ಯಾಂ ತಾಭ್ಯಾಮೃತುಃ ಸ್ಮೃತಃ || ೫೫ ||

೫೧–೫೨. ವಾಯುದೇವನು ಜಲರಾಶಿಯನ್ನೂ, ಜಲವು ಆಮೆಯನ್ನೂ, ಆಮೆಯು ಅನಂತನನ್ನೂ, ಅನಂತನು ಭೂಮಿಯನ್ನೂ, ಭೂಮಿಯು ಸಪ್ತ ಸಮುದ್ರಗಳನ್ನೂ ಸಪ್ತ ಪರ್ವತಗಳನ್ನೂ, ಕ್ಷಮಾರೂಪದಿಂದ, ಪರಮಾತ್ಮನ ಆಜ್ಞಾನುಸಾರ ವಹಿಸಿರುವರು.

೫೩. ಸಮಸ್ತ ಪ್ರಾಣಿಗಳೂ ಕೊನೆಯಲ್ಲಿ ಪರಮಾತ್ಮನಲ್ಲಿಯೇ ಲಯ ಹೊಂದುವುವು. ಎಪ್ಪತ್ತೊಂದು ದಿವ್ಯ ಯುಗಗಳು ಕಳೆದರೆ ಇಂದ್ರನ ಜೀವಿತ ಕಾಲವು ಮುಗಿಯುವುದು.

೫೪–೫೫. ಈ ರೀತಿಯಾಗಿ ಇಪ್ಪತ್ತೆಂಟು ಇಂದ್ರರು ಅಳಿದರೆ ಬ್ರಹ್ಮನಿಗೆ ಒಂದು ಹಗಲೂ ರಾತ್ರಿಯೂ ಆಗುವುದು. ಮನುಷ್ಯರಿಗೆ ಇಪ್ಪತ್ತೈದುಸಾವಿರದ ಐನೂರ ಅರವತ್ತು ವರ್ಷಗಳು ಕಳೆದರೆ ಇಂದ್ರನ ಆಯುಃ ಪರಿಮಿತಿ ಎಂದು ಜ್ಯೋತಿಷಜ್ಞರು ಹೇಳುವರು. ಮೂವತ್ತು ದಿವಸಗಳಿಗೊಂದು ತಿಂಗಳು, ಎರಡು ತಿಂಗಳಿಗೊಂದು ಋತುವೆಂದೂ ಅವರೇ ನಿರ್ಣಯಿಸಿರುವರು.

ಋತುಭಿಃ ಷಡ್ಭಿರೇವಾಬ್ದಂ ಶತಾಬ್ದಂ ಬ್ರಹ್ಮಣೋ ವಯಃ ।
ಬ್ರಹ್ಮಣಶ್ಚ ನಿಪಾತೇ ವೈ ಚಕ್ಷುರುನ್ಮೀಲನಂ ಹರೇಃ ॥ ೫೬ ॥

ಚಕ್ಷುರ್ನಿಮೀಲನೇ ತಸ್ಯ ಲಯಂ ಪ್ರಾಕೃತಿಕಂ ವಿದುಃ ।
ಪ್ರಲಯೇ ಪ್ರಾಕೃತಾಃ ಸರ್ವೇ ದೇವಾದ್ಯಾಶ್ಚ ಚರಾಚರಾಃ ॥ ೫೭ ॥

ಲೀನಾ ಧಾತರಿ ಧಾತಾ ಚ ಶ್ರೀಕೃಷ್ಣೇ ನಾಭಿಪಂಕಜೇ ।
ವಿಷ್ಣುಃ ಕ್ಷೀರೋದಶಾಯೀ ಚ ವೈಕುಂಠೇ ಯಶ್ಚತುರ್ಭುಜಃ ॥ ೫೮ ॥

ವಿಲೀನಾ ವಾಮಪಾರ್ಶ್ವೇ ಚ ಕೃಷ್ಣಸ್ಯ ಪರಮಾತ್ಮನಃ ।
ರುದ್ರಾದ್ಯಾ ಭೈರವಾದ್ಯಾಶ್ಚ ಯಾವನ್ತಶ್ಚ ಶಿವಾನುಗಾಃ ॥ ೫೯ ॥

ಶಿವಾಧಾರೇ ಶಿವೇ ಲೀನಾ ಜ್ಞಾನಾನಂದೇ ಸನಾತನೇ ।
ಜ್ಞಾನಾಧಿದೇವಃ ಕೃಷ್ಣಸ್ಯ ಮಹಾದೇವಸ್ಯ ಚಾತ್ಮನಃ ॥ ೬೦ ॥

ತಸ್ಯ ಜ್ಞಾನೇ ವಿಲೀನಶ್ಚ ಬಭೂವಾಥ ಕ್ಷಣಂ ಹರೇಃ ।
ದುರ್ಗಾಯಾಂ ವಿಷ್ಣುಮಾಯಾಯಾಂ ವಿಲೀನಾಃ ಸರ್ವಶಕ್ತಯಃ ॥ ೬೧ ॥

---

೫೬. ಆರು ಋತುಗಳಿಗೊಂದು ವರ್ಷ, ಬ್ರಹ್ಮನ ಆಯುಸ್ಸು ಇಂಥ ನೂರು ವರುಷ. ಬ್ರಹ್ಮನ ಪತನವಾದರೆ ಹರಿಯು ಒಮ್ಮೆ ಕಣ್ಣು ತೆರೆಯುವನು.

೫೭–೫೮. ಈ ರೀತಿ ಪರಮಾತ್ಮನು ಕಣ್ಣು ತೆರೆದು ಮುಚ್ಚಿದರೆ ಪ್ರಾಕೃತಿಕಲಯವೆನ್ನುವರು. ಆ ಪ್ರಲಯದಲ್ಲಿ ಪ್ರಾಕೃತರೂ, ಚರಾಚರಾತ್ಮಕ ಪ್ರಾಣಿಗಳೂ, ದೇವತೆಗಳೂ ಚತುರ್ಮುಖ ಬ್ರಹ್ಮನಲ್ಲಿ ಐಕ್ಯರಾಗುವರು. ಆ ಬ್ರಹ್ಮನು ಶ್ರೀಕೃಷ್ಣನ ನಾಭಿಕಮಲದಲ್ಲಿ ಅಡಗಿರುವನು. ವೈಕುಂಠದಲ್ಲಿ ಚತುರ್ಭುಜನಾಗಿರುವ ಕ್ಷೀರಸಮುದ್ರಶಾಯಿಯಾದ ವಿಷ್ಣುವೂ ಕೂಡ ಶ್ರೀಕೃಷ್ಣನ ವಾಮಭಾಗದಲ್ಲಿ ಐಕ್ಯನಾಗುವನು.

೫೯. ಶಿವಾನುಯಾಯಿಗಳಾದ ರುದ್ರಭೈರವಾದಿಗಳೆಲ್ಲರೂ ಪ್ರಳಯದಲ್ಲಿ ಜ್ಞಾನಾನಂದಮಯನೂ, ಅನಾದಿಯೂ, ಮಂಗಳಕ್ಕೆ ಕಾರಣನೂ ಆದ ಶಿವನಲ್ಲಿ ಐಕ್ಯರಾಗುವರು.

೬೦–೬೧. ಜ್ಞಾನಾಧಿದೇವನಾದ ಮಹಾದೇವನು ಶ್ರೀಕೃಷ್ಣಪರಮಾತ್ಮನ ದಿವ್ಯಜ್ಞಾನದಲ್ಲಿ ಐಕ್ಯನಾಗುವನು. ವಿಷ್ಣುಮಾಯಾರೂಪಿಣಿಯಾದ ದುರ್ಗಾಂಬಿಕೆಯಲ್ಲಿ ಸಕಲ ಶಕ್ತಿಗಳೂ ಅಡಗಿಕೊಳ್ಳುವುವು.

ಸಾಚ ಕೃಷ್ಣಸ್ಯ ಬುದ್ಧೌ ಚ ಬುದ್ಧ್ಯಧಿಷ್ಠಾತೃದೇವತಾ ।
ನಾರಾಯಣಾಂಶಃ ಸ್ಕಂದಶ್ಚ ಲೀನೋ ವಕ್ಷಸಿ ತಸ್ಯ ಚ ॥ ೬೨ ॥

ಶ್ರೀಕೃಷ್ಣಾಂಶಶ್ಚ ತದ್ಬಾಹೌ ದೇವಾಧೀಶೋ ಗಣೇಶ್ವರಃ ।
ಪದ್ಮಾಂಶಭೂತಾ ಪದ್ಮಾಯಾಂ ಸಾ ರಾಧಾಯಾಂ ಚ ಸುವ್ರತೇ ॥ ೬೩ ॥

ಗೋಪ್ಯಶ್ಚಾಪಿ ಚ ತಸ್ಯಾಂ ಚ ಸರ್ವಾ ವೈ ದೇವಯೋಷಿತಃ ।
ಕೃಷ್ಣಪ್ರಾಣಾಧಿದೇವೀ ಸಾ ತಸ್ಯ ಪ್ರಾಣೇಷು ಸಾ ಸ್ಥಿತಾ ॥ ೬೪ ॥

ಸಾವಿತ್ರೀ ಚ ಸರಸ್ವತ್ಯಾಂ ವೇದಶಾಸ್ತ್ರಾಣಿ ಯಾನಿ ಚ ।
ಸ್ಥಿತಾ ವಾಣೀ ಚ ಜಿಹ್ವಾಯಾಂ ತಸ್ಯೈವ ಪರಮಾತ್ಮನಃ ॥ ೬೫ ॥

ಗೋಲೋಕಸ್ಥಸ್ಯ ಗೋಪಾಶ್ಚ ವಿಲೀನಾಸ್ತಸ್ಯ ಲೋಮಸು ।
ತತ್ಪ್ರಾಣೇಷು ಚ ಸರ್ವೇಷಾಂ ಪ್ರಾಣಾವಾತಾ ಹುತಾಶನಃ ॥ ೬೬ ॥

---

೬೨. ಬುದ್ಧಿಗೆ ಅಧಿಷ್ಠಾತೃದೇವತೆಯಾದ ವಿಷ್ಣುಮಾಯೆಯು ಶ್ರೀಕೃಷ್ಣನ ಬುದ್ಧಿಯಲ್ಲಿ ಅಡಗಿ ಹೋಗುವಳು. ನಾರಾಯಣಾಂಶದಿಂದ ಜನಿಸಿದ ಷಣ್ಮುಖನು ಅವನ ಎದೆಯಲ್ಲಿ ಐಕ್ಯವಾಗುವನು.

೬೩. ಶ್ರೀಕೃಷ್ಣಾಂಶ ಸಂಭೂತನೂ ದೇವಾಧೀಶನೂ ಆದ ಗಣಪತಿಯೂ ಶ್ರೀಕೃಷ್ಣಪರಮಾತ್ಮನ ಬಾಹುಗಳಲ್ಲಿ ಸೇರಿಕೊಳ್ಳುವನು. ಪದ್ಮಾಂಶದಿಂದ ಉತ್ಪನ್ನರಾದ ಸ್ತ್ರೀಯರು ಲಕ್ಷ್ಮಿಯಲ್ಲೂ, ಲಕ್ಷ್ಮಿಯು ರಾಧೆಯಲ್ಲೂ ಐಕ್ಯರಾಗುವರು.

೬೪. ಗೋಪಿಯರೇ ಮುಂತಾದ ಸಮಸ್ತ ದೇವತಾಸ್ತ್ರೀಯರೂ ರಾಧೆಯಲ್ಲಿಯೇ ಐಕ್ಯರಾಗುವರು. ಕೃಷ್ಣನ ಪ್ರಾಣಾಧಿಷ್ಠಾತೃದೇವತೆಯಾದ ಆ ರಾಧೆಯು ಕೃಷ್ಣನ ಪ್ರಾಣಗಳಲ್ಲಿ ಐಕ್ಯಳಾಗುವಳು.

೬೫. ಸಾವಿತ್ರಿಯೂ, ಸಕಲ ವೇದಶಾಸ್ತ್ರಗಳೂ, ಸರಸ್ವತಿಯಲ್ಲೂ, ಆ ಸರಸ್ವತಿಯು ಪರಮಾತ್ಮನ ನಾಲಿಗೆಯಲ್ಲಿಯೂ ಐಕ್ಯರಾಗುವರು.

೬೬–೬೭. ಗೋಲೋಕದಲ್ಲಿರುವ ಗೋಪರೆಲ್ಲರೂ ಆ ಪರಮಾತ್ಮನ ರೋಮಕೂಪಗಳಲ್ಲಿ ಐಕ್ಯರಾಗುವರು. ಪರಮಾತ್ಮನ ಪ್ರಾಣವಾಯುವಿನಲ್ಲಿ ಸಕಲರ ಪ್ರಾಣ

ಜಠರಾಗ್ನೌ ವಿಲೀನಶ್ಚ ಜಲಂ ತದ್ರಸನಾಗ್ರತಃ ।
ವೈಷ್ಣವಾಶ್ಚರಣಾಂಭೋಜೇ ಪರಮಾನಂದಸಂಯುತಾಃ ॥ ೬೭ ॥

ಸಾರಾತ್ಸಾರತರಾ ಭಕ್ತಿರಸಪೀಯೂಷಪಾಯಿನಃ ।
ವಿರಾಟ್ ಕ್ಷುದ್ರಶ್ಚ ಮಹತಿ ಲೀನಃ ಕೃಷ್ಣೇ ಮಹಾನ್ವಿರಾಟ್ ॥ ೬೮ ॥

ಯಸ್ಯೈವ ಲೋಮಕೂಪೇಷು ವಿಶ್ವಾನಿ ನಿಖಿಲಾನಿ ಚ ।
ಯಸ್ಯ ಚಕ್ಷುರ್ನಿಮೇಷೇಣ ಮಹಾಂಶ್ಚ ಪ್ರಲಯೋ ಭವೇತ್ ॥ ೬೯ ॥

ಚಕ್ಷುರುನ್ಮಿಲನೇ ಸೃಷ್ಟಿರ್ಯಸ್ಯೈವ ಪರಮಾತ್ಮನಃ ।
ಯಾವನ್ನಿಮೇಷೇ ಸೃಷ್ಟಿಸ್ಸ್ಯಾತ್ತಾವದುನ್ಮೀಲನೇ ವ್ಯಯಃ ॥ ೭೦ ॥

ಬ್ರಹ್ಮಣಶ್ಚ ಶತಾಬ್ದೇನ ಸೃಷ್ಟಿಸ್ತತ್ರ ಲಯಃ ಪುನಃ ।
ಬ್ರಹ್ಮಸೃಷ್ಟಿಲಯಾನಾಂ ಚ ಸಂಖ್ಯಾ ನಾಸ್ತ್ಯೇವ ಸುವ್ರತೇ ॥ ೭೧ ॥

ವಾಯುವೂ, ಜಠರಾಗ್ನಿಯಲ್ಲಿ ಅಗ್ನಿದೇವನೂ, ನಾಲಿಗೆಯ ತುದಿಯಲ್ಲಿ ಜೀವವೂ ಐಕ್ಯವಾಗುವುದು. ವಿಷ್ಣುಭಕ್ತರೆಲ್ಲರೂ ಪರಮಾತ್ಮನ ಪಾದಗಳಲ್ಲಿ ಸೇರಿ ಪರಮಾನಂದ ಭರಿತರಾಗುವರು.

೬೮. ಆ ಭಕ್ತರು ಅತ್ಯಂತಸಾರವಾದ ಭಕ್ತಿರಸವೆಂಬ ಅಮೃತಪಾನಮಾಡಿ ಕೊಂಡಿರುವರು. ವಿರಾಟ್, ಕ್ಷುದ್ರವಿರಾಟ್, ಮಹಾವಿರಾಟ್ ಇವರೆಲ್ಲರೂ ಕೃಷ್ಣನಲ್ಲಿ ಐಕ್ಯರಾಗುವರು.

೬೯. ನಿಖಿಲವಿಶ್ವವೂ ಆ ಪರಮಾತ್ಮನ ರೋಮಕೂಪಗಳಲ್ಲಿ ಅಡಗುವುದು. ಆ ಪರಮಾತ್ಮನು ಕಣ್ಣುಮುಚ್ಚಿದರೆ ಮಹಾಪ್ರಲಯವಾಗುವುದು.

೭೦. ಪರಮಾತ್ಮನು ಕಣ್ಣುತೆರೆದರೆ ಸೃಷ್ಟಿ, ಮುಚ್ಚಿದರೆ ಪ್ರಳಯ. ಕಣ್ಣು ಮುಚ್ಚುವವರೆಗೂ ಸೃಷ್ಟಿಯಿದ್ದು ಮುಚ್ಚಿದ ನಂತರ ಪುನಃ ಕಣ್ಣು ತೆರೆಯುವವರೆಗೂ ಲಯವಿರುವುದು.

೭೧. ಬ್ರಹ್ಮನ ನೂರು ವರ್ಷಗಳು ಕಳೆಯುವವರೆಗೆ ಸೃಷ್ಟಿಯಿದ್ದು ಅನಂತರ ಲಯವಾಗಿ ಪುನಃ ನೂರು ವರ್ಷಗಳು ಕಳೆದನಂತರ ಸೃಷ್ಟಿಯಾಗುವುದು. ಈ ರೀತಿ ಯಾದ ಸೃಷ್ಟಿಲಯಗಳನ್ನು ಗಣಿಸಲಾಗುವುದಿಲ್ಲ.

ಯಥಾ ಭೂರಜಸಾಂ ಚೈವ ಸಂಖ್ಯಾನಂ ಚ ನಿಶಾಮಯ ।
ಚಕ್ಷುರ್ನಿಮೇಷೇ ಪ್ರಲಯೋ ಯಸ್ಯ ಸರ್ವಾಂತರಾತ್ಮನಃ ॥ ೭೨ ॥

ಉನ್ಮೀಲನೇ ಪುನಃ ಸೃಷ್ಟಿರ್ಭವೇದೇವೇಶ್ವರೇಚ್ಛಯಾ ।
ತದ್ಗುಣೋತ್ಕೀರ್ತನಂ ವಕ್ತುಂ ಬ್ರಹ್ಮಾಂಡೇಷು ಚ ಕಃ ಕ್ಷಮಃ ॥ ೭೩ ॥

ಯಥಾ ಶ್ರುತಂ ತಾತವಕ್ತ್ರಾತ್ತಥೋಕ್ತಂ ಚ ಯಥಾಗಮಂ ।
ಮುಕ್ತಯಶ್ಚ ಚತುರ್ವೇದೈರ್ನಿರುಕ್ತಾಶ್ಚ ಚತುರ್ವಿಧಾಃ ॥ ೭೪ ॥

ತತ್ಪ್ರಧಾನಾ ಹರೇರ್ಭಕ್ತಿರ್ಮುಕ್ತೇರಪಿ ಗರೀಯಸೀ ।
ಸಾಲೋಕ್ಯದಾ ಹರೇರೇಕಾ ಚಾನ್ಯಾ ಸಾರೂಪ್ಯದಾ ಪರಾ ॥ ೭೫ ॥

ಸಾಮೀಪ್ಯದಾ ಚ ನಿರ್ವಾಣದಾತ್ರೀ ಚೈವಮಿತಿ ಸ್ಮೃತಿಃ ।
ಭಕ್ತಾಸ್ತಾ ನಹಿ ವಾಂಛಂತಿ ವಿನಾ ತತ್ಸೇವನಾದಿಕಂ ॥ ೭೬ ॥

ಸಿದ್ಧತ್ವಮಮರತ್ವಂ ಚ ಬ್ರಹ್ಮತ್ವಂ ಚಾವಹೇಲಯಾ ।
ಜನ್ಮಮೃತ್ಯುಜರಾವ್ಯಾಧಿಭಯಶೋಕಾದಿಖಂಡನಂ ॥ ೭೭ ॥

---

೭೨. ಭೂಮಿಯಲ್ಲಿ ರಜೋಕಣಗಳನ್ನು ಎಣಿಸಲಾಗದಿರುವಂತೆ ಬ್ರಹ್ಮನ ಸೃಷ್ಟಿಲಯಗಳನ್ನೂ ಎಣಿಸಲಾಗುವುದಿಲ್ಲ. ಸರ್ವಾಂತರ್ಯಾಮಿಯಾದ ಆ ಪರಮಾತ್ಮನು ಕಣ್ಣುಮುಚ್ಚಿದರೆ ಪ್ರಳಯವಾಗುವುದು.

೭೩. ಪುನಃ ಸೃಷ್ಟಿಯ ಇಚ್ಛೆಯಿಂದ ಕಣ್ಣುತೆರೆದರೆ ಸೃಷ್ಟಿಯಾಗುವುದು. ಈ ರೀತಿಯಾದ ಪರಮಾತ್ಮನ ಗುಣವರ್ಣನೆಮಾಡಲು ಬ್ರಹ್ಮಾಂಡದಲ್ಲಿ ಶಕ್ತನಾವನು?

೭೪. ನಾನು ನನ್ನ ತಂದೆಯ ಮುಖದಿಂದ ಕೇಳಿದುದನ್ನು ಶಾಸ್ತ್ರೋಕ್ತವಾಗಿ ವಿವರಿಸಿದೆನು. ಚತುರ್ವೇದಗಳಲ್ಲೂ ಮುಕ್ತಿಯು ಚತುರ್ವಿಧವೆಂದು ಪ್ರತಿಪಾದಿಸಲ್ಪಟ್ಟಿದೆ.

೭೫. ನಿಶ್ಚಲವಾದ ಹರಿಭಕ್ತಿಯೆಂಬುದು ಮುಕ್ತಿಗಿಂತ ಶ್ರೇಷ್ಠವೆಂದು ವಿಷ್ಣುಭಕ್ತರು ತಿಳಿಯುವರು ಆ ಮುಕ್ತಿಗಳಲ್ಲಿ ಒಂದು ಹರಿಯ ಸಾಲೋಕ್ಯವನ್ನೂ ಮತ್ತೊಂದು ಸಾರೂಪ್ಯವನ್ನೂ ಕೊಡುವುದು.

೭೬–೭೭. ಉಳಿದೆರಡರಲ್ಲಿ ಒಂದು ಶ್ರೀಹರಿಯ ಸಾಮೀಪ್ಯವನ್ನೂ, ಮತ್ತೊಂದು ನಿರ್ವಾಣಮುಕ್ತಿಯನ್ನೂ ಕೊಡುವುದೆಂದು ಧರ್ಮಶಾಸ್ತ್ರೋಕ್ತವಾಗಿದೆ.

ಧಾರಣಂ ದಿವ್ಯರೂಪಸ್ಯ ವಿದುರ್ನಿರ್ವಾಣಮೋಕ್ಷದಂ ।
ಮುಕ್ತಿಶ್ಚ ಸೇವಾರಹಿತಾ ಭಕ್ತಿಃ ಸೇವಾವಿವರ್ಧಿನೀ ॥ ೭೮ ॥

ಭಕ್ತಿಮುಕ್ತ್ಯೋರಯಂ ಭೇದೋ ನಿಷೇಕೇ ಲಕ್ಷಣಂ ಶೃಣು ।
ವಿದುರ್ಬುಧಾ ನಿಷೇಕಂ ಚ ಭೋಗಂ ಚ ಕೃತಕರ್ಮಣಾಂ ॥ ೭೯ ॥

ತತ್ಖಂಡನಂ ಚ ಶುಭದಂ ಪರಂ ಶ್ರೀಕೃಷ್ಣ ಸೇವನಂ ।
ತತ್ತ್ವಜ್ಞಾನಮಿದಂ ಸಾಧ್ವಿ ಸಾರಂ ವೈ ಲೋಕವೇದಯೋಃ ॥ ೮೦ ॥

ವಿಘ್ನಘ್ನಂ ಶುಭದಂ ಚೋಕ್ತಂ ಗಚ್ಛ ವತ್ಸೇ ಯಥಾ ಸುಖಂ ।
ಇತ್ಯುಕ್ತ್ವಾ ಸೂರ್ಯಪುತ್ರಶ್ಚ ಜೀವಯಿತ್ವಾ ಚ ತತ್ಪತಿಂ ॥ ೮೧ ॥

ತಸ್ಯೈ ಶುಭಾಶಿಷಂ ದತ್ವಾ ಗಮನಂ ಕರ್ತುಮುದ್ಯತಃ ।
ದೃಷ್ಟ್ವಾ ಯಮಂ ಚ ಗಚ್ಛಂತಂ ಸಾವಿತ್ರೀ ತಂ ಪ್ರಣಮ್ಯ ಚ ॥ ೮೨ ॥

ಹರಿಭಕ್ತರು ಪರಮಾತ್ಮನ ಸೇವೆಯನ್ನುಳಿದು ಚತುರ್ವಿಧಮುಕ್ತಿಗಳನ್ನು ಬಯಸುವುದೇ ಇಲ್ಲ. ಅಷ್ಟೇಕೆ, ಸಿದ್ಧಪುರುಷತ್ವವನ್ನಾಗಲೀ, ದೇವತಾಸ್ವರೂಪವನ್ನಾಗಲೀ, ಬಯಸುವುದಿಲ್ಲ. ಜನ್ಮಜರಾಮರಣಗಳನ್ನೂ, ಭಯಶೋಕಾದಿಗಳನ್ನೂ ಪರಿಹರಿಸುವ ಬ್ರಹ್ಮಪದವಿಯನ್ನೂ ಭಕ್ತರು ಬಯಸುವುದಿಲ್ಲ.

೭೮. ದಿವ್ಯರೂಪಧಾರಣೆಯೇ ನಿರ್ವಾಣಮೋಕ್ಷವೆನಿಸುವುದು. ಸೇವಾರಹಿತವಾದುದೇ ಮುಕ್ತಿಯೆಂದೂ ಸೇವೆಯನ್ನು ಅಭಿವೃದ್ಧಿಗೊಳಿಸುವುದೇ ಭಕ್ತಿಯೆಂದೂ ತಿಳಿಯಬೇಕು.

೭೯. ಭಕ್ತಿಮುಕ್ತಿಗಳಿಗಿರುವ ಭೇದವೇ ಇದು. ಈಗ ನಿಷೇಕಲಕ್ಷಣವನ್ನು ಕೇಳು. ಮಾಡಿದ ಕರ್ಮಗಳ ಫಲಭೋಗವೇ ನಿಷೇಕವೆನಿಸುವುದೆಂದು ಬಲ್ಲವರು ಹೇಳುವರು.

೮೦. ಕರ್ಮಭೋಗವನ್ನು ಖಂಡಿಸಿ ಶುಭದಾಯಕವಾಗಿರುವುದರಿಂದಲೇ ಶ್ರೀಕೃಷ್ಣಸೇವೆಯು ಶ್ರೇಷ್ಠವೆನಿಸಿರುವುದು. ಎಲೌ ಸಾಧ್ವೀಶಿರೋಮಣಿಯೇ, ವೈದಿಕ ಮತ್ತು ಲೌಕಿಕಗಳಲ್ಲಿ ಸಾರಭೂತವಾದ ತತ್ತ್ವಜ್ಞಾನವೆಂಬುದೇ ಇದು.

೮೧–೮೪. ಪರಮಾತ್ಮನ ಸೇವೆಯು ವಿಘ್ನನಾಶಕವೂ ಶುಭಕರವೂ ಆದುದರಿಂದ ಎಲೌ ವತ್ಸೆಯಾದ ಸಾವಿತ್ರಿಯೇ, ನೀನು ಸುಖವಾಗಿ ಹಿಂತಿರುಗಿ ಹೋಗಿ

ರುರೋದ ಚರಣೇ ಧೃತ್ವಾ ಸದ್ವಿಚ್ಛೇದೋಽತಿದುಃಖದಃ ।
ಸಾವಿತ್ರೀರೋದನಂ ದೃಷ್ಟ್ವಾ ಯಮುಸ್ಸೋಽಯಂ ಕೃಪಾನಿಧಿಃ ॥ ೮೩ ॥

ತಾಮಿತ್ಯುವಾಚ ಸಂತುಷ್ಟಸ್ತ್ವರೋದೀಚ್ಚಾಪಿ ನಾರದ ॥ ೮೪ ॥

॥ ಯಮ ಉವಾಚ ॥

ಲಕ್ಷವರ್ಷಂ ಸುಖಂ ಭುಕ್ತ್ವಾ ಪುಣ್ಯಕ್ಷೇತ್ರೇ ಚ ಭಾರತೇ ।
ಅಂತೇ ಯಾಸ್ಯಸಿ ಗೋಲೋಕೇ ಶ್ರೀಕೃಷ್ಣಭವನಂ ಶುಭೇ ॥ ೮೫ ॥

ಗತ್ವಾ ಚ ಸ್ವಗೃಹಂ ಭದ್ರೇ ಸಾವಿತ್ರ್ಯಾಶ್ಚ ವ್ರತಂ ಕುರು ।
ದ್ವಿಸಪ್ತವರ್ಷಪರ್ಯಂತಂ ನಾರೀಣಾಂ ಮೋಕ್ಷಕಾರಣಂ ॥ ೮೬ ॥

ಪರಮಾತ್ಮನ ಸೇವೆಗೈಯ್ಯುತ್ತಿರು. ಸೂರ್ಯಪುತ್ರನಾದ ಯಮನು ಇಂತು ನುಡಿದು ಆಕೆಯ ಪತಿಯಾದ ಸತ್ಯವಾನನನ್ನು ಬದುಕಿಸಿ ಸಾವಿತ್ರಿಗೆ ಮಂಗಳಾಶೀರ್ವಾದಮಾಡಿ ಹೊರಡಲು ಸಿದ್ಧನಾದನು. ಆಗ ಹೊರಟುಹೋಗುತ್ತಿರುವ ಯಮನನ್ನು ನೋಡಿ ಸಾವಿತ್ರಿಯು ಅವನಿಗೆ ವಂದಿಸಿ. ಅವನ ಕಾಲುಗಳನ್ನು ಹಿಡಿದು, ಅಳಲಾರಂಭಿಸಿದಳು. ಸತ್ಪುರುಷರ ವಿಯೋಗವು ಸಕಲರಿಗೂ ದುಃಖಕರವಾದುದು. ಸಾವಿತ್ರಿಯು ಅಳುತ್ತಿರುವುದನ್ನು ನೋಡಿ ದಯಾಮಯನಾದ ಯಮನು ಸಂತುಷ್ಟಾಂತರಂಗನಾಗಿ ಅವಳನ್ನು ಕುರಿತು ಕೆಲವು ನುಡಿಗಳನ್ನು ಸ್ನೇಹದಿಂದ ಗದ್ಗದ ಕಂಠನಾಗಿಯೇ ಹೇಳಿದನು.

೮೫. ಯಮ :—ಎಲೌ ಶುಭಾಂಗಿಯೇ, ನೀನು ಪುಣ್ಯಕ್ಷೇತ್ರವಾದ ಭರತ ಖಂಡದಲ್ಲಿ ಒಂದು ಲಕ್ಷವರ್ಷಕಾಲ ಸುಖಭೋಗಮಾಡಿ ಕೊನೆಯಲ್ಲಿ ಗೋಲೋಕದ ಶ್ರೀಕೃಷ್ಣಪರಮಾತ್ಮನ ಮಂದಿರಕ್ಕೆ ತೆರಳುವೆ.

೮೬. ಎಲೌ ಮಂಗಳಕರಳೇ, ನೀನು ನಿನ್ನ ಮನೆಗೆ ಹಿಂತಿರುಗಿ ಸ್ತ್ರೀಯರ ಮುಕ್ತಿಗೆ ಕಾರಣಳಾದ ಸಾವಿತ್ರೀದೇವಿಯ ವ್ರತವನ್ನು ಹದಿನಾಲ್ಕು ವರ್ಷಗಳಕಾಲ ಆಚರಿಸು.

ಜ್ಯೇಷ್ಠೇ ಶುಕ್ಲಚತುರ್ದಶ್ಯಾಂ ಸಾವಿತ್ರ್ಯಾಶ್ಚ ವ್ರತಂ ಶುಭಂ ।
ಶುಕ್ಲಾಷ್ಟಮ್ಯಾಂ ಭಾದ್ರಪದೇ ಮಹಾಲಕ್ಷ್ಮ್ಯಾ ವ್ರತಂ ಶುಭಂ ॥ ೮೭ ॥

ದ್ವ್ಯಷ್ಟವರ್ಷವ್ರತಂ ಚೇದಂ ಪ್ರತ್ಯಬ್ದಂ ಪಕ್ಷಮೇವ ಚ ।
ಕರೋತಿ ಪರಯಾ ಭಕ್ತ್ಯಾ ಸಾ ಯಾತಿ ಚ ಹರೇಃ ಪದಂ ॥ ೮೮ ॥

ಪ್ರತಿಮಂಗಲವಾರೇ ಚ ದೇವೀಂ ಮಂಗಲಚಂಡಿಕಾಂ ।
ಪ್ರತಿಮಾಸಂ ಶುಕ್ಲಷಷ್ಠ್ಯಾಂ ಷಷ್ಠೀಂ ಮಂಗಲದಾಯಿಕಾಂ ॥ ೮೯ ॥

ತಥಾ ಚಾಷಾಢಸಂಕ್ರಾಂತ್ಯಾಂ ಮನಸಾಂ ಸರ್ವಸಿದ್ಧಿದಾಂ ।
ರಾಧಾಂ ರಾಸೇ ಚ ಕಾರ್ತಿಕ್ಯಾಂ ಕೃಷ್ಣಪ್ರಾಣಾಧಿಕಪ್ರಿಯಾಂ ॥ ೯೦ ॥

ಉಪೋಷ್ಯ ಶುಕ್ಲಾಷ್ಟಮ್ಯಾಂ ಚ ಪ್ರತಿಮಾಸೇ ವರಪ್ರದಾ ।
ವಿಷ್ಣುಮಾಯಾಂ ಭಗವತೀಂ ದುರ್ಗಾಂ ದುರ್ಗಾರ್ತಿನಾಶಿನೀಂ ॥ ೯೧ ॥

ಪ್ರಕೃತಿಂ ಜಗದಂಬಾಂ ಚ ಪತಿಪುತ್ರವತೀಂ ಸತೀಂ ।
ಪತಿವ್ರತಾಸು ಶುದ್ಧಾಸು ಯಂತ್ರೇಷು ಪ್ರತಿಮಾಸು ಚ ॥ ೯೨ ॥

---

೮೭. ಜ್ಯೇಷ್ಠಶುಕ್ಲ ಚತುರ್ದಶಿಯ ದಿವಸ ಸಾವಿತ್ರೀ ದೇವಿಯ ವ್ರತವೂ, ಭಾದ್ರಪದ ಶುಕ್ಲ ಅಷ್ಟಮಿ ದಿವಸ ಮಹಾಲಕ್ಷ್ಮಿಯ ವ್ರತವೂ ಸಕಲರಿಗೂಶುಭ ಕರವಾದುದು.

೮೮. ಹದಿನಾರುವರ್ಷಗಳಕಾಲ ಪ್ರತಿವರ್ಷವೂ ಉಕ್ತದಿವಸಗಳಲ್ಲಿ ವ್ರತ ವನ್ನಾಚರಿಸುವುದರಿಂದ ಆ ಸ್ತ್ರೀಯು ಶ್ರೀಹರಿಯ ಪದವನ್ನು ಸೇರುವಳು.

೮೯–೯೩. ಪ್ರತಿ ಮಂಗಳವಾರದಲ್ಲೂ ಮಂಗಳ ಚಂಡಿಕಾದೇವಿಯನ್ನೂ, ಪ್ರತಿ ತಿಂಗಳಿನ ಶುಕ್ಲ ಷಷ್ಠಿಯ ದಿವಸ ಮಂಗಳಕರಳಾದ ಷಷ್ಠೀದೇವಿಯನ್ನೂ, ಆಷಾಢಮಾಸದ ಸಂಕ್ರಾಂತಿಯ ದಿವಸ ಸರ್ವಸಿದ್ಧಿಕರಳಾದ ಮನಸಾ ದೇವಿಯನ್ನೂ,

ಯಾ ನಾರೀ ಪೂಜಯೇದ್ಭಕ್ತ್ಯಾ ಧನಸಂತಾನಹೇತವೇ ।
ಇಹ ಲೋಕೇ ಸುಖಂ ಭುಕ್ತ್ವಾ ಯಾತ್ಯಂತೇ ಶ್ರೀಹರೇಃ ಪದಂ ॥ ೯೩ ॥

ಇತ್ಯುಕ್ತ್ವಾ ತಾಂ ಧರ್ಮರಾಜೋ ಜಗಾಮ ನಿಜಮಂದಿರಂ ।
ಗೃಹೀತ್ವಾ ಸ್ವಾಮಿನಂ ಸಾ ಚ ಸಾವಿತ್ರೀ ಚ ನಿಜಾಲಯಂ ॥ ೯೪ ॥

ಸಾವಿತ್ರೀ ಸತ್ಯವಂತಂ ಚ ವೃತ್ತಾಂತಂ ಚ ಯಥಾಕ್ರಮಂ ।
ಅನ್ಯಾಂಶ್ಚ ಕಥಯಾಮಾಸ ಬಾಂಧವಾಂಶ್ಚೈವ ನಾರದ ॥ ೯೫ ॥

ಸಾವಿತ್ರೀಜನಕಃ ಪುತ್ರಾನ್ ಸ ಪ್ರಾಪದ್ವೈ ಕ್ರಮೇಣ ಚ ।
ಶ್ವಶುರಶ್ಚ ಚಕ್ಷುಷೀ ರಾಜ್ಯಂ ಸಾ ಚ ಪುತ್ರಾನ್ವರೇಣ ಚ ॥ ೯೬ ॥

ಕಾರ್ತೀಕ ಮಾಸದಲ್ಲಿ ರಾಸಮಂಡಲವಲ್ಲಿ ಶ್ರೀಕೃಷ್ಣನ ಪ್ರಾಣಾಧಿಕಪ್ರಿಯಳಾದ ರಾಧಾದೇವಿಯನ್ನೂ ರಾಸಮಂಡಲದಲ್ಲಿಯೂ, ಪ್ರತಿ ತಿಂಗಳಿನ ಶುಕ್ಲಾಷ್ಟಮಿಯ ದಿವಸ ನಿರಾಹಾರಳಾಗಿ ವರಪ್ರದಳೂ ವಿಷ್ಣುಮಾಯಾ ಸ್ವರೂಪಿಣಿಯೂ, ಮಾನಸಿಕ ಪೀಡಾಪರಿಹಾರಕಳೂ ಆದ ದುರ್ಗಾದೇವಿಯನ್ನೂ, ಪತಿಪುತ್ರವತಿಯರೂ, ಶುದ್ಧಾಚಾರಸಂಪನ್ನರೂ ಆದ ಪತಿವ್ರತೆಯರಲ್ಲೂ, ಯಂತ್ರಗಳಲ್ಲೂ, ವಿಗ್ರಹಗಳಲ್ಲೂ ಪ್ರಕೃತಿ ದೇವಿಯನ್ನೂ ಆವಾಹನೆಮಾಡಿ, ಧನ ಮತ್ತು ಸಂತಾನಾಕಾಂಕ್ಷೆಯಿಂದ ಪೂಜಿಸುವ ಸ್ತ್ರೀಯು ಇಹಲೋಕದಲ್ಲಿರುವವರೆಗೂ ಸುಖವನ್ನನುಭವಿಸಿ ಕೊನೆಯಲ್ಲಿ ಶ್ರೀಹರಿಯ ಸ್ಥಾನವನ್ನು ಸೇರುವಳು.

೯೪. ಯಮಧರ್ಮರಾಜನು ಸಾವಿತ್ರಿಯನ್ನು ಕುರಿತು ಇಂತು ನುಡಿದು ತನ್ನ ಮಂದಿರಕ್ಕೆ ಹಿಂತಿರುಗಿದನು. ತನ್ನ ಪತಿಯನ್ನು ಕರೆದುಕೊಂಡು ಸಾವಿತ್ರಿಯೂ ಕೂಡ ತನ್ನ ಮಂದಿರಕ್ಕೆ ಹಿಂತಿರುಗಿದಳು.

೯೫. ಎಲೈ ನಾರದನೇ, ಸಾವಿತ್ರಿಯು ಯಮನಿಗೂ ತನಗೂ ನಡೆದ ಸಂಭಾಷಣೆಯನ್ನು ತನ್ನ ಪತಿಯಾದ ಸತ್ಯವಂತನಿಗೂ, ತನ್ನ ಬಂಧುಮಿತ್ರರಿಗೂ, ಯಥಾಕ್ರಮವಾಗಿ ಅರುಹಿದಳು.

೯೬. ಯಮನ ವರದಂತೆ ಸಾವಿತ್ರಿಯ ತಂದೆಯು ಕ್ರಮವಾಗಿ ಪುತ್ರರನ್ನು ಪಡೆದನು. ಮಾವನು ಕಣ್ಣುಗಳನ್ನೂ ರಾಜ್ಯವನ್ನೂ ಪುನಃ ಪಡೆದನು. ಸಾವಿತ್ರಿಯೂ ಕ್ರಮವಾಗಿ ಪುತ್ರವತಿಯಾದಳು.

ಲಕ್ಷವರ್ಷಂ ಸುಖಂ ಭುಕ್ತ್ವಾ ಪುಣ್ಯಕ್ಷೇತ್ರೇ ಚ ಭಾರತೇ ।
ಜಗಾಮ ಸ್ವಾಮಿನಾಸಾರ್ಧಂ ಗೋಲೋಕಂ ಸಾ ಪತಿವ್ರತಾ ॥ ೯೭ ॥

ಸವಿತುಶ್ಚಾಧಿದೇವೀ ಯಾ ಮಂತ್ರಾಧಿಷ್ಠಾತೃದೇವತಾ ।
ಸಾವಿತ್ರೀ ಚಾಪಿ ವೇದಾನಾಂ ಸಾವಿತ್ರೀ ತೇನ ಕೀರ್ತಿತಾ ॥ ೯೮ ॥

ಇತ್ಯೇವಂ ಕಥಿತಂ ವತ್ಸ ಸಾವಿತ್ರ್ಯಾಖ್ಯಾನಮುತ್ತಮಂ ।
ಜೀವಕರ್ಮವಿಪಾಕಂ ಚ ಕಿಂ ಪುನಃ ಶ್ರೋತುಮಿಚ್ಛಸಿ ॥ ೯೯ ॥

ಇತಿ ಶ್ರೀಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದ ನಾರಾಯಣಸಂವಾದೇ ಸಾವಿತ್ರ್ಯುಪಾಖ್ಯಾನೇ ಸಾವಿತ್ರ್ಯ
ಯಮೋಪದೇಶಸಮಾಪ್ತಿರ್ನಾಮ
ಚತುಸ್ತ್ರಿಂಶೋಽಧ್ಯಾಯಃ

---

೯೭. ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ಒಂದು ಲಕ್ಷ ವರ್ಷ ಸುಖಾನುಭವಮಾಡಿ ತನ್ನ ಪತಿಯೊಡನೆ ಆ ಪತಿವ್ರತೆಯು ಗೋಲೋಕಕ್ಕೆ ತೆರಳಿದಳು.

೯೮. ಸೂರ್ಯನಿಗೆ ಅಧಿದೇವತೆಯೂ, ಮಂತ್ರಗಳಿಗೆ ಅಧಿಷ್ಠಾತೃದೇವತೆಯೂ, ವೇದಗಳ ಜನನಿಯೂ ಆದುದರಿಂದಲೇ ಆಕೆಗೆ ಸಾವಿತ್ರಿ ಎಂದು ಪ್ರಸಿದ್ಧಿಯಾಯಿತು.

೯೯. ಎಲೈ ನಾರದನೇ ಉತ್ತಮವಾದ ಸಾವಿತ್ರಿಯ ಕಥೆಯನ್ನೂ (ಜೀವ ಕರ್ಮವಿಪಾಕವನ್ನೂ) ನಿನಗ ತಿಳಿಸಿದುದಾಯಿತು. ಇನ್ನೇನನ್ನು ಕೇಳಲು ನಿನಗೆ ಅಭಿಮತವಿದೆ?

ಇಲ್ಲಿಗೆ ಶ್ರೀಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದ ನಾರದ ನಾರಾಯಣ
ಸಂವಾದದಲ್ಲಿ ಸಾವಿತ್ರಿಯ ಉಪಾಖ್ಯಾನದಲ್ಲಿ ಸಾವಿತ್ರಿಗೆ ಯಮನ ಉಪದೇಶ
ರೂಪವಾದ ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು
ಇಲ್ಲಿಗೆ ಸಾವಿತ್ರ್ಯುಪಾಖ್ಯಾನವು ಮುಗಿದುದು

ಮೂವತ್ತನಾಲ್ಕನೆಯ ಅಧ್ಯಾಯದ ಸಾರಾಂಶವು

ಯಮಧರ್ಮರಾಯನು ಸಾವಿತ್ರೀದೇವಿಗೆ ಹರಿಭಕ್ತಿಸ್ವರೂಪವನ್ನೂ ಮುಕ್ತಿಯ ವೈವಿಧ್ಯವನ್ನೂ ಈ ಅಧ್ಯಾಯದಲ್ಲಿ ನಿರೂಪಿಸಿದ್ದಾನೆ.

'ಸರ್ವಜ್ಞನೂ, ಸರ್ವೇಶ್ವರನೂ, ಸರ್ವಾಂತರ್ಯಾಮಿಯೂ ಆದ ಪರಮಾತ್ಮನು ಸೃಷ್ಟ್ಯುನ್ಮುಖನಾದಾಗ ಸ್ವೇಚ್ಛಾಮಾತ್ರದಿಂದಲೇ ಇಬ್ಭಾಗವಾಗುವನು. ಅವನ ವಾಮಭಾಗವು ಪ್ರಕೃತಿಯೆಂದೂ, ದಕ್ಷಿಣಭಾಗವು ಪುರುಷನೆಂದೂ ಹೆಸರುಗೊಳ್ಳುವುದು ಪುರುಷನು ತ್ರಿಗುಣಾತ್ಮಕಳಾದ ಪ್ರಕೃತಿಯ ವಿಕಾರಗಳಿಗೆ ಒಳಗಾಗದೆ ನಿರ್ಲಿಪ್ತನಾಗಿರುವನು. ನಿರಾಕಾರನೂ, ನಿರ್ವಿಕಾರನೂ, ನಿತ್ಯಾನಂದನೂ ಆದ ಪರಮಾತ್ಮನು ಭಕ್ತಾನುಗ್ರಹಕ್ಕಾಗಿ ಅತಿ ಮನೋಹರವಾದ ಗೋಪಕಿಶೋರ ವೇಷವನ್ನು ಧರಿಸುವನು. ಇಂಥ ಪರಮಾತ್ಮನನ್ನು ಭಕ್ತರು ಅನನ್ಯಭಕ್ತಿಯಿಂದ ಧ್ಯಾನಿಸುವರು. ಬ್ರಹ್ಮವಿಷ್ಣುಮಹೇಶ್ವರರೂ, ಪೃಥಿವ್ಯಾದಿ ಪಂಚಮಹಾಭೂತಗಳೂ, ಇಂದ್ರಾದ್ಯಷ್ಟ ದಿಕ್ಪಾಲಕರೂ, ಚರಾಚರಾತ್ಮಕವಾದ ನಿಖಿಲ ಜಗತ್ತೂ ಪರಮಾತ್ಮನ ಆಜ್ಞಾನುವರ್ತಿಗಳಾಗಿ ತಮ್ಮ ತಮ್ಮ ಕಾರ್ಯದಲ್ಲಿ ತೊಡಗುವರು. ಮಹಾ ಪ್ರಳಯದಲ್ಲಿ ಎಲ್ಲವೂ ಪರಮಾತ್ಮನಲ್ಲೇ ಲಯಹೊಂದುವುದು. ಪರಮಾತ್ಮನು ಕಣ್ಣು ತೆರೆದರೆ ಸೃಷ್ಟಿ, ಕಣ್ಣು ಮುಚ್ಚಿದರೆ ಪ್ರಳಯ. ಇಂಥ ಮಹಾಮಹಿಮನೂ, ಅನಂತಕಲ್ಯಾಣ ಗುಣಸಂಪನ್ನನೂ ಆದ ಶ್ರೀ ಕೃಷ್ಣಪರಮಾತ್ಮನನ್ನು ಸರ್ವದಾ ಅನನ್ಯ ಭಕ್ತಿಯಿಂದ ಸೇವೆ ಮಾಡಲು ಬಯಸುವ ಭಕ್ತರು ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ ಮತ್ತು ನಿರ್ವಾಣರೂಪವಾದ ಮುಕ್ತಿಗಳನ್ನು ಬಯಸುವುದಿಲ್ಲ. ವಿಷ್ಣುಭಕ್ತರು ತಮ್ಮ ಕರ್ಮಫಲವನ್ನು ಪಭೋಗಿಸಿ, ನಿಷ್ಕಾಮನೆಯಿಂದ ಹರಿಸೇವೆಮಾಡಿ ಅಂತ್ಯದಲ್ಲಿ ಶ್ರೀಹರಿಯ ಸಾಯುಜ್ಯವನ್ನು ಹೊಂದುವರು.' ಯಮಧರ್ಮರಾಯನು ಸಾವಿತ್ರಿಗೆ ಈ ರೀತಿ ತತ್ವಜ್ಞಾನವನ್ನು ಬೋಧಿಸಿ, ಹದಿನಾಲ್ಕುವರ್ಷಗಳಕಾಲ ಸಾವಿತ್ರೀದೇವಿಯ ವ್ರತವನ್ನಾಚರಿಸುವಂತೆ ಹೇಳಿ, ಕೊನೆಯಲ್ಲಿ ಶ್ರೀಹರಿಯ ಸಾಯುಜ್ಯವು ದೊರೆಯುವಂತೆ ಅನುಗ್ರಹಿಸಿ, ಹೊರಟುಹೋದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಪಂಚತ್ರಿಂಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಶ್ರೀಕೃಷ್ಣಸ್ಯಾತ್ಮನಶ್ಚೈವ ನಿರ್ಗುಣಸ್ಯ ನಿರಾಕೃತೇಃ |
ಸಾವಿತ್ರೀಯಮಸಂವಾದೇ ಶ್ರುತಂ ಸುವಿಮಲಂ ಯಶಃ || ೧ ||

ತದ್ಗುಣೋತ್ಕೀರ್ತನಂ ಸತ್ಯಂ ಮಂಗಲಾನಾಂ ಚ ಮಂಗಲಂ |
ಅಧುನಾ ಶ್ರೋತುಮಿಚ್ಛಾಮಿ ಲಕ್ಷ್ಮ್ಯುಪಾಖ್ಯಾನಮೀಶ್ವರ || ೨ ||

ಕೇನಾದೌ ಪೂಜಿತಾ ಸಾಪಿ ಕಿಂ ಭೂತಾ ಕೇನ ವಾ ಪುರಾ |
ತದ್ಗುಣೋತ್ಕೀರ್ತನಂ ಸತ್ಯಂ ವದ ವೇದವಿದಾಂ ವರ || ೩ ||

ಮೂವತ್ತೈದನೆಯ ಅಧ್ಯಾಯವು

೧. ನಾರದನು ಹೇಳಿದನು:—ಸಾವಿತ್ರೀ ಮತ್ತು ಯಮಧರ್ಮರಾಯನ ಸಂವಾದದಿಂದ ನಿರ್ಗುಣನೂ, ನಿರಾಕಾರನೂ, ಆದ ಶ್ರೀಕೃಷ್ಣಪರಮಾತ್ಮನ ಅಮಲ ಕೀರ್ತಿಯು ತಿಳಿದಂತಾಯಿತು.

೨. ಮಂಗಳಗಳಿಗೂ ಮಂಗಳಕರವಾದ ಆ ಪರಮಾತ್ಮನ ಗುಣವರ್ಣನೆಯನ್ನು ಕೇಳಿದೆನು ಎಲೈ ಮಹರ್ಷಿಯೇ ಈಗ ಲಕ್ಷ್ಮೀದೇವಿಯ ಉಪಾಖ್ಯಾನವನ್ನು ಕೇಳಲಿಚ್ಛಿಸುತ್ತೇನೆ.

೩. ವೇದಜ್ಞರಲ್ಲಿ ಶ್ರೇಷ್ಠನಾದ ನಾರಾಯಣನೇ, ಆ ಲಕ್ಷ್ಮಿಯು ಯಾರಿಂದ ಹೇಗೆ ಉತ್ಪತ್ತಿಪಡೆದು ಮೊದಲು ಯಾರಿಂದ ಪೂಜಿತಳಾದಳು ? ಆಕೆಯ ನಿಜವಾದ ಗುಣಗಳಾವುವೆಂಬುದನ್ನು ವಿವರಿಸು.

॥ ನಾರಾಯಣ ಉವಾಚ ॥

ಸೃಷ್ಟೇರಾದೌ ಪುರಾ ಬ್ರಹ್ಮನ್ ಕೃಷ್ಣಸ್ಯ ಪರಮಾತ್ಮನಃ ।
ದೇವೀ ವಾಮಾಂಶಸಂಭೂತಾ ಚಾಸೀತ್ಸಾ ರಾಸಮಂಡಲೇ ॥ ೪ ॥

ಅತೀವ ಸುಂದರೀ ಶ್ಯಾಮಾ ನ್ಯಗ್ರೋಧಪರಿಮಂಡಲಾ ।
ಯಥಾ ದ್ವಾದಶವರ್ಷೀಯಾ ರಮ್ಯಾ ಸುಸ್ಥಿರಯೌವನಾ ॥ ೫ ॥

ಶ್ವೇತಚಂಪಕವರ್ಣಾಭಾ ಸುಖದೃಶ್ಯಾ ಮನೋಹರಾ ।
ಶರತ್ಪಾರ್ವಣಕೋಟೀಂದುಪ್ರಭಾಸಂಶೋಭಿತಾನನಾ ॥ ೬ ॥

ಶರನ್ಮಧ್ಯಾಹ್ನಪದ್ಮಾನಾಂ ಶೋಭಾಶೋಭಿತಲೋಚನಾ ।
ಸಾ ಚ ದೇವೀ ದ್ವಿಧಾ ಭೂತಾ ಸಹಸೈವೇಶ್ವರೇಚ್ಛಯಾ ॥ ೭ ॥

---

೪. ನಾರಾಯಣನು ಹೇಳಿದನು :—ಎಲೈ ನಾರದನೇ, ಆದಿಸೃಷ್ಟಿಯಲ್ಲಿ ರಾಸಮಂಡಲಮಂಡಿತನಾದ ಶ್ರೀಕೃಷ್ಣಪರಮಾತ್ಮನ ವಾಮಭಾಗದಿಂದ ಲಕ್ಷ್ಮೀ ದೇವಿಯು ಅವತರಿಸಿದಳು.

೫. ಆಲದ ಎಲೆಯಂತೆ ದೇಹಕಾಂತಿಯುಳ್ಳವಳೂ, ಮನೋಹರಳೂ ಆದ ಆ ಲಕ್ಷ್ಮಿಯು ಹನ್ನೆರಡು ವರ್ಷದ ಯುವತಿಯಂತೆ ಸ್ಥಿರಯೌವನದಿಂದ ಶೋಭಿಸುತ್ತಿದ್ದಳು.

೬-೭. ಬಿಳಿಯ ಸಂಪಿಗೆಯಂತೆ ಕಾಂತಿಯುತವಾದ ದೇಹವರ್ಣದಿಂದಲೂ, ಶರತ್ಪೂರ್ಣಿಮಾಕೋಟಿಚಂದ್ರರಂತೆ ಸುಶೋಭಿತವಾದ ಮುಖದಿಂದಲೂ, ಶರದೃತುವಿನ ಮಧ್ಯಾಹ್ನದ ತಾವರೆಯ ಕಾಂತಿಯನ್ನಣಕಿಸುವ ಕಣ್ಣುಗಳಿಂದಲೂ ಕೂಡಿದ ಆ ದೇವಿಯು ಈಶ್ವರೇಚ್ಛೆಯಂತೆ ಕೂಡಲೇ ಇಬ್ಬಗೆಯಾದಳು.

ಸಮಾರೂಪೇಣ ವರ್ಣೇನ ತೇಜಸಾ ವಯಸಾ ತ್ವಿಷಾ ।
ಯಶಸಾ ವಾಸಸಾ ಮೂರ್ತ್ಯಾ ಭೂಷಣೇನ ಗುಣೇನ ಚ ॥ ೮ ॥

ಸ್ಮಿತೇನ ವೀಕ್ಷಣೇನೈವ ವಚಸಾ ಗಮನೇನ ಚ ।
ಮಧುರೇಣ ಸ್ವರೇಣೈವ ನಯೇನಾನುನಯೇನ ಚ ॥ ೯ ॥

ತದ್ವಾಮಾಂಶಾ ಮಹಾಲಕ್ಷ್ಮೀರ್ದಕ್ಷಿಣಾಂಶಾ ಚ ರಾಧಿಕಾ ।
ರಾಧಾದೌ ವರಯಾಮಾಸ ದ್ವಿಭುಜಂ ಚ ಪರಾತ್ಪರಂ ॥ ೧೦ ॥

ಮಹಾಲಕ್ಷ್ಮೀಶ್ಚ ತತ್ಪಶ್ಚಾಚ್ಚಕಮೇ ಕಮನೀಯಕಂ ।
ಕೃಷ್ಣಸ್ತದ್ಗೌರವೇಣೈವ ದ್ವಿಧಾ ರೂಪೋ ಬಭೂವ ಹ ॥ ೧೧ ॥

ದಕ್ಷಿಣಾಂಶೋ ವೈ ದ್ವಿಭುಜೋ ವಾಮಾಂಶಶ್ಚ ಚತುರ್ಭುಜಃ ।
ಚತುರ್ಭುಜಾಯ ದ್ವಿಭುಜೋ ಮಹಾಲಕ್ಷ್ಮೀಂ ದದೌ ಪುರಾ ॥ ೧೨ ॥

೮-೯. ದೇವಿಯ ಆ ಎರಡು ರೂಪಗಳೂ, ವರ್ಣರೂಪಗಳಲ್ಲಿಯೂ ವಯಸ್ಸು ತೇಜಸ್ಸುಗಳಲ್ಲಿಯೂ ಉಡುಪು ಮತ್ತು ಆಕಾರದಲ್ಲಿಯೂ, ಗುಣ ಮತ್ತು ಅಲಂಕರಣಗಳಲ್ಲಿಯೂ ಮುಗುಳುನಗೆ ಮತ್ತು ದೃಷ್ಟಿವಿಕ್ಷೇಪದಲ್ಲಿಯೂ, ಮಾತು ಮತ್ತು ನಡೆವಳಿಕೆಯಲ್ಲಿಯೂ ಮಧುರ ಸ್ವರದಲ್ಲಿಯೂ, ನಯಾನುನಯಗಳಲ್ಲಿಯೂ ಸಮಾನವಾಗಿದ್ದವು.

೧೦. ವಾಮಭಾಗವು ಮಹಾಲಕ್ಷ್ಮಿ ಎಂಬುದಾಗಿಯೂ, ದಕ್ಷಿಣ ಭಾಗವು ರಾಧಾ ಎಂಬುದಾಗಿಯೂ ಪ್ರಸಿದ್ಧವಾಯಿತು. ಅವರಲ್ಲಿ ಮೊದಲು ರಾಧೆಯು ಪರಾತ್ಪರನೆನಿಸಿದ ಕೃಷ್ಣಪರಮಾತ್ಮನನ್ನು ವರಿಸಿದಳು.

೧೧. ಅನಂತರ ಮಹಾಲಕ್ಷ್ಮಿಯೂ ಕೂಡ ಮನೋಹರನಾದ ಪರಮಾತ್ಮನನ್ನೇ ಕಾಮಿಸಿದಳು. ಆಗ ಶ್ರೀಕೃಷ್ಣನು ಆಕೆಯ ಗೌರವಾರ್ಥವಾಗಿ ರೂಪದ್ವಯವನ್ನು ಧರಿಸಿದನು.

೧೨. ದಕ್ಷಿಣಭಾಗವು ದ್ವಿಭುಜದಿಂದಲೂ, ವಾಮಭಾಗವು ಚತುರ್ಭುಜದಿಂದಲೂ ಶೋಭಿಸಿತು. ಆಗ ದ್ವಿಭುಜನಾದ ಶ್ರೀಕೃಷ್ಣನು ತನ್ನ ದೇಹಾರ್ಧನಾದ ಚತುರ್ಭುಜನಿಗೆ ಮಹಾಲಕ್ಷ್ಮಿಯನ್ನು ವರಿಸಲು ಹೇಳಿದನು.

ಲಕ್ಷ್ಯತೇ ದೃಶ್ಯತೇ ವಿಶ್ವಂ ಸ್ನಿಗ್ಧದೃಷ್ಟ್ಯಾ ಯಯಾನಿಶಂ ।
ದೇವೀಷು ಯಾ ಚ ಮಹತೀ ಮಹಾಲಕ್ಷ್ಮೀಶ್ಚ ಸಾ ಸ್ಮೃತಾ ॥ ೧೩ ॥

ದ್ವಿಭುಜೋ ರಾಧಿಕಾಕಾಂತೋ ಲಕ್ಷ್ಮೀಕಾಂತಶ್ಚತುರ್ಭುಜಃ ।
ಗೋಲೋಕೇ ದ್ವಿಭುಜಸ್ತಸ್ಥೌ ಗೋಪೈರ್ಗೋಪೀಭಿರಾವೃತಃ ॥ ೧೪ ॥

ಚತುರ್ಭುಜಶ್ಚ ವೈಕುಂಠಂ ಪ್ರಯಯೌ ಪದ್ಮಯಾ ಸಹ ।
ಸರ್ವಾಂಶೇನ ಸಮೌ ತೌ ದ್ವೌ ಕೃಷ್ಣನಾರಾಯಣೌ ಪರೌ ॥ ೧೫ ॥

ಮಹಾಲಕ್ಷ್ಮೀಶ್ಚ ಯೋಗೇನ ನಾನಾರೂಪಾ ಬಭೂವ ಸಾ ।
ವೈಕುಂಠೇ ಚ ಮಹಾಲಕ್ಷ್ಮೀಃ ಪರಿಪೂರ್ಣತಮಾ ಪರಾ ॥ ೧೬ ॥

ಶುದ್ಧಸತ್ವಸ್ವರೂಪಾ ಚ ಸರ್ವಸೌಭಾಗ್ಯಸಂಯುತಾ ।
ಪ್ರೇಮ್ಣಾ ಸಾ ವೈ ಪ್ರಧಾನಾ ಚ ಸರ್ವಾಸು ರಮಣೀಷು ಚ ॥ ೧೭ ॥

---

೧೩. ತನ್ನ ನೇತ್ರಗಳ ಉಜ್ವಲಕಾಂತಿಯಿಂದ ಹಗಲಿರುಳೂ ವಿಶ್ವವನ್ನೆಲ್ಲಾ ಯಾರು ನೋಡಬಲ್ಲಳೋ, ಯಾರು ದೇವಿಯರಲ್ಲೆಲ್ಲಾ ಶ್ರೇಷ್ಠಳೆನಿಸಿರುವಳೋ ಆಕೆಯೇ ಮಹಾಲಕ್ಷ್ಮಿ ಎನಿಸಿಕೊಂಡಳು.

೧೪. ದ್ವಿಭುಜನು ರಾಧಾಪತಿಯೂ, ಚತುರ್ಭುಜನು ಲಕ್ಷ್ಮೀಪತಿಯೂ ಆದರು. ಅನಂತರ ದ್ವಿಭುಜನು ಗೋಪಗೋಪಿಯರಿಂದ ಪರಿವೃತನಾಗಿ ಗೋಲೋಕದಲ್ಲಿ ನೆಲೆಸಿದನು.

೧೫. ಚತುರ್ಭುಜನು ಮಹಾಲಕ್ಷ್ಮಿಯೊಡನೆ ವೈಕುಂಠಕ್ಕೆ ತೆರಳಿದನು. ಆದ್ದರಿಂದಲೇ ಶ್ರೀಕೃಷ್ಣನೂ, ಶ್ರೀಮನ್ನಾರಾಯಣನೂ, ಸಕಲಾಂಶದಿಂದಲೂ ಸಮಾನರೆನಿಸಿಕೊಂಡರು.

೧೬. ಮಹಾಲಕ್ಷ್ಮಿಯಾದರೋ ಯೋಗಶಕ್ತಿಯಿಂದ ವಿವಿಧ ರೂಪಧಾರಿಣಿಯಾದಳು. ವೈಕುಂಠದಲ್ಲಿ ಪರಿಪೂರ್ಣಸ್ವರೂಪಳಾಗಿ ಮಹಾಲಕ್ಷ್ಮಿ ಎನಿಸಿಕೊಂಡಳು.

೧೭. ಶುದ್ಧಸತ್ತ್ವಗುಣಪರಿಪೂರ್ಣಳೂ, ಸರ್ವಸೌಭಾಗ್ಯ ಸಂಯುತಳೂ ಆದ ಆ ಮಹಾಲಕ್ಷ್ಮಿಯು ನಾರಾಯಣನಿಗೆ ಪರಮ ಪ್ರೀತ್ಯಾಸ್ಪದಳಾದಳು.

ಸ್ವರ್ಗೇ ಚ ಸ್ವರ್ಗಲಕ್ಷ್ಮೀಶ್ಚ ಶಕ್ರಸಂಪತ್ಸ್ವರೂಪಿಣೀ ।
ಪಾತಾಲೇಷು ಚ ಮರ್ತ್ಯೇಷು ರಾಜಲಕ್ಷ್ಮೀಶ್ಚ ರಾಜಸು ॥ ೧೮ ॥

ಗೃಹಲಕ್ಷ್ಮೀರ್ಗೃಹೇಷ್ವೇವ ಗೃಹಿಣೀ ಚ ಕಲಾಂಶಯಾ ।
ಸಂಪತ್ಸ್ವರೂಪಾ ಗೃಹಿಣಾಂ ಸರ್ವಮಂಗಲಮಂಗಲಾ ॥ ೧೯ ॥

ಗವಾಂ ಪ್ರಸೂಃ ಸಾ ಸುರಭಿರ್ದಕ್ಷಿಣಾ ಯಜ್ಞಕಾಮಿನೀ ।
ಕ್ಷೀರೋದಸಿಂಧುಕನ್ಯಾ ಸಾ ಶ್ರೀರೂಪಾ ಪದ್ಮಿನೀಷು ಚ ॥ ೨೦ ॥

ಶೋಭಾರೂಪಾ ಚ ಚಂದ್ರೇ ಸಾ ಸೂರ್ಯಮಂಡಲಮಂಡಿತಾ ।
ವಿಭೂಷಣೇಷು ರತ್ನೇಷು ಫಲೇಷು ಜಲಜೇಷು ಚ ॥ ೨೧ ॥

ನೃಪೇಷು ನೃಪಪತ್ನೀಷು ದಿವ್ಯಸ್ತ್ರೀಷು ಗೃಹೇಷು ಚ ।
ಸರ್ವಸಸ್ಯೇಷು ವಸ್ತ್ರೇಷು ಸ್ಥಾನೇ ಸಾ ಸಂಸ್ಕೃತೇ ತಥಾ ॥ ೨೨ ॥

---

೧೮. ಸ್ವರ್ಗದಲ್ಲಿ ಸ್ವರ್ಗಲಕ್ಷ್ಮಿಯಾಗಿಯೂ, ಇಂದ್ರನ ಸಂಪದಧಿಷ್ಠಾತ್ರಿಯಾಗಿಯೂ, ಪಾತಾಳ ಮತ್ತು ಭೂಲೋಕದಲ್ಲಿರುವ ರಾಜರುಗಳಿಗೆ ರಾಜ್ಯಲಕ್ಷ್ಮಿಯಾಗಿಯೂ ಆದಳು.

೧೯. ಪ್ರತಿಯೊಂದು ಮನೆಯಲ್ಲಿಯೂ ಗೃಹಲಕ್ಷ್ಮಿಯಾಗಿಯೂ, ತನ್ನದೊಂದು ಕಲೆಯಿಂದ ಪ್ರತಿಯೊಬ್ಬ ಗೃಹಸ್ಥನಿಗೂ ಸಂಪತ್ಸ್ವರೂಪಳೂ, ಮಂಗಳದಾಯಕಿಯೂ ಆದ ಗೃಹಿಣಿಯೂ ಆದಳು.

೨೦. ಗೋವುಗಳ ಮಾತೆಯಾದ ಕಾಮಧೇನುವೂ, ಯಜ್ಞಪುರುಷನ ಪತ್ನಿಯಾದ ದಕ್ಷಿಣೆಯೂ, ಕ್ಷೀರಸಮುದ್ರನ ಪುತ್ರಿಯೂ, ತಾವರೆಗಳಿಗೆಲ್ಲ ಸಂಪತ್ಸ್ವರೂಪಳೂ ಮಹಾಲಕ್ಷ್ಮಿಯ ಕಲಾಂಶಜರೇ ಅಹುದು.

೨೧–೨೨. ಸೂರ್ಯಚಂದ್ರಬಿಂಬಗಳಲ್ಲೂ, ರತ್ನಾಭರಣಗಳಲ್ಲೂ, ಫಲಗಳಲ್ಲೂ, ಕಮಲಪುಷ್ಪಗಳಲ್ಲೂ, ರಾಜರಲ್ಲೂ, ರಾಣಿಯರಲ್ಲೂ. ದಿವ್ಯಸ್ತ್ರೀಯರಲ್ಲೂ, ದಿವ್ಯಮಂದಿರದಲ್ಲೂ, ಸಕಲಸಸ್ಯಗಳಲ್ಲೂ, ಉಜ್ವಲವಾದ ವಸ್ತ್ರಗಳಲ್ಲೂ, ಪವಿತ್ರವಾದ ಸ್ಥಾನಗಳಲ್ಲೂ, ಮಹಾಲಕ್ಷ್ಮಿಯು ಶೋಭಾರೂಪಳಾಗಿರುವಳು.

ಪ್ರತಿಮಾಸು ಚ ದೇವಾನಾಂ ಮಂಗಲೇಷು ಘಟೇಷು ಚ ।
ಮಾಣಿಕ್ಯೇಷು ಚ ಮುಕ್ತಾಸು ಮಾಲ್ಯೇಷು ಚ ಮನೋಹರಾ ॥ ೨೩ ॥

ಮಣೀಂದ್ರೇಷು ಚ ಹಾರೇಷು ಕ್ಷೀರೇ ವೈ ಚಂದನೇಷು ಚ ।
ವೃಕ್ಷಶಾಖಾಸು ರಮ್ಯಾಸು ನವಮೇಘೇಷು ವಸ್ತುಷು ॥ ೨೪ ॥

ವೈಕುಂಠೇ ಪೂಜಿತಾ ಸಾದೌ ದೇವೀ ನಾರಾಯಣೇನ ಚ ।
ದ್ವಿತೀಯೇ ಬ್ರಹ್ಮಣಾ ಭಕ್ತ್ಯಾ ತೃತೀಯೇ ಶಂಕರೇಣ ಚ ॥ ೨೫ ॥

ವಿಷ್ಣುನಾ ಪೂಜಿತಾ ಸಾ ಚ ಕ್ಷೀರೋದೇ ಭಾರತೇ ಮುನೇ ।
ಸ್ವಾಯಂಭುವೇನ ಮನುನಾ ಮಾನವೇಂದ್ರೈಶ್ಚ ಸರ್ವತಃ ॥ ೨೬ ॥

ಋಷೀಂದ್ರೈಶ್ಚ ಮುನೀಂದ್ರೈಶ್ಚ ಸದ್ಭಿಶ್ಚ ಗೃಹಿಭಿರ್ಭವೇತ್ ।
ಗಂಧರ್ವಾದ್ಯೈಶ್ಚ ನಾಗಾದ್ಯೈಃ ಪಾತಾಲೇಷು ಚ ಪೂಜಿತಾ ॥ ೨೭ ॥

೨೩–೨೪. ದೇವತಾಪ್ರತಿಮೆಗಳಲ್ಲೂ, ಮಂಗಳಕಲಶಗಳಲ್ಲೂ, ಮುತ್ತು ಮಾಣಿಕ್ಯಗಳಲ್ಲೂ, ಮನೋಹರವಾದ ಹಾರಗಳಲ್ಲೂ, ಶ್ರೇಷ್ಠವಾದ ಮಣಿ ಮತ್ತು ಮುಕ್ತಾಹಾರಗಳಲ್ಲೂ, ಹಾಲು, ಚಂದನಗಂಧ, ಮರದ ಕೊಂಬೆಗಳು ಮತ್ತು ರಮ್ಯವಾದ ನವಮೇಘಗಳಲ್ಲೂ ಮಹಾಲಕ್ಷ್ಮಿಯು ನೆಲೆಸಿರುವಳು.

೨೫. ಆ ಮಹಾಲಕ್ಷ್ಮೀದೇವಿಯು, ಮೊದಲು ವೈಕುಂಠದಲ್ಲಿ ನಾರಾಯಣನಿಂದಲೂ ಅನಂತರ ಬ್ರಹ್ಮ ಮತ್ತು ಶಂಕರರಿಂದಲೂ ಕ್ರಮವಾಗಿ ಪೂಜೆಗೊಂಡಳು.

೨೬. ಕ್ಷೀರಸಮುದ್ರದಲ್ಲಿ ಮಹಾವಿಷ್ಣುವಿನಿಂದಲೂ, ಭಾರತದಲ್ಲಿ ಸ್ವಾಯಂಭುವ ಮನುವಿನಿಂದಲೂ, ಮನುಜಶ್ರೇಷ್ಠರಿಂದಲೂ ಪೂಜೆಹೊಂದಿದಳು.

೨೭. ಋಷಿಮುನಿಶ್ರೇಷ್ಠರುಗಳಿಂದಲೂ, ಸತ್ಪುರುಷರಾದ ಗೃಹಸ್ಥರಿಂದಲೂ, ಗಂಧರ್ವರಿಂದಲೂ, ಪಾತಾಳದಲ್ಲಿರುವ ನಾಗರಿಂದಲೂ ಪೂಜಿತಳಾದಳು.

ಶುಕ್ಲಾಷ್ಟಮ್ಯಾಂ ಭಾದ್ರಪದೇ ಪೂಜಾ ವೈ ಬ್ರಹ್ಮಣಾ ಕೃತಾ ।
ಭಕ್ತ್ಯಾ ಚ ಪಕ್ಷಪರ್ಯಂತಂ ತ್ರಿಷು ಲೋಕೇಷು ನಾರದ ॥ ೨೮ ॥

ಚೈತ್ರೇ ಪೌಷೇ ಚ ಭಾದ್ರೇ ಚ ಪುಣ್ಯೇ ಮಂಗಲವಾಸರೇ ।
ವಿಷ್ಣುನಾ ನಿರ್ಮಿತಾ ಪೂಜಾ ತ್ರಿಷು ಲೋಕೇಷು ಭಕ್ತಿತಃ ॥ ೨೯ ॥

ವರ್ಷಾಂತೇ ಪೌಷಸಂಕ್ರಾಂತ್ಯಾಂ ಮೇಧ್ಯಾಮಾವಾಹ್ಯ ಚಾಂಗಣೇ ।
ಮನುಸ್ತಾಂ ಪೂಜಯಾಮಾಸ ಸಾ ಭೂತಾ ಭುವನತ್ರಯೇ ॥ ೩೦ ॥

ರಾಜ್ಞಾ ಸಂಪೂಜಿತಾ ಸಾ ವೈ ಮಂಗಲೇನೈವ ಮಂಗಲಾ ।
ಕೇದಾರೇಣೈವ ನೀಲೇನ ನಲೇನ ಸುಬಲೇನ ಚ ॥ ೩೧ ॥

ಧ್ರುವೇಣೌತ್ತಾನಪಾದೇನ ಶಕ್ರೇಣ ಬಲಿನಾ ತಥಾ ।
ಕಶ್ಯಪೇನ ಚ ದಕ್ಷೇಣ ಮನುನಾ ಚ ವಿವಸ್ವತಾ ॥ ೩೨ ॥

---

೨೮. ಭಾದ್ರಪದ ಶುಕ್ಲಾಷ್ಟಮಿಯ ದಿವಸ ಬ್ರಹ್ಮನು ಮಹಾಲಕ್ಷ್ಮಿಯ ಪೂಜೆಮಾಡಿದನು. ಅನಂತರ ಲೋಕತ್ರಯದಲ್ಲೂ ಪಕ್ಷಪರ್ಯಂತವಾಗಿ ಪೂಜೆ ಮಾಡಿದರು.

೨೯. ಚೈತ್ರ, ಪುಷ್ಯ ಮತ್ತು ಭಾದ್ರಪದಮಾಸದ ಪುಣ್ಯಮಂಗಳವಾಸರಗಳಲ್ಲಿ ತ್ರಿಲೋಕದಲ್ಲೂ ಭಕ್ತಿಯಿಂದ ಆಕೆಯ ಪೂಜೆಮಾಡಬೇಕೆಂದು ವಿಷ್ಣುವು ನಿಯಮಿಸಿರುವನು.

೩೦. ವರ್ಷದ ಕೊನೆಯ ಪುಷ್ಯಸಂಕ್ರಾಂತಿಯಲ್ಲಿ (ಉತ್ತರಾಯಣಪುಣ್ಯಕಾಲದ ದಿವಸ) ಪವಿತ್ರವಾದ ಅಂಗಣದಲ್ಲಿ ಮಹಾಲಕ್ಷ್ಮಿಯನ್ನು ಆವಾಹನೆಮಾಡಿ ಸ್ವಾಯಂಭುವಮನುವು ಪೂಜಿಸಿದನು. ಅವಳು ಭುವನತ್ರಯದಲ್ಲೂ ವಿಖ್ಯಾತಳಾದಳು.

೩೧–೩೩. ಮಂಗಳಕರಳಾದ ಆ ಲಕ್ಷ್ಮಿಯು ಮಂಗಳಭೂಪಾಲನಿಂದಲೂ, ಕೇದಾರ, ನೀಲ, ನಲ, ಸುಬಲ, ಉತ್ತಾನಪಾದನ ಮಗ ಧ್ರುವ, ದೇವೇಂದ್ರ,

ಪ್ರಿಯವ್ರತೇನ ಚಂದ್ರೇಣ ಕುಬೇರೇಣೈವ ವಾಯುನಾ ।
ಯಮೇನ ವಹ್ನಿನಾ ಚೈವ ವರುಣೇನೈವ ಪೂಜಿತಾ ॥ ೩೩ ॥

ಏವಂ ಸರ್ವತ್ರ ಸರ್ವೈಶ್ಚ ವಂದಿತಾ ಪೂಜಿತಾ ಸದಾ ।
ಸರ್ವೈಶ್ವರ್ಯಾಧಿದೇವೀ ಸಾ ಸರ್ವಸಂಪತ್ಸ್ವರೂಪಿಣೀ ॥ ೩೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಲಕ್ಷ್ಮ್ಯುಪಾಖ್ಯಾನೇ ಲಕ್ಷ್ಮೀ-
ಸ್ವರೂಪಪೂಜಾದಿವರ್ಣನಂ ನಾಮ
ಪಂಚತ್ರಿಂಶತ್ತಮೋಽಧ್ಯಾಯಃ

ಬಲಿಚಕ್ರವರ್ತಿ, ಕಶ್ಯಪ, ದಕ್ಷ, ಮನು, ವಿವಸ್ವಾನ್ (ಸೂರ್ಯ), ಪ್ರಿಯವ್ರತ, ಚಂದ್ರ, ಕುಬೇರ, ವಾಯು, ಯಮ. ವಹ್ನಿ, ವರುಣ, ಇವರೆಲ್ಲರಿಂದಲೂ ಪೂಜೆಗೊಂಡಳು.

೩೪. ಸಕಲೈಶ್ವರ್ಯಕ್ಕೆ ಅಧಿದೇವತೆಯೂ, ಸಕಲಸಂಪತ್ಸ್ವರೂಪಿಣಿಯೂ ಆದ ಮಹಾಲಕ್ಷ್ಮಿಯು ಹೀಗೆ ಸಕಲರಿಂದಲೂ ಸರ್ವದಾ ಪೂಜ್ಯಳಾದಳು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ನಾರದ ನಾರಾಯಣ
ಸಂವಾದರೂಪವಾದ ಲಕ್ಷ್ಮ್ಯುಪಾಖ್ಯಾನದಲ್ಲಿ ಲಕ್ಷ್ಮಿಯ ಸ್ವರೂಪ ಮತ್ತು
ಪೂಜಾದಿವರ್ಣನರೂಪವಾದ ಮೂವತ್ತೈದನೆಯ ಅಧ್ಯಾಯವು
ಮುಗಿದುದು.

ಮೂವತ್ತೈದನೆಯ ಅಧ್ಯಾಯದ ಸಾರಾಂಶವು

ಈ ಅಧ್ಯಾಯದಲ್ಲಿ ನಾರಾಯಣ ಮಹರ್ಷಿಯು ನಾರದನಿಗೆ ಮಹಾಲಕ್ಷ್ಮಿಯ ಮಹಿಮೆಯನ್ನು ತಿಳಿಸಿರುವನು. ಆದಿಸೃಷ್ಟಿಯಲ್ಲಿ ಶ್ರೀಕೃಷ್ಣಪರಮಾತ್ಮನ ವಾಮ ಭಾಗದಿಂದ ಲಕ್ಷ್ಮೀದೇವಿಯು ವ್ಯಕ್ತಳಾಗಿ ಈಶ್ವರೇಚ್ಛೆಯಂತೆ ಇಬ್ಬಗೆಯಾದಳು. ಆಕೆಯ ವಾಮಭಾಗವು ಮಹಾಲಕ್ಷ್ಮಿಯೆಂದೂ, ದಕ್ಷಿಣಭಾಗವು ರಾಧೆಯೆಂದೂ ಪ್ರಸಿದ್ಧವಾಯಿತು. ಅವರಿಬ್ಬರೂ ಶ್ರೀಕೃಷ್ಣನನ್ನೇ ವರಿಸಲು ಅವರ ತೃಪ್ತ್ಯರ್ಥವಾಗಿ ಶ್ರೀಕೃಷ್ಣನು ಇಬ್ಭಾಗವಾಗಿ ದ್ವಿಭುಜ ಮತ್ತು ಚತುರ್ಭುಜಗಳಿಂದ ಶೋಭಿಸಿದನು. ದ್ವಿಭುಜನು ರಾಧೆಯನ್ನು ವರಿಸಿ ಗೋಲೋಕದಲ್ಲೇ ನೆಲೆಸಿದನು. ಚತುರ್ಭುಜನು ಮಹಾಲಕ್ಷ್ಮಿಯನ್ನು ವರಿಸಿ ವೈಕುಂಠಕ್ಕೆ ತೆರಳಿದನು. ಪ್ರಪಂಚದಲ್ಲಿರುವ ಆಸೇಚನಕ (ಸುಂದರ)ವಾದ ವಸ್ತುಗಳಲ್ಲೆಲ್ಲ ಮಹಾಲಕ್ಷ್ಮಿಯ ಅಂಶವಿರುವುದು. ಮೊದಲು ಶ್ರೀಮನ್ನಾರಾಯಣನಿಂದ ಪೂಜಿತಳಾದ ಮಹಾಲಕ್ಷ್ಮಿಯು ಕ್ರಮವಾಗಿ ನಿಖಿಲ ವಿಶ್ವದಲ್ಲೂ ಪೂಜಿತಳಾಗಿ ಸಕಲಸಂಪತ್ಪ್ರದಾತ್ರಿಯೆನಿಸಿದಳು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಷಟ್ತ್ರಿಂಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ನಾರಾಯಣಪ್ರಿಯಾ ಸಾ ಚ ವರಾ ವೈಕುಂಠವಾಸಿನೀ ।
ವೈಕುಂಠಾಧಿಷ್ಠಾತೃದೇವೀ ಮಹಾಲಕ್ಷ್ಮೀ ಸನಾತನೀ || ೧ ||

ಕಥಂ ಬಭೂವ ಸಾ ದೇವೀ ಪೃಥಿವ್ಯಾಂ ಸಿಂಧುಕನ್ಯಕಾ ।
ಕಿಂ ತದ್ಧ್ಯಾನಂ ಚ ಕವಚಂ ಸರ್ವಂ ಪೂಜಾವಿಧಿಕ್ರಮಂ || ೨ ||

ಪುರಾ ಕೇನ ಸ್ತುತಾದೌ ಸಾ ತನ್ಮೇ ವ್ಯಾಖ್ಯಾತುಮರ್ಹಸಿ || ೩ ||

ಮೂವತ್ತಾರನೆಯ ಅಧ್ಯಾಯವು

೧-೩. ನಾರದನು ಕೇಳಿದನು :—ಶ್ರೀಮನ್ನಾರಾಯಣನಿಗೆ ಪ್ರಿಯಳೂ, ವೈಕುಂಠನಿವಾಸಿನಿಯೂ, ವೈಕುಂಠಕ್ಕೆ ಅಧಿಷ್ಠಾತೃದೇವಿಯೂ, ಅನಾದಿಯೂ ಆದ ಮಹಾಲಕ್ಷ್ಮಿಯು ಪೃಥಿವಿಯಲ್ಲಿ ಸಿಂಧುಕನ್ಯೆಯಾದ ಲಕ್ಷ್ಮಿಯಾದುದು ಹೇಗೆ ? ಆಕೆಯ ಧ್ಯಾನ, ಕವಚ ಮುಂತಾದ ಪೂಜಾಕ್ರಮವನ್ನೂ, ಮೊದಲು ಸಿಂಧುಕನ್ಯೆಯನ್ನು ಸ್ತುತಿಸಿದವರಾರು ? ಎಂಬುದನ್ನೂ ನನಗೆ ವಿವರಿಸು.

॥ ನಾರಾಯಣ ಉವಾಚ ॥

ಪುರಾ ದುರ್ವಾಸಸಃ ಶಾಪಾದ್ಭ್ರಷ್ಟಶ್ರೀಕಃ ಪುರಂದರಃ ।
ಬಭೂವ ದೇವಸಂಘಶ್ಚ ಮರ್ತ್ಯಲೋಕಶ್ಚ ನಾರದ ॥ ೪ ॥

ಲಕ್ಷ್ಮೀ ಸ್ವರ್ಗಾದಿಕಂ ತ್ಯಕ್ತ್ವಾ ರುಷ್ಟಾ ಪರಮದುಃಖಿತಾ ।
ಗತ್ವಾ ಲೀನಾ ಚ ವೈಕುಂಠೇ ಮಹಾಲಕ್ಷ್ಮ್ಯಾಂ ಚ ನಾರದ ॥ ೫ ॥

ತದಾ ಶೋಕಾದ್ಯಯುರ್ದೇವಾ ದುಃಖಿತಾ ಬ್ರಹ್ಮಣಃ ಸಭಾಂ ।
ಬ್ರಹ್ಮಾಣಂ ಚ ಪುರಸ್ಕೃತ್ಯ ಯಯುರ್ವೈಕುಂಠಮೇವ ಚ ॥ ೬ ॥

ವೈಕುಂಠೇ ಶರಣಾಪನ್ನಾ ದೇವಾ ನಾರಾಯಣೇ ಪರೇ ।
ಅತೀವ ದೈನ್ಯಯುಕ್ತಾಶ್ಚ ಶುಷ್ಕಕಂಠೌಷ್ಠತಾಲುಕಾಃ ॥ ೭ ॥

ತದಾ ಲಕ್ಷ್ಮೀಶ್ಚ ಕಲಯಾ ಪುರಾ ನಾರಾಯಣಾಜ್ಞಯಾ ।
ಬಭೂವ ಸಿಂಧುಕನ್ಯಾ ಸಾ ಶಕ್ರಸಂಪತ್ಸ್ವರೂಪಿಣೀ ॥ ೮ ॥

---

೪. ನಾರಾಯಣನು ಹೇಳಿದನು :—ಎಲೈ ನಾರದನೇ, ಹಿಂದೆ ದೂರ್ವಾಸರ ಶಾಪದಿಂದ ದೇವೇಂದ್ರನೂ, ದೇವತೆಗಳೂ, ಭೂಲೋಕವಾಸಿಗಳೂ ಕೂಡ ಸಂಪದ್ವಿರಹಿತರಾದರು.

೫. ಸಂಪದ್ರೂಪಳಾದ ಲಕ್ಷ್ಮಿಯು ಸ್ವರ್ಗಾದಿನಿವಾಸವನ್ನು ಬಿಟ್ಟು ಕುಪಿತಳೂ ದುಃಖಿತಳೂ ಆಗಿ ವೈಕುಂಠಕ್ಕೆ ಹೋಗಿ ಮಹಾಲಕ್ಷ್ಮಿಯಲ್ಲಿಯೇ ಐಕ್ಯಳಾದಳು.

೬. ಆಗ ದೇವತೆಗಳೆಲ್ಲ ದುಃಖಿತರಾಗಿ ಬ್ರಹ್ಮನ ಸಭೆಗೆ ತೆರಳಿದರು. ಬ್ರಹ್ಮನನ್ನು ಮುಂದುಮಾಡಿಕೊಂಡು ಅಲ್ಲಿಂದ ವೈಕುಂಠಕ್ಕೆ ತೆರಳಿದರು.

೭. ವೈಕುಂಠದಲ್ಲಿ ದೇವತೆಗಳೆಲ್ಲರೂ ಅತಿ ದೈನ್ಯದಿಂದಲೂ ಗದ್ಗದ ಕಂಠದಿಂದಲೂ ಶ್ರೀಮನ್ನಾರಾಯಣನನ್ನು ಸ್ತುತಿಸುತ್ತಾ ಶರಣಾಗತರಾದರು.

೮. ಆಗ ಮಹಾಲಕ್ಷ್ಮಿಯು ಶ್ರೀಮನ್ನಾರಾಯಣನ ಅಪ್ಪಣೆಯಂತೆ ತನ್ನ ಕಲಾಂಶದಿಂದ ಇಂದ್ರನ ಸಂಪತ್ಸ್ವರೂಪಳಾದ ಸಿಂಧುಕನ್ಯೆಯೆನಿಸಿಕೊಂಡಳು.

ತದಾ ಮಥಿತ್ವಾ ಕ್ಷೀರೋದಂ ದೇವಾ ದೈತ್ಯಗಣೈಃ ಸಹ ।
ಸಂಪ್ರಾಪುಶ್ಚ ವರಂ ಲಕ್ಷ್ಮ್ಯಾಃ ದದೃಶುಸ್ತಾಂ ಚ ತತ್ರ ಹಿ ॥ ೯ ॥

ಸುರಾದಿಭ್ಯೋ ವರಂ ದತ್ವಾ ವನಮಾಲಾಂ ಚ ವಿಷ್ಣವೇ ।
ದದೌ ಪ್ರಸನ್ನವದನಾ ತುಷ್ಟಾ ಕ್ಷೀರೋದಶಾಯಿನೇ ॥ ೧೦ ॥

ದೇವಾಶ್ಚಾಪ್ಯಸುರಾಕ್ರಾಂತಂ ರಾಜ್ಯಂ ಪ್ರಾಪುಶ್ಚ ತದ್ವರಾತ್ ।
ತಾಂ ಸಂಪೂಜ್ಯ ಚ ಸಂಸ್ತೂಯ ಸರ್ವತ್ರ ಚ ನಿರಾಪದಃ ॥ ೧೧ ॥

॥ ನಾರದ ಉವಾಚ ॥

ಕಥಂ ಶಶಾಪ ದುರ್ವಾಸಾ ಮುನಿಶ್ರೇಷ್ಠಃ ಪುರಂದರಂ ।
ಕೇನ ದೋಷೇಣ ವಾ ಬ್ರಹ್ಮನ್ ಬ್ರಹ್ಮಿಷ್ಠಂ ಬ್ರಹ್ಮವಿತ್ಪರಾ ॥ ೧೨ ॥

ಮಮನ್ಥೇ ಕೇನ ರೂಪೇಣ ಜಲಧಿಸ್ತೈಃ ಸುರಾದಿಭಿಃ ।
ಕೇನ ಸ್ತೋತ್ರೇಣ ಸಾ ದೇವೀ ಶಕ್ರೇ ಸಾಕ್ಷಾದ್ಬಭೂವ ಹ ॥ ೧೩ ॥

---

೯. ದೇವತೆಗಳು ರಾಕ್ಷಸರೊಡಗೂಡಿ ಕ್ಷೀರಸಮುದ್ರವನ್ನು ಕಡೆದು, ಲಕ್ಷ್ಮಿಯ ವರದಿಂದ ಸಿಂಧುಕನ್ಯೆಯನ್ನು ಪಡೆದರು.

೧೦. ಆ ಲಕ್ಷ್ಮಿಯು ದೇವತೆಗಳಿಗೆಲ್ಲ ವರವನ್ನು ಕೊಟ್ಟು ಪ್ರಸನ್ನಮುಖದಿಂದ ಕ್ಷೀರಸಮುದ್ರಶಾಯಿಯಾದ ವಿಷ್ಣುವಿಗೆ ವನಮಾಲೆಯೊಂದನ್ನರ್ಪಿಸಿದಳು.

೧೧. ದೇವತೆಗಳೆಲ್ಲರೂ ಆ ಲಕ್ಷ್ಮಿಯನ್ನು ಪೂಜಿಸಿ ನುತಿಸಿ ಆಕೆಯ ವರದಿಂದ ರಾಕ್ಷಸರಿಗೆ ಸಿಕ್ಕಿಹೋಗಿದ್ದ ರಾಜ್ಯವನ್ನು ಹಿಂದಕ್ಕೆ ಪಡೆದು ನಿರಾತಂಕವಾಗಿದ್ದರು.

೧೨. ನಾರದ :—ಎಲೈ ಮಹರ್ಷಿಯೇ, ಬ್ರಹ್ಮಜ್ಞಾನಿಯಾದ ದೂರ್ವಾಸ ಮುನಿಶ್ರೇಷ್ಠನು ದೇವೇಂದ್ರನಲ್ಲಿ ಯಾವ ದೋಷವನ್ನು ಕಂಡು ಬ್ರಹ್ಮಪರಾಯಣನಾದ ಅವನಿಗೆ ಶಾಪವಿತ್ತನು.

೧೩–೧೪. ಆ ದೇವತೆಗಳೆಲ್ಲರೂ ಸಮುದ್ರವನ್ನು ಕಡೆದುದು ಹೇಗೆ? ಲಕ್ಷ್ಮಿದೇವಿಯು ದೇವೇಂದ್ರನ ಯಾವ ಸ್ತೋತ್ರಕ್ಕೆ ಮೆಚ್ಚಿ ಆತನಿಗೆ ತನ್ನ ದರ್ಶನ

ಕೋ ವಾ ತಯೋಶ್ಚ ಸಂವಾದೋ ಹ್ಯಭವತ್ತದ್ವದ ಪ್ರಭೋ ॥ ೧೪ ॥

॥ ನಾರಾಯಣ ಉವಾಚ ॥

ಮಧುಪಾನಪ್ರಮತ್ತಶ್ಚ ತ್ರೈಲೋಕ್ಯಾಧಿಪತಿಃ ಪುರಾ ।
ಕ್ರೀಡಾಂ ಚಕಾರ ರಹಸಿ ರಂಭಯಾ ಸಹ ಕಾಮುಕಃ ॥ ೧೫ ॥

ಕೃತ್ವಾ ಕ್ರೀಡಾಂ ತಯಾ ಸಾರ್ಧಂ ಕಾಮುಕ್ಯಾ ಹೃತಚೇತನಃ ।
ತಸ್ಥೌ ತತ್ರ ಮಹಾರಣ್ಯೇ ಕಾಮೋನ್ಮಥಿತಚೇತನಃ ॥ ೧೬ ॥

ಕೈಲಾಸಶಿಖರಂ ಯಾಂತಂ ವೈಕುಂಠಾದೃಷಿಪುಂಗವಂ ।
ದುರ್ವಾಸಸಂ ದದರ್ಶೇಂದ್ರೋ ಜ್ವಲಂತಂ ಬ್ರಹ್ಮತೇಜಸಾ ॥ ೧೭ ॥

ವನ್ನಿತ್ತಳು? ಅವರಿಬ್ಬರಿಗೆ ನಡೆದ ಸಂಭಾಷಣೆ ಏನೆಂಬುದನ್ನು ನನಗೆ ವಿಸ್ತಾರವಾಗಿ ಹೇಳು.

೧೫. ನಾರಾಯಣ :—ಎಲೈ ನಾರದನೇ, ಇಂದ್ರನಿಗೆ ದೂರ್ವಾಸನ ಶಾಪ ಬರಲು ಕಾರಣವನ್ನು ಹೇಳುತ್ತೇನೆ. ಆಲಿಸು. ಹಿಂದೊಮ್ಮೆ ತ್ರಿಲೋಕಾಧಿಪತಿಯಾದ ದೇವೇಂದ್ರನು ಮಧ್ಯಪಾನದಿಂದ ಮದಿಸಿದವನಾಗಿ, ಕಾಮುಕವೃತ್ತಿಯಿಂದ ರಂಭೆಯೊಡನೆ ಏಕಾಂತದಲ್ಲಿ ಕ್ರೀಡಿಸುತ್ತಿದ್ದನು.

೧೬. ಕಾಮುಕಿಯಾದ ಆ ರಂಭೆಯ ಮೋಹಕ್ಕೆ ಪರವಶವಾಗಿ ಆಕೆಯೊಡನೆ ರತಿಕ್ರೀಡೆಯಾಡಿ, ಮನ್ಮಥಾಧೀನಮನಸ್ಕನಾಗಿ ಮಹಾರಣ್ಯದಲ್ಲಿದ್ದನು.

೧೭. ಆಗ ವೈಕುಂಠದಿಂದ ಕೈಲಾಸಪರ್ವತದ ಶಿಖರಕ್ಕೆ ಪ್ರಯಾಣಮಾಡುತ್ತಿರುವ, ಬ್ರಹ್ಮತೇಜಸ್ಸಿನಿಂದ ಉಜ್ವಲನಾದ ದೂರ್ವಾಸಮುನಿಶ್ರೇಷ್ಠನನ್ನು ಇಂದ್ರನು ನೋಡಿದನು.

ಗ್ರೀಷ್ಮಮಧ್ಯಾಹ್ನಮಾರ್ತಾಂಡಸಹಸ್ರಪ್ರಭಮೀಶ್ವರಂ ।
ಪ್ರತಪ್ತಕಾಂಚನಾಭಾಸಂ ಜಟಾಭಾರಮಹೋಜ್ಜ್ವಲಂ ॥ ೧೮ ॥

ಶುಕ್ಲಯಜ್ಞೋಪವೀತಂ ಚ ಚೀರಂ ದಂಡಂ ಕಮಂಡಲುಂ ।
ಮಹೋಜ್ಜ್ವಲಂ ಚ ತಿಲಕಂ ಬಿಭ್ರತಂ ಚಂದ್ರಸನ್ನಿಭಂ ॥ ೧೯ ॥

ಸಮನ್ವಿತಂ ಶಿಷ್ಯವರ್ಗೈರ್ವೇದವೇದಾಂಗಪಾರಗೈಃ ।
ದೃಷ್ಟ್ವಾ ನನಾಮ ಶಿರಸಾ ಸಂಭ್ರಮಾತ್ತಂ ಪುರಂದರಃ ॥ ೨೦ ॥

ಶಿಷ್ಯವರ್ಗಂ ಸಭಕ್ತ್ಯಾ ವೈ ತುಷ್ಟಾವ ಚ ಮುದಾನ್ವಿತಃ ।
ಮುನಿನಾ ಚ ಸಶಿಷ್ಯೇಣ ತಸ್ಮೈ ದತ್ತಾಶ್ಶುಭಾಶಿಷಃ ॥ ೨೧ ॥

ವಿಷ್ಣುದತ್ತಂ ಪಾರಿಜಾತಪುಷ್ಪಂ ಚ ಸುಮನೋಹರಂ ।
ಮೃತ್ಯುರೋಗಜರಾಶೋಕಹರಂ ಮೋಕ್ಷಕರಂ ದದೌ ॥ ೨೨ ॥

೧೮–೨೦. ಗ್ರೀಷ್ಮ ಮಧ್ಯಾಹ್ನದ ಸಹಸ್ರಸೂರ್ಯರಂತೆ ತೇಜಸ್ಸಿನಿಂದ ಉಜ್ವಲನಾಗಿಯೂ, ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವಾದ ಜಟೆಗಳ ಸಮೂಹದಿಂದ ಮನೋಹರನಾಗಿಯೂ ಇದ್ದ ಆ ಮಹರ್ಷಿಯು ಬಿಳುಪಾದ ಯಜ್ಞೋಪವೀತವನ್ನೂ, ನಾರುಮಡಿಯನ್ನೂ, ದಂಡಕಮಂಡಲುಗಳನ್ನೂ ಧರಿಸಿ ಚಂದ್ರನಂತೆ ಕಾಂತಿಯುತವಾದ ಮುಖದಲ್ಲಿ ಕಸ್ತೂರೀತಿಲಕವನ್ನಿಟ್ಟು, ವೇದವೇದಾಂಗಪಾರಂಗತವಾದ ಶಿಷ್ಯವೃಂದ ಪರಿವೃತನಾಗಿ ಹೋಗುತ್ತಿರಲು ದೇವೇಂದ್ರನು ಅವನನ್ನು ನೋಡಿ ಸಂಭ್ರಮದಿಂದ ನಮಸ್ಕರಿಸಿದನು.

೨೧. ಶಿಷ್ಯವೃಂದವನ್ನೂ ಕೂಡ ಭಕ್ತಿಯಿಂದ ಸ್ತುತಿಸಿದನು. ಆಗ ಸಶಿಷ್ಯನಾದ ಮಹರ್ಷಿಯು ಅವನಿಗೆ ಮಂಗಳಾಶೀರ್ವಾದಗಳನ್ನು ಅನುಗ್ರಹಿಸಿದನು.

೨೨. ಅಲ್ಲದೆ, ರೋಗ ಶೋಕಗಳನ್ನೂ ಜರಾಮರಣಗಳನ್ನೂ ಪರಿಹರಿಸಿ ಮೋಕ್ಷವನ್ನು ಕೊಡುವ, ವಿಷ್ಣುವು ತನಗೆ ಕೊಟ್ಟ, ಪಾರಿಜಾತಪುಷ್ಪವನ್ನು ಅವನಿಗಿತ್ತನು.

ಶಕ್ರಃ ಪುಷ್ಪಂ ಗೃಹೀತ್ವಾ ಚ ಪ್ರಮತ್ತೋ ರಾಜಸಂಪದಾ ।
ಭ್ರಮೇಣ ಸ್ಥಾಪಯಾಮಾಸ ತತ್ರ ವೈ ಹಸ್ತಿಮಸ್ತಕೇ　　॥ ೨೩ ॥

ಹಸ್ತೀ ತತ್ಸ್ಪರ್ಶಮಾತ್ರೇಣ ರೂಪೇಣ ಚ ಗುಣೇನ ಚ ।
ತೇಜಸಾ ವಯಸಾ ಕಾಂತ್ಯಾ ವಿಷ್ಣುತುಲ್ಯೋ ಬಭೂವ ಸಃ　　॥ ೨೪ ॥

ತ್ಯಕ್ತ್ವಾ ಶಕ್ರಂ ಗಜೇಂದ್ರಶ್ಚಾಪ್ಯಗಚ್ಛದ್ಘೋರಕಾನನಂ ।
ನ ಶಶಾಕ ಮಹೇಂದ್ರಸ್ತಂ ರಕ್ಷಿತುಂ ತೇಜಸಾ ಮುನೇ　　॥ ೨೫ ॥

ತತ್ಪುಷ್ಪಂ ತ್ಯಕ್ತವಂತಂ ಚ ದೃಷ್ಟ್ವಾ ಶಕ್ರಂ ಮುನೀಶ್ವರಃ ।
ತಂ ಶಶಾಪ ಮಹಾತೇಜಾಃ ಕ್ರೋಧಸಂರಕ್ತಲೋಚನಃ　　॥ ೨೬ ॥

॥ ದುರ್ವಾಸಾ ಉವಾಚ ॥

ಅರೇ ಶ್ರಿಯಾ ಪ್ರಮತ್ತಸ್ತ್ವಂ ಕಥಂ ಮಾಮವಮನ್ಯಸೇ ।
ಮದ್ದತ್ತಪುಷ್ಪಂ ಗರ್ವೇಣ ತ್ಯಕ್ತವಾನ್ ಹಸ್ತಿಮಸ್ತಕೇ　　॥ ೨೭ ॥

---

೨೩. ದೇವೇಂದ್ರನು ಆ ಪುಷ್ಪವನ್ನು ಸ್ವೀಕರಿಸಿದರೂ, ರಾಜ್ಯಸಂಪತ್ತಿನಿಂದ ಮದಿಸಿದವನಾಗಿ, ಆ ಪುಷ್ಪವನ್ನು ಭ್ರಾಂತಿಯಿಂದ ಆನೆಯ ತಲೆಯ ಮೇಲಿಟ್ಟನು.

೨೪. ಆನೆಯು ಆ ಪುಷ್ಪಸ್ಪರ್ಶಮಾತ್ರದಿಂದಲೇ ಗುಣರೂಪಗಳಲ್ಲೂ, ತೇಜಸ್ಸು, ವಯಸ್ಸು ಮತ್ತು ಕಾಂತಿಯಿಂದಲೂ ವಿಷ್ಣುವಿಗೆ ಸಮವಾಯಿತು.

೨೫. ಆಗ ಆ ಆನೆಯು ದೇವೇಂದ್ರನನ್ನು ಬಿಟ್ಟು ಭಯಂಕರವಾದ ಅರಣ್ಯವನ್ನು ಪ್ರವೇಶಿಸಿತು. ಆಗ ಇಂದ್ರನು ಆ ಆನೆಯನ್ನು ತನ್ನ ತೇಜಸ್ಸಿನಿಂದ ರಕ್ಷಿಸಲು ಸಮರ್ಥನಾಗಲಿಲ್ಲ.

೨೬. ದೇವೇಂದ್ರನು ಈ ರೀತಿಯಾಗಿ ತಾನು ಕೊಟ್ಟ ಪ್ರಸಾದವನ್ನು ಅಸಡ್ಡೆಯಿಂದ ಆನೆಯ ಮೇಲೆ ಹಾಕಿದುದನ್ನು ನೋಡಿ ಆ ಮಹರ್ಷಿಯು ಕೋಪದಿಂದ ಕಣ್ಣುಗಳನ್ನು ಕೆಂಪಾಗಿಮಾಡಿಕೊಂಡು ಅವನಿಗೆ ಶಾಪವಿತ್ತನು

೨೭. ದೂರ್ವಾಸ ಋಷಿ :—ಐಶ್ವರ್ಯಮದದಿಂದ ಕೊಬ್ಬಿರುವ ನೀನು ನನಗೆ ಗೌರವಕೊಡದೆ ತಿರಸ್ಕರಿಸಿ ನಾನು ಕೊಟ್ಟ ಪುಷ್ಪವನ್ನು ಆನೆಯ ತಲೆಯ ಮೇಲೆ ಹಾಕಿದೆಯಲ್ಲವೇ ?

ವಿಷ್ಣೋರ್ನಿವೇದಿತಂ ಪುಷ್ಪಂ ನೈವೇದ್ಯಂ ವಾ ಫಲಂ ಜಲಂ ।
ಪ್ರಾಪ್ತಿಮಾತ್ರೇಣ ಭೋಕ್ತವ್ಯಂ ತ್ಯಾಗೇನ ಬ್ರಹ್ಮಹಾ ಜನಃ ॥ ೨೮ ॥

ಭ್ರಷ್ಟಶ್ರೀರ್ಭ್ರಷ್ಟಬುದ್ಧಿಶ್ಚ ಭ್ರಷ್ಟಜ್ಞಾನೋ ಭವೇನ್ನರಃ ।
ಯಸ್ತ್ಯಜೇದ್ವಿಷ್ಣುನೈವೇದ್ಯಂ ಭಾಗ್ಯೇನೋಪಸ್ಥಿತಂ ಶುಭಂ ॥ ೨೯ ॥

ಪ್ರಾಪ್ತಿಮಾತ್ರೇಣ ಯೋ ಭುಙ್ಕ್ತೇ ಭಕ್ತ್ಯಾ ವಿಷ್ಣುನಿವೇದಿತಂ ।
ಪುಂಸಾಂ ಶತಂ ಸಮುದ್ಧೃತ್ಯ ಜೀವನ್ಮುಕ್ತಃ ಸ್ವಯಂ ಭವೇತ್ ॥ ೩೦ ॥

ವಿಷ್ಣುನೈವೇದ್ಯಭೋಜೀ ಯೋ ನಿತ್ಯಂ ತು ಪ್ರಣಮೇದ್ಧರಿಂ ।
ಪೂಜಯೇತ್ಸ್ತೌತಿ ವಾ ಭಕ್ತ್ಯಾ ಸ ವಿಷ್ಣುಸದೃಶೋ ಭವೇತ್ ॥ ೩೧ ॥

---

೨೮. ವಿಷ್ಣುವಿಗೆ ಅರ್ಪಿಸಿದ ಫಲಪುಷ್ಪವನ್ನಾಗಲೀ, ಅಭಿಷೇಕಮಾಡಿದ ಜಲವನ್ನಾಗಲೀ, ಹೊಂದಿದ ಕ್ಷಣದಲ್ಲಿಯೇ ಭುಂಜಿಸದೆ ಬಿಡುವವನು ಬ್ರಹ್ಮಹತ್ಯಾ ದೋಷಕ್ಕೆ ಗುರಿಯಾಗುವನು

೨೯. ಜನ್ಮಾಂತರದ ಸತ್ಕರ್ಮದ ಫಲವಾಗಿ ಲಭಿಸಿದ ವಿಷ್ಣುವಿನ ನೈವೇದ್ಯವನ್ನು ಅಸಡ್ಡೆಯಿಂದ ಕಾಣುವ ಮನುಷ್ಯನು ಸಂಪತ್ತಿನಿಂದಲೂ, ಬುದ್ಧಿಯಿಂದಲೂ, ಜ್ಞಾನದಿಂದಲೂ ಭ್ರಷ್ಟನಾಗುವುದರಲ್ಲಿ ಸಂಶಯವಿಲ್ಲ.

೩೦. ವಿಷ್ಣು ನೈವೇದ್ಯವು ಸಿಕ್ಕಿದ ಮಾತ್ರದಿಂದಲೇ ಭಕ್ತಿಯಿಂದ ಭುಂಜಿಸುವವನು ತನ್ನ ವಂಶದಲ್ಲಿ ನೂರಾರು ಜನಗಳನ್ನು ಉದ್ಧರಿಸಿ ತಾನೂ ಜೀವನ್ಮುಕ್ತನಾಗುವನು-

೩೧. ಯಾರು ನಿತ್ಯವೂ ಶ್ರೀಹರಿಯನ್ನು ಭಕ್ತಿಯಿಂದ ಪೂಜಿಸಿ, ಸ್ತುತಿಸಿ, ನಮಿಸುವರೋ, ತಪ್ಪದೆ ನೈವೇದ್ಯವನ್ನು ಭುಜಿಸುವರೋ ಅವರು ವಿಷ್ಣು ಸಮಾನರಾಗುವರು.

ತತ್ಸ್ಪರ್ಶನಾಯುನಾ ಸದ್ಯಸ್ತೀರ್ಥೌಘಶ್ಚ ವಿಶುದ್ಧ್ಯತಿ ।
ತತ್ಪಾದರಜಸಾ ಮೂಢ ಸದ್ಯಃ ಪೂತಾ ವಸುಂಧರಾ ॥ ೩೨ ॥

ಪುಂಶ್ಚಲ್ಯನ್ನಮವೀರಾನ್ನಂ ಶೂದ್ರಶ್ರಾದ್ಧಾನ್ನಮೇವ ಚ ।
ಯದ್ಧರೇರನಿವೇದ್ಯಂ ಚ ವೃಥಾ ಮಾಂಸಮಭಕ್ಷಕಂ ॥ ೩೩ ॥

ಶಿವಲಿಂಗಪ್ರದತ್ತಾನ್ನಂ ಯದನ್ನಂ ಶೂದ್ರಯಾಜಿನಾಂ ।
ಚಿಕಿತ್ಸಕದ್ವಿಜಾನಾಂ ಚ ದೇವಲಾನ್ನಂ ತಥೈವ ಚ ॥ ೩೪ ॥

ಕನ್ಯಾವಿಕ್ರಯಿಣಾಮನ್ನಂ ಯದನ್ನಂ ಯೋನಿಜೀವಿನಾಂ ।
ಅನುಷ್ಣಾನ್ನಂ ಪರ್ಯುಷಿತಂ ಸರ್ವಭಕ್ಷ್ಯಾವಶೇಷಿತಂ ॥ ೩೫ ॥

---

೩೨. ವಿಷ್ಣುಭಕ್ತನನ್ನು ಸ್ಪರ್ಶಮಾಡಿದ ವಾಯುವಿನ ಸಂಪರ್ಕದಿಂದ ಪುಣ್ಯ ತೀರ್ಥಗಳೂ ಶುದ್ಧಿಹೊಂದುವುವು. ಅವನ ಪಾದಧೂಳಿಯ ಸ್ಪರ್ಶದಿಂದ ವಸುಂಧರೆಯೂ ಶುದ್ಧಿ ಹೊಂದುವುದು.

೩೩. ಗಂಡುಬೀರಿಯರು ಮತ್ತು ಪತಿಪುತ್ರರಹಿತರು ಮಾಡಿದ ಅನ್ನವನ್ನೂ, ಶೂದ್ರ ಶ್ರಾದ್ಧಾನ್ನವನ್ನೂ, ಪರಮಾತ್ಮನಿಗೆ ನಿವೇದಿಸದಿರುವ ಮಾಂಸಾದಿಗಳನ್ನೂ ತಿನ್ನಕೂಡದು.

೩೪. ಶಿವಲಿಂಗಕ್ಕೆ ಅರ್ಪಿಸಿದ ಅನ್ನವನ್ನೂ, ಶೂದ್ರನಿಗೆ ಯಾಗ ಮಾಡಿಸುವವರ ಅನ್ನವನ್ನೂ, ವೈದ್ಯನಾದ ಬ್ರಾಹ್ಮಣನ ಮತ್ತು ಪೂಜಾರಿಯ ಅನ್ನವನ್ನೂ ತಿನ್ನಕೂಡದು.

೩೫. ಮಗಳನ್ನು ಮಾರಿ ಜೀವಿಸುವ ಮತ್ತು ಸ್ತ್ರೀಧನದಿಂದ ಜೀವಿಸುವವರ ಅನ್ನವನ್ನೂ, ಬಿಸಿಯಲ್ಲದೆ ತಂಗಳಾಗಿರುವ ಅನ್ನವನ್ನೂ, ಎಲ್ಲರೂ ತಿಂದು ಮಿಕ್ಕ ಅನ್ನವನ್ನೂ ತಿನ್ನಕೂಡದು.

ಶೂದ್ರಾಪತಿದ್ವಿಜಾನ್ನಂ ಚ ವೃಷವಾಹದ್ವಿಜಾನ್ನಕಂ ।
ಅದೀಕ್ಷಿತದ್ವಿಜಾನ್ನಂ ಚ ಯದನ್ನಂ ಶವದಾಹಿನಾಂ ॥ ೩೬ ॥

ಅಗಮ್ಯಗಾಮಿನಾಂ ಚೈವ ದ್ವಿಜಾನಾಮನ್ನಮೇವ ಚ ।
ಮಿತ್ರದ್ರುಹಾಂ ಕೃತಘ್ನಾನಾಮನ್ನಂ ವಿಶ್ವಾಸಘಾತಿನಾಂ ॥ ೩೭ ॥

ಮಿಥ್ಯಾಸಾಕ್ಷ್ಯಪ್ರದಾನಾಂ ಚ ಬ್ರಾಹ್ಮಣಾನಾಂ ತಥೈವ ಚ ।
ಏತತ್ಸರ್ವಂ ವಿಶುದ್ಧ್ಯೇತ ವಿಷ್ಣುನೈವೇದ್ಯ ಭಕ್ಷಣಾತ್ ॥ ೩೮ ॥

ಶ್ವಪಚೋ ವಿಷ್ಣುಸೇವೀ ಚ ವಂಶಾನಾಂ ಕೋಟಿಮುದ್ಧರೇತ್ ।
ಹರೇರಭಕ್ತೋ ವಿಪ್ರಶ್ಚ ಸ್ವಂ ಚ ರಕ್ಷಿತುಮಕ್ಷಮಃ ॥ ೩೯ ॥

---

೩೬. ಶೂದ್ರಸ್ತ್ರೀಗೆ ಪತಿಯಾದ ಬ್ರಾಹ್ಮಣನ ಅನ್ನವನ್ನೂ, ಎತ್ತುಗಳಿಂದ ಜೀವಿಸುವ ಬ್ರಾಹ್ಮಣನ ಅನ್ನವನ್ನೂ, ಯಜ್ಞದೀಕ್ಷೆಯನ್ನು ಕೈಗೊಳ್ಳದಿರುವ ಬ್ರಾಹ್ಮಣನ ಅನ್ನವನ್ನೂ, ಹೆಣವನ್ನು ಸುಡುವವರ ಅನ್ನವನ್ನೂ ತಿನ್ನಬಾರದು.

೩೭. ಪ್ರವೇಶಿಸಬಾರದ ಕಡೆಗೆ ಪ್ರವೇಶಿಸುವ ಬ್ರಾಹ್ಮಣರ ಅನ್ನವನ್ನೂ, ಮಿತ್ರದ್ರೋಹಿಗಳು ಮಾಡಿದ ಉಪಕಾರವನ್ನು ಸ್ಮರಿಸದವರ, ಮತ್ತು ನಂಬಿಸಿ ಮೋಸಗೊಳಿಸುವವರ ಅನ್ನವನ್ನೂ ತಿನ್ನಬಾರದು.

೩೮. ಸುಳ್ಳು ಸಾಕ್ಷ್ಯಹೇಳುವ ಬಾಹ್ಮಣರ ಅನ್ನವನ್ನೂ, ಮೇಲೆ ಹೇಳಿದ ಇತರರ ಅನ್ನವನ್ನೂ ಒಂದುವೇಳೆ ತಿಂದರೂ, ವಿಷ್ಣುವಿಗೆ ನಿವೇದಿಸಿದ ಅನ್ನವನ್ನು ತಿನ್ನುವುದರಿಂದ ಆ ಪಾಪ ಪರಿಹಾರವಾಗುವುದು.

೩೯. ಶುದ್ಧಾಚಾರರಹಿತನಾದರೂ ವಿಷ್ಣುಸೇವೆ ಮಾಡಿದರೆ ತನ್ನ ಕೋಟಿ ಕುಲವನ್ನುದ್ಧರಿಸುವನು. ಹರಿಭಕ್ತನಲ್ಲದ ಬ್ರಾಹ್ಮಣನು ತನ್ನನ್ನೇ ತಾನು ರಕ್ಷಿಸಿಕೊಳ್ಳಲಾರನು.

ಅಜ್ಞಾನಾದ್ಯದಿ ಗೃಹ್ಣಾತಿ ವಿಷ್ಣೋರ್ನಿರ್ಮಾಲ್ಯಮೇವ ಚ ।
ಸಪ್ತಜನ್ಮಾರ್ಜಿತಾತ್ಪಾಪಾನ್ಮುಚ್ಯತೇ ನಾತ್ರ ಸಂಶಯಃ ॥ ೪೦ ॥

ಜ್ಞಾತ್ವಾ ಭಕ್ತ್ಯಾ ಚ ಗೃಹ್ಣಾತಿ ವಿಷ್ಣೋರ್ನೈವೇದ್ಯಮೇವ ಚ ।
ಕೋಟಿಜನ್ಮಾರ್ಜಿತಾತ್ಪಾಪಾನ್ಮುಚ್ಯತೇ ನಾತ್ರ ಸಂಶಯಃ ॥ ೪೧ ॥

ಯಸ್ಮಾತ್ತ್ವಂಸ್ಥಾಪಿತಂ ಪುಷ್ಪಂ ಗರ್ವಾದ್ವೈ ಹಸ್ತಿಮಸ್ತಕೇ ।
ತಸ್ಮಾದ್ಯುಷ್ಮಾನ್ಪರಿತ್ಯಜ್ಯ ಯಾತು ಲಕ್ಷ್ಮೀರ್ಹರೇಃ ಪದಂ ॥ ೪೨ ॥

ನಾರಾಯಣಸ್ಯ ಭಕ್ತೋಽಹಂ ನ ಬಿಭೇಮೀಶ್ವರಂ ವಿಧಿಂ ।
ಕಾಲಂ ಮೃತ್ಯುಂ ಜರಾಂ ಚೈವ ಕಾನನ್ಯಾನ್ಗಣಯಾಮಿ ಚ ॥ ೪೩ ॥

ಕಿಂ ಕರಿಷ್ಯತಿ ತೇ ತಾತಃ ಕಶ್ಯಪಶ್ಚ ಪ್ರಜಾಪತಿಃ ।
ಬೃಹಸ್ಪತಿರ್ಗುರುಶ್ಚೈವ ನಿಶ್ಶಂಕಸ್ಯ ಚ ಮೇ ಹರೇಃ ॥ ೪೪ ॥

---

೪೦. ಅಜ್ಞಾನದಿಂದಲಾದರೂ ವಿಷ್ಣುವಿಗೆ ಪೂಜಿಸಿದ ನಿರ್ಮಾಲ್ಯಪುಷ್ಪವನ್ನು ತೆಗೆದುಕೊಳ್ಳುವವನು ಏಳು ಜನ್ಮಗಳಲ್ಲಿ ಮಾಡಿದ ಸಕಲ ಪಾಪಗಳಿಂದ ಮುಕ್ತನಾಗುವನು.

೪೧. ಹೀಗಿರುವಾಗ ಉದ್ದೇಶಪೂರ್ವಕವಾಗಿ ಭಕ್ತಿಯಿಂದ ವಿಷ್ಣುವಿನ ನೈವೇದ್ಯವನ್ನು ತಿನ್ನುವವನು ಕೋಟಿ ಜನ್ಮಗಳಿಂದ ಮಾಡಿದ ಪಾಪಗಳನ್ನು ಕಳೆದು ಕೊಳ್ಳುವನೆಂಬುದರಲ್ಲಿ ಅನುಮಾನವಿಲ್ಲ.

೪೨. ಎಲೈ ಇಂದ್ರನೇ, ನೀನು ಗರ್ವದಿಂದ ಆನೆಯ ತಲೆಯ ಮೇಲೆ ಪ್ರಸಾದದ ಹೂಮಾಲೆಯನ್ನಿಟ್ಟ ಕಾರಣ ನಿನ್ನನ್ನು ಬಿಟ್ಟು ಸಂಪದ್ರೂಪಳಾದ ಲಕ್ಷ್ಮಿಯು ಶ್ರೀಹರಿಯ ಪಾದಾರವಿಂದಗಳಲ್ಲಿ ಸೇರಲಿ.

೪೩. ಶ್ರೀಮನ್ನಾರಾಯಣನ ಭಕ್ತನಾದ ನಾನು ಈಶ್ವರನಿಗಾಗಲೀ, ಬ್ರಹ್ಮನಿಗಾಗಲೀ, ಹೆದರುವುದಿಲ್ಲ. ಕಾಲ, ಮೃತ್ಯು, ಜರಾ ಮುಂತಾದ ಉಳಿದವರನ್ನು ನಾನು ಗಣನೆಗೇ ಇಟ್ಟಿಲ್ಲ.

೪೪. ಹೀಗಿರುವಾಗ ನಿನ್ನ ತಂದೆಯಾದ ಕಶ್ಯಪಪ್ರಜಾಪತಿಯಾಗಲೀ, ಗುರುವಾದ ಬೃಹಸ್ಪತ್ಯಾಚಾರ್ಯನಾಗಲೀ, ಹರಿಭಕ್ತಿಯಿಂದ ನಿಃಶಂಕನಾಗಿರುವ ನನ್ನನ್ನೇನು ಮಾಡುವನು ?

ಇದಂ ಪುಷ್ಪಂ ಯಸ್ಯ ಮೂರ್ಧ್ನಿ ತಸ್ಯ ವೈ ಪೂಜನಂ ಪುರಃ ।
ಮೂರ್ಧ್ನಿಚ್ಛಿನ್ನೇ ಶಿವಶಿಶೋಶ್ಛಿತ್ತ್ವೇದಂ ಯೋಜಯಿಷ್ಯತಿ || ೪೫ ||

ಇತಿ ಶ್ರುತ್ವಾ ಮಹೇಂದ್ರಶ್ಚ ಧೃತ್ವಾ ತಚ್ಚರಣದ್ವಯಂ ।
ಉಚ್ಚೈ ರುರೋದ ಶೋಕಾರ್ತಸ್ತಮುವಾಚ ಭಯಾಕುಲಃ || ೪೬ ||

|| ಇಂದ್ರ ಉವಾಚ ||

ದತ್ತಃ ಸಮುಚಿತೋ ಶಾಪೋ ಮಹ್ಯಂ ಮತ್ತಾಯ ಹೇ ಪ್ರಭೋ ।
ಹೃತಾ ತ್ವಯಾ ಚೇತ್ಸಮ್ಪತ್ತಿಃ ಕಿಯದ್ಜ್ಞಾನಂ ಚ ದೇಹಿ ಮೇ || ೪೭ ||

ಐಶ್ವರ್ಯಂ ವಿಪದಾಂ ಬೀಜಂ ಪ್ರಚ್ಛನ್ನಜ್ಞಾನಕಾರಣಂ ।
ಮುಕ್ತಿಮಾರ್ಗಾರ್ಗಲಂ ದಾರ್ಢ್ಯಾದ್ಧರಿಭಕ್ತಿವ್ಯಪಾಯಕಂ || ೪೮ ||

---

೪೫. ಈ ಪಾರಿಜಾತಪುಷ್ಪವು ಯಾರ ತಲೆಯ ಮೇಲಿರುವುದೋ ಅವನಿಗೆ ಮೊದಲು ಪೂಜೆಯಾಗಬೇಕು. ಆದ್ದರಿಂದ ಈಶ್ವರ ಪುತ್ರನಾದ ವಿಘ್ನೇಶನ ತಲೆಯನ್ನು ಕತ್ತರಿಸಿದಾಗ ಈ ಆನೆಯ ತಲೆಯನ್ನು ಅದಕ್ಕೆ ಜೋಡಿಸುವರು.

೪೬. ಈ ಮಾತುಗಳನ್ನು ಕೇಳಿದ ಮಹೇಂದ್ರನು ಆ ಮಹರ್ಷಿಯ ಕಾಲುಗಳನ್ನು ಹಿಡಿದುಕೊಂಡು ದುಃಖದಿಂದ ಗಟ್ಟಿಯಾಗಿ ಗೋಳಾಡುತ್ತಾ ಭಯದಿಂದ ಅವನನ್ನು ಕುರಿತಿಂತೆಂದನು.

೪೭. ಇಂದ್ರ:—ಎಲೈ ಪ್ರಭುವೇ, ಐಶ್ವರ್ಯದಿಂದ ಮದಿಸಿದ್ದ ನನಗೆ ಉಚಿತವಾದ ಶಾಪವನ್ನು ನೀನು ಕೊಟ್ಟೆ. ನನ್ನ ಸಂಪತ್ತನ್ನು ನೀನು ನಾಶಗೊಳಿಸಿದೆಯಾದರೂ, ನನಗೆ ದಿವ್ಯಜ್ಞಾನವನ್ನು ಬೋಧಿಸಿ ಅನುಗ್ರಹಿಸು.

೪೮. ಐಶ್ವರ್ಯವು ಕಷ್ಟಗಳಿಗೂ, ಅಜ್ಞಾನಕ್ಕೂ ಮೂಲಕಾರಣವಾಗುವುದು. ಮುಕ್ತಿಮಾರ್ಗಕ್ಕೆ ಅಡ್ಡಿಯಾಗಿಯೂ, ಹರಿಭಕ್ತಿನಾಶಕವಾಗಿಯೂ ಇರುವುದು.

ಜನ್ಮಮೃತ್ಯುಜರಾರೋಗಶೋಕದುಃಖಾಂಕುರಂ ಪರಂ |
ಸಂಪತ್ತಿತಿಮಿರಾಂಧಶ್ಚ ಮುಕ್ತಿಮಾರ್ಗಂ ನ ಪಶ್ಯತಿ || ೪೯ ||

ಸಂಪನ್ಮತ್ತಃ ಸುಮೂಢಶ್ಚ ಸುರಾಮತ್ತಃ ಸಚೇತನಃ |
ಬಾಂಧವೈರ್ವೇಷ್ಟಿತಃ ಸೋಽಪಿ ಬಂಧುದ್ವೇಷಕರೋ ಮುನೇ || ೫೦ ||

ಸಂಪನ್ಮದೇ ಪ್ರಮತ್ತಶ್ಚ ವಿಷಯಾಂಧಶ್ಚ ವಿಹ್ವಲಃ |
ಮಹಾಕಾಮೀ ಸಾಹಸಿಕಃ ಸತ್ವಮಾರ್ಗಂ ನ ಪಶ್ಯತಿ || ೫೧ ||

ದ್ವಿವಿಧೋ ವಿಷಯಾಂಧಶ್ಚ ರಾಜಸಸ್ತಾಮಸಃ ಸ್ಮೃತಃ |
ಅಶಾಸ್ತ್ರಜ್ಞಸ್ತಾಮಸಶ್ಚ ಶಾಸ್ತ್ರಜ್ಞೋ ರಾಜಸಃ ಸ್ಮೃತಃ || ೫೨ ||

ಶಾಸ್ತ್ರೇ ಚ ದ್ವಿವಿಧಂ ಮಾರ್ಗಂ ನಿರ್ದಿಷ್ಟಂ ಮುನಿಪುಂಗವ |
ಪ್ರವೃತ್ತಿಬೀಜಮೇಕಂ ಚ ನಿವೃತ್ತೇಃ ಕಾರಣಂ ಪರಂ || ೫೩ ||

---

೪೯. ಜನ್ಮಜರಾಮರಣಗಳಿಗೂ ದುಃಖಶೋಕಗಳಿಗೂ ಐಶ್ವರ್ಯವೇ ಅಂಕುರವೆನಿಸುವುದು. ಸಂಪತ್ತೆಂಬ ಅಜ್ಞಾನದಿಂದ ಅಂಧನಾದವನು ಮುಕ್ತಿಯ ಮಾರ್ಗವನ್ನು ಕಾಣಲಾರನು.

೫೦. ಸಂಪತ್ತಿನಿಂದಲೂ, ಮದ್ಯಪಾನದಿಂದಲೂ ಮದಿಸಿರುವ ಮೂಢನು, ಸಚೇತನನಾಗಿ ಬಂಧುಗಳಿಂದ ಪರಿವೃತನಾಗಿದ್ದರೂ ಬಂಧುದ್ವೇಷಿಯಾಗುವನು.

೫೧. ಐಶ್ವರ್ಯಮದದಿಂದ ತುಂಬಿತುಳುಕುತ್ತ ವಿಷಯಾಸಕ್ತಿಯಿಂದ ಕುರುಡನಾಗಿ ಕಾಮಾಸಕ್ತನೂ ಸಾಹಸಿಕನೂ ಆದವನು ಸತ್ಯಮಾರ್ಗವನ್ನೇ ಅರಿಯನು.

೫೨. ವಿಷಯಾಸಕ್ತರಲ್ಲಿ ರಜೋಗುಣಪ್ರಧಾನರು ಮತ್ತು ತಮೋಗುಣಪ್ರಧಾನರೆಂದು ಎರಡು ರೀತಿ ಇರುವರು. ಅವರಲ್ಲಿ ಶಾಸ್ತ್ರಜ್ಞಾನವಿಲ್ಲದವನು ತಾಮಸನೂ, ಶಾಸ್ತ್ರಜ್ಞಾನವಿರುವವನು ರಾಜಸನೂ ಎನಿಸಿಕೊಳ್ಳುವನು.

೫೩. ಎಲೈ ಮುನಿಶ್ರೇಷ್ಠನೇ, ಶಾಸ್ತ್ರವು ಎರಡು ರೀತಿಯಾಗಿರುವುದು. ಅದರಲ್ಲಿ ಒಂದು ಸಂಸಾರದಲ್ಲಿ ಪ್ರವೃತ್ತಿಗೆ ಕಾರಣವಾಗಿಯೂ ಮತ್ತೊಂದು ನಿವೃತ್ತಿಗೆ ಕಾರಣವಾಗಿಯೂ ಇರುವುದು.

ಚರಂತಿ ಜೀವಿನಶ್ಚಾದೌ ಪ್ರವೃತ್ತೌ ದುಃಖವರ್ತ್ಮನಿ ।
ಸ್ವಚ್ಛಂದೇ ಚಾಪ್ರಸನ್ನೇ ಚ ನಿರ್ನಿರೋಧೇ ಚ ಸಂತತಂ ॥ ೫೪ ॥

ಆಪಾತಮಧುರೇ ಲೋಭಾತ್ಕ್ಲೇಶೇ ಚ ಸುಖಮಾನಿನಃ ।
ಪರಿಣಾಮೋತ್ಪತ್ತಿಬೀಜೇ ಜನ್ಮಮೃತ್ಯುಜರಾಕರೇ ॥ ೫೫ ॥

ಅನೇಕಜನ್ಮಪರ್ಯಂತಂ ಕೃತ್ವಾ ಚ ಭ್ರಮಣಂ ಮುದಾ ।
ಸ್ವಕರ್ಮವಿಹಿತಾಯೋಂ ಚ ನಾನಾಯೋನ್ಯಾಂ ಕ್ರಮೇಣ ಚ ॥ ೫೬ ॥

ತತಃ ಕೃಷ್ಣಾನುಗ್ರಹಾಚ್ಚ ಸತ್ಸಂಗಂ ಲಭತೇ ಜನಃ ।
ಸಹಸ್ರೇಷು ಶತೇಷ್ವೇಕೋ ಭವಾಬ್ಧೇಃ ಪಾರಕಾರಣಂ ॥ ೫೭ ॥

ಸಾಧುಃ ಸತ್ವಪ್ರದೀಪೇನ ಮುಕ್ತಿಮಾರ್ಗಂ ಪ್ರದರ್ಶಯೇತ್ ।
ತದಾ ಕರೋತಿ ಯತ್ನಂ ಚ ಜೀವೀ ಬಂಧನಖಂಡನೇ ॥ ೫೮ ॥

---

೫೪. ಜೀವಿಗಳು ಮೊದಲು ಯಾವ ಅಡ್ಡಿ ಆತಂಕಗಳೂ ಇಲ್ಲದೆ ಸ್ವಚ್ಛಂದವಾಗಿಯೂ, ಕಲುಷಿತವಾಗಿಯೂ, ಇರುವ ದುಃಖಕರವಾದ ಪ್ರವೃತ್ತಿಮಾರ್ಗದಲ್ಲಿ ಅವಿರತವಾಗಿ ಆಸಕ್ತರಾಗಿರುವರು.

೫೫. ಪ್ರವೃತ್ತಿಮಾರ್ಗವು ಮುಖಮಧುರವಾಗಿಯೂ, ಪರಿಣಾಮದಲ್ಲಿ ಜನ್ಮ ಮೃತ್ಯು ಜರಾದಿ ಕ್ಲೇಶದಾಯಕವಾಗಿಯೂ, ಮಧ್ಯೇ ಮಧ್ಯೇ ಕ್ಷಣಿಕಸುಖದಿಂದ ಲೋಭಕರವಾಗಿಯೂ ಇರುವುದು.

೫೬–೫೭. ಅನೇಕ ಜನ್ಮಗಳವರೆಗೆ ತನ್ನ ಕರ್ಮಾನುಗುಣವಾದ ವಿವಿಧ ಯೋನಿಗಳಲ್ಲಿ ಜನ್ಮವೆತ್ತಿ ಸಂಸಾರದಲ್ಲಿ ಭ್ರಮಿಸುತ್ತಿದ್ದು, ಅನಂತರ ಸಾವಿರಕ್ಕೋ ಅಥವಾ ನೂರಕ್ಕೋ ಒಬ್ಬನು ಕೃಷ್ಣಪರಮಾತ್ಮನ ಅನುಗ್ರಹದಿಂದ ಸಂಸಾರಸಾಗರ ತಾರಕವಾದ ಸತ್ಸಂಗವನ್ನು ಪಡೆಯುವನು.

೫೮. ಸತ್ಪುರುಷನು ಸತ್ವಗುಣವನ್ನುದ್ರೇಕಗೊಳಿಸಿ ಮುಕ್ತಿಮಾರ್ಗವನ್ನು ಬೆಳಗಿಸುವನು. ಆಗ ಅಜ್ಞನಾದ ಜೀವಿಯು ಸಂಸಾರಬಂಧನದಿಂದ ಬಿಡುಗಡೆ ಹೊಂದುವುದಕ್ಕೆ ಪ್ರಯತ್ನಮಾಡುವನು.

ಅನೇಕಜನ್ಮಯೋಗೇನ ತಪಸಾಽನಶನೇನ ಚ ।
ತದಾ ಲಭೇನ್ಮುಕ್ತಿಮಾರ್ಗಂ ನಿರ್ವಿಘ್ನಂ ಸುಖದಂ ಪರಂ ॥ ೫೯ ॥

ಇದಂ ಶ್ರುತಂ ಗುರೋರ್ವಕ್ತ್ರಾತ್ಪ್ರಸಂಗಾವಸರೇಣ ಚ ।
ನ ಹಿ ಪೃಷ್ಟಮತೋಽನ್ಯಚ್ಚ ಭವದುಃಖೌಘವೇಷ್ಟಿತಾಃ ॥ ೬೦ ॥

ಅಧುನಾ ವಿಧಿನಾ ದತ್ತೋ ವಿಪತ್ತೌ ಜ್ಞಾನಸಾಗರಃ ।
ಸಂಪದ್ರೂಪಾ ವಿಪದಿಯಂ ಮಮ ನಿಸ್ತಾರಕಾರಿಣೀ ॥ ೬೧ ॥

ಜ್ಞಾನಸಿಂಧೋ ದೀನಬಂಧೋ ಮಹ್ಯಂ ದೀನಾಯ ಸಾಂಪ್ರತಂ ।
ದೇಹಿ ಕಿಂಚಿತ್ ಜ್ಞಾನಸಾರಂ ಭವಪಾರಂ ದಯಾನಿಧೇ ॥ ೬೨ ॥

---

೫೯. ಅನೇಕ ಜನ್ಮಗಳಲ್ಲಿ ನಿಶ್ಚಲವಾದ ತಪಸ್ಸನ್ನೂ, ಅನಶನವ್ರತವನ್ನೂ ಆಚರಿಸಿದನಂತರ ನಿರ್ವಿಘ್ನವೂ, ಸುಖಕರವೂ ಆದ ನಿವೃತ್ತಿಮಾರ್ಗವನ್ನು ಆಶ್ರಯಿಸುವನು.

೬೦. ಕಥಾಂತರ ಪ್ರಸಂಗದಲ್ಲಿ ಇದನ್ನು ಗುರುಮುಖದಿಂದ ಕೇಳಿ ತಿಳಿದುಕೊಂಡೆನು. ಇದಕ್ಕಿಂತ ಬೇರೆ ವಿಷಯವನ್ನು, ಸಂಸಾರದುಃಖ ಸಮೂಹದಿಂದ ಪರಿವೃತನಾಗಿ ನಾನು ಕೇಳಲಿಲ್ಲ.

೬೧. ಈಗ ನನ್ನ ಸುದೈವದಿಂದ ಕಷ್ಟ ಒದಗಿ ಜ್ಞಾನೋದಯವಾಯಿತು. ನನ್ನ ಉದ್ಧಾರಕ್ಕೆ ಕಾರಣವಾದ ಈ ವಿಪತ್ತು ನನಗೆ ಸಂಪದ್ರೂಪವಾಗಿಯೇ ತೋರುವುದು.

೬೨. ದೀನಬಂಧುವೂ, ಜ್ಞಾನಸಾಗರನೂ ಆದ ಎಲೈ ಮಹರ್ಷಿಯೇ, ದೀನನಾದ ನನಗೆ ಈಗ ಸಂಸಾರಸಾಗರತಾರಕವಾದ ದಿವ್ಯಜ್ಞಾನಸಾರವನ್ನು ದಯೆಯಿಟ್ಟು ಉಪದೇಶಿಸು.

ಇಂದ್ರಸ್ಯ ವಚನಂ ಶ್ರುತ್ವಾ ಪ್ರಹಸ್ಯ ಜ್ಞಾನಿನಾಂ ಗುರುಃ ।
ಜ್ಞಾನಂ ಕಥಿತುಮಾರೇಭೇ ಹ್ಯತಿತುಷ್ಟಃ ಸನಾತನಃ ॥ ೬೩ ॥

॥ ದುರ್ವಾಸಾ ಉವಾಚ ॥

ಅಹೋ ಮಹೇಂದ್ರ ಮಾಂಗಲ್ಯಮಾತ್ಮಾನಂ ದ್ರಷ್ಟುಮಿಚ್ಛಸಿ ।
ಆಪಾತತೋ ದುಃಖಬೀಜಂ ಪರಿಣಾಮಸುಖಾವಹಂ ॥ ೬೪ ॥

ಸ್ವಗರ್ಭಯಾತನಾನಾನಾಶಪೀಡಾಖಂಡನಕಾರಣಂ ।
ದುಷ್ಪಾರಾಸಾರದುರ್ವಾರಸಂಸಾರಾರ್ಣವತಾರಕಂ ॥ ೬೫ ॥

ಕರ್ಮವೃಕ್ಷಾಂಕುರಚ್ಛೇದಕಾರಣಂ ಸರ್ವತಾರಕಂ ।
ಸಂತೋಷಸಂತತಿಕರಂ ಪ್ರವರಂ ಸರ್ವವರ್ತ್ಮನಾಂ ॥ ೬೬ ॥

---

೬೩. ಇಂದ್ರನ ಈ ಮಾತುಗಳನ್ನು ಕೇಳಿ ಜ್ಞಾನಿಗಳಿಗೆಲ್ಲ ಗುರುವೆನಿಸಿದ ಸನಾತನ ಜ್ಞಾನಿಯಾದ ಆ ಮಹರ್ಷಿಯು ಸ್ವಲ್ಪ ನಕ್ಕು ಸಂತುಷ್ಟಾಂತರಂಗನಾಗಿ ಜ್ಞಾನೋಪದೇಶವಾಡಲಾರಂಭಿಸಿದನು.

೬೪. ದೂರ್ವಾಸ ಮಹರ್ಷಿ :—ಎಲೈ ಮಹೇಂದ್ರನೇ, ಮೊದಮೊದಲು ದುಃಖಕರವಾದರೂ ಪರಿಣಾಮ ಸುಖಕರವಾದ ಮಂಗಳಸ್ವರೂಪವಾದ ಪರಮಾತ್ಮ ಜ್ಞಾನವನ್ನು ತಿಳಿಯಬಯಸುವೆಯಲ್ಲವೆ ?

೬೫. ಆ ಪರಮಾತ್ಮನು, ಗರ್ಭದಲ್ಲಿ ಪ್ರವೇಶಿಸಿ ಜಂತುವು ಅನುಭವಿಸಬೇಕಾದ ಅನೇಕ ವಿಧವಾದ ಯಾತನೆಯನ್ನೂ, ಪೀಡೆಯನ್ನೂ, ಪರಿಹರಿಸಲು ಕಾರಣನೂ, ಕೊನೆಯಿಲ್ಲದೆ ;ನಿಸ್ಸಾರವೂ, ದುರ್ವಾರವೂ ಆದ ಸಂಸಾರಸಾಗರವನ್ನು ದಾಟಿಸುವವನೂ ಆಗಿರುವನು.

೬೬. ಅಲ್ಲದೆ ಕರ್ಮವೆಂಬ ವೃಕ್ಷದ ಮೊಳಕೆಯನ್ನೇ ಕತ್ತರಿಸಿ, ಸಕಲಕರ್ಮಗಳಿಂದಲೂ ಪಾರುಗಾಣಿಸಿ, ಸಮಸ್ತ ಮಾರ್ಗಗಳಲ್ಲೂ ಅತ್ಯುತ್ತಮವಾದ ಆನಂದ ಮಾರ್ಗವನ್ನು ತೋರಿಸುವನು.

ದಾನೇನ ತಪಸಾ ವಾಪಿ ವ್ರತೇನಾನಶನಾದಿನಾ ।
ಕರ್ಮಣಾಸ್ವರ್ಗಭೋಗಾದಿ ಸುಖಂ ಭವತಿ ಜೀವಿನಾಂ ॥ ೬೭ ॥

ಕಾಮ್ಯಾನಾಂ ಕರ್ಮಣಾಂ ಚೈವ ಮೂಲಂ ಸಂಛಿದ್ಯ ಯತ್ನತಃ ।
ಅಧುನೇದಂ ಮೋಕ್ಷಬೀಜಂ ಸಂಕಲ್ಪಾಭಾವ ಏವ ಚ ॥ ೬೮ ॥

ಯತ್ಕರ್ಮ ಸಾತ್ವಿಕಂ ಕುರ್ಯಾದಸಂಕಲ್ಪಿತಮೇವ ಚ ।
ಸರ್ವಂ ಕೃಷ್ಣಾರ್ಪಣಂ ಕೃತ್ವಾ ಪರೇ ಬ್ರಹ್ಮಣಿ ಲೀಯತೇ ॥ ೬೯ ॥

ಸಾಂಸಾರಿಕಾಣಾಮೇತತ್ತು ನಿರ್ವಾಣಂ ಮೋಚಕಂ ವಿದುಃ ।
ನೇಚ್ಛಂತಿ ವೈಷ್ಣವಾಸ್ತತ್ತು ಸೇವಾವಿರಹಕಾತರಾಃ ॥ ೭೦ ॥

ಸೇವಾಂ ಕುರ್ವಂತಿ ತೇ ನಿತ್ಯಂ ವಿಧಾಯೋತ್ತಮದೇಹಕಂ ।
ಗೋಲೋಕೇ ವಾಪಿ ವೈಕುಂಠೇ ತಸ್ಯೈವ ಪರಮಾತ್ಮನಃ ॥ ೭೧ ॥

---

೬೭. ತಪೋದಾನಗಳಿಂದಲೂ, ಅನಶನಾದಿ ವ್ರತಗಳಿಂದಲೂ, ಪುಣ್ಯಕರ್ಮಾಚರಣೆಯಿಂದಲೂ, ಜೀವಿಗಳಿಗೆ ಸ್ವರ್ಗಸುಖವು ಲಭಿಸುವುದು

೬೮. ಕಾಮ್ಯಕರ್ಮಗಳ ಬೇರನ್ನೇ ಯತ್ನಪೂರ್ವಕವಾಗಿ ಕತ್ತರಿಸಿ, ನಿಷ್ಕಾಮದಿಂದ ಸತ್ಕರ್ಮವನ್ನು ಆಚರಿಸುವುದೇ ಮೋಕ್ಷಕ್ಕೆ ಬೀಜವು.

೬೯. ಸಂಕಲ್ಪರಹಿತವಾದ ಸಾತ್ವಿಕ ಕರ್ಮವನ್ನು ಕೃಷ್ಣಾರ್ಪಣಬುದ್ಧಿಯಿಂದ ಆಚರಿಸಿದರೆ ಆ ಮನುಜನು ಪರಬ್ರಹ್ಮನಲ್ಲಿ ಐಕ್ಯತೆಯನ್ನು ಹೊಂದುವನು.

೭೦. ಸಂಸಾರವಂದಿಗರು ಇದನ್ನು ಭವಬಂಧಮೋಚಕವಾದ ಮೋಕ್ಷವೆನ್ನುವರು. ಪರಮಾತ್ಮನ ಸೇವೆಯನ್ನು ಬಿಡಲಾರದೆ ಕಾತರಪಡುವ ವಿಷ್ಣುಭಕ್ತರು ಈ ರೀತಿಯಾದ ಮೋಕ್ಷವನ್ನು ಬಯಸುವುದಿಲ್ಲ.

೭೧. ಆ ಭಕ್ತರೆಲ್ಲರೂ ದಿವ್ಯದೇಹಧಾರಿಗಳಾಗಿ, ಗೋಲೋಕದಲ್ಲಾಗಲೀ, ವೈಕುಂಠದಲ್ಲಾಗಲೀ ಆ ಪರಮಾತ್ಮನ ಸೇವೆಯನ್ನು ಅನವರತವೂ ಮಾಡುತ್ತಿರುವರು.

ಹರಿಸೇವಾದಿರೂಪಾಂ ಚ ಮುಕ್ತಿಮಿಚ್ಛಂತಿ ವೈಷ್ಣವಾಃ ।
ಜೀವನ್ಮುಕ್ತಾಶ್ಚ ತೇ ಶಕ್ರ ಸ್ವಕುಲೋದ್ಧಾರಕಾರಿಣಃ ॥ ೭೨ ॥

ಸ್ಮರಣಂ ಕೀರ್ತನಂ ವಿಷ್ಣೋರರ್ಚನಂ ಪಾದಸೇವನಂ ।
ವಂದನಂ ಸ್ತವನಂ ನಿತ್ಯಂ ಭಕ್ತ್ಯಾ ನೈವೇದ್ಯಭಕ್ಷಣಂ ॥ ೭೩ ॥

ಚರಣೋದಕಪಾನಂ ಚ ತನ್ಮಂತ್ರಜಪನಂ ಪರಂ ।
ಇದಂ ನಿಸ್ತಾರಬೀಜಂ ಚ ಸರ್ವೇಷಾಮೀಪ್ಸಿತಂ ಭವೇತ್ । ॥ ೭೪ ॥

ಇದಂ ಮೃತ್ಯುಂಜಯಜ್ಞಾನಂ ದತ್ತಂ ಮೃತ್ಯುಂಜಯೇನ ಮೇ ।
ತಚ್ಛಿಷ್ಯೋಽಹಂ ಚ ನಿಶ್ಶಂಕಸ್ತತ್ಪ್ರಸಾದಾಚ್ಚ ಸರ್ವತಃ ॥ ೭೫ ॥

ಸ ಜನ್ಮದಾತಾ ಸ ಗುರುಃ ಸ ಚ ಬಂಧುಃ ಸತಾಂ ಪರಃ ।
ಯೋ ದದಾತಿ ಹರೇರ್ಭಕ್ತಿಂ ತ್ರೈಲೋಕ್ಯೇ ಚ ಸುದುರ್ಲಭಾಂ ॥ ೭೬ ॥

---

೭೨. ಎಲೈ ಇಂದ್ರನೇ, ತಮ್ಮ ಕುಲೋದ್ಧಾರಕ್ಕೆ ಕಾರಣರಾದ ವೈಷ್ಣವರು ಜೀವನ್ಮುಕ್ತರೆನಿಸಿ ಹರಿಸೇವಾರೂಪವಾದ ಮುಕ್ತಿಯನ್ನೇ ಬಯಸುವರು.

೭೩–೭೪. ವಿಷ್ಣುವಿನ ಸ್ಮರಣೆ, ನಾಮಸಂಕೀರ್ತನೆ, ಪೂಜೆ, ಪಾದಸೇವೆ, ವಂದನೆ, ಸ್ತುತಿ, ಭಕ್ತಿಪೂರ್ವಕವಾಗಿ ವಿಷ್ಣುವಿಗೆ ನಿವೇದಿಸಿದುದನ್ನು ತಿನ್ನುವಿಕೆ, ವಿಷ್ಣುವಿನ ಪಾದೋದಕವನ್ನು ಪಾನಮಾಡುವಿಕೆ, ಪರಮಮಂತ್ರವನ್ನು ಜಪಿಸುವಿಕೆ, ಇವಿಷ್ಟೂ ಸಂಸಾರಸಾಗರದಿಂದ ದಾಟಲು ಸಾಧನವೆಂದು ಭಕ್ತರಿಗೆಲ್ಲ ಈಪ್ಸಿತವಾಗಿರುವುದು.

೭೫. ಮೃತ್ಯುಂಜಯನಾದ ಪರಶಿವನು, ಮೃತ್ಯುವನ್ನು ಜಯಿಸುವ ದಿವ್ಯಜ್ಞಾನವನ್ನು ನನಗೆ ಬೋಧಿಸಿದನು. ಈಶ್ವರಭಕ್ತನಾದ ನಾನು, ಅವನ ದಿವ್ಯಾನುಗ್ರಹದಿಂದ ಯಾವ ಭಯವೂ ಇಲ್ಲದೆ ಎಲ್ಲೆಡೆಯಲ್ಲೂ ವಿಹರಿಸುತ್ತಿರುವೆನು.

೭೬. ಲೋಕತ್ರಯದಲ್ಲೂ ಹೊಂದಲು ಸುಲಭವಲ್ಲದ ಹರಿಭಕ್ತಿಯನ್ನು ಉಪದೇಶಿಸುವ ಸತ್ಪುರುಷನೇ ತಂದೆ, ಗುರು, ಬಂಧು ಎಂಬ ಹೆಸರಿಗೆ ಯೋಗ್ಯನಾಗುವನು.

ದರ್ಶಯೇದನ್ಯಮಾರ್ಗಂ ಚ ವಿನಾ ಶ್ರೀಕೃಷ್ಣ ಸೇವನಂ ।
ಸ ಚ ತಂ ನಾಶಯೆತ್ಯೇವ ಧ್ರುವಂ ತದ್ವಧಭಾಗ್ಭವೇತ್ ॥ ೭೭ ॥

ಸಂತತಂ ಜಗತಾಂ ಕೃಷ್ಣನಾಮ ಮಂಗಲಕಾರಣಂ ।
ಮಂಗಲಂ ವರ್ಧತೇ ನಿತ್ಯಂ ನ ಭವೇದಾಯುಷೋ ವ್ಯಯಃ ॥ ೭೮ ॥

ತೇಭ್ಯೋಽಪ್ಯಪೈತಿ ಕಾಲಶ್ಚ ಮೃತ್ಯುಸ್ಸ್ಯಾದ್ರೋಗ ಏವ ಚ ।
ಸಂತಾಪಶ್ಚೈವ ಶೋಕಶ್ಚ ವೈನತೇಯಾದಿವೋರಗಾಃ ॥ ೭೯ ॥

ಕೃಷ್ಣಮಂತ್ರೋಪಾಸಕಶ್ಚ ಬ್ರಾಹ್ಮಣಃ ಶ್ವಪಚೋಽಪಿ ವಾ ।
ಬ್ರಹ್ಮಲೋಕಂ ಸಮುಲ್ಲಂಘ್ಯ ಯಾತಿ ಗೋಲೋಕಮುತ್ತಮಂ ॥ ೮೦ ॥

ಚರಣೋದಕಪಾನಂ ಚ ತನಂತ್ರಜಪನಂ ಪರಂ ।
ಬ್ರಹ್ಮಣಾ ಪೂಜಿತಃ ಸೋಽಪಿ ಮಧುಪರ್ಕಾದಿನಾ ಚ ಯಃ ।
ಸ್ತುತಃ ಸುರೈಶ್ಚ ಸಿದ್ಧೈಶ್ಚ ಪರಮಾನಂದಭಾವನಃ ॥ ೮೧ ॥

---

೭೭. ಶ್ರೀಕೃಷ್ಣಪರಮಾತ್ಮನ ಸೇವೆಯನ್ನುಳಿದು, ಮಾರ್ಗಾಂತರವನ್ನು ಬೋಧಿಸುವವನು ಶಿಷ್ಯನ ನಾಶಕ್ಕೆ ಕಾರಣನಾಗುವುದರಿಂದ ಶಿಷ್ಯನನ್ನು ವಧೆ ಮಾಡಿದ ಪಾಪಕ್ಕೆ ಗುರಿಯಾಗುವನು.

೭೮. ಶ್ರೀಕೃಷ್ಣನ ದಿವ್ಯನಾಮವು ಜಗತ್ತಿನ ಮಂಗಳಕ್ಕೆ ಕಾರಣವಾಗುವುದು. ಆ ದಿವ್ಯನಾಮವನ್ನು ಸ್ಮರಿಸುವವರು ಕ್ಷೀಣಾಯುಗಳಾಗದೆ ಮಂಗಳವೃದ್ಧಿಯನ್ನು ಪಡೆಯುವರು.

೭೯. ಆ ವಿಷ್ಣುಭಕ್ತರಿಗೆ ಹೆದರಿ ಕಾಲಪುರುಷನೂ, ಮೃತ್ಯುವೂ, ರೋಗಗಳೂ, ಶೋಕಸಂತಾಪಗಳೂ, ಗರುಡನನ್ನು ಕಂಡ ಹಾವುಗಳು ದೂರ ಓಡುವಂತೆ ಓಡುವುವು.

೮೦. ಕೃಷ್ಣಮಂತ್ರೋಪಾಸಕನಾದ ಬ್ರಾಹ್ಮಣನು ಅನಾಚಾರಪರನಾಗಿದ್ದರೂ, ಬ್ರಹ್ಮಲೋಕವನ್ನು ದಾಟಿ ಉತ್ತಮವಾದ ಗೋಲೋಕಕ್ಕೆ ಹೋಗುವನು.

೮೧. ಆ ಭಕ್ತನನ್ನು ಬ್ರಹ್ಮನು ಮಧುಪರ್ಕಾದಿಸತ್ಕಾರಗಳಿಂದ ಪೂಜಿಸುವನು. ಸಿದ್ಧರೂ ಸುರರೂ ಅವನನ್ನು ಪರಮಾನಂದಭರಿತರಾಗಿ ಸ್ತುತಿಸುವರು.

ಜ್ಞಾನಸಾರಂ ತಪಃಸಾರಂ ಬ್ರಹ್ಮಸಾರಂ ಪರಂ ಶಿವಂ ।
ಶಿವೇನೋಕ್ತಂ ಯೋಗಸಾರಂ ಶ್ರೀಕೃಷ್ಣಪದಸೇವನಂ ॥ ೮೨ ॥

ಬ್ರಹ್ಮಾದಿಸ್ತಂಬಪರ್ಯಂತಂ ಸರ್ವಂ ಮಿಥ್ಯೈವ ಕೇವಲಂ ।
ಭಜ ಸತ್ಯಂ ಪರಂ ಬ್ರಹ್ಮ ರಾಧೇಶಂ ಪ್ರಕೃತೇಃ ಪರಂ ॥ ೮೩ ॥

ಅತೀವ ಸುಖದಂ ಸಾರಂ ಭಕ್ತಿದಂ ಮುಕ್ತಿದಂ ಪರಂ ।
ಸಿದ್ಧಿಯೋಗಪ್ರದಂ ಚೈವ ದಾತಾರಂ ಸರ್ವಸಂಪದಾಂ ॥ ೮೪ ॥

ಯೋಗಿನಾಮಪಿ ಸಿದ್ಧಾನಾಂ ಯತೀನಾಂ ಚ ತಪಸ್ವಿನಾಂ ।
ಸರ್ವೇಷಾಂ ಕರ್ಮ ಭೋಗೋಽಸ್ತಿ ನ ನಾರಾಯಣಸೇವಿನಾಂ ॥ ೮೫ ॥

ಭಸ್ಮಸಾಚ್ಚ ಭವೇತ್ಪಾಪಂ ಯದುಪಸ್ಪರ್ಶಮಾತ್ರತಃ ।
ಜ್ವಲದಗ್ನೌ ಪಾತಿತಂ ಚ ಯಥಾ ಶುಷ್ಕೇಂಧನಂ ತಥಾ ॥ ೮೬ ॥

---

೮೨. ತಪಸ್ಸು, ಬ್ರಹ್ಮಜ್ಞಾನ, ಯೋಗ ಇವುಗಳಿಗೆಲ್ಲ ಶ್ರೀಕೃಷ್ಣನ ಪಾದ ಸೇವೆಯೇ ಸಾರಭೂತವಾದುದೆಂದೂ, ಪರಮಮಂಗಳದಾಯಕವೆಂದೂ ಶಿವನು ಹೇಳಿರುವನು.

೮೩. ಚತುರ್ಮುಖಬ್ರಹ್ಮನು ಮೊದಲುಗೊಂಡು ಒಂದು ಹುಲ್ಲುಗರಿಯ ವರೆಗೆ ಇರುವ ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಮಿಥ್ಯಾಭೂತವಾದದ್ದು. ಆದ್ದರಿಂದ ಪ್ರಕೃತಿಗಿಂತಲೂ ಶ್ರೇಷ್ಠನೂ, ಸತ್ಯಸ್ವರೂಪನೂ ಆದ ರಾಧಾಪತಿಯನ್ನು ಭಜಿಸು.

೮೪. ಆತನ ಭಜನೆಯಿಂದ ಅತ್ಯಂತಸುಖವೂ, ಭಕ್ತಿಮುಕ್ತಿಗಳೂ, ಸಿದ್ಧ ಯೋಗವೂ, ಸಕಲಸಂಪತ್ತೂ ಸಿದ್ಧಿಸುವುವು.

೮೫. ಯೋಗಿಗಳು, ಸಿದ್ಧರು, ಯತಿಗಳು, ತಪಸ್ವಿಗಳು ಮುಂತಾದ ಸಕಲ ರಿಗೂ ತಮ್ಮ ತಮ್ಮ ಕರ್ಮಫಲಭೋಗವುಂಟು. ಆದರೆ ವಿಷ್ಣುಭಕ್ತರಿಗೆ ಇಲ್ಲ.

೮೬. ಉರಿಯುತ್ತಿರುವ ಅಗ್ನಿಯಲ್ಲಿ ಒಣಗಿದ ಕಟ್ಟಿಗೆಯು ಬಿದ್ದಕ್ಷಣದಲ್ಲಿಯೇ ಭಸ್ಮವಾಗುವಂತೆ ಭಕ್ತರ ಸ್ಪರ್ಶಮಾತ್ರದಿಂದ ಪಾಪವೆಲ್ಲ ಭಸ್ಮಸದೃಶವಾಗುವುದು.

ತತೋ ರೋಗಾ.ಹಿ ವೇಪಂತೇ ಪಾಪಾನಿ ಚ ಭಯಾನಿ ಚ ।
ದೂರತಶ್ಚ ಪಲಾಯಂತೇ ಯಮದೂತಾಸ್ತತೋ ಭಯಾತ್ ॥ ೮೭ ॥

ತಾವನ್ನಿಬದ್ಧಃ ಸಂಸಾರೇ ಕಾರಾಗಾರೇ ವಿಧೇರ್ಜನಃ ।
ನ ಯಾವತ್ಕೃಷ್ಣತಂತ್ರಂ ಚ ಪ್ರಾಪ್ನೋತಿ ಗುರುವಕ್ತ್ರತಃ ॥ ೮೮ ॥

ಕೃತಕರ್ಮೌಘಭೋಗಾಖ್ಯನಿಗಡಚ್ಛೇದಕಾರಣಂ ।
ಮಾಯಾಜಾಲೋಚ್ಛೇದಕರಂ ಮಾಯಾಪಾಶನಿಕೃಂತನಂ ॥ ೮೯ ॥

ಗೋಲೋಕಮಾರ್ಗಸೋಪಾನಂ ನಿಸ್ತಾರೇ ಬೀಜಕಾರಣಂ ।
ಭಕ್ತ್ಯಂಕುರಸ್ವರೂಪಂ ಚ ನಿತ್ಯಂ ವೃದ್ಧಮನಶ್ವರಂ ॥ ೯೦ ॥

ಸಾರಂ ಚ ಸರ್ವತಪಸಾಂ ಯೋಗಾನಾಂ ಸಾಧನಂ ತಥಾ ।
ಸಿದ್ಧೀನಾಂ ವೇದಪಾಠಾನಾಂ ವ್ರತಾದೀನಾಂ ಚ ನಿಶ್ಚಿತಂ ॥ ೯೧ ॥

---

೮೭. ಹರಿಭಕ್ತರನ್ನು ಕಂಡರೆ ರೋಗಗಳು ಹೆದರಿ ನಡುಗುವುವು. ಪಾಪವೂ ಯಮದೂತರೂ ಅವರಿಗೆ ಹೆದರಿ ದೂರ ಓಡುವುವು.

೮೮. ವಿಧಿಯ ಕಾರಾಗೃಹವೆನಿಸುವ ಈ ಸಂಸಾರದಲ್ಲಿ ಜನರು, ಗುರುಮುಖದಿಂದ ಕೃಷ್ಣಮಂತ್ರೋಪದೇಶವನ್ನು ಹೊಂದುವವರೆಗೂ, ಸಿಕ್ಕಿ ತೊಳಲುವರು.

೮೯–೯೧. ಎಲೈ ಇಂದ್ರನೇ, ಶ್ರೀಕೃಷ್ಣಮಂತ್ರವು ಹಿಂದೆ ಮಾಡಿದ ಪಾಪಕರ್ಮಗಳ ಫಲಭೋಗವೆಂಬ ನಿರ್ಬಂಧವನ್ನು ನಾಶಗೊಳಿಸತಕ್ಕದ್ದೂ, ಮಾಯೆಯೆಂಬ ಬಲೆಯನ್ನು ಕತ್ತರಿಸತಕ್ಕದೂ, ಗೋಲೋಕಕ್ಕೆ ಹೋಗಲು ಸೋಪಾನರೂಪವಾದದ್ದೂ, ಸಂಸಾರಸಮುದ್ರವನ್ನು ದಾಟಲು ಹಡಗಿನಂತಿರುವುದೂ, ಭಕ್ತಿಯೆಂಬ ವೃಕ್ಷಕ್ಕೆ ಅಂಕುರಸ್ವರೂಪವಾದದ್ದೂ, ಸಿತ್ಯವೂ ನಾಶವಾಗದೆ ವೃದ್ಧಿಹೊಂದತಕ್ಕದ್ದೂ, ತಪಸ್ಸಿನ ಸಾರಭೂತವಾದದ್ದೂ, ಯೋಗಸಿದ್ಧಿಗಳಿಗೂ, ವೇದಾಧ್ಯಯನಾದಿ ವ್ರತಗಳಿಗೂ ಸಾಧನರೂಪವಾದದ್ದೂ ಆಗಿದೆ.

ದಾನಾನಾಂ ತೀರ್ಥಶೌಚಾನಾಂ ಯಜ್ಞಾದೀನಾಂ ಪುರಂದರ ।
ಪೂಜಾನಾಮುಪವಾಸಾನಾಮಿತ್ಯಾಹ ಕಮಲೋದ್ಭವಃ ॥ ೯೨ ॥

ಪುಂಸಾಂ ಲಕ್ಷಂ ಪಿತೃಣಾಂ ಚ ಶತಂ ಮಾತಾಮಹಸ್ಯ ಚ ।
ಪೂರ್ವಂ ಪರಂ ಚ ತತ್ಸಂಖ್ಯಂ ಪಿತರಂ ಮಾತರಂ ಗುರುಂ ॥ ೯೩ ॥

ಸಹೋದರಂ ಕಲತ್ರಂ ಚ ಬಂಧುಂ ಶಿಷ್ಯಂ ಚ ಕಿಂಕರಂ ।
ಸಮುದ್ಧರೇಚ್ಚ ಶ್ವಶುರಂ ಶ್ವಶ್ರೂಕನ್ಯಾಂ ಚ ತತ್ಸುತಂ ॥ ೯೪ ॥

ಸ್ವಾತ್ಮಾನಂ ಚ ಸತೀರ್ಥ್ಯಂ ಚ ಗುರುಪತ್ನೀಂ ಗುರೋಃ ಸುತಂ ।
ಉದ್ಧರೇದ್ಬಲವಾನ್ಭಕ್ತೋ ಮಂತ್ರಗ್ರಹಣ ಮಾತ್ರತಃ ॥ ೯೫ ॥

ಮಂತ್ರಗ್ರಹಣಮಾತ್ರೇಣ ಜೀವನ್ಮುಕ್ತೋ ಭವೇನ್ನರಃ ।
ತತ್ಸ್ಪರ್ಶಪೂತಸ್ತೀರ್ಥೌಘಃ ಸದ್ಯಃ ಪೂತಾ ವಸುಂಧರಾ ॥ ೯೬ ॥

---

೯೨. ಅಲ್ಲದೆ ದಾನಗಳಿಗೂ, ಪುಣ್ಯತೀರ್ಥಸೇವೆಗೂ, ಶೌಚಾದಿಕರ್ಮಗಳಿಗೂ, ಯಜ್ಞಯಾಗಾದಿಗಳಿಗೂ, ಪೂಜೋಪವಾಸಾದಿಗಳಿಗೂ, ವಿಷ್ಣುಮಂತ್ರವೇ ಸಾಧನ ವೆಂದು ಬ್ರಹ್ಮನು ಹೇಳಿರುವನು.

೯೩–೯೫. ವಿಷ್ಣುಮಂತ್ರೋಪದೇಶವನ್ನು ಹೊಂದಿ ಬಲಿಷ್ಠನಾಗಿರುವ ಭಕ್ತನು, ತನ್ನ ಹಿಂದಿನ ಮತ್ತು ಮುಂದಿನ ಲಕ್ಷಸಂಖ್ಯೆ ಪುರುಷರನ್ನೂ, ತಂದೆ ಮತ್ತು ಮಾತಾಮಹರ ಕುಲೋತ್ಪನ್ನರಾದ ನೂರುಮಂದಿಗಳನ್ನೂ, ತಾಯಿ, ತಂದೆ, ಗುರು, ಸಹೋದರ, ಪತ್ನಿ, ಬಂಧು, ಶಿಷ್ಯ, ಸೇವಕ ಮುಂತಾದವರನ್ನೂ, ಅತ್ತೆ ಮಾವಂದಿ ರನ್ನೂ, ಅತ್ತೆಯ ಮಕ್ಕಳು ಮೊಮ್ಮಕ್ಕಳನ್ನೂ, ತನ್ನನ್ನೂ, ತನ್ನ ಸಹಪಾಠಿಯನ್ನೂ, ಗುರುಪತ್ನಿ ಮತ್ತು ಗುರುಸುತರನ್ನೂ ಸಂಸಾರದಿಂದ ಉದ್ಧರಿಸುವನು.

೯೬. ವಿಷ್ಣುಮಂತ್ರೋಪದೇಶವನ್ನು ಸ್ವೀಕರಿಸಿದ ಮಾತ್ರದಿಂದಲೇ ಮನು ಜನು ಜೀವನ್ಮುಕ್ತನಾಗುವನು. ಅವನ ಸ್ಪರ್ಶಮಾತ್ರದಿಂದ ತೀರ್ಥಗಳೂ, ವಸುಂಧ ರೆಯೂ ಕೂಡ ಪವಿತ್ರವಾಗುವುವು.

ಅನೇಕಜನ್ಮಪರ್ಯಂತಂ ದೀಕ್ಷಾಹೀನೋ ಭವೇನ್ನರಃ ।
ತದನ್ಯದೇವಮಂತ್ರಂ ಚ ಲಭತೇ ಪುಣ್ಯಲೇಶತಃ ॥ ೯೭ ॥

ಸಪ್ತಜನ್ಮಸು ದೇವಾನಾಂ ಕೃತ್ವಾ ಸೇವಾಂ ಸ್ವಕರ್ಮತಃ ।
ಲಭತೇ ಚ ರವೇರ್ಮಂತ್ರಂ ಸಾಕ್ಷಿಣಃ ಸರ್ವಕರ್ಮಣಾಂ ॥ ೯೮ ॥

ಜನ್ಮತ್ರಯಂ ಭಾಸ್ಕರಂ ಚ ಸೇವಿತ್ವಾ ಮಾನವಃ ಶುಚಿಃ ।
ಲಭೇದ್ಗಣೇಶಮಂತ್ರಂ ಚ ಸರ್ವವಿಘ್ನಹರಂ ಪರಂ ॥ ೯೯ ॥

ಜನ್ಮತ್ರಯಂ ತಂ ನಿಷೇವ್ಯ ನಿರ್ವಿಘ್ನಶ್ಚ ಭವೇನ್ನರಃ ।
ವಿಘ್ನೇಶಸ್ಯ ಪ್ರಸಾದೇನ ದಿವ್ಯಜ್ಞಾನಂ ಲಭೇನ್ನರಃ ॥ ೧೦೦ ॥

---

೯೭. ಮನುಷ್ಯನು ಅನೇಕ ಜನ್ಮಗಳು ಕಳೆಯುವವರೆಗೆ ಯಜ್ಞದೀಕ್ಷಾವಿಹೀನನಾಗಿದ್ದರೂ, ತಾನು ಮಾಡಿದ ಪುಣ್ಯಲೇಶದಿಂದ ಯಾವುದಾದರೂ ದೇವತಾ ಮಂತ್ರೋಪದೇಶವನ್ನು ಹೊಂದುವನು.

೯೮. ಆ ದೇವತೆಗಳ ಸೇವೆಯನ್ನು ಏಳು ಜನ್ಮಗಳಲ್ಲಿ ಶ್ರದ್ಧಾಪೂರ್ವಕವಾಗಿ ಮಾಡಿದರೆ ಸರ್ವಕರ್ಮಗಳಿಗೂ ಸಾಕ್ಷಿಯಾದ ಸೂರ್ಯನ ಮಂತ್ರೋಪದೇಶವನ್ನು ಹೊಂದುವನು.

೯೯. ಮೂರು ಜನ್ಮಗಳು ಸೂರ್ಯದೇವನನ್ನು ಸೇವಿಸಿ, ಶುಚಿಯಾಗಿ, ಸರ್ವ ವಿಘ್ನನಾಶಕವಾದ ಗಣೇಶಮಂತ್ರವನ್ನು ಹೊಂದುವನು.

೧೦೦. ಆ ಗಣೇಶ ಮಂತ್ರವನ್ನು ಮೂರು ಜನ್ಮಗಳು ಜಪಿಸಿ, ನಿರ್ವಿಘ್ನವಾಗಿ ವಿಘ್ನೇಶನ ಪ್ರಸಾದದಿಂದ ದಿವ್ಯ ಜ್ಞಾನವನ್ನು ಪಡೆಯುವನು.

ತದಾ ಜ್ಞಾನಪ್ರದೀಪೇನ ಸಮಾಲೋಚ್ಯ ಮಹಾಮತಿಃ ।
ಅಜ್ಞಾನಾಂಧತಮುಚ್ಛಿತ್ವಾ ಮಹಾಮಾಯಾಂ ಭಜೇನ್ನರಃ ॥ ೧೦೧ ॥

ಪ್ರಕೃತಿಂ ವಿಷ್ಣುಮಾಯಾಂ ಚ ದುರ್ಗಾಂ ದುರ್ಗತಿನಾಶಿನೀಂ ।
ಸಿದ್ಧಿದಾಂ ಸಿದ್ಧಿರೂಪಾಂ ಚ ಪರಮಾಂ ಸಿದ್ಧಿಯೋಗಿನೀಂ ॥ ೧೦೨ ॥

ವಾಣೀರೂಪಾಂ ಚ ಪದ್ಮಾಂ ಚ ಭದ್ರಾಂ ಕೃಷ್ಣಪ್ರಿಯಾತ್ಮಿಕಾಂ ।
ನಾನಾರೂಪಾಂ ತಾಂ ನಿಷೇವ್ಯ ಜನ್ಮನಾಂ ಶತಕಂ ನರಃ ॥ ೧೦೩ ॥

ತತ್ಪ್ರಸಾದಾದ್ಭವೇಜ್ ಜ್ಞಾನೀ ಜ್ಞಾನಾನಂದಂ ತದಾ ಭಜೇತ್ ।
ಕೃಷ್ಣಂ ಜ್ಞಾನಾಧಿದೇವಂ ಚ ಮಹಾದೇವಂ ಸನಾತನಂ ॥ ೧೦೪ ॥

ಶಿವಂ ಶಿವಸ್ವರೂಪಂ ಚ ಶಿವದಂ ಶಿವಕಾರಣಂ ।
ಪರಮಾನಂದರೂಪಂ ಚ ಪರಮಾನಂದದಾಯಿನಂ ॥ ೧೦೫ ॥

---

೧೦೧. ಅನಂತರ ಜ್ಞಾನವೆಂಬ ದಿವ್ಯಜ್ಯೋತಿಯಿಂದ ಬುದ್ಧಿವಂತನಾದವನು ಚೆನ್ನಾಗಿ ವಿಮರ್ಶಿಸಿ ನೋಡಿ ಅಜ್ಞಾನವೆಂಬ ಅಂಧಕಾರವನ್ನು ಪರಿಹರಿಸಿಕೊಂಡು ಮಹಾಮಾಯೆಯನ್ನಾಶ್ರಯಿಸುವನು.

೧೦೨–೧೦೩. ವಿಷ್ಣುಮಾಯಾಸ್ವರೂಪಿಣಿಯೂ, ದುರ್ಗತಿನಾಶಿನಿಯೂ ಸಿದ್ಧಿದಾಯಕಳೂ, ಸಿದ್ಧಿಸ್ವರೂಪಳೂ, ಸಿದ್ಧಯೋಗಿನಿಯೂ, ಲಕ್ಷ್ಮಿ, ದುರ್ಗಾ ಮತ್ತು ಸರಸ್ವತೀಸ್ವರೂಪಳೂ, ಶ್ರೀಕೃಷ್ಣಪ್ರಿಯಳೂ ಆದ ಆದಿಪ್ರಕೃತಿಯನ್ನು ನೂರಾರು ಜನ್ಮಗಳು ಸೇವಿಸುವನು.

೧೦೪. ಆಕೆಯ ಅನುಗ್ರಹದಿಂದ ಮಹಾಜ್ಞಾನಿಯಾಗಿ, ಜ್ಞಾನಾನಂದ ಸ್ವರೂಪನೂ, ಶ್ರೀಕೃಷ್ಣನ ಜ್ಞಾನಕ್ಕೆ ಅಧಿದೇವತೆಯೂ ಅನಾದಿಯೂ ಆದ ಮಹಾದೇವನನ್ನು ಭಜಿಸುವನು.

೧೦೫–೧೦೯. ಮಂಗಳಸ್ವರೂಪನೂ, ಮಂಗಳಗಳಿಗೆ ಕಾರಣನೂ, ಮಂಗಳ ದಾಯಕನೂ, ಪರಮಾನಂದಸ್ವರೂಪನೂ, ಪರಮಾನಂದದಾಯಕನೂ, ಸುಖ

ಸುಖದಂ ಮೋಕ್ಷದಂ ಚೈವ ದಾತಾರಂ ಸರ್ವಸಂಪದಾಂ ।
ಅಮರತ್ವಪ್ರದಂ ಚೈವ ದೀರ್ಘಮಾಯುಷ್ಯದಂ ಪರಂ ॥ ೧೦೬ ॥

ಇಂದ್ರತ್ವಂ ಚ ಮನುತ್ವಂ ಚ ದಾತುಂ ಶಕ್ತಂ ಚ ಲೀಲಯಾ ।
ರಾಜೇಂದ್ರತ್ವಪ್ರದಂ ಚೈವ ಜ್ಞಾನದಂ ಹರಿಭಕ್ತಿದಂ ॥ ೧೦೭ ॥

ಜನ್ಮತ್ರಯಂ ತಮಾರಾಧ್ಯ ಚಾಶುತೋಷಪ್ರಸಾದತಃ ।
ಸರ್ವದಸ್ಯ ಪ್ರಸಾದೇನ ಶಂಕರಸ್ಯ ಮಹಾತ್ಮನಃ ॥ ೧೦೮ ॥

ವರದಸ್ಯ ವರೇಣ್ಯೈವ ಹರಿಭಕ್ತಿಂ ಲಭೇದ್ಧ್ರುವಂ ।
ತದಾ ತದ್ಭಕ್ತಸಂಸರ್ಗಾತ್ಕೃಷ್ಣಮಂತ್ರಂ ಲಭೇದ್ಧ್ರುವಂ ॥ ೧೦೯ ॥

ನಿರ್ಮಲಜ್ಞಾನದೀಪೇನ ಪ್ರದೀಪ್ತೇನ ಚ ತತ್ವವಿತ್ ।
ಬ್ರಹ್ಮಾದಿಸ್ತಂಬಪರ್ಯಂತಂ ಸರ್ವಂ ಮಿಥ್ಯೈವ ಪಶ್ಯತಿ ॥ ೧೧೦ ॥

ದಯಾನಿಧೇಃ ಪ್ರಸಾದೇನ ನಿರ್ಮಲಜ್ಞಾನಮಾಲಭೇತ್ ।
ವರದಸ್ಯ ವರೇಣ್ಯೈವ ಹರಿಭಕ್ತಿಂ ಲಭೇದ್ಧ್ರುವಂ ॥ ೧೧೧ ॥

ಮತ್ತು ಮೋಕ್ಷಗಳನ್ನೂ ಸಕಲ ಸಂಪತ್ತುಗಳನ್ನೂ ಕೊಡುವವನೂ, ದೀರ್ಘಾಯುಷ್ಯವನ್ನೂ ಇಂದ್ರ, ಮನು ಮತ್ತು ಇತರ ದೇವತಾಸ್ವರೂಪವನ್ನೂ ಕೊಡುವವನೂ, ರಾಜೇಂದ್ರಪದವಿಯನ್ನೂ, ಹರಿಭಕ್ತಿಯನ್ನೂ ಲೀಲೆಯಿಂದಲೇ ಕೊಡುವವನೂ, ಆದ ಶಂಕರನನ್ನು ಮೂರು ಜನ್ಮಗಳಲ್ಲಿ ಪೂಜಿಸಿ, ಬಹಳ ಜಾಗ್ರತೆ ಪ್ರಸನ್ನನಾಗುವ ಆತನ ಅನುಗ್ರಹದಿಂದ ಹರಿಭಕ್ತಿಯನ್ನು ನಿಶ್ಚಿತವಾಗಿಯೂ ಪಡೆಯುವನು. ಅನಂತರ ವಿಷ್ಣುಭಕ್ತರ ಸಹವಾಸದಿಂದ ವಿಷ್ಣುಭಕ್ತಿಯನ್ನು ಖಂಡಿತವಾಗಿಯೂ ಹೊಂದುವನು.

೧೧೦. ಜ್ಯೋತಿಃಸ್ವರೂಪವಾದ ನಿರ್ಮಲ ತತ್ವಜ್ಞಾನದಿಂದ, ಬ್ರಹ್ಮಾದಿ ತೃಣಪರ್ಯಂತವಾಗಿ ಸಕಲವೂ ಸುಳ್ಳಾದುದೆಂದು ಆವನು ತಿಳಿಯುವನು.

೧೧೧. ದಯಾನಿಧಿಯೂ, ವರದಾತನೂ ಆದ ಈ ಪರಮಾತ್ಮನ ಅನುಗ್ರಹದಿಂದ ನಿರ್ಮಲ ಜ್ಞಾನವನ್ನೂ, ಹರಿಭಕ್ತಿಯನ್ನೂ ನಿಶ್ಚಿತವಾಗಿ ಹೊಂದುವನು.

ತದಾನಿವೃತ್ತಿಮಾಪ್ನೋತಿ ಸಾರಾತ್ಸಾರಾಂ ಪರಾತ್ಪರಾಂ ।
ಯತ್ರದೇಹೇ ಲಭೇನ್ಮಂತ್ರಂ ತದ್ದೇಹಾವಧಿ ಭಾರತೇ ॥ ೧೧೨ ॥

ತತ್ಪಾಂಚ ಭೌತಿಕಂ ತ್ಯಕ್ತ್ವಾ ಬಿಭ್ರೈಯೊದ್ದಿವ್ಯರೂಪಕಂ ।
ಕರೋತಿ ದಾಸ್ಯಂ ಗೋಲೋಕೇ ವೈಕುಂಠೇ ವಾ ಹರೇಃ ಪದೇ ॥ ೧೧೩ ॥

ಪರಮಾನಂದಸಂಯುಕ್ತೋ ಮೋಹಾದಿಷು ವಿವರ್ಜಿತಃ ।
ನ ವಿದ್ಯತೇ ಪುನರ್ಜನ್ಮ ಪುನರಾಗಮನಂ ಹರೇ ॥ ೧೧೪ ॥

ಪುನಶ್ಚ ನ ಪಿಬೇತ್ಕ್ಷೀರಂ ಧೃತ್ವಾ ಮಾತೃಸ್ತನಂ ಪರಂ ।
ವಿಷ್ಣುಮಂತ್ರೋಪಾಸಕಾನಾಂ ಗಂಗಾದೇಸ್ತೀರ್ಥಸೇವಿನಾಂ ॥ ೧೧೫ ॥

ಸ್ವಧರ್ಮಿಣಾಂ ಚ ಭಿಕ್ಷೂಣಾಂ ಪುನರ್ಜನ್ಮ ನ ವಿದ್ಯತೇ ।
ತೀರ್ಥೇ ಪರಿತ್ಯಜೇತ್ಪಾಪಂ ಕ್ರಿಯಾಂ ಕೃತ್ವಾ ಹರಿಂ ಭಜೇತ್ ॥ ೧೧೬ ॥

---

೧೧೨. ಭಾರತದಲ್ಲಿ ಯಾವ ದೇಹದಲ್ಲಿ ವಿಷ್ಣು ಮಂತ್ರೋಪದೇಶವನ್ನು ಹೊಂದುವನೋ ಆ ದೇಹವು ಅಳಿಯುವವರೆಗೂ, ಅತ್ಯಂತ ಸಾರಭೂತವೂ, ಪರಮ ಪವಿತ್ರವೂ ಆದ ನಿವೃತ್ತಿಮಾರ್ಗವನ್ನು ಆಶ್ರಯಿಸುವನು.

೧೧೩. ಅನಂತರ ಪಾಂಚಭೌತಿಕ ಶರೀರವನ್ನು ಬಿಟ್ಟು ದಿವ್ಯರೂಪಧಾರಿಯಾಗಿ ಗೋಲೋಕದಲ್ಲಾಗಲೀ, ವೈಕುಂಠದಲ್ಲಾಗಲೀ, ಶ್ರೀಹರಿಯ ಪಾದಸೇವೆ ಮಾಡಿಕೊಂಡಿರುವನು.

೧೧೪. ಎಲೈ ಇಂದ್ರನೇ, ಪರಮಾನಂದಭರಿತನೂ, ನಶ್ವರವಾದ ಪ್ರಪಂಚದಲ್ಲಿ ಭ್ರಾಂತಿರಹಿತನೂ ಆದ ಆ ಭಕ್ತನಿಗೆ ಪುನರ್ಜನ್ಮವಿರುವುದಿಲ್ಲ.

೧೧೫–೧೧೬. ವಿಷ್ಣುಭಕ್ತನು ಪುನಃ ಮಾತೃವಿನ ಸ್ತನ್ಯಪಾನಮಾಡುವ ಸಂಭವವಿರುವುದಿಲ್ಲ. ವಿಷ್ಣುಮಂತ್ರೋಪಾಸಕರಿಗೂ, ಗಂಗಾದಿಪುಣ್ಯತೀರ್ಥಗಳನ್ನು ಸೇವಿಸುವವರಿಗೂ, ಸ್ವಧರ್ಮಾಚಾರನಿರತರಿಗೂ, ನಿಷ್ಕಾಮಿಗಳಾದ ಸಂನ್ಯಾಸಿಗಳಿಗೂ ಪುನರ್ಜನ್ಮವಿರುವುದಿಲ್ಲ. ಪುಣ್ಯತೀರ್ಥಗಳಲ್ಲಿ ಪಾಪವನ್ನು ಪರಿಹರಿಸಿಕೊಂಡು ಸತ್ಕ್ರಿಯೆಮಾಡಿ ಶ್ರೀಹರಿಯನ್ನು ಹೊಂದುವರು.

ಅಯಂ ನಿರೂಪಿತೋ ಧಾತ್ರಾ ಸ್ವಧರ್ಮಸ್ತೀರ್ಥಸೇವಿನಾಂ ।
ತನ್ನಾಮಮಂತ್ರಂ ಪ್ರಜಪೇತ್ತತ್ಸೇವಾದಿಷು ತತ್ಪರಃ ॥ ೧೧೭ ॥

ವ್ರತೋಪವಾಸರತ ಇತ್ಯುಕ್ತೋ ವೈಷ್ಣವಸೇವಿನಾಂ ।
ಸದನ್ನೇ ವಾ ಕದನ್ನೇ ವಾ ಲೋಷ್ಟೇ ವಾ ಕಾಂಚನೇ ತಥಾ ॥ ೧೧೮ ॥

ಸಮಬುದ್ಧಿರ್ಯಸ್ಯ ಶಶ್ವತ್ಸ ಸಂನ್ಯಾಸೀತಿ ಕೀರ್ತಿತಃ ।
ದಂಡಂ ಕಮಂಡಲುಂ ರಕ್ತವಸ್ತ್ರಮಾತ್ರಂ ಚ ಧಾರಯೇತ್ ॥ ೧೧೯ ॥

ನಿತ್ಯಂ ಪ್ರವಾಸೀ ನೈಕತ್ರ ಸ್ಯಾತ್ಸಂನ್ಯಾಸೀತಿ ಕೀರ್ತಿತಃ ।
ಶುದ್ಧಾಚಾರದ್ವಿಜಾನ್ನಂ ಚ ಭುಂಕ್ತೇ ಲೋಭಾದಿವರ್ಜಿತಃ ॥ ೧೨೦ ॥

ಕಿಂತು ಕಿಂಚಿನ್ನ ಯಾಚೇತ ಸ ಸಂನ್ಯಾಸೀತಿ ಕೀರ್ತಿತಃ ।
ನ ವ್ಯಾಪಾರೀ ನಾಶ್ರಮೀ ಚ ಸರ್ವಕರ್ಮವಿವರ್ಜಿತಃ ॥ ೧೨೧ ॥

---

೧೧೭. ಪುಣ್ಯತೀರ್ಥಗಳನ್ನು ಸೇವಿಸುವವರು ವಿಷ್ಣುಮಂತ್ರವನ್ನು ಉಪಾಸನೆ ಮಾಡುವುದೇ ಸ್ವಧರ್ಮವೆಂದು ಬ್ರಹ್ಮನು ಹೇಳಿರುವನು ಪರಮಾತ್ಮನ ಸೇವಾಕಾಂಕ್ಷಿಗಳು ಪರಮಾತ್ಮನ ದಿವ್ಯನಾಮವನ್ನೂ ಮಂತ್ರವನ್ನೂ ಜಪಿಸಬೇಕು.

೧೧೮-೧೧೯. ವ್ರತೋಪವಾಸಾದಿಗಳಲ್ಲಿ ಆಸಕ್ತಿಯಿದ್ದು ಭಕ್ತಿಯಿಂದ ಪರಮಾತ್ಮನನ್ನು ಸೇವಿಸುವವನೇ ವಿಷ್ಣುಭಕ್ತನು. ಮೃಷ್ಟಾನ್ನದಲ್ಲಾಗಲೀ, ಕದನ್ನದಲ್ಲಾಗಲೀ, ಮಣ್ಣಿನ ಹೆಂಟೆಯಲ್ಲಾಗಲೀ, ಸುವರ್ಣದ ಗಟ್ಟಿಯಲ್ಲಾಗಲೀ, ಸಮಾನವಾದ ಬುದ್ಧಿಯುಳ್ಳವನೇ ಸಂನ್ಯಾಸಿ ಎನಿಸಿಕೊಳ್ಳುವನು. ದಂಡ ಕಮಂಡಲುಗಳನ್ನು ಧರಿಸಿ, ರಕ್ತವಸ್ತ್ರಗಳನ್ನುಟ್ಟು, ಒಂದು ಸ್ಥಳದಲ್ಲಿ ನೆಲೆಯಾಗಿ ನಿಲ್ಲದೆ ನಿತ್ಯವೂ ಊರಿಂದೂರಿಗೆ ತಿರುಗುತ್ತಿರುವವನೇ, ಸಂನ್ಯಾಸಿ ಎನಿಸಿಕೊಳ್ಳುವನು.

೧೨೦. ಲೋಭಮೋಹಾದಿಗಳಿಲ್ಲದೆ, ಶುದ್ಧಾಚಾರಪರರಾದ ಬ್ರಾಹ್ಮಣರ ಅನ್ನವನ್ನು ತಿಂದುಕೊಂಡು ಯಾರನ್ನೂ ಬೇಡದೆ ಬಂದುದರಲ್ಲಿ ತೃಪ್ತಿಪಟ್ಟುಕೊಳ್ಳುವವನೇ ಸಂನ್ಯಾಸಿ ಎನಿಸಿಕೊಳ್ಳುವನು

೧೨೧. ಬ್ರಹ್ಮಚರ್ಯಾದಿ ಆಶ್ರಮಗಳ ಕರ್ಮದಲ್ಲಿ ರತನಾಗದೆ, ಸಮಸ್ತ ಕರ್ಮಗಳನ್ನೂ ಬಿಟ್ಟು ಅನವರತ ನಾರಾಯಣನನ್ನು ಸ್ಮರಿಸಿಕೊಂಡಿರುವವನೇ ಸಂನ್ಯಾಸಿ ಎನಿಸುವನು.

ಧ್ಯಾಯೇನ್ನಾರಾಯಣಂ ಶಶ್ವತ್ಸ ಸಂನ್ಯಾಸೀತಿ ಕೀರ್ತಿತಃ ।
ಶಶ್ವನ್ಮೌನೀ ಬ್ರಹ್ಮಚಾರೀ ಸಂಭಾಷಾಪರಿವರ್ಜಿತಃ ॥ ೧೨೨ ॥

ಸರ್ವಂ ಬ್ರಹ್ಮಮಯಂ ಪಶ್ಯೇತ್ಸ ಸಂನ್ಯಾಸೀತಿ ಕೀರ್ತಿತಃ ।
ಸರ್ವತ್ರ ಸಮಬುದ್ಧಿಶ್ಚ ಹಿಂಸಾಮಾಯಾವಿವರ್ಜಿತಃ ॥ ೧೨೩ ॥

ಕ್ರೋಧಾಹಂಕಾರರಹಿತಃ ಸ ಸಂನ್ಯಾಸೀತಿ ಕೀರ್ತಿತಃ ।
ಅಯಾಚಿತೋಪಸ್ಥಿತಂ ಚ ಮಿಷ್ಟಾಮಿಷ್ಟಂ ಚ ಭುಕ್ತವಾನ್ ॥ ೧೨೪ ॥

ನ ಯಾಚತೇ ಭಕ್ಷಣಾರ್ಥೀ ಸ ಸಂನ್ಯಾಸೀತಿ ಕೀರ್ತಿತಃ ।
ನ ಚ ಪಶ್ಯೇನ್ಮುಖಂ ಸ್ತ್ರೀಣಾಂ ನ ತಿಷ್ಠೇತ್ತತ್ಸಮೀಪತಃ ॥ ೧೨೫ ॥

ದಾರವೀಮಪಿ ಯೋಷಾಂ ಚ ನ ಸ್ಪೃಶೇದ್ಯಃ ಸ ಭಿಕ್ಷುಕಃ ।
ಅಯಂ ಸಂನ್ಯಾಸಿನಾಂ ಧರ್ಮ ಇತ್ಯಾಹ ಕಮಲೋದ್ಭವಃ ॥ ೧೨೬ ॥

---

೧೨೨. ಯಾವಾಗಲೂ ಮೌನದಿಂದಿದ್ದು ಬ್ರಹ್ಮಧ್ಯಾನದಲ್ಲೇ ಆಸಕ್ತನಾಗಿ ಪ್ರಪಂಚವೆಲ್ಲವನ್ನೂ ಬ್ರಹ್ಮಮಯವಾಗಿ ತಿಳಿಯುವವನೇ ಸಂನ್ಯಾಸಿ ಎನಿಸುವನು.

೧೨೩. ಹಿಂಸೆ, ಮೋಸಗಳನ್ನು ಬಿಟ್ಟು ಎಲ್ಲರಲ್ಲೂ ಸಮಬುದ್ಧಿಯುಳ್ಳವನಾಗಿ ಕೋಪಾಂಹಂಕಾರಾದಿಗಳನ್ನು ಬಿಟ್ಟಿರುವವನು ಸಂನ್ಯಾಸಿ ಎನಿಸುವನು.

೧೨೪. ಯಾರನ್ನೂ ಬೇಡದೆ ಒದಗಿದ ಮಿಷ್ಟಾನ್ನವನ್ನಾಗಲೀ, ಕದನ್ನವನ್ನಾಗಲೀ, ತಿಂದುಕೊಂಡು ಹಸಿದಾಗ ಆಹಾರಕ್ಕಾಗಿ ಮತ್ತೊಬ್ಬರನ್ನು ಬೇಡದಿರುವವನೇ ಸಂನ್ಯಾಸಿ ಎನಿಸುವನು.

೧೨೫–೧೨೬. ಸ್ತ್ರೀಯರ ಮುಖವನ್ನು ನೋಡದೆಯೂ, ಅವರ ಸಮೀಪದಲ್ಲಿ ನಿಲ್ಲದೆಯೂ, ಮರದಲ್ಲಿ ಮಾಡಿದ ಹೆಣ್ಣು ಬೊಂಬೆಯನ್ನು ಮುಟ್ಟದೆಯೂ ಇರುವವನೇ ಸಂನ್ಯಾಸಿ ಎನಿಸುವನು. ಇದೇ ಸಂನ್ಯಾಸಿಗಳ ಧರ್ಮವೆಂದು ಬ್ರಹ್ಮನು ಹೇಳಿರುವನು.

ವಿಪರ್ಯಯೇ ವಿನಾಶಶ್ಚ ಜನ್ಮಯೋನ್ಯಾಂ ಭಯಂ ಭವೇತ್ ।
ಜನ್ಮದುಃಖಂ ಯೋನ್ಯದುಃಖಂ ಜೀವಿನಾಮತಿದಾರುಣಂ　　॥ ೧೨೭ ॥

ಸುರಸೂಕರಯೋನೌ ವಾ ಗರ್ಭೇ ದುಃಖಂ ಸಮಂ ಸುರ ।
ಯೋನೌ ವಾ ಕ್ಷುದ್ರಜಂತೂನಾಂ ಪಶ್ವಾದೀನಾಂ ತಥೈವ ಚ　　॥ ೧೨೮ ॥

ಗರ್ಭೇ ಸ್ಮರಂತಿ ಸರ್ವೇ ತೇ ಕರ್ಮ ಜನ್ಮಶತೋದ್ಭವಂ ।
ವಿಸ್ಮರೇನ್ನಿರ್ಗತೋ ಜೀವೋ ಗರ್ಭಾದ್ವೈ ವಿಷ್ಣುಮಾಯಯಾ ।
ಸ್ವದೇಹಂ ಪಾತಿ ಯತ್ನೇನ ಸುರೋ ವಾ ಕೀಟ ಏವ ವಾ　　॥ ೧೨೯ ॥

ಯೋನೇರಭ್ಯಂತರೇ ಶುಕ್ರೇ ಪತಿತೇ ಪುರುಷಸ್ಯ ಚ ।
ಶುಕ್ರಂ ಶೋಣಿತಯುಕ್ತಂ ಚ ಸಹಸಾ ತತ್ಕ್ಷಣಂ ಭವೇತ್　　॥ ೧೩೦ ॥

---

೧೨೭. ಇದಕ್ಕೆ ವ್ಯತ್ಯಾಸವಾದರೆ ಸಂನ್ಯಾಸಿಯು ನಾಶಹೊಂದುವುದಲ್ಲದೆ ಅನೇಕಜನ್ಮಗಳಕಾಲ ಯಮನ ಪಟ್ಟಣದ ದುಃಖಕ್ಕೀಡಾಗುವನು. ಜೀವಿಗಳಿಗೆ ಜನನದ ದುಃಖವೂ ಯಮನ ಬಾಧೆಯೂ ಬಹುಕಷ್ಟತರವಾದುದು.

೧೨೮. ಎಲೈ ಇಂದ್ರನೇ, ದೇವತಾಯೋನಿಯಲ್ಲಾಗಲೀ, ಹಂದಿಯ ಜನ್ಮದಲ್ಲಾಗಲೀ, ಹುಟ್ಟಿದರೂ ಮಾತೃಗರ್ಭದಲ್ಲುಂಟಾಗುವ ದುಃಖವು ಒಂದೇ ತೆರನಾದುದು. ಅಷ್ಟೇಕೆ ? ಯಾವ ಕ್ಷುದ್ರ ಜಂತುಗಳ ಯೋನಿಯಲ್ಲಾಗಲೀ, ಪಶುಗಳ ಗರ್ಭದಲ್ಲಾಗಲೀ, ಜನಿಸಿದರೂ ದುಃಖವೊಂದೇ.

೧೨೯. ಜಂತುವು ಗರ್ಭದಲ್ಲಿರುವಾಗಲೇ ನೂರಾರು ಜನ್ಮಗಳಲ್ಲಿ ಮಾಡಿದ ತನ್ನ ಕರ್ಮವನ್ನು ಸ್ಮರಿಸಿಕೊಳ್ಳುವನು ಆದರೆ ಗರ್ಭದಿಂದ ಹೊರಕ್ಕೆ ಬಂದಕ್ಷಣವೇ ವಿಷ್ಣುವಿನ ಮಾಯಾಮಹಿಮೆಯಿಂದ ಅದೆಲ್ಲವನ್ನೂ ಮರೆತುಬಿಡುವನು. ಅವನು ದೇವತೆಯಾಗಲೀ, ಒಂದು ಕೀಟವಾಗಲೀ, ತನ್ನ ಶರೀರವನ್ನು ಬಹಳ ಮುತುವರ್ಜಿಯಿಂದ ಕಾಪಾಡಿಕೊಳ್ಳುವನು.

೧೩೦. ಹೆಂಗಸಿನ ಯೋನಿಯೊಳಗೆ ಪುರುಷನ ವೀರ್ಯವು ಸೇರಿದರೆ ಆ ವೀರ್ಯವು ಕ್ಷಣಮಾತ್ರದಲ್ಲಿಯೇ ರಕ್ತಮಿಶ್ರಿತವಾಗುವುದು.

ರಕ್ತಾಧಿಕೇ ಮಾತೃಸಮಃ ಶುಕ್ಲೇತರೇ ಪಿತುರಾಕೃತಿಃ ।
ಯುಗ್ಮಾಹೇ ಚ ಭವೇತ್ಪುತ್ರಃ ಕನ್ಯಕಾ ತದ್ವಿಪರ್ಯಯೇ ॥ ೧೩೧ ॥

ರವಿ ಭೌಮಗುರೂಣಾಂ ಚ ವಾರೇ ಚೇತ್ತದ್ಭವೇತ್ಸುತಃ ।
ಅಯುಗ್ಮಾಹೇ ತದಿತರೇ ವಾರೇ ವೈ ಕನ್ಯಕಾ ಭವೇತ್ ॥ ೧೩೨ ॥

ಪ್ರಥಮಪ್ರಹರೇ ಜನ್ಮ ಯಸ್ಯ ಸೋಽಲ್ಪಾಯುರೇವ ಚ ।
ದ್ವಿತೀಯೇ ಮಧ್ಯಮಶ್ಚೈವ ತೃತೀಯೇ ತತ್ಪರೋ ಭವೇತ್ ॥ ೧೩೩ ॥

ಚತುರ್ಥೇ ಚಿರಜೀವೀ ಸ್ಯಾತ್ಕ್ಷಣಾನಾಮನುರೂಪಕಃ ।
ದುಃಖೀ ವಾಥ ಸುಖೀ ವಾಪಿ ಪೂರ್ವಕರ್ಮಾನುರೂಪತಃ ॥ ೧೩೪ ॥

---

೧೩೧. ಶುಕ್ಲಶೋಣಿತವು ಮಿಶ್ರವಾದಾಗ ರಕ್ತಾಂಶವು ಜಾಸ್ತಿಯಾಗಿದ್ದರೆ ಶಿಶುವು ತಾಯಿಯಂತೆಯೂ ಶುಕ್ಲಾಂಶವು ಜಾಸ್ತಿಯಾಗಿದ್ದರೆ ತಂದೆಯಂತೆಯೂ ಆಗುವುದು. ಸಮದಿವಸಗಳಲ್ಲಿ ಗರ್ಭೋತ್ಪತ್ತಿಯಾದರೆ ಪುತ್ರನೂ, ಬೆಸದಿವಸಗಳಲ್ಲಾದರೆ ಪುತ್ರಿಯೂ ಜನಿಸುವರು.

೧೩೨. ಭಾನು, ಮಂಗಳ, ಗುರುವಾರ ದಿವಸಗಳಲ್ಲಿ ಗರ್ಭೋತ್ಪತ್ತಿಯಾದರೆ ಪುಂ ಶಿಶುವು ಜನಿಸುವುದು. ಅಸಮದಿವಸಗಳಲ್ಲೂ ಇತರ ವಾರಗಳಲ್ಲೂ ಗರ್ಭೋತ್ಪತ್ತಿಯಾದರೆ ಸ್ತ್ರೀ ಶಿಶುವಿನ ಜನನವಾಗುವುದು.

೧೩೩. ದಿವಸದ ಮೊದಲನೆಯ ಝಾಮದಲ್ಲಿ ಶಿಶುವು ಜನಿಸಿದರೆ ಅಲ್ಪಾಯುವಾಗಿಯೂ, ಎರಡನೇ ಝಾಮದಲ್ಲಿ ಹುಟ್ಟಿದರೆ ಮಧ್ಯಮವಾದ ಆಯುಸ್ಸುಳ್ಳದ್ದಾಗಿಯೂ ಮೂರನೆಯ ಝಾಮದಲ್ಲಿ ಹುಟ್ಟಿದರೆ ಅದಕ್ಕಿಂತ ದೀರ್ಘಾಯುವಾಗಿಯೂ ಆಗುವುದು.

೧೩೪. ನಾಲ್ಕನೆಯ ಝಾಮದಲ್ಲಿ ಹುಟ್ಟಿದ ಶಿಶುವು ಜನನಕಾಲಕ್ಕೆ ಅನುಗುಣವಾಗಿ ಚಿರಜೀವಿಯಾಗುವುದು. ಪೂರ್ವಜನ್ಮದ ಕರ್ಮಗಳಿಗನುಸಾರವಾಗಿ ಪ್ರಾಣಿಗಳಿಗೆ ಸುಖದುಃಖಗಳು ಒದಗುವುವು.

ಯೊದ್ವಶೇ ಚ ಕ್ಷಣೇ ಜನ್ಮ ಪ್ರಸವಸ್ತಾದೃಶೇ ಭವೇತ್ ।
ಪ್ರಸೂತಿಕ್ಷಣ ಚರ್ಚಾಂ ಚ ಕುರ್ವಂತ್ಯೇವಂ ವಿಚಕ್ಷಣಾಃ ॥ ೧೩೫ ॥

ಕಲಲಂತ್ವೇಕರಾತ್ರೇಣ ಪ್ರವೃದ್ಧಃ ಸ್ಯಾದ್ದಿನೇ ದಿನೇ ।
ಸಪ್ತಮೇ ಬದರಾಕಾರೋ ಮಾಸೇ ಗಂಡುಸಮೋ ಭವೇತ್ ॥ ೧೩೬ ॥

ಮಾಸತ್ರಯೇ ಮಾಂಸಪಿಂಡೋ ಹಸ್ತಪಾದಾದಿವರ್ಜಿತಃ ।
ಸರ್ವಾವಯವಸಂಪನ್ನೋ ದೇಹೀ ಮಾಸೇ ಚ ಪಂಚಮೇ ॥ ೧೩೭ ॥

ಭವೇತ್ತು ಜೀವಸಂಚಾರಃ ಷಣ್ಮಾಸ್ಯೇ ಸರ್ವತತ್ವವಿತ್ ।
ದುಃಖೀ ಸ್ವಲ್ಪಸ್ಥಲಸ್ಥಾಯೀ ಶಕುಂತ ಇವ ಪಂಜರೇ ॥ ೧೩೮ ॥

---

೧೩೫. ಎಂಥ ಕ್ಷಣದಲ್ಲಿ ಗರ್ಭೋತ್ಪತ್ತಿಯಾಗಿರುವುದೋ, ಅಂಥ ಕ್ಷಣದಲ್ಲಿಯೇ ಶಿಶುವು ಜನಿಸುವುದು. ಆದುದರಿಂದಲೇ ಬುದ್ಧಿವಂತರಾದವರು ಶಿಶುವು ಹುಟ್ಟಿದ ಕ್ಷಣವನ್ನು ಚರ್ಚೆಮಾಡಿ ಚೆನ್ನಾಗಿ ತಿಳಿಯುವರು.

೧೩೬. ಶುಕ್ಲಶೋಣಿತವು ಮಿಶ್ರವಾದರೆ ಕಲಲವೆನಿಸುವುದು. ಒಂದು ರಾತ್ರಿಯಲ್ಲಿ ಕಲಲವೆನಿಸಿಕೊಂಡ ಆ ಪಿಂಡವು ದಿನೇ ದಿನೇ ವೃದ್ಧಿಹೊಂದುತ್ತಿರುವುದು. ಏಳನೆಯ ದಿವಸಕ್ಕೆ ಒಂದು ಯಗಚಿಫಲದ ಆಕಾರವಾಗಿಯೂ, ಒಂದು ತಿಂಗಳಲ್ಲಿ (ಗಂಡು) ಸಮಾನವಾಗಿಯೂ ಆಗುವುದು.

೧೩೭. ಮೂರು ತಿಂಗಳಲ್ಲಿ ಕೈಕಾಲುಗಳಿಲ್ಲದ ಕೇವಲ ಮಾಂಸಪಿಂಡವಾಗುವುದು. ಐದನೆಯ ತಿಂಗಳಲ್ಲಿ ಸಮಸ್ತ ಅವಯವಗಳಿಂದಲೂ ಕೂಡಿದ ಶರೀರಿಯಾಗುವುದು.

೧೩೮. ಎಲೈ ಸರ್ವತತ್ವವನ್ನೂ ಬಲ್ಲ ಇಂದ್ರನೇ, ಆರನೆಯ ತಿಂಗಳಲ್ಲಿ ಆ ಶಿಶುವಿನ ದೇಹದೊಳಗೆ ಜೀವನು ಪ್ರವೇಶಿಸುವನು. ಆಗ ಜೀವಿಯು ಗರ್ಭದ ದುಃಖವನ್ನು ಅನುಭವಿಸುತ್ತಾ, ಪಕ್ಷಿಯು ಪಂಜರದಲ್ಲಿ ಮಲಗುವಂತೆ ಸ್ವಲ್ಪಸ್ಥಳದಲ್ಲೇ ಸಂಕೋಚ ಶರೀರನಾಗಿ ಮಲಗಿಕೊಳ್ಳುವನು.

ಮಾತೃಜಗ್ಧಾನ್ನಪಾನಂ ಚ ಭುಂಕ್ತೇಽಮೇಧ್ಯಸ್ಥಲೇ ಸ್ಥಿತಃ ।
ಹಾಹೇತಿ ಶಬ್ದಂ ಕೃತ್ವಾ ಚ ಚಿಂತಯೇದೀಶ್ವರಂ ಪರಂ ॥ ೧೩೯ ॥

ಏವಂ ಚ ಚತುರೋ ಮಾಸಾನ್ಭುಕ್ತ್ವಾ ಪರಮಯಾತನಾಂ ।
ಪ್ರೇರಿತೋ ವಾಯುನಾ ಕಾಲೇ ಗರ್ಭಾದ್ಬೈ ನಿರ್ಗತೋ ಭವೇತ್ ॥ ೧೪೦ ॥

ದಿಗ್ದೇಶಕಾಲಾವ್ಯುತ್ಪನ್ನೋ ವಿಸ್ಮೃತೋ ವಿಷ್ಣುಮಾಯಯಾ ।
ಶಶ್ವದ್ವಿಣ್ಮೂತ್ರಸಂಯುಕ್ತಃ ಶಿಶುಃ ಸ್ಯಾಚ್ಛೈಶವಾವಧಿ ॥ ೧೪೧ ॥

ಪರಾಯತ್ತೋಽಪ್ಯಶಕ್ತಶ್ಚ ಮಶಕಾದಿನಿವಾರಣೇ ।
ಕೀಟಾದಿಭುಕ್ತೋ ದುಃಖೀ ಚ ರೌತಿ ತತ್ರ ಪುನಃ ಪುನಃ ॥ ೧೪೨ ॥

---

೧೩೯. ತಾಯಿಯ ಶರೀರದಲ್ಲಿ ಮಲವಿರುವ ಸ್ಥಳದಲ್ಲಿದ್ದು ತಾಯಿಯು ತಿಂದು ಉಳಿದ ಆಹಾರ ಪಾನೀಯಗಳನ್ನು ಭುಂಜಿಸುತ್ತಿರುವನು. ಆಗ ಆ ಕಷ್ಟವನ್ನು ಸಹಿಸಲಾರದೆ 'ಹಾ ಹಾ' ಎಂದು ಕೂಗಿಕೊಳ್ಳುತ್ತಾ ಪರಮೇಶ್ವರನನ್ನು ಭಜಿಸುವನು.

೧೪೦. ಹೀಗೆ ನಾಲ್ಕು ತಿಂಗಳಕಾಲ ಗರ್ಭಯಾತನೆಯನ್ನು ಸಹಿಸಿಕೊಂಡಿದ್ದು ಕಾಲಕ್ಕೆ ಸರಿಯಾಗಿ ವಾಯುಪ್ರೇರಿತನಾಗಿ ಗರ್ಭದಿಂದ ಹೊರಕ್ಕೆ ಬರುವನು.

೧೪೧. ಜನ್ಮಾಂತರ ಸಂಸ್ಕಾರಬಲದಿಂದ ಕಾಲ, ದೇಶ, ವರ್ತಮಾನಗಳ ಪರಿಜ್ಞಾನವಿದ್ದರೂ ವಿಷ್ಣುವಿನ ಮಾಯಾಶಕ್ತಿಯಿಂದ ಅದೆಲ್ಲವನ್ನೂ ಮರೆತು ಬಾಲ್ಯ ಕಳೆಯುವವರೆಗೂ ಶಿಶುವು ಮಲಮೂತ್ರಗಳಿಂದ ಕೊಳಕಾಗಿರುವುದು.

೧೪೨. ಸ್ವತಃ ನೊಣ, ಸೊಳ್ಳೆಗಳನ್ನೂ ಪರಿಹರಿಸಿಕೊಳ್ಳಲಾರದೆ ಪರಾಧೀನವಾಗಿ ಕ್ರಿಮಿಕೀಟಾದಿಗಳಿಂದ ಭಕ್ಷಿತವಾಗಿ ದುಃಖವನ್ನನುಭವಿಸುತ್ತಾ ಮತ್ತೆ ಮತ್ತೆ ಅಳುತ್ತಿರುವುದು.

ಸ್ತನಾಂಧೋsಪ್ಯಸಮರ್ಥಶ್ಚ ಯಾಂಚಾಂ ಕರ್ತುಮಭೀಪ್ಸಿತಾಂ ।
ನ ವಾಣೀ ನಿಸ್ಸರೇತ್ತಸ್ಯ ಪೌಗಂಡಾವಧಿ ಸುಸ್ಫುಟಾ　　॥ ೧೪೩ ॥

ಪೌಗಂಡೇ ಯಾತನಾಂ ಭುಕ್ತ್ವಾ ಪ್ರಾಪ್ನುತೇ ಯೌವನಂ ಪುನಃ ।
ನ ಸ್ಮರೇನ್ಮಾಯಯಾ ದೇಹೋ ಗರ್ಭಾದೇರ್ಯಾತನಾಂ ಪುನಃ　॥ ೧೪೪ ॥

ಆಹಾರಮೈಥುನಾರ್ತಶ್ಚ ನಾನಾಮೋಹಾದಿವೇಷ್ಟಿತಃ ।
ಪುತ್ರಂ ಕಲತ್ರಮನುಗಂ ಯತ್ನೇನ ಪರಿಪಾಲಯೇತ್　　॥ ೧೪೫ ॥

ಏವಂ ಯಾವತ್ಸಮರ್ಥಶ್ಚ ತಾವದೇವ ಹಿ ಪೂಜಿತಃ ।
ಅಸಮರ್ಥಂ ಚ ಮನ್ಯಂತೇ ಬಾಂಧವಾ ಗೋಜರಂ ಯಥಾ　　॥ ೧೪೬ ॥

---

೧೪೩. ಸ್ತನ್ಯಪಾನಮಾಡಲು ಆಸೆಯಿದ್ದರೂ ಇಷ್ಟಾರ್ಥವನ್ನು ಬೇಡಿಕೊಳ್ಳಲು ಆ ಶಿಶುವು ಸಮರ್ಥವಾಗುವುದಿಲ್ಲ. ನಾಲ್ಕೈದು ವರ್ಷದವರೆಗೂ ಆ ಶಿಶುವಿನ ಬಾಯಿನಿಂದ ಸ್ಪಷ್ಟವಾಗಿ ಮಾತು ಹೊರಡುವುದಿಲ್ಲ.

೧೪೪. ಬಾಲ್ಯದಲ್ಲಿ ಅನೇಕ ತರಹ ಕಷ್ಟಗಳನ್ನು ಅನುಭವಿಸಿ ಮುಂದೆ ಪ್ರಾಯವನ್ನು ಪಡೆಯುವನು. ಆಗ ಅವನು ವಿಷ್ಣುಮಾಯೆಯಿಂದ ತನ್ನ ಗರ್ಭವಾಸದ ಯಾತನೆಯನ್ನು ಮರೆತುಬಿಡುವನು.

೧೪೫. ಆಹಾರ, ಸ್ತ್ರೀಸುಖ ಮುಂತಾದವುಗಳಲ್ಲಿ ಆಸಕ್ತನಾಗಿ ವಿಧವಿಧ ಮೋಹಜಾಲಗಳಿಗೆ ಸಿಲುಕಿ ಪುತ್ರಮಿತ್ರಕಳತ್ರಾದಿಗಳನ್ನು ಪ್ರಯತ್ನಪೂರ್ವಕವಾಗಿ ಪರಿಪಾಲಿಸುವನು.

೧೪೬. ಎಲ್ಲಿಯವರೆಗೆ ಅವನು ತನ್ನ ಆಪ್ತೇಷ್ಟರನ್ನು ಪರಿಪಾಲಿಸಲು ಸಮರ್ಥನಾಗಿರುವನೋ ಅದುವರೆಗೆ ಅವರೆಲ್ಲರೂ ಗೌರವಿಸುತ್ತಿರುವರು. ಪಾಲನೆಯಲ್ಲಿ ಅಶಕ್ತನಾದ ಅವನನ್ನು ಬಾಂಧವರು ಮುದಿ ಹಸುವಿಗಿಂತ ಕಡೆಗಾಣುವರು.

ಯದಾತೀವ ಜರಾಯುಕ್ತೋ ಜಡೋಽತಿಬಧಿರೋ ಭವೇತ್ ।
ಕಾಸಶ್ವಾಸಾದಿಯುಕ್ತಶ್ಚ ಪರಾಯತ್ತೋಽತಿಮೂಢವತ್ ॥ ೧೪೭ ॥

ತದಂತರೇಽನುತಾಪಂ ಚ ಕುರುತೇ ಸಂತತಂ ಪುನಃ ।
ನ ಸೇವಿತಂ ಹರೇಸ್ತೀರ್ಥಂ ಸತ್ಸಂಗಶ್ಚಾಪಿ ಕಾಮತಃ ॥ ೧೪೮ ॥

ಪುನಶ್ಚ ಮಾನವೀಂ ಯೋನಿಂ ಲಭಾಮಿ ಭಾರತೇ ಯದಿ ।
ತದಾ ತೀರ್ಥಂ ಗಮಿಷ್ಯಾಮಿ ಭಜೇ ನೈ ಕೃಷ್ಣಮಿತ್ಯಹೋ ॥ ೧೪೯ ॥

ಇತ್ಯೇವಮಾದಿ ಮನಸಿ ಕುರ್ವಂತಂ ತಂ ಜಡಂ ಸುರ ।
ಗೃಹ್ಣಾತಿ ಯಮದೂತಶ್ಚ ಕಾಲೇ ಪ್ರಾಪ್ತೇಽತಿದಾರುಣಃ ॥ ೧೫೦ ॥

ಸ ಪಶೇದ್ಯಮದೂತಂ ಚ ಪಾಶಹಸ್ತಂ ಚ ದಂಡಿನಂ ।
ಅತೀವ ಕೋಪರಕ್ತಾಕ್ಷಂ ವಿಕೃತಾಕಾರಮುಲ್ಬಣಂ ॥ ೧೫೧ ॥

೧೪೭–೧೪೮. ಬಹಳ ಮುದುಕನಾಗಿ ವಿವಿಧ ಜಾಡ್ಯಗಳಿಗೀಡಾಗಿ. ಕಿವುಡತನ ದಿಂದಲೂ, ಕಾಸ, ಶ್ವಾಸಾದಿರೋಗಗಳಿಂದಲೂ ಕೂಡಿ ಪರಾಧೀನತೆಯಿಂದ ಮೂಢ ನಂತೆ ನರಳಬೇಕಾದಾಗ 'ಶ್ರೀಹರಿಯನ್ನೂ, ಪುಣ್ಯತೀರ್ಥಗಳನ್ನೂ, ಸೇವಿಸದೆ ಸತ್ಸಂಗವನ್ನು ಮಾಡದೆ ಕಾಲಕಳೆದೆನಲ್ಲಾ' ಎಂದು ಪಶ್ಚಾತ್ತಾಪಪಡುವನು.

೧೪೯. 'ಮತ್ತೊಂದು ಜನ್ಮದಲ್ಲಿ ಇದೇ ಭರತಖಂಡದಲ್ಲಿ ನಾನು ಮನುಷ್ಯ ನಾಗಿ ಹುಟ್ಟಿದರೆ ಪುಣ್ಯತೀರ್ಥಗಳ ಯಾತ್ರೆಮಾಡಿ ಶ್ರೀಕೃಷ್ಣನನ್ನು ಖಂಡಿತ ವಾಗಿಯೂ ಭಜಿಸುವೆನು.'

೧೫೦. ಎಲೈ ದೇವೇಂದ್ರನೇ, ಹೀಗೆ ಮನಸ್ಸಿನಲ್ಲೇ ಯೋಚಿಸುತ್ತಿರುವ ಆ ಜಡಪ್ರಾಣಿಯನ್ನು, ಕಾಲವನ್ನೇ ನಿರೀಕ್ಷಿಸುತ್ತಿರುವ ಕ್ರೂರನಾದ ಯಮದೂತನು ಬಂದು ಹಿಡಿಯುವನು.

೧೫೧–೧೫೨. ಪಾಶ ಮತ್ತು ದಂಡಧರನಾಗಿ, ಕೋಪದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ವಿಕೃತಾಕಾರದಿಂದ ಭಯಂಕರನೂ, ಉಪಾಯಗಳಿಂದ

ದುರ್ನಿವಾರ್ಯಮುಪಾಯೈಶ್ಚ ಬಲಿಷ್ಠಂ ಚ ಭಯಂಕರಂ ।
ದುರ್ದೃಶ್ಯಂ ಸರ್ವಸಿದ್ಧಿಜ್ಞಂ ಸರ್ವಾದೃಷ್ಟಂ ಪುರಃ ಸ್ಥಿತಂ ॥ ೧೫೨ ॥

ದೃಷ್ಟಮಾತ್ರಾನ್ಮಹಾಭೀತೋ ವಿಣ್ಮೂತ್ರಂ ಚ ಸಮುತ್ಸೃಜೇತ್ ।
ತದಾ ಪ್ರಾಣಾಂಸ್ತ್ಯಜೇತ್ಸದ್ಯೋ ದೇಹಂ ವೈ ಪಾಂಚಭೌತಿಕಂ ॥ ೧೫೩ ॥

ಅಂಗುಷ್ಠಮಾತ್ರಂ ಪುರುಷಂ ಗೃಹೀತ್ವಾ ಯಮಕಿಂಕರಃ ।
ವಿನ್ಯಸ್ಯ ಭೋಗದೇಹೇ ಚ ಸ್ವಸ್ಥಾನಂ ಪ್ರಾಪಯೇದ್ದ್ರುತಂ ॥ ೧೫೪ ॥

ಜೀವೋ ಗತ್ವಾ ಯಮಂ ಪಶ್ಯೇತ್ಸರ್ವಧರ್ಮಜ್ಞಮೇನ ಚ ।
ರತ್ನಸಿಂಹಾಸನಸ್ಥಂ ಚ ಸಸ್ಮಿತಂ ಸುಸ್ಥಿರಂ ಪರಂ ॥ ೧೫೫ ॥

ಧರ್ಮಾಧರ್ಮವಿಚಾರಜ್ಞಂ ಸರ್ವಜ್ಞಂ ಸರ್ವತೋಮುಖಂ ।
ವಿಶ್ವೇಷ್ವೇಕಾಧಿಕಾರಂ ಚ ವಿಧಾತ್ರಾ ನಿರ್ಮಿತಂ ಪುರಾ ॥ ೧೫೬ ॥

ನಿವಾರಿಸಲಸಾಧ್ಯನೂ, ಬಲಿಷ್ಠನೂ, ದೃಷ್ಟಿಸಿ ನೋಡಲಸಾಧ್ಯನೂ, ಮತ್ತಾರಿಗೂ ಕಾಣದೆ ತನಗೆ ಮಾತ್ರ ಕಾಣಿಸಿಕೊಳ್ಳುವವನೂ ಆದ ಯಮದೂತನನ್ನು ಆ ಜಡನು ನೋಡುವನು.

೧೫೩. ನೋಡಿದ ಮಾತ್ರದಿಂದಲೇ ಬಹಳ ಹೆದರಿದವನಾಗಿ ಮಲಮೂತ್ರಗಳನ್ನು ವಿಸರ್ಜಿಸುವನು. ಆಗ ಜೀವನು ಪಂಚಪ್ರಾಣಗಳನ್ನೂ, ಪಾಂಚಭೌತಿಕ ಶರೀರವನ್ನೂ ತ್ಯಜಿಸುವನು.

೧೫೪. ಯಮದೂತನು ಅಂಗುಷ್ಠಪ್ರಮಾಣವುಳ್ಳ ಪುರುಷನನ್ನು ಮಾತ್ರ ಸೆಳೆದುಕೊಂಡು ಅವನನ್ನು ಭೋಗದೇಹದೊಳಗಿಟ್ಟುಕೊಂಡು ತನ್ನ ಸ್ಥಾನಕ್ಕೆ ಕರೆದೊಯ್ಯುವನು.

೧೫೫. ಜೀವನು ಅಲ್ಲಿಗೆ ಹೋಗಿ ರತ್ನಸಿಂಹಾಸನದಲ್ಲಿ ಸ್ಮಿತಮುಖನಾಗಿ ಗಂಭೀರಭಾವದಿಂದ ಕುಳಿತಿರುವ ಧರ್ಮಪುರುಷನಾದ ಯಮನನ್ನು ನೋಡುವನು.

೧೫೬-೧೫೭. ಧರ್ಮಾಧರ್ಮ ವಿಚಾರಗಳಲ್ಲಿ ಸಮರ್ಥನೂ, ಸರ್ವಜ್ಞನೂ, ಸರ್ವತೋಮುಖನೂ, ಪ್ರಪಂಚಕ್ಕೆಲ್ಲ ಒಬ್ಬನೇ ಅಧಿಕಾರಿಯಾಗಿ ಬ್ರಹ್ಮನಿಂದ

ವಹ್ನಿಶುದ್ಧಾಂಶುಕಾಧಾನಂ ರತ್ನಭೂಷಣಭೂಷಿತಂ ।
ವೇಷ್ಟಿತಂ ಪಾರ್ಷದಗಣೈಃ ದೂತೈಶ್ಚಾಪಿ ತ್ರಿಕೋಟಿಭಿಃ ॥ ೧೫೭ ॥

ಜಪಂತಂ ಶ್ರೀಕೃಷ್ಣನಾಮ ಶುದ್ಧಸ್ಫಾಟಿಕಮಾಲಯಾ ।
ಧ್ಯಾಯಮಾನಂ ತತ್ಪದಾಬ್ಜಂ ಪುಲಕಾಂಕಿತವಿಗ್ರಹಂ ॥ ೧೫೮ ॥

ಸಗದ್ಗದಂ ಸಾಶ್ರುನೇತ್ರಂ ಸರ್ವತ್ರ ಸಮದರ್ಶಿನಂ ।
ಅತೀವ ಕಮನೀಯಂ ಚ ಶಶ್ವತ್ಸುಸ್ಥಿರಯೌವನಂ ॥ ೧೫೯ ॥

ಸ್ವತೇಜಸಾ ಪ್ರಜ್ವಲಂತಂ ಸುಖದೃಶ್ಯಂ ವಿಚಕ್ಷಣಂ ।
ಶರತ್ಪಾರ್ವಣಚಂದ್ರಾಭಂ ಚಿತ್ರಗುಪ್ತಪುರಃ ಸ್ಥಿತಂ ॥ ೧೬೦ ॥

ಪುಣ್ಯಾತ್ಮನಾಂ ಶಾಂತರೂಪಂ ಪಾಪಿನಾಂ ಚ ಭಯಂಕರಂ ।
ತಂ ದೃಷ್ಟ್ವಾ ಪ್ರಣಮೇದ್ದೇಹೀ ಮಹಾಭೀತಶ್ಚ ತಿಷ್ಠತಿ ॥ ೧೬೧ ॥

ನಿಯಮಿಸಲ್ಪಟ್ಟವನೂ ಆದ ಆ ಯಮಧರ್ಮರಾಯನು ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು, ರತ್ನಾಭರಣಗಳಿಂದಲಂಕೃತನಾಗಿ, ಪಾರ್ಷದರ ಸಮೂಹದಿಂದಲೂ ಮೂರುಕೋಟಿ ದೂತರಿಂದಲೂ ಪರಿವೃತನಾಗಿರುವನು.

೧೫೮–೧೫೯. ಕೈಯಲ್ಲಿ ಶುದ್ಧಸ್ಫಟಿಕಮಾಲೆಯೊಂದನ್ನು ಹಿಡಿದು, ಶ್ರೀಕೃಷ್ಣನ ದಿವ್ಯನಾಮವನ್ನು ಜಪಿಸುತ್ತಾ ಅವನ ಅಡಿದಾವರೆಗಳನ್ನು ಧ್ಯಾನಿಸುತ್ತ ರೋಮಾಂಚಿತ ಶರೀರನಾಗಿ ಗದ್ಗದ ಕಂಠದಿಂದಲೂ, ಆನಂದಾಶ್ರುಪೂರಿತವಾದ ನೇತ್ರದಿಂದಲೂ ಕೂಡಿ ಬಹಳ ಮನೋಹರನೂ, ಸ್ಥಿರಯೌವನವುಳ್ಳವನೂ ಆದ ಆ ಯಮನು ಎಲ್ಲರಲ್ಲಿಯೂ ಸಮದರ್ಶಿಯಾಗಿರುವನು.

೧೬೦–೧೬೧. ತನ್ನ ತೇಜಸ್ಸಿನಿಂದ ಜಾಜ್ವಲ್ಯಮಾನನಾಗಿ, ಕುಶಲಿಯೂ, ಶರತ್ಪೂರ್ಣಿಮೆಯ ಚಂದ್ರನಂತೆ ಮನೋಹರನೂ, ಚಿತ್ರಗುಪ್ತನ ಮುಂದೆ ಸಿಂಹಾಸನಾಸೀನನೂ, ಪುಣ್ಯಾತ್ಮರಿಗೆ ಶಾಂತಾಕಾರನೂ, ಪಾಪಿಗಳ ಕಣ್ಣಿಗೆ ಭಯಂಕರನೂ ಆದ ಆ ಯಮನನ್ನು ಜೀವನು ನೋಡಿದ ಮಾತ್ರದಿಂದಲೇ ನಮಸ್ಕರಿಸಿ ಭೀತನಾಗಿ ನಿಲ್ಲುವನು.

ಚಿತ್ರಗುಪ್ತವಿಚಾರೇಣ ಯೇಷಾಂ ಯದುಚಿತಂ ಫಲಂ ।
ಶುಭಾಶುಭಂ ಚ ಕುರುತೇ ತದೇವ ರವಿನಂದನಃ ॥ ೧೬೨ ॥

ಏವಂ ತೇಷಾಂ ಗತಾಯಾತೇ ನಿವೃತ್ತಿರ್ನಾಸ್ತಿ ಜೀವಿನಾಂ ।
ನಿವೃತ್ತಿಹೇತುರೂಪಂ ಚ ಶ್ರೀಕೃಷ್ಣಪದಸೇವನಂ ॥ ೧೬೩ ॥

ಇತ್ಯೇವಂ ಕಥಿತಂ ಸರ್ವಂ ಪರಂ ಸ್ವಾರ್ಥಯಮಾಂಛಿತಂ ।
ಸರ್ವಂ ದಾಸ್ಯಾಮಿ ತೇ ವತ್ಸ ನ ಮೇಽಸಾಧ್ಯಂ ಚ ಕಿಂಚನ ॥ ೧೬೪ ॥

॥ ಮಹೇಂದ್ರ ಉವಾಚ ॥

ಇಂದ್ರತ್ವಂ ಚ ಗತಂ ಭದ್ರಂ ಕಿಮೈಶ್ವರ್ಯೇ ಪ್ರಯೋಜನಂ ।
ಕಲ್ಪವೃಕ್ಷಮುನಿಶ್ರೇಷ್ಟ ದೇಹಿ ಮೇ ಪರಮಂ ಪದಂ ॥ ೧೬೫ ॥

---

೧೬೨. ಸೂರ್ಯಪುತ್ರನಾದ ಆ ಯಮನು ತನ್ನ ಮಂತ್ರಿಯಾದ ಚಿತ್ರಗುಪ್ತನ ಲೆಖ್ಖದಂತೆ ಅವರವರಿಗುಚಿತವಾದ ಶುಭಾಶುಭ ಫಲಗಳನ್ನು ಕೊಡುವನು.

೧೬೩. ಹೀಗೆ ಜನನಮರಣಾತ್ಮಕವಾದ ಸಂಸಾರದಲ್ಲಿ ಹುಟ್ಟಿ ಸಾಯುವ ಜೀವಿಗಳಿಗೆ ಮೋಕ್ಷವುಂಟಾಗಬೇಕಾದರೆ ಶ್ರೀಕೃಷ್ಣನ ಪಾದಗಳನ್ನು ಭಕ್ತಿಯಿಂದ ಭಜಿಸುವುದೊಂದೇ ಮಾರ್ಗ.

೧೬೪. ಹೀಗೆ ನೀನು ಕೇಳಿದುದನ್ನೆಲ್ಲಾ ಹೇಳಿಯಾಯಿತು. ಇನ್ನೇನಾದರೂ ನಿನ್ನ ಬಯಕೆ ಇದ್ದರೆ ಕೇಳು. ಎಲ್ಲವನ್ನೂ ಕೊಡುವೆನು. ನನಗೆ ಅಸಾಧ್ಯವಾದುದಾವುದೂ ಇಲ್ಲ.

೧೬೫. ಮಹೇಂದ್ರ :—ಕಲ್ಪವೃಕ್ಷಕ್ಕೆ ಸಮನಾದ ಎಲೈ ಮುನಿಶ್ರೇಷ್ಠನೇ, ನಾನು ಶಾಶ್ವತವೆಂದು ಬಗೆದ ಇಂದ್ರಪದವಿಯೇ ನಶ್ವರವಾದ ಮೇಲೆ ಕ್ಷಣಿಕವಾದ ಸಂಪತ್ತಿನಿಂದ ಪ್ರಯೋಜನವೇನು? ನನಗೆ ಪರಮಪದವು ದೊರಕುವಂತೆ ಅನುಗ್ರಹಿಸು

ಮಹೇಂದ್ರಸ್ಯ ವಚಃ ಶ್ರುತ್ವಾ ಪ್ರಹಸ್ಯ ಮುನಿಪುಂಗವಃ ।
ತಮುವಾಚ ವಚಸ್ಸತ್ಯಂ ವೇದೋಕ್ತಂ ಸಾರಮೇವ ಚ ॥ ೧೬೬ ॥

॥ ದುರ್ವಾಸಾ ಉವಾಚ ॥

ಪರಂ ಪದಂ ವಿಷಯಿಣಾಂ ಮಹೇಂದ್ರಾತಿಸುದುರ್ಲಭಂ ।
ಮುಕ್ತಿರ್ಯುಷ್ಮದ್ವಿಧಾನಾಂ ಚ ನ ಲಯೇ ಪ್ರಾಕೃತೇಽಪಿ ಚ ॥ ೧೬೭ ॥

ಆವಿರ್ಭಾವಃ ಸೃಷ್ಟಿವಿಧೌ ತಿರೋಭಾವೋ ಲಯೇಽಪಿ ಚ ।
ಯಥಾ ಜಾಗರಣಂ ಸುಪ್ತಿರ್ಭವತ್ಯೇವ ಕ್ರಮೇಣ ಚ ॥ ೧೬೮ ॥

ಯಥಾ ಭ್ರಮತಿ ಕಾಲಶ್ಚ ತಥಾ ವಿಷಯಿಣೋ ಧ್ರುವಂ ।
ಚಕ್ರನೇಮಿಕ್ರಮೇಣೈವ ನಿತ್ಯಮೇವೇಶ್ವರೇಚ್ಛಯಾ ॥ ೧೬೯ ॥

ಪಲಮೇಕಂ ಭವೇದೇವ ಯಥಾ ವಿಪಲಷಷ್ಟಿಭಿಃ ।
ಷಷ್ಟಿಭಿಶ್ಚ ಪಲೈರ್ದಂಡೋ ಮುಹೂರ್ತೋ ದ್ವಿಗುಣಾತ್ತತಃ ॥ ೧೭೦ ॥

---

೧೬೬. ಮಹೇಂದ್ರನ ನುಡಿಯನ್ನು ಕೇಳಿ ಮುನಿಶ್ರೇಷ್ಠನಾದ ದೂರ್ವಾಸನು ನಗುತ್ತ ಅವನನ್ನು ಕುರಿತು ವೇದೋಕ್ತವೂ, ಸಾರಭೂತವೂ ಆದ ಸತ್ಯವಚನವನ್ನಾಡಿದನು.

೧೬೭. ದೂರ್ವಾಸ:—ಎಲೈ ಮಹೇಂದ್ರನೇ, ವಿಷಯಸುಖಾಭಿಲಾಷಿಗಳಿಗೆ ಪರಮಪದವು ಅತಿದುರ್ಲಭವಾದುದು. ನಿನ್ನಂಥವರಿಗೆ ಪ್ರಾಕೃತಪ್ರಳಯದಲ್ಲಿಯೂ ಕೂಡ ಮುಕ್ತಿಯುಂಟಾಗುವುದಿಲ್ಲ.

೧೬೮. ಜಂತುಗಳಿಗೆ ಜಾಗ್ರತ್ಸ್ವಪ್ನಗಳು ಕ್ರಮವಾಗಿ ಉಂಟಾಗುವಂತೆ ಸೃಷ್ಟಿಯಲ್ಲಿ ಆವಿರ್ಭಾವವೂ, ಪ್ರಲಯದಲ್ಲಿ ಲಯವೂ ಉಂಟಾಗುತ್ತಿರುವುದು.

೧೬೯. ಈಶ್ವರೇಚ್ಛೆಯಿಂದ ಕಾಲಚಕ್ರವು ತಿರುಗುವಂತೆ ವಿಷಯಾಭಿಲಾಷಿಗಳಿಗೆ ಚಕ್ರಧಾರೆಯಂತೆ ಕಾಲಪರಿವರ್ತನೆಯಾಗುತ್ತಿರುವುದು.

೧೭೦-೧೭೧. ಅರವತ್ತು ವಿಫಲಗಳು ಸೇರಿ ಒಂದು (ಕ್ಷಣ) ಫಲವಾಗುವಂತೆ, ಅರವತ್ತು ಫಲಗಳು ಸೇರಿದರೆ ಒಂದು ದಂಡವೂ, ಎರಡು ದಂಡಗಳು ಸೇರಿ ಒಂದು

ತ್ರಿಂಶದ್ಭಿಶ್ಚ ಮುಹೂರ್ತೈಶ್ಚ ಭವೇದೇವ ದಿವಾನಿಶಂ |
ದಶಪಂಚದಿವಾರಾತ್ರಿಃ ಪಕ್ಷಮೇಕಂ ವಿದುರ್ಬುಧಾಃ || ೧೭೧ ||

ಪಕ್ಷಾಭ್ಯಾಂ ಶುಕ್ಲಕೃಷ್ಣಾಭ್ಯಾಂ ಮಾಸ ಏವ ವಿಧೀಯತೇ |
ಋತುರ್ದ್ವಾಭ್ಯಾಂ ಚ ಮಾಸಾಭ್ಯಾಂ ಸಂಖ್ಯಾವಿದ್ಭಿಃ ಪ್ರಕೀರ್ತಿತಃ || ೧೭೨ ||

ಋತುತ್ರಯೇಣಾಯನಂ ಚ ತಾಭ್ಯಾಂ ದ್ವಾಭ್ಯಾಂ ಚ ವತ್ಸರಃ |
ತ್ರಿಂಶತ್ಸಹಸ್ರಾಧಿಕೈಶ್ಚ ತ್ರಿಚತ್ವಾರಿಂಶಲಕ್ಷಕೈಃ || ೧೭೩ ||

ವತ್ಸರೈರ್ನರಮಾನೈಶ್ಚ ಯುಗಾನಾಂ ಚ ಚತುಷ್ಟಯಂ |
ಷಷ್ಟ್ಯಧಿಕೇ ಪಂಚಶತೇ ಸಹಸ್ರೇ ಪಂಚವಿಂಶತೌ || ೧೭೪ ||

ಯುಗೇ ನರಾಣಾಂ ಶಕ್ರಾಯುರ್ಮನೋರಾಯುಃ ಪ್ರಕೀರ್ತಿತಂ |
ದಿಗ್ಲಕ್ಷೇಂದ್ರ ನಿಪಾತೇಽಷ್ಟ ಸಹಸ್ರಾಧಿಕ ಏವ ಚ || ೧೭೫ ||

ನಿಪಾತೋ ಬ್ರಹ್ಮಣಸ್ತತ್ರ ಭವೇತ್ಪ್ರಾಕೃತಿಕೋ ಲಯಃ |
ಲಯೇ ಪ್ರಾಕೃತಿಕೇ ವತ್ಸ ಕೃಷ್ಣಸ್ಯ ಪರಮಾತ್ಮನಃ || ೧೭೬ ||

ಮುಹೂರ್ತವೂ, ಮೂವತ್ತು ಮುಹೂರ್ತಗಳಾದರೆ ಒಂದು ಹಗಲೂ ಒಂದು ರಾತ್ರಿಯೂ ಆಗುವುವು. ಹದಿನೈದು ಹಗಲು ರಾತ್ರಿಗಳಾದರೆ ಒಂದು ಪಕ್ಷವೆಂದು ಪಂಡಿತರು ಹೇಳುವರು.

೧೭೨. ಶುಕ್ಲಕೃಷ್ಣಪಕ್ಷಗಳೆರಡು ಸೇರಿ ಒಂದು ತಿಂಗಳಾಗುವುದು. ಎರಡೆರಡು ತಿಂಗಳಿಗೆ ಒಂದೊಂದು ಋತುವೆಂದು ಗಣಿತಜ್ಞರು ಹೇಳುವರು.

೧೭೩–೧೭೫. ಮೂರು ಋತುಗಳು ಸೇರಿದರೆ ಒಂದು ಅಯನವೂ, ಎರಡು ಅಯನಗಳು ಸೇರಿ ಒಂದು ವರ್ಷವೂ ಆಗುವುದು. ಮನುಷ್ಯಮಾನದ ೪೩,೩೦,೦೦೦ ಸಾವಿರ ವರ್ಷಗಳಾದರೆ ಚತುರ್ಯುಗಗಳಾಗುವುವು. ೫,೬೦,೦೦೦೨೫ ಯುಗಗಳು ಕಳೆದರೆ ಇಂದ್ರನ ಮತ್ತು ಮನುವಿನ ಆಯುಸ್ಸು ಪೂರ್ತಿಯಾಗುವುದು. ಎಂಟು ಲಕ್ಷದ ಎಂಟುಸಾವಿರ ಇಂದ್ರರ ನಾಶವಾದರೆ ಒಬ್ಬ ಬ್ರಹ್ಮನ ಪತನವಾಗಿ ಆಗ ಪ್ರಾಕೃತಿಕಲಯವೆನಿಸುವುದು.

೧೭೬–೧೭೭. ಎಲೈ ಇಂದ್ರನೇ, ಪ್ರಾಕೃತಿಕಲಯವು ಶ್ರೀಕೃಷ್ಣಪರಮಾತ್ಮನು ಕಣ್ಣು ಮುಚ್ಚಿದಾಗ ಉಂಟಾಗಿ ಕಣ್ದೆರೆದಾಗ ಪುನಃ ಸೃಷ್ಟಿಯಾಗುವುದು. ಈ ರೀತಿ

ಚಕ್ಷುರ್ನಿಮೇಷಃ ಸೃಷ್ಟಿಶ್ಚ ಪುನರುನ್ಮೀಲನೇ ತಥಾ ।
ಬ್ರಹ್ಮಸೃಷ್ಟಿಲಯಾನಾಂ ಚ ಸಂಖ್ಯಾ ನಾಸ್ತಿ ಶ್ರುತೌ ಶ್ರುತಂ ॥ ೧೭೭ ॥

ಯಥಾ ಪೃಥಿವ್ಯಾ ರೇಣೂನಾಮಿತ್ಯೂಚೇ ಚಂದ್ರಶೇಖರಃ ।
ಏತೇಷಾಂ ಮೋಕ್ಷಣಂ ನಾಸ್ತಿ ಕಥಿತಾನಿ ಚ ಯಾನಿ ತು ॥ ೧೭೮ ॥

ಸೃಷ್ಟಿಸೂತ್ರಸ್ವರೂಪಂ ಹಿ ಚಾನ್ಯದ್ವೃಣುವರಂ ಸುರ ।
ಮುನೀಂದ್ರಸ್ಯ ವಚಃ ಶ್ರುತ್ವಾ ದೇವೇಂದ್ರೋ ವಿಸ್ಮಿತೋ ಮುನೇ ॥ ೧೭೯ ॥

ಆತ್ಮನಃ ಪೂರ್ವಮೈಶ್ವರ್ಯಂ ವರಯಾಮಾಸ ತತ್ರವೈ ।
ತತ್ಪ್ರಾಪ್ಸ್ಯಸಿ ಚಿರೇಣೈವೇತ್ಯುಕ್ತ್ವಾ ಸ ಪ್ರಯಯೌ ಗೃಹಂ ॥ ೧೮೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ದುರ್ವಾಸಮುನಿಸುರೇಂದ್ರ
ಸಂವಾದೇ ಲಕ್ಷ್ಮ್ಯುಪಾಖ್ಯಾನೇ ಇಂದ್ರಂ ಸಪ್ರತಿ ದುರ್ವಾಸಃ
ಶಾಪಾದಿಕಥನಂ ನಾಮ ಷಟ್ತ್ರಿಂಶೋಽಧ್ಯಾಯಃ

ಯಾಗಿ ಬ್ರಹ್ಮನ ಸೃಷ್ಟಿ ಮತ್ತು ಲಯಗಳ ಗಣನೆಯೇ ಇಲ್ಲವೆಂದು ಶ್ರುತ್ಯುಕ್ತವಾಗಿದೆ.

೧೭೮-೧೮೦. ಭೂಮಿಯಲ್ಲಿರುವ ಪಾರ್ಥಿವಕಣಗಳನ್ನು ಎಣಿಸಲಾಗದಿರುವಂತೆ ಬ್ರಹ್ಮಸೃಷ್ಟಿಲಯಗಳನ್ನು ಎಣಿಸಲಾಗುವುದಿಲ್ಲ. ಇದುವರೆಗೂ ಹೇಳಿದ ಪ್ರಾಕೃತಿಕ ಸೃಷ್ಟಿಗೊಳಗಾದುವಕ್ಕೆ ಮೋಕ್ಷವಿಲ್ಲ. ಸೃಷ್ಟಿಸೂತ್ರ ಸ್ವರೂಪವನ್ನು ವಿವರಿಸಿದೆನು. ಇನ್ನೇನಾದರೂ ವರವಿದ್ದರೆ ಬೇಡು. ದೂರ್ವಾಸಮಹರ್ಷಿಯ ಮಾತನ್ನು ಕೇಳಿ ದೇವೇಂದ್ರನು ತನ್ನ ಮೊದಲಿನ ಐಶ್ವರ್ಯವನ್ನು ಪುನಃ ಬೇಡಿದನು. 'ಜಾಗ್ರತೆಯಾಗಿಯೇ ಆ ಐಶ್ವರ್ಯವನ್ನು ಪುನಃ ಹೊಂದುವೆ' ಎಂದು ಹೇಳಿ ದೂರ್ವಾಸನು ಹೊರಟುಹೋದನು.

ಇಲ್ಲಿಗೆ ಶ್ರೀಬ್ರಹ್ಮವೈವರ್ತಪುರಾಣದ ಪ್ರಕೃತಿಖಂಡದ ನಾರದ ನಾರಾಯಣ
ಸಂವಾದದಲ್ಲಿ ದೂರ್ವಾಸ ಮತ್ತು ಇಂದ್ರರ ಸಂವಾದವ
ಲಕ್ಷ್ಮ್ಯುಪಾಖ್ಯಾನದಲ್ಲಿ ಇಂದ್ರನ ಶಾಪಕಥನವೆಂಬ
ಮೂವತ್ತಾರನೆಯ ಅಧ್ಯಾಯವು ಮುಗಿದುದು.

ಮೂವತ್ತಾರನೆಯ ಅಧ್ಯಾಯದ ಸಾರಾಂಶವು

ಮಹಾಲಕ್ಷ್ಮಿಯು ಸಮುದ್ರದಿಂದ ವ್ಯಕ್ತಳಾಗಿ 'ಸಿಂಧುಕನ್ಯೆ' ಎನಿಸಿಕೊಳ್ಳಲು ಕಾರಣವೇನೆಂದು ಕೇಳಿದ ನಾರದರ ಪ್ರಶ್ನೆಗೆ ನಾರಾಯಣ ಮಹರ್ಷಿಗಳು ಇಂತು ಉತ್ತರವಿತ್ತರು.

ಪೂರ್ವದಲ್ಲಿ ದೂರ್ವಾಸಮಹರ್ಷಿಗಳು ಕೊಟ್ಟ ಈಶ್ವರನ ಪ್ರಸಾದವನ್ನು ದೇವೇಂದ್ರನು ಅಸಡ್ಡೆಮಾಡಿದುದರ ಫಲವಾಗಿ ಅವರ ಶಾಪದಿಂದ ದೇವದಾನವರ ಸಂಪತ್ತೆಲ್ಲ ಮಹಾ ಸಮುದ್ರದಲ್ಲಿ ಮುಳುಗಿ ಹೋದುದರಿಂದ ಸಂಪಲ್ಲಕ್ಷ್ಮಿಯು ವೈಕುಂಠಕ್ಕೆ ಹೋಗಿ ಮಹಾ ಲಕ್ಷ್ಮಿಯಲ್ಲೇ ಐಕ್ಯಳಾದಳು. ಆಗ ದೇವತೆಗಳೆಲ್ಲ ಶ್ರೀಮನ್ನಾರಾಯಣನನ್ನು ಸ್ತುತಿಸಿ, ಅವನ ಅನುಗ್ರಹದಿಂದ ಕ್ಷೀರಸಮುದ್ರವನ್ನು ಕಡೆದು ಮಹಾಲಕ್ಷ್ಮಿಯ ಅಂಶದಿಂದ ಅವತರಿಸಿದ ಸಿಂಧುಕನ್ಯೆಯನ್ನು ಪಡೆದರು. ಇತ್ತ ವಿಷ್ಣುಭಕ್ತರಾದ ದೂರ್ವಾಸರು ಧನಮದದಿಂದುಂಟಾಗುವ ಅನರ್ಥಗಳನ್ನೂ ಕಾರ್ಯಾಕಾರ್ಯವಿವೇಚನೆಯನ್ನೂ ದೇವೇಂದ್ರನಿಗೆ ಬೋಧಿಸಿದರು. ಅಲ್ಲದೆ ಶಾಸ್ತ್ರವು ತಿಳಿಸುವ ಪ್ರವೃತ್ತಿ ನಿವೃತ್ತಿ ಮಾರ್ಗಗಳಲ್ಲಿ ರಜೋಗುಣ ಮತ್ತು ತಮೋಗುಣ ಪ್ರಧಾನರಾದ ಜೀವಿಗಳು ಮೊದಲು ಪ್ರವೃತ್ತಿಮಾರ್ಗದಲ್ಲಿ ತೊಡಗಿ, ಜನನ ಮರಣಾತ್ಮಕವಾದ ಸಂಸಾರದ ಕೋಟಲೆಗಳನ್ನನುಭವಿಸಿ ಸತ್ಸಂಗದಿಂದ ಕ್ರಮವಾಗಿ ಸತ್ವಗುಣೋದ್ರೇಕವನ್ನು ಹೊಂದಿ, ನಿವೃತ್ತಿಮಾರ್ಗದಲ್ಲಿ ತೊಡಗುವವರಾದುದರಿಂದ ವಿಷ್ಣುಭಕ್ತರ ಸಹವಾಸವೇ ಮುಕ್ತಿಮಾರ್ಗಕ್ಕೆ ಸಾಧನವೆಂದು ಪ್ರತಿಪಾದಿಸಿದರು. ಹುಟ್ಟಿದಾರಭ್ಯ ಜಂತುವಿಗೆ ಒದಗುವ ದುಃಖಪರಂಪರೆಗಳನ್ನೂ ಅವುಗಳ ನಿವಾರಣೋಪಾಯವನ್ನೂ ದೂರ್ವಾಸರ ಮುಖದಿಂದ ಕೇಳಿದ ದೇವೇಂದ್ರನು ತನ್ನ ಅಕಾರ್ಯಕ್ಕೆ ಪಶ್ಚಾತ್ತಾಪಪಟ್ಟು ತನಗೆ ಆತ್ಮಜ್ಞಾನವನ್ನು ಬೋಧಿಸಬೇಕೆಂದು ಬೇಡಿದನು. ಆಗ ದೂರ್ವಾಸಮಹರ್ಷಿಗಳು ಅವನಿಗೆ ಆತ್ಮತತ್ವವನ್ನು ಉಪದೇಶಿಸಿ ಕಳೆದುಹೋದ ಐಶ್ವರ್ಯವನ್ನು ಪುನಃ ಅನುಗ್ರಹಿಸಿ ಹೊರಟುಹೋದರು.

|| ಓಂ ||

--|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಸಪ್ತತ್ರಿಂಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಹರೇರ್ಗುಣಂ ಸಮಾಕರ್ಣ್ಯ ಜ್ಞಾನಂ ಪ್ರಾಪ್ಯ ಪುರಂದರಃ |
ಕಿಂ ಚಕಾರ ಗೃಹಂ ಗತ್ವಾ ತನ್ಮೇ ವ್ಯಾಖ್ಯಾತುಮರ್ಹಸಿ || ೧ ||

|| ನಾರಾಯಣ ಉವಾಚ ||

ಶ್ರೀಕೃಷ್ಣಸ್ಯ ಗುಣಂ ಶ್ರುತ್ವಾ ವೀತರಾಗೋ ಬಭೂವ ಸಃ |
ವೈರಾಗ್ಯಂ ವರ್ಧಯಾಮಾಸ ತದಾ ಬ್ರಹ್ಮನ್ದಿನೇ ದಿನೇ || ೨ ||

ಮುನಿಸ್ಥಾನಾದ್ಗೃಹಂ ಗತ್ವಾ ಸ ದದರ್ಶಾಮರಾವತೀಂ |
ದೈತ್ಯೈರಸುರಸಂಘೈಶ್ಚ ಸಮಾಕೀರ್ಣಾಂ ಭಯಾಕುಲಾಂ || ೩ ||

ಮೂವತ್ತೇಳನೆಯ ಅಧ್ಯಾಯವು

೧. ನಾರದ:—ಶ್ರೀಹರಿಯ ಗುಣಗಾನವನ್ನು ಕೇಳಿ ದೇವೇಂದ್ರನು ದಿವ್ಯ ಜ್ಞಾನವನ್ನು ಪಡೆದು ಮನೆಗೆ ಹಿಂತಿರುಗಿ ಹೋಗಿ ಮುಂದೇನು ಮಾಡಿದನೆಂಬುದನ್ನು ನನಗೆ ವಿಸ್ತರಿಸಿ ಹೇಳಬೇಕು.

೨. ನಾರಾಯಣ :—ದೇವೇಂದ್ರನು ಶ್ರೀಕೃಷ್ಣಪರಮಾತ್ಮನ ಗುಣಗಳನ್ನು ಕೇಳಿ ರಾಗದ್ವೇಷಾದಿಗಳನ್ನು ಬಿಟ್ಟು ದಿನದಿನವೂ ವೈರಾಗ್ಯಬುದ್ಧಿಯನ್ನು ಪಡೆಯುತ್ತ ಬಂದನು.

೩. ದೂರ್ವಾಸಋಷಿಯನ್ನು ಬಿಟ್ಟು ಅಮರಾವತಿಗೆ ಹಿಂತಿರುಗಿ ಹೋಗಿ ದೈತ್ಯದಾನವರಿಂದ ಆ ಪಟ್ಟಣವು ಸಂಕುಲವಾಗಿರುವುದನ್ನು ನೋಡಿದನು

ವಿಷಣ್ಣಬಾಂಧವಾಂಶ್ಚೈವ ಬಂಧುಹೀನಾಂ ಚ ಕುತ್ರಚಿತ್ ।
ಪಿತೃಮಾತೃಕಲತ್ರಾದಿವಿಹೀನಾಮತಿಚಂಚಲಾಂ ॥ ೪ ॥

ಶತ್ರುಗ್ರಸ್ತಾಂ ಚ ದೃಷ್ಟ್ವಾ ತಾಮುಗಮದ್ವಾಕ್ಪತಿಂ ಪ್ರತಿ ।
ಶಕ್ರೋ ಮಂದಾಕಿನೀತೀರೇ ದದರ್ಶ ಗುರುಮೀಶ್ವರಂ ॥ ೫ ॥

ಧ್ಯಾಯಮಾನಂ ಪರಂ ಬ್ರಹ್ಮ ಗಂಗಾತೋಯೇ ಸ್ಥಿತಂ ಪರಂ ।
ಸೂರ್ಯಾಭಿಸಂಮುಖಂ ಪೂರ್ವಮುಖಂ ವೈ ವಿಶ್ವತೋಮುಖಂ ॥ ೬ ॥

ಸಾಶ್ರುನೇತ್ರಂ ಪುಲಕಿತಂ ಪರಮಾನಂದಸಂಯುತಂ ।
ವರಿಷ್ಠಂ ಚ ಗರಿಷ್ಠಂ ಚ ಧರ್ಮಿಷ್ಠಂ ಚೇಷ್ಟಸೇವಿನಂ ॥ ೭ ॥

ಶ್ರೇಷ್ಠಂ ಚ ಬಂಧುವರ್ಗಾಣಾಮತಿಶ್ರೇಷ್ಠಂ ಚ ಮಾನಿನಾಂ ।
ಜ್ಯೇಷ್ಠಂ ಚ ಬಂಧುವರ್ಗಾಣಾಂ ನೇಷ್ಟಂ ಚ ಸುರವೈರಿಣಾಂ ॥ ೮ ॥

---

೪. ಕೆಲವರ ಬಂಧುಗಳು ದುಃಖಿತರಾಗಿಯೂ, ಕೆಲವರು ಬಂಧುಹೀನರಾಗಿಯೂ, ಕೆಲವರು ತಂದೆ, ತಾಯಿ ಮತ್ತು ಹೆಂಡತಿಯನ್ನು ಕಳೆದುಕೊಂಡವರಾಗಿಯೂ ಗೋಳಾಡುತ್ತಿದ್ದರು.

೫. ಈ ರೀತಿಯಾಗಿ ಅಮರಾವತಿಯು ಶತ್ರುಗಳಿಗೆ ವಶವಾಗಿರುವುದನ್ನು ನೋಡಿ ಇಂದ್ರನು ಬೃಹಸ್ಪತಿಯ ಸಮೀಪಕ್ಕೆ ಹೋದನು. ದೇವಗಂಗಾನದಿಯ ದಡದಲ್ಲಿ ನಿಂತು ತನ್ನ ಗುರುವಾದ ಬೃಹಸ್ಪತಿಯನ್ನು ನೋಡಿದನು.

೬–೭. ದಿವ್ಯಜ್ಞಾನದಿಂದ ವಿಶ್ವತೋಮುಖನಾದ ಆ ಗುರುವು ಪೂರ್ವದಿಕ್ಕಿಗೆ ತಿರುಗಿ ಸೂರ್ಯಾಭಿಮುಖನಾಗಿ, ಪರಮಾನಂದದಿಂದಲೂ, ಆನಂದಾಶ್ರುಗಳಿಂದ ಭರಿತವಾದ ನೇತ್ರದಿಂದಲೂ, ರೋಮಾಂಚಿತವಾದ ಶರೀರದಿಂದಲೂ, ಕೂಡಿ ಧ್ಯಾನಪರವಶನಾಗಿದ್ದನು.

೮–೯. ಸಕಲರಿಗೂ ವರಿಷ್ಠನೂ, ಗರಿಷ್ಠನೂ, ಧರ್ಮಿಷ್ಠನೂ, ತನಗಿಷ್ಟವಾದ ಪರಬ್ರಹ್ಮವನ್ನು ಸೇವಿಸುವವನೂ, ಇಂದ್ರನ ಬಂಧುವರ್ಗದಲ್ಲಿ ಶ್ರೇಷ್ಠನೂ, ಮತ್ತು ಜ್ಯೇಷ್ಠನೂ, ಮಾನಿಗಳಲ್ಲಿ ಅತಿಶ್ರೇಷ್ಠನೂ, ಸುರವೈರಿಗಳಿಗೆ ಅನಿಷ್ಟನೂ ಆದ

ದೃಷ್ಟ್ವಾ ಗುರುಂ ಜಪಂತಂ ಚ ತತ್ರ ತಸ್ಥೌ ಸುರೇಶ್ವರಃ ।
ಪ್ರಹರಾಂತೇ ಗುರುಂ ದೃಷ್ಟ್ವಾ ಚೋತ್ಥಿತಂ ಪ್ರಣನಾಮ ಸಃ ॥ ೯ ॥

ಪ್ರಣಮ್ಯ ಚರಣಾಂಭೋಜೇ ರುರೋದೋಚ್ಚೈರ್ಮುರ್ಹುಮುರ್ಹುಃ ।
ವೃತ್ತಾಂತಂ ಕಥಯಾಮಾಸ ಬ್ರಹ್ಮಶಾಪಾದಿಕಂ ತಥಾ ॥ ೧೦ ॥

ಪುನರ್ವರೋ ಮಯಾ ಲಬ್ಧೋ ಜ್ಞಾನಿನಾಮಪಿ ದುರ್ಲಭಾಂ ।
ವೈರಿಗ್ರಸ್ತಾಂ ಸ್ವೀಯಪುರೀಂ ಕ್ರಮೇಣೈವ ಸುರೇಶ್ವರಃ ॥ ೧೧ ॥

ಶಿಷ್ಯಸ್ಯ ವಚನಂ ಶ್ರುತ್ವಾ ಸತಾಂ ಬುದ್ಧಿಮತಾಂ ವರಃ ।
ಬೃಹಸ್ಪತಿರುವಾಚೇದಂ ಕೋಪರಕ್ತಾಂತಲೋಚನಃ ॥ ೧೨ ॥

॥ ಬೃಹಸ್ಪತಿರುವಾಚ ॥

ಶ್ರುತಂ ಸರ್ವಂ ಸುರಶ್ರೇಷ್ಠ ಮಾ ರೋದೀರ್ವಚನಂ ಶೃಣು ।
ನ ಕಾತರೋ ಹಿ ನೀತಿಜ್ಞೋ ವಿಪತ್ತೌ ಸ್ಯಾತ್ಕದಾಚನ ॥ ೧೩ ॥

ಆ ಬೃಹಸ್ಪತಿಯು ಜಪಾಸಕ್ತನಾಗಿರುವುದನ್ನು ನೋಡಿ ದೇವೇಂದ್ರನು ಅಲ್ಲಿಯೇ ನಿಂತನು. ಒಂದು ಘಳಿಗೆ ಕಳೆದ ಮೇಲೆ ಗುರುವು ಆಸನದಿಂದ ಮೇಲಕ್ಕೆದ್ದುದನ್ನು ನೋಡಿ ನಮಸ್ಕರಿಸಿದನು.

೧೦. ಗುರುವಿನ ಚರಣಕಮಲಗಳಿಗೆ ಸಾಷ್ಟಾಂಗವೆರಗಿ ಗೋಳಾಡುತ್ತ ತನಗೆ ಒದಗಿದ ದೂರ್ವಾಸರ ಶಾಪವೇ ಮುಂತಾದ ಸಮಾಚಾರಗಳನ್ನು ಅರಿಕೆ ಮಾಡಿಕೊಂಡನು.

೧೧. ಅಲ್ಲದೆ 'ಶತ್ರುಗಳ ಕೈಗೆ ಸಿಕ್ಕಿರುವ ನಿನ್ನ ಸಂಪದ್ಯುಕ್ತವಾದ ಪಟ್ಟಣವು ಮತ್ತೆ ನಿನಗೇ ದೊರೆಯುವುದು' ಎಂದು ಜ್ಞಾನಿಗಳಿಗೂ ದುರ್ಲಭವಾದ ವರವನ್ನು ದೂರ್ವಾಸರು ತನಗೆ ಕೊಟ್ಟರೆಂದು ಬಿನ್ನವಿಸಿದನು.

೧೨. ಸತ್ಪುರುಷರಿಗೂ, ಬುದ್ಧಿವಂತರಿಗೂ ಶ್ರೇಷ್ಠನಾದ ಬೃಹಸ್ಪತಿಯು ಶಿಷ್ಯನ ಮಾತುಗಳನ್ನು ಕೇಳಿ, ಅವನ ಅವಿವೇಕಕ್ಕೆ ಕುಪಿತನಾಗಿ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಈ ಮಾತುಗಳನ್ನು ಹೇಳಿದನು.

೧೩. ಬೃಹಸ್ಪತಿ :—ಎಲೈ ಸುರಶ್ರೇಷ್ಠನಾದ ದೇವೇಂದ್ರನೇ, ಎಲ್ಲ ಸಮಾಚಾರವೂ ಗೊತ್ತಾಯಿತು. ಚಿಂತಿಸಬೇಡ. ನನ್ನ ಮಾತನ್ನು ಕೇಳು. ನೀತಿಯನ್ನು ಬಲ್ಲವನು ವಿಪತ್ಕಾಲದಲ್ಲಿ ಎಂದಿಗೂ ಕಾತರನಾಗಬಾರದು.

ಸಂಪತ್ತಿರ್ವಾ ವಿಪತ್ತಿರ್ವಾ ನಶ್ವರಾ ಸ್ವಪ್ನರೂಪಿಣೀ ।
ಪೂರ್ವಸ್ವಕರ್ಮಾಯತ್ತಾ ಚ ಸ್ವಯಂ ಕರ್ತಾ ತಯೋರಪಿ ॥ ೧೪ ॥

ಸರ್ವೇಷಾಂ ಚ ಭ್ರಮತ್ಯೇವ ಶಶ್ವಜ್ಜನ್ಮನಿ ಜನ್ಮನಿ ।
ಚಕ್ರನೇಮಿಕ್ರಮೇಣೈವ ತತ್ರ ಕಾ ಪರಿದೇವನಾ ॥ ೧೫ ॥

ಭುಂಕ್ತೇ ಹಿ ಸ್ವಕೃತಂ ಕರ್ಮ ಸರ್ವತ್ರಾಪಿ ಚ ಭಾರತೇ ।
ಶುಭಾಶುಭಂ ಚ ಯತ್ಕಿಂಚಿತ್ಸ್ವಕರ್ಮಫಲಭುಕ್ಪುಮಾನ್ ॥ ೧೬ ॥

ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ।
ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ॥ ೧೭ ॥

ಇತ್ಯೇವಮುಕ್ತಂ ವೇದೇ ಚ ಕೃಷ್ಣೇನ ಪರಮಾತ್ಮನಾ ।
ಸಾಮ್ನಿ ಕೌಥುಮಶಾಖಾಯಾಂ ಸಂಬೋಧ್ಯ ಸ್ವಕುಲೋದ್ಭವಂ ॥ ೧೮ ॥

---

೧೪. ಸಂಪತ್ತಾಗಲೀ, ವಿಪತ್ತಾಗಲೀ, ಸ್ವಪ್ನದಂತೆ ನಶ್ವರವಾದುದು. ಅವು ತನ್ನ ಪೂರ್ವಕರ್ಮಾಧೀನವಾದುದರಿಂದ ಅವುಗಳನ್ನು ಒದಗಿಸಿಕೊಳ್ಳುವವನು ತಾನೇ ಆಗುವನು.

೧೫. ಆ ಕರ್ಮವು ಪ್ರತಿಜನ್ಮದಲ್ಲಿಯೂ ಚಕ್ರಧಾರೆಯಂತೆ ಸರ್ವರಿಗೂ ಫಲಕೊಡುವುದಾದ್ದರಿಂದ ಅದಕ್ಕಾಗಿ ದುಃಖಿಸುವುದು ವ್ಯರ್ಥವಾದುದು.

೧೬. ಮನುಷ್ಯನು ಪೂರ್ವಜನ್ಮದ ಕರ್ಮಫಲವನ್ನನುಭವಿಸಿಯೇ ತೀರಬೇಕಾದುದರಿಂದ ಭರತಖಂಡದಲ್ಲಿ ಎಲ್ಲಿದ್ದರೂ, ತನ್ನ ಕರ್ಮದ ಶುಭಾಶುಭ ಫಲಗಳನ್ನು ಅನುಭವಿಸಿಯೇ ತೀರುವನು.

೧೭. ಕೋಟಿಕಲ್ಪಗಳು ಕಳೆದರೂ, ತನ್ನ ಕರ್ಮದ ಫಲವನ್ನು ತಾನು ಅನುಭವಿಸದೆ ಸವೆಯುವಂತಿಲ್ಲ. ಆದುದರಿಂದ ತಾನು ಮಾಡಿದ ಶುಭಾಶುಭಕರ್ಮಗಳ ಫಲವನ್ನು ಅವಶ್ಯವಾಗಿಯೂ ಅನುಭವಿಸಬೇಕು.

೧೮. ಈ ರೀತಿಯಾಗಿ ಸಾಮವೇದದ ಕೌಥುಮ ಶಾಖೆಯಲ್ಲಿ ತನ್ನ ಕುಲವಲ್ಲಿ ಹುಟ್ಟಿದ ಕೌಥುಮನನ್ನು ಕುರಿತು ಶ್ರೀಕೃಷ್ಣಪರಮಾತ್ಮನು ಹೇಳಿರುವನು.

ಜನ್ಮಭೋಗಾವಶೇಷೇ ಚ ಸರ್ವೇಷಾಂ ಕೃತಕರ್ಮಣಾಂ ।
ಅನುರೂಪಂ ಚ ತೇಷಾಂ ವೈ ಭಾರತೇಽನ್ಯತ್ರ ಚೈವ ಹಿ ॥ ೧೯ ॥

ಕರ್ಮಣಾ ಬ್ರಹ್ಮಶಾಪಂ ಚ ಕರ್ಮಣಾ ಚ ಶುಭಾಶಿಷಂ ।
ಕರ್ಮಣಾ ಚ ಮಹಾಲಕ್ಷ್ಮೀಂ ಲಭೇದ್ದೈನ್ಯಂ ಚ ಕರ್ಮಣಾ ॥ ೨೦ ॥

ಕೋಟಿಜನ್ಮಾರ್ಜಿತಂ ಕರ್ಮ ಜೀವಿನಾಮನುಗಚ್ಛತಿ ।
ನ ಹಿ ತ್ಯಜೇದ್ವಿನಾಭೋಗಾತ್ತಂ ಛಾಯೇವ ಪುರಂದರ ॥ ೨೧ ॥

ಕಾಲಭೇದೇ ದೇಶಭೇದೇ ಪಾತ್ರಭೇದೇ ಚ ಕರ್ಮಣಾಂ ।
ನ್ಯೂನತಾಧಿಕತಾ ವಾಪಿ ಭವೇದೇವ ಹಿ ಕರ್ಮಣಾಂ ॥ ೨೨ ॥

ವಸ್ತುದಾನೇ ಚ ವಸ್ತೂನಾಂ ಸಮಂ ಪುಣ್ಯಂ ಸಮೇ ದಿನೇ ।
ದಿನಭೇದೇ ಕೋಟಿಗುಣಮಸಂಖ್ಯಂ ವಾಧಿಕಂ ತತಃ ॥ ೨೩ ॥

---

೧೯. ಕರ್ಮಾನುಗುಣವಾಗಿ ಭಾರತದಲ್ಲಾಗಲೀ, ಬೇರೆ ಕಡೆಯಲ್ಲಾಗಲೀ, ಮಾಡಿದ ಕರ್ಮಕ್ಕೆ ತಕ್ಕ ಜನ್ಮವೂ ಫಲವೂ ಲಭಿಸುವುದು.

೨೦. ಬ್ರಹ್ಮಶಾಪವನ್ನಾಗಲೀ, ಶುಭಾಶೀರ್ವಾದವನ್ನಾಗಲೀ, ವಿಪುಲ ಸಂಪತ್ತನ್ನಾಗಲೀ, ಬಡತನವನ್ನಾಗಲೀ, ಕರ್ಮಾನುಗುಣವಾಗಿಯೇ ಹೊಂದುವನು.

೨೧. ಎಲೈ ದೇವೇಂದ್ರನೇ, ಜೀವಿಗಳ ಕರ್ಮವು ಕೋಟಿಜನ್ಮಗಳದ್ದಾದರೂ ನೆರಳಿನಂತೆ ಹಿಂಬಾಲಿಸಿ ಬರುವುದು. ಅದನ್ನು ಅನುಭವಿಸಿದ ಹೊರತೂ ಅದೆಂದಿಗೂ ಬಿಡುವಂತಿಲ್ಲ.

೨೨. ಕರ್ಮಗಳ ಕಾಲ, ದೇಶ ಮತ್ತು ಪಾತ್ರಭೇದಗಳಿಂದ ಕರ್ಮಗಳ ಆಧಿಕ್ಯವಾಗಲೀ, ನ್ಯೂನತೆಯಾಗಲೀ, ಉಂಟಾಗುವುದು.

೨೩. ಜನ್ಮಾಂತರದಲ್ಲಿ ಸಾಮಾನ್ಯ ದಿವಸಗಳಲ್ಲಿ ವಸ್ತುದಾನ ಮಾಡಿದರೆ ಆ ವಸ್ತುವಿಗೆ ಸಮನಾದ ಪುಣ್ಯವು ಸಾಮಾನ್ಯವಾಗಿ ಲಭಿಸುವುದು. ವಿಶೇಷ ದಿನದಲ್ಲಿ ದಾನವಾಡಿದರೆ ಅದಕ್ಕಿಂತ ಕೋಟಿಗುಣಪುಣ್ಯವೂ ದೊರೆಯುವುದು.

ಸಮದೇಶೇ ಚ ವಸ್ತೂನಾಂ ದಾನೇ ಪುಣ್ಯಂ ಸಮಂ ವೃಷನ್ ।
ದೇಶಭೇದೇ ಕೋಟಿಗುಣಮಸಂಖ್ಯಂ ವಾಧಿಕಂ ತತಃ ॥ ೨೪ ॥

ಸಮೇ ಪಾತ್ರೇ ಸಮಂ ಪುಣ್ಯಂ ವಸ್ತೂನಾಂ ಕರ್ತುರೇವ ಚ ।
ಪಾತ್ರಭೇದೇ ಶತಗುಣಮಸಂಖ್ಯಂ ವಾ ತತೋಽಧಿಕಂ ॥ ೨೫ ॥

ಯಥಾ ಫಲಂತಿ ಸಸ್ಯಾನಿ ನ್ಯೂನಾನ್ಯಪ್ಯಧಿಕಾನಿ ಚ ।
ಕರ್ಷಕಾಣಾಂ ಕ್ಷೇತ್ರಭೇದೇ ಪಾತ್ರಭೇದೇ ಫಲಂ ತಥಾ ॥ ೨೬ ॥

ಸಾಮಾನ್ಯದಿವಸೇ ವಿಪ್ರೇ ದಾನಂ ಸಮಫಲಂ ಭವೇತ್ ।
ಅಮಾಯಾಂ ರವಿಸಂಕ್ರಾಂತ್ಯಾಂ ಫಲಂ ಶತಗುಣಂ ಭವೇತ್ ।
ಚಾತುರ್ಮಾಸ್ಯಾಂ ಪೌರ್ಣಮಾಸ್ಯಾಮನಂತಫಲಮೇವ ಚ ॥ ೨೭ ॥

ಗ್ರಹಣೇ ಶಶಿನಃ ಕೋಟಿಗುಣಂ ಚ ಫಲಮೇವ ಚ ।
ಸೂರ್ಯಸ್ಯ ಗ್ರಹಣೇ ಚಾಪಿ ತತೋ ದಶಗುಣಂ ಫಲಂ ॥ ೨೮ ॥

---

೨೪. ಮಹೇಂದ್ರನೇ, ವಸ್ತುಗಳನ್ನು ಯಾವ ದೇಶದಲ್ಲಿ ದಾನಮಾಡುವರೋ ಆ ದೇಶದಲ್ಲಿಯೇ ಸಮಾನವಾದ ಫಲವನ್ನು ಪಡೆಯುವರು. ಪುಣ್ಯಕ್ಷೇತ್ರಾದಿಗಳಲ್ಲಿ ದಾನಮಾಡಿದರೆ ಕೋಟಿಗುಣಪುಣ್ಯವು ಲಭಿಸುವುದು.

೨೫. ವಸ್ತುಗಳನ್ನು ಯೋಗ್ಯಪಾತ್ರದಲ್ಲಿ ದಾನಮಾಡುವುದರಿಂದ ಪಾತ್ರಾನುಗುಣವಾದ ಫಲವು ಲಭಿಸುವುದು. ಪಾತ್ರವಿಶೇಷದಲ್ಲಿ ದಾನ ಮಾಡಿದರೆ ನೂರರಷ್ಟು ಹೆಚ್ಚಾಗಿ ಫಲ ಲಭಿಸುವುದು.

೨೬. ಕೃಷಿ ಮತ್ತು ಕ್ಷೇತ್ರಕ್ಕೆ ಅನುಗುಣವಾಗಿ ಸಸ್ಯಗಳು ನ್ಯೂನವಾಗಲೀ ಅಧಿಕವಾಗಲೀ ಫಲಿಸುವಂತೆ ಪಾತ್ರಾನುಗುಣವಾಗಿ ಫಲವು ಲಭಿಸುವುದು.

೨೭. ಸಾಮಾನ್ಯ ದಿವಸದಲ್ಲಿ ಬ್ರಾಹ್ಮಣರಿಗೆ ದಾನಮಾಡಿದರೆ ಸಾಮಾನ್ಯ ಫಲವು ಲಭಿಸುವುದು. ಅಮಾವಾಸ್ಯೆ ದಿವಸದಲ್ಲಾಗಲೀ, ಸಂಕ್ರಮಣದ ದಿವಸದಲ್ಲಾಗಲೀ, ದಾನಮಾಡುವುದರಿಂದ ನೂರರಷ್ಟು ಫಲ ಲಭಿಸುವುದು. ಚಾತುರ್ಮಾಸ್ಯದ ಪೂರ್ಣಿಮೆಯಲ್ಲಿ ದಾನಮಾಡುವುದರಿಂದ ಅನಂತ ಫಲವು ಲಭಿಸುವುದು.

೨೮. ಚಂದ್ರಗ್ರಹಣದ ದಿವಸ ದಾನಮಾಡುವುದರಿಂದ ಕೋಟಿಗುಣಫಲವೂ ಸೂರ್ಯಗ್ರಹಣದ ದಿವಸ ದಾನಮಾಡಿದರೆ ಅದಕ್ಕೆ ಹತ್ತರಷ್ಟು ಫಲವೂ ಲಭಿಸುವುದು.

ಅಕ್ಷಯಾಯಾಮಕ್ಷಯಂ ಚಾಪ್ಯಸಂಖ್ಯಫಲಮುಚ್ಯತೇ ।
ಏವಮನ್ಯತ್ರ ಪುಣ್ಯಾಹೇ ಫಲಾಧಿಕ್ಯಂ ಭವೇದಿಹ ॥ ೨೯ ॥

ಯಥಾ ದಾನೇ ತಥಾ ಸ್ನಾನೇ ಜಪೇ ವೈ ಪುಣ್ಯಕರ್ಮಸು ।
ಏವಂ ಸರ್ವತ್ರ ಬೋದ್ಧವ್ಯಂ ನರಾಣಾಂ ಕರ್ಮಣಾಂ ಫಲಂ ॥ ೩೦ ॥

ಸಾಮಾನ್ಯದೇಶೇ ದಾನಂ ಚ ವಿಪ್ರೇ ಸಮಫಲಂ ಭವೇತ್ ।
ತೀರ್ಥೇ ದೇವಗೃಹೇ ಚೈವ ಫಲಂ ಶತಗುಣಂ ಸ್ಮೃತಂ ॥ ೩೧ ॥

ಗಂಗಾಯಾಂ ವೈ ಕೋಟಿಗುಣಂ ಕ್ಷೇತ್ರೇ ನಾರಾಯಣೇಽವ್ಯಯಂ ।
ಕುರುಕ್ಷೇತ್ರೇ ಬದರ್ಯಾಂ ಚ ಕಾಶ್ಯಾಂ ಕೋಟಿಗುಣಂ ತಥಾ ॥ ೩೨ ॥

---

೨೯. ಅಕ್ಷಯತದಿಗೆ ದಿವಸ ದಾನಮಾಡಿದರೆ ಅಕ್ಷಯವಾದ ಅಸಂಖ್ಯಫಲವು ಲಭಿಸುವುದು. ಹೀಗೆ ಇತರ ಪುಣ್ಯದಿವಸಗಳಲ್ಲೂ ಅದಕ್ಕೆ ಅನುಗುಣವಾಗಿ ಅಧಿಕ ಫಲ ಲಾಭವಾಗುವುದು.

೩೦. ದಾನ, ಸ್ನಾನ, ಜಪ ಮುಂತಾದ ಪುಣ್ಯಕರ್ಮಗಳಿಗೆಲ್ಲ ಆಯಾಯ ಕಾಲಾನುಗುಣವಾದ ಫಲವು ದೊರೆಯುವುದು. ಹೀಗೆ ಮನುಜರ ಕರ್ಮಫಲವು ಎಲ್ಲ ಕಡೆಯಲ್ಲೂ ಒಂದೇರೀತಿಯಾಗಿರುವುದು.

೩೧. ಬ್ರಾಹ್ಮಣನಿಗೆ ಸಾಮಾನ್ಯವಾದ ಸ್ಥಳದಲ್ಲಿ ದಾನಮಾಡಿದರೆ ಸಾಮಾನ್ಯ ಫಲವುಂಟಾಗುವುದು. ಪುಣ್ಯತೀರ್ಥದಲ್ಲೂ, ದೇವಸ್ಥಾನಗಳಲ್ಲೂ ದಾನಮಾಡುವುದರಿಂದ ಅದಕ್ಕೆ ನೂರರಷ್ಟು ಫಲ ಸಿಗುವುದು.

೩೨. ಗಂಗಾತೀರದಲ್ಲಿ ದಾನಮಾಡುವುದರಿಂದ ಕೋಟಿಗುಣಪುಣ್ಯವೂ, ನಾರಾಯಣ ಕ್ಷೇತ್ರದಲ್ಲಿ ದಾನಮಾಡಿದರೆ ಅನಂತಪುಣ್ಯವೂ, ಕುರುಕ್ಷೇತ್ರ, ಬದರೀ ಕ್ಷೇತ್ರ ಮತ್ತು ಕಾಶಿಯಲ್ಲಿ ದಾನಮಾಡಿದರೆ ಅದಕ್ಕಿಂತ ಕೋಟಿಗುಣ ಅಧಿಕವಾದ ಪುಣ್ಯವೂ ಲಭಿಸುವುದು.

ಯಥಾ ಚ ವೈ ಕೋಟಿಗುಣಂ ತಥಾ ವೈ ವಿಷ್ಣುಮಂದಿರೇ ।
ಕೇದಾರೇ ವೈ ಲಕ್ಷಗುಣಂ ಹರಿದ್ವಾರೇ ತಥಾ ಫಲಂ ॥ ೩೩ ॥

ಪುಷ್ಕರೇ ಭಾಸ್ಕರಕ್ಷೇತ್ರೇ ದಶಲಕ್ಷಗುಣಂ ಫಲಂ ।
ಏವಂ ಸರ್ವತ್ರ ಬೋದ್ಧವ್ಯಂ ಫಲಾಧಿಕ್ಯಂ ಕ್ರಮೇಣ ಚ ॥ ೩೪ ॥

ಸಾಮಾನ್ಯಬ್ರಾಹ್ಮಣೇ ದಾನಂ ಸಮಮೇವ ಫಲಂ ಲಭೇತ್ ।
ಲಕ್ಷಂ ತ್ರಿಸಂಧ್ಯಂ ಪೂತೇ ಚ ಪಂಡಿತೇ ಚ ಜಿತೇಂದ್ರಿಯೇ ॥ ೩೫ ॥

ವಿಷ್ಣುಮಂತ್ರೋಪಾಸಕೇ ಚ ಬುಧೇ ಕೋಟಿಗುಣಂ ಫಲಂ ।
ಏವಂ ಸರ್ವತ್ರ ಬೋದ್ಧವ್ಯಂ ಫಲಾಧಿಕ್ಯಂ ಗುಣಾಧಿಕೇ ॥ ೩೬ ॥

ಯಥಾ ದಂಡೇನ ಸೂತ್ರೇಣ ಶರಾವೇಣ ಜಲೇನ ಚ ।
ಕುಂಭಂ ನಿರ್ಮಾತಿ ಚಕ್ರೇಣ ಕುಂಭಕಾರೋ ಮೃದಾ ಭುವಿ ॥ ೩೭ ॥

---

೩೩. ವಿಷ್ಣುಕ್ಷೇತ್ರ, ಕೇದಾರಕ್ಷೇತ್ರ ಮತ್ತು ಹರಿದ್ವಾರದಲ್ಲಿ ದಾನಮಾಡುವುದರಿಂದ ಉತ್ತರೋತ್ತರ ಅನಂತಪುಣ್ಯವು ಲಭಿಸುವುದು.

೩೪. ಪುಷ್ಕರ ಮತ್ತು ಭಾಸ್ಕರಕ್ಷೇತ್ರದಲ್ಲಿ ದಾನಮಾಡುವುದರಿಂದ ಹತ್ತು ಲಕ್ಷದಷ್ಟು ಅಧಿಕಫಲ ಲಭಿಸುವುದು. ಈ ರೀತಿಯಾದ ಕ್ರಮದಿಂದ ಆಯಾಯ ಕ್ಷೇತ್ರಾನುಗುಣವಾಗಿ ಫಲವು ಅಧಿಕವಾಗಿ ಲಭಿಸುವುದು.

೩೫. ಸಾಮಾನ್ಯವಾದ ಬ್ರಾಹ್ಮಣನಿಗೆ ದಾನಮಾಡುವುದರಿಂದ ಸಾಮಾನ್ಯ ಫಲವು ಲಭಿಸುವುದು. ತ್ರಿಸಂಧ್ಯಾಚರಣೆಯಿಂದ ಪವಿತ್ರನಾಗಿ ಪಂಡಿತನೂ ಜಿತೇಂದ್ರಿಯನೂ ಆದವನಿಗೆ ದಾನಮಾಡುವುದರಿಂದ ಲಕ್ಷಗುಣ ಅಧಿಕಫಲವುಂಟಾಗುವುದು.

೩೬. ವಿಷ್ಣುಮಂತ್ರೋಪಾಸಕನಾದ ಪಂಡಿತನಿಗೆ ದಾನಮಾಡಿದರೆ, ಕೋಟಿಗುಣಫಲವೂ, ಈ ರೀತಿಯಾಗಿ ಗುಣಾಧಿಕನಿಗೆ ದಾನಮಾಡುವುದರಿಂದ ಫಲಾಧಿಕ್ಯವೂ ದೊರೆಯುವುದು.

೩೭–೩೮. ಕುಂಬಾರನು ದಂಡ, ಸೂತ್ರ, ಶರಾವ, ಮಣ್ಣು ಮತ್ತು ನೀರಿನ ಸಂಯೋಗದಿಂದ ಚಕ್ರವನ್ನು ತಿರುಗಿಸಿ ಗಡಿಗೆಯನ್ನು ಮಾಡುವಂತೆ ಬ್ರಹ್ಮನೂ

ತತ್ರೈವ ಕರ್ಮಸೂತ್ರೇಣ ಫಲಂ ಧಾತಾ ದದಾತಿ ಚ ।
ಯಸ್ಯಾಜ್ಞಯಾ ಸೃಷ್ಟಿವಿಧೌ ತಂ ಚ ನಾರಾಯಣಂ ಭಜ ॥ ೩೮ ॥

ಸ ವಿಧಾತಾ ವಿಧಾತುಶ್ಚ ಪಾತುಃ ಪಾತಾ ಜಗತ್ತ್ರಯೇ ।
ಸ್ರಷ್ಟುಃ ಸ್ರಷ್ಟಾ ಚ ಸಂಹರ್ತುಃ ಸಂಹರ್ತಾ ಕಾಲಕಾಲಕಃ ॥ ೩೯ ॥

ಮಹಾವಿಪತ್ತೌ ಸಂಸಾರೇ ಯಃ ಸ್ಮರೇನ್ಮಧುಸೂದನಂ ।
ವಿಪತ್ತೌ ತಸ್ಯ ಸಂಪತ್ತಿರ್ಭವೇದಿತ್ಯಾಹ ಶಂಕರಃ ॥ ೪೦ ॥

ಇತ್ಯೇವಮುಕ್ತ್ವಾ ಜೀವಶ್ಚ ಸಮಾಲಿಂಗ್ಯ ಸುರೇಶ್ವರಂ ।
ದತ್ವಾ ಶುಭಾಶಿಷಂ ಚೇಷ್ಟಂ ಬೋಧಯಾಮಾಸ ನಾರದ ॥ ೪೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದ ನಾರಾಯಣಸಂವಾದೇ ಬೃಹಸ್ಪತಿಮಹೇಂದ್ರಸಂವಾದೇ
ಮಹಾಲಕ್ಷ್ಮ್ಯುಪಾಖ್ಯಾನೇ ಕರ್ಮಫಲನಿರೂಪಣಂ ನಾಮ
ಸಪ್ತತ್ರಿಂಶತ್ತಮೋಽಧ್ಯಾಯಃ

ಕರ್ಮಸೂತ್ರಾನುಗುಣವಾಗಿ ಜೀವಿಗೆ ಫಲವನ್ನು ಕೊಡಲು, ನಾರಾಯಣನ ಅಪ್ಪಣೆಯಂತೆ ನಡೆಯಬೇಕಾಗಿರುವುದರಿಂದ ಆ ನಾರಾಯಣನನ್ನು ಭಜಿಸು.

೩೯. ಆ ನಾರಾಯಣನು ಬ್ರಹ್ಮನಿಗೆ ಬ್ರಹ್ಮನಾಗಿಯೂ, ಜಗತ್ಪಾಲಕನಿಗೆ ಪಾಲಕನಾಗಿಯೂ, ಸ್ರಷ್ಟೃವಿಗೆ ಸ್ರಷ್ಟೃವಾಗಿಯೂ. ಸಂಹರ್ತೃವಿಗೆ ಸಂಹಾರಕನಾಗಿಯೂ ಇರುವುದರಿಂದ ಅವನನ್ನು ಭಜಿಸು.

೪೦. ಮಹಾವಿಪತ್ಪೂರ್ಣವಾದ ಸಂಸಾರದಲ್ಲಿ ಮಧುಸೂದನನನ್ನು ಸ್ಮರಿಸುವವನು ವಿಪತ್ತನ್ನು ಪರಿಹರಿಸಿಕೊಂಡು ಸಂಪತ್ತನ್ನು ಪಡೆಯುವನೆಂದು ಶಂಕರನು ಹೇಳಿರುವನು.

೪೧. ನಾರದ ಮಹರ್ಷಿಯೇ, ಬೃಹಸ್ಪತ್ಯಾಚಾರ್ಯನು ದೇವೇಂದ್ರನಿಗೆ ಇಂತು ಉಪದೇಶಿಸಿ ಅವನನ್ನು ಆಲಂಗಿಸಿಕೊಂಡು ಅವನಿಗೆ ಇಷ್ಟವಾದುದನ್ನು ಉಪದೇಶಿಸಿ ಕಳುಹಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿ ಖಂಡದಲ್ಲಿ ಮಹಾಲಕ್ಷ್ಮ್ಯುಪಾಖ್ಯಾನದಲ್ಲಿ ಬೃಹಸ್ಪತಿ ಮಹೇಂದ್ರರ ಸಂವಾದರೂಪವಾದ ಕರ್ಮಫಲ ನಿರೂಪಣವೆಂಬ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

ಮೂವತ್ತೇಳನೆಯ ಅಧ್ಯಾಯದ ಸಾರಾಂಶವು

ದೂರ್ವಾಸರ ಶಾಪದಿಂದ ವಿಮುಕ್ತನಾದ ದೇವೇಂದ್ರನು ತನ್ನ ರಾಜಧಾನಿಗೆ ಹಿಂತಿರುಗಿ ಬಂದು, ಅದು ಶತ್ರುಗಳ ಕೈವಶವಾಗಿರುವುದನ್ನು ಕಂಡು, ದೇವಗಂಗೆಯ ತೀರದಲ್ಲಿ ಧ್ಯಾನಾಸಕ್ತನಾಗಿರುವ ಗುರುವಾದ ಬೃಹಸ್ಪತ್ಯಾಚಾರ್ಯನ ಸಮೀಪಕ್ಕೆ ಹೋಗಿ, ಅವನ ಚರಣಕಮಲಗಳಿಗೆರಗಿ, ನಡೆದ ಸಮಾಚಾರವನ್ನೆಲ್ಲ ವಿಜ್ಞಾಪಿಸಿ ದನು. ಕೂಡಲೇ ಬೃಹಸ್ಪತಿಯು ಅವನಿಗೆ ಧೈರ್ಯಹೇಳಿ, 'ನಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ' ಎಂದರೆ ಜನ್ಮಾಂತರದಲ್ಲಿ ತಾನು ಮಾಡಿದ ಕರ್ಮದ ಫಲವನ್ನು ಅನುಭವಿಸಿದ ಹೊರತು ಅದು ಸವೆಯುವುದಿಲ್ಲ. ಕಾಲದೇಶಾನುಗುಣ ವಾಗಿ ತಾನು ಮಾಡಿದ ಶುಭಾಶುಭ ಕರ್ಮಗಳು ಕಾಲವರಿತು ತಕ್ಕ ಫಲವನ್ನು ತನಗೆ ಕೊಡುವುವು. ಸೃಷ್ಟಿಸ್ಥಿತಿಲಯಕ್ಕೆ ಕಾರಣರಾದ ಬ್ರಹ್ಮ ವಿಷ್ಣು ಮಹೇಶ್ವರರೂ ಕರ್ಮಕ್ಕೆ ಅಧೀನರಾಗಿ ಪರಮಾತ್ಮನ ಪ್ರೇರಣೆಯಂತೆ ವರ್ತಿಸುವರು. ಆದಕಾರಣ ಕರ್ಮಾತೀತನಾದ ಶ್ರೀಹರಿಯನ್ನು ಭಜಿಸು' ಎಂದು ಉಪದೇಶಿಸಿದನು.

|| ೩೦ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಅಷ್ಟಾತ್ರಿಂಶತ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಹರಿಂ ಧ್ಯಾತ್ವಾ ಹರಿರ್ಬ್ರಹ್ಮನ್ ಜಗಾಮ ಬ್ರಹ್ಮಣಃ ಸಭಾಂ ।
ಬೃಹಸ್ಪತಿಂ ಪುರಸ್ಕೃತ್ಯ ಸರ್ವೈಃ ಸುರಗಣೈಃ ಸಹ || ೧ ||

ಶೀಘ್ರಂ ಗತ್ವಾ ಬ್ರಹ್ಮಲೋಕಂ ದೃಷ್ಟ್ವಾ ಚ ಕಮಲೋದ್ಭವಂ ।
ಪ್ರಣೇಮುರ್ದೇವತಾಃ ಸರ್ವೇ ಗುರುಣಾ ಸಹ ನಾರದ || ೨ ||

ಮೂವತ್ತೆಂಟನೆಯ ಅಧ್ಯಾಯವು

೧. ನಾರಾಯಣ:—ಶ್ರೀಹರಿಯನ್ನು ಧ್ಯಾನಿಸುತ್ತ ದೇವೇಂದ್ರನು ಬ್ರಹ್ಮನ ಸಭೆಗೆ ಹೋದನು. ಬೃಹಸ್ಪತ್ಯಾಚಾರ್ಯನು ಮುಂದಾಳಾಗಿಯೂ, ಇತರ ದೇವತೆಗಳು ಇಂದ್ರನನ್ನು ಹಿಂಬಾಲಿಸಿಯೂ ಬ್ರಹ್ಮಸಭೆಗೆ ಹೋದರು.

೨. ಎಲೈ ನಾರದನೇ, ಸಕಲ ದೇವತೆಗಳೂ ಜಾಗ್ರತೆ ಬ್ರಹ್ಮಲೋಕಕ್ಕೆ ಹೋಗಿ ಕಮಲೋದ್ಭವನಾದ ಬ್ರಹ್ಮನನ್ನು ಕಂಡು ತಮ್ಮ ಗುರುವಿನೊಡನೆ ಅವನಿಗೆ ವಂದಿಸಿದರು.

ವೃತ್ತಾಂತಂ ಕಥಯಾಮಾಸ ಸುರಾಚಾರ್ಯೋ ವಿಧಿಂ ವಿಭುಂ ।
ಪ್ರಹಸ್ಯೋವಾಚ ತಚ್ಛ್ರುತ್ವಾ ಮಹೇಂದ್ರಂ ಕಮಲೋದ್ಭವಃ ॥ ೩ ॥

॥ ಬ್ರಹ್ಮೋವಾಚ ॥

ವತ್ಸ ಮದ್ವಂಶಜಾತೋಽಸಿ ಪ್ರಪೌತ್ರೋ ಮೇ ವಿಚಕ್ಷಣಃ ।
ಬೃಹಸ್ಪತೇಶ್ಚ ಶಿಷ್ಯಸ್ತ್ವಂ ಸುರಾಣಾಮಧಿಪಃ ಸ್ವಯಂ ॥ ೪ ॥

ಮಾತಾಮಹಸ್ತೇ ದಕ್ಷಶ್ಚ ವಿಷ್ಣುಭಕ್ತಃ ಪ್ರತಾಪವಾನ್ ।
ಕುಲತ್ರಯಂ ಯಚ್ಛುದ್ಧಂ ಚ ಕಥಂ ಸೋಽಹಂಕೃತೋ ಭವೇತ್ ॥ ೫ ॥

ಮಾತಾ ಪತಿವ್ರತಾ ಯಸ್ಯ ಪಿತಾ ಶುದ್ಧೋ ಜಿತೇಂದ್ರಿಯಃ ।
ಮಾತಾಮಹೋ ಮಾತುಲಶ್ಚ ಕಥಂ ಸೋಽಹಂಕೃತೋ ಭವೇತ್ ॥ ೬ ॥

---

೩. ದೇವತೆಗಳ ಆಚಾರ್ಯನಾದ ಬೃಹಸ್ಪತಿಯು ವಿಭುವಾದ ಬ್ರಹ್ಮನನ್ನು ಕುರಿತು ಇಂದ್ರನ ಸಮಾಚಾರವೆಲ್ಲವನ್ನೂ ಹೇಳಲು, ಬ್ರಹ್ಮನು ನಗುತ್ತಾ, ಇಂದ್ರನನ್ನು ಕುರಿತಿಂತೆಂದನು.

೪. ಬ್ರಹ್ಮ:—ವತ್ಸ ಇಂದ್ರನೇ, ನೀನು ನನ್ನ ವಂಶದಲ್ಲೇ ಜನಿಸಿ ನನಗೆ ಮರಿಮಗನೂ, ಕುಶಲಿಯೂ ಆಗಿರುವೆ. ಅಲ್ಲದೆ ದೇವತೆಗಳ ರಾಜನೂ, ಬೃಹಸ್ಪತಿಯ ಶಿಷ್ಯನೂ ಆಗಿರುವೆ.

೫. ನಿನ್ನ ತಾಯಿಯ ತಂದೆಯಾದ ದಕ್ಷಬ್ರಹ್ಮನು ವಿಷ್ಣುಭಕ್ತನೂ ಪ್ರತಾಪಶಾಲಿಯೂ ಆಗಿರುವನು. ತಾಯಿ, ತಂದೆ ಮತ್ತು ಗುರುವಿನ ಮೂರು ವಂಶವೂ ಶುದ್ಧವಾಗಿರುವಾಗ ಆ ವಂಶದಲ್ಲಿ ಹುಟ್ಟಿದವನು ಅಹಂಕಾರಿಯಾಗುವುದೆಂದರೇನು ?

೬. ಯಾರ ತಾಯಿಯು ಪತಿವ್ರತೆಯೋ, ಯಾರ ತಂದೆಯು ಜಿತೇಂದ್ರಿಯನೂ ಮತ್ತು ಪರಿಶುದ್ಧನೂ ಆಗಿರುವನೋ, ಯಾರ ತಾಯಿಯ ತಂದೆಯೂ ಸೋದರಮಾವನೂ ಶುದ್ಧರೋ ಅವನು ಅಹಂಕಾರಿಯಾಗುವುದೆಂತು ?

ಜನಃ ಪೈತೃಕದೋಷೇಣ ದೋಷಾನ್ಮಾತಾಮಹಸ್ಯ ಚ ।
ಗುರೋರ್ದೋಷಾನ್ನೀತಿದೋಷೈರ್ಹರಿದ್ವೇಷೀ ಭವೇದ್ಧ್ರುವಂ ॥ ೭ ॥

ಸರ್ವಾಂತರಾತ್ಮಾ ಭಗವಾನ್ಸರ್ವದೇಹೇಷ್ವವಸ್ಥಿತಃ ।
ಯಸ್ಯ ದೇಹಾತ್ಸ ಪ್ರಯಾತಿ ಸ ಶವಸ್ತತ್ಕ್ಷಣಂ ಭವೇತ್ ॥ ೮ ॥

ಮನೋಽಹಮಿಂದ್ರಿಯೇಶಶ್ಚ ಜ್ಞಾನರೂಪೋ ಹಿ ಶಂಕರಃ ।
ಅಸವಃ ಪ್ರಕೃತಿರ್ವಿಷ್ಣುರ್ಬುದ್ಧಿರ್ಭಗವತೀ ಸತೀ ॥ ೯ ॥

ನಿದ್ರಾದಯಃ ಶಕ್ತಯಶ್ಚ ತಾಃ ಸರ್ವಾಃ ಪ್ರಕೃತೇಃ ಕಲಾಃ ।
ಆತ್ಮನಃ ಪ್ರತಿಬಿಂಬಂ ಚ ಜೀವೋ ಭೋಗೀ ಶರೀರಭೃತ್ ॥ ೧೦ ॥

---

೭. ಮನುಜನು ತಂದೆಯ ಅಥವಾ ಮಾತಾಮಹನ ದೋಷದಿಂದಾಗಲೀ, ಗುರುವಿನ ದೋಷದಿಂದಾಗಲೀ, ನೀತಿಬಾಹಿರನಾಗಿ ಶ್ರೀಹರಿಯ ದ್ವೇಷಿಯಾಗುವನು.

೮ ಸರ್ವಾಂತರ್ಯಾಮಿಯಾದ ಭಗವಂತನು ಸರ್ವರ ದೇಹದಲ್ಲೂ ನೆಲೆಸಿರುವನು. ಯಾರ ದೇಹದಿಂದ ಆತ್ಮನು ಹೊರಕ್ಕೆ ಬರುವನೋ, ಆ ದೇಹವು ಆ ಕ್ಷಣದಲ್ಲಿಯೇ ಶವವೆನಿಸುವುದು.

೯. ಇಂದ್ರಿಯಗಳಿಗೆಲ್ಲ ಅಧಿಕಾರಿಯಾದ ಮನಸ್ಸು ನಾನು ಎಂದೆನಿಸಿಕೊಳ್ಳುವುದು. ಜ್ಞಾನವೇ ಶಂಕರಸ್ವರೂಪವಾದುದು. ವಿಷ್ಣುವು ಪ್ರಾಣಗಳ ರೂಪದಲ್ಲಿಯೂ, ಭಗವತಿಯಾದ ಪ್ರಕೃತಿಯು ಬುದ್ಧಿಸ್ವರೂಪದಲ್ಲಿಯೂ ಇರುವರು.

೧೦. ಪ್ರಕೃತಿಯ ಕಲಾರೂಪವಾದ ನಿದ್ರಾದಿಗಳೆಲ್ಲ ಶಕ್ತಿರೂಪದಲ್ಲಿರುವುವು. ಆತ್ಮನ ಪ್ರತಿಬಿಂಬವಾದ ಜೀವನು ಶರೀರಧಾರಿಯಾಗಿ ಭೋಗಿ ಎನಿಸಿಕೊಂಡಿರುವನು.

ಆತ್ಮನೀಶೇ ಗತೇ ದೇಹಾತ್ಸರ್ವೇ ಯಾಂತಿ ಸಸಂಭ್ರಮಾತ್ ।
ಯಥಾ ವರ್ತ್ಮನಿ ಗಚ್ಛಂತಂ ನರದೇವಮಿವಾನುಗಾಃ ॥ ೧೧ ॥

ಅಹಂ ಶಿವಶ್ಚ ಶೇಷಶ್ಚ ವಿಷ್ಣುರ್ಧರ್ಮೋ ಮಹಾನ್ವಿರಾಟ್ ।
ವಯಂ ಯದಂಶಾ ಭಕ್ತಾಶ್ಚ ತತ್ಪುಷ್ಪಂ ನ್ಯಕ್ಕೃತಂ ತ್ವಯಾ ॥ ೧೨ ॥

ಶಿವೇನ ಪೂಜಿತಂ ಪಾದಪದ್ಮಂ ಪುಷ್ಪೇಣ ಯೇನ ಚ ।
ತಚ್ಚ ದುರ್ವಾಸಸಾ ದತ್ತಂ ದೈವೇನಾನ್ಯಕೃತಂ ಸುರ ॥ ೧೩ ॥

ತತ್ಪುಷ್ಪಂ ಮಸ್ತಕೇ ಯಸ್ಯ ಕೃಷ್ಣಪಾದಾಬ್ಜತಶ್ಚ್ಯುತಂ ।
ಸರ್ವೇಷಾಂ ವೈ ಸುರಾಣಾಂ ಚ ತತ್ಪೂಜಾ ಪುರತೋ ಭವೇತ್ ॥ ೧೪ ॥

---

೧೧. ಸಕಲರಿಗೂ ಈಶ್ವರನಾದ ಆತ್ಮನು ದೇಹದಿಂದ ಹೊರಕ್ಕೆ ಹೊರಟರೆ ಮನಸ್ಸು, ಬುದ್ಧಿ ಮುಂತಾಗಿ ಸಕಲವೂ, ದಾರಿಯಲ್ಲಿ ಹೋಗುತ್ತಿರುವ ರಾಜನನ್ನು ಸೇವಕರು ಅನುಸರಿಸುವಂತೆ ಸಂಭ್ರಮದಿಂದ ಹೊರಕ್ಕೆ ಹೋಗುವುವು.

೧೨. ನಾನು, ಶಿವ, ಆದಿಶೇಷ, ವಿಷ್ಣು, ಧರ್ಮ, ಮಹಾವಿರಾಟ್ ಮುಂತಾದ ಸಕಲರೂ ಯಾರ ಅಂಶಜರೂ, ಭಕ್ತರೂ ಆಗಿರುವೆವೋ ಅಂಥ ಪರಮಾತ್ಮನ ಪ್ರಸಾದಪುಷ್ಪವನ್ನು ನೀನು ತಿರಸ್ಕರಿಸಿದೆ.

೧೩. ಶಿವನು ಯಾವ ಪುಷ್ಪದಿಂದ ಪರಮಾತ್ಮನ ಪಾದಪದ್ಮಗಳನ್ನು ಪೂಜಿಸಿದನೋ ಆ ಪುಷ್ಪವನ್ನು ದೂರ್ವಾಸಮುಷಿಯು ನಿನಗೆ ತಂದುಕೊಟ್ಟನು. ದುರದೃಷ್ಟದಿಂದ ನೀನು ಅದನ್ನು ತಿರಸ್ಕರಿಸಿದೆ.

೧೪. ಶ್ರೀಕೃಷ್ಣನ ಪಾದಕಮಲದಿಂದ ತಂದ ಆ ಪುಷ್ಪವು ಯಾರ ತಲೆಯ ಮೇಲೆ ಬಿದ್ದಿತೋ ಆ ತಲೆಯುಳ್ಳ ದೇವತೆಯನ್ನು ಇತರ ದೇವತೆಗಳ ಪೂಜೆಗೆ ಮೊದಲು ಪೂಜಿಸಬೇಕು.

ದೈವೇನ ವಂಚಿತಸ್ತ್ವಂ ಚ ದೈವಂ ಚ ಬಲವತ್ತರಂ ।
ಭಾಗ್ಯಹೀನಂ ಜನಂ ಮೂಢಂ ಕೋ ವಾ ರಕ್ಷಿತುಮೀಶ್ವರಃ ॥ ೧೫ ॥

ಕೃಷ್ಣಂ ನ ಮನ್ಯತೇ ಯೋ ಹಿ ಶ್ರೀನಾಥಂ ಸರ್ವವಂದಿತಂ ।
ಪ್ರಯಾತಿ ರುಷ್ಟಾ ತದ್ದಾಸೀ ಮಹಾಲಕ್ಷ್ಮೀರ್ವಿಹಾಯ ತಂ ॥ ೧೬ ॥

ಶತಯಜ್ಞೇನ ಯಾ ಲಬ್ಧಾ ದೀಕ್ಷಿತೇನ ತ್ವಯಾ ಪುರಾ ।
ಸಾ ಶ್ರೀರ್ಗತಾಽಧುನಾ ಕೋಪಾತ್ಕೃಷ್ಣನಿರ್ಮಾಲ್ಯವರ್ಜನಾತ್ ॥ ೧೭ ॥

ಅಧುನಾ ಗಚ್ಛ ವೈಕುಂಠಂ ಮಯಾ ಚ ಗುರುಣಾ ಸಹ ।
ನಿಷೇವ್ಯ ತತ್ರ ಶ್ರೀನಾಥಂ ಶ್ರಿಯಂ ಪ್ರಾಪ್ಸ್ಯಸಿ ತದ್ವರಾತ್ ॥ ೧೮ ॥

---

೧೫. ನೀನು ದುರ್ದೈವದಿಂದ ಮೋಸಹೋದೆ. ದೈವವು ಎಲ್ಲರಿಗೂ ಬಲಿಷ್ಠವಾದುದು. ದುರ್ಭಾಗ್ಯನೂ, ಮೂಢನೂ ಆದ ಮನುಷ್ಯನನ್ನು ರಕ್ಷಿಸಲು ಸಮರ್ಥರಾರು ?

೧೬. ಶ್ರೀಪತಿಯೂ, ಸರ್ವಪೂಜ್ಯನೂ ಆದ ಶ್ರೀಕೃಷ್ಣನನ್ನು ಭಕ್ತಿಯಿಂದ ಪೂಜಿಸದ ಮನುಷ್ಯನನ್ನು ಬಿಟ್ಟು ಕೃಷ್ಣನ ದಾಸಿಯಾದ ಮಹಾಲಕ್ಷ್ಮಿಯು ದೂರ ಹೋಗುವಳು.

೧೭. ನೀನು ಹಿಂದೆ ದೀಕ್ಷೆಯನ್ನು ಕೈಗೊಂಡು ನೂರುಯಾಗಮಾಡಿ ಪಡೆದ ಇಂದ್ರಸಂಪತ್ತನ್ನು ಈಗ ಶ್ರೀಕೃಷ್ಣನ ನಿರ್ಮಾಲ್ಯವನ್ನು ತಿರಸ್ಕರಿಸಿದುದರ ಫಲವಾಗಿ ಕಳೆದುಕೊಂಡೆ.

೧೮. ಈಗ ಬೃಹಸ್ಪತ್ಯಾಚಾರ್ಯನ ಮತ್ತು ನನ್ನ ಜತೆಯಲ್ಲಿ ವೈಕುಂಠಕ್ಕೆ ಬಾ. ಅಲ್ಲಿ ಶ್ರೀಪತಿಯಾದ ಶ್ರೀಕೃಷ್ಣನನ್ನು ಭಜಿಸಿ ಅವನ ವರದಿಂದ ಮೊದಲಿನ ಸಂಪತ್ತನ್ನು ಪಡೆಯುವೆ.

ಇತ್ಯೇವಮುಕ್ತ್ವಾ ಸ ಬ್ರಹ್ಮಾ ಸರ್ವೈಃ ಸುರಗಣೈಃ ಸಹ ।
ಶೀಘ್ರಂ ಜಗಾಮ ವೈಕುಂಠಂ ಯತ್ರ ಶ್ರೀಶಸ್ತಯಾ ಸಹ ॥ ೧೯ ॥

ತತ್ರ ಗತ್ವಾ ಪರಂ ಬ್ರಹ್ಮ ಭಗವಂತಂ ಸನಾತನಂ ।
ದೃಷ್ಟ್ವಾ ತೇಜಃಸ್ವರೂಪಂ ಚ ಪ್ರಜ್ವಲಂತಂ ಸ್ವತೇಜಸಾ ॥ ೨೦ ॥

ಗ್ರೀಷ್ಮಮಧ್ಯಾಹ್ನಮಾರ್ತಂಡಶತಕೋಟಿಸಮಪ್ರಭಂ ।
ಶಾಂತಂ ಚಾನಾದಿಮಧ್ಯಾಂತಂ ಲಕ್ಷ್ಮೀಕಾಂತಮನಂತಕಂ ॥ ೨೧ ॥

ಚತುರ್ಭುಜೈಃ ಪಾರ್ಷದೈಶ್ಚ ಸರಸ್ವತ್ಯಾ ಸ್ತುತಂ ನತಂ ।
ಭಕ್ತ್ಯಾ ಚತುರ್ಭಿರ್ವೇದೈಶ್ಚ ಗಂಗಯಾ ಪರಿಸೇವಿತಂ ॥ ೨೨ ॥

ತಂ ಪ್ರಣೇಮುಃ ಸುರಾಃ ಸರ್ವೇ ಮೂರ್ಧ್ನಾ ಬ್ರಹ್ಮಪುರೋಗಮಾಃ ।
ಭಕ್ತಿನಮ್ರಾಃ ಸಾಶ್ರುನೇತ್ರಾಸ್ತುಷ್ಟುವುಃ ಪುರುಷೋತ್ತಮಂ ॥ ೨೩ ॥

---

೧೯. ಬ್ರಹ್ಮನು ಇಂತು ನುಡಿದು ಸಮಸ್ತ ದೇವತೆಗಳೊಡನೆ ಜಾಗ್ರತೆಯಾಗಿ ವೈಕುಂಠದಲ್ಲಿರುವ ಲಕ್ಷ್ಮೀಪತಿಯ ಸಮೀಪಕ್ಕೆ ಹೋದನು.

೨೦–೨೧. ಅಲ್ಲಿ ಷಡ್ಗುಣೈಶ್ವರ್ಯಪರಿಪೂರ್ಣನೂ, ಅನಾದಿಯೂ, ತೇಜೋಮಯನೂ ಗ್ರೀಷ್ಮಋತುವಿನ ಮಧ್ಯಾಹ್ನದ ಕೋಟಿಸೂರ್ಯರ ಸಮಾನಪ್ರಭೆಯುಳ್ಳವನಾದರೂ ಶಾಂತನೂ, ಆದಿಮಧ್ಯಾಂತರಹಿತನೂ ಆದ ಲಕ್ಷ್ಮೀಕಾಂತನನ್ನು ನೋಡಿದನು.

೨೨. ಚತುರ್ಭುಜರು, ಪಾರ್ಷದರು ಮತ್ತು ಸರಸ್ವತಿಯು ಅವನನ್ನು ಸ್ತುತಿಸಿ ವಂದಿಸುತ್ತಿದ್ದರು. ಚತುರ್ವೇದಗಳೂ, ಗಂಗಾದೇವಿಯೂ ಭಕ್ತಿಯಿಂದ ಸೇವಿಸುತ್ತಿದ್ದರು.

೨೩. ದೇವತೆಗಳೆಲ್ಲರೂ ಬ್ರಹ್ಮನನ್ನು ಮುಂದುಮಾಡಿಕೊಂಡು ಲಕ್ಷ್ಮೀಪತಿಗೆ ನಮಸ್ಕರಿಸಿ ಆನಂದಬಾಷ್ಪಗಳನ್ನು ಸುರಿಸುತ್ತಾ ಪುರುಷೋತ್ತಮನಾದ ಅವನನ್ನು ಸ್ತುತಿಸಲಾರಂಭಿಸಿದರು.

ವೃತ್ತಾಂತಂ ಕಥಯಾಮಾಸ ಸ್ವಯಂ ಬ್ರಹ್ಮಾ ಕೃತಾಂಜಲಿಃ ।
ರುರುದುರ್ದೇವತಾಃ ಸರ್ವಾಃ ಸ್ವಾಧಿಕಾರಚ್ಯುತಾಶ್ಚ ತಾಃ ॥ ೨೪ ॥

ಸ ಚಾಪಶ್ಯತ್ಸುರಗಣಂ ವಿಪದ್ಗ್ರಸ್ತಂ ಭಯಾಕುಲಂ ।
ವಸ್ತ್ರಭೂಷಣಶೂನ್ಯಂ ಚ ವಾಹನಾದಿವಿವರ್ಜಿತಂ ॥ ೨೫ ॥

ಶೋಭಾಶೂನ್ಯಂ ಹತಶ್ರೀಕಂ ಪರಿವಾರೈರನಾವೃತಂ ।
ಉವಾಚ ಕಾತರಂ ದೃಷ್ಟ್ವಾ ವಿಪನ್ನಭಯಭಂಜನಃ ॥ ೨೬ ॥

॥ ನಾರಾಯಣ ಉವಾಚ ॥

ಮಾ ಭೈರ್ಬ್ರಹ್ಮನ್ ಹೇ ಸುರಾಶ್ಚ ಭಯಂ ಕಿಂ ವೋ ಮಯಿ ಸ್ಥಿತೇ ।
ದಾಸ್ಯಾಮಿ ಲಕ್ಷ್ಮೀಮಚಲಾಂ ಪರಮೈಶ್ವರ್ಯವರ್ಧಿನೀಂ ॥ ೨೭ ॥

ಕಿಂ ಚ ಮದ್ವಚನಂ ಕಿಂಚಿಚ್ಛ್ರೂಯತಾಂ ಸಮಯೋಚಿತಂ ।
ಹಿತಂ ಸತ್ಯಂ ಸಾರಭೂತಂ ಪರಿಣಾಮಸುಖಾವಹಂ ॥ ೨೮ ॥

---

೨೪. ಬ್ರಹ್ಮನು ಕೈಮುಗಿದುಕೊಂಡು ತಾವು ಬಂದ ಸಮಾಚಾರವನ್ನು ತಾನೇ ಬಿನ್ನವಿಸಿಕೊಂಡನು. ಅಧಿಕಾರವನ್ನು ಕಳೆದುಕೊಂಡ ದೇವತೆಗಳೆಲ್ಲರೂ ಗೋಳಾಡಲಾರಂಭಿಸಿದರು.

೨೫–೨೬. ವಿಪತ್ತಿಗೆ ಸಿಲುಕಿ ಭಯಪೀಡಿತರಾಗಿ ವಸ್ತ್ರಾಲಂಕಾರವಾಹನ ರಹಿತರಾದ್ದರಿಂದ ಕಾಂತಿಗುಂದಿದವರಾಗಿ, ಪರಿವಾರವಿಲ್ಲದೆ ಒಂಟೊಂಟಿಯಾಗಿರುವ ಆ ದೇವತೆಗಳು ಕಾತರರಾಗಿರುವುದನ್ನು ನೋಡಿ ವಿಪತ್ಪರಿಹಾರಕನಾದ ನಾರಾಯಣನು ಇಂತು ನುಡಿದನು.

೨೭. ನಾರಾಯಣ:—ಬ್ರಹ್ಮನೇ ಮತ್ತು ದೇವತೆಗಳೇ ಹೆದರಬೇಡಿ. ನಾನಿರುವಾಗ ನಿಮಗೆ ಭಯವೇತರದು? ಪರಮೈಶ್ವರ್ಯವನ್ನು ಹೆಚ್ಚಿಸುವ ಶಾಶ್ವತವಾದ ಸಂಪತ್ತನ್ನು ನಿಮಗೆ ಕೊಡುವೆನು.

೨೮. ಅಲ್ಲದೆ ನಿಮಗೆ ಹಿತವೂ, ಸತ್ಯವೂ ಶ್ರುತಿಸಾರವೂ, ಪರಿಣಾಮಸುಖಕರವೂ ಸಮಯೋಚಿತವೂ ಆದ ಕೆಲವು ಮಾತುಗಳನ್ನು ಹೇಳುವೆನು. ಸಾವಧಾನದಿಂದ ಕೇಳಿರಿ.

ಜನಾಶ್ಚಾಸಂಖ್ಯವಿಶ್ವಸ್ಥಾ ಮದಧೀನಾಶ್ಚ ಸಂತತಂ ।
ಯಥಾ ತಥಾಹಂ ಮದ್ಭಕ್ತೈಃ ಪರಾಧೀನಃ ಸ್ವತಂತ್ರಕಃ ॥ ೨೯ ॥

ಯೋ ಯೋ ರುಷ್ಟೋ ಹಿ ಮದ್ಭಕ್ತೇ ಮತ್ಪರೇ ಹಿ ನಿರಂಕುಶಃ ।
ತದ್ಗೃಹೇಽಹಂ ನ ತಿಷ್ಠಾಮಿ ಪದ್ಮಯಾ ಸಹ ನಿಶ್ಚಿತಂ ॥ ೩೦ ॥

ದುರ್ವಾಸಾಃ ಶಂಕರಾಂಶಶ್ಚ ವೈಷ್ಣವೋ ಮತ್ಪರಾಯಣಃ ।
ತಚ್ಛಾಪಾದಾಗತೋಽಹಂ ಚ ಸಶ್ರೀಕೋ ವೋ ಗೃಹಾದಪಿ ॥ ೩೧ ॥

ಯತ್ರ ಶಂಖಧ್ವನಿರ್ನಾಸ್ತಿ ತುಲಸೀ ಚ ಶಿಲಾರ್ಚನಂ ।
ನ ಭೋಜನಂ ಚ ವಿಪ್ರಾಣಾಂ ನ ಪದ್ಮಾ ತತ್ರ ತಿಷ್ಠತಿ ॥ ೩೨ ॥

---

೨೯. ನಿಖಿಲವಿಶ್ವದಲ್ಲಿರುವ ಜನರೆಲ್ಲರೂ ಯಾವಾಗಲೂ ನನ್ನ ಅಧೀನರಾಗಿರುವರು. ಹಾಗೆಯೇ ನಾನು ಸ್ವತಂತ್ರನಾದರೂ ನನ್ನ ಭಕ್ತರ ಅಧೀನನಾಗಿರುವೆನು.

೩೦. ಯಾವನು ನಿರಂಕುಶನಾಗಿ (ಸ್ವತಂತ್ರ) ನನ್ನ ಪರಮಭಕ್ತನಲ್ಲಿ ಕೋಪಗೊಳ್ಳುವನೋ ಅವನ ಮನೆಯಲ್ಲಿ ನಾನು ಲಕ್ಷ್ಮಿಯೊಡನೆ ಖಂಡಿತವಾಗಿಯೂ ನೆಲೆಸಿರುವುದಿಲ್ಲ.

೩೧. ಶಂಕರಾಂಶಸಂಭೂತನಾದ ದೂರ್ವಾಸಮಹರ್ಷಿಯು ನನ್ನ ಪರಮಭಕ್ತನು. ಅವನು ಇಂದ್ರನಿಗೆ ಶಾಪಕೊಟ್ಟುದರಿಂದ ನಾನು ಲಕ್ಷ್ಮೀಸಮೇತನಾಗಿ ಇಂದ್ರನ ಮನೆಯಿಂದ ಬಂದುಬಿಟ್ಟೆನು.

೩೨. ಯಾರ ಮನೆಯಲ್ಲಿ ಶಂಖಧ್ವನಿಯೂ, ತುಳಸಿಯಿಂದ ಸಾಲಿಗ್ರಾಮ ಪೂಜೆಯೂ, ಬ್ರಾಹ್ಮಣರಿಗೆ ಭೋಜನವೂ, ಪ್ರತಿದಿನವೂ ನಡೆಯುವುದಿಲ್ಲವೋ ಅಲ್ಲಿ ಲಕ್ಷ್ಮಿಯು ನೆಲೆಯಾಗಿ ನಿಲ್ಲುವುದಿಲ್ಲ.

ಮದ್ಭಕ್ತಾನಾಂ ಚ ಮೇ ನಿಂದಾ ಯತ್ರ ಯತ್ರ ಭವೇತ್ಸುರಾಃ ।
ಮಹಾರುಷ್ಟಾ ಮಹಾಲಕ್ಷ್ಮೀಸ್ತತೋ ಯಾತಿ ಪರಾಭವಾತ್ ॥ ೩೩ ॥

ಮದ್ಭಕ್ತಿಹೀನೋ ಯೋ ಮೂಢೋ ಯೋ ಭುಂಕ್ತೇ ಹರಿವಾಸರೇ ।
ಮಮ ಜನ್ಮದಿನೇ ಚಾಪಿ ಯಾತಿ ಶ್ರೀಸ್ತದ್ಗೃಹಾದಪಿ ॥ ೩೪ ॥

ಮನ್ನಾಮವಿಕ್ರಯೀ ಯಶ್ಚ ವಿಕ್ರೀಣಾತಿ ಸ್ವಕನ್ಯಕಾಂ ।
ಯತ್ರಾತಿಥಿರ್ನ ಭುಂಕ್ತೇ ಚ ಮತ್ಪ್ರಿಯಾ ಯಾತಿ ತದ್ಗೃಹಾತ್ ॥ ೩೫ ॥

ಪಾಪಿನಾಂ ಯೋ ಗೃಹಂ ಯಾತಿ ಶೂದ್ರಶ್ರಾದ್ಧಾನ್ನಭೋಜಿನಾಂ ।
ಮಹಾರುಷ್ಟಾ ತತೋ ಯಾತಿ ಮಂದಿರಾತ್ಕಮಲಾಲಯಾ ॥ ೩೬ ॥

---

೩೩. ನನ್ನ ಭಕ್ತರನ್ನು ಮತ್ತು ನನ್ನನ್ನು ದೂಷಿಸುವ ಕಡೆಯಲ್ಲೆಲ್ಲಾ ಮಹಾಲಕ್ಷ್ಮಿಯು ನಿಲ್ಲದೆ ಅವಮಾನಿತಳಾಗಿ ದೂರಹೋಗುವಳು.

೩೪. ಯಾವ ಮೂಢನು ನನ್ನಲ್ಲಿ ಭಕ್ತಿರಹಿತನಾಗಿ ಹರಿವಾಸರವಲ್ಲೂ ಮತ್ತು ನನ್ನ ಜನ್ಮದಿವಸದಲ್ಲೂ ಊಟಮಾಡುವನೋ, ಅಂಥವನ ಮನೆಯಿಂದಲೂ ಲಕ್ಷ್ಮಿಯು ದೂರಹೋಗುವಳು.

೩೫. ಯಾರು ನನ್ನ ದಿವ್ಯನಾಮವನ್ನು ಹಣದಾಸೆಗೆ ಮಾರುವರೋ, ಮತ್ತು ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ದುಡ್ಡಿನಾಸೆಗೆ ಮಾರುವರೋ, ಯಾರ ಮನೆಯಲ್ಲಿ ಅತಿಥಿ ಭೋಜನವು ನಡೆಯುವುದಿಲ್ಲವೋ, ಅವರ ಮನೆಯಿಂದ ಲಕ್ಷ್ಮಿಯು ದೂರ ಹೋಗುವಳು.

೩೬. ಶೂದ್ರರ ಶ್ರಾದ್ಧಾನ್ನವನ್ನು ತಿನ್ನುವ ಪಾಪಿಗಳ ಮನೆಗೆ ಯಾರು ಹೋಗುವರೋ ಅವರ ಮನೆಯಿಂದಲೂ ಕೂಡ ಲಕ್ಷ್ಮಿಯು ಕುಪಿತಳಾಗಿ ದೂರ ಹೋಗುವಳು.

ಶೂದ್ರಾಣಾಂ ಶವದಾಹೀ ಚ ಭಾಗ್ಯಹೀನಶ್ಚ ವಾಡವಃ ।
ಯಾತಿ ರುಷ್ಟಾ ತದ್ಗೃಹಾಚ್ಚ ದೇವೀ ಕಮಲವಾಸಿನೀ ॥ ೩೭ ॥

ಶೂದ್ರಾಣಾಂ ಸೂಪಕಾರೋ ಯೋ ಬ್ರಾಹ್ಮಣೋ ವೃಷವಾಹಕಃ ।
ತತ್ತೋಯಪಾನಭೀತಾ ಚ ಕಮಲಾ ಯಾತಿ ತದ್ಗೃಹಾತ್ ॥ ೩೮ ॥

ವಿಪ್ರೋ ಯವನಸೇವೀ ಚ ದೇವಲಃ ಶೂದ್ರಯಾಜಕಃ ।
ತತ್ತೋಯಪಾನಭೀತಾ ಚ ವೈಷ್ಣವೀ ಯಾತಿ ತದ್ಗೃಹಾತ್ ॥ ೩೯ ॥

ವಿಶ್ವಾಸಘಾತೀ ಮಿತ್ರಘ್ನೋ ನರಘಾತೀ ಕೃತಘ್ನಕಃ ।
ಅಗಮ್ಯಾಂ ಯಾತಿ ಯೋ ವಿಪ್ರೋ ಮದ್ಭಾರ್ಯಾ ಯಾತಿ ತದ್ಗೃಹಾತ್ ॥

---

೩೭. ಶೂದ್ರರ ಶವವನ್ನು ಸುಡುವ ಮತ್ತು ಹೀನಭಾಗ್ಯನಾದ ಬ್ರಾಹ್ಮಣನ ಮನೆಯಿಂದಲೂ ಕಮಲವಾಸಿನಿಯಾದ ಲಕ್ಷ್ಮೀದೇವಿಯು ಕುಪಿತಳಾಗಿ ದೂರ ಹೋಗುವಳು.

೩೮. ಶೂದ್ರರ ಮನೆಯಲ್ಲಿ ಅಡಿಗೆ ಮಾಡುವವರು ಮತ್ತು ಎತ್ತುಗಳಿಂದ ಉತ್ತು ಜೀವಿಸುವ ಬ್ರಾಹ್ಮಣರು ಕೊಡುವ ನೀರುಕುಡಿಯಬೇಕೆಂಬ ಭಯದಿಂದ ಅವರ ಮನೆಯನ್ನು ಬಿಟ್ಟು ಮಹಾಲಕ್ಷ್ಮಿಯು ದೂರಹೋಗುವಳು.

೩೯. ಬ್ರಾಹ್ಮಣನಾದವನು, ಯವನರಸೇವೆ ಮಾಡುವವನೂ, ಶೂದ್ರರಿಂದ ಯಾಗ ಮಾಡಿಸುವವನೂ, ದೇವಸ್ಥಾನದ ಪೂಜಾರಿಯೂ ಆದರೆ, ಅವನ ನೀರನ್ನು ಕುಡಿಯಬೇಕೆಂಬ ಭಯದಿಂದ ವೈಷ್ಣವಿಯಾದ ಲಕ್ಷ್ಮಿಯು ಅವನ ಮನೆಯನ್ನು ಬಿಟ್ಟುಹೋಗುವಳು.

೪೦. ನಂಬಿಸಿ ಮೋಸಗೊಳಿಸುವವನು, ಮಿತ್ರಸಂಹಾರಕನು, ಮನುಷ್ಯರನ್ನು ಕೊಲೆಮಾಡುವವನು, ಉಪಕಾರಸ್ಮರಣೆಯಿಲ್ಲದವನು, ಅಗಮ್ಯಳಾದ ಸ್ತ್ರೀ ಸಹವಾಸ ಮಾಡುವವನು ಇಂಥ ಬ್ರಾಹ್ಮಣರ ಮನೆಯಿಂದ ನನ್ನ ಪ್ರಿಯೆಯಾದ ಲಕ್ಷ್ಮಿಯು ದೂರಹೋಗುವಳು.

ಅಶುದ್ಧಹೃದಯಃ ಕ್ರೂರೋ ಹಿಂಸಕೋ ನಿಂದಕೋ ದ್ವಿಜಃ ।
ಬ್ರಾಹ್ಮಣ್ಯಾಂ ಶೂದ್ರಜಾತಶ್ಚ ಯಾತಿ ದೇವೀ ಚ ತದ್ಗೃಹಾತ್ ॥ ೪೧ ॥

ಯೋ ವಿಪ್ರಃ ಪುಂಶ್ಚಲೀಪುತ್ರೋ ಮಹಾಪಾಪೀ ಚ ತತ್ಪತಿಃ ।
ಅವೀರಾನ್ನಂ ಚ ಯೋ ಭುಂಕ್ತೇ ತಸ್ಮಾದ್ಯಾತಿ ಜಗತ್ಪ್ರಸೂಃ ॥ ೪೨ ॥

ತೃಣಂ ಛಿನತ್ತಿ ನಖರೈಸ್ತೈರ್ವಾ ಯೋ ಹಿ ಲಿಖೇನ್ಮಹೀಂ ।
ಜಿಹ್ಮೋ ವಾ ಮಲವಾಸಾಶ್ಚ ಸಾ ಪ್ರಯಾತಿ ಚ ತದ್ಗೃಹಾತ್ ॥ ೪೩ ॥

ಸೂರ್ಯೋದಯೇ ಚ ದ್ವಿರ್ಭೋಜೀ ದಿವಾ ಶಾಯೀ ಚ ವಾಡವಃ ।
ದಿವಾ ಮೈಥುನಕಾರೀ ಚ ತಸ್ಮಾದ್ಯಾತಿ ಹರಿಪ್ರಿಯಾ ॥ ೪೪ ॥

---

೪೧. ಕಪಟಹೃದಯಿಯೂ. ಕ್ರೂರಿಯೂ, ಹಿಂಸಕನೂ, ನಿಂದಕನೂ, ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರನಿಂದ ಜನಿಸಿದವನೂ ಆದ ಬ್ರಾಹ್ಮಣನ ಮನೆಯನ್ನು ಲಕ್ಷ್ಮಿಯು ಬಿಟ್ಟುಬಿಡುವಳು.

೪೨. ಯಾವ ಬ್ರಾಹ್ಮಣನು ಜಾರೆಯರ ಹೊಟ್ಟೆಯಲ್ಲಿ ಹುಟ್ಟಿಯೋ ಅಥವಾ ಜಾರೆಯರ ಪತಿಯಾಗಿಯೋ ಮಹಾ ಪಾಪಿಯಾಗಿರುವನೋ, ಮತ್ತು ಯಾರು ಪತಿ ಪುತ್ರರಿಲ್ಲದ ಸ್ತ್ರೀಯರ ಅನ್ನವನ್ನು ತಿನ್ನುವನೋ ಅವನ ಮನೆಯಿಂದ ಜಗನ್ಮಾತೆಯಾದ ಲಕ್ಷ್ಮಿಯು ದೂರಹೋಗುವಳು.

೪೩. ಉಗುರಿನಿಂದ ದರ್ಭೆಯನ್ನು ಕತ್ತರಿಸುವವನ ಮತ್ತು ಉಗುರಿನಿಂದ ಭೂಮಿಯಲ್ಲಿ ಗೆರೆ ಎಳೆಯುವವನ ಮತ್ತು ವಕ್ರಸ್ವಭಾವವುಳ್ಳವನಾಗಿ ಕೊಳಕುಬಟ್ಟೆಯುಡುವವನ ಮನೆಯಿಂದ ಲಕ್ಷ್ಮಿಯು ಹೊರಟುಹೋಗುವಳು.

೪೪. ಹಗಲು ಎರಡುಸಾರಿ ಊಟಮಾಡುವವನ, ಹಗಲಿನಲ್ಲಿ ನಿದ್ರೆ ಮತ್ತು ಸ್ತ್ರೀಸಂಗ ಮಾಡುವವನ ಮನೆಯಿಂದ ಲಕ್ಷ್ಮಿಯು ದೂರಹೋಗುವಳು.

ಆಚಾರಹೀನೋ ಯೋ ವಿಪ್ರೋ ಯಶ್ಚ ಶೂದ್ರಪ್ರತಿಗ್ರಹೀ ।
ಅದೀಕ್ಷಿತೋ ಹಿ ಯೋ ಮೂಢಸ್ತಸ್ಮಾಲ್ಲೋಲಾ ಪ್ರಯಾತಿ ಚ ॥ ೪೫ ॥

ಸ್ನಿಗ್ಧಪಾದಶ್ಚ ನಗ್ನೋ ವಾ ಯಃ ಶೇತೇ ಜ್ಞಾನದುರ್ಬಲಃ ।
ಶಶ್ವದ್ಧರ್ಮಾತಿವಾಚಾಲೋ ಯಾತಿ ವೈ ತದ್ಗೃಹಾತ್ಸತೀ ॥ ೪೬ ॥

ಶಿರಸ್ನಾತಶ್ಚ ತೈಲೇನ ಯೋಽನ್ಯದಂಗಮುಪಸ್ಪೃಶೇತ್ ।
ಸ್ವಾಂಗೇ ಚ ವಾದಯೇದ್ವಾದ್ಯಂ ರಮಾ ಯಾತಿ ಚ ತದ್ಗೃಹಾತ್ ॥ ೪೭ ॥

ವ್ರತೋಪವಾಸಹೀನೋ ಯಃ ಸಂಧ್ಯಾಹೀನೋಽಶುಚಿರ್ದ್ವಿಜಃ ।
ವಿಷ್ಣುಭಕ್ತಿವಿಹೀನೋ ಯಸ್ತಸ್ಮಾದ್ಯಾತಿ ಹರಿಪ್ರಿಯಾ ॥ ೪೮ ॥

---

೪೫. ಆಚಾರಹೀನನೂ, ಶೂದ್ರರು ಕೊಟ್ಟ ದಾನವನ್ನು ಸ್ವೀಕರಿಸುವವನೂ, ಯಜ್ಞದೀಕ್ಷೆಯನ್ನು ಕೈಗೊಳ್ಳದವನೂ ಆದ ಬ್ರಾಹ್ಮಣನ ಮನೆಯಿಂದ ಚಂಚಲಳಾದ ಲಕ್ಷ್ಮಿಯು ಹೊರಟುಹೋಗುವಳು.

೪೬. ಯಾರು ತಿಳಿವಳಿಕೆಯಿಲ್ಲದೆ, ಕಾಲುಗಳನ್ನು ತೊಳೆಯದೆಯೂ, ಬೆತ್ತಲೆಯಾಗಿಯೂ ಮಲಗುವರೋ, ಪದೇ ಪದೇ ಧರ್ಮಜ್ಞನೆಂದು ಹರಟುವರೋ ಅವರ ಮನೆಯಿಂದಲೂ ಲಕ್ಷ್ಮಿಯು ತೊಲಗಿಹೋಗುವಳು.

೪೭. ತೈಲಾಭ್ಯಂಜನಮಾಡಿ, ಗುಹ್ಯಾಂಗಗಳನ್ನು ಮುಟ್ಟುವವನ ಮತ್ತು ತನ್ನ ಶರೀರದಲ್ಲೇ ವಾದ್ಯಬಾರಿಸುವವನ ಮನೆಯಿಂದ ಲಕ್ಷ್ಮಿಯು ದೂರ ಹೋಗುವಳು.

೪೮. ವ್ರತೋಪವಾಸಾದಿಗಳನ್ನೂ, ಸಂಧ್ಯಾವಂದನೆಯನ್ನೂ ಬಿಟ್ಟು ಅಶುಚಿಯಾಗಿ ವಿಷ್ಣುಭಕ್ತಿಯಿಲ್ಲದವನ ಮನೆಯಿಂದಲೂ, ವಿಷ್ಣುಪ್ರಿಯಳಾದ ಲಕ್ಷ್ಮಿಯು ದೂರಹೋಗುವಳು.

ಬ್ರಾಹ್ಮಣಂ ನಿಂದಯೇದ್ಯೋ ಹಿ ತಾನ್ವೈ ದ್ವೇಷ್ಟಿ ಚ ಸಂತತಾಂ ।
ಹಿಂಸಾಕಾರೀ ದಯಾಹೀನೋ ಯಾತಿ ಸರ್ವಪ್ರಸೂಸ್ತತಃ ॥ ೪೯ ॥

ಯತ್ರ ತತ್ರ ಹರೇರರ್ಚಾ ಹರೇರುತ್ಕೀರ್ತನಂ ಶುಭಂ ।
ತತ್ರ ತಿಷ್ಠತಿ ಸಾ ದೇವೀ ಕಮಲಾ ಸರ್ವಮಂಗಲಾ ॥ ೫೦ ॥

ಯತ್ರ ಪ್ರಶಂಸಾ ಕೃಷ್ಣಸ್ಯ ತದ್ಭಕ್ತಸ್ಯ ಪಿತಾಮಹ ।
ಸಾ ಚ ಕೃಷ್ಣಪ್ರಿಯಾ ದೇವೀ ತತ್ರ ತಿಷ್ಠತಿ ಸಂತತಂ ॥ ೫೧ ॥

ಯತ್ರ ಶಂಖಧ್ವನಿಃ ಶಂಖಃ ಶಿಲಾ ಚ ತುಲಸೀದಲಂ ।
ತತ್ಸೇವಾ ವಂದನಂ ಧ್ಯಾನಂ ತತ್ರ ಸಾ ತಿಷ್ಠತಿ ಸ್ವಯಂ ॥ ೫೨ ॥

ಶಿವಲಿಂಗಾರ್ಚನಂ ಯತ್ರ ತಸ್ಯ ಚೋತ್ಕೀರ್ತನಂ ಶುಭಂ ।
ದುರ್ಗಾರ್ಚನಂ ತದ್ಗುಣಾಶ್ಚ ತತ್ರ ಪದ್ಮನಿವಾಸಿನೀ ॥ ೫೩ ॥

---

೪೯. ಬ್ರಾಹ್ಮಣರನ್ನು ನಿಂದಿಸಿ ದ್ವೇಷಿಸುವವನೂ, ದಯಾರಹಿತನಾಗಿ ಪ್ರಾಣಿಹಿಂಸೆ ಮಾಡುವವನೂ ಆದವನ ಮನೆಯಿಂದ ಜಗನ್ಮಾತೆಯಾದ ಲಕ್ಷ್ಮಿಯು ಹೊರಟುಹೋಗುವಳು.

೫೦. ಶ್ರೀಹರಿಯ ಪೂಜೆಯೂ, ದಿವ್ಯನಾಮಸಂಕೀರ್ತನೆಯೂ, ನಡೆಯುವ ಸ್ಥಳದಲ್ಲಿ ಸರ್ವಮಂಗಳಸ್ವರೂಪಳಾದ ಲಕ್ಷ್ಮಿಯು ನೆಲೆಸಿರುವಳು.

೫೧. ಶ್ರೀಕೃಷ್ಣನನ್ನು ಮತ್ತು ಅವನ ಭಕ್ತನನ್ನು ಸ್ತುತಿಸುವ ಕಡೆಗಳಲ್ಲೆಲ್ಲಾ ಕೃಷ್ಣಪ್ರಿಯಳಾದ ಲಕ್ಷ್ಮಿಯು ಸತತವೂ ನೆಲೆಸಿರುವಳು.

೫೨. ಎಲ್ಲಿ ಶಂಖಧ್ವನಿಯಾಗುವುದೋ, ಶಂಖ, ಸಾಲಿಗ್ರಾಮಶಿಲೆ, ತುಳಸೀದಳಗಳು ಎಲ್ಲಿರುವುವೋ, ಸಾಲಿಗ್ರಾಮ ಶಿಲೆಯ ಪೂಜಾದಿಗಳು ಎಲ್ಲಿ ನಡೆಯುವುವೋ ಅಲ್ಲಿ ಲಕ್ಷ್ಮಿಯು ನೆಲೆಸಿರುವಳು.

೫೩. ಶಿವಲಿಂಗಪೂಜೆಯೂ, ನಾಮಸಂಕೀರ್ತನೆಯೂ, ದುರ್ಗಾಪೂಜೆ ಮತ್ತು ಗುಣಸ್ತುತಿಯೂ ನಡೆಯುವ ಕಡೆ ಲಕ್ಷ್ಮಿಯು ನೆಲೆಸಿರುವಳು.

ವಿಪ್ರಾಣಾಂ ಸೇವನಂ ಯತ್ರ ತೇಷಾಂ ವೈ ಭೋಜನಂ ಶುಭಂ ।
ಅರ್ಚನಂ ಸರ್ವದೇವಾನಾಂ ತತ್ರ ಪದ್ಮಮುಖೀ ಸತೀ　　॥ ೫೪ ॥

ಇತ್ಯುಕ್ತ್ವಾ ಚ ಸುರಾನ್ಸರ್ವಾನ್ಪ್ರಮಾವಾಹ ರಮಾಪತಿಃ ।
ಕ್ಷೀರೋದಸಾಗರೇ ಜನ್ಮ ಲಭಸ್ವ ಕಲಯಾ ರಮೇ　　॥ ೫೫ ॥

ಇತ್ಯುಕ್ತ್ವಾ ತಾಂ ಜಗನ್ನಾಥೋ ಬ್ರಹ್ಮಾಣಂ ಪುನರಾಹ ಚ ।
ಮಥಿತ್ವಾ ಸಾಗರಂ ಲಕ್ಷ್ಮೀಂ ದೇವೇಭ್ಯೋ ದೇಹಿ ಪದ್ಮಜ　　॥ ೫೬ ॥

ಇತ್ಯುಕ್ತ್ವಾ ಕಮಲಾಕಾಂತೋ ದೇವಶ್ಚಾಂತರಧಾನ್ಮುನೇ ।
ದೇವಾಶ್ಚಿರೇಣ ಕಾಲೇನ ಯಯುಃ ಕ್ಷೀರೋದಸಾಗರಂ　　॥ ೫೭ ॥

---

೫೪. ಬ್ರಾಹ್ಮಣರಸೇವೆಯೂ, ಭೋಜನವೂ, ಸಕಲದೇವತೆಗಳ ಪೂಜೆಯೂ ನಡೆಯುವ ಸ್ಥಳದಲ್ಲೆಲ್ಲ ಪದ್ಮಮುಖಿಯಾದ ಲಕ್ಷ್ಮಿಯು ನೆಲೆಸಿರುವಳು.

೫೫. ಸಮಸ್ತದೇವತೆಗಳನ್ನೂ ಕುರಿತು, ರಮಾಪತಿಯಾದ ವಿಷ್ಣುವು ಇಂತು ನುಡಿದು ಕ್ಷೀರಸಮುದ್ರದಲ್ಲಿ ಕಲಾಂಶದಿಂದ ಅವತರಿಸುವಂತೆ ಲಕ್ಷ್ಮಿಗೆ ಅಪ್ಪಣೆ ಮಾಡಿದನು.

೫೬. ಜಗದೊಡೆಯನಾದ ವಿಷ್ಣುವು ಲಕ್ಷ್ಮಿಯನ್ನು ಕುರಿತು ಹೀಗೆ ಹೇಳಿದ ಬಳಿಕ ಪುನಃ ಬ್ರಹ್ಮನನ್ನು ಕುರಿತು ಇಂತು ನುಡಿದನು. ಎಲೈ ಪದ್ಮಜನೇ ಕ್ಷೀರ ಸಮುದ್ರವನ್ನು ಮಥನಮಾಡಿ ಬಂದ ಲಕ್ಷ್ಮಿಯನ್ನು ದೇವತೆಗಳಿಗೆ ಕೊಡು.

೫೭. ಎಲೈ ನಾರದಮುನಿಯೇ, ಹೀಗೆ ಹೇಳಿ ರಮಾಪತಿಯು ಅಂತರ್ಧಾನವನ್ನು ಹೊಂದಲು ದೇವತೆಗಳೆಲ್ಲರೂ ಬಹಳ ಕಾಲದಮೇಲೆ ಸಮುದ್ರದೆಡೆಗೆ ಹೋದರು.

ಮಂಥಾನಂ ಮಂದರಂ ಕೃತ್ವಾ ಕೂರ್ಮಂ ಕೃತ್ವಾ ಚ ಭಾಜನಂ ।
ರಜ್ಜುಂ ಕೃತ್ವಾ ವಾಸುಕಿಂ ಚ ಮಮನ್ಥುಶ್ಚೈವ ಸಾಗರಂ ॥ ೫೮ ॥

ಧನ್ವಂತರಿಂ ಚ ಪೀಯೂಷಮುಚ್ಚೈಃಶ್ರವಸಮೀಪ್ಸಿತಂ ।
ನಾನಾರತ್ನಂ ಹಸ್ತಿರತ್ನಂ ಪ್ರಾಪುರ್ಲಕ್ಷ್ಮೀಶ್ಚ ದರ್ಶನಂ ॥ ೫೯ ॥

ವನಮಾಲಾಂ ದದೌ ಸಾ ಚ ಕ್ಷೀರೋದಶಾಯಿನೇ ಮುನೇ ।
ಸರ್ವೇಶ್ವರಾಯ ರಮ್ಯಾಯ ವಿಷ್ಣವೇ ವೈಷ್ಣವೀ ಸತೀ ॥ ೬೦ ॥

ದೇವೈಃ ಸ್ತುತಾ ಪೂಜಿತಾ ಚ ಬ್ರಹ್ಮಣಾ ಶಂಕರೇಣ ಚ ।
ದದೌ ದೃಷ್ಟಿಂ ಸುರಗೃಹೇ ಬ್ರಹ್ಮಶಾಪವಿಮೋಚಿಕಾಂ ॥ ೬೧ ॥

ಪ್ರಾಪುರ್ದೇವಾಃ ಸ್ವವಿಷಯಂ ದೈತ್ಯೈರ್ಗ್ರಸ್ತಂ ಭಯಂಕರೈಃ ।
ಮಹಾಲಕ್ಷ್ಮೀಪ್ರಸಾದೇನ ವರದಾನೇನ ನಾರದ ॥ ೬೨ ॥

---

೫೮. ಮಂದರಪರ್ವತವನ್ನು ಕಡೆಗೋಲನ್ನಾಗಿಯೂ, ಆದಿಕೂರ್ಮನನ್ನು ಕಡೆಯುವ ಪಾತ್ರೆಯನ್ನಾಗಿಯೂ, ಆದಿಶೇಷನನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಂಡು ಕ್ಷೀರಸಾಗರವನ್ನು ಕಡೆದರು.

೫೯. ದೇವವೈದ್ಯನಾದ ಧನ್ವಂತರಿಯನ್ನೂ, ಮುಪ್ಪನ್ನು ಕಳೆಯುವ ಅಮೃತವನ್ನೂ ಉಚ್ಚೈಃಶ್ರವಸ್ಸೆಂಬ ಕುದುರೆಯನ್ನೂ, ವಿವಿಧರತ್ನಗಳನ್ನೂ, ಗಜರತ್ನವಾದ ಐರಾವತವನ್ನೂ, ಲಕ್ಷ್ಮೀದೇವಿಯನ್ನೂ ಕೂಡ ದೇವತೆಗಳು ಕ್ಷೀರಸಾಗರದಿಂದ ಪಡೆದರು.

೬೦. ಪರಮವೈಷ್ಣವಿಯಾದ ಆ ಲಕ್ಷ್ಮಿಯು ಕ್ಷೀರಸಮುದ್ರಶಾಯಿಯೂ, ಸರ್ವೇಶ್ವರನೂ, ಮನೋಹರನೂ ಆದ ವಿಷ್ಣುವಿಗೆ ವನಮಾಲೆಯೊಂದನ್ನು ಕೊಟ್ಟಳು.

೬೧. ದೇವತೆಗಳಿಂದಲೂ, ಬ್ರಹ್ಮನಿಂದಲೂ, ಶಂಕರನಿಂದಲೂ ಕೂಡ ಪೂಜೆಗೊಂಡು ದೂರ್ವಾಸಶಾಪ ಪರಿಹಾರಕ್ಕಾಗಿ ದೇವತೆಗಳ ಲೋಕವಲ್ಲಿ ತನ್ನ ಕರುಣಾಕಟಾಕ್ಷವನ್ನು ಬೀರಿದಳು.

೬೨. ನಾರದನೇ, ಇಂತು ವರಪ್ರದಳಾದ ಮಹಾಲಕ್ಷ್ಮಿಯ ಅನುಗ್ರಹದಿಂದ ದೇವತೆಗಳು ರಾಕ್ಷಸಾಧೀನವಾಗಿದ್ದ ತಮ್ಮ ಸಂಪತ್ತನ್ನು ಹಿಂದಕ್ಕೆ ಪಡೆದರು.

ಇತ್ಯೇವಂ ಕಥಿತಂ ಸರ್ವಂ ಲಕ್ಷ್ಮ್ಯುಪಾಖ್ಯಾನಮುತ್ತಮಂ ।
ಸುಖದಂ ಸಾರಭೂತಂ ಚ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೬೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಲಕ್ಷ್ಮ್ಯುಪಾಖ್ಯಾನೇ ಸಮುದ್ರ ಮಥನಂ ನಾಮ ಅಷ್ಟಾತ್ರಿಂಶತ್ತಮೋಽಧ್ಯಾಯಃ

---

೬೩. ಸುಖಕರವೂ, ಸಾರಭೂತವೂ, ಅತ್ಯುತ್ತಮವೂ ಆದ ಲಕ್ಷ್ಮೀ ದೇವಿಯ ಉಪಾಖ್ಯಾನವನ್ನು ತಿಳಿಸಿದುದಾಯಿತು. ಇನ್ನೇನನ್ನು ಕೇಳಲು ನಿನಗೆ ಬಯಕೆಯಿದೆ ?

ಇಲ್ಲಿಗೆ ಶ್ರೀ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ನಾರದ ನಾರಾಯಣಸಂವಾದದ ಲಕ್ಷ್ಮ್ಯುಪಾಖ್ಯಾನದಲ್ಲಿ ಸಮುದ್ರಮಥನವೆಂಬ ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

ಮೂವತ್ತೆಂಟನೆಯ ಅಧ್ಯಾಯದ ಸಾರಾಂಶವು

ಅನಂತರ ದೇವೇಂದ್ರನು ಬೃಹಸ್ಪತ್ಯಾಚಾರ್ಯನನ್ನು ಮುಂದುಮಾಡಿಕೊಂಡು ಬ್ರಹ್ಮನ ಸಭೆಗೆ ಹೋದನು. ಇತರ ದೇವತೆಗಳೂ ಅವರನ್ನು ಹಿಂಬಾಲಿಸಿಹೋದರು. ಸುರಗುರುವು ನಡೆದ ಸಮಾಚಾರವನ್ನೆಲ್ಲ ಬ್ರಹ್ಮದೇವನಲ್ಲಿ ವಿಜ್ಞಾಪಿಸಿಕೊಳ್ಳಲು, 'ಸತ್ಕುಲಪ್ರಸೂತನಾದ ಇಂದ್ರನು ದುರ್ದೈವದಿಂದ ದೂರ್ವಾಸಮುನಿಯು ಕೊಟ್ಟ ವಿಷ್ಣುಪ್ರಸಾದವನ್ನು ಅಸಡ್ಡೆಮಾಡಿ ಈ ದುಸ್ಥಿತಿಗೀಡಾದನು' ಎಂದು ಹೇಳಿ ಬ್ರಹ್ಮದೇವನು ಇಂದ್ರಾದಿದೇವತೆಗಳನ್ನೂ ಸುರಗುರುವನ್ನೂ ಕರೆದುಕೊಂಡು ವೈಕುಂಠಕ್ಕೆ ಹೋಗಿ ಷಡ್ಗುಣೈಶ್ವರ್ಯಪರಿಪೂರ್ಣನಾದ ಶ್ರೀಮನ್ನಾರಾಯಣನಿಗೆ ಭಕ್ತಿಯಿಂದ ವಂದಿಸಿ, ದೇವತೆಗಳ ದುರವಸ್ಥೆಯನ್ನು ವಿಜ್ಞಾಪಿಸಿಕೊಂಡನು ಆಗ ಶ್ರೀಮನ್ನಾರಾಯಣನು 'ಕಾಮಕ್ರೋಧಾದ್ಯರಿಷಡ್ವರ್ಗಗಳಿಗೆ ಸಿಲುಕಿ ಉನ್ಮತ್ತರಾದವರ ಮನೆಯಿಂದ ಲಕ್ಷ್ಮಿಯು ದೂರಹೋಗುವುದಾಗಿಯೂ, ಸದಾಚಾರಸಂಪನ್ನರಾದವರ ಮನೆಯಲ್ಲಿ ಸರ್ವದಾ ಲಕ್ಷ್ಮಿಯು ನೆಲೆಸಿರುವುದಾಗಿಯೂ' ತಿಳಿಸಿ. ಇಂದ್ರನ ಅಪರಾಧವನ್ನು ಕ್ಷಮಿಸಿ, ಕ್ಷೀರಸಮುದ್ರದಲ್ಲಿ ತನ್ನದೊಂದಂಶದಿಂದ ಅವತರಿಸುವಂತೆ ಮಹಾಲಕ್ಷ್ಮಿಗೆ ಅಪ್ಪಣೆಮಾಡಿದನು. ಕೂಡಲೇ ದೇವತೆಗಳು ಕ್ಷೀರಸಾಗರವನ್ನು ಮಥಿಸಿದರು. ಸಿಂಧುಕನ್ಯೆಯು ಅವತರಿಸಿ ದೇವತೆಗಳ ಮೇಲೆ ತನ್ನ ಕೃಪಾಕಟಾಕ್ಷವನ್ನು ಬೀರಿದಳು. ದೇವತೆಗಳು ಮೊದಲಿನಂತೆ ಸಂಪತ್ತಿನಿಂದ ಕೂಡಿದರು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಏಕೋನಚತ್ವಾರಿಂಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಹರೇರುತ್ಕೀರ್ತನಂ ಭದ್ರಂ ಶ್ರುತಂ ತಜ್ಜ್ಞಾನಮುತ್ತಮಂ ।
ಈಪ್ಸಿತಂ ಲಕ್ಷ್ಮ್ಯುಪಾಖ್ಯಾನಂ ಧ್ಯಾನಂ ಸ್ತೋತ್ರಾದಿಕಂ ವದ || ೧ ||

ಹರಿಣಾ ಪೂಜಿತಾ ಪೂರ್ವಂ ತತೋ ಬ್ರಹ್ಮಾದಿಭಿಸ್ತಥಾ ।
ಶಕ್ರೇಣ ಭ್ರಷ್ಟರಾಜ್ಯೇನ ಸಾರ್ಧಂ ಸುರಗಣೇನ ಚ || ೨ ||

ಧ್ಯಾನೇನ ಪೂಜಿತಾ ಕೇನ ವಿಧಿನಾ ಕೇನ ವಾ ಪುರಾ ।
ಕೇನ ಸ್ತುತಾ ವಾ ಸ್ತೋತ್ರೇಣ ತನ್ಮೇ ವ್ಯಾಖ್ಯಾತುಮರ್ಹಸಿ || ೩ ||

ಮೂವತ್ತೊಂಭತ್ತನೆಯ ಅಧ್ಯಾಯವು

೧. ನಾರದ :—ಮಂಗಳಕರವಾದ ಶ್ರೀಹರಿಯ ನಾಮಸಂಕೀರ್ತನವನ್ನೂ, ಉತ್ತಮವಾದ ಜ್ಞಾನಸ್ವರೂಪವನ್ನೂ ನಾನು ಕೇಳಿದೆನು. ಈಗ ನನಗೆ ಅಭೀಪ್ಸಿತ ವಾದ ಲಕ್ಷ್ಮಿಯ ಉಪಾಖ್ಯಾನವನ್ನೂ, ಧ್ಯಾನಸ್ತೋತ್ರಾದಿಗಳನ್ನೂ ವಿಸ್ತರಿಸಿ ಹೇಳು.

೨. ಪೂರ್ವದಲ್ಲಿ ಲಕ್ಷ್ಮಿಯನ್ನು ಶ್ರೀಹರಿಯೂ, ಅನಂತರ ಬ್ರಹ್ಮಾದಿ ದೇವತೆಗಳೂ, ರಾಜ್ಯಭ್ರಷ್ಟನಾದ ಇಂದ್ರನೂ ಪೂಜಿಸಿದರು.

೩. ಆಕೆಯನ್ನು ಪೂಜಿಸಲು ಧ್ಯಾನಕ್ರಮ ಮತ್ತು ವಿಧಿಗಳಾವುವು ? ಆಕೆ ಯನ್ನು ಸ್ತುತಿಸಬೇಕಾದ ಸ್ತೋತ್ರವಾವುದು ? ಅದನ್ನು ನನಗೆ ವಿವರಿಸಬೇಕು.

॥ ಶ್ರೀ ನಾರಾಯಣ ಉವಾಚ ॥

ಸ್ನಾತ್ವಾ ತೀರ್ಥೇ ಪುರಾ ಶಕ್ರೋ ಧೃತ್ವಾ ಧೌತೇ ಚ ವಾಸಸೀ ।
ಕ್ಷೀರೋದೇ ಸಂಸ್ಥಾಪ್ಯ ಘಟಂ ದೇವಷಟ್ಕಂ ಚ ಪೂಜಯೇತ್ ॥ ೪ ॥

ಗಣೇಶಂ ಚ ದಿನೇಶಂ ಚ ವಹ್ನಿಂ ವಿಷ್ಣುಂ ಶಿವಂ ಶಿವಾಂ ।
ಏತಾನ್ಭಕ್ತ್ಯಾ ಸಮಭ್ಯರ್ಚ್ಯ ಪುಷ್ಪಗಂಧಾದಿಭಿಸ್ತಥಾ ॥ ೫ ॥

ತತ್ರಾವಾಹ್ಯ ಮಹಾಲಕ್ಷ್ಮೀಂ ಪರಮೈಶ್ವರ್ಯರೂಪಿಣೀಂ ।
ಪೂಜಾಂ ಚಕಾರ ದೇವೇಶೋ ಬ್ರಹ್ಮಣಾ ಚ ಪುರೋಧಸಾ ॥ ೬ ॥

ಪುರಸ್ಥಿತೇಷು ಮುನಿಷು ಬ್ರಾಹ್ಮಣೇಷು ಗುರೌ ತಥಾ ।
ದೇವಾದಿಷು ಚ ದೇವೇಶೇ ಜ್ಞಾನಾನಂದೇ ಶಿವೇ ಮುನೇ ॥ ೭ ॥

ಪಾರಿಜಾತಸ್ಯ ಪುಷ್ಪಂ ಚ ಗೃಹೀತ್ವಾ ಚಂದನೋಕ್ಷಿತಂ ।
ಧ್ಯಾತ್ವಾ ದೇವೀಂ ಮಹಾಲಕ್ಷ್ಮೀಂ ಪೂಜಯಾಮಾಸ ನಾರದ ॥ ೮ ॥

---

೪. ಶ್ರೀನಾರಾಯಣ :—ಪೂರ್ವದಲ್ಲಿ ದೇವೇಂದ್ರನು ಪುಣ್ಯತೀರ್ಥದಲ್ಲಿ ಸ್ನಾನಮಾಡಿ ಶುಭ್ರವಾದ ಎರಡು ವಸ್ತ್ರಗಳನ್ನುಟ್ಟು, ಕ್ಷೀರಸಮುದ್ರದ ತೀರ ದಲ್ಲಿಯೇ ಕಲಶವನ್ನಿಟ್ಟು ಆರು ದೇವತೆಗಳನ್ನು ಅವಾಹನೆಮಾಡಿದನು.

೫. ಗಣೇಶ, ಸೂರ್ಯ, ಅಗ್ನಿ, ವಿಷ್ಣು, ಈಶ್ವರ ಮತ್ತು ಪಾರ್ವತಿ ಈ ಆರು ದೇವತೆಗಳನ್ನು ಆವಾಹಿಸಿ, ಭಕ್ತಿಪೂರ್ವಕವಾಗಿ ಹೂವು ಗಂಧಾದಿಗಳಿಂದ ಪೂಜಿಸಿದನು.

೬. ಅದರ ಮಧ್ಯದಲ್ಲಿ ಪರಮೈಶ್ವರ್ಯಸ್ವರೂಪಿಣಿಯಾದ ಮಹಾಲಕ್ಷ್ಮಿ ಯನ್ನು ಆವಾಹಿಸಿ, ಬ್ರಹ್ಮನೊಡನೆಯೂ, ಬೃಹಸ್ಪತ್ಯಾಚಾರ್ಯನೊಡನೆಯೂ, ದೇವರಾಜನಾದ ಇಂದ್ರನು ಪೂಜಿಸಿದನು.

೭-೮. ಸುತ್ತಲೂ ಮುನಿಗಳು, ಬ್ರಾಹ್ಮಣರು, ಗುರುಗಳು, ದೇವತೆಗಳು ಮತ್ತು ಜ್ಞಾನಾನಂದಮಯನಾದ ಶಿವನೂ, ಕುಳಿತಿರಲು ದೇವೇಂದ್ರನು ಚಂದನ ಮಿಶ್ರಿತವಾದ ಪಾರಿಜಾತಪುಷ್ಪವನ್ನು ಹಿಡಿದುಕೊಂಡು ಮಹಾಲಕ್ಷ್ಮಿಯನ್ನು ಧ್ಯಾನಿಸಿ ಪೂಜಿಸಿದನು.

ಧ್ಯಾನಂ ಚ ಸಾಮವೇದೋಕ್ತಂ ಯದುಕ್ತಂ ಬ್ರಹ್ಮಣೇ ಪುರಾ।
ಧ್ಯಾನೇನ ಹರಿಣಾ ತೇನ ತನ್ನಿಬೋಧ ವದಾಮಿ ತೇ ॥ ೯ ॥

ಸಹಸ್ರದಲಪದ್ಮಸ್ಯ ಕರ್ಣಿಕಾವಾಸಿನೀಂ ಪರಾಂ।
ಶರತ್ಪಾರ್ವಣಕೋಟೀಂದು ಪ್ರಭಾಜುಷ್ಟಕರಾಂ ವರಾಂ ॥ ೧೦ ॥

ಸ್ವತೇಜಸಾ ಪ್ರಜ್ವಲಂತೀಂ ಸುಖದೃಶ್ಯಾಂ ಮನೋಹರಾಂ।
ಪ್ರತಪ್ತಕಾಂಚನನಿಭಾಂ ಶೋಭಾಂ ಮೂರ್ತಿಮತೀಂ ಸತೀಂ ॥ ೧೧ ॥

ರತ್ನಭೂಷಣಭೂಷಾಢ್ಯಾಂ ಶೋಭಿತಾಂ ಪೀತವಾಸಸಾ।
ಈಷದ್ಧಾಸ್ಯಪ್ರಸನ್ನಾಸ್ಯಾಂ ರಮ್ಯಾಂ ಸುಸ್ಥಿರಯೌವನಾಂ ॥ ೧೨ ॥

ಸರ್ವಸಂಪತ್ಪ್ರದಾತ್ರೀಂ ಚ ಮಹಾಲಕ್ಷ್ಮೀಂ ಭಜೇ ಶುಭಾಂ।
ಧ್ಯಾನೇನಾನೇನ ತಾಂ ಧ್ಯಾತ್ವಾ ಚೋಪಹಾರೈಃ ಸುಸಂಯುತಃ ॥ ೧೩ ॥

ಸಂಪೂಜ್ಯ ಬ್ರಹ್ಮವಾಕ್ಯೇನ ಚೋಪಹಾರಾಣಿ ಷೋಡಶ।
ದದೌ ಭಕ್ತ್ಯಾ ವಿಧಾನೇನ ಪ್ರತ್ಯೇಕಂ ಮಂತ್ರಪೂರ್ವಕಂ ॥ ೧೪ ॥

---

೯. ಪೂರ್ವದಲ್ಲಿ ವಿಷ್ಣುವು ಬ್ರಹ್ಮನಿಗೆ ಉಪದೇಶಿಸಿದ, ಸಾಮವೇದೋಕ್ತವಾದ ಧ್ಯಾನಕ್ರಮದಿಂದಲೇ ಇಂದ್ರನೂ ಧ್ಯಾನಮಾಡಿದನು. ಅದನ್ನು ಹೇಳುವೆನು ಕೇಳು.

೧೦–೧೨. ಸಹಸ್ರದಳವುಳ್ಳ ತಾವರೆಯ ಕರ್ಣಿಕಾರದಲ್ಲಿ ವಾಸಿಸುವವಳೂ, ಶರದೃತುವಿನ ಪೂರ್ಣಿಮಾಕೋಟಿಚಂದ್ರರ ಪ್ರಭೆಯಿಂದ ಕೂಡಿದವಳೂ, ಶಾಂತವಾದ ತೇಜಸ್ಸಿನಿಂದ ಸುಖದೃಶ್ಯಳೂ, ಮನೋಹರಳೂ, ಪುಟಕ್ಕೆ ಹಾಕಿದ ಚಿನ್ನದಂತೆ ಮಿರುಗುವ ಮೈಬಣ್ಣವುಳ್ಳವಳೂ. ರತ್ನಾಭರಣಾಲಂಕೃತಳೂ, ಪೀತಾಂಬರವನ್ನುಟ್ಟಿರುವವಳೂ, ಮಂದಹಾಸದಿಂದ ಪ್ರಸನ್ನವಾದ ಮುಖವುಳ್ಳವಳೂ, ಸ್ಥಿರಯೌವನವುಳ್ಳವಳೂ. ಸಕಲಸಂಪತ್ತನ್ನು ಕೊಡುವವಳೂ ಆದ ಮಹಾಲಕ್ಷ್ಮಿಯನ್ನು ಭಕ್ತಿಯಿಂದ ಭಜಿಸುವೆನು.

೧೩–೧೪. ಮೇಲೆ ಹೇಳಿದ ಧ್ಯಾನಶ್ಲೋಕಗಳಿಂದ ಮಹಾಲಕ್ಷ್ಮಿಯನ್ನು ಧ್ಯಾನಿಸಿ, ಉಪಹಾರಗಳನ್ನರ್ಪಿಸಿ, ಷೋಡಶೋಪಚಾರಗಳಿಂದ ಬ್ರಹ್ಮನು ಪೂಜಿಸಿದಂತೆ ಮಂತ್ರಪೂರ್ವಕವಾಗಿ ಭಕ್ತಿಯಿಂದ ಪ್ರತ್ಯೇಕವಾಗಿ ದೇವೇಂದ್ರನು ಪೂಜಿಸಿದನು.

ಪ್ರಶಂಸ್ಯಾನಿ ಪ್ರಹೃಷ್ಟಾನಿ ದುರ್ಲಭಾನಿ ವರಾಣಿ ಚ ।
ಅಮೂಲ್ಯರತ್ನಖಚಿತಂ ನಿರ್ಮಿತಂ ವಿಶ್ವಕರ್ಮಣಾ ।
ಆಸನಂ ಚ ವಿಚಿತ್ರಂ ಚ ಮಹಾಲಕ್ಷ್ಮಿ ಪ್ರಗೃಹ್ಯತಾಂ ॥ ೧೫ ॥

ಶುದ್ಧಂ ಗಂಗೋದಕಮಿದಂ ಸರ್ವವಂದಿತಮೀಪ್ಸಿತಂ ।
ಪಾಪೇಧ್ಮವಹ್ನಿರೂಪಂ ಚ ಗೃಹ್ಯತಾಂ ಕಮಲಾಲಯೇ ॥ ೧೬ ॥

ಪುಷ್ಪಚಂದನದೂರ್ವಾದಿಸಂಯುತಂ ಜಾಹ್ನವೀಜಲಂ ।
ಶಂಖಗರ್ಭಸ್ಥಿತಂ ಶುದ್ಧಂ ಗೃಹ್ಯತಾಂ ಪದ್ಮವಾಸಿನಿ ॥ ೧೭ ॥

ಸುಗಂಧಿಯುಕ್ತತೈಲಂ ಚ ಸುಗಂಧಾಮಲಕೀಜಲಂ ।
ದೇಹಸೌಂದರ್ಯಬೀಜಂ ಚ ಗೃಹ್ಯತಾಂ ಶ್ರೀಹರಿಪ್ರಿಯೇ ॥ ೧೮ ॥

ಷೋಡಶೋಪಚಾರದ ವಿವರಣೆ

೧೫. ಹೊಗಳಲು ಯೋಗ್ಯವೂ, ಸಂತೋಷಕರವೂ, ಇತರರಿಗೆ ದುರ್ಲಭವೂ, ಅತ್ಯಂತಶ್ರೇಷ್ಠವೂ, ಅಮೂಲ್ಯರತ್ನಗಳಿಂದ ಖಚಿತವೂ, ವಿಶ್ವಕರ್ಮನಿಂದ ನಿರ್ಮಿತವೂ ಆದ ಚಿತ್ರವಿಚಿತ್ರವಾದ ಆಸನವನ್ನು, ಎಲೌ ಮಹಾಲಕ್ಷ್ಮಿಯೇ ನೀನು ಸ್ವೀಕರಿಸು.

೧೬. ಕಮಲಾಲಯಳೇ, ಸರ್ವವಂದಿತವೂ, ಅತ್ಯಂತಪರಿಶುದ್ಧವೂ, ಪಾಪವೆಂಬ ಇಂಧನವನ್ನು ಸುಡುವ ಅಗ್ನಿರೂಪವೂ ಆಗಿರುವ ಈ ಗಂಗೋದಕವನ್ನು ಪಾದ್ಯವನ್ನಾಗಿ ಸ್ವೀಕರಿಸು.

೧೭. ಪುಷ್ಪ, ಚಂದನ ಮತ್ತು ದೂರ್ವಾ (ಗರಿಕೆ) ದಿಗಳಿಂದ ಕೂಡಿದ ಶಂಖದೊಳಗಿರುವ ಈ ಪರಿಶುದ್ಧವಾದ ಗಂಗೋದಕವನ್ನು, ಪದ್ಮವಾಸಿನಿಯಾದ ಎಲೌ ಲಕ್ಷ್ಮಿಯೇ, ನೀನು ಅರ್ಘ್ಯಕ್ಕಾಗಿ ಸ್ವೀಕರಿಸು.

೧೮. ಎಲೌ ಕೃಷ್ಣಪ್ರಿಯಳೇ, ಸುಗಂಧತೈಲಮಿಶ್ರವಾಗಿಯೂ, ಶರೀರ ಸೌಂದರ್ಯಪೋಷಕವಾಗಿಯೂ ಇರುವ ಸುಗಂಧವಾದ ನೆಲ್ಲಿಕಾಯಿನ ನೀರನ್ನು ಆಚಮನಕ್ಕಾಗಿ ಸ್ವೀಕರಿಸು.

ವೃಕ್ಷನಿರ್ಯಾಸರೂಪಂ ಚ ಗಂಧದ್ರವ್ಯಾದಿಸಂಯುತಂ ।
ಕೃಷ್ಣಕಾಂತೇ ಪವಿತ್ರೋ ವೈ ಧೂಪೋಽಯಂ ಪ್ರತಿಗೃಹ್ಯತಾಂ　　　॥ ೧೯ ॥

ಮಲಯಾಚಲಸಂಭೂತಂ ವೃಕ್ಷಸಾರಂ ಮನೋಹರಂ ।
ಸುಗಂಧಿಯುಕ್ತಂ ಸುಖದಂ ಚಂದನಂ ದೇವಿ ಗೃಹ್ಯತಾಂ　　　॥ ೨೦ ॥

ಜಗಚ್ಚಕ್ಷುಸ್ಸ್ವರೂಪಂ ಚ ಧ್ವಾಂತಪ್ರಧ್ವಂಸಕಾರಣಂ ।
ಪ್ರದೀಪಂ ಶುದ್ಧರೂಪಂ ಚ ಗೃಹ್ಯತಾಂ ಪರಮೇಶ್ವರಿ　　　॥ ೨೧ ॥

ನಾನೋಪಹಾರರೂಪಂ ಚ ನಾನಾರಸಸಮನ್ವಿತಂ ।
ನಾನಾಸ್ವಾದುಕರಂ ಚೈವ ನೈವೇದ್ಯಂ ಪ್ರತಿಗೃಹ್ಯತಾಂ　　　॥ ೨೨ ॥

ಅನ್ನಂ ಬ್ರಹ್ಮಸ್ವರೂಪಂ ಚ ಪ್ರಾಣರಕ್ಷಣಕಾರಣಂ ।
ತುಷ್ಟಿದಂ ಪುಷ್ಟಿದಂ ಚಾನ್ನಂ ಮಧುರಂ ಪ್ರತಿಗೃಹ್ಯತಾಂ　　　॥ ೨೩ ॥

---

೧೯. ಎಲೌ ಕೃಷ್ಣಪ್ರಿಯಳೇ, ವನಸ್ಪತಿರಸದಿಂದ ನಿರ್ಮಿತವಾಗಿ, ಸುಗಂಧ ದ್ರವ್ಯಗಳಿಂದ ಮಿಶ್ರಿತವಾಗಿರುವ ಈ ಪರಿಮಳ ಧೂಪವನ್ನು ಸ್ವೀಕರಿಸು.

೨೦. ಎಲೌ ದೇವಿಯೇ, ಮಲಯಪರ್ವತದಲ್ಲಿ ಹುಟ್ಟಿ, ಮನೋಹರವೂ, ಸುಗಂಧಯುಕ್ತವೂ ಆಗಿರುವ ಈ ದಿವ್ಯಚಂದನವನ್ನು ಸ್ವೀಕರಿಸು.

೨೧. ಅಂಧಕಾರವನ್ನು ನಾಶಗೊಳಿಸಿ ಜಗತ್ತಿಗೆ ಬೆಳಕನ್ನೀಯುವ ಪರಿಶುದ್ಧವಾದ ದೀಪಜ್ಯೋತಿಯನ್ನು ಪರಮೇಶ್ವರಿಯೇ ನೀನು ಸ್ವೀಕರಿಸು.

೨೨. ವಿವಿಧೋಪಹಾರಗಳಿಂದಲೂ, ವಿವಿಧ ರಸಗಳಿಂದಲೂ, ಕೂಡಿ ವಿಧ ವಿಧವಾದ ರುಚಿಯಿಂದ ತೃಪ್ತಿಗೊಳಿಸುವ ನೈವೇದ್ಯವನ್ನು ಸ್ವೀಕರಿಸು.

೨೩. ಪ್ರಾಣರಕ್ಷಣೆಗೆ ಮುಖ್ಯಕಾರಣವೂ, ತುಷ್ಟಿ ಮತ್ತು ಪುಷ್ಟಿದಾಯಕವೂ ಅತ್ಯಂತ ಮಧುರವೂ, ಪರಬ್ರಹ್ಮಸ್ವರೂಪವೂ ಆದ ಅನ್ನವನ್ನು ಸ್ವೀಕರಿಸು.

ಶಾಲ್ಯಕ್ಷತಸುಪಕ್ವಂ ಚ ಶರ್ಕರಾಗವ್ಯಸಂಯುತಂ ।
ಸುಸ್ವಾದು ರಮ್ಯಂ ಪದ್ಮೇ ಚ ಪರಮಾನ್ನಂ ಪ್ರಗೃಹ್ಯತಾಂ ॥ ೨೪ ॥

ಶರ್ಕರಾಗವ್ಯಪಕ್ವಂ ಚ ಸುಸ್ವಾದು ಸುಮನೋಹರಂ ।
ಮಯಾ ನಿವೇದಿತಂ ಲಕ್ಷ್ಮಿ ಸ್ವಸ್ತಿಕಂ ಪ್ರತಿಗೃಹ್ಯತಾಂ ॥ ೨೫ ॥

ನಾನಾವಿಧಾನಿ ರಮ್ಯಾಣಿ ಪಕ್ವಾನಿ ಚ ಫಲಾನಿ ಚ ।
ಸ್ವಾದು ರಸ್ಯಾನಿ ಕಮಲೇ ಗೃಹ್ಯತಾಂ ಫಲದಾನಿ ಹಿ ॥ ೨೬ ॥

ಸುರಭಿಸ್ತನಸಂಭೂತಂ ಸುಸ್ವಾದು ಸುಮನೋಹರಂ ।
ಮರ್ತ್ಯಾಮೃತಂ ಚ ಗವ್ಯಂ ವೈ ಗೃಹ್ಯತಾಮಚ್ಯುತಪ್ರಿಯೇ ॥ ೨೭ ॥

ಸುಸ್ವಾದುರಸಸಂಯುಕ್ತಮಿಕ್ಷುವೃಕ್ಷರಸೋದ್ಭವಂ ।
ಅಗ್ನಿಪಕ್ವಮಪಕ್ವಂ ವಾ ಗುಡಂ ವೈ ದೇವಿ ಗೃಹ್ಯತಾಂ] ॥ ೨೮ ॥

---

೨೪. ಸಕ್ಕರೆ ಮತ್ತು ಗೋಕ್ಷೀರಗಳಿಂದ ಕೂಡಿ ಮಧುರವೂ ರುಚಿಯೂ ಆಗಿರುವ ಪಕ್ವವಾದ ಶಾಲ್ಯಾನ್ನವನ್ನೂ, ಪರಮಾನ್ನವನ್ನೂ, ಎಲೌ ಪದ್ಮೆಯೇ ನೀನು ಸ್ವೀಕರಿಸು.

೨೫. ಸಕ್ಕರೆ, ಹಾಲುಗಳಿಂದ ಮಿಶ್ರಿತವಾಗಿರೋಣದರಿಂದ ಮಧುರವೂ ಚೆನ್ನಾಗಿ ಪಕ್ವವೂ, ಮನೋಹರವೂ ಆಗಿರುವ ಸ್ವಸ್ತಿಕವನ್ನು ಎಲೌ ಲಕ್ಷ್ಮಿಯೇ ನಿನಗರ್ಪಿಸುವೆನು ಸ್ವೀಕರಿಸು.

೨೬. ಚೆನ್ನಾಗಿ :ವಾಗಿ ಸಿಹಿಯಾಗಿಯೂ, ರಸಭರಿತವಾಗಿಯೂ ಇರುವ ವಿವಿಧ ಫಲಗಳನ್ನು ಅರ್ಪಿಸುವೆನು. ಎಲೌ ಕಮಲೆಯೇ, ನೀನು ಸ್ವೀಕರಿಸು.

೨೭. ಎಲೌ ಅಚ್ಯುತಪ್ರಿಯಳೇ, ಕಾಮಧೇನುವಿನ ಸ್ತನಗಳಲ್ಲಿ ಉತ್ಪತ್ತಿ ಪಡೆದು ಮಧುರವೂ, ಮನೋಹರವೂ ಆಗಿ ಭೂಲೋಕವಾಸಿಗಳಿಗೆ, ಅಮೃತವೆನಿಸಿಕೊಂಡಿರುವ ದಿವ್ಯಕ್ಷೀರವನ್ನು ಅರ್ಪಿಸುವೆನು ಸ್ವೀಕರಿಸು.

೨೮. ಕಬ್ಬಿನ ರಸದಿಂದ ಉತ್ಪನ್ನವಾಗಿ, ಅಗ್ನಿಯಿಂದ ಪಾಕಹೊಂದಿ, ಮಧುರವಾಗಿರುವ ಬೆಲ್ಲವನ್ನು ಭಕ್ತಿಯಿಂದ ನಿವೇದಿಸುವೆನು. ಎಲೌ ದೇವಿಯೇ ನೀನು ಸ್ವೀಕರಿಸು.

ಯವಗೋಧೂಮಸಸ್ಯಾನಾಂ ಚೂರ್ಣರೇಣು ಸಮುದ್ಭವಂ ।
ಸುಪಕ್ವಗುಡಗವ್ಯಾಕ್ತಂ ಮಿಷ್ಟಾನ್ನಂ ದೇವಿ ಗೃಹ್ಯತಾಂ || ೨೯ ||

ಸಸ್ಯಚೂರ್ಣೋದ್ಭವಂ ಪಕ್ವಂ ಸ್ವಸ್ತಿಕಾದಿ ಸಮನ್ವಿತಂ ।
ಮಯಾ ನಿವೇದಿತಂ ದೇವಿ ಪಿಷ್ಟಕಂ ಪ್ರತಿಗೃಹ್ಯತಾಂ || ೩೦ ||

ಪಾರ್ಥಿವಂ ವೃಕ್ಷಭೇದಂ ಚ ವಿವಿಧದ್ರವ್ಯಕಾರಣಂ ।
ಸುಸ್ವಾದುರಸಸಂಯುಕ್ತಮೈಕ್ಷವಂ ಪ್ರತಿಗೃಹ್ಯತಾಂ || ೩೧ ||

ಶೀತವಾಯುಪ್ರದಂ ಚೈವ ದಾಹೇ ಚ ಸುಖದಂ ಪರಂ ।
ಕಮಲೇ ಗೃಹ್ಯತಾಂ ಚೇದಂ ವ್ಯಜನಂ ಶ್ವೇತಚಾಮರಂ || ೩೨ ||

ತಾಂಬೂಲಂ ಚ ವರಂ ರಮ್ಯಂ ಕರ್ಪೂರಾದಿ ಸುವಾಸಿತಂ ।
ಜಿಹ್ವಾಜಾಡ್ಯಚ್ಛೇದಕರಂ ತಾಂಬೂಲಂ ದೇವಿ ಗೃಹ್ಯತಾಂ || ೩೩ ||

---

೨೯. ಅಕ್ಕಿ, ಗೋಧಿ ಮುಂತಾದ ಧಾನ್ಯಗಳ ಹಿಟ್ಟಿಗೆ, ಪಕ್ವವಾದ ಬೆಲ್ಲ ಮತ್ತು ಹಾಲನ್ನು ಬೆರಸಿ ಮಿಷ್ಟಾನ್ನವನ್ನು ಮಾಡಿ ನಿನಗರ್ಪಿಸುವೆನು. ಸ್ವೀಕರಿಸು.

೩೦. ಎಲೌ ದೇವಿಯೇ, ಧಾನ್ಯಪಿಷ್ಟದಿಂದ ಸ್ವಸ್ತಿಕಾದಿ ಭಕ್ಷ್ಯಗಳನ್ನೂ ತಂಬಿಟ್ಟು ಮುಂತಾದವುಗಳನ್ನೂ ಮಾಡಿ ನಿನಗೆ ನಿವೇದಿಸುವೆನು, ಸ್ವೀಕರಿಸು.

೩೧. ಪಾರ್ಥಿವ ವೃಕ್ಷದಿಂದಲೇ ಉತ್ಪತ್ತಿಪಡೆದು, ಅನೇಕವಿಧವಾದ ದ್ರವ್ಯಗಳಿಗೆ ಕಾರಣವಾಗಿ, ಮಧುರವಾಗಿರುವ ಕಬ್ಬಿನವಿಕಾರವಾದ ಸಕ್ಕರೆ ಕಡ್ಡಿಯನ್ನು ಸ್ವೀಕರಿಸು.

೩೨. ಸೆಕೆಯಾದಾಗ ತಂಗಾಳಿಯನ್ನು ಬೀಸಿ ಸುಖವನ್ನು ಕೊಡುವ, ಬೀಸಣಿಗೆಯ ಮತ್ತು ಬಿಳಿ ಚಾಮರದ ಸೇವೆಯನ್ನು ಎಲೌ ಕಮಲೆಯೇ ನೀನು ಸ್ವೀಕರಿಸು.

೩೩. ಪಚ್ಚಕರ್ಪೂರ ಮುಂತಾದವುಗಳಿಂದ ಸುವಾಸಿತವಾಗಿ, ನಾಲಗೆಯ ಜಡತ್ವವನ್ನು ಹೋಗಲಾಡಿಸುವ ಶ್ರೇಷ್ಠವಾದ ತಾಂಬೂಲವನ್ನು ದೇವಿಯೇ ನೀನು ಸ್ವೀಕರಿಸು.

ಸುವಾಸಿತಂ ಶೀತಲಂ ಚ ಪಿಪಾಸಾನಾಶಕಾರಣಂ ।
ಜಗಜ್ಜೀವನರೂಪಂ ಚ ಜೀವನಂ ದೇವಿ ಗೃಹ್ಯತಾಂ ॥ ೩೪ ॥

ದೇಹಸೌಂದರ್ಯಬೀಜಂ ಚ ಸದಾ ಶೋಭಾವಿವರ್ಧನಂ ।
ಕಾರ್ಪಾಸಜಂ ಚ ಕೃಮಿಜಂ ವಸನಂ ದೇವಿ ಗೃಹ್ಯತಾಂ ॥ ೩೫ ॥

ರತ್ನಸ್ವರ್ಣವಿಕಾರಂ ಚ ದೇಹಸೌಖ್ಯವಿವರ್ಧನಂ ।
ಶೋಭಾಧಾನಂ ಶ್ರೀಕರಂ ಚ ಭೂಷಣಂ ಪ್ರತಿಗೃಹ್ಯತಾಂ ॥ ೩೬ ॥

ನಾನಾಕುಸುಮಸಂದರ್ಭಂ ಬಹುಶೋಭಾಪ್ರದಂ ಪರಂ ।
ಸುರಲೋಕಪ್ರಿಯಂ ಶುದ್ಧಂ ಮಾಲ್ಯಂ ದೇವಿ ಪ್ರಗೃಹ್ಯತಾಂ ॥ ೩೭ ॥

ಶುದ್ಧಿದಂ ಶುದ್ಧಿರೂಪಂ ಚ ಸರ್ವಮಂಗಲಮಂಗಲಂ ।
ಗಂಧವಸ್ತೂದ್ಭವಂ ರಮ್ಯಂ ಗಂಧಂ ದೇವಿ ಪ್ರಗೃಹ್ಯತಾಂ ॥ ೩೮ ॥

---

೩೪. ಏಲಕ್ಕಿ ಪಚ್ಚಕರ್ಪೂರಾದಿಗಳಿಂದ ಸುವಾಸಿತವೂ, ತಣ್ಣಗೂ ಆಗಿ ಬಾಯಾರಿಕೆಯ ನಾಶಕ್ಕೆ ಕಾರಣವೂ, ಜಗತ್ತಿಗೆ ಜೀವನಸ್ವರೂಪವೂ ಆದ ಶೀತಲೋದಕವನ್ನು ಎಲೌ ದೇವಿಯೇ ಸ್ವೀಕರಿಸು.

೩೫. ಶರೀರದ ಸೌಂದರ್ಯ ಮತ್ತು ಕಾಂತಿಯನ್ನು ಹೆಚ್ಚಿಸುವ, ತೆಳುವಾದ ಹತ್ತಿ ಮತ್ತು ರೇಷ್ಮೆ ವಸ್ತ್ರಗಳನ್ನು ನಿನಗರ್ಪಿಸುವೆನು ಸ್ವೀಕರಿಸು.

೩೬. ಸುವರ್ಣ ಮತ್ತು ರತ್ನಗಳ ವಿಕಾರಸ್ವರೂಪವೂ, ಶರೀರದ ಸೌಖ್ಯ ಮತ್ತು ಸೌಂದರ್ಯವರ್ಧಕವೂ ಆಗಿ ದಿವ್ಯಕಾಂತಿಯನ್ನು ಕೊಡುವ ದಿವ್ಯಾಭರಣಗಳನ್ನು, ಎಲೌ ದೇವಿಯೇ, ಸ್ವೀಕರಿಸು.

೩೭. ವಿವಿಧಪುಷ್ಪಗಳಿಂದ ಜೋಡಿಸಲ್ಪಟ್ಟು, ಅತ್ಯಂತಕಾಂತಿದಾಯಕವಾಗಿ, ಸುರಲೋಕವಾಸಿಗಳಿಗೆ ಪ್ರಿಯವೂ, ಶುದ್ಧವೂ ಆಗಿರುವ ಪುಷ್ಪಮಾಲೆಯನ್ನು ಸ್ವೀಕರಿಸು.

೩೮. ಸ್ವಯಂ ಪರಿಶುದ್ಧವಾಗಿರುವುದಲ್ಲದೆ, ಇತರ ವಸ್ತುಗಳನ್ನೂ ಶುದ್ಧಿಗೊಳಿಸಿ ಸರ್ವಮಂಗಳ ಸ್ವರೂಪವಾಗಿರುವ, ಸುಗಂಧದ್ರವ್ಯಗಳಿಂದ ಕೂಡಿದ ದಿವ್ಯ ಗಂಧವನ್ನು ಸ್ವೀಕರಿಸು.

ಪುಣ್ಯತೀರ್ಥೋದಕಂ ಚೈವ ವಿಶುದ್ಧಂ ಶುದ್ಧಿದಂ ಸದಾ ।
ಗೃಹ್ಯತಾಂ ಕೃಷ್ಣಕಾಂತೇ ತ್ವಂ ರಮ್ಯಮಾಚಮನೀಯಕಂ ॥ ೩೯ ॥

ರತ್ನಸಾರೈಸ್ಸಂಗ್ರಥಿತಂ ಪುಷ್ಪಚಂದನಸಂಯುತಂ ।
ರತ್ನಭೂಷಣಭೂಷಾಢ್ಯಂ ಸುತಲ್ಪಂ ಪ್ರತಿಗೃಹ್ಯತಾಂ ॥ ೪೦ ॥

ಯದ್ಯದ್ದ್ರವ್ಯಮಪೂರ್ವಂ ಚ ಪೃಥಿವ್ಯಾಮಸ್ತಿ ದುರ್ಲಭಂ ।
ದೇವಭೂಷಾಢ್ಯಭೋಗ್ಯಂ ಚ ತದ್ದ್ರವ್ಯಂ ದೇವಿ ಗೃಹ್ಯತಾಂ ॥ ೪೧ ॥

ದ್ರವ್ಯಾಣ್ಯೇತಾನಿ ದತ್ವಾ ವೈ ಮೂಲೇನ ದೇವಪುಂಗವ ।
ಮೂಲಂ ಜಜಾಪ ಭಕ್ತ್ಯಾ ಚ ದಶಲಕ್ಷಂ ವಿಧಾನತಃ ॥ ೪೨ ॥

ಜಪೇನ ದಶಲಕ್ಷೇಣ ಮಂತ್ರಸಿದ್ಧಿರ್ಬಭೂವ ಹ ।
ಮಂತ್ರಶ್ಚ ಬ್ರಹ್ಮಣಾ ದತ್ತಃ ಕಲ್ಪವೃಕ್ಷಶ್ಚ ಸರ್ವದಃ ॥ ೪೩ ॥

---

೩೯. ಪುಣ್ಯತೀರ್ಥದಲ್ಲಿದ್ದು, ಶುದ್ಧಿದಾಯಕವಾಗಿರುವ ನಿರ್ಮಲೋದಕದ ದಿವ್ಯಾಚಮನವನ್ನು ಎಲೌ ದೇವಿಯೇ, ನೀನು ಸ್ವೀಕರಿಸು.

೪೦. ಶ್ರೇಷ್ಠ ರತ್ನಹಾರಗಳಿಂದಲಂಕರಿಸಲ್ಪಟ್ಟು, ಪುಷ್ಪಚಂದನಗಳಿಂದ ಚರ್ಚಿತವಾಗಿರುವ ದಿವ್ಯಶಯ್ಯೆಯನ್ನು, ಎಲೌ ದೇವಿಯೇ ನೀನು ಸ್ವೀಕರಿಸು.

೪೧. ಭೂಮಿಯಲ್ಲಿ ಅತ್ಯಪೂರ್ವವಾಗಿ, ಸರ್ವಸುಲಭವಲ್ಲದ, ದೇವತೆಗಳ ಅಲಂಕಾರಕ್ಕೆ ಮತ್ತು ಭೋಗಕ್ಕೆ ಯೋಗ್ಯವಾಗಿರುವ ಸಮಸ್ತ ವಸ್ತುಗಳನ್ನೂ ನಿನಗರ್ಪಿಸುವೆನು..

೪೨. ದೇವಶ್ರೇಷ್ಠನೇ, ಮೇಲೆ ಹೇಳಿದ ಸಮಸ್ತ ವಸ್ತುಗಳನ್ನೂ ಕ್ರಮವಾಗಿ ಅರ್ಪಿಸಿ ದೇವೇಂದ್ರನು ಹತ್ತುಲಕ್ಷಬಾರಿ ಮೂಲಮಂತ್ರವನ್ನು ಜಪಿಸಿದನು.

೪೩. ಬ್ರಹ್ಮನಿಂದ ಉಪದಿಷ್ಟವೂ, ಇಷ್ಟಾರ್ಥಸಿದ್ಧಿದಾಯಕವೂ ಆಗಿ ಕಲ್ಪವೃಕ್ಷಕ್ಕೆ ಸಮನಾದ ಆ ಮಂತ್ರವನ್ನು ಹತ್ತುಲಕ್ಷಬಾರಿ ಜಪಿಸಿ ಇಷ್ಟಾರ್ಥಸಿದ್ಧಿಯನ್ನು ಪಡೆದನು.

ಲಕ್ಷ್ಮೀರ್ಮಾಯಾ ಕಾಮವಾಣೀ ತತಃ ಕಮಲವಾಸಿನೀ ।
ವೈದಿಕೋ ಮಂತ್ರರಾಜೋಽಯಂ ಪ್ರಸಿದ್ಧೋ ದ್ವಾದಶಾಕ್ಷರಃ ॥ ೪೪ ॥

ಶ್ರೀಂ ಹ್ರೀ ಕ್ಲೀಂ ಐಂ ಕಮಲವಾಸಿನ್ಯೈ ಸ್ವಾಹಾ ।
ಕುಬೇರೋಽನೇನ ಮಂತ್ರೇಣ ಸರ್ವೈಶ್ವರ್ಯಮವಾಪ್ತವಾನ್ ।
ರಾಜರಾಜೇಶ್ವರೋ ದಕ್ಷಃ ಸಾವರ್ಣಿರ್ಮನುಸುರೇವ ಚ ॥ ೪೫ ॥

ಮಂಗಲೋಽನೇನ ಮಂತ್ರೇಣ ಸಪ್ತದ್ವೀಪವತೀ ಪಾಃ ।
ಪ್ರಿಯವ್ರತೋತ್ತಾನಪಾದೌ ಕೇದಾರೋ ನೃಪ ಏವ ಚ ॥ ೪೬ ॥

ಏತೇ ಚ ಸಿದ್ಧಾ ರಾಜೇಂದ್ರಾಃ ಮಂತ್ರೇಣಾನೇನ ನಾರದ ।
ಸಿದ್ಧೇ ಮಂತ್ರೇ ಮಹಾಲಕ್ಷ್ಮೀರ್ದದೌ ಶಕ್ರಾಯ ದರ್ಶನಂ ॥ ೪೭ ॥

---

೪೪. ಲಕ್ಷ್ಮಿ, ಮಾಯಾ, ಕಾಮ ಮತ್ತು ವಾಣಿ ಎಂಬ ಅರ್ಥಗಳನ್ನು ಕೊಡುವ ನಾಲ್ಕು ಬೀಜಾಕ್ಷರಗಳಿಂದ ಕೂಡಿದ ಕಮಲವಾಸಿನ್ಯೈ ಸ್ವಾಹಾ ಎಂದು ಪ್ರಸಿದ್ಧವಾಗಿರುವ ಹನ್ನೆರಡಕ್ಷರದ ಮಂತ್ರವು ವೇದೋಕ್ತವಾಗಿದೆ.

೪೫. 'ಶ್ರೀಂ, ಹ್ರೀಂ, ಕ್ಲೀಂ, ಐಂ ಕಮಲವಾಸಿನ್ಯೈ ಸ್ವಾಹಾ' ಎಂಬ ದ್ವಾದಶಾಕ್ಷರ ಮಂತ್ರವನ್ನು ಪಾರಾಯಣಮಾಡಿ ಕುಬೇರನು ಸಕಲೈಶ್ವರ್ಯವನ್ನು ಪಡೆದನು. ರಾಜರಾಜೇಶ್ವರನಾದ ದಕ್ಷನೂ, ಸಾವರ್ಣಿಮನುವೂ ಈ ಮಂತ್ರದಿಂದಲೇ ಸಿದ್ಧಿ ಪಡೆದುದು.

೪೬. ಮಂಗಳಗ್ರಹನು ಈ ಮಂತ್ರಪ್ರಭಾವದಿಂದ ಏಳು ದ್ವೀಪವುಳ್ಳ ಭೂಮಂಡಲಕ್ಕೆ ಪತಿಯಾದನು. ಪ್ರಿಯವ್ರತ ಮತ್ತು ಉತ್ತಾನಪಾದರೂ, ಕೇದಾರ ನೆಂಬ ರಾಜನೂ ಇಷ್ಟಸಿದ್ಧಿಯನ್ನು ಪಡೆದರು.

೪೭. ಎಲೈ ನಾರದನೇ, ಮೇಲೆ ಹೇಳಿದ ರಾಜಶ್ರೇಷ್ಠರೆಲ್ಲರೂ ಈ ಮಂತ್ರ ಪ್ರಭಾವದಿಂದ ಸಿದ್ಧಪುರುಷರಾದರು. ದೇವೇಂದ್ರನಿಗೂ ಮಂತ್ರಸಿದ್ಧಿಯಾದ ಕೂಡಲೇ ಮಹಾಲಕ್ಷ್ಮಿಯು ತನ್ನ ದರ್ಶನವಿತ್ತಳು.

ರತ್ನೇಂದ್ರವ್ಯೂಹಖಚಿತವಿಮಾನಸ್ಥಾ ವರಪ್ರದಾ ।
ಸಪ್ತದ್ವೀಪವತೀಂ ಪೃಥ್ವೀಂ ಛಾದಯಂತೀ ತ್ವಿಷಾ ಚ ಸಾ || ೪೮ ||

ಶ್ವೇತಚಂಪಕವರ್ಣಾಭಾ ರತ್ನಭೂಷಣಭೂಷಿತಾ ।
ಈಷದ್ಧಾಸ್ಯಪ್ರಸನ್ನಾಸ್ಯಾ ಭಕ್ತಾನುಗ್ರಹಕಾರಿಕಾ || ೪೯ ||

ಬಿಭ್ರತೀ ರತ್ನಮಾಲಾಂ ಚ ಕೋಟಿಚಂದ್ರಸಮಪ್ರಭಾ ।
ದೃಷ್ಟ್ವಾ ಜಗತ್ಪ್ರಸೂಂ ಶಾಂತಾಂ ತಾಂ ತುಷ್ಟಾವ ಪುರಂದರಃ || ೫೦ ||
ಪುಲಕಾಂಕಿತಸರ್ವಾಂಗಃ ಸಾಶ್ರುನೇತ್ರಃ ಕೃತಾಂಜಲಿಃ ।

ಬ್ರಹ್ಮಣಾ ಚ ಪ್ರದತ್ತೇನ ಸ್ತೋತ್ರರಾಜೇನ ಸಂಯುತಃ ।
ಸರ್ವಾಭೀಷ್ಟಪ್ರದೇನೈವ ವೈದಿಕೇನೈವ ತತ್ರ ಚ ॥ || ೫೧ ||

೪೮–೪೯. ಶ್ರೇಷ್ಠರತ್ನಗಳಿಂದ ಖಚಿತವಾದ ವಿಮಾನದಲ್ಲಿ ಕುಳಿತು, ತನ್ನ ಶರೀರ ಕಾಂತಿಯಿಂದ ಸಪ್ತದ್ವೀಪಸಮಾವೃತವಾದ ಭೂಮಿಯನ್ನು ಮುಚ್ಚಿರುವ ವರದಾತೆಯಾದ ಆ ಲಕ್ಷ್ಮಿಯು ಬಿಳಿ ಸಂಪಿಗೆಯಂತಿರುವ ಮೈಬಣ್ಣದಿಂದಲೂ, ಧರಿಸಿರುವ ರತ್ನಾಭರಣಗಳಿಂದಲೂ, ಮಂದಹಾಸದಿಂದ ಪ್ರಸನ್ನವಾಗಿರುವ ಮುಖದಿಂದಲೂ ಕೂಡಿ, ಭಕ್ತಾನುಗ್ರಹದಾಯಕಳಾಗಿದ್ದಳು.

೫೦. ಕೋಟಿಚಂದ್ರರ ಸಮಾನ ಕಾಂತಿಯುಳ್ಳ ರತ್ನಮಾಲೆಯೊಂದನ್ನು ಧರಿಸಿರುವ, ಮತ್ತು ಶಾಂತಳೂ, ಜಗನ್ಮಾತೆಯೂ ಆದ ಆ ಲಕ್ಷ್ಮಿಯನ್ನು ನೋಡಿ ದೇವೇಂದ್ರನು ಭಕ್ತಿಯಿಂದ ಸ್ತುತಿಸಿದನು.

೫೧. ರೋಮಾಂಚಿತ ಶರೀರನಾಗಿ, ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತಾ, ಕೈಯನ್ನು ಜೋಡಿಸಿಕೊಂಡು, ಬ್ರಹ್ಮನು ತನಗೆ ಬೋಧಿಸಿದ, ವೇದೋಕ್ತವೂ, ಇಷ್ಟಾರ್ಥದಾಯಕವೂ ಆದ ದಿವ್ಯಸ್ತೋತ್ರದಿಂದ ಸಂಯುತನಾಗಿ ಮಹಾಲಕ್ಷ್ಮಿಯನ್ನು ಸ್ತುತಿಸಿದನು.

॥ ಇಂದ್ರ ಉವಾಚ ॥

ಓಂ ನಮಃ ಕಮಲವಾಸಿನ್ಯೈ ನಾರಾಯಣ್ಯೈನಮೋ ನಮಃ
ಕೃಷ್ಣಪ್ರಿಯಾಯೈ ಸಾರಾಯೈ ಪದ್ಮಾಯೈ ಚ ನಮೋ ನಮಃ ॥ ೫೨ ॥

ಪದ್ಮಪತ್ರೇಕ್ಷಣಾಯೈ ಚ ಪದ್ಮಾಸ್ಯಾಯೈ ನಮೋ ನಮಃ ।
ಪದ್ಮಾಸನಾಯೈ ಪದ್ಮಿನ್ಯೈ ವೈಷ್ಣವ್ಯೈ ಚ ನಮೋ ನಮಃ ॥ ೫೩ ॥

ಸರ್ವಸಂಪತ್ಸ್ವರೂಪಾಯೈ ಸರ್ವದಾತ್ರ್ಯೈ ನಮೋ ನಮಃ ।
ಸುಖದಾಯೈ ಮೋಕ್ಷದಾಯೈ ಸಿದ್ಧಿದಾಯೈ ನಮೋನಮಃ ॥ ೫೪ ॥

ಹರಿಭಕ್ತಿಪ್ರದಾತ್ರ್ಯೈ ಚ ಹರ್ಷದಾತ್ರ್ಯೈ ನಮೋ ನಮಃ ।
ಕೃಷ್ಣ ವಕ್ಷಸ್ಥಿತಾಯೈ ಚ ಕೃಷ್ಣೇಶಾಯೈ ನಮೋ ನಮಃ ॥ ೫೫ ॥

ಕೃಷ್ಣ ಶೋಭಾಸ್ವರೂಪಾಯೈ ರತ್ನಾಢ್ಯಾಯೈ ನಮೋ ನಮಃ ।
ಸಂಪತ್ತ್ಯಧಿಷ್ಠಾತೃದೇವ್ಯೈ ಮಹಾದೇವ್ಯೈ ನಮೋ ನಮಃ ॥ ೫೬ ॥

---

೫೨. ಇಂದ್ರ:—ಸರ್ವದಾ ಸಹಸ್ರದಳಪದ್ಮದಲ್ಲಿ ವಾಸಿಸುವವಳೂ, ನಾರಾಯಣನಿಂದ ಸಂಭೂತಳೂ, ಶ್ರೀಕೃಷ್ಣನಿಗೆ ಪ್ರಿಯಳೂ, ಸೃಷ್ಟಿಗೆ ಸಾರಸ್ವರೂಪಳೂ ಆದ ಪದ್ಮೆಗೆ ವಂದಿಸುವೆನು.

೫೩. ಪದ್ಮದಳನೇತ್ರೆಯೂ, ಪದ್ಮಮುಖಿಯೂ, ಪದ್ಮಪೀಠವನ್ನು ಮಂಡಿಸಿರುವವಳೂ, ಪದ್ಮಿನಿಯೂ ಆದ ವಿಷ್ಣುಮಾಯಾರೂಪಳಿಗೆ ನಮಸ್ಕರಿಸುವೆನು.

೫೪. ಸಕಲಸಂಪದ್ರೂಪಿಣಿಯೂ, ಸಕಲರ ಇಷ್ಟಾರ್ಥಗಳನ್ನು ಕೊಡುವವಳೂ ಐಹಿಕಾಮುಷ್ಮಿಕವಾದ ಸುಖಸಿದ್ಧಿಗಳನ್ನು ಇತ್ತು, ಕೊನೆಗೆ ಮೋಕ್ಷವನ್ನು ಕೊಡುವವಳೂ ಆದ ಲಕ್ಷ್ಮಿಗೆ ವಂದಿಸುವೆನು.

೫೫. ಹರಿಭಕ್ತಿಪ್ರದಳೂ, ಸಕಲರಿಗೂ ಸಂತೋಷಕೊಡುವವಳೂ, ಶ್ರೀಕೃಷ್ಣನ ವಕ್ಷಃಸ್ಥಲದಲ್ಲಿ ನೆಲೆಸಿರುವವಳೂ ಆದ ಕೃಷ್ಣಪ್ರಿಯಳಿಗೆ ನಮಿಸುವೆನು.

೫೬. ಕೃಷ್ಣನಂತೆ ಕಾಂತಿಯುತಳೂ, ರತ್ನಾಭರಣಾಲಂಕೃತಳೂ, ಸಂಪತ್ತಿನ ಅಧಿದೇವತೆಯೂ ಆದ ಮಹಾದೇವಿಗೆ ವಂದನೆಗಳು.

ಸಸ್ಯಾಧಿಷ್ಠಾತೃದೇವ್ಯೈ ಚ ಸಸ್ಯಲಕ್ಷ್ಮ್ಯೈ ನಮೋ ನಮಃ ।
ನಮೋ ವೃದ್ಧಿಸ್ವರೂಪಾಯೈ ವೃದ್ಧಿದಾಯೈ ನಮೋ ನಮಃ ॥ ೫೭ ॥

ವೈಕುಂಠೇ ಚ ಮಹಾಲಕ್ಷ್ಮೀರ್ಲಕ್ಷ್ಮೀಃ ಕ್ಷೀರೋದಸಾಗರೇ ।
ಸ್ವರ್ಗಲಕ್ಷ್ಮೀರಿಂದ್ರಗೇಹೇ ರಾಜಲಕ್ಷ್ಮೀರ್ನೃಪಾಲಯೇ ॥ ೫೮ ॥

ಗೃಹಲಕ್ಷ್ಮೀಶ್ಚ ಗೃಹಿಣಾಂ ಗೇಹೇ ಚ ಗೃಹದೇವತಾ ।
ಸುರಭಿಃ ಸಾ ಗವಾಂ ಮಾತಾ ದಕ್ಷಿಣಾ ಯಜ್ಞಕಾಮಿನೀ ॥ ೫೯ ॥

ಅದಿತಿರ್ದೇವಮಾತಾ ತ್ವಂ ಕಮಲಾ ಕಮಲಾಲಯೇ ।
ಸ್ವಾಹಾತ್ವಂ ಚ ಹವಿರ್ದಾನೇ ಕಾವ್ಯದಾನೇ ಸ್ವಧಾ ಸ್ಮೃತಾ ॥ ೬೦ ॥

---

೫೭. ಸಸ್ಯಗಳಿಗೆ ಅಧಿದೇವತೆಯಾದುದರಿಂದ ಸಸ್ಯಲಕ್ಷ್ಮಿಯೆಂದೂ, ವೃದ್ಧಿಸ್ವರೂಪಳಾದುದರಿಂದ ಸಂಪದಭಿವೃದ್ಧಿದಾಯಕಿಯೆಂದೂ ಕರೆಯಲ್ಪಡುವ ದೇವಿಗೆ ಸಾಷ್ಟಾಂಗವೆರಗುವೆನು.

೫೮. ವೈಕುಂಠದಲ್ಲಿ ಮಹಾಲಕ್ಷ್ಮಿಯೆಂದೂ, ಕ್ಷೀರಸಮುದ್ರದಲ್ಲಿ ಸಿಂಧುಕನ್ಯೆಯೆಂದೂ, ಇಂದ್ರನ ಮಂದಿರದಲ್ಲಿ ಸ್ವರ್ಗಲಕ್ಷ್ಮಿಯೆಂದೂ, ರಾಜಭವನಗಳಲ್ಲಿ ರಾಜಲಕ್ಷ್ಮಿಯೆಂದೂ, ಹೆಸರುವಾಸಿಯಾಗಿರುವ ದೇವಿಗೆ ದಂಡಪ್ರಣಾಮಗಳು.

೫೯. ಗೃಹಸ್ಥರಿಗೆ ಗೃಹಲಕ್ಷ್ಮಿಯೂ, ಪ್ರತಿಗೃಹದಲ್ಲಿ ಗೃಹದೇವತೆಯೂ, ಗೋವುಗಳಿಗೆ ಮಾತೆಯಾದ ಸುರಭಿಸ್ವರೂಪಳೂ, ಯಜ್ಞಪುರುಷನ ಪತ್ನಿಯಾದ ದಕ್ಷಿಣಾದೇವಿಯೂ ಆದ ದೇವಿಗೆ ಅನೇಕ ವಂದನೆಗಳು.

೬೦. ದೇವಲೋಕದಲ್ಲಿ ದೇವಮಾತೆಯಾದ ಅದಿತಿಯೆಂದೂ, ಕಮಲಾಲಯವಾದ ಸಮುದ್ರದಲ್ಲಿ ಕಮಲೆಯೆಂದೂ, ಹವಿರ್ದಾನ (ದೇವತೆಗಳಿಗರ್ಪಿಸುವ ಹೋಮದ್ರವ್ಯ) ಕಾಲದಲ್ಲಿ ಸ್ವಾಹಾದೇವಿಯೆಂದೂ ಕವ್ಯ (ಪಿತೃಗಳಿಗರ್ಪಿಸುವ ದ್ರವ್ಯ) ದಾನಕಾಲದಲ್ಲಿ ಸ್ವಧಾದೇವಿಯೆಂದೂ, ಪ್ರಖ್ಯಾತಳಾದ ಲಕ್ಷ್ಮೀದೇವಿಗಭಿವಂದಿಸುವೆನು.

ತ್ವಂ ಹಿ ವಿಷ್ಣುಸ್ವರೂಪಾ ಚ ಸರ್ವಾಧಾರಾ ವಸುಂಧರಾ ।
ಶುದ್ಧಸತ್ತ್ವಸ್ವರೂಪಾ ತ್ವಂ ನಾರಾಯಣಪರಾಯಣಾ ॥ ೬೧ ॥

ಕ್ರೋಧಹಿಂಸಾವರ್ಜಿತಾ ಚ ವರದಾ ಚ ಶುಭಾನನಾ ।
ಪರಮಾರ್ಥಪ್ರದಾ ತ್ವಂ ಚ ಹರಿದಾಸ್ಯಪ್ರದಾ ಪರಾ ॥ ೬೨ ॥

ಯಯಾ ವಿನಾ ಜಗತ್ಸರ್ವಂ ಭಸ್ಮೀಭೂತಮಸಾರಕಂ ।
ಜೀವನ್ಮೃತಂ ಚ ವಿಶ್ವಂ ಚ ಶವತುಲ್ಯಂ ಯಯಾ ವಿನಾ ॥ ೬೩ ॥

ಸರ್ವೇಷಾಂ ಚ ಪರಾ ತ್ವಂ ಹಿ ಸರ್ವಬಾಂಧವರೂಪಿಣೀ ।
ಯಯಾ ವಿನಾ ನ ಸಂಭಾಷ್ಯೋ ಬಾಂಧವೈರ್ಬಾಂಧವಃ ಸದಾ ॥ ೬೪ ॥

ತ್ವಯಾ ಹೀನೋ ಬಂಧುಹೀನೋ ತ್ವಯಾ ಯುಕ್ತಃ ಸಬಾಂಧವಃ ।
ಧರ್ಮಾರ್ಥಕಾಮಮೋಕ್ಷಾಣಾಂ ತ್ವಂ ಚ ಕಾರಣರೂಪಿಣೀ ॥ ೬೫ ॥

---

೬೧. ನೀನು ವಿಷ್ಣುಸ್ವರೂಪಳೂ, ವಿಶ್ವಾಧಾರವಾದ ವಸುಂಧರಾರೂಪಿಣಿಯೂ, ಶುದ್ಧ ಸತ್ವಗುಣ ಪರಿಪೂರ್ಣಳೂ, ನಾರಾಯಣನಲ್ಲಿ ಅತ್ಯಾಸಕ್ತಳೂ ಆಗಿರುವೆ.

೬೨. ಎಲೌ ಲಕ್ಷ್ಮಿಯೇ, ನೀನು ಕೋಪ ಮತ್ತು ಹಿಂಸೆಗಳನ್ನು ಬಿಟ್ಟು ಸರ್ವದಾ ಪ್ರಸನ್ನಮುಖಿಯೂ, ವರಪ್ರದಳೂ ಆಗಿ, ಶ್ರೀಹರಿಯ ಸೇವಾರೂಪವಾದ ಪರಮಫಲವನ್ನು ಸರ್ವರಿಗೂ ಅನುಗ್ರಹಿಸುವೆ.

೬೩. ನೀನಿಲ್ಲದಿದ್ದರೆ ನಿಖಿಲ ಜಗತ್ತೂ ಬೂದಿಯಂತೆ ನಿಸ್ಸಾರವಾಗುವುದು. ಜೀವಿತವಾಗಿರುವ ನಿಖಿಲವಿಶ್ವವೂ ನೀನಿಲ್ಲದಿದ್ದರೆ ಮೃತಪ್ರಾಯವಾಗಿ ಶವಸದೃಶವಾಗುವುದು.

೬೪. ನೀನು ಎಲ್ಲರಿಕ್ಕಿಂತಲೂ ಶ್ರೇಷ್ಠಳಾಗಿ ಎಲ್ಲರಿಗೂ ಬಂಧು ರೂಪಳಾಗಿರುವೆ. ನೀನಿಲ್ಲದಿದ್ದರೆ ಜನರು ತಮ್ಮ ಆಪ್ತಬಂಧುಗಳೊಡನೆಯೂ ಕಲೆಯಲಾಗುತ್ತಿರಲಿಲ್ಲ.

೬೫. ನೀನಿಲ್ಲದಿದ್ದರೆ ಜೀವಿಗಳು ಬಂಧುರಹಿತರೂ, ನೀನಿದ್ದರೆ ಬಂಧುಸಹಿತರೂ ಆಗುವರು. ಧರ್ಮಾರ್ಥ ಕಾಮಮೋಕ್ಷವೆಂಬ ಚತುರ್ವಿಧ ಪುರುಷಾರ್ಥಗಳಿಗೂ ನೀನೇ ಕಾರಣಸ್ವರೂಪಳಾಗಿರುವೆ.

ಸ್ತನಂಧಯಾನಾಂ ತ್ವಂ ಮಾತಾ ಶಿಶೂನಾಂ ಶೈಶವೇ ಯಥಾ ।
ತಥಾ ತ್ವಂ ಸರ್ವದಾ ಮಾತಾ ಸರ್ವೇಷಾಂ ಸರ್ವವಿಶ್ವತಃ ॥ ೧೬ ॥

ತ್ಯಕ್ತಸ್ತನೋ ಮಾತೃಹೀನಃ ಸ ಚೇಜ್ಜೀವತಿ ದೈವತಃ ।
ತ್ವಯಾ ಹೀನೋ ಜನಃ ಕೋಽಪಿ ನ ಜೀವತ್ಯೇವ ನಿಶ್ಚಿತಂ ॥ ೧೭ ॥

ಸುಪ್ರಸನ್ನಸ್ವರೂಪಾ ತ್ವಂ ಮೇ ಪ್ರಸನ್ನಾ ಭವಾಂಬಿಕೇ ।
ವೈರಿಗ್ರಹಸ್ತದ್ವಿಷಯಂ ದೇಹಿ ಮಹ್ಯಂ ಸನಾತನಿ ॥ ೧೮ ॥

ವಯಂ ಯಾವತ್ತ್ವಯಾ ಹೀನಾ ಬಂಧುಹೀನಾಶ್ಚ ಭಿಕ್ಷುಕಾಃ ।
ಸರ್ವಸಂಪದ್ವಿಹೀನಾಶ್ಚ ತಾವದೇವ ಹರಿಪ್ರಿಯೇ ॥ ೧೯ ॥

ರಾಜ್ಯಂ ದೇಹಿ ಶ್ರಿಯಂ ದೇಹಿ ಬಲಂ ದೇಹಿ ಸುರೇಶ್ವರಿ ।
ಕೀರ್ತಿಂ ದೇಹಿ ಧನಂ ದೇಹಿ ಪುತ್ರಾನ್ಮಹ್ಯಂ ಚ ದೇಹಿ ವೈ ॥ ೨೦ ॥

---

೧೬. ಸ್ತನ್ಯಪಾನಮಾಡುವ ಶಿಶುಗಳಿಗೆ ಬಾಲ್ಯದಲ್ಲಿ ತಾಯಿಯು ಹೇಗೋ ಹಾಗೆ, ನೀನು ವಿಶ್ವದಲ್ಲಿರುವ ನಿಖಿಲಪ್ರಾಣಿಗಳಿಗೂ ಯಾವಾಗಲೂ ಮಾತೆ ಎನಿಸಿರುವೆ.

೧೭. ಶಿಶುವು ತಾಯಿಯನ್ನು ಕಳೆದುಕೊಂಡು ಸ್ತನ್ಯವಿಲ್ಲದೆ, ದೈವಯೋಗದಿಂದ ಜೀವಿಸಬಲ್ಲದು. ನೀನಿಲ್ಲದಿದ್ದರೆ ಯಾವ ಮನುಜನೂ, ಖಂಡಿತವಾಗಿಯೂ ಜೀವಿಸಲಾರನೆಂಬುದು ನಿಶ್ಚಯ.

೧೮. ಸರ್ವದಾ ಪ್ರಸನ್ನವದನಳಾದ ಎಲೌ ಅಂಬಿಕೆಯೇ, ನೀನು ನನಗೆ ಪ್ರಸನ್ನಳಾಗು. ಅನಾದಿಯಾದ ನೀನು ಶತ್ರುಗಳಿಗೆ ಸಿಲುಕಿರುವ ನನ್ನ ರಾಜ್ಯವನ್ನು ನನಗೆ ಅನುಗ್ರಹಿಸು.

೧೯. ಎಲೌ ಹರಿಪ್ರಿಯಳೇ, ನಾವು ನಿನ್ನ ಅನುಗ್ರಹವಾಗುವವರೆಗೆ, ಬಂಧುಹೀನರೂ, ಸಂಪತ್ತಿಲ್ಲದವರೂ ಆಗಿ ಭಿಕ್ಷುಕರಾಗಿರುವೆವು.

೨೦. ಸುರೇಶ್ವರಿಯೇ, ರಾಜ್ಯಸಂಪತ್ತುಗಳನ್ನೂ, ದೇಹಶಕ್ತಿಯನ್ನೂ, ಕೀರ್ತಿಯನ್ನೂ, ಹಣವನ್ನೂ, ಪುತ್ರಪೌತ್ರಾದಿ ಸಕಲ ಸಂಪತ್ತನ್ನೂ ನನಗೆ ಕೊಡು.

ಕಾಮಂ ದೇಹಿ ಮತಿಂ ದೇಹಿ ಭೋಗಾನ್ದೇಹಿ ಹರಿಪ್ರಿಯೇ ।
ಜ್ಞಾನಂ ದೇಹಿ ಚ ಧರ್ಮಂ ಚ ಸರ್ವಸೌಭಾಗ್ಯಮೀಪ್ಸಿತಂ ॥ ೭೧ ॥

ಸರ್ವಾಧಿಕಾರಮೇವಂ ವೈ ಪ್ರಭಾವಂ ಚ ಪ್ರತಾಪಕಂ ।
ಜಯಂ ಪರಾಕ್ರಮಂ ಯುದ್ಧೇ ಪರಮೈಶ್ವರ್ಯಮೇವ ಚ ॥ ೭೨ ॥

ಇತ್ಯುಕ್ತ್ವಾ ತು ಮಹೇಂದ್ರಶ್ಚ ಸರ್ವೈ ಸುರಗಣೈಃ ಸಹ ।
ನನಾಮ ಸಾಶ್ರುನೇತ್ರೋಽಯಂ ಮೂರ್ಧ್ನಾ ಚೈವ ಪುನಃ ಪುನಃ ॥ ೭೩ ॥

ಬ್ರಹ್ಮಾ ಚ ಶಂಕರಶ್ಚೈವ ಶೇಷೋ ಧರ್ಮಶ್ಚ ಕೇಶವಃ ।
ಸರ್ವೇ ಚಕ್ರುಃ ಪರೀಹಾರಂ ಸುರಾರ್ಥೇ ಚ ಪುನಃ ಪುನಃ ॥ ೭೪ ॥

ದೇವೇಭ್ಯಶ್ಚ ವರಂ ದತ್ವಾ ಪುಷ್ಪಮಾಲಾಂ ಮನೋಹರಾಂ ।
ಕೇಶವಾಯ ದದೌ ಲಕ್ಷ್ಮೀಃ ಸಂತುಷ್ಟಾ ಸುರಸಂಸದಿ ॥ ೭೫ ॥

---

೭೧. ಹರಿಪ್ರಿಯಳೇ, ನನ್ನ ಇಷ್ಟಾರ್ಥವನ್ನೂ, ವಿಚಾರಬುದ್ಧಿಯನ್ನೂ, ಇಷ್ಟಭೋಗಗಳನ್ನೂ ದಿವ್ಯಜ್ಞಾನವನ್ನೂ, ಧರ್ಮಬುದ್ಧಿಯನ್ನೂ ಮತ್ತು ಸರ್ವ ಸೌಭಾಗ್ಯವನ್ನೂ ನನಗೆ ದಯಪಾಲಿಸು.

೭೨. ಮೊದಲಿನಂತೆ ಸರ್ವಾಧಿಕಾರವನ್ನೂ, ಪ್ರತಾಪಾದಿಮಹಿಮೆಗಳನ್ನೂ, ಯುದ್ಧದಲ್ಲಿ ಜಯಿಸುವ ಪರಾಕ್ರಮವನ್ನೂ, ಪರಮೈಶ್ವರ್ಯವನ್ನೂ ನನಗೆ ದಯ ಪಾಲಿಸು.

೭೩. ಮಹೇಂದ್ರನು ಇಂತು ನುಡಿದು ಆನಂದಾಶ್ರುಭರಿತಲೋಚನನಾಗಿ, ಸಮಸ್ತ ದೇವತೆಗಳೊಡನೆ ಲಕ್ಷ್ಮೀದೇವಿಗೆ ತಲೆಬಾಗಿ ನಮಸ್ಕರಿಸಿದನು.

೭೪. ಬ್ರಹ್ಮ, ಶಂಕರ, ಆದಿಶೇಷ, ಧರ್ಮ, ಕೇಶವ ಮುಂತಾದ ಪ್ರಧಾನ ದೇವತೆಗಳೆಲ್ಲರೂ ದೇವತೆಗಳ ಸಲುವಾಗಿ ತಮ್ಮ ತಮ್ಮ ಕೈಲಾದ ಸಹಾಯ ಮಾಡಿದರು.

೭೫. ಲಕ್ಷ್ಮಿಯು ದೇವತೆಗಳಿಗೆ ವರವಿತ್ತು, ಮನೋಹರವಾದ ಪುಷ್ಪಮಾಲೆ ಯೊಂದನ್ನು ವಿಷ್ಣುವಿಗೆ ಕೊಟ್ಟು ಆ ದೇವಸಭೆಯಲ್ಲಿ ಸಂತುಷ್ಟಳಾಗಿದ್ದಳು.

ಯಯೋರ್ದೇವಾಶ್ಚ ಸಂತುಷ್ಟಾಃ ಸ್ವಂ ಸ್ವಂ ಸ್ಥಾನಂ ಚ ನಾರದ || ೭೬ ||
ದೇವೀ ಯಯೌ ಹರೇಃ ಕ್ರೋಡಂ ಹೃಷ್ಟಾ ಕ್ಷೀರೋದಶಾಯಿನಃ |

ಯಯತುಸ್ತೌ ಸ್ವಸ್ವಗೃಹಂ ಬ್ರಹ್ಮೇಶಾನೌ ಚ ನಾರದ |
ದತ್ವಾ ಶುಭಾಶಿಷಂ ತೌ ಚ ದೇವೇಭ್ಯಃ ಪ್ರೀತಿಪೂರ್ವಕಂ || ೭೭ ||

ಇದಂ ಸ್ತೋತ್ರಂ ಮಹಾಪುಣ್ಯಂ ತ್ರಿಸಂಧ್ಯಂ ಯಃ ಪಠೇನ್ನರಃ |
ಕುಬೇರತುಲ್ಯಸ್ಸಭವೇದ್ರಾಜರಾಜೇಶ್ವರೋ ಮಹಾನ್ || ೭೮ ||

ಸಿದ್ಧಸ್ತೋತ್ರಂ ಯದಿ ಪಠೇತ್ಸೋಽಪಿ ಕಲ್ಪತರುರ್ನರಃ |
ಪಂಚಲಕ್ಷ ಜಪೇನೈವ ಸ್ತೋತ್ರಸಿದ್ಧಿರ್ಭವೇನ್ನೃಣಾಂ || ೭೯ ||

ಸಿದ್ಧಿಃ ಸ್ತೋತ್ರಂ ಯದಿ ಪಠೇನ್ಮಾಸಮೇಕಂ ಚ ಸಂಯುತಃ |
ಮಹಾಸುಖೀ ಚ ರಾಜೇಂದ್ರೋ ಭವಿಷ್ಯತಿ ನ ಸಂಶಯಃ || ೮೦ ||

೭೬–೭೭. ಎಲೈ ನಾರದನೇ, ಅನಂತರ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹಿಂತಿರುಗಿದರು. ಸಂತುಷ್ಟಳಾದ ಲಕ್ಷ್ಮೀದೇವಿಯೂ ಕ್ಷೀರಸಮುದ್ರಶಾಯಿಯಾದ ಶ್ರೀಹರಿಯ ವಕ್ಷಃಸ್ಥಲದಲ್ಲಿ ಹೋಗಿ ನೆಲಸಿದಳು. ಬ್ರಹ್ಮ ಮತ್ತು ಪರಮೇಶ್ವರರು ದೇವತೆಗಳಿಗೆಲ್ಲ ಪ್ರೀತಿಪೂರ್ವಕನಾಗಿ ಆಶೀರ್ವಾದಮಾಡಿ ತಮ್ಮ ತಮ್ಮ ಮಂದಿರಕ್ಕೆ ಹಿಂತಿರುಗಿದರು.

೭೮. ಮೇಲೆ ಹೇಳಿದ ಲಕ್ಷ್ಮಿಯ ಸ್ತೋತ್ರವನ್ನು ತ್ರಿಸಂಧ್ಯೆಯಲ್ಲಿ ಭಕ್ತಿಯಿಂದ ಪಠಿಸುವ ಮನುಷ್ಯನು ಕುಬೇರನಿಗೆ ಸಮನಾಗಿ ರಾಜರಾಜೇಶ್ವರನೆನಿಸುವನು.

೭೯. ಸ್ತೋತ್ರಸಿದ್ಧಿಯನ್ನು ಪಡೆಯಲು ಪಠಿಸುವ ಮನುಜನು ಕಲ್ಪವೃಕ್ಷಕ್ಕೆ ಸಮನಾಗುವನು. ಐದುಲಕ್ಷಸಾರಿ ಜಪಿಸುವುದರಿಂದ ಮನುಜರಿಗೆ ಈ ಸ್ತೋತ್ರವು ಸಿದ್ಧಿಸುವುದು.

೮೦. ಸಿದ್ಧಿಪಡೆದ ಮನುಜನು ಜಿತೇಂದ್ರಿಯನಾಗಿ ಈ ಸ್ತೋತ್ರವನ್ನು ಒಂದು ತಿಂಗಳಕಾಲ ಪಠಿಸಿದರೆ ಅತ್ಯಂತ ಸುಖಿಯೂ, ರಾಜಶ್ರೇಷ್ಠನೂ ಆಗುವುದರಲ್ಲಿ ಸಂಶಯವಿಲ್ಲ.

॥ ನಾರದ ಉವಾಚ ॥

ಪುಷ್ಪಂ ದುರ್ವಾಸಸಾ ದತ್ತಮಸ್ತಿ ವೈ ಯಸ್ಯ ಮಸ್ತಕೇ ।
ತಸ್ಯ ಸರ್ವಾ ಪುರಃ ಪೂಜೇತ್ಯುಕ್ತಂ ಪೂರ್ವಂ ತ್ವಯಾ ಪ್ರಭೋ ॥ ೮೧ ॥

ತದೇವ ಸ್ಥಾಪಿತಂ ಪುಷ್ಪಂ ಗಜೇಂದ್ರಸ್ಯೈವ ಮಸ್ತಕೇ ।
ಯತೋ ಜನ್ಮ ಗಣೇಶಸ್ಯ ಸ ಚ ಮತ್ತೋ ವನಂ ಗತಃ ॥ ೮೨ ॥

ಮೂರ್ಧ್ನಿ ಚ್ಛಿನ್ನೇ ಗಣಪತೇಃ ಶನೇರ್ದೃಷ್ಟ್ಯಾ ಪುರಾ ಮುನೇ ।
ತತ್ಸ್ಕಂಧೇ ಯೋಜಯಾಮಾಸ ಹಸ್ತಿಮಸ್ತಂ ಹರಿಃ ಸ್ವಯಂ ॥ ೮೩ ॥

ಅಧುನೋಕ್ತಂ ದೇವಷಟ್ಕಂ ಸಂಪೂಜ್ಯ ಚ ಪುರಂದರಃ ।
ಪೂಜಯಾಮಾಸ ಲಕ್ಷ್ಮೀಂ ಚ ಕ್ಷೀರೋದೇ ಚ ಸುರೈಃ ಸಹ ॥ ೮೪ ॥

---

೮೧ ನಾರದ :—ದೂರ್ವಾಸ ಮಹರ್ಷಿಯು ಕೊಟ್ಟ ನಿರ್ಮಾಲ್ಯಪುಷ್ಪವನ್ನು ಇಂದ್ರನು ಯಾರ ತಲೆಯ ಮೇಲೆ ಎಸೆದನೋ ಅವರಿಗೆ ಸಕಲ ಪೂಜೆಗಳಲ್ಲೂ ಅಗ್ರಪೂಜೆಯಾಗಬೇಕೆಂದು ಪ್ರಭುವಾದ ನೀನು ಅಪ್ಪಣೆ ಕೊಡಿಸಿದೆಯಲ್ಲವೆ ?

೮೨. ಇಂದ್ರನು ಆ ನಿರ್ಮಾಲ್ಯಪುಷ್ಪವನ್ನು ಗಜರಾಜನ ಕುಂಭಸ್ಥಳದಲ್ಲಿ ಹಾಕಿದನು. ಯಾರ ಮುಖದ ಸಂಸರ್ಗದಿಂದ ಗಣೇಶನು ಗಜಮುಖನಾದನೋ, ಆ ಮದಿಸಿದ ಗಜರಾಜನು ಕಾಡಿನ ಕಡೆಗೆ ತೆರಳಿದನು.

೮೩. ಹಿಂದೆ ವಿನಾಯಕನಿಗೆ ಪಾಪಗ್ರಹನಾದ ಶನಿಯ ದೃಷ್ಟಿಯು ಬಿದ್ದು ಅದರ ಫಲವಾಗಿ, ವೀರಭದ್ರನು ಅವನ ತಲೆಯನ್ನು ಕತ್ತರಿಸಲು, ಶಿವನ ಅಪ್ಪಣೆಯಂತೆ ಉತ್ತರ ದಿಕ್ಕಿಗೆ ತಲೆಹಾಕಿಕೊಂಡು ಮಲಗಿದ್ದ ಆ ಮದಗಜದ ತಲೆಯನ್ನು ಕತ್ತರಿಸಿ, ಹರಿಯು ವಿನಾಯಕನ ಮುಂಡಕ್ಕೆ ಸೇರಿಸಿದನು.

೮೪. ದೇವೇಂದ್ರನು ಆರು ದೇವತೆಗಳನ್ನು ಮೊದಲು ಪೂಜಿಸಿ ಅನಂತರ ಕ್ಷೀರಸಮುದ್ರದಲ್ಲಿ ಎಲ್ಲ ದೇವತೆಗಳೊಡನೆ ಮಹಾಲಕ್ಷ್ಮಿಯನ್ನು ಪೂಜಿಸಿದನೆಂದು ಈಗ ಹೇಳಿದೆ.

ಅಹೋ ಪುರಾಣವಕ್ತೄಣಾಂ ದುರ್ಬೋಧಂ ವಚನಂ ನೃಣಾಂ ।
ಸುವ್ಯಕ್ತಮಸ್ಯ ಸಿದ್ಧಾಂತಂ ವದ ವೇದವಿದಾಂ ವರ ॥ ೮೫ ॥

॥ ಶ್ರೀನಾರಾಯಣ ಉವಾಚ ॥

ಯದಾ ಶಶಾಪ ಶಕ್ರಂ ಚ ದುರ್ವಾಸಾ ಮುನಿಪುಂಗವಃ ।
ತದಾ ನಾಸ್ತ್ಯೇವ ತಜ್ಜನ್ಮ ಪೂಜಾಕಾಲೇ ಬಭೂವ ಸಃ ॥ ೮೬ ॥

ಸುಚಿರಂ ದುಃಖಿತಾ ದೇವಾ ಬಭ್ರಮುರ್ಬ್ರಹ್ಮಶಾಪತಃ ।
ಪಶ್ಚಾತ್ಪ್ರಾಪುಶ್ಚ ತಾಂ ಲಕ್ಷ್ಮೀಂ ವರೇಣ ಚ ಹರೇರ್ಮುನೇ ॥ ೮೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದ ನಾರಾಯಣಸಂವಾದೇ ಲಕ್ಷ್ಮ್ಯುಪಾಖ್ಯಾನಂ ಲಕ್ಷ್ಮೀಪೂಜಾ
ವಿಧಾನಂ ನಾಮ ಏಕೋನಚತ್ವಾರಿಂಶತ್ತಮೋಽಧ್ಯಾಯಃ

---

೮೫. ಒಮ್ಮೆ ಗಣಪತಿಗೆ ಅಗ್ರಪೂಜೆಯೆಂದೂ, ಇನ್ನೊಮ್ಮೆ ಆರು ದೇವತೆಗಳಿಗೆ ಅಗ್ರಪೂಜೆಯೆಂದೂ, ಹೇಳುವ ನಿಮ್ಮಂಥ ಪುರಾಣವಕ್ತೃಗಳ ವಚನವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುವುದು. ವೇದವೇದಾಂಗಪಾರಂಗತನಾದ ನೀನು ಇದರ ಸಿದ್ಧಾಂತವನ್ನು ಸ್ಪಷ್ಟವಾಗಿ ಅರುಹು.

೮೬. ಶ್ರೀ ನಾರಾಯಣ :—ಮುನಿಶ್ರೇಷ್ಠನಾದ ದೂರ್ವಾಸನು ಇಂದ್ರನಿಗೆ ಶಾಪವಿತ್ತಾಗ ಗಣೇಶನು ಇನ್ನೂ ಜನಿಸಿರಲಿಲ್ಲ. ಲಕ್ಷ್ಮಿಗೆ ಪೂಜೆಮಾಡುವ ಸಂದರ್ಭದಲ್ಲಿ ಅವನ ಅವತಾರವಾಯಿತು ಆದುದರಿಂದ ಆಗ ಮೊದಲು ಗಣೇಶನನ್ನು ಪೂಜಿಸಲಾಗಲಿಲ್ಲ.

೮೭. ಬ್ರಾಹ್ಮಣನಾದ ದೂರ್ವಾಸನ ಶಾಪದಿಂದ ದೇವತೆಗಳೆಲ್ಲರೂ ಬಹುಕಾಲ ದುಃಖಿತರಾಗಿ ಅಲೆದಾಡಿದರು. ಅನಂತರ ಹರಿಯ ವರದಿಂದ ಮಹಾಲಕ್ಷ್ಮಿಯನ್ನು ಪಡೆದು ಪೂಜಿಸಿದರು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ನರನಾರಾಯಣ
ಸಂವಾದದಲ್ಲಿ ಲಕ್ಷ್ಮ್ಯುಪಾಖ್ಯಾನದಲ್ಲಿ ಲಕ್ಷ್ಮೀ ಪೂಜಾವಿಧಾನವೆಂಬ
ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಮೂವತ್ತೊಂಭತ್ತನೆಯ ಅಧ್ಯಾಯದ ಸಾರಾಂಶವು

ಈ ಅಧ್ಯಾಯದಲ್ಲಿ ಮಹಾಲಕ್ಷ್ಮಿಯ ಪೂಜಾವಿಧಾನವೂ, ಧ್ಯಾನ ಸ್ತೋತ್ರ ಮಂತ್ರಾದಿಗಳೂ ವಿವರಿಸಲ್ಪಟ್ಟಿವೆ. ಶ್ರೀಮನ್ನಾರಾಯಣನ ಉಪದೇಶದಂತೆ ಮಹೇಂದ್ರನು ಕ್ಷೀರಸಮುದ್ರದ ತೀರದಲ್ಲಿಯೇ ನಿಯಮದಿಂದ ಶಾಸ್ತ್ರೋಕ್ತವಾಗಿ ಮಹಾಲಕ್ಷ್ಮಿಯನ್ನು ಪೂಜಿಸಿ, ಬೀಜಾಕ್ಷರ ಮಂತ್ರಗಳನ್ನು ಜಪಿಸಿ, ಧ್ಯಾನಸ್ತೋತ್ರಾದಿಗಳಿಂದ ನುತಿಸಿ, ತನ್ನ ಇಷ್ಟಾರ್ಥವನ್ನು ಪಡೆದು ಅಮರಾವತಿಗೆ ಹಿಂತಿರುಗಿದನು. ಈ ಅಧ್ಯಾಯದಲ್ಲಿರುವ ಮಹಾಲಕ್ಷ್ಮಿಯ ಸ್ತೋತ್ರವನ್ನು ತ್ರಿಸಂಧ್ಯೆಯಲ್ಲೂ ಪಠಿಸುವವರ ಮತ್ತು ಕೇಳುವವರ ಮಹಾ ಪಾಪಗಳು ಪರಿಹಾರವಾಗಿ ಅವರ ಇಷ್ಟಾರ್ಥವು ಕೈಗೂಡುವುದು.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ಚತ್ವಾರಿಂಶತ್ ತಮೋಽಧ್ಯಾಯಃ ॥

॥ ನಾರದ ಉವಾಚ ॥

ನಾರಾಯಣ ಮಹಾಭಾಗ ಸಮಶ್ಚೈವ ತ್ವಯಾ ಪ್ರಭೋ ।
ರೂಪೇಣ ಚ ಗುಣೈಶ್ಚೈವ ಯಶಸಾ ತೇಜಸಾ ತ್ವಿಷಾ ॥ ೧ ॥

ತ್ವಮೇವ ಜ್ಞಾನಿನಾಂ ಶ್ರೇಷ್ಠಃ ಸಿದ್ಧಾನಾಂ ಯೋಗಿನಾಂ ತಥಾ ।
ತಪಸ್ವಿನಾಂ ಮುನಿನಾಂ ಚ ಪರೋ ವೇದವಿದಾಂ ತಥಾ ।
ಮಹಾಲಕ್ಷ್ಮ್ಯಾಃ ಉಪಾಖ್ಯಾನಂ ವಿಜ್ಞಾತಂ ಮಹದದ್ಭುತಂ ॥ ೨ ॥

ನಲವತ್ತನೆಯ ಅಧ್ಯಾಯವು

೧–೨. ನಾರದ :—ರೂಪಗುಣಗಳಿಂದಲೂ, ತೇಜಸ್ಸು ವಯಸ್ಸುಗಳಿಂದಲೂ ನಿನಗೆ ನೀನೇ ಸಮನೆನಿಸಿ ಅಪ್ರತಿಮನಾಗಿರುವ ನಾರಾಯಣ ಮಹರ್ಷಿಯೇ, ನೀನು ಜ್ಞಾನಿಗಳು, ಸಿದ್ಧರು, ಯೋಗಿಗಳು, ತಪಸ್ವಿಗಳು, ಮುನಿಗಳು ಮತ್ತು ವೇದಜ್ಞರು ಇವರಿಗೆಲ್ಲ ಶ್ರೇಷ್ಠನೆನಿಸಿರುವೆ. ಅತ್ಯಾಶ್ಚರ್ಯಕರವಾದ ಮಹಾಲಕ್ಷ್ಮಿಯ ಉಪಾಖ್ಯಾನವನ್ನು ನಿನ್ನ ಬಾಯಿನಿಂದ ಕೇಳಿದುದಾಯಿತು.

ಅನ್ಯತ್ಕಿಂಚಿದುಪಾಖ್ಯಾನಂ ನಿಗೂಢಂ ವದ ಸಾಂಪ್ರತಂ ।
ಅತೀವ ಗೋಪನೀಯಂ ಯದುಪಯುಕ್ತಂ ಚ ಸರ್ವತಃ ।
ಅಪ್ರಕಾಶ್ಯಂ ಪುರಾಣೇಷು ವೇದೋಕ್ತಂ ಧರ್ಮಸಂಯುತಂ ॥ ೩ ॥

॥ ಶ್ರೀ ನಾರಾಯಣ ಉವಾಚ ॥

ನಾನಾಪ್ರಕಾರಮಾಖ್ಯಾನಮಪ್ರಕಾಶ್ಯಂ ಪುರಾಣತಃ ।
ಶ್ರುತೌ ಕತಿ ವಿಧಂ ಗೂಢಮಾಸ್ತೇ ಬ್ರಹ್ಮನ್ಸುದುರ್ಲಭಂ ॥ ೪ ॥

ತೇಷು ಯತ್ಸಾರಭೂತಂ ಚ ಶ್ರೋತುಂ ಕಿಂ ವಾ ತ್ವಮಿಚ್ಛಸಿ ।
ತನ್ಮೇ ಬ್ರೂಹಿ ಮಹಾಭಾಗ ಪಶ್ಚಾದ್ವಕ್ಷ್ಯಾಮಿ ತತ್ಪುನಃ ॥ ೫ ॥

॥ ನಾರದ ಉವಾಚ ॥

ಸ್ವಾಹಾ ದೇವಹವಿರ್ದಾನೇ ಪ್ರಶಸ್ತಾ ಸರ್ವಕರ್ಮಸು ।
ಪಿತೃದಾನೇ ಸ್ವಧಾ ಶಸ್ತಾ ದಕ್ಷಿಣಾ ಸರ್ವತೋ ವರಾ ॥ ೬ ॥

---

೩. ಈಗ, ಸಕಲರಿಗೂ ಉಪಯೋಗಕರವಾಗಿಯೂ, ಇತರ ಪುರಾಣಗಳಲ್ಲಿ ತಿಳಿಯದೆ ವೇದದಲ್ಲಿ ಮಾತ್ರ ಉಕ್ತವಾಗಿಯೂ, ಧರ್ಮಪ್ರತಿಪಾದಕವಾಗಿಯೂ ಇರುವ ಮತ್ತೆ ಯಾವುದಾದರೂ ಒಂದು ಉಪಾಖ್ಯಾನವು ಅತಿ ಗೋಪ್ಯವಾಗಿದ್ದರೂ ನನಗಾಗಿ ದಯಮಾಡಿ ಹೇಳು.

೪_೫. ನಾರಾಯಣ:—ಎಲೈ ಬ್ರಾಹ್ಮಣ ಶ್ರೇಷ್ಠನೇ, ಪುರಾಣಗಳಿಂದ ತಿಳಿಯದೆ ವೇದಗಲ್ಲಿ ಮಾತ್ರ ಗೂಢವಾಗಿ ಸರ್ವಸುಲಭವಲ್ಲದಿರುವ ಉಪಾಖ್ಯಾನಗಳು ಅಗಣಿತವಾಗಿರುವುದರಿಂದ ಅವುಗಳಲ್ಲಿ ಸಾರಭೂತವಾದ ಯಾವ ಉಪಾಖ್ಯಾನವನ್ನು ನೀನು ಕೇಳಬಯಸುವೆ ಎಂಬುದನ್ನು ತಿಳಿಸಿದರೆ, ಅನಂತರ ನಾನು ಅದನ್ನು ವಿವರಿಸುವೆನು.

೬. ನಾರದ :—ದೇವತೆಗಳಿಗೆ ಹವಿರ್ದಾನಮಾಡುವಾಗ ಸ್ವಾಹಾದೇವಿಯು ಪ್ರಖ್ಯಾತಳಾಗಿರುವಳು. ಪಿತೃಗಳಿಗೆ ಕವ್ಯದಾನ ಮಾಡುವಾಗ ಸ್ವಧಾದೇವಿಯೂ, ದಕ್ಷಿಣಾದೇವಿಯೂ ಸರ್ವಕಾಲದಲ್ಲಿಯೂ, ಪ್ರಥಿತರಾಗಿರುವರು.

ಏತಾಸಾಂ ಚರಿತಂ ಜನ್ಮ ಫಲಂ ಪ್ರಾಧಾನ್ಯಮೇವ ಚ ।
ಶ್ರೋತುಮಿಚ್ಛಾಮಿ ತೇ ವಕ್ತ್ರಾದ್ವದ ವೇದವಿದಾಂ ವರ ॥ ೭ ॥

॥ ಸೌತಿರುವಾಚ ॥

ನಾರದಸ್ಯ ವಚಃ ಶ್ರುತ್ವಾ ಪ್ರಹಸ್ಯ ಮುನಿಪುಂಗವಃ ।
ಕಥಾಂ ಕಥಿತುಮಾರೇಭೇ ಪುರಾಣೋಕ್ತಾಂ ಪುರಾತನೀಂ ॥ ೮ ॥

॥ ಶ್ರೀ ನಾರಾಯಣ ಉವಾಚ ॥

ಸೃಷ್ಟೇಃ ಪ್ರಥಮತೋ ದೇವಾಶ್ಚಾಹಾರಾರ್ಥಂ ಯಯುಃ ಪುರಾ ।
ಬ್ರಹ್ಮಲೋಕೇ ಬ್ರಹ್ಮಸಭಾಮಗಮ್ಯಾಂ ಸುಮನೋಹರಾಂ ॥ ೯ ॥

ಗತ್ವಾ ನಿವೇದನಂ ಚಕ್ರುರ್ಮುನೇ ತ್ವಾಹಾರಹೇತುಕಂ ।
ಬ್ರಹ್ಮಾ ಶ್ರುತ್ವಾ ಪ್ರತಿಜ್ಞಾಯ ಸಿಷೇವೇ ಶ್ರೀಹರೇಃ ಪದಂ ॥ ೧೦ ॥

---

೭. ಈ ದೇವಿಯರ ಜನ್ಮಾದಿ ಚರಿತ್ರೆ, ಅದರ ಫಲ, ಅದರೊಳಗಿನ ಮುಖ್ಯಾಮುಖ್ಯತೆ ಮುಂತಾದ ವಿಷಯವನ್ನು ನಿನ್ನ ಬಾಯಿನಿಂದ ನಾನು ಕೇಳ ಬಯಸುವುದರಿಂದ ವೇದಜ್ಞನಾದ ನೀನು ವಿಸ್ತರಿಸಿ ಹೇಳು.

೮. ಸೂತಪುತ್ರ:—ನಾರದನ ನುಡಿಯನ್ನು ಕೇಳಿ ಮುನಿಶ್ರೇಷ್ಠನಾದ ನಾರಾಯಣನು ನಸುನಕ್ಕು ಅತಿ ಪುರಾತನವಾದ ಉಪಾಖ್ಯಾನವನ್ನು ಹೇಳ ಲಾರಂಭಿಸಿದನು.

೯. ಶ್ರೀ ನಾರಾಯಣ :—ಹಿಂದೆ ಸೃಷ್ಟಿಯ ಆದಿಯಲ್ಲಿ ದೇವತೆಗಳೆಲ್ಲರೂ ಆಹಾರಾರ್ಥವಾಗಿ ಬ್ರಹ್ಮಲೋಕದಲ್ಲಿರುವ ಸರ್ವರಿಗೂ ಅಗಮ್ಯವೂ, ಅತಿ ಮನೋ ಹರವೂ ಆದ ಬ್ರಹ್ಮಸಭೆಗೆ ತೆರಳಿದರು.

೧೦. ಅಲ್ಲಿಗೆ ಹೋಗಿ ತಾವು ಆಹಾರದ ಸಲುವಾಗಿ ಬಂದಿರುವುದನ್ನು ಬ್ರಹ್ಮನಿಗೆ ವಿಜ್ಞಾಪಿಸಿದರು. ಅದನ್ನು ಕೇಳಿದ ಬ್ರಹ್ಮನು ಅವರಿಗೆ ಅಭಯ ವಚನ ವಿತ್ತು ಅವರಿಗಾಗಿ ಶ್ರೀಹರಿಯನ್ನು ಸೇವಿಸಿದನು.

ಯಜ್ಞರೂಪೋ ಹಿ ಭಗವಾನ್ ಕಲಯಾ ಚ ಬಭೂವ ಸಃ ।
ಯಜ್ಞೇ ಯದ್ಯದ್ಧವಿರ್ದಾನಂ ದತ್ತಂ ತೇಭ್ಯಶ್ಚ ವೇಧಸಾ ॥ ೧೧ ॥

ಹವಿರ್ದದಾತಿ ವಿಪ್ರಾಶ್ಚ ಭಕ್ತ್ಯಾ ಚ ಕ್ಷತ್ರಿಯಾದಯಃ ।
ಸುರಾ ನೈವ ಪ್ರಾಪ್ನುವಂತಿ ತದ್ದಾನಂ ಮುನಿಪುಂಗವ ॥ ೧೨ ॥

ದೇವಾ ವಿಷಣ್ಣಾಸ್ತೇ ಸರ್ವೇ ತತ್ಸಭಾಂ ಚ ಪುನರ್ಯಯುಃ ।
ಗತ್ವಾ ನಿವೇದನಂ ಚಕ್ರುರಾಹಾರಾಭಾವಹೇತುಕಂ ॥ ೧೩ ॥

ಬ್ರಹ್ಮಾ ಶ್ರುತ್ವಾ ತು ಮನಸಾ ಶ್ರೀಕೃಷ್ಣಂಶರಣಂ ಯಯೌ ।
ಪ್ರಕೃತಿಂ ಪೂಜಯಾಮಾಸ ಧ್ಯಾಯನ್ನೇವ ತದಾಜ್ಞಯಾ ॥ ೧೪ ॥

ಪ್ರಕೃತಿಃ ಕಲಯಾ ಚೈವ ಸರ್ವಶಕ್ತಿಸ್ವರೂಪಿಣೀ ।
ಬಭೂವ ದಾಹಿಕಾಶಕ್ತಿರಗ್ನೇಃ ಸ್ವಾಹಾ ಸ್ವರೂಪಿಣೀ ॥ ೧೫ ॥

---

೧೧. ಆಗ ಭಗವಂತನಾದ ಶ್ರೀಹರಿಯು, ತನ್ನದೊಂದು ಕಲೆಯಿಂದ ಯಜ್ಞಪುರುಷನಾಗಿ ಅವತರಿಸಿದನು. ಆಗ ಬ್ರಹ್ಮನು ಯಜ್ಞದ ಹವಿಸ್ಸನ್ನೆಲ್ಲಾ ಆ ದೇವತೆಗಳಿಗೆ ಸ್ವೀಕರಿಸುವಂತೆ ಹೇಳಿದನು.

೧೨. ಆದರೂ ಬ್ರಾಹ್ಮಣರು ಮತ್ತು ಕ್ಷತ್ರಿಯರು ಭಕ್ತಿಯಿಂದರ್ಪಿಸುತ್ತಿದ್ದ ಹವಿಸ್ಸನ್ನು ದೇವತೆಗಳು ಹೊಂದುತ್ತಲೇ ಇರಲಿಲ್ಲ.

೧೩. ಆಗ ಪುನಃ ದೇವತೆಗಳೆಲ್ಲರೂ ದುಃಖಿತರಾಗಿ ಬ್ರಹ್ಮನ ಸಭೆಗೆ ಬಂದು ಮೊದಲಿನಂತೆಯೇ ತಮಗೆ ಆಹಾರವು ಸಿಕ್ಕದಿರುವುದನ್ನು ವಿಜ್ಞಾಪಿಸಿಕೊಂಡರು.

೧೪. ಅದನ್ನು ಕೇಳಿದ ಬ್ರಹ್ಮನು ಮನಸ್ಸಿನಲ್ಲಿಯೇ ಶ್ರೀಕೃಷ್ಣನನ್ನು ಧ್ಯಾನಿಸಿ ಮರೆಹೊಕ್ಕನು. ಮತ್ತು ಶ್ರೀಕೃಷ್ಣನ ಅನುಜ್ಞೆಯಂತೆ ಪ್ರಕೃತಿಯನ್ನು ಧ್ಯಾನಿಸಿ ಪೂಜಿಸಿದನು.

೧೫. ಸರ್ವಶಕ್ತಿಸ್ವರೂಪಿಣಿಯಾದ ಪ್ರಕೃತಿಯು ತನ್ನದೊಂದು ಕಲೆಯಿಂದ ಅಗ್ನಿಯ ದಾಹಶಕ್ತಿಸ್ವರೂಪಳಾಗಿ ಸ್ವಾಹಾ ಎಂಬ ಹೆಸರಾಂತಳು.

ಗ್ರೀಷ್ಮಮಧ್ಯಾಹ್ನಮಾರ್ತಾಂಡಪ್ರಭಾಸ್ಯಕ್ಕಾರಕಾರಿಣೀ ।
ಅತೀವ ಸುಂದರೀ ರಾಮಾ ರಮಣೀಯಾ ಮನೋಹರಾ ॥ ೧೬ ॥

ಈಷದ್ಧಾಸ್ಯಪ್ರಸನ್ನಾಸ್ಯಾ ಭಕ್ತಾನುಗ್ರಹಕಾರಿಣೀ ।
ಉವಾಚೇತಿ ವಿಧೇರಗ್ರೇ ಪದ್ಮಯೋನೇ ವರಂ ವೃಣು ॥ ೧೭ ॥

ವಿಧಿಸ್ತದ್ವಚನಂ ಶ್ರುತ್ವಾ ಸಂಭ್ರಮಾತ್ಸಮುವಾಚ ತಾಂ ॥ ೧೮ ॥

॥ ಬ್ರಹ್ಮೋವಾಚ ॥

ತ್ವಮಗ್ನೇರ್ದಾಹಿಕಾಶಕ್ತಿರ್ಭವಪತ್ನೀ ಚ ಸುಂದರೀ ।
ದಗ್ಧುಂ ನ ಶಕ್ತಸ್ಸ್ವಹುತಂ ಹುತಾಶಶ್ಚ ತ್ವಯಾ ವಿನಾ ॥ ೧೯ ॥

ತ್ವನ್ನಾಮೋಚ್ಚಾರ್ಯ ಮಂತ್ರಾಂತೇ ಯೋದಾಸ್ಯತಿ ಹವಿರ್ನರಃ ।
ಸುರೇಭ್ಯಸ್ತತ್ಪ್ರಾಪ್ನುವಂತಿ ಸುರಾಃ ಸಾನಂದಪೂರ್ವಕಂ ॥ ೨೦ ॥

೧೬–೧೭. ಗ್ರೀಷ್ಮಋತುವಿನ ಮಧ್ಯಾಹ್ನದ ಚಂಡಸೂರ್ಯನ ತೇಜಸ್ಸನ್ನು ತಿರಸ್ಕರಿಸುವ ಕಾಂತಿಯುಳ್ಳವಳೂ, ಅತ್ಯಂತ ಮನೋಹರಳೂ, ಮಂದಹಾಸದಿಂದ ಪ್ರಸನ್ನವಾದ ಮುಖವುಳ್ಳವಳೂ, ಭಕ್ತರಿಗೆ ಅನುಗ್ರಹದಾಯಕಳೂ ಆದ ಆ ಪ್ರಕೃತಿಯು ಬ್ರಹ್ಮನ ಮುಂದೆ ನಿಂತು, ಪದ್ಮಜನೇ ನಿನಗೆ ಬೇಕಾದ ವರವನ್ನು ಕೇಳಿಕೋ ಎಂದಳು.

೧೮. ಆ ನುಡಿಯನ್ನು ಕೇಳಿ ಬ್ರಹ್ಮನು ಬಹಳ ಸಂಭ್ರಮದಿಂದ ಇಂತು ನುಡಿದನು.

೧೯. ಬ್ರಹ್ಮ:—ನೀನು ಯಜ್ಞಪುರುಷನಿಗೆ ದಾಹಶಕ್ತಿಸ್ವರೂಪಳಾದ ಪತ್ನಿಯಾಗು. ನೀನಿಲ್ಲದಿದ್ದರೆ ಯಜ್ಞಪುರುಷನು ತನ್ನಲ್ಲಿ ಹೋಮಮಾಡಿದ ದ್ರವ್ಯವನ್ನು ಸುಡಲು ಅಶಕ್ತನಾಗುವನು.

೨೦. ಮನುಷ್ಯನು ಪ್ರತಿಯೊಂದು ಮಂತ್ರದ ಕೊನೆಯಲ್ಲೂ 'ಸ್ವಾಹಾ' ಎಂಬ ನಿನ್ನ ಹೆಸರನ್ನು ಹೇಳಿ ದೇವತೆಗಳಿಗೆ ಅರ್ಪಿಸುವ ಹವಿಸ್ಸೆಲ್ಲವನ್ನೂ, ಆಯಾ ದೇವತೆಗಳು ಆನಂದ ಪೂರ್ವಕವಾಗಿ ಸ್ವೀಕರಿಸುವರು.

ಅಗ್ನೇಃ ಸಂಪತ್ಸ್ವರೂಪಾ ಚ ಶ್ರೀರೂಪಾ ಚ ಗೃಹೇಶ್ವರೀ ।
ದೇವಾನಾಂ ಪೂಜಿತಾ ಶಶ್ವನ್ನರಾದೀನಾಂ ಭವಾಂಬಿಕೇ ॥ ೨೧ ॥

ಬ್ರಹ್ಮಣಶ್ಚ ವಚಃ ಶ್ರುತ್ವಾ ಸಾ ವಿಷಣ್ಣಾ ಬಭೂವ ಹ ।
ತಮುವಾಚ ಸ್ವಯಂ ದೇವೀ ಸ್ವಾಭಿಪ್ರಾಯಂ ಸ್ವಯಂಭುವಂ ॥ ೨೨ ॥

॥ ಸ್ವಾಹೋವಾಚ ॥

ಅಹಂ ಕೃಷ್ಣಂ ಭಜಿಷ್ಯಾಮಿ ತಪಸಾ ಸುಚಿರೇಣ ಚ ।
ಬ್ರಹ್ಮಂಸ್ತದನ್ಯದ್ಯತ್ಕಿಂಚಿತ್ಸ್ವಪ್ನವದ್ಭ್ರಮ ಏವ ಚ ॥ ೨೩ ॥

ವಿಧಾತಾ ಜಗತಾಂ ತ್ವಂ ಚ ಶಂಭುರ್ಮೃತ್ಯುಂಜಯಃ ಪ್ರಭುಃ ।
ಬಿಭರ್ತಿ ಶೇಷೋ ವಿಶ್ವಂ ಚ ಧರ್ಮಃ ಸಾಕ್ಷೀ ಚ ದೇಹಿನಾಂ ॥ ೨೪ ॥

ಸರ್ವಾದ್ಯಪೂಜ್ಯೋ ದೇವಾನಾಂ ಗಣೇಷು ಚ ಗಣೇಶ್ವರಃ ।
ಪ್ರಕೃತಿಃ ಸರ್ವಸೂಸ್ಸರ್ವೇ ಪೂಜಿತಾ ಯತ್ಪ್ರಸಾದತಃ ॥ ೨೫ ॥

---

೨೧. ಎಲೌ ಅಂಬಿಕೆಯೇ, ನೀನು ಅಗ್ನಿಯ ಸಂಪತ್ಸ್ವರೂಪಳೂ, ಗೃಹೇಶ್ವರಿಯೂ ಆಗಿ ದೇವತೆಗಳು ಮತ್ತು ಮನುಜರಿಂದ ಪೂಜೆ ಹೊಂದುವವಳಾಗು.

೨೨. ಬ್ರಹ್ಮನ ಮಾತನ್ನು ಕೇಳಿ ವಿಷಣ್ಣವದನಳಾದ ಪ್ರಕೃತಿಯು, ಅವನನ್ನು ಕುರಿತು ತನ್ನ ಮನೋಭಿಪ್ರಾಯವನ್ನು ವಿವರಿಸಿದಳು.

೨೩ ಸ್ವಾಹಾದೇವಿ :—ಬ್ರಹ್ಮದೇವನೇ, ನಾನು ಬಹುಕಾಲ ತಪಸ್ಸುಮಾಡಿ ಶ್ರೀಕೃಷ್ಣನನ್ನು ಹೊಂದಲು ಯತ್ನಿಸುವೆನು. ಅವನನ್ನುಳಿದ ಎಲ್ಲ ವಸ್ತುಗಳೂ ಸ್ವಪ್ನದಲ್ಲಿ ಕಂಡ ವಸ್ತುಗಳಂತೆ ನಶ್ವರವಾದವು.

೨೪–೨೬. ಜಗತ್ಸೃಷ್ಟಿಕರ್ತನಾದ ನೀನೂ, ಮೃತ್ಯುವನ್ನು ಜಯಿಸಿರುವ ಶಂಭುವೂ, ಪ್ರಪಂಚವನ್ನು ಧರಿಸಿರುವ ಆದಿಶೇಷನೂ, ದೇಹಿಗಳ ಕರ್ಮಸಾಕ್ಷಿಯಾದ ಧರ್ಮಪುರುಷನೂ, ಎಲ್ಲ ದೇವತೆಗಳಿಗಿಂತಲೂ ಮೊದಲು ಪೂಜೆಹೊಂದುವ ಗಣೇಶ್ವರನೂ, ಸರ್ವಮಾತೆಯಾದ ಪ್ರಕೃತಿಯೂ ಯಾರ ಅನುಗ್ರಹದಿಂದ ಪೂಜಿತರಾಗು

ಋಷಯೋ ಮುನಯಶ್ಚೈವ ಪೂಜಿತಾ ಯಂ ನಿಷೇವ್ಯ ಚ |
ತತ್ಪಾದಪದ್ಮಂ ಬ್ರಹ್ಮೈಕ್ಯಭಾವಾದ್ವೈ ಚಿಂತಯಾಮ್ಯಹಂ || ೨೬ ||

ಪದ್ಮಾಸ್ಯಾ ಪದ್ಮಮಿತ್ಯುಕ್ತ್ವಾ ಪದ್ಮಲಾಭಾನುಸಾರತಃ |
ಜಗಾಮ ತಪಸೇ ಪಾದ್ಮೇ ಪದ್ಮಾದೀಶಸ್ಯ ಪದ್ಮಜಾ || ೨೭ ||

ತೆಪಸ್ತೇಪೇ ಲಕ್ಷವರ್ಷಮೇಕಪಾದೇನ ಪದ್ಮಜಾ |
ತದಾ ದದರ್ಶ ಶ್ರೀಕೃಷ್ಣಂ ನಿರ್ಗುಣಂ ಪ್ರಕೃತೇಃ ಪರಂ || ೨೮ ||

ಅತೀವ ಕಮನೀಯಂ ಚ ರೂಪಂ ದೃಷ್ಟ್ವಾ ಚ ಸುಂದರೀ |
ಮೂರ್ಛಾಂ ಸಂಪ್ರಾಪ ಕಾಮೇನ ಕಾಮೇಶಸ್ಯ ಚ ಕಾಮುಕೀ || ೨೯ ||

ವಿಜ್ಞಾಯ ತದಭಿಪ್ರಾಯಂ ಸರ್ವಜ್ಞಸ್ತಾಮುವಾಚ ಸಃ |
ಸ್ವಕ್ರೋಡೇ ಚ ಸಮುತ್ಥಾಪ್ಯ ಕ್ಷೀಣಾಂಗೀಂ ತಪಸಾ ಚಿರಂ || ೩೦ ||

ವರೋ, ಅಂಥ ಪರಮಾತ್ಮನ ಪಾದಪದ್ಮಗಳನ್ನು ಸೋಽಹಂ ಭಾವದಿಂದ ನಾನು ಧ್ಯಾನಮಾಡುವೆನು.

೨೭. ಕಮಲಜಳೂ, ಕಮಲಮುಖಿಯೂ ಆದ ಆ ದೇವಿಯು ಕಮಲಸಂಭವನನ್ನು ಕುರಿತು ಹೀಗೆ ಹೇಳಿ, ಕಮಲಪತ್ರದಂತೆ ನಿರ್ಲಿಪ್ತನಾದ ಆ ಪರಮಾತ್ಮನನ್ನು ಹೊಂದಲು, ಕಮಲವನದಲ್ಲಿ ತಪಸ್ಸಿಗೆ ಹೋದಳು.

೨೮. ಅಲ್ಲಿ ಒಂಟಿಕಾಲಿನಲ್ಲಿ ನಿಂತು ಒಂದುಲಕ್ಷವರ್ಷ ತಪಸ್ಸು ಮಾಡಿದಳು. ಅನಂತರ ತ್ರಿಗುಣಾತೀತನೂ, ಪ್ರಕೃತಿಗಿಂತ ಮೇಲಾದವನೂ ಆದ ಶ್ರೀಕೃಷ್ಣನ ದರ್ಶನವನ್ನು ಪಡೆದಳು.

೨೯. ಸುಂದರಿಯೂ, ಕಾಮುಕಿಯೂ ಆದ ಆ ದೇವಿಯು ಕಾಮಪಿತನ (ಶ್ರೀಕೃಷ್ಣನ) ಮನೋಹರವಾದ ಸುಂದರರೂಪವನ್ನು ನೋಡಿ ಕಾಮಾಸಕ್ತಳಾಗಿ ಮೂರ್ಛೆಹೊಂದಿದಳು.

೩೦. ಸರ್ವಜ್ಞನಾದ ಶ್ರೀಕೃಷ್ಣನು ಆಕೆಯ ಅಭಿಪ್ರಾಯವನ್ನು ತಿಳಿದು, ದೀರ್ಘತಪಸ್ಸಿನಿಂದ ಕೃಶಳಾಗಿದ್ದ ಆಕೆಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಹೀಗೆ ಹೇಳಿದನು.

॥ ಶ್ರೀಕೃಷ್ಣ ಉವಾಚ ॥

ವಾರಾಹೇ ಚ ತ್ವಮಂಶೇನ ಮಮ ಪತ್ನೀ ಭವಿಷ್ಯಸಿ ।
ನಾಮ್ನಾ ನಾಗ್ನಜಿತೀ ಕನ್ಯಾ ಕಾಂತೇ ನಗ್ನಜಿತಸ್ಯ ಚ ॥ ೩೧ ॥

ಅಧುನಾಗ್ನೇರ್ದಾಹಿಕಾ ತ್ವಂ ಭವ ಪತ್ನೀ ಚ ಭಾವಿನಿ ।
ಮಂತ್ರಾಂಗರೂಪಾ ಪೂತಾ ಚ ಮತ್ಪ್ರಸಾದಾದ್ಭವಿಷ್ಯಸಿ ॥ ೩೨ ॥

ವಹ್ನಿಸ್ತ್ವಾಂ ಭಕ್ತಿಭಾವೇನ ಸಂಪೂಜ್ಯ ಚ ಗೃಹೇಶ್ವರೀಂ ।
ರಮಿಷ್ಯತೇ ತ್ವಯಾ ಸಾರ್ಧಂ ರಾಮಯಾ ರಮಣೀಯಯಾ ॥ ೩೩ ॥

ಇತ್ಯುಕ್ತ್ವಾಂತರ್ದಧೇ ದೇವೋ ದೇವೀಮಾಶ್ವಾಸ್ಯ ನಾರದ ।
ತತ್ರಾಜಗಾಮ ಸಂತ್ರಸ್ತೋ ವಹ್ನಿರ್ಬ್ರಹ್ಮನಿದೇಶತಃ ॥ ೩೪ ॥

ಧ್ಯಾನೈಶ್ಚ ಸಾಮವೇದೋಕ್ತೈರ್ಧ್ಯಾತ್ವಾ ತಾಂ ಜಗದಂಬಿಕಾಂ ।
ಸಂಪೂಜ್ಯ ಪರಿತುಷ್ಟಾವ ಪಾಣಿಂ ಜಗ್ರಾಹ ಮಂತ್ರತಃ ॥ ೩೫ ॥

---

೩೧. ಶ್ರೀಕೃಷ್ಣ ;—ಪ್ರಿಯಳೇ, ನೀನು ವಾರಾಹಕಲ್ಪದಲ್ಲಿ ನಿನ್ನದೊಂದಂಶದಿಂದ ನಗ್ನಜಿತನೆಂಬುವನಿಗೆ ಮಗಳಾಗಿ ಹುಟ್ಟಿ ನಾಗ್ನಜಿತಿ ಎಂಬ ಹೆಸರಿನಿಂದ ನನ್ನ ಪತ್ನಿಯಾಗುವೆ.

೩೨. ಈಗ ಅಗ್ನಿಯ ದಾಹಶಕ್ತಿಸ್ವರೂಪಳಾಗಿ ಅಗ್ನಿಪತ್ನಿಯಾಗು. ನನ್ನ ಅನುಗ್ರಹದಿಂದ ಮಂತ್ರಕ್ಕೆ ಅಂಗರೂಪಳೂ, ಪವಿತ್ರಳೂ ಆಗುವೆ.

೩೩. ಅಗ್ನಿದೇವನೂ ಕೂಡ ಗೃಹೇಶ್ವರಿಯಾದ ನಿನ್ನನ್ನು ಭಕ್ತಿಭಾವದಿಂದ ಪೂಜಿಸಿ ರಮಣೀಯಳಾದ ನಿನ್ನೊಡನೆ ರಮಿಸಿಕೊಂಡಿರುವನು.

೩೪. ಶ್ರೀಕೃಷ್ಣಪರಮಾತ್ಮನು ಆ ದೇವಿಯನ್ನು ಈ ರೀತಿಯಾಗಿ ಸಮಾಧಾನಗೊಳಿಸಿ ಅಂತರ್ಧಾನಹೊಂದಿದನು. ಬ್ರಹ್ಮನ ಅನುಜ್ಞೆಯಂತೆ ಅಗ್ನಿದೇವನು ಅಲ್ಲಿಗೆ ಭಯಭೀತನಾಗಿ ಬಂದನು.

೩೫. ಜಗದಂಬಿಕೆಯಾದ ಆ ದೇವಿಯನ್ನು ಸಾಮವೇದೋಕ್ತವಾದ ಧ್ಯಾನಸ್ತೋತ್ರದಿಂದ ಧ್ಯಾನಿಸಿ, ಪೂಜಾಸ್ತೋತ್ರಗಳಿಂದ ತೃಪ್ತಿಗೊಳಿಸಿ ಮಂತ್ರಪೂರ್ವಕವಾಗಿ ಆಕೆಯ ಪಾಣಿಗ್ರಹಣಮಾಡಿದನು.

ತದಾ ದಿವ್ಯಂ ವರ್ಷಶತಂ ಸ ರೇಮೇ ರಾಮಯಾ ಸಹ ।
ಅತೀವ ನಿರ್ಜನೇ ರಮ್ಯೇ ಸಂಭೋಗಸುಖದೇ ಸದಾ ॥ ೩೬ ॥

ಬಭೂವ ಗರ್ಭಂ ತಸ್ಯಾಶ್ಚ ಹುತಾಶಸ್ಯೈವ ತೇಜಸಾ ।
ತದ್ದಧಾರ ಚ ಸಾ ದೇವೀ ದಿವ್ಯಂ ದ್ವಾದಶವತ್ಸರಂ ॥ ೩೭ ॥

ತತಃ ಸುಷಾವ ಪುತ್ರಾಂಶ್ಚ ರಮಣೀಯಾನ್ಮನೋಹರಾನ್ ।
ದಕ್ಷಿಣಾಗ್ನಿಂ ಗಾರ್ಹಪತ್ಯಾಹವನೀಯೌ ಕ್ರಮೇಣ ಚ ॥ ೩೮ ॥

ಋಷಯೋ ಮುನಯಶ್ಚೈವ ಬ್ರಾಹ್ಮಣಾಃ ಕ್ಷತ್ರಿಯಾದಯಃ ।
ಸ್ವಾಹಾಂತಂ ಮಂತ್ರಮುಚ್ಚಾರ್ಯ ಹವಿರ್ದದತಿ ನಿತ್ಯಶಃ ॥ ೩೯ ॥

ಸ್ವಾಹಾಯುಕ್ತಂ ಚ ಮಂತ್ರಂ ಚ ಯೋ ಗೃಹ್ಣಾತಿ ಪ್ರಶಸ್ತಕಂ ।
ಸರ್ವಸಿದ್ಧಿರ್ಭವೇತ್ತಸ್ಯ ಬ್ರಹ್ಮನ್ಗ್ರಹಣಮಾತ್ರತಃ ॥ ೪೦ ॥

---

೩೬. ಅನಂತರ ನೂರುವರ್ಷಗಳ ಕಾಲ ನಿರ್ಜನವಾದುದರಿಂದ ಸ್ವೇಚ್ಛಾ ಸಂಭೋಗಕ್ಕೆ ಅವಕಾಶವಿರುವ ರಮ್ಯವಾದ ವನದಲ್ಲಿ ಆ ದೇವಿಯೊಡನೆ ರಮಿಸಿದನು.

೩೭. ಅಗ್ನಿದೇವನ ತೇಜಸ್ಸಿನಿಂದ ಆಕೆಯು ಗರ್ಭವತಿಯಾದಳು. ಆ ಗರ್ಭವನ್ನು ದೇವಿಯು ಹನ್ನೆರಡು ವರ್ಷಗಳ ಕಾಲ ಧರಿಸಿದ್ದಳು.

೩೮. ಅನಂತರ ಅತಿಮನೋಹರವಾದ ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಎಂಬ ಮೂವರು ಪುತ್ರರನ್ನು ಪ್ರಸವಿಸಿದಳು.

೩೯. ಮನ್ವಾದಿಮಹರ್ಷಿಗಳೂ, ಬ್ರಾಹ್ಮಣಕ್ಷತ್ರಿಯಾದಿಗಳೂ, ಪ್ರತಿಮಂತ್ರದ ಕೊನೆಯಲ್ಲೂ 'ಸ್ವಾಹಾ' ಎಂದು ಉಚ್ಚರಿಸಿ ಅಗ್ನಿಗೆ ಹವಿಸ್ಸನ್ನು ಅರ್ಪಿಸುವರು.

೪೦. ಸ್ವಾಹಾಸಹಿತವಾದ ಮಂತ್ರೋಪದೇಶವನ್ನು ಸ್ವೀಕರಿಸುವವರಿಗೆ, ಉಪದೇಶ ಗ್ರಹಣಮಾತ್ರದಿಂದಲೇ ಸಕಲೇಷ್ಟಾರ್ಥಸಿದ್ಧಿಯೂ ಆಗುವುದು.

ವಿಷಹೀನೋ ಯಥಾ ಸರ್ಪೋ ವೇದಹೀನೋ ಯಥಾ ದ್ವಿಜಃ ।
ಪತಿಸೇವಾ ವಿಹೀನಾ ಸ್ತ್ರೀ ವಿದ್ಯಾಹೀನೋ ಯಥಾ ನರಃ ॥ ೪೧ ॥

ಫಲಶಾಖಾವಿಹೀನಶ್ಚ ಯಥಾ ವೃಕ್ಷೋ ಹಿ ನಿಂದಿತಃ ।
ಸ್ವಾಹಾಹೀನಸ್ತಥಾ ಮಂತ್ರೋ ನ ದ್ರುತಂ ಫಲದಾಯಕಃ ॥ ೪೨ ॥

ಪರಿತುಷ್ಟಾ ದ್ವಿಜಾಃ ಸರ್ವೇ ದೇವಾಃ ಸಂಪ್ರಾಪುರಾಹುತಿಂ ।
ಸ್ವಾಹಾಂತೇನೈವ ಮಂತ್ರೇಣ ಸಫಲಂ ಸರ್ವಕರ್ಮ ಚ ॥ ೪೩ ॥

ಇತ್ಯೇವಂ ವರ್ಣಿತಂ ಸರ್ವಂ ಸ್ವಾಹೋಪಾಖ್ಯಾನಮುತ್ತಮಂ ।
ಸುಖದಂ ಮೋಕ್ಷದಂ ಸಾರಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೪ ॥

॥ ನಾರದ ಉವಾಚ ॥

ಸ್ವಾಹಾಪೂಜಾವಿಧಾನಂ ಚ ಧ್ಯಾನಂ ಸ್ತೋತ್ರಂ ಮುನೀಶ್ವರ ।
ಸಂಪೂಜ್ಯ ವಹ್ನಿಸ್ತುಷ್ಟಾವ ಯೇನ ತಾಂ ವದ ಮೇ ಪ್ರಭೋ ॥ ೪೫ ॥

೪೧-೪೨. ವಿಷವಿಲ್ಲದ ಹಾವಿನಂತೆಯೂ, ವೇದಾಧ್ಯಯನ ಮಾಡದ ಬ್ರಾಹ್ಮಣನಂತೆಯೂ, ಪತಿಸೇವೆಮಾಡದಿರುವ ಹೆಂಗಸಿನಂತೆಯೂ, ವಿದ್ಯಾವಿಹೀನನಾದ ಮನುಷ್ಯನಂತೆಯೂ, ಹಣ್ಣುಕಾಯಿಗಳಿಲ್ಲದ ಮರದಂತೆಯೂ, ಸ್ವಾಹಾರಹಿತವಾದ ಮಂತ್ರವು ನಿಂದಾರ್ಹವಾಗಿ ಜಾಗ್ರತೆ ಫಲವನ್ನು ಕೊಡುವುದಿಲ್ಲ.

೪೩. ಆಗ ಬ್ರಾಹ್ಮಣರೆಲ್ಲರೂ ಸಂತುಷ್ಟರಾದರು. ದೇವತೆಗಳಿಗೆ ಅರ್ಪಿಸಿದ ಆಹುತಿಯು ಲಭಿಸಿತು. ಸಕಲಕರ್ಮಗಳೂ ಸ್ವಾಹಾಂತವಾದ ಮಂತ್ರೋಚ್ಚಾರಣೆಯಿಂದಲೇ ಸಫಲವಾಗುವುದು.

೪೪. ಸುಖಕರವೂ, ಮೋಕ್ಷದಾಯಕವೂ ಆದ, ಸ್ವಾಹಾದೇವಿಯ ಉಪಾಖ್ಯಾನವನ್ನು ವಿವರಿಸಿದೆನು. ಇನ್ನೇನನ್ನು ಕೇಳಲು ನೀನು ಬಯಸುವೆ.

೪೫. ನಾರದ:—ಅಗ್ನಿದೇವನು ಸ್ವಾಹಾದೇವಿಯನ್ನು ಯಾವ ಮಂತ್ರ ಸ್ತೋತ್ರಗಳಿಂದ ಪೂಜಿಸಿ ನುತಿಸಿದನು ಎಂಬುದನ್ನು ನನಗೆ ವಿಸ್ತರಿಸಿ ಹೇಳು.

॥ ನಾರಾಯಣ ಉವಾಚ ॥

ಧ್ಯಾನಂ ಚ ಸಾಮವೇದೋಕ್ತಂ ಸ್ತೋತ್ರಂ ಪೂಜಾವಿಧಾನಕಂ ।
ವದಾಮಿ ಶ್ರೂಯತಾಂ ಬ್ರಹ್ಮನ್ಸಾವಧಾನಂ ನಿಶಾಮಯ　　॥ ೪೬ ॥

ಸರ್ವಯಜ್ಞಾರಂಭಕಾಲೇ ಶಾಲಗ್ರಾಮೇ ಘಟೇಽಥವಾ ।
ಸ್ವಾಹಾಂ ಸಂಪೂಜ್ಯ ಯತ್ನೇನ ಯಜ್ಞಂ ಕುರ್ಯಾತ್ಫಲಾಪ್ತಯೇ ॥ ೪೭ ॥

ಸ್ವಾಹಾಂ ಮಂತ್ರಾಂಗಪೂತಾಂ ಚ ಮಂತ್ರಸಿದ್ಧಿಸ್ವರೂಪಿಣೀಂ ।
ಸಿದ್ಧಾಂ ಚ ಸಿದ್ಧಿದಾಂ ನೃಣಾಂ ಕರ್ಮಣಾಂ ಫಲದಾಂ ಭಜೇ　　॥ ೪೮ ॥

ಇತಿ ಧ್ಯಾತ್ವಾ ಚ ಮೂಲೇನ ದತ್ವಾ ಪಾದ್ಯಾದಿಕಂ ನರಃ ।
ಸರ್ವಸಿದ್ಧಿಂ ಲಭೇತ್‌ಸ್ತುತ್ವಾ ಮೂಲಂ ಸ್ತೋತ್ರಂ ಮುನೇ ಶ್ರುಣು ॥ ೪೯ ॥

---

೪೬. ನಾರಾಯಣ :—ಸ್ವಾಹಾದೇವಿಯ ಧ್ಯಾನ, ಸ್ತೋತ್ರ ಮತ್ತು ಪೂಜಾ ಕ್ರಮವನ್ನು ಸಾಮವೇದೋಕ್ತಪ್ರಕಾರವಾಗಿ ಹೇಳುವೆನು. ಸಾವಧಾನದಿಂದ ಅವಧರಿಸು.

೪೭. ಯಾವ ಯಜ್ಞವನ್ನಾರಂಭಿಸಬೇಕಾದರೂ, ಮೊದಲು ಸಾಲಿಗ್ರಾಮದಲ್ಲಾಗಲೀ, ಒಂದು ಕಲಶದಲ್ಲಾಗಲೀ ಸ್ವಾಹಾದೇವಿಯನ್ನು ಆವಾಹನೆಮಾಡಿ ಪೂಜಿಸಿದರೆ ಫಲವು ನಿಶ್ಚಿತವಾಗಿಯೂ ಲಭಿಸುವುದು.

೪೮. 'ಮಂತ್ರಕ್ಕೆ ಅಂಗರೂಪಳಾಗಿ ಪವಿತ್ರಳಾದವಳೂ, ಮಂತ್ರಸಿದ್ಧಿಸ್ವರೂಪಿಣಿಯೂ, ಸಿದ್ಧಸ್ವರೂಪಳೂ, ಮನುಜರ ಕರ್ಮಗಳಿಗೆ ಫಲದಾಯಕಳೂ ಆದ ಸ್ವಾಹಾದೇವಿಯನ್ನು ಭಜಿಸುವೆನು.'

೪೯. ಈ ರೀತಿಯಾಗಿ ಧ್ಯಾನಿಸಿ ಮೂಲಮಂತ್ರೋಚ್ಚಾರಣಪೂರ್ವಕವಾಗಿ ಆಸನ ಪಾದ್ಯಾದಿಗಳನ್ನು ಸಮರ್ಪಿಸಿ ಮನುಷ್ಯನು ಸಕಲ ಸಿದ್ಧಿಗಳನ್ನೂ ಪಡೆಯುವನು.

ಓಂ ಹ್ರೀಂ ಶ್ರೀಂ ವಹ್ನಿಜಾಯಾಯೈ ದೇವ್ಯೈ ಸ್ವಾಹೇತ್ಯನೇನ ಚ ।
ಯಃ ಪೂಜಯೇಚ್ಚ ತಾಂ ದೇವೀಂ ಸರ್ವೇಷ್ಟಂ ಲಭತೇ ಧ್ರುವಂ ॥ ೫೦ ॥

॥ ವಹ್ನಿರುವಾಚ ॥

ಸ್ವಾಹಾದ್ಯಾ ಪ್ರಕೃತೇರಂಶಾ ಮಂತ್ರತಂತ್ರಾಂಗರೂಪಿಣೀ ।
ಮಂತ್ರಾಣಾಂ ಫಲದಾತ್ರೀ ಚ ಧಾತ್ರೀ ಚ ಜಗತಾಂ ಸತೀ ॥ ೫೧ ॥

ಸಿದ್ಧಿಸ್ವರೂಪಾ ಸಿದ್ಧಾ ಚ ಸಿದ್ಧಿದಾ ಸರ್ವದಾ ನೃಣಾಂ ।
ಹುತಾಶದಾಹಿಕಾಶಕ್ತಿಸ್ತತ್ಪ್ರಾಣಾಧಿಕರೂಪಿಣೀ ॥ ೫೨ ॥

ಸಂಸಾರಸಾರರೂಪಾ ಚ ಘೋರಸಂಸಾರತಾರಿಣೀ ।
ದೇವಜೀವನರೂಪಾ ಚ ದೇವಪೋಷಣಕಾರಿಣೀ ॥ ೫೩ ॥

ಷೋಡಶೈತಾನಿ ನಾಮಾನಿ ಯಃ ಪಠೇದ್ಭಕ್ತಿಸಂಯುತಃ ।
ಸರ್ವಸಿದ್ಧಿರ್ಭವೇತ್ತಸ್ಯ ಚೇಹಲೋಕೇ ಪರತ್ರ ಚ ॥ ೫೪ ॥

---

೫೦. 'ಓಂ, ಹ್ರೀಂ, ಶ್ರೀಂ, ವಹ್ನಿಜಾಯಾಯೈ ದೇವ್ಯೈ ಸ್ವಾಹಾ' ಎಂಬ ಮೂಲಮಂತ್ರವನ್ನುಚ್ಚರಿಸಿ ದೇವಿಯನ್ನು ಪೂಜಿಸುವ ಮನುಷ್ಯನು ಸಕಲೇಷ್ಟಾರ್ಥವನ್ನೂ ಹೊಂದುವನು.

೫೧-೫೪. ಅಗ್ನಿ:—'ಸ್ವಾಹಾ, ಪ್ರಕೃತ್ಯಂಶಾ, ಮಂತ್ರಾಂಗರೂಪಿಣೀ, ತಂತ್ರಾಂಗರೂಪಿಣೀ, ಮಂತ್ರಫಲದಾತ್ರೀ, ಜಗತಾಂಧಾತ್ರೀ, ಸತೀ, ಸಿದ್ಧಿಸ್ವರೂಪಾ, ಸಿದ್ಧಾ, ಸರ್ವಸಿದ್ಧಿದಾ, ಹುತಾಶದಾಹಿಕಾಶಕ್ತಿಃ, ಅಗ್ನಿಪ್ರಾಣಾಧಿಕರೂಪಿಣೀ, ಸಂಸಾರಸಾರರೂಪಾ, ಘೋರಸಂಸಾರತಾರಿಣೀ, ದೇವಜೀವನರೂಪಾ, ದೇವಪೋಷಣಕಾರಿಣೀ' ಈ ಹದಿನಾರು ದಿವ್ಯನಾಮಗಳನ್ನು ಭಕ್ತಿಪೂರ್ವಕವಾಗಿ ಪಠಿಸುವವರು ಇಹಪರಲೋಕಗಳಲ್ಲಿ ಸಕಲ ಸಿದ್ಧಿಯನ್ನೂ ಪಡೆಯುವರು.

ನಾಂಗಹೀನೋ ಭವೇತ್ತಸ್ಯ ಸರ್ವಕರ್ಮಸು ಶೋಭನಂ ।
ಅಪುತ್ರೋ ಲಭತೇ ಪುತ್ರಮಭಾರ್ಯೋ ಲಭತೇ ಪ್ರಿಯಾಂ ॥ ೫೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಸ್ವಾಹೋಪಾಖ್ಯಾನೇ ಸ್ವಾಹಾ ಜನ್ಮಾದಿಕಥನಂ ನಾಮ ಚತ್ವಾರಿಂಶತ್ತಮೋಽಧ್ಯಾಯಃ

---

೫೫. ಅವನ ಸಕಲ ಕರ್ಮಗಳೂ ಸಾಂಗವಾಗಿ ನೆರವೇರುವುವು. ಪುತ್ರರಿಲ್ಲದವರಿಗೆ ಪುತ್ರರೂ, ಪತ್ನೀರಹಿತರಿಗೆ ಪತ್ನಿಯೂ ಲಭಿಸುವರು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಸ್ವಾಹಾ ದೇವಿಯ ಜನ್ಮಾದಿಗಳ ಕಥನರೂಪವಾದ ನಲವತ್ತನೆಯ ಅಧ್ಯಾಯವು ಮುಗಿದುದು.

ನಲವತ್ತನೆಯ ಅಧ್ಯಾಯದ ಸಾರಾಂಶವು

ಸ್ವಾಹಾ, ಸ್ವಧಾ ಮತ್ತು ದಕ್ಷಿಣಾದೇವಿಯರ ಉಪಾಖ್ಯಾನವನ್ನು ಹೇಳಬೇಕೆಂದು ಕೇಳಿದ ನಾರದ ಮಹರ್ಷಿಗಳನ್ನು ಕುರಿತು ನಾರಾಯಣ ಮಹರ್ಷಿಗಳು ಮೊದಲು ಸ್ವಾಹಾದೇವಿಯ ಉಪಾಖ್ಯಾನವನ್ನು ಈರೀತಿ ತಿಳಿಸಿದರು.

'ದೇವತೆಗಳ ಸೃಷ್ಟಿಯಾದ ನಂತರ ಅವರೆಲ್ಲರೂ ಆಹಾರಕ್ಕಾಗಿ ಶ್ರೀಹರಿಯಲ್ಲಿ ಮೊರೆಯಿಡಲು ಶ್ರೀಹರಿಯು ತನ್ನದೊಂದು ಕಲೆಯಿಂದ ಯಜ್ಞಪುರುಷನಾಗಿಯೂ, ಪ್ರಕೃತಿದೇವಿಯು ತನ್ನದೊಂದು ಕಲೆಯಿಂದ ಸ್ವಾಹಾದೇವಿಯಾಗಿಯೂ ಅವತರಿಸಿದರು. ಅನಂತರ ಮಾನವರು ಸ್ವಾಹಾಂತವಾಗಿ ಅಗ್ನಿಯಲ್ಲಿ ಹೋಮಮಾಡಿದ ಹವಿರ್ದ್ರವ್ಯಗಳು ದೇವತೆಗಳಿಗೆ ಲಭಿಸಿ ದೇವತೆಗಳು ತೃಪ್ತರಾದರು. ಸ್ವಾಹಾದೇವಿಯು ಶ್ರೀಕೃಷ್ಣಪರಮಾತ್ಮನನ್ನು ಕುರಿತು ಲಕ್ಷವರ್ಷಗಳ ಕಾಲ ಅನನ್ಯ ಭಕ್ತಿಯಿಂದ ತಪಸ್ಸುಮಾಡಿ ಅವನ ವರದಿಂದ ಶ್ವೇತವಾರಾಹಕಲ್ಪದಲ್ಲಿ ನಗ್ನಜಿತನ ಮಗಳಾಗಿ ನಾಗ್ನಜಿತಿ ಎಂಬ ಹೆಸರಾಂತು ಶ್ರೀಹರಿಯ ಪತ್ನಿಯಾದಳು. ಯಜ್ಞಪುರುಷನ ಪತ್ನಿಯಾದ ಸ್ವಾಹಾದೇವಿಗೆ 'ದಕ್ಷಿಣಾಗ್ನಿ, ಗಾರ್ಹಪತ್ಯ ಮತ್ತು ಆಹವನೀಯ' ಎಂಬ ಮೂವರು ಪುತ್ರರು ಜನಿಸಿದರು. ಶ್ರುತಿಸ್ಮೃತಿ ಪ್ರತಿಪಾದಿತವಾದ ಈ ಅಗ್ನಿಗಳಲ್ಲಿ ಸ್ವಾಹಾಂತವಾಗಿ ಹೋಮಮಾಡುವ ಮಾನವರ ಸಕಲೇಷ್ಟಾರ್ಥಗಳನ್ನೂ ದೇವತೆಗಳು ಅನುಗ್ರಹಿಸುವರು' ಎಂದು ಹೇಳಿ ಯಜ್ಞಪುರುಷನು ಸ್ವಾಹಾದೇವಿಯನ್ನು ಸ್ತುತಿಸಿದ ಮಂತ್ರಸ್ತೋತ್ರಾದಿಗಳನ್ನು ವಿವರಿಸಿದರು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಏಕಚತ್ವಾರಿಂಶತ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಶೃಣು ನಾರದ ವಕ್ಷ್ಯಾಮಿ ಸ್ವಧೋಪಾಖ್ಯಾನಮುತ್ತಮಂ |
ಪಿತೄಣಾಂ ವೈ ತೃಪ್ತಿಕರಂ ಶ್ರಾದ್ಧಾನಾಂ ಫಲವರ್ಧನಂ || ೧ ||

ಸೃಷ್ಟೇರಾದೌ ಪಿತೃಗಣಾನ್ಸಸರ್ಜ ಜಗತಾಂ ವಿಧಿಃ |
ಚತುರೋ ವೈ ಮೂರ್ತಿಮತಸ್ತ್ರೀಂಶ್ಚ ತೇಜಃ ಸ್ವರೂಪಿಣಃ || ೨ ||

ಸಪ್ತ ದೃಷ್ಟ್ವಾ ಪಿತೃಗಣಾನ್ಸಿದ್ಧಿರೂಪಾನ್ಮನೋಹರಾನ್ |
ಆಹಾರಂ ಸಸೃಜೇ ತೇಷಾಂ ಶ್ರಾದ್ಧತರ್ಪಣಪೂರ್ವಕಂ || ೩ ||

ನಲವತ್ತೊಂದನೆಯ ಅಧ್ಯಾಯವು

೧. ನಾರಾಯಣ:—ನಾರದನೇ, ಪಿತೃದೇವತೆಗಳಿಗೆ ತೃಪ್ತಿಕೊಡುವವಳೂ, ಶ್ರಾದ್ಧದ ಫಲವನ್ನು ವೃದ್ಧಿಗೊಳಿಸತಕ್ಕವಳೂ ಆದ ಸ್ವಧಾದೇವಿಯ ಉಪಾಖ್ಯಾನವನ್ನೀಗ ಅರುಹುವೆನು. ಕೇಳು.

೨. ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಆದಿಸೃಷ್ಟಿಯಲ್ಲಿ ನಾಲ್ವರು ಆಕಾರಸಹಿತರೂ. ಮೂರು ತೇಜೋರೂಪಿಗಳೂ ಆದ ಏಳು ಮಂದಿ ಪಿತೃದೇವತೆಗಳನ್ನು ಸೃಜಿಸಿದನು.

೩. ಮನೋಹರರಾದ ಆ ಏಳು ಮಂದಿ ಪಿತೃಗಳನ್ನು ಸೃಷ್ಟಿಮಾಡಿದ ಮೇಲೆ ಅವರಿಗೆ ಶ್ರಾದ್ಧತರ್ಪಣರೂಪವಾದ ಆಹಾರವನ್ನು ಸೃಜಿಸಿದನು.

ಸ್ನಾನಂ ತರ್ಪಣಪರ್ಯಂತಂ ಶ್ರಾದ್ಧಾಂತಂ ದೇವಪೂಜನಂ ।
ಆಹ್ನಿಕಂ ಚ ತ್ರಿಸಂಧ್ಯಾಂತಂ ವಿಪ್ರಾಣಾಂ ಚ ಶ್ರುತೌ ಶ್ರುತಂ ॥ ೪ ॥

ನಿತ್ಯಂ ನ ಕುರ್ಯಾದ್ಯೋ ವಿಪ್ರಸ್ತ್ರಿಸಂಧ್ಯಂ ಶ್ರಾದ್ಧತರ್ಪಣಂ ।
ಬಲಿಂ ವೇದಧ್ವನಿಂ ಸೋಽಪಿ ವಿಷಹೀನೋ ಯಥೋರಗಃ ॥ ೫ ॥

ಹರಿಸೇವಾವಿಹೀನಶ್ಚ ಶ್ರೀಹರೇರನಿವೇದ್ಯ ಭುಕ್ ।
ಭಸ್ಮಾಂತಂ ಸೂತಕಂ ತಸ್ಯ ನ ಕರ್ಮಾರ್ಹಃ ಸ ನಾರದ ॥ ೬ ॥

ಬ್ರಹ್ಮಾ ಶ್ರಾದ್ಧಾದಿಕಂ ಸೃಷ್ಟ್ವಾ ಜಗಾಮ ಪಿತೃಹೇತವೇ ।
ನ ಪ್ರಾಪ್ನುವಂತಿ ಪಿತರೋ ದದತಿ ಬ್ರಾಹ್ಮಣಾದಯಃ ॥ ೭ ॥

---

೪. ಬ್ರಾಹ್ಮಣರಾದವರು ಪ್ರತಿದಿನವೂ ಸ್ನಾನಮಾಡಿ ದೇವರ್ಷಿಪಿತೃ ತರ್ಪಣ ಕೊಡಬೇಕೆಂದೂ, ದೇವಪೂಜೆ ಮತ್ತು ಪಿತೃಶ್ರಾದ್ಧಾದಿಗಳನ್ನೂ, ಸಂಧ್ಯಾತ್ರಯದಲ್ಲೂ,ಆಹ್ನಿಕಕರ್ಮವನ್ನೂ ಆಚರಿಸಬೇಕೆಂದೂ ವೇದೋಕ್ತವಾಗಿದೆ.

೫. ಯಾವ ಬ್ರಾಹ್ಮಣನು ನಿತ್ಯವೂ ತ್ರಿಸಂಧ್ಯೆಯನ್ನೂ, ಶ್ರಾದ್ಧತರ್ಪಣಾದಿ (ದೇವರ್ಷಿ ಪಿತೃತರ್ಪಣ) ಗಳನ್ನೂ ಆಚರಿಸುವುದಿಲ್ಲವೋ ಅವನು ವಿಷವಿಲ್ಲದ ಹಾವಿಗೆ ಸದೃಶನಾಗುವನು.

೬. ಶ್ರೀಹರಿಯನ್ನು ಸೇವಿಸದ ಮತ್ತು ಶ್ರೀಹರಿಗೆ ನಿವೇದಿಸಿ ಭುಂಜಿಸದ ಮನುಷ್ಯನು ಸಾಯುವವರೆಗೂ ಶುಚಿಯಿಲ್ಲದುದರಿಂದ ಅವನು ಯಾವ ಸತ್ಕರ್ಮಕ್ಕೂ ಅರ್ಹನಾಗುವುದಿಲ್ಲ.

೭. ಇಂತು ಬ್ರಹ್ಮನು ಪಿತೃಗಳ ಆಹಾರಕ್ಕಾಗಿ ಶ್ರಾದ್ಧವನ್ನು ಸೃಷ್ಟಿಮಾಡಿ ಹೋದನು. ಆದರೆ ಬ್ರಾಹ್ಮಣರು ಶ್ರಾದ್ಧಾದಿಗಳನ್ನು ಮಾಡಿ ಆಹಾರವನ್ನರ್ಪಿಸಿದರೂ ಪಿತೃದೇವತೆಗಳು ಸ್ವೀಕರಿಸಲಾಗಲಿಲ್ಲ.

ಸರ್ವೇ ಪ್ರಜಗ್ಮುಃ ಕ್ಷುಧಿತೌ ವಿಷಣ್ಣಾ ಬ್ರಹ್ಮಣಃ ಸಭಾಂ ।
ಸರ್ವೇ ನಿವೇದನಂ ಚಕ್ರುಸ್ತಮೇವ ಜಗತಾಂ ವಿಧಿಂ ॥ ೮ ॥

ಬ್ರಹ್ಮಾ ಚ ಮಾನಸೀಂ ಕನ್ಯಾಂ ಸಸೃಜೇ ತಾಂ ಮನೋಹರಾಂ ।
ರೂಪಯೌವ್ವನಸಂಪನ್ನಾಂ ಶರಚ್ಚಂದ್ರಸಮಪ್ರಭಾಂ ॥ ೯ ॥

ವಿದ್ಯಾವತೀಂ ಗುಣವತೀಮಪಿ ರೂಪವತೀಂ ಸತೀಂ ।
ಶ್ವೇತಚಂಪಕವರ್ಣಾಭಾಂ ರತ್ನಭೂಷಣಭೂಷಿತಾಂ ॥ ೧೦ ॥

ವಿಶುದ್ಧಾಂ ಪ್ರಕೃತೇರಂಶಾಂ ಸಸ್ಮಿತಾಂ ವರದಾಂ ಶುಭಾಂ ।
ಸ್ವಧಾಭಿಧಾನಾಂ ಸುದತೀಂ ಲಕ್ಷ್ಮೀಲಕ್ಷಣಸಂಯುತಾಂ ॥ ೧೧ ॥

ಶತಪದ್ಮಪದನ್ಯಸ್ತ ಪಾದಪದ್ಮಂ ಚ ಬಿಭ್ರತೀಂ ।
ಪತ್ನೀಂ ಪಿತೃಣಾಂ ಪದ್ಮಾಸ್ಯಾಂ ಪದ್ಮಜಾಂ ಪದ್ಮಲೋಚನಾಂ ॥ ೧೨ ॥

---

೮. ಆಗ ಹಸಿವಿನಿಂದ ವಿಷಣ್ಣವದನರಾದ ಪಿತೃಗಳೆಲ್ಲರೂ ಬ್ರಹ್ಮನ ಸಭೆಗೆ ಹೋದರು. ಜಗತ್ಸೃಷ್ಟಿಕರ್ತನಿಗೆ ತಮ್ಮ ದುಃಖವನ್ನು ವಿಜ್ಞಾಪಿಸಿಕೊಂಡರು.

೯. ಆಗ ಬ್ರಹ್ಮನು, ರೂಪಯೌವನ ಸಂಪನ್ನಳಾಗಿ, ಶರದೃತುವಿನ ಚಂದ್ರನಂತೆ ಮನೋಹರಳಾದ ಸ್ವಧಾ ಎಂಬ ಮಾನಸಕನ್ಯೆಯನ್ನು ಸೃಜಿಸಿದನು.

೧೦ ವಿದ್ಯಾವತಿಯೂ, ಗುಣರೂಪವತಿಯೂ ಆದ ಆ ಕನ್ಯೆಯು ಬಿಳಿಸಂಪಿಗೆಯಂತೆ ಮೈಬಣ್ಣವುಳ್ಳವಳಾಗಿ ರತ್ನಾಭರಣಗಳಿಂದಲಂಕೃತಳಾಗಿದ್ದಳು.

೧೧. ಪ್ರಕೃತಿಯ ಅಂಶಸಂಭೂತಳೂ, ಪರಿಶುದ್ಧಳೂ, ಸ್ಮಿತವದನೆಯೂ, ಲಕ್ಷ್ಮಿಯ ಲಕ್ಷಣದಿಂದ ಕೂಡಿರುವವಳೂ ಆದ ಆ ಸುದತಿಗೆ ಸ್ವಧಾ ಎಂದು ಹೆಸರಾಯಿತು.

೧೨–೧೩. ಪದ್ಮಮುಖಿಯೂ, ಪದ್ಮನಯನೆಯೂ, ಪದ್ಮಜಳೂ, ಪದ್ಮಪಾದಳೂ ಆಗಿ ಯಾವಾಗಲೂ ತುಷ್ಟಿಸ್ವರೂಪಳಾದ ಆ ದೇವಿಯನ್ನು ಪಿತೃದೇವತೆ

ಪಿತೃಭ್ಯಸ್ತಾಂ ದದೌ ಕನ್ಯಾಂ ತುಷ್ಟೇಭ್ಯಸ್ತುಷ್ಟಿರೂಪಿಣೀಂ ।
ಬ್ರಾಹ್ಮಣಾನಾಂ ಚೋಪದೇಶಂ ಚಕ್ರೇ ವೈ ಗೋಪನೀಯಕಂ ॥ ೧೩ ॥

ಸ್ವಧಾನ್ತಂ ಮಂತ್ರಮುಚ್ಚಾರ್ಯ ಪಿತೃಭ್ಯೋ ದೇಹಿ ಚೇತಿ ಚ ।
ಕ್ರಮೇಣ ತೇನ ವಿಪ್ರಾಶ್ಚ ಪಿತ್ರೇ ದಾನಂ ದದುಃ ಪುರಾ ॥ ೧೪ ॥

ಸ್ವಾಹಾ ಶಸ್ತಾ ದೇವದಾನೇ ಪಿತೃದಾನೇ ಸ್ವಧಾ ವರಾ ।
ಸರ್ವತ್ರ ದಕ್ಷಿಣಾ ಶಸ್ತಾ ಹತೋ ಯಜ್ಞಸ್ತ್ವದಕ್ಷಿಣಃ ॥ ೧೫ ॥

ಪಿತರೋ ದೇವತಾ ವಿಪ್ರಾ ಮುನಯೋ ಮಾನವಾಸ್ತಥಾ ।
ಪೂಜಾಂ ಚಕ್ರುಸ್ಸ್ವಧಾಂ ಶಾಂತಾಂ ತುಷ್ಟ್ಯಾವ ಪರಮಾದರಂ ॥ ೧೬ ॥

ಗಳಿಗೆ ಕೊಟ್ಟು ತುಷ್ಟಿಬಡಿಸಿ ಅಲ್ಲಿಗೆ ಬಂದಿದ್ದ ಬ್ರಾಹ್ಮಣರಿಗೆಲ್ಲ ಅತ್ಯಂತ ಗುಟ್ಟಾಗಿದ್ದ ವಿಷಯವನ್ನು ಉಪದೇಶಿಸಿದನು.

೧೪. 'ಪಿತೃಗಳಿಗೆ ಕವ್ಯವನ್ನು ಅರ್ಪಿಸುವಾಗ ಹೇಳುವ ಮಂತ್ರಗಳಿಗೆಲ್ಲಾ ಸ್ವಧಾ ಎಂಬ ಹೆಸರನ್ನು ಸೇರಿಸಿ ಉಚ್ಚರಿಸಿರಿ' ಎಂದು ಹೇಳಿದ ನುಡಿಯನ್ನು ಕೇಳಿ ಬ್ರಾಹ್ಮಣರೆಲ್ಲರೂ ಕ್ರಮವಾಗಿ, ಮಂತ್ರೋಚ್ಚಾರಮಾಡಿ ಪಿತೃಗಳಿಗೆ ದಾನವನ್ನರ್ಪಿಸಿದರು.

೧೫. ದೇವತೆಗಳಿಗೆ ದಾನಕೊಡುವಾಗ ಸ್ವಾಹಾ ಎಂದೂ, ಪಿತೃಗಳಿಗೆ ದಾನಕೊಡುವಾಗ ಸ್ವಧಾ ಎಂದೂ, ಉಚ್ಚರಿಸುವುದು ಪ್ರಶಸ್ತವಾದುದು. ಸಕಲ ಯಜ್ಞಗಳಲ್ಲಿಯೂ ದಕ್ಷಿಣೆಯು ಮುಖ್ಯವಾದುದರಿಂದ, ದಕ್ಷಿಣಾರಹಿತವಾದ ಯಜ್ಞವು ವ್ಯರ್ಥವಾಗುವುದು.

೧೬. ಇದನ್ನು ತಿಳಿದು ಪಿತೃಗಳೂ, ದೇವತೆಗಳೂ, ಬ್ರಾಹ್ಮಣರು, ಮುನಿಗಳು ಮತ್ತು ಮಾನವರೂ ಶಾಂತಸ್ವರೂಪಿಣಿಯಾದ ಸ್ವಧಾದೇವಿಯನ್ನು ಅತ್ಯಾದರದಿಂದ ಪೂಜಿಸಿದರು.

ದೇವಾದಯಶ್ಚ ಸಂತುಷ್ಟಾಃ ಪರಿಪೂರ್ಣಮನೋರಥಾಃ ।
ವಿಪ್ರಾದಯಶ್ಚ ಪಿತರಃ ಸ್ವಧಾದೇವೀವರೇಣ ಚ　　॥ ೧೭ ॥

ಇತ್ಯೇವ ಕಥಿತಂ ಸರ್ವಂ ಸ್ವಧೋಪಾಖ್ಯಾನಮುತ್ತಮಂ ।
ಸರ್ವೇಷಾಂ ವೈ ತುಷ್ಟಿಕರಂ ಕಿಂ ಭೂಯಃ ಶ್ರೋತುಮಿಚ್ಛಸಿ　　॥ ೧೮ ॥

॥ ನಾರದ ಉವಾಚ ॥

ಸ್ವಧಾಪೂಜಾವಿಧಾನಂ ಚ ಧ್ಯಾನಂ ಸ್ತೋತ್ರಂ ಮಹಾಮುನೇ ।
ಶ್ರೋತುಮಿಚ್ಛಾಮಿ ಯತ್ನೇನ ವದ ವೇದವಿದಾಂ ವರ　　॥ ೧೯ ॥

॥ ನಾರಾಯಣ ಉವಾಚ ॥

ತದ್ಧ್ಯಾನಂ ಸ್ತವನಂ ಬ್ರಹ್ಮನ್ ವೇದೋಕ್ತಂ ಸರ್ವಸಮ್ಮತಂ ।
ಸರ್ವಂ ಜಾನಾಸಿ ವಕ್ಷ್ಯೇ ವೈ ಜ್ಞಾತುಮಿಚ್ಛಸಿ ವೃದ್ಧಯೇ　　॥ ೨೦ ॥

---

೧೭. ಸ್ವಧಾದೇವಿಯ ವರದಿಂದ ದೇವತೆಗಳು, ಪಿತೃಗಳು, ಬ್ರಾಹ್ಮಣರು ಎಲ್ಲರೂ ಪೂರ್ಣಮನೋರಥರಾಗಿ ತೃಪ್ತಿಪಡೆದರು.

೧೮. ಈ ರೀತಿಯಾಗಿ ಸಮಸ್ತರಿಗೂ ಸಂತೋಷಕರವಾದ ಸ್ವಧಾದೇವಿಯ ಕಥೆಯನ್ನು ಹೇಳಿದುದಾಯಿತು. ಇನ್ನೇನನ್ನು ಕೇಳಬೇಕೆಂದು ನಿನಗೆ ಆಸಕ್ತಿ ಇರುವುದು ?

೧೯. ನಾರದ :—ವೇದವನ್ನು ಬಲ್ಲವರಲ್ಲಿ ಅಗ್ರಗಣ್ಯನಾದ ಮಹರ್ಷಿಯೇ, ಸ್ವಧಾದೇವಿಯ ಪೂಜಾಕ್ರಮವನ್ನೂ, ಧ್ಯಾನಸ್ತೋತ್ರಾದಿಗಳನ್ನೂ ತಿಳಿಯಲು ಬಯಸುವ ನನಗೆ ಅದನ್ನು ವಿಸ್ತರಿಸಿ ಹೇಳು.

೨೦. ನಾರಾಯಣ :—ಸ್ವಧಾದೇವಿಯ ಧ್ಯಾನಸ್ತೋತ್ರಾದಿಗಳು ವೇದದಲ್ಲಿ ಉಕ್ತವಾಗಿ ಸರ್ವಸಂಮತವಾಗಿವೆ. ನೀನು ಅದೆಲ್ಲವನ್ನೂ ಬಲ್ಲವನಾದರೂ ಹೆಚ್ಚು ತಿಳಿವಳಿಕೆಗಾಗಿ ಹೇಳುವೆನು.

ಶರತ್ಕೃಷ್ಣತ್ರಯೋದಶ್ಯಾಂ ಮಘಾಯಾಂ ಶ್ರಾದ್ಧವಾಸರೇ
ಸ್ವಧಾಂ ಸಂಪೂಜ್ಯ ಯತ್ನೇನ ತತಃ ಶ್ರಾದ್ಧಂ ಸಮಾಚರೇತ್ ॥ ೨೧ ॥

ಸ್ವಧಾಂ ನಾಭ್ಯರ್ಚ್ಯ ಯೋ ವಿಪ್ರಃ ಶ್ರಾದ್ಧಂ ಕುರ್ಯಾದಹಂಮತಿಃ ।
ನ ಭವೇತ್ಫಲಭಾಕ್ಸತ್ಯಂ ಶ್ರಾದ್ಧತರ್ಪಣಯೋಸ್ತಥಾ ॥ ೨೨ ॥

ಬ್ರಹ್ಮಣೋ ಮಾನಸೀಂ ಕನ್ಯಾಂ ಶಶ್ವತ್ಸುಸ್ಥಿರಯೌವನಾಂ ।
ಪೂಜ್ಯಾಂ ಪಿತೄಣಾಂ ದೇವಾನಾಂ ಶ್ರಾದ್ಧಾನಾಂ ಫಲದಾಂ ಭಜೇ ॥ ೨೩ ॥

ಇತಿ ಧ್ಯಾತ್ವಾ ಘಟೇ ರಮ್ಯೇ ಶಾಲಗ್ರಾಮೇಽಥವಾ ಶುಭೇ ।
ದದ್ಯಾತ್ಪಾದ್ಯಾದಿಕಂ ತಸ್ಯೈ ಮೂಲೇನೇತಿ ಶ್ರುತೌ ಶ್ರುತಂ ॥ ೨೪ ॥

---

೨೧. ಶರದೃತುವಿನ ಕೃಷ್ಣಪಕ್ಷದ ತ್ರಯೋದಶೀ ದಿವಸದಲ್ಲೂ, ಮಘಾ ನಕ್ಷತ್ರದ ದಿವಸದಲ್ಲೂ, ಶ್ರಾದ್ಧ ದಿವಸಗಳಲ್ಲೂ, ಸ್ವಧಾದೇವಿಯನ್ನು ಪ್ರಯತ್ನ ಪೂರ್ವಕವಾಗಿ ಪೂಜಿಸಿ ಅನಂತರ ಶ್ರಾದ್ಧವನ್ನಾಚರಿಸಬೇಕು.

೨೨. ಯಾವ ಬ್ರಾಹ್ಮಣನು ಅಹಂಕಾರದಿಂದ ಸ್ವಧಾದೇವಿಯನ್ನು ಪೂಜಿಸದೆ ಶ್ರಾದ್ಧಮಾಡುವನೋ ಅವನು ಮಾಡಿದ ಶ್ರಾದ್ಧಕ್ಕೂ ತರ್ಪಣಕ್ಕೂ ತಕ್ಕ ಫಲವು ಅವನಿಗೆ ಲಭಿಸುವುದಿಲ್ಲ.

೨೩. 'ಬ್ರಹ್ಮನ ಮಾನಸಪುತ್ರಿಯೂ, ಸ್ಥಿರಯೌವನವತಿಯೂ, ಪಿತೃಗಳಿಂದಲೂ ಮತ್ತು ದೇವತೆಗಳಿಂದಲೂ ಪೂಜಿತಳೂ, ಶ್ರಾದ್ಧಫಲದಾಯಕಿಯೂ ಆದ ಸ್ವಧಾದೇವಿಯನ್ನು ಧ್ಯಾನಿಸುವೆನು.'

೨೪. ಈ ರೀತಿಯಾದ ಧ್ಯಾನಪೂರ್ವಕವಾಗಿ ಒಂದು ಕಲಶದಲ್ಲಾಗಲೀ, ಸಾಲಿಗ್ರಾಮದಲ್ಲಾಗಲೀ ಸ್ವಧಾದೇವಿಯನ್ನು ಆವಾಹಿಸಿ ಮೂಲಮಂತ್ರೋಚ್ಚಾರಣೆಯಿಂದ ಕ್ರಮವಾಗಿ ಪಾದ್ಯಾದಿಗಳನ್ನು ಅರ್ಪಿಸಬೇಕೆಂದು ವೇದೋಕ್ತವಾಗಿದೆ.

ಓಂ ಹ್ರೀಂ ಶ್ರೀಂ ಕ್ಲೀಂ ಸ್ವಧಾ ದೇವ್ಯೈ ಸ್ವಾಹೇತಿ ಚ ಮಹಾಮನುಂ ।
ಸಮುಚ್ಚಾರ್ಯ ಚ ಸಂಪೂಜ್ಯ ಸ್ತುತ್ವಾ ತಾಂ ಪ್ರಣಮೇದ್ದ್ವಿಜಃ ॥ ೨೫ ॥

ಸ್ತೋತ್ರಂ ಶೃಣು ಮುನಿಶ್ರೇಷ್ಠ ಬ್ರಹ್ಮಪುತ್ರ ವಿಶಾರದ ।
ಸರ್ವವಾಂಛಾಪ್ರದಂ ನೄಣಾಂ ಬ್ರಹ್ಮಣಾ ಯತ್ಕೃತಂ ಪುರಾ ॥ ೨೬ ॥

॥ ಬ್ರಹ್ಮೋವಾಚ ॥

ಸ್ವಧೋಚ್ಚಾರಣಮಾತ್ರೇಣ ತೀರ್ಥಸ್ನಾಯೀ ಭವೇನ್ನರಃ ।
ಮುಚ್ಯತೇ ಸರ್ವಪಾಪೇಭ್ಯೋ ವಾಜಪೇಯಫಲಂ ಲಭೇತ್ ॥ ೨೭ ॥

ಸ್ವಧಾ ಸ್ವಧಾ ಸ್ವಧೇತ್ಯೇವಂ ಯದಿ ವಾರತ್ರಯಂ ಸ್ಮರೇತ್ ।
ಶ್ರಾದ್ಧಸ್ಯ ಫಲಮಾಪ್ನೋತಿ ಕಾಲತರ್ಪಣಯೋಸ್ತಥಾ ॥ ೨೮ ॥

---

೨೫. ಬ್ರಾಹ್ಮಣನು 'ಓಂ ಹ್ರೀಂ ಶ್ರೀಂ ಕ್ಲೀಂ ಸ್ವಧಾ ದೇವ್ಯೈ ಸ್ವಾಹಾ' ಎಂಬ ಮಹಾ ಮಂತ್ರವನ್ನು ಉಚ್ಚರಿಸಿ ದೇವಿಯನ್ನು ಪೂಜಿಸಿ, ಸ್ತುತಿಸಿ ನಮಿಸಬೇಕು.

೨೬. ಬ್ರಹ್ಮಪುತ್ರನಾದ ನಾರದನೇ, ಸರ್ವರ ಇಷ್ಟಾರ್ಥವನ್ನೂ ನೆರವೇರಿಸುವಂತೆ ಬ್ರಹ್ಮನು ರಚಿಸಿರುವ ಸ್ವಧಾದೇವಿಯ ಸ್ತೋತ್ರವನ್ನು ನೀನು ಸಾವಧಾನದಿಂದ ಕೇಳು.

೨೭. ಬ್ರಹ್ಮ:—ಸ್ವಧಾ ಎಂದು ಉಚ್ಚರಿಸಿದ ಮಾತ್ರದಿಂದಲೇ, ಮನುಷ್ಯನು ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನು ಹೊಂದುವನು. ಅಲ್ಲದೆ ಸಕಲ ಪಾಪಗಳಿಂದಲೂ ಮುಕ್ತನಾಗಿ ವಾಜಪೇಯ ಯಾಗಮಾಡಿದ ಫಲವನ್ನು ಹೊಂದುವನು.

೨೮. ಸ್ವಧಾ ಎಂದು ಮೂರುಸಾರಿ ಸ್ಮರಣೆಮಾಡಿದ ಮಾತ್ರದಿಂದಲೇ ಮನುಜನು ಸಕಾಲದಲ್ಲಿ ಶ್ರಾದ್ಧ ಮತ್ತು ತರ್ಪಣಗಳನ್ನಾಚರಿಸುವುದರಿಂದುಂಟಾದ ಫಲವನ್ನು ಪಡೆಯುವನು.

ಶ್ರಾದ್ಧಕಾಲೇ ಸ್ವಧಾಸ್ತೋತ್ರಂ ಯಃ ಶೃಣೋತಿ ಸಮಾಹಿತಃ ।
ಲಭೇಚ್ಛ್ರಾದ್ಧಶತಾನಾಂ ಚ ಪುಣ್ಯಮೇವ ನ ಸಂಶಯಃ ॥ ೨೯ ॥

ಸ್ವಧಾ ಸ್ವಧಾ ಸ್ವಧೇತ್ಯೇವಂ ತ್ರಿಸಂಧ್ಯಂ ಯಃ ಪಠೇನ್ನರಃ ।
ಪ್ರಿಯಾಂ ವಿನೀತಾಂ ಸ ಲಭೇತ್ಸಾಧ್ವೀಂ ಪುತ್ರಂ ಗುಣಾನ್ವಿತಂ ॥ ೩೦ ॥

ಪಿತೄಣಾಂ ಪ್ರಾಣತುಲ್ಯಾ ತ್ವಂ ದ್ವಿಜಜೀವನರೂಪಿಣೀ ।
ಶ್ರಾದ್ಧಾಧಿಷ್ಠಾತೃದೇವೀ ಚ ಶ್ರಾದ್ಧಾದೀನಾಂ ಫಲಪ್ರದಾ ॥ ೩೧ ॥

ಬಹಿರ್ಗನ್ಮನಸೋ ಗಚ್ಛ ಪಿತೄಣಾಂ ತುಷ್ಟಿಹೇತವೇ ।
ಸಂಪ್ರೀತಯೇ ದ್ವಿಜಾತೀನಾಂ ಗೃಹಿಣಾಂ ವೃದ್ಧಿಹೇತವೇ ॥ ೩೨ ॥

ನಿತ್ಯಾನಿತ್ಯಸ್ವರೂಪಾಸಿ ಗುಣರೂಪಾಸಿ ಸುವ್ರತೇ ।
ಆವಿರ್ಭಾವಸ್ತಿರೋಭಾವಃ ಸೃಷ್ಟೌ ಚ ಪ್ರಲಯೇ ತವ ॥ ೩೩ ॥

---

೨೯. ಯಾರು ಶ್ರಾದ್ಧಕಾಲದಲ್ಲಿ ಸ್ವಧಾದೇವಿಯ ಸ್ತೋತ್ರವನ್ನು ಸಮಾಧಾನಚಿತ್ತದಿಂದ ಕೇಳುವರೋ, ಅವರು ನೂರು ಶ್ರಾದ್ಧ ಮಾಡುವುದರ ಪುಣ್ಯವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

೩೦. ಮೂರು ಸಂಧ್ಯಾಕಾಲದಲ್ಲಿಯೂ 'ಸ್ವಧಾ, ಸ್ವಧಾ' ಎಂದು ಉಚ್ಚರಿಸುವವರು, ವಿನಯವತಿಯೂ, ಪತಿವ್ರತೆಯೂ ಆದ ಪತ್ನಿಯನ್ನೂ, ಗುಣವಂತನಾದ ಪುತ್ರನನ್ನೂ ಪಡೆಯುವರು.

೩೧. ಎಲೌ ದೇವಿಯೇ, ನೀನು ಪಿತೃದೇವತೆಗಳಿಗೆ ಪ್ರಾಣಸಮಾನಳೂ, ಬ್ರಾಹ್ಮಣರಿಗೆ ಜೀವನಸ್ವರೂಪಿಣಿಯೂ, ಶ್ರಾದ್ಧಕ್ಕೆ ಅಧಿಷ್ಠಾತೃದೇವತೆಯೂ ಮತ್ತು ಫಲದಾಯಕಳೂ ಆಗಿರುವೆ.

೩೨. ಪಿತೃದೇವತೆಗಳ ತೃಪ್ತಿಗಾಗಿಯೂ, ಬ್ರಾಹ್ಮಣರ ಪ್ರೀತಿಗಾಗಿಯೂ, ಗೃಹಸ್ಥರ ಅಭಿವೃದ್ಧಿಗಾಗಿಯೂ ನನ್ನ ಮನಸ್ಸಿನಿಂದ ಹೊರಕ್ಕೆ ಬಾ.

೩೩. ಎಲೌ ವ್ರತಪರಳೇ, ನೀನು ನಿತ್ಯಾನಿತ್ಯಸ್ವರೂಪಳೂ, ರೂಪಗುಣಸಂಪನ್ನಳೂ ಆಗಿರುವುದರಿಂದ ಪ್ರಳಯಕಾಲದಲ್ಲಿ ಕಣ್ಮರೆಯಾಗಿದ್ದು ಸೃಷ್ಟಿಯಲ್ಲಿ ಕಾಣಿಸಿಕೊಳ್ಳುವೆ.

ಓಂ ಸ್ವಸ್ತಿ ಚ ನಮಃ ಸ್ವಾಹಾ ಸ್ವಧಾ ತ್ವಂ ದಕ್ಷಿಣಾ ತಥಾ ।
ನಿರೂಪಿತಾಶ್ಚತುರ್ವೇದೇ ಷಟ್ಪ್ರಶಸ್ತಾಶ್ಚ ಕರ್ಮಿಣಾಂ || ೩೪ ||

ಪುರಾಸೀತ್ತ್ವಂ ಸ್ವಧಾಗೋಪೀ ಗೋಲೋಕೇ ರಾಧಿಕಾ ಸಖೀ ।
ಧೃತಾ ಸ್ವೋರಸಿ ಕೃಷ್ಣೇನ ಯತಸ್ತೇನ ಸ್ವಧಾ ಸ್ಮೃತಾ || ೩೫ ||

ಧ್ವಸ್ತಾ ತ್ವಂ ರಾಧಿಕಾಶಾಪಾದ್ಗೋಲೋಕಾದ್ವಿಶ್ವಮಾಗತಾ ।
ಕೃಷ್ಣಾಶ್ಲಿಷ್ಟಾ ತಯಾ ದೃಷ್ಟ್ವಾ ಪುರಾ ವೃಂದಾವನೇ ವನೇ || ೩೬ ||

ಕೃಷ್ಣಾಲಿಂಗನಪುಣ್ಯೇನ ಭೂತಾ ಮೇ ಮಾನಸೀ ಸುತಾ ।
ಅತೃಪ್ತಸುರತೇ ತೇನ ಚತುರ್ಣಾಂ ಸ್ವಾಮಿನಾಂ ಪ್ರಿಯಾ || ೩೭ ||

---

೩೪. 'ಓಂ, ಸ್ವಸ್ತಿ, ನಮಃ, ಸ್ವಾಹಾ, ಸ್ವಧಾ, ದಕ್ಷಿಣಾ' ಎಂಬ ಈ ಆರು ದಿವ್ಯನಾಮಗಳನ್ನುಚ್ಚರಿಸಿ ಕರ್ಮಮಾಡುವುದು ಪ್ರಶಸ್ತವೆಂದು ಚತುರ್ವೇದಗಳಲ್ಲಿಯೂ ನಿರೂಪಿತವಾಗಿದೆ.

೩೫. ಎಲೌ ಸ್ವಧಾದೇವಿಯೇ, ನೀನು ಪೂರ್ವದಲ್ಲಿ ರಾಧಾದೇವಿಯ ಸಖಿಯಾಗಿ ಗೋಲೋಕದಲ್ಲಿ ನೆಲೆಸಿದ್ದಾಗ, ಶ್ರೀಕೃಷ್ಣನು ನಿನ್ನನ್ನು ತನ್ನ ಎದೆಯಲ್ಲಿ ಧರಿಸಿದ್ದರಿಂದ ನಿನ್ನನ್ನು ಎಲ್ಲರೂ ಸ್ವಧಾ (ಸ್ವ–ತನ್ನಿಂದ, ಧಾ–ಧರಿಸಲ್ಪಟ್ಟವಳು) ಎನ್ನುವರು.

೩೬. ಪೂರ್ವದಲ್ಲಿ ಬೃಂದಾವನದಲ್ಲಿ ಶ್ರೀಕೃಷ್ಣನು ನಿನ್ನನ್ನು ಅಪ್ಪಿಕೊಂಡಿದ್ದಾಗ ರಾಧೆಯು ನೋಡಿ ನಿನಗೆ ಶಾಪವಿತ್ತುದರಿಂದ ನೀನು ಗೋಲೋಕದಿಂದ ಭೂಲೋಕಕ್ಕೆ ಬಂದಿರುವೆ.

೩೭. ಶ್ರೀಕೃಷ್ಣನನ್ನು ಆಲಂಗಿಸಿಕೊಂಡಿದ್ದರ ಪುಣ್ಯದಿಂದ ನನ್ನ ಮಾನಸ ಕನ್ಯೆಯಾಗಿ ನೀನು ಅವತರಿಸಿದೆ. ಸುರತ ಸುಖದಲ್ಲಿ ಅತೃಪ್ತಳಾದ ನೀನು ನಾಲ್ವರು ಪತಿಯರಿಗೆ ಪ್ರಿಯಳಾಗಿರುವೆ.

ಸ್ವಾಹಾ ಸಾ ಸುಂದರೀ ಗೋಪೀ ಪುರಾಸೀದ್ರಾಧಿಕಾ ಸಖೀ ।
ರತೌ ಸ್ವಯಂ ಕೃಷ್ಣಮಾಹ ತೇನ ಸ್ವಾಹಾ ಪ್ರಕೀರ್ತಿತಾ ॥ ೩೮ ॥

ಕೃಷ್ಣೇನ ಸಾರ್ಧಂ ಸುಚಿರಂ ವಸಂತೇ ರಾಸಮಂಡಲೇ ।
ಪ್ರಮತ್ತಾ ಸುರತೇ ಶ್ಲಿಷ್ಟಾ ದೃಷ್ಟಾ ಸಾ ರಾಧಯಾ ಪುರಾ ॥ ೩೯ ॥

ತಸ್ಯಾಃ ಶಾಪೇನ ಸಾ ಧ್ವಸ್ತಾ ಗೋಲೋಕಾದ್ವಿಶ್ವಮಾಗತಾ ।
ಕೃಷ್ಣಾಲಿಂಗನಪುಣ್ಯೇನ ಸಮಭೂದ್ವಹ್ನಿಕಾಮಿನೀ ॥ ೪೦ ॥

ಪವಿತ್ರರೂಪಾ ಪರಮಾ ದೇವಾದ್ಯೈರ್ವಂದಿತಾ ನೃಭಿಃ ।
ಯನ್ನಾಮೋಚ್ಚಾರಣೇನೈವ ನರೋ ಮುಚ್ಯೇತ ಪಾತಕಾತ್ ॥ ೪೧ ॥

---

೩೮. ಸ್ವಾಹಾದೇವಿಯೂ ಕೂಡ ಪೂರ್ವದಲ್ಲಿ ಸುಂದರೀ ಎಂಬ ಗೋಪ ಸ್ತ್ರೀಯಾಗಿ ರಾಧೆಯ ಗೆಳತಿಯಾಗಿದ್ದಳು. ತಾನೇ ಶ್ರೀಕೃಷ್ಣನನ್ನು ಕುರಿತು ರತಿ ಸುಖಕ್ಕಾಗಿ ಹೇಳಿದುದರಿಂದ (ಸ್ವ–ತಾನು, ಆಹ–ಹೇಳಿದಳು) ಸ್ವಾಹಾ ಎನಿಸಿ ಕೊಂಡಳು.

೩೯. ವಸಂತ ಸಮಯದಲ್ಲಿ ಶ್ರೀಕೃಷ್ಣನೊಡನೆ ರಾಸಮಂಡಲದಲ್ಲಿ ಬಹು ಕಾಲ ವಿಹರಿಸುತ್ತಿದ್ದು ಸುರತಸುಖದಿಂದ ಪ್ರಮತ್ತಳಾಗಿ, ಆಲಂಗಿತಳಾಗಿದ್ದಾಗ ರಾಧೆಯು ನೋಡಿದಳು.

೪೦. ಆಗ ರಾಧೆಯು ಕೊಟ್ಟ ಶಾಪದಿಂದ ಅವಳೂ ಗೋಲೋಕದಿಂದ, ಭ್ರಷ್ಟಳಾಗಿ ಭೂಲೋಕಕ್ಕೆ ಬಂದಳು. ಕೃಷ್ಣನನ್ನು ಆಲಿಂಗಿಸಿಕೊಂಡುದರ ಪುಣ್ಯದಿಂದ ಅಗ್ನಿದೇವನ ಪತ್ನಿಯಾದಳು.

೪೧. ಆ ಸ್ವಾಹಾದೇವಿಯು ಪರಮಪವಿತ್ರಸ್ವರೂಪಳಾಗಿ ದೇವತೆಗಳಿಂದಲೂ ಮನುಜರಿಂದಲೂ ಸರ್ವದಾ ವಂದಿತಳಾಗಿರುವಳು. ಅವಳ ದಿವ್ಯನಾಮವನ್ನು ಉಚ್ಚರಿಸಿದ ಮಾತ್ರದಿಂದಲೇ ಮನುಜನು ಪಾಪವನ್ನು ಕಳೆದುಕೊಳ್ಳುವನು.

ಯಾ ಸುಶೀಲಾಭಿಧಾ ಗೋಪೀ ಪುರಾಸೀದ್ರಾಧಿಕಾ ಸಖೀ ।
ಉವಾಸ ದಕ್ಷಿಣೇ ಕ್ರೋಡೇ ಕೃಷ್ಣಸ್ಯ ಚ ಮಹಾತ್ಮನಃ ॥ ೪೨ ॥

ಪ್ರಧ್ವಸ್ತಾ ಸಾ ಚ ತಚ್ಛಾಪಾದ್ಗೋಲೋಕಾದ್ವಿಶ್ವಮಾಗತಾ ।
ಕೃಷ್ಣಾಲಿಂಗನಪುಣ್ಯೇನ ಸಾ ಬಭೂವ ಚ ದಕ್ಷಿಣಾ ॥ ೪೩ ॥

ಸಾ ಪ್ರೇಯಸೀ ರತೌ ದಕ್ಷಾ ಪ್ರಶಸ್ತಾ ಸರ್ವಕರ್ಮಸು ।
ಉವಾಸ ದಕ್ಷಿಣೇ ಭರ್ತುರ್ದಕ್ಷಿಣಾ ತೇನ ಕೀರ್ತಿತಾ ॥ ೪೪ ॥

ಗೋಪ್ಯೋ ಬಭೂವುಸ್ತಿಸ್ರೋ ವೈ ಸ್ವಧಾ ಸ್ವಾಹಾ ಚ ದಕ್ಷಿಣಾ ।
ಕರ್ಮಿಣಾಂ ಕರ್ಮಪೂರ್ಣಾರ್ಥಂ ಪುರಾ ಚೈವೇಶ್ವರೇಚ್ಛಯಾ ॥ ೪೫ ॥

ಇತ್ಯೇವಮುಕ್ತ್ವಾ ಸ ಬ್ರಹ್ಮಾ ಬ್ರಹ್ಮಲೋಕೇ ಚ ಸಂಸದಿ ।
ತಸ್ಥೌ ಚ ಸಹಸಾ ಸದ್ಯಃ ಸ್ವಧಾ ಸಾವಿರ್ಬಭೂವ ಹ ॥ ೪೬ ॥

---

೪೨. ಪೂರ್ವದಲ್ಲಿ ರಾಧೆಯ ಸಖಿಯಾಗಿದ್ದ ಸುಶೀಲಾ ಎಂಬ ಗೋಪಿಯು, ಕೃಷ್ಣಪರಮಾತ್ಮನ ಬಲಗಡೆ ಪಾರ್ಶ್ವದಲ್ಲಿ ನೆಲಸಿದ್ದಳು.

೪೩. ಅದನ್ನು ನೋಡಿದ ರಾಧೆಯು ಅವಳಿಗೆ ಶಾಪವಿತ್ತುದರಿಂದ ಗೋಲೋಕದಿಂದ ಭೂಮಂಡಲಕ್ಕೆ ಬಂದಳು. ಆದರೆ ಕೃಷ್ಣನನ್ನು ಆಲಿಂಗಿಸಿಕೊಂಡಿದ್ದರ ಪುಣ್ಯದಿಂದ ದಕ್ಷಿಣಾದೇವಿಯಾಗಿ ಅವತರಿಸಿದಳು.

೪೪. ಕೃಷ್ಣನ ಪ್ರೇಯಸಿಯಾದ ಅವಳು ರತಿಸುಖದಲ್ಲಿ ಸಮರ್ಥಳೂ, ಸಕಲ ಕರ್ಮಗಳಲ್ಲಿ ಪ್ರಶಸ್ತಳೂ, ತನ್ನ ಪತಿಯ ದಕ್ಷಿಣ ಪಾರ್ಶ್ವದಲ್ಲಿ ನೆಲೆಸಿದ್ದವಳೂ ಆದುದರಿಂದ ದಕ್ಷಿಣಾ ಎನಿಸಿಕೊಂಡಳು.

೪೫. ಇಂತು ಮೂವರು ಗೋಪಿಯರೂ ಕೂಡ ಕರ್ಮಠರ ಕರ್ಮಪೂರ್ತಿಯಾಗುವುದಕ್ಕಾಗಿ ಈಶ್ವರೇಚ್ಛೆಯಂತೆ ಸ್ವಾಹಾ, ಸ್ವಧಾ ಮತ್ತು ದಕ್ಷಿಣಾ ಸ್ವರೂಪಿಣಿಯರಾದರು.

೪೬. ಬ್ರಹ್ಮಲೋಕದಲ್ಲಿ ಬ್ರಹ್ಮಸಭೆಯಲ್ಲಿ ಇಂತು ನುಡಿದು ಬ್ರಹ್ಮನು ಸುಮ್ಮನಾಗಲು ಕೂಡಲೇ ಅಲ್ಲಿ ಇದ್ದಕ್ಕಿದ್ದಂತೆ ಸ್ವಧಾದೇವಿಯು ಆವಿರ್ಭವಿಸಿದಳು.

ತದಾ ಪಿತೃಭ್ಯಃ ಪ್ರದದೌ ತಾಮೇವ ಕಮಲಾನನಾಂ ।
ತಾಂ ಸಂಪ್ರಾಪ್ಯ ಯಯುಸ್ತೇ ಚ ಪಿತರಶ್ಚ ಪ್ರಹರ್ಷಿತಾಃ ॥ ೪೭ ॥

ಸ್ವಧಾಸ್ತೋತ್ರಮಿದಂ ಪುಣ್ಯಂ ಯಃ ಶೃಣೋತಿ ಸಮಾಹಿತಃ ।
ಸ ಸ್ನಾತಃ ಸರ್ವತೀರ್ಥೇಷು ವೇದಪಾಠಫಲಂ ಲಭೇತ್ ॥ ೪೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಸ್ವಧೋಪಾಖ್ಯಾನೇ
ಸ್ವಧೋತ್ಪತ್ತಿತತ್ಪೂಜಾದಿಕಥನಂ ನಾಮ
ಏಕಚತ್ವಾರಿಂಶತ್ತಮೋಽಧ್ಯಾಯಃ

---

೪೭. ಆಗ ಬ್ರಹ್ಮನು ಕಮಲಮುಖಿಯಾದ ಆ ದೇವಿಯನ್ನು ಪಿತೃದೇವತೆಗಳಿಗೆ ಕೊಡಲು ಆ ಪಿತೃದೇವತೆಗಳು ಸಂತುಷ್ಟರಾಗಿ ಹಿಂತಿರುಗಿದರು.

೪೮. ಪುಣ್ಯಕರವಾದ ಸ್ವಧಾದೇವಿಯ ಈ ಸ್ತೋತ್ರವನ್ನು ಸಮಾಧಾನಚಿತ್ತದಿಂದ ಕೇಳುವವರು ಸಕಲ ತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನೂ, ಚತುರ್ವೇದಗಳನ್ನು ಪಠನಮಾಡಿದ ಫಲವನ್ನೂ ಹೊಂದುವರು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಸ್ವಧೋಪಾ
ಖ್ಯಾನದಲ್ಲಿ ಸ್ವಧಾದೇವಿಯ ಉತ್ಪತ್ತಿ ಮತ್ತು ಪೂಜಾವಿಧಾನವೆಂಬ
ನಲವತ್ತೊಂದನೆಯ ಅಧ್ಯಾಯವು ಮುಗಿದುದು.

ನಲವತ್ತೊಂದನೆಯ ಅಧ್ಯಾಯದ ಸಾರಾಂಶವು

ಸೃಷ್ಟಿಕರ್ತನಾದ ಬ್ರಹ್ಮನು ಅಗ್ನಿಷ್ವಾತ್ತಾದಿಸಪ್ತಪಿತೃಗಳನ್ನು ಸೃಷ್ಟಿಮಾಡಿ ಅವರ ತೃಪ್ತ್ಯರ್ಥವಾಗಿ ಮನುಜರು ಶ್ರಾದ್ಧತರ್ಪಣವನ್ನು ಕೊಡಬೇಕೆಂದು ನಿಯಮಿಸಿದನು. ಅದರಂತೆ ಮನುಜರು ಶ್ರಾದ್ಧಮಾಡಿ ಪಿಂಡವನ್ನೂ, ತರ್ಪಣೋದಕವನ್ನೂ ಸಮರ್ಪಿಸಿದರೂ ಅದು ಪಿತೃದೇವತೆಗಳಿಗೆ ಸಲ್ಲಲಿಲ್ಲ. ಆಗ ಅವರೆಲ್ಲರೂ ಬ್ರಹ್ಮನಲ್ಲಿ ವಿಜ್ಞಾಪಿಸಿಕೊಳ್ಳಲು, ಬ್ರಹ್ಮನು ತನ್ನ ಮನಸ್ಸಿನಿಂದ 'ಸ್ವಧಾ' ದೇವಿಯನ್ನು ಸೃಷ್ಟಿಮಾಡಿ, ಮಾನವರು ಸ್ವಧಾಂತವಾಗಿ ಮಂತ್ರೋಚ್ಚಾರಣೆಮಾಡಿ ಪಿತೃದೇವತೆಗಳಿಗೆ ಕವ್ಯವನ್ನರ್ಪಿಸಿದರೆ ಅದರಿಂದ ಪಿತೃದೇವತೆಗಳು ತೃಪ್ತರಾಗುವರೆಂದನು. ಅದರಂತೆ ಸ್ವಧಾದೇವಿಯ ಮೂಲಕ ಪಿತೃಗಳಿಗೆ ತೃಪ್ತಿಯಾಯಿತು. ಆದುದರಿಂದ ಸ್ವಧೋಚ್ಚಾರಣೆಯಿಲ್ಲದೆ ಸಮರ್ಪಿಸುವ ಕವ್ಯವು ಪಿತೃಗಳಿಗೆ ಸೇರುವುದಿಲ್ಲ. ಸ್ವಧಾದೇವಿಯ ಧ್ಯಾನಸ್ತೋತ್ರಮಂತ್ರಾದಿಗಳನ್ನು ಭಕ್ತಿಯಿಂದ ಪಠಿಸುವವರು ಪಿತೃದೇವತೆಗಳ ಅನುಗ್ರಹಕ್ಕೆ ಪಾತ್ರರಾಗುವರು. ಪೂರ್ವದಲ್ಲಿ ರಾಧಾದೇವಿಯ ಸಖಿಯಾದ ಗೋಪಿಯೊಬ್ಬಳು ಶ್ರೀಕೃಷ್ಣನ ಪ್ರೀತಿಗೆ ಪಾತ್ರಳಾಗಿ ಅವನ ವಕ್ಷಃಸ್ಥಲದಲ್ಲಿ ನೆಲೆಸಿ 'ಸ್ವಧಾ' ಎನಿಸಿಕೊಂಡಿದ್ದಳು. ಅದನ್ನು ಕಂಡು ಅಸೂಯೆಪಟ್ಟ ರಾಧಾದೇವಿಯು ಅವಳಿಗೆ ಶಾಪವಿತ್ತುದರಿಂದ ಸ್ವಧಾದೇವಿಯು ಬ್ರಹ್ಮನ ಮಾನಸ ಪುತ್ರಿಯಾಗಿ ಅವತರಿಸಿ ಭೂಲೋಕಕ್ಕೆ ಬರಬೇಕಾಯಿತು. ಅದರಂತೆ ಸುಂದರಿ ಮತ್ತು ಸುಶೀಲಾ ಎಂಬ ಗೋಪಿಯರೂ ರಾಧೆಯ ಶಾಪಕ್ಕೊಳಗಾಗಿ ಸ್ವಾಹಾ ಮತ್ತು ದಕ್ಷಿಣಾದೇವಿಯರಾಗಿ ಭೂಲೋಕದಲ್ಲಿ ಅವತರಿಸಿದರು. ಈ ಮೂವರು ದೇವಿಯರೂ ಮನುಜರ ಹವ್ಯಕವ್ಯಕರ್ಮಗಳನ್ನು ಪೂರ್ಣಗೊಳಿಸುವವರಾದರು.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

॥ ದ್ವಿಚತ್ವಾರಿಂಶತ್ತಮೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಉಕ್ತಂ ಸ್ವಾಹಾಸ್ವಧಾಖ್ಯಾನಂ ಪ್ರಶಸ್ತಂ ಮಧುರಂ ಪರಂ ।
ವಕ್ಷ್ಯಾಮಿ ದಕ್ಷಿಣಾಖ್ಯಾನಂ ಸಾವಧಾನಂ ನಿಶಾಮಯ ॥ ೧ ॥

ಗೋಪೀ ಸುಶೀಲಾ ಗೋಲೋಕೇ ಪುರಾಸೀತ್ಪ್ರೇಯಸೀ ಹರೇಃ ।
ರಾಧಾಪ್ರಧಾನಾ ಸಧ್ರೀಚೀ ಧನ್ಯಾ ಮಾನ್ಯಾ ಮನೋಹರಾ ।
ಅತೀವ ಸುಂದರೀ ರಾಮಾ ಸುಭಗಾ ಸುದತೀ ಸತೀ ॥ ೨ ॥

ನಲವತ್ತೆರಡನೆಯ ಅಧ್ಯಾಯವು

೧. ನಾರಾಯಣ:—ಅತ್ಯಂತಪ್ರಶಸ್ತವೂ, ಮಧುರವೂ ಆದ ಸ್ವಾಹಾ ಮತ್ತು ಸ್ವಧಾದೇವಿಯರ ಪುಣ್ಯಕಥೆಯನ್ನು ಹೇಳಿದುದಾಯಿತು. ಈಗ ದಕ್ಷಿಣಾದೇವಿಯ ಉಪಾಖ್ಯಾನವನ್ನು ವಿವರಿಸುವೆನು. ಸಾವಧಾನದಿಂದ ಕೇಳು.

೨. ಹಿಂದೆ ಗೋಲೋಕದಲ್ಲಿ, ಶ್ರೀಹರಿಯ ಪ್ರಿಯಳೂ, ರಾಧೆಗೆ ಸಮಾನಳೂ ಧನ್ಯಳೂ, ಮಾನ್ಯಳೂ, ಅತ್ಯಂತ ಸುಂದರಿಯೂ, ಪತಿವ್ರತೆಯೂ ಆದ ಸುಶೀಲೆ ಎಂಬ ಗೋಪಿಯಿದ್ದಳು.

ವಿದ್ಯಾವತೀ ಗುಣವತೀ ಸತೀ ರೂಪವತೀ ತಥಾ ।
ಕಲಾವತೀ ಕೋಮಲಾಂಗೀ ಕಾಂತಾ ಕಮಲಲೋಚನಾ ॥ ೩ ॥

ಸುಶ್ರೋಣೀ ಸುಸ್ತನೀ ಶ್ಯಾಮಾ ನ್ಯಗ್ರೋಧಪರಿಮಂಡಲಾ ।
ಈಷದ್ಧಾಸ್ಯಪ್ರಸನ್ನಾಸ್ಯಾ ರತ್ನಾಲಂಕಾರಭೂಷಿತಾ ॥ ೪ ॥

ಶ್ವೇತಚಂಪಕವರ್ಣಾಭಾ ಬಿಂಬೋಷ್ಠೀ ಮೃಗಲೋಚನಾ ।
ಕಾಮಶಾಸ್ತ್ರಸುನಿಷ್ಣಾತಾ ಕಾಮಿನೀ ಕಲಹಂಸಗಾ ॥ ೫ ॥

ಭಾವಾನುರಕ್ತಾ ಭಾವಜ್ಞಾ ಕೃಷ್ಣಸ್ಯ ಪ್ರಿಯಭಾಮಿನೀ ।
ರಸಜ್ಞಾ ರಸಿಕಾ ರಾಸೇ ರಾಸೇಶಸ್ಯ ರಸೋತ್ಸುಕಃ ॥ ೬ ॥

ಉವಾಸ ದಕ್ಷಿಣೇ ಕ್ರೋಡೇ ರಾಧಾಯಾಃ ಪುರತಃ ಪುರಾ ।
ಸಂಬಭೂವಾನಮ್ರಮುಖೋ ಭಯೇನ ಮಧುಸೂದನಃ ॥ ೭ ॥

೩–೪. ವಿದ್ಯಾವತಿಯೂ, ಗುಣವತಿಯೂ, ರೂಪವತಿಯೂ, ಕಲಾಚತುರಳೂ, ಕೋಮಲಾಂಗಿಯೂ, ಕಮಲವದನೆಯೂ, ಆದ ಆ ಯುವತಿಯು ಪೀನವಾದ ನಿತಂಬಬಿಂಬದಿಂದಲೂ, ವರ್ತುಳಾಕಾರವಾದ ಸ್ತನದ್ವಯದಿಂದಲೂ ಶೋಭಿತಳಾಗಿ, ಮಂದಹಾಸದಿಂದ ಪ್ರಸನ್ನವಾಗಿರುವ ಮುಖದಿಂದ ಮನೋಹರಳಾಗಿ ರತ್ನಾಲಂಕಾರಗಳನ್ನು ಧರಿಸಿದ್ದಳು.

೫. ಬಿಳಿಯ ಸಂಪಿಗೆಯಂತೆ ಮೈಬಣ್ಣವುಳ್ಳ ಆ ಗೋಪಿಯು ಬಿಂಬಫಲದಂತೆ ಕೆಂಪಾದ ಕೆಳದುಟಿಯಿಂದಲೂ, ಜಿಂಕೆಯಂತೆ ಚಂಚಲವಾದ ಕಣ್ಣುಗಳಿಂದಲೂ, ಶ್ರೀಕೃಷ್ಣನ ಮನಮೋಹಕಳಾಗಿದ್ದುದಲ್ಲದೆ, ಕಲಹಂಸಗಮನೆಯೂ ಕಾಮಶಾಸ್ತ್ರನಿಪುಣೆಯೂ ಆಗಿದ್ದಳು.

೬–೭. ಶ್ರೀಕೃಷ್ಣನ ಮನೋಭಿಪ್ರಾಯವನ್ನು ತಿಳಿದು ಅವನಲ್ಲಿ ಅನುರಕ್ತಳಾಗಿ ರಸಿಕಳೂ ರಾಸಕ್ರೀಡೆಯಲ್ಲಿ ಆಸಕ್ತಳೂ, ಆದ ಆ ಗೋಪಿಯು ರಾಧೆಯ ಎದುರಿನಲ್ಲಿಯೇ ಶ್ರೀಕೃಷ್ಣನ ಬಲತೊಡೆಯ ಮೇಲೆ ಮಂಡಿಸಲು, ಶ್ರೀಕೃಷ್ಣನು ರಾಧೆಯ ಭಯದಿಂದ ತಲೆತಗ್ಗಿಸಿಕೊಂಡು ಕುಳಿತನು.

ದೃಷ್ಟ್ವಾ ರಾಧಾಂ ಚ ಪುರತೋ ಗೋಪೀನಾಂ ಪ್ರವರಾಂ ವರಾಂ ।
ಮಾನಿನೀಂ ರಕ್ತವದನಾಂ ರಕ್ತಪಂಕಜಲೋಚನಾಂ ॥ ೮ ॥

ಕೋಪೇನ ಕಂಪಿತಾಂಗೀಂ ಚ ಕೋಪಾನಾಂ ಕೋಪದರ್ಶನಾಂ ।
ಕೋಪೇನ ನಿಷ್ಠುರಂ ವಕ್ತುಮುದ್ಯತಾಂ ಸ್ಫುರಿತಾಧರಾಂ ॥ ೯ ॥

ಆಗಚ್ಛಂತೀಂ ಚ ವೇಗೇನ ವಿಜ್ಞಾಯ ತದನಂತರಂ ।
ವಿರೋಧಭೀತೋ ಭಗವಾನಂತರ್ಧಾನಂ ಜಗಾಮ ಸಃ ॥ ೧೦ ॥

ಪಲಾಯಂತಂ ಚ ತಂ ಶಾಂತಂ ಸತ್ವಾಧಾರಂ ಸುವಿಗ್ರಹಂ ।
ವಿಲೋಕ್ಯ ಕಂಪಿತಾ ಗೋಪೀ ಸುಶೀಲಾಂತರ್ದಧೌ ಭಿಯಾ ॥ ೧೧ ॥

ವಿಲೋಕ್ಯ ಸಂಕಟಂ ತತ್ರ ಗೋಪೀನಾಂ ಲಕ್ಷಕೋಟಯಃ ।
ಬದ್ಧಾಂಜಲಿಪುಟಾ ಭೀತಾ ಭಕ್ತಿನಮ್ರಾತ್ಮಕಂಧರಾಃ ॥ ೧೨ ॥

ರಕ್ಷ ರಕ್ಷೇತ್ಯುಕ್ತವತ್ಯೋ ಹೇ ದೇವೀತಿ ಪುನಃ ಪುನಃ ।
ಯಯುರ್ಭಯೇನ ಶರಣಂ ತಸ್ಯಾಶ್ಚರಣಪಂಕಜೇ ॥ ೧೩ ॥

೮–೯. ಅದನ್ನು ನೋಡಿ ಕೋಪದಿಂದ ಕೆಂಪಾದ ಕಣ್ಣುಗಳಿಂದಲೂ, ಮುಖದಿಂದಲೂ ಕೂಡಿದ ಮಾನವತಿಯಾದ ರಾಧೆಯು, ಮೈಯೆಲ್ಲಾ ಕೋಪದಿಂದ ನಡುಗುತ್ತಿರಲು ಮತ್ತು ಕೆಳತುಟಿಯು ಅದರುತ್ತಿರಲು, ನಿಷ್ಠುರವಾಕ್ಯವನ್ನು ನುಡಿಯುವುದಕ್ಕಾಗಿ ಶ್ರೀಕೃಷ್ಣನನ್ನು ಸಮೀಪಿಸಿ ಬಂದಳು.

೧೦. ಹೀಗೆ ರಾಧೆಯು ವೇಗದಿಂದ ತನ್ನ ಹತ್ತಿರಕ್ಕೆ ಬರುತ್ತಿರುವುದನ್ನು ನೋಡಿ ವಿರೋಧವುಂಟಾಗುವುದೆಂದು ಭಗವಂತನು ತಿಳಿದು, ಭಯದಿಂದ ಕಣ್ಮರೆಯಾದನು.

೧೧. ಸತ್ವಗುಣಕ್ಕೆ ಆಧಾರನೂ, ಸುಂದರವಿಗ್ರಹನೂ, ಶಾಂತನೂ ಆದ ಶ್ರೀಕೃಷ್ಣನು ಕಣ್ಮರೆಯಾದುದನ್ನು ನೋಡಿ ಸುಶೀಲೆ ಎಂಬ ಗೋಪಿಯೂ ಕೂಡ ಭಯದಿಂದ ಅಂತರ್ಧಾನ ಹೊಂದಿದಳು.

೧೨–೧೩. ಈ ಕಷ್ಟವನ್ನು ನೋಡಿ ಅಲ್ಲಿದ್ದ ಕೋಟ್ಯಂತರ ಗೋಪಿಕಾ ಸ್ತ್ರೀಯರು ಕೈಮುಗಿದುಕೊಂಡು ಭಕ್ತಿಯಿಂದ ತಲೆತಗ್ಗಿಸಿ ' ಎಲೌ ರಾಧಾದೇವಿಯೇ ನಮ್ಮನ್ನು ಕಾಪಾಡು ಕಾಪಾಡು ' ಎಂದು ಹೇಳುತ್ತಾ ಆಕೆಯ ಚರಣಕಮಲಗಳನ್ನು ಶರಣುಹೊಂದಿದರು.

ತ್ರಿಲಕ್ಷಕೋಟಿಯೋ ಗೋಪಾಃ ಸುದಾಮಾದಯ ಏವ ಚ ।
ಯಯುರ್ಭಯೇನ ಶರಣಂ ತತ್ಪಾದಾಬ್ಜೇ ಚ ನಾರದ ॥ ೧೪ ॥

ಪಲಾಯಂತಂ ಚ ಕಾಂತಂ ವೈ ವಿಜ್ಞಾಯ ಪರಮೇಶ್ವರೀ ।
ಪಲಾಯಂತೀಂ ಸಹಚರೀಂ ಸುಶೀಲಾಂ ಚ ಶಶಾಪ ಸಾ ॥ ೧೫ ॥

ಅದ್ಯ ಪ್ರಭೃತಿ ಗೋಲೋಕಂ ಸಾ ಚೇದಾಯಾತಿ ಗೋಪಿಕಾ ।
ಸದ್ಯೋ ಗಮನಮಾತ್ರೇಣ ಭಸ್ಮಸಾಚ್ಚ ಭವಿಷ್ಯತಿ ॥ ೧೬ ॥

ಇತ್ಯೇವಮುಕ್ತ್ವಾ ತತ್ರೈವ ದೇವದೇವೀಶ್ವರೀ ರುಷಾ ।
ರಾಸೇಶ್ವರೀ ರಾಸಮಧ್ಯೇ ರಾಸೇಶಂ ಚಾಜುಹಾವ ಚ ॥ ೧೭ ॥

ನಾಲೋಕ್ಯ ಪುರತಃ ಕೃಷ್ಣಂ ರಾಧಾ ವಿರಹಕಾತರಾ ।
ಯುಗಕೋಟಿಸಮಂ ಮೇನೇ ಕ್ಷಣಭೇದೇನ ಸುವ್ರತಾ ॥ ೧೮ ॥

---

೧೪. ಎಲೈ ನಾರದನೇ, ಆಗ ಸುದಾಮನೇ ಮುಂತಾದ ಮೂರುಲಕ್ಷಕೋಟಿ ಗೋಪರೂ ಕೂಡ ಭಯದಿಂದ ರಾಧೆಯ ಚರಣಾರವಿಂದಗಳ ಮರೆಹೊಕ್ಕರು.

೧೫. ಪರಮೇಶ್ವರಿಯಾದ ರಾಧೆಯು, ಓಡಿಹೋಗುತ್ತಿರುವ ತನ್ನ ಪತಿಯನ್ನೂ, ಗೆಳತಿಯಾದ ಸುಶೀಲೆಯನ್ನೂ ನೋಡಿ ಮುಂದೆ ಹೇಳುವಂತೆ ಆಕೆಗೆ ಶಾಪವಿತ್ತಳು.

೧೬. ಇಂದಿನಿಂದ ಮೊದಲುಗೊಂಡು ಆ ಸುಶೀಲೆಯೆಂಬ ಗೋಪಿಕೆಯು ಗೋಲೋಕಕ್ಕೆ ಏನಾದರೂ ಬಂದರೆ ಬಂದ ಕ್ಷಣದಲ್ಲಿ ಭಸ್ಮವಾಗುವಳು.

೧೭. ದೇವಾದಿದೇವತೆಗಳಿಗೂ ಈಶ್ವರಿಯಾದ ಆ ರಾಧೆಯು ಕೋಪದಿಂದ ಇಂತು ನುಡಿದು, ರಾಸಮಂಡಲದ ಮಧ್ಯದಲ್ಲಿ ನಿಂತು ರಾಸೇಶ್ವರನಾದ ಶ್ರೀಕೃಷ್ಣನನ್ನು ರಾಸಕ್ರೀಡೆಗಾಗಿ ಕರೆದಳು.

೧೮. ಆದರೆ ಆ ಪತಿವ್ರತೆಯು, ತನ್ನ ಮುಂದೆ ಶ್ರೀಕೃಷ್ಣನನ್ನು ಕಾಣದೆ ವಿರಹಕಾತರಳಾಗಿ ಒಂದು ಕ್ಷಣವನ್ನೂ ಕೋಟಿಯುಗಗಳಂತೆ ಎಣಿಸಿದಳು.

ಹೇ ಕೃಷ್ಣ ಹೇ ಪ್ರಾಣನಾಥಾಗಚ್ಛ ಪ್ರಾಣಾಧಿಕಪ್ರಿಯ ।
ಪ್ರಾಣಾಧಿಷ್ಠಾತೃದೇವೇಹ ಪ್ರಾಣಾಃ ಯಾಂತಿ ತ್ವಯಾ ವಿನಾ ॥ ೧೯ ॥

ಸ್ತ್ರೀಗರ್ವಃ ಪತಿಸೌಭಾಗ್ಯದ್ವರ್ಧತೇ ಚ ದಿನೇ ದಿನೇ ।
ಸುಸ್ತ್ರೀ ಚೇದ್ವಿಭವೋ ಯಸ್ಮಾತ್ತಂ ಭಜೇದ್ಧರ್ಮತಃ ಸದಾ ॥ ೨೦ ॥

ಪತಿರ್ಬಂಧುಃ ಕುಲಸ್ತ್ರೀಣಾಮಧಿದೇವಃ ಸದಾ ಗತಿಃ ।
ಪರಂ ಸಂಪತ್ಸ್ವರೂಪಶ್ಚ ಸುಖರೂಪಶ್ಚ ಮೂರ್ತಿಮಾನ್ ॥ ೨೧ ॥

ಧರ್ಮದಃ ಸುಖದಃ ಶಶ್ವತ್ಪ್ರೀತಿದಃ ಶಾಂತಿದಃ ಸದಾ ।
ಸಮ್ಮಾನದೋ ಮಾನದಶ್ಚ ಮಾನ್ಯೋ ವೈ ಮಾನಖಂಡನಃ ॥ ೨೨ ॥

ಸಾರಾತ್ಸಾರತಮಃ ಸ್ವಾಮೀ ಬಂಧೂನಾಂ ಬಂಧುವರ್ಧನಃ ।
ನ ಚ ಭರ್ತುಸ್ಸಮೋ ಬಂಧುಃ ಸರ್ವಬಂಧುಷು ದೃಶ್ಯತೇ ॥ ೨೩ ॥

---

೧೯. ನನ್ನ ಪ್ರಾಣಕಾಂತನೂ, ಪ್ರಾಣಗಳಿಗಿಂತ ಅಧಿಕಪ್ರಿಯನೂ, ಪ್ರಾಣಾಧಿಷ್ಠಾತೃದೇವತೆಯೂ ಆದ ಎಲೈ ಕೃಷ್ಣನೇ, ಬೇಗ ಬಾ. ನಿನ್ನನ್ನು ಬಿಟ್ಟು ನನ್ನ ಪ್ರಾಣಗಳು ಇರಲಾರವು.

೨೦. ತನ್ನ ಮನಮೆಚ್ಚಿದ ಪತಿಯನ್ನು ಪಡೆದಿರುವ ಹೆಂಗಸಿನ ಗರ್ವವು ದಿನೆದಿನೇ ಅಭಿವೃದ್ಧಿಯಾಗುತ್ತಿರುವುದು. ಆದ್ದರಿಂದ ಹೆಂಗಸು ಒಳ್ಳೆಯವಳಾದರೆ ಯಾರಿಂದ ತನಗೆ ಸೌಭಾಗ್ಯಸಂಪತ್ತು ದೊರಕಿರುವುದೋ ಅವನನ್ನು ಧರ್ಮಪಾಲನೆಗಾಗಿ ಸರ್ವದಾ ಭಜಿಸಬೇಕು.

೨೧. ಸತ್ಕುಲದಲ್ಲಿ ಹುಟ್ಟಿದ ಸ್ತ್ರೀಯರಿಗೆ ತಮ್ಮ ಪತಿಯೇ ನೆಂಟನು ಅವನೇ ದೇವತೆಯು. ಅವನೇ ಪಾಲಕನು ಮೂರ್ತಿವೆತ್ತ ಸಂಪತ್ತು ಮತ್ತು ಸುಖಸ್ವರೂಪನೆಂದು ಅವನನ್ನು ತಿಳಿಯಬೇಕು.

೨೨. ಸ್ತ್ರೀಯರಿಗೆ ಧರ್ಮ ಮತ್ತು ಸುಖಗಳನ್ನೂ, ಪ್ರೀತಿ ಮತ್ತು ಶಾಂತಿಗಳನ್ನೂ, ಗೌರವ ಮತ್ತು ಅಭಿಮಾನವನ್ನೂ ದೊರಕಿಸಿಕೊಟ್ಟು ಪೂಜ್ಯನೆನಿಸುವ ಪತಿಯೇ ಅವರ ದುರಭಿಮಾನವನ್ನು ಖಂಡಿಸಲೂ ಶಕ್ತನಹುದು.

೨೩. ಸ್ತ್ರೀಯರಿಗೆ ಸಾರವಸ್ತುಗಳಲ್ಲೆಲ್ಲ ಪತಿಯೇ ಅತ್ಯಂತ ಸಾರಭೂತನು. ಬಂಧುಗಳಲ್ಲೆಲ್ಲ ಉತ್ತಮ ಬಂಧುವಾದ, ಪತಿಗೆ ಸಮಾನನಾದ ಬಂಧುವು ಬೇರಾರೂ ಇಲ್ಲ.

ಭರಣಾದೇವ ಭರ್ತಾಯಂ ಪಾಲನಾತ್ಪತಿರುಚ್ಯತೇ ।
ಶರೀರೇಶಾಚ್ಚ ಸ ಸ್ವಾಮೀ ಕಾಮದಃ ಕಾಂತ ಏವ ಚ ॥ ೨೪ ॥

ಬಂಧುಶ್ಚ ಸುಖಬಂಧಾಚ್ಚ ಪ್ರೀತಿದಾನಾತ್ಪ್ರಿಯಃ ಪರಃ ।
ಐಶ್ವರ್ಯದಾನಾದೀಶಶ್ಚ ಪ್ರಾಣೇಶಾತ್ಪ್ರಾಣನಾಥಕಃ ॥ ೨೫ ॥

ರತಿದಾನಾಚ್ಚ ರಮಣಃ ಪ್ರಿಯೋ ನಾಸ್ತಿ ಪ್ರಿಯಾತ್ಪರಃ ।
ಪುತ್ರಸ್ತು ಸ್ವಾಮಿನಃ ಶುಕ್ರಾಜ್ಜಾಯತೇ ತೇನ ಸ ಪ್ರಿಯಃ ॥ ೨೬ ॥

ಶತಪುತ್ರಾತ್ಪರಃ ಸ್ವಾಮೀ ಕುಲಜಾನಾಂ ಪ್ರಿಯಃ ಸದಾ ।
ಅಸತ್ಕುಲಪ್ರಸೂತಾ ಯಾ ಕಾಂತಂ ವಿಜ್ಞಾತುಮಕ್ಷಮಾ ॥ ೨೭ ॥

ಸ್ನಾನಂ ಚ ಸರ್ವತೀರ್ಥೇಷು ಸರ್ವಯಜ್ಞೇಷು ದಕ್ಷಿಣಾಂ ।
ಪ್ರಾದಕ್ಷಿಣ್ಯಂ ಪೃಥಿವ್ಯಾಶ್ಚ ಸರ್ವಾಣಿ ಚ ತಪಾಂಸಿ ವೈ ॥ ೨೮ ॥

---

೨೪. ಪತ್ನಿಯ ರಕ್ಷಣಾಭಾರವನ್ನು ವಹಿಸುವುದರಿಂದ ಭರ್ತನೆಂದೂ, ಪಾಲನೆಮಾಡುವುದರಿಂದ ಪತಿಯೆಂದೂ, ಪತ್ನಿಯ ಶರೀರಕ್ಕೂ ಒಡೆಯನಾದುದರಿಂದ ಸ್ವಾಮಿ ಎಂದೂ, ಕಾಮಪೂರಕನಾದುದರಿಂದ ಕಾಂತನೆಂದೂ, ಗಂಡನನ್ನು ಕರೆಯುವರು.

೨೫–೨೬. ಸಂಸಾರಬಂಧನವನ್ನು ಸುಖಪಡಿಸುವುದರಿಂದ ಬಂಧುವೆಂದೂ, ಪ್ರೀತಿಯನ್ನು ದಾನಮಾಡುವುದರಿಂದ ಪ್ರಿಯನೆಂದೂ, ಸಕಲೈಶ್ವರ್ಯವನ್ನೂ ಕೊಡುವುದರಿಂದ ಈಶನೆಂದೂ ಪ್ರಾಣಗಳ ರಕ್ಷಕನಾದುದರಿಂದ ಪ್ರಾಣನಾಥನೆಂದೂ, ರತಿ ಸುಖವನ್ನು ಕೊಡುವುದರಿಂದ ರಮಣನೆಂದೂ ಕರೆಯುವರು. ಪ್ರಿಯನಿಗಿಂತ ಪ್ರೀತಿ ಪಾತ್ರರು ಬೇರೊಬ್ಬರಿಲ್ಲ ಪತಿಯ ವೀರ್ಯದಿಂದ ಮಗನು ಉತ್ಪತ್ತಿಪಡೆದು ಅವನೂ ಪ್ರಿಯನಾಗುವನು.

೨೭. ಸತ್ಕುಲದಲ್ಲಿ ಹುಟ್ಟಿದ ಹೆಂಗಸರಿಗೆ ನೂರುಮಕ್ಕಳಿಗಿಂತಲೂ ಪ್ರಿಯ ಪತಿಯೇ ಸರ್ವದಾ ಶ್ರೇಷ್ಠನೆನಿಸಿಕೊಳ್ಳುವನು. ಆದರೆ ದುಷ್ಕುಲದಲ್ಲಿ ಹುಟ್ಟಿದ ಹೆಂಗಸರು ತಮ್ಮ ಕಾಂತನ ಮಹಿಮೆಯನ್ನು ತಿಳಿಯಲಾರರು.

೨೮–೩೦. ಸಕಲ ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವುದು, ಸಮಸ್ತ ಯಜ್ಞಗಳನ್ನೂ ಮಾಡಿ ದಕ್ಷಿಣೆ ಕೊಡುವುದು, ಭೂಮಂಡಲವನ್ನು ಪ್ರದಕ್ಷಿಣೆ ಮಾಡುವುದು,

ಸರ್ವಾಣ್ಯೇವ ವ್ರತಾದೀನಿ ಮಹಾದಾನಾನಿ ಯಾನಿ ಚ ।
ಉಪೋಷಣಾನಿ ಪುಣ್ಯಾನಿ ಯಾನ್ಯನ್ಯಾನಿ ಚ ವಿಶ್ವತಃ ॥ ೨೯ ॥

ಗುರುಸೇವಾ ವಿಪ್ರಸೇವಾ ದೇವಸೇವಾದಿಕಂ ಚ ಯತ್ ।
ಸ್ವಾಮಿನಃ ಪಾದಸೇವಾಯಾಃ ಕಲಾಂ ನಾರ್ಹಂತಿ ಷೋಡಶೀಂ ॥ ೩೦ ॥

ಗುರುವಿಪ್ರೇಷ್ಟದೇವೇಷು ಸರ್ವೇಭ್ಯಶ್ಚ ಪತಿರ್ಗುರುಃ ।
ವಿದ್ಯಾದಾತಾ ಯಥಾ ಪುಂಸಾಂ ಕುಲಜಾನಾಂ ತಥಾ ಪ್ರಿಯಃ ॥ ೩೧ ॥

ಗೋಪೀತ್ರಿಲಕ್ಷಕೋಟೀನಾಂ ಗೋಪಾನಾಂ ಚ ತಥೈವ ಚ ।
ಬ್ರಹ್ಮಾಂಡಾನಾಮಸಂಖ್ಯಾನಾಂ ತತ್ರ ಸ್ಥಾನಾಂ ತಥೈವ ಚ ॥ ೩೨ ॥

ರಮಾದಿಗೋಪಕಾಂತಾನಾಮೀಶ್ವರೀ ಯತ್ಪ್ರಸಾದತಃ ।
ಅಹಂ ನ ಜಾನೇ ತಂ ಕಾಂತಂ ಸ್ತ್ರೀಸ್ವಭಾವೋ ದುರತ್ಯಯಃ ॥ ೩೩ ॥

ಎಲ್ಲ ತಪಸ್ಸುಗಳನ್ನೂ ಆಚರಿಸುವುದು, ಸಮಸ್ತ ವ್ರತಗಳನ್ನೂ ಆಚರಿಸಿ ಗೋದಾನಾದಿ ಮಹಾದಾನಗಳನ್ನು ಮಾಡುವುದು. ಪುಣ್ಯದಿವಸಗಳಲ್ಲಿ ಉಪವಾಸ ಮಾಡುವುದು, ದೇವತಾ, ಗುರು, ವಿಪ್ರ ಮುಂತಾದವರನ್ನು ಸೇವಿಸುವುದು, ಇವೆಲ್ಲದರಿಂದ ಲಭಿಸುವ ಪುಣ್ಯವು ಹೆಂಗಸಿಗೆ ತನ್ನ ಪತಿಯ ಪಾದಸೇವೆಮಾಡುವುದರಿಂದ ಲಭಿಸುವ ಪುಣ್ಯದ ಹದಿನಾರನೆಯ ಒಂದು ಭಾಗದಷ್ಟೂ ಇರುವುದಿಲ್ಲ.

೩೧. ದೇವತಾ, ಗುರು, ಬ್ರಾಹ್ಮಣಾದಿಗಳೆಲ್ಲರಿಗೂ ಪತಿಯೆ ಪರಮ ಶ್ರೇಷ್ಠನು. ಗಂಡಸಿಗೆ ವಿದ್ಯೋಪದೇಶಕನಾದ ಗುರುವು ಹೇಗೋ ಹಾಗೆ ಹೆಂಗಸಿಗೆ ತನ್ನ ಪತಿಯು ಪರಮಪೂಜ್ಯನು.

೩೨-೩೩. ಯಾವ ಪರಮಾತ್ಮನ ಅನುಗ್ರಹದಿಂದ ಮೂರುಲಕ್ಷಕೋಟಿ ಗೋಪಗೋಪಿಯರಿಗೂ, ಅಸಂಖ್ಯಬ್ರಹ್ಮಾಂಡ ಮತ್ತು ಅಲ್ಲಿರುವ ಜೀವಿಗಳಿಗೂ, ಲಕ್ಷ್ಮೀ ಮುಂತಾದ ದೇವಿಯರಿಗೂ, ಅಧಿಕಾರಿಣಿಯಾಗಿರುವ ನಾನೇ ನನ್ನ ಪತಿಯ ಮಹಿಮೆಯನ್ನು ತಿಳಿಯೆನು ಎಂದ ಮೇಲೆ ಹೆಂಗಸು ತನ್ನ ಚಂಚಲಸ್ವಭಾವವನ್ನು ಬಿಡಲಾರಳೆಂಬುದು ನಿಶ್ಚಿತವಲ್ಲವೇ ?

ಇತ್ಯುಕ್ತ್ವಾ ರಾಧಿಕಾ ಕೃಷ್ಣಂ ತತ್ರ ದಧ್ಯೌ ಸುಭಕ್ತಿತಃ ।
ಆರಾತ್ಸಂಪ್ರಾಪ ತಂ ತೇನ ವಿಜಹಾರ ಚ ತತ್ರ ವೈ ॥ ೩೪ ॥

ಅಥ ಸಾ ದಕ್ಷಿಣಾ ದೇವೀ ಧ್ವಸ್ತಾ ಗೋಲೋಕತೋ ಮುನೇ ।
ಸುಚಿರಂ ಚ ತಪಸ್ತಪ್ತ್ವಾ ವಿವೇಶ ಕಮಲಾತನೌ ॥ ೩೫ ॥

ಅಥ ದೇವಾದಯಃ ಸರ್ವೇ ಯಜ್ಞಂ ಕೃತ್ವಾ ಸುದುಷ್ಕರಂ ।
ನ ಲಭಂತೇ ಫಲಂ ತೇಷಾಂ ವಿಷಣ್ಣಾ ಪ್ರಯಯುರ್ವಿಧಿಂ ॥ ೩೬ ॥

ವಿಧಿರ್ನಿವೇದನಂ ಶ್ರುತ್ವಾ ದೇವಾದೀನಾಂ ಜಗತ್ಪತಿಃ ।
ದಧ್ಯೌ ಸುಚಿಂತಿತೋ ಭಕ್ತ್ಯಾ ತತ್ಪ್ರತ್ಯಾದೇಶಮಾಪ ಸಃ ॥ ೩೭ ॥

ನಾರಾಯಣಶ್ಚ ಭಗವಾನ್ಮಹಾಲಕ್ಷ್ಮ್ಯಾಶ್ಚ ದೇಹತಃ ।
ಮರ್ತ್ಯಲಕ್ಷ್ಮೀಂ ವಿನಿಷ್ಕೃಷ್ಯ ಬ್ರಹ್ಮಣೇ ದಕ್ಷಿಣಾಂ ದದೌ ॥ ೩೮ ॥

---

೩೪. ಹೀಗೆ ಹೇಳುತ್ತಾ ರಾಧೆಯು ಅಲ್ಲಿ ಶ್ರೀಕೃಷ್ಣಪರಮಾತ್ಮನನ್ನು ಭಕ್ತಿಯಿಂದ ಭಜಿಸಿದಳು. ಕೂಡಲೇ ಪ್ರತ್ಯಕ್ಷನಾಗಿ ಬಂದ ಪರಮಾತ್ಮನೊಡನೆ ಅಲ್ಲಿಯೇ ವಿಹರಿಸಿದಳು.

೩೫. ಇತ್ತ ಸುಶೀಲೆ ಎಂಬ ಹೆಸರುಳ್ಳ ಗೋಪಿಕಾಸ್ತ್ರೀಯು ಗೋಲೋಕದಿಂದ ಕಣ್ಮರೆಯಾಗಿ ಬಹಳಕಾಲ ತಪಸ್ಸುಮಾಡಿ ಲಕ್ಷ್ಮೀದೇವಿಯ ಶರೀರವನ್ನು ಪ್ರವೇಶಮಾಡಿದಳು

೩೬. ಅನಂತರ ದೇವತೆಗಳೆಲ್ಲರೂ ಕಷ್ಟಸಾಧ್ಯವಾದ ಯಜ್ಞಯಾಗಾದಿಗಳನ್ನಾಚರಿಸಿದರೂ ಅದಕ್ಕೆ ತಕ್ಕ ಫಲವನ್ನು ಪಡೆಯದೆ ದುಃಖಿತರಾಗಿ ಬ್ರಹ್ಮನ ಸಮೀಪಕ್ಕೆ ಬಂದರು.

೩೭. ಜಗದೊಡೆಯನಾದ ಬ್ರಹ್ಮನು ದೇವತೆಗಳ ಬಿನ್ನಹವನ್ನು ಕೇಳಿ, ಮನಸ್ಸಿನಲ್ಲಿಯೇ ಚೆನ್ನಾಗಿ ಪರ್ಯಾಲೋಚಿಸಿ ಭಕ್ತಿಯಿಂದ ಶ್ರೀಮನ್ನಾರಾಯಣನನ್ನು ಭಜಿಸಿದನು.

೩೮. ಆಗ ನಾರಾಯಣನು, ಲಕ್ಷ್ಮೀದೇವಿಯ ಶರೀರದಿಂದ ದಕ್ಷಿಣಾದೇವಿಯನ್ನು ಬೇರ್ಪಡಿಸಿ ಬ್ರಹ್ಮನಿಗೆ ಕೊಟ್ಟು ಕಳುಹಿಸಿದನು.

ಬ್ರಹ್ಮಾ ದದೌ ತಾಂ ಯಜ್ಞಾಯ ಪೂರ್ಣಾರ್ಥಂ ಕರ್ಮಣಾಂಸತಾಂ ।
ಯಜ್ಞಃ ಸಂಪೂಜ್ಯ ವಿಧಿವತ್ತಾಂ ತುಷ್ಟಾವ ರಮಾಂ ಮುದಾ ॥ ೩೯ ॥

ತಪ್ತಕಾಂಚನವರ್ಣಾಭಾಂ ಚಂದ್ರಕೋಟಿಸಮಪ್ರಭಾಂ ।
ಅತೀವ ಕಮನೀಯಾಂ ಚ ಸುಂದರೀಂ ಸುಮನೋಹರಾಂ ॥ ೪೦ ॥

ಕಮಲಾಸ್ಯಾಂ ಕೋಮಲಾಂಗೀಂ ಕಮಲಾಯತಲೋಚನಾಂ ।
ಕಮಲಾಸನಸಂಪೂಜ್ಯಾಂ ಕಮಲಾಂಗಸಮುದ್ಭವಾಂ ॥ ೪೧ ॥

ವಹ್ನಿಶುದ್ಧಾಂಶುಕಾಧಾನಾಂ ಬಿಂಬೋಷ್ಠೀಂ ಸುದತೀಂ ಸತೀಂ ।
ಬಿಭ್ರತೀಂ ಕಬರೀಭಾರಂ ಮಾಲತೀಮಾಲ್ಯಭೂಷಿತಂ ॥ ೪೨ ॥

ಈಷದ್ಧಾಸ್ಯಪ್ರಸನ್ನಾಸ್ಯಾಂ ರತ್ನಭೂಷಣಭೂಷಿತಾಂ ।
ಸುವೇಷಾಢ್ಯಾಂ ಚ ಸುಸ್ನಾತಾಂ ಮುನಿಮಾನಸಮೋಹಿನೀಂ ॥ ೪೩ ॥

---

೩೯. ಬ್ರಹ್ಮನು ಸತ್ಪುರುಷರ ಕರ್ಮವನ್ನು ಪೂರ್ತಿಗೊಳಿಸುವ ಸಲುವಾಗಿ ಆ ದಕ್ಷಿಣಾದೇವಿಯನ್ನು ಯಜ್ಞಪುರುಷನಿಗೆ ಕೊಡಲು ಅವನು ವಿಧಿಪೂರ್ವಕವಾಗಿ ಅವಳನ್ನು ಪೂಜಿಸಿ ಸಂತೋಷಪಡಿಸಿದನು.

೪೦–೪೧. ಪುಟಕ್ಕೆ ಹಾಕಿದ ಚಿನ್ನದಂತೆ ಹೊಳೆಯುವ ಹೊಂಬಣ್ಣವುಳ್ಳ ದೇಹಕಾಂತಿಯಿಂದಲೂ, ಕೋಟಿಚಂದ್ರರಿಗೆ ಸದೃಶವಾದ ಮುಖಮಂಡಲದಿಂದಲೂ, ಬಹಳ ಮನೋಹರಳಾದ ಆ ಸುಂದರಿಯು ತಾವರೆಯಂತಿರುವ ಮುಖ ಮತ್ತು ಕಣ್ಣುಗಳಿಂದ ಕೂಡಿ, ಕಮಲೆಯ ಅಂಗದಿಂದ ಜನಿಸಿ ಕಮಲಾಸನನಾದ ಬ್ರಹ್ಮನಿಗೂ ಪೂಜ್ಯಳಾಗಿದ್ದಳು.

೪೨–೪೩. ತೊಂಡೆಯ ಹಣ್ಣಿನಂತಿರುವ ಕೆಳತುಟಿಯಿಂದಲೂ, ಮುತ್ತಿನ ಸಾಲಿನಂತಿರುವ ದಂತಪಂಕ್ತಿಯಿಂದಲೂ ಪ್ರಸನ್ನಮುಖಿಯಾದ ಆ ದೇವಿಯು ವಹ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ, ರತ್ನಾಭರಣಗಳಿಂದಲಂಕೃತಳಾಗಿ, ಜಾಜೀ ಹೂವಿನ ಮಾಲೆಯನ್ನು ಕೇಶಪಾಶದಲ್ಲಿ ಮುಡಿದು, ಮುನಿಗಳ ಮನಸ್ಸಿಗೂ ಮೋಹವನ್ನು ಹುಟ್ಟಿಸುವಂತಿದ್ದಳು.

ಕಸ್ತೂರೀಬಿಂದುಭಿಸ್ಸಾರ್ಧಂ ಚಂದನೈಶ್ಚ ಸುಗಂಧಿಭಿಃ ।
ಸಿಂದೂರಬಿಂದುನಾತ್ಯಂತಂ ಮಸ್ತಕಾಧಃಸ್ಥಲೋಜ್ವಲಂ ॥ ೪೪ ॥

ಸುಪ್ರಶಸ್ತನಿತಂಬಾಢ್ಯಾಂ ಬೃಹಚ್ಛ್ರೋಣಿಪಯೋಧರಾಂ ।
ಕಾಮದೇವಾಧಾರರೂಪಾಂ ಕಾಮಬಾಣಪ್ರಪೀಡಿತಾಂ ॥ ೪೫ ॥

ತಾಂ ದೃಷ್ಟ್ವಾ ರಮಣೀಯಾಂ ಚ ಯಜ್ಞೋ ಮೂರ್ಛಾಮವಾಪ ಹ ।
ಪತ್ನೀಂ ತಾಮೇವ ಜಗ್ರಾಹ ವಿಧಿಬೋಧಿತಮಾರ್ಗತಃ ॥ ೪೬ ॥

ದಿವ್ಯಂ ವರ್ಷಶತಂ ಚೈವ ತಾಂ ಗೃಹೀತ್ವಾಥ ನಿರ್ಜನೇ ।
ಯಜ್ಞೋ ರೇಮೇ ಮುದಾಯುಕ್ತೋ ರಾಮಯಾ ರಮಯಾ ಸಹ॥ ೪೭ ॥

ಗರ್ಭಂ ದಧಾರ ಸಾ ದೇವೀ ದಿವ್ಯಂ ದ್ವಾದಶವತ್ಸರಂ ।
ತತಃ ಸುಷಾವ ಪುತ್ರಂ ಚ ಫಲಂ ವೈ ಸರ್ವಕರ್ಮಣಾಂ ॥ ೪೮ ॥

೪೪–೪೫. ಹಣೆಯ ಪ್ರದೇಶದಲ್ಲಿ ಧರಿಸಿರುವ ಸುಗಂಧವಾದ ಕಸ್ತೂರಿ, ಚಂದನ ಮತ್ತು ಕುಂಕುಮದ ಬೊಟ್ಟುಗಳಿಂದ ಶೋಭಿತಳಾಗಿ ಸುಂದರವಾದ ನಿತಂಬ ಮತ್ತು ವರ್ತುಳಾಕಾರವಾದ ಸ್ತನಗಳಿಂದ ಮನ್ಮಥನಿಗೆ ಆಧಾರರೂಪಳಾದ ಆ ದೇವಿಯು ಮನ್ಮಥಬಾಣದಿಂದ ಪೀಡಿತಳಾಗಿದ್ದಳು.

೪೬. ಅತ್ಯಂತ ಸುಂದರಿಯಾದ ಆಕೆಯನ್ನು ನೋಡಿ ಯಜ್ಞಪುರುಷನು ಮೂರ್ಛೆಗೊಂಡು. ಎಚ್ಚೆತ್ತು ಬ್ರಹ್ಮನು ಉಪದೇಶಿಸಿದ ರೀತಿಯಲ್ಲಿ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಿದನು.

೪೭. ಸಂತುಷ್ಟನಾದ ಯಜ್ಞಪುರುಷನು ಸುಂದರಿಯಾದ ಆ ದಕ್ಷಿಣಾದೇವಿಯೊಡನೆ ನಿರ್ಜನಪ್ರದೇಶದಲ್ಲಿ ದಿವ್ಯನೂರುವರ್ಷಗಳಕಾಲ ರಮಿಸಿದನು.

೪೮. ಆ ದೇವಿಯು ಹನ್ನೆರಡು ವರ್ಷಗಳಕಾಲ ಗರ್ಭವನ್ನು ಧರಿಸಿಕೊಂಡಿದ್ದು ಸರ್ವಕರ್ಮಗಳಿಗೂ ಫಲರೂಪನಾದ ' ಫಲ ' ನೆಂಬ ಪುತ್ರನೊಬ್ಬನನ್ನು ಹೆತ್ತಳು.

ಕರ್ಮಣಾಂ ಫಲದಾತಾ ಚ ದಕ್ಷಿಣಾ ಕರ್ಮಣಾಂ ಸತಾಂ ।
ಪರಿಪೂರ್ಣೇ ಕರ್ಮಣಿ ಚ ತತ್ಪುತ್ರಃ ಫಲದಾಯಕಃ ॥ ೪೯ ॥

ಯಜ್ಞೋ ದಕ್ಷಿಣಯಾ ಸಾರ್ಧಂ ಪುತ್ರೇಣ ಚ ಫಲೇನ ಚ ।
ಕರ್ಮಣಾಂ ಫಲದಾತಾ ಚೇತ್ಯೇವಂ ವೇದವಿದೋ ವಿದುಃ ॥ ೫೦ ॥

ಯಜ್ಞಶ್ಚ ದಕ್ಷಿಣಾಂ ಪ್ರಾಪ್ಯ ಪುತ್ರಂ ಚ ಫಲದಾಯಕಂ ।
ಫಲಂ ದದೌ ಚ ಸರ್ವೇಭ್ಯಃ ಕರ್ಮಿಭ್ಯೋ ಯದಾ ಮುನೇ ॥ ೫೧ ॥

ತದಾ ದೇವಾದಯಸ್ತುಷ್ಟಾಃ ಪರಿಪೂರ್ಣಮನೋರಥಾಃ ।
ಸ್ವಸ್ಥಾನಂ ಪ್ರಯಯುಃ ಸರ್ವೇ ಧರ್ಮವಕ್ತ್ರಾದಿದಂ ಶ್ರುತಂ ॥ ೫೨ ॥

ಕೃತ್ವಾ ಕರ್ಮ ಚ ಕರ್ತಾ ತು ತೂರ್ಣಂ ದದ್ಯಾಚ್ಚ ದಕ್ಷಿಣಾಂ ।
ತತ್ಕ್ಷಣಂ ಫಲಮಾಪ್ನೋತಿ ವೇದೈರುಕ್ತಮಿದಂ ಮುನೇ ॥ ೫೩ ॥

---

೪೯. ಸತ್ಕರ್ಮಗಳ ಫಲವನ್ನು ಕೊಡುವವಳು ದಕ್ಷಿಣಾದೇವಿಯು. ಕರ್ಮವು ಪೂರ್ಣವಾದ ಮೇಲೆ ಯಜ್ಞದೇವನ ಪುತ್ರನು ಫಲವನ್ನು ಕೊಡುವವನು.

೫೦. ಯಜ್ಞಪುರುಷನು ಪತ್ನಿಯಾದ ದಕ್ಷಿಣಾದೇವಿಯೊಡನೆಯೂ, ಪುತ್ರನಾದ ಫಲನೊಡನೆಯೂ ಕೂಡಿ ಕರ್ಮಫಲದಾಯಕನಾಗುವನು ಎಂದು ವೇದವನ್ನು ಬಲ್ಲವರು ಹೇಳುವರು.

೫೧. ಯಜ್ಞಪುರುಷನು ದಕ್ಷಿಣಾದೇವಿಯನ್ನೂ, ಫಲದಾತನಾದ ಪುತ್ರನನ್ನೂ ಪಡೆದು ಕರ್ಮಪರಾಯಣರೆಲ್ಲರಿಗೂ ಫಲವನ್ನು ಕೊಟ್ಟನು.

೫೨. ಆಗ ದೇವತೆಗಳೆಲ್ಲರೂ ಪೂರ್ಣಮನೋರಥರಾಗಿ ಸಂತೋಷದಿಂದ ತಮ್ಮ ತಮ್ಮ ಸ್ಥಾನಕ್ಕೆ ಹಿಂತಿರುಗಿದರು. ಇದನ್ನು ಧರ್ಮಪುರುಷನ ಬಾಯಿಂದ ನಾನು ಕೇಳಿದೆನು.

೫೩. ಕರ್ತೃವಾದವನು ಸತ್ಕರ್ಮವನ್ನಾಚರಿಸಿ ಕೂಡಲೇ ದಕ್ಷಿಣೆಯನ್ನು ಕೊಡುವುದರಿಂದ ಸತ್ಫಲವನ್ನು ಹೊಂದುವನೆಂದು ವೇದೋಕ್ತವಾಗಿದೆ.

ಕರ್ತಾ ಕರ್ಮಣಿ ಪೂರ್ಣೇಽಪಿ ತತ್ಕ್ಷಣಾದ್ಯದಿ ದಕ್ಷಿಣಾಂ ।
ನ ದದ್ಯಾದ್ಬ್ರಾಹ್ಮಣೇಭ್ಯಶ್ಚ ದೈವೇನಾಜ್ಞಾನತೋಽಥವಾ ॥ ೫೪ ॥

ಮುಹೂರ್ತೇ ಸಮತೀತೇ ಚ ದ್ವಿಗುಣಾ ಸಾ ಭವೇದ್ಧ್ರುವಂ ॥ ೫೫ ॥

ಏಕರಾತ್ರೇ ವ್ಯತೀತೇ ತು ಭವೇದಷ್ಟಗುಣಾ ಚ ಸಾ ।
ತ್ರಿರಾತ್ರೇ ವೈ ದಶಗುಣಂ ಸಪ್ತಾಹೇ ದ್ವಿಗುಣಾ ತತಃ ॥ ೫೬ ॥

ಮಾಸೇ ಲಕ್ಷಗುಣಾ ಪ್ರೋಕ್ತಾ ಬ್ರಾಹ್ಮಣಾನಾಂ ಚ ವರ್ಧತೇ ।
ಸಂವತ್ಸರೇ ವ್ಯತೀತೇ ತು ಸಾ ತ್ರಿಕೋಟಿಗುಣಾ ಭವೇತ್ ॥ ೫೭ ॥

ಕರ್ಮ ತದ್ಯಜಮಾನಾನಾಂ ಸರ್ವಂ ವೈ ನಿಷ್ಫಲಂ ಭವೇತ್ ।
ಸ ಚ ಬ್ರಹ್ಮಸ್ವಾಪಹಾರೀ ನ ಕರ್ಮಾರ್ಹೋಽಶುಚಿರ್ನರಃ ॥ ೫೮ ॥

೫೪–೫೫. ಕರ್ಮವು ಪರಿಪೂರ್ಣವಾದರೂ, ದುರದೃಷ್ಟದಿಂದಾಗಲೀ, ಅಜ್ಞಾನದಿಂದಾಗಲೀ ಕರ್ತೃವು ಕೂಡಲೇ ದಕ್ಷಿಣೆಯನ್ನು ಬ್ರಾಹ್ಮಣರಿಗೆ ಕೊಡದಿದ್ದರೆ ಒಂದು ಮುಹೂರ್ತಕಾಲ ಕಳೆದ ಮೇಲೆ ಮೊದಲಿನದಕ್ಕೆ ದ್ವಿಗುಣವಾಗಿ ದಕ್ಷಿಣೆಯನ್ನು ಕೊಡಬೇಕಾಗುವುದು.

೫೬–೫೭. ಹೀಗೆಯೇ ಒಂದು ರಾತ್ರಿ ಕಳೆದರೆ ಎಂಟರಷ್ಟು, ಮೂರು ರಾತ್ರಿ ಕಳೆದನಂತರ ಹತ್ತರಷ್ಟು, ಏಳುರಾತ್ರಿಯಾದ ಮೇಲೆ ಅದರ ಎರಡರಷ್ಟು (ಇಪ್ಪತ್ತರಷ್ಟು) ಒಂದು ತಿಂಗಳು ಕಳೆದರೆ ಒಂದು ಲಕ್ಷದಷ್ಟು, ಒಂದು ವರ್ಷ ಕಳೆದರೆ ಮೂರುಕೋಟಿಯಷ್ಟು ಅಧಿಕವಾಗಿ ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಡಬೇಕು.

೫೮. ಅಲ್ಲದೆ ದಕ್ಷಿಣೆಯನ್ನು ಕೊಡದೆ ಆಚರಿಸಿದ ಕರ್ಮವು ಕರ್ತೃವಿಗೆ ಫಲದಾಯಕವಾಗುವುದಿಲ್ಲ. ದಕ್ಷಿಣೆಯನ್ನು ಕೊಡದಿರುವುದರಿಂದ ಬ್ರಾಹ್ಮಣ ಸ್ವತ್ತನ್ನು ಅಪಹರಿಸಿದಂತಾಗಿ ಆ ಮನುಷ್ಯನು ಅಶುಚಿಯೂ, ಸತ್ಕರ್ಮಾಚರಣೆಗೆ ಅನರ್ಹನೂ ಆಗುವನು.

ದರಿದ್ರೋ ವ್ಯಾಧಿಯುಕ್ತಶ್ಚ ತೇನ ಪಾಪೇನ ಪಾತಕೀ ।
ತದ್ಗೃಹಾದ್ಯಾತಿ ಲಕ್ಷ್ಮೀಶ್ಚ ಶಾಪಂ ದತ್ವಾ ಸುದಾರುಣಂ ॥ ೫೯ ॥

ಪಿತರೋ ನೈವ ಗೃಹ್ಣಂತಿ ತದ್ದತ್ತಂ ಶ್ರಾದ್ಧತರ್ಪಣಂ ।
ಏವಂ ಸುರಾಶ್ಚ ತತ್ಪೂಜಾಂ ತದ್ದತ್ತಾಂ ಪಾವಕಾಹುತಿಂ ॥ ೬೦ ॥

ದಾತಾ ದದಾತಿ ನೋ ದಾನಂ ಗೃಹೀತಾ ತನ್ನ ಯಾಚತೇ ।
ಉಭೌ ತೌ ನರಕಂ ಯಾತ ಛಿನ್ನರಜ್ಜುರ್ಯಥಾ ಘಟಃ ॥ ೬೧ ॥

ನಾರ್ಪಯೇದ್ಯಜಮಾನಶ್ಚೇದ್ಯಾಚಿತಾರಂ ಚ ದಕ್ಷಿಣಾಂ ।
ಭವೇದ್ಬ್ರಹ್ಮಸ್ವಾಪಹಾರೀ ಕುಂಭೀಪಾಕಂ ವ್ರಜೇದ್ಧ್ರುವಂ ॥ ೬೨ ॥

ವರ್ಷಲಕ್ಷಂ ವಸೇತ್ತತ್ರ ಯಮದೂತೇನ ತಾಡಿತಃ ।
ತತೋ ಭವೇತ್ಸ ಚಂಡಾಲೋ ವ್ಯಾಧಿಯುಕ್ತೋ ದರಿದ್ರಕಃ ॥ ೬೩ ॥

---

೫೯. ಅದರಿಂದ ಕರ್ತೃವು ಮಹಾಪಾಪಿಯೂ, ದರಿದ್ರನೂ, ರೋಗಗ್ರಸ್ತನೂ ಆಗುವನು. ಲಕ್ಷ್ಮಿಯು ಅವನಿಗೆ ಭಯಂಕರವಾದ ಶಾಪವಿತ್ತು ಅವನ ಮನೆಯಿಂದ ದೂರಹೋಗುವಳು.

೬೦. ಕರ್ಮಾರ್ಹನಲ್ಲದ ಅವನು ಕೊಡುವ ಶ್ರಾದ್ಧಪಿಂಡವನ್ನು ಪಿತೃದೇವತೆಗಳು ಸ್ವೀಕರಿಸುವುದಿಲ್ಲ. ಹಾಗೆಯೇ ದೇವತೆಗಳೂ ಕೂಡ ಅವನು ಮಾಡಿದ ಪೂಜೆಯನ್ನೂ, ಅವನು ಅಗ್ನಿಯಲ್ಲಿ ಅರ್ಪಿಸಿದ ಹವಿಸ್ಸನ್ನೂ ಸ್ವೀಕರಿಸುವುದಿಲ್ಲ.

೬೧. ದಾನಮಾಡಬೇಕಾದವನು ದಾನಕೊಡದಿದ್ದರೆ, ದಾನಸ್ವೀಕಾರಕ್ಕೆ ಅರ್ಹನಾದವನು ಅದನ್ನು ಬೇಡದಿದ್ದರೆ ಅವರಿಬ್ಬರೂ ಹಗ್ಗವು ಕಿತ್ತಿರುವ ಗಡಿಗೆಯು ನೀರಿನಲ್ಲಿ ಮುಳುಗುವಂತೆ, ನರಕಕ್ಕೆ ಹೋಗಿ ಬೀಳುವರು.

೬೨. ಯಜ್ಞಮಾಡಿದವನು, ಯಾಚಿಸುವವನಿಗೆ ದಕ್ಷಿಣಾದಾನಮಾಡದಿದ್ದರೆ ಬ್ರಹ್ಮಸ್ವತ್ತನ್ನು ಅಪಹರಿಸಿದಂತಾಗಿ ಕುಂಭೀಪಾಕವೆಂಬ ನರಕದಲ್ಲಿ ಬೀಳುವನು.

೬೩. ಅಲ್ಲಿ ಯಮದೂತರಿಂದ ಶಿಕ್ಷೆಹೊಂದುತ್ತಾ ಒಂದು ಲಕ್ಷವರ್ಷವಿದ್ದು ಅನಂತರ ಚಂಡಾಲಯೋನಿಯಲ್ಲಿ ಜನ್ಮವೆತ್ತಿ ರೋಗಗ್ರಸ್ತನೂ ದರಿದ್ರನೂ ಆಗುವನು.

ಪಾತಯೇತ್ಪುರುಷಾನ್ಸಪ್ತ ಪೂರ್ವಾನ್ವೈ ಪೂರ್ವಜನ್ಮನಃ ।
ಇತ್ಯೇವಂ ಕಥಿತಂ ವಿಪ್ರ ಕಿಂ ಭೂಯಃ ಶ್ರೋತುಮಿಚ್ಛಸಿ || ೬೪ ||

|| ನಾರದ ಉವಾಚ ||

ಯತ್ಕರ್ಮ ದಕ್ಷಿಣಾಹೀನಂ ಕೋ ಭುಂಕ್ತೇ ತತ್ಫಲಂ ಮುನೇ ।
ಪೂಜಾವಿಧಿಂ ದಕ್ಷಿಣಾಯಾಃ ಪುರಾ ಯಜ್ಞಕೃತಂ ವದ || ೬೫ ||

|| ನಾರಾಯಣ ಉವಾಚ ||

ಕರ್ಮಣೋಽದಕ್ಷಿಣಸ್ಯೈವ ಕುತ ಏವ ಫಲಂ ಮುನೇ ।
ಸದಕ್ಷಿಣೇ ಕರ್ಮಣಿ ಚ ಫಲಮೇವ ಪ್ರವರ್ತತೇ || ೬೬ ||

ಯಾ ಯಾ ಕರ್ಮಣಿ ಸಾಮಗ್ರೀ ಬಲಿರ್ಭುಂಕ್ತೇ ಚ ತಾಂ ಮುನೇ ।
ಬಲಯೇ ತತ್ಪ್ರದತ್ತಂ ಚ ವಾಮನೇನ ಪುರಾ ಮುನೇ || ೬೭ ||

---

೬೪. ಅಲ್ಲದೆ ತನ್ನ ಪೂರ್ವಜರಲ್ಲಿ ಏಳು ಜನ (ತಲೆ) ರನ್ನೂ ಕೂಡ ನರಕದಲ್ಲಿ ಉರುಳಿಸುವನು. ದಕ್ಷಿಣಾದೇವಿಯ ಮಹಿಮೆಯನ್ನು ಇಂತು ವಿವರಿಸಿದೆನು. ಇನ್ನೇನನ್ನು ಕೇಳಬೇಕೆಂದು ನಿನಗೆ ಬಯಕೆಯಿರುವುದು ?

೬೫. ನಾರದ :—ಎಲೈ ನಾರಾಯಣ ಮಹರ್ಷಿಯೇ, ದಕ್ಷಿಣೆಯನ್ನು ಕೊಡದೆ ಮಾಡಿದ ಕರ್ಮಗಳ ಫಲಕ್ಕೆ ಭಾಗಿಗಳಾಗುವರಾರು ? ಪೂರ್ವದಲ್ಲಿ ಯಜ್ಞಪುರುಷನು ದಕ್ಷಿಣಾದೇವಿಯನ್ನು ಪೂಜಿಸಿದ ಕ್ರಮವನ್ನು ವಿವರಿಸು.

೬೬. ನಾರಾಯಣ :—ನಾರದನೇ, ದಕ್ಷಿಣಾರಹಿತವಾದ ಕರ್ಮಕ್ಕೆ ಫಲವೆಲ್ಲಿ ಬರುವುದು. ಕರ್ಮವು ದಕ್ಷಿಣಾಸಹಿತವಾಗಿದ್ದರೆ ಫಲಪ್ರಾಪ್ತಿಯಾಗುವುದು.

೬೭. (ದಕ್ಷಿಣಾರಹಿತವಾದ) ಸತ್ಕರ್ಮಕ್ಕೆ ಉಪಯೋಗಕರವಾದ ಸಂಭಾರ ಸಾಮಗ್ರಿಗಳನ್ನು ಬಲಿಚಕ್ರವರ್ತಿಯು ಭುಜಿಸುವನು. ಪೂರ್ವದಲ್ಲಿ ವಾಮನಾವತಾರಿಯಾದ ವಿಷ್ಣುವು ಬಲಿಗೆ ಆ ವರವನ್ನು ಅನುಗ್ರಹಿಸಿರುವನು.

ಅಶ್ರೋತ್ರಿಯಂ ಶ್ರಾದ್ಧವಸ್ತು ಯಚ್ಛ್ರಾದ್ಧಂ ದಾನಮೇವ ಚ ।
ವೃಷಲೀಪತಿವಿಪ್ರಾಣಾಂ ಪೂಜಾದ್ರವ್ಯಾದಿಕಂ ಚ ಯತ್ ॥ ೬೮ ॥

ಋತ್ವಿಜಾ ನ ಕೃತಂ ಯಜ್ಞಮಶುಚೇಃ ಪೂಜನಂ ಚ ಯತ್ ।
ಗುರಾವಭಕ್ತಸ್ಯ ಕರ್ಮ ಬಲಿರ್ಭುಂಕ್ತೇ ನ ಸಂಶಯಃ ॥ ೬೯ ॥

ದಕ್ಷಿಣಾಯಾಶ್ಚ ಯದ್ಧ್ಯಾನಂ ಸ್ತೋತ್ರಂ ಪೂಜಾವಿಧಿಕ್ರಮಂ ।
ತತ್ಸರ್ವಂ ಕಾಣ್ವಶಾಖೋಕ್ತಂ ಪ್ರವಕ್ಷ್ಯಾಮಿ ನಿಶಾಮಯ ॥ ೭೦ ॥

ಪುರಾ ಸಂಪ್ರಾಪ್ಯ ತಾಂ ಯಜ್ಞಃ ಕರ್ಮದಕ್ಷಾಂ ಚ ದಕ್ಷಿಣಾಂ ।
ಮುಮೋಹ ತಸ್ಯಾ ರೂಪೇಣ ತುಷ್ಟುವೇ ಕಾಮಕಾತರಃ ॥ ೭೧ ॥

॥ ಯಜ್ಞ ಉವಾಚ ॥

ಪುರಾ ಗೋಲೋಕಗೋಪೀ ತ್ವಂ ಗೋಪೀನಾಂ ಪ್ರವರಾ ಪರಾ ।
ರಾಧಾಸಮಾ ತತ್ಸಖೀ ಚ ಶ್ರೀಕೃಷ್ಣಪ್ರೇಯಸೀ ಪ್ರಿಯೇ । ॥ ೭೨ ॥

---

೬೮. ವೇದಾಧ್ಯಯನ ಸಂಪನ್ನನಲ್ಲದವನು ಸಂಗ್ರಹಿಸುವ ಶ್ರಾದ್ಧವಸ್ತುಗಳನ್ನೂ :ಶ್ರದ್ಧೆಯಿಲ್ಲದೆ ಕೊಟ್ಟ ದಾನವಸ್ತುಗಳನ್ನೂ, ಶೂದ್ರಸ್ತ್ರೀಯ ಸಂಗಮನ ಮಾಡುವ ಬ್ರಾಹ್ಮಣನ ಪೂಜಾ ಸಾಮಗ್ರಿಗಳನ್ನೂ, ಬಲಿಯು ತಿಂದುಬಿಡುವನು.

೬೯. ಋತ್ವಿಜರು ಮಾಡದಿರುವ ಯಜ್ಞವನ್ನೂ, ಅಶುಚಿಯಾದವನು ಮಾಡಿದ ಪೂಜೆಯನ್ನೂ, ಭಕ್ತಿಯಿಲ್ಲದೆ ಮಾಡಿದ ಗುರುಸೇವೆಯನ್ನೂ ಬಲಿಯು ಭುಜಿಸಿಬಿಡುವನು.

೭೦. ಕಣ್ವಮಹರ್ಷಿಯ ಶಾಖೆಯಲ್ಲಿ ಹೇಳಿರುವ ಕ್ರಮದಂತೆ ದಕ್ಷಿಣಾದೇವಿಯ ಧ್ಯಾನಸ್ತೋತ್ರಾದಿಗಳನ್ನೂ ಪೂಜಾವಿಧಾನವನ್ನೂ ವಿವರಿಸುವೆನು. ಸಾವಧಾನದಿಂದ ಕೇಳು.

೭೧. ಕರ್ಮಕುಶಲಳಾದ ದಕ್ಷಿಣಾದೇವಿಯನ್ನು ಯಜ್ಞಪುರುಷನು ಪೂರ್ವದಲ್ಲಿ ಪಡೆದು ಅವಳ ರೂಪಿಗೆ ಮೋಹಿತನಾಗಿ ಕಾಮಾತುರತೆಯಿಂದ ಅವಳನ್ನು ಸ್ತುತಿಸಿದನು.

೭೨. ಯಜ್ಞಪುರುಷ :—ಎಲೌ ಪ್ರಿಯಳೇ, ನೀನು ಪೂರ್ವದಲ್ಲಿ ಗೋಲೋಕವಾಸಿನಿಯಾದ ಗೋಪಿದೇವಿಯಾಗಿ, ಗೋಪಿಯರಲ್ಲಿ ಶ್ರೇಷ್ಠಳೆನಿಸಿ, ರಾಧೆಗೆ ಸರಿಸಮಾನಳೂ, ಪರಮ ಸಖಿಯೂ ಎನಿಸಿಕೊಂಡು ಶ್ರೀಕೃಷ್ಣನ ಪ್ರಿಯಳಾಗಿದ್ದೆ.

ಕಾರ್ತಿಕೀ ಪೂರ್ಣಿಮಾಯಾಂತು ರಾಸೇ ರಾಧಾಮಹೋತ್ಸವೇ ।
ಆವಿರ್ಭೂತಾ ದಕ್ಷಿಣಾಂಶಾತ್ಕೃಷ್ಣಸ್ಯಾತೋ ಹಿ ದಕ್ಷಿಣಾ ॥ ೭೩ ॥

ಪುರಾ ತ್ವಂ ಚ ಸುಶೀಲಾಖ್ಯಾ ಶೀಲೇನ ಸುಶುಭೇನ ಚ ।
ಕೃಷ್ಣದಕ್ಷಾಂಶವಾಸಾಚ್ಚ ರಾಧಾಶಾಪಾಚ್ಚ ದಕ್ಷಿಣಾ ॥ ೭೪ ॥

ಗೋಲೋಕಾತ್ತ್ವಂ ಪರಿಧ್ವಸ್ತಾ ಮಮ ಭಾಗ್ಯಾದುಪಸ್ಥಿತಾ ।
ಕೃಪಾಂ ಕುರು ತ್ವಮೇವಾದ್ಯ ಸ್ವಾಮಿನಂ ಕುರು ಮಾಂ ಪ್ರಿಯೇ ॥ ೭೫ ॥

ಕರ್ತೄಣಾಂ ಕರ್ಮಣಾಂ ದೇವಿ ತ್ವಮೇವ ಫಲದಾ ಸದಾ ।
ತ್ವಯಾ ವಿನಾ ಚ ಸರ್ವೇಷಾಂ ಸರ್ವಂ ಕರ್ಮ ಚ ನಿಷ್ಫಲಂ ॥ ೭೬ ॥

ಫಲಶಾಖಾವಿಹೀನಶ್ಚ ಯಥಾ ವೃಕ್ಷೋ ಮಹೀತಲೇ ।
ತ್ವಯಾ ವಿನಾ ತಥಾ ಕರ್ಮ ಕರ್ತೄಣಾಂ ಚ ನ ಶೋಭತೇ ॥ ೭೭ ॥

---

೭೩. ಕಾರ್ತಿಕಮಾಸದ ಪೂರ್ಣಿಮೆಯಲ್ಲಿ ರಾಧಾದೇವಿಯ ಮಹೋತ್ಸವದ ದಿವಸ, ಗೋಲೋಕದ ರಾಸಮಂಡಲದಲ್ಲಿ, ಶ್ರೀಕೃಷ್ಣಪರಮಾತ್ಮನ ದಕ್ಷಿಣಭಾಗದಿಂದ ನೀನು ಆವಿರ್ಭವಿಸಿದುದರಿಂದ ದಕ್ಷಿಣೆಯೆಂದು ಹೆಸರು ಪಡೆದಿರುವೆ.

೭೪. ನಿನ್ನ ಮಂಗಳಕರವಾದ ನಡತೆಯಿಂದ ನೀನು ಪೂರ್ವದಲ್ಲಿ ಸುಶೀಲೆ ಎನಿಸಿಕೊಂಡಿದ್ದು, ಶ್ರೀಕೃಷ್ಣನ ಬಲಭಾಗದಲ್ಲಿದ್ದುದನ್ನು ನೋಡಿದ ರಾಧೆಯು ಶಾಪ ಕೊಟ್ಟುದರಿಂದ ನೀನು 'ದಕ್ಷಿಣಾ' ಎನಿಸಿಕೊಂಡೆ.

೭೫. ನನ್ನ ಪುಣ್ಯವಿಶೇಷದಿಂದ ನೀನು ಗೋಲೋಕವನ್ನು ಬಿಟ್ಟು ನನ್ನೆಡೆಗೆ ಬಂದಿರುವೆ. ಆದುದರಿಂದ ನೀನು ದಯವಿಟ್ಟು ನನ್ನನ್ನು ನಿನ್ನ ಪ್ರಾಣಪತಿಯನ್ನಾಗಿ ಸ್ವೀಕರಿಸು.

೭೬. ಎಲೌ ದೇವಿಯೇ, ಕರ್ತೃಗಳು ಮಾಡುವ ಸಕಲ ಕರ್ಮಗಳಿಗೂ ನೀನೇ ಫಲಕೊಡುವವಳು. ನೀನಿಲ್ಲದಿದ್ದರೆ ಎಲ್ಲರೂ ಆಚರಿಸಿದ ಎಲ್ಲ ಕರ್ಮಗಳೂ ನಿಷ್ಫಲವಾಗುವುವು.

೭೭. ಭೂಮಿಯಲ್ಲಿ, ಕೊಂಬೆಗಳೂ ಮತ್ತು ಹಣ್ಣುಕಾಯಿಗಳೂ ಇಲ್ಲದ ಪೋಟುಮರವು ವ್ಯರ್ಥವೆನಿಸುವಂತೆ, ದಕ್ಷಿಣೆಯಿಲ್ಲದೆ ಮಾಡಿದ ಕರ್ಮಗಳೆಲ್ಲವೂ ನಿಷ್ಫಲವಾಗುವುವು.

ಬ್ರಹ್ಮವಿಷ್ಣುಮಹೇಶಾಶ್ಚ ದಿಕ್ಪಾಲಾದಯ ಏವ ಚ ।
ಕರ್ಮಣಶ್ಚ ಫಲಂ ದಾತುಂ ನ ಶಕ್ತಾಶ್ಚ ತ್ವಯಾ ವಿನಾ ॥ ೭೮ ॥

ಕರ್ಮರೂಪೀ ಸ್ವಯಂ ಬ್ರಹ್ಮಾ ಫಲರೂಪೀ ಮಹೇಶ್ವರಃ ।
ಯಜ್ಞರೂಪೀ ವಿಷ್ಣುರಹಂ ತ್ವಮೇಷಾಂ ಸಾರರೂಪಿಣೀ ॥ ೭೯ ॥

ಫಲದಾತಾ ಪರಂ ಬ್ರಹ್ಮಾ ನಿರ್ಗುಣಃ ಪ್ರಕೃತೇಃ ಪರಃ ।
ಸ್ವಯಂ ಕೃಷ್ಣಶ್ಚ ಭಗವಾನ್ನ ಚ ಶಕ್ತಸ್ತ್ವಯಾ ವಿನಾ ॥ ೮೦ ॥

ತ್ವಮೇವ ಶಕ್ತಿಃ ಕಾಂತೇ ಮೇ ಶಶ್ವಜ್ಜನ್ಮನಿ ಜನ್ಮನಿ ।
ಸರ್ವಕರ್ಮಣಿ ಶಕ್ತೋಽಹಂ ತ್ವಯಾ ಸಹ ವರಾನನೇ ॥ ೮೧ ॥

ಇತ್ಯುಕ್ತ್ವಾ ತತ್ಪುರಸ್ತಸ್ಥೌ ಯಜ್ಞಾಧಿಷ್ಠಾತೃದೇವಕಃ ।
ತುಷ್ಟಾ ಬಭೂವ ಸಾ ದೇವೀ ಭೇಜೇ ತಂ ಕಮಲಾ ಕಲಾ ॥ ೮೨ ॥

---

೭೮. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರೂ, ಇಂದ್ರಾದ್ಯಷ್ಟದಿಕ್ಪಾಲಕರೂ, ನಿನ್ನನ್ನು ಬಿಟ್ಟು ಕರ್ಮದ ಫಲವನ್ನು ಕೊಡಲು ಸಾಧ್ಯವಿಲ್ಲ.

೭೯. ಸ್ವಯಂ ಬ್ರಹ್ಮನೇ ಕರ್ಮಸ್ವರೂಪಿಯಾಗಿಯೂ, ಮಹೇಶ್ವರನು ಫಲ ಸ್ವರೂಪಿಯಾಗಿಯೂ, ವಿಷ್ಣುವಾದ ನಾನೇ ಯಜ್ಞಸ್ವರೂಪಿಯಾಗಿಯೂ ಇರುವೆವು. ನೀನು ನಮ್ಮೆಲ್ಲರ ಸಾರಸ್ವರೂಪಿಣಿಯಾಗಿಯೂ ಇರುವೆ.

೮೦. ತ್ರಿಗುಣಾತೀತನೂ, ಪ್ರಕೃತಿಗೆ ಸಿಲುಕದವನೂ, ಪರಬ್ರಹ್ಮನೂ ಆದ ಶ್ರೀಕೃಷ್ಣಪರಮಾತ್ಮನು ಫಲದಾಯಕನಾದರೂ, ನೀನಿಲ್ಲದೆ ಫಲವನ್ನು ಕೊಡಲಾರನು.

೮೧. ಎಲೌ ಕಾಂತೆಯೇ, ನೀನೇ ನನಗೆ ಜನ್ಮಜನ್ಮದಲ್ಲಿಯೂ ಶಕ್ತಿಸ್ವರೂಪಿಣಿಯಾಗಿರುವುದರಿಂದ ನಿನ್ನೊಡಗೂಡಿದ ನಾನು ಸಕಲಕರ್ಮಗಳಲ್ಲಿಯೂ ಶಕ್ತನಾಗಿರುವೆನು.

೮೨. ಯಜ್ಞಕ್ಕೆ ಅಧಿಷ್ಠಾತೃದೇವತೆಯಾದ ಆ ವಿಷ್ಣುವು ಹೀಗೆ ಹೇಳಿ ಆಕೆಯ ಮುಂದೆ ಕುಳಿತಿರಲು, ಆ ಕಮಲಾಂಶಸಂಭೂತಳಾದ ದಕ್ಷಿಣಾದೇವಿಯು ಸಂತುಷ್ಟಳಾಗಿ ಅವನನ್ನು ವರಿಸಿದಳು.

ಇದಂ ಚ ದಕ್ಷಿಣಾಸ್ತೋತ್ರಂ ಯಜ್ಞಕಾಲೇ ಚ ಯಃ ಪಠೇತ್ ।
ಫಲಂ ಚ ಸರ್ವಯಜ್ಞಾನಾಂ ಲಭತೇ ನಾತ್ರ ಸಂಶಯಃ ॥ ೮೩ ॥

ರಾಜಸೂಯೇ ವಾಜಪೇಯೇ ಗೋಮೇಧೇ ನರಮೇಧಕೇ ।
ಅಶ್ವಮೇಧೇ ಲಾಂಗಲೇ ಚ ವಿಷ್ಣುಯಜ್ಞೇ ಯಶಸ್ಕರೇ ॥ ೮೪ ॥

ಧನದೇ ಭೂಮಿದೇ ಫಲ್ಗೌ ಪುತ್ರೇಷ್ಟೌ ಗಜಮೇಧಕೇ ।
ಲೋಹಯಜ್ಞೇ ಸ್ವರ್ಣಯಜ್ಞೇ ಪಾಟಲಿವ್ಯಾಧಿಖಂಡನೇ ॥ ೮೫ ॥

ಶಿವಯಜ್ಞೇ ರುದ್ರಯಜ್ಞೇ ಶಕ್ರಯಜ್ಞೇ ಚ ಬಂಧಕೇ ।
ಇಷ್ಟೌ ವರುಣಯಾಗೇ ಚ ಕಂದುಕೇ ವೈರಿಮರ್ದನೇ ॥ ೮೬ ॥

ಶುಚಿಯಾಗೇ ಧರ್ಮಯಾಗೇ ರೇಚನೇ ಪಾಪಮೋಚನೇ ।
ಬಂಧನೇ ಕರ್ಮಯೋಗೇ ಚ ಮಣಿಯಾಗೇ ಸುಭದ್ರಕೇ ॥ ೮೭ ॥

ಏತೇಷಾಂ ಚ ಸಮಾರಂಭೇ ಇದಂ ಸ್ತೋತ್ರಂ ಚ ಯಃ ಪಠೇತ್ ।
ನಿರ್ವಿಘ್ನೇನ ಚ ತತ್ಕರ್ಮ ಸಾಂಗಂ ಭವತಿ ನಿಶ್ಚಿತಂ ॥ ೮೮ ॥

---

೮೩. ಮೇಲೆ ಹೇಳಿದ ದಕ್ಷಿಣಾದೇವಿಯ ಸ್ತೋತ್ರವನ್ನು ಯಜ್ಞಕಾಲದಲ್ಲಿ ಪಠಿಸುವವರು ಸಕಲ ಯಜ್ಞಗಳ ಫಲವನ್ನೂ ಪಡೆಯುವರೆಂಬುದರಲ್ಲಿ ಸಂಶಯವಿಲ್ಲ.

೮೪–೮೮. ರಾಜಸೂಯ, ವಾಜಪೇಯ. ಗೋಮೇಧ, ನರಮೇಧ, ಅಶ್ವಮೇಧ, ಲಾಂಗಲ, ಕೀರ್ತಿದಾಯಕವಾದ ವಿಷ್ಣುಯಜ್ಞ, ಧನ ಮತ್ತು ಭೂಮಿಯನ್ನು ಕೊಡುವ ಫಲ್ಗುಯಾಗ, ಪುತ್ರಕಾಮೇಷ್ಟಿ, ಗಜಮೇಧ, ಲೋಹಯಜ್ಞ, ಸ್ವರ್ಣಯಜ್ಞ (ಪಾಟಲಿರೋಗವನ್ನು ಪರಿಹರಿಸುವ ಯಜ್ಞ)ಗಳ ಪ್ರಾರಂಭದಲ್ಲಿಯೂ, ಶಿವಯಜ್ಞ, ರುದ್ರಯಜ್ಞ, ಶಕ್ರಯಜ್ಞ, ಬಂಧಕಯಾಗ, ವರುಣಯಾಗ, ವೈರಿನಾಶಕವಾದ ಕಂದುಕಯಾಗ, ಶುಚಿಯಾಗ, ಧರ್ಮಯಾಗ, ಪಾಪಪರಿಹಾರಕವಾದ ರೇಚನಯಾಗ, ಬಂಧನಯಾಗ, ಕರ್ಮಯಾಗ, ಮಣಿಯಾಗ, ಮತ್ತು ಸುಭದ್ರಯಾಗಗಳ ಪ್ರಾರಂಭದಲ್ಲೂ ಈ ಸ್ತೋತ್ರವನ್ನು ಪಠಿಸುವವರು ಮಾಡಿದ ಕರ್ಮಗಳೆಲ್ಲವೂ, ನಿರ್ವಿಘ್ನವಾಗಿಯೂ, ಅಂಗಗಳಿಂದ ಪರಿಪೂರ್ಣವಾಗಿಯೂ ನೆರವೇರುವುದು.

ಇದಂ ಸ್ತೋತ್ರಂ ಚ ಕಥಿತಂ ಧ್ಯಾನಂ ಪೂಜಾವಿಧಿಂ ಶೃಣು ।
ಶಾಲಗ್ರಾಮೇ ಘಟೇ ವಾಪಿ ದಕ್ಷಿಣಾಂ ಪೂಜಯೇತ್ಸುಧೀಃ ॥ ೭೯ ॥

ಲಕ್ಷ್ಮೀದಕ್ಷಾಂಶಸಂಭೂತಾಂ ದಕ್ಷಿಣಾಂ ಕಮಲಾಕಲಾಂ ।
ಸರ್ವಕರ್ಮಸು ದಕ್ಷಾಂ ಚ ಫಲದಾಂ ಸರ್ವಕರ್ಮಣಾಂ ॥ ೮೦ ॥

ವಿಷ್ಣೋಃ ಶಕ್ತಿಸ್ವರೂಪಾಂ ಚ ಸುಶೀಲಾಂ ಶುಭದಾಂ ಭಜೇ ।
ಧ್ಯಾತ್ವಾನೇನೈವ ವರದಾಂ ಸುಧೀರ್ಮೂಲೇನ ಪೂಜಯೇತ್ ॥ ೮೧ ॥

ದತ್ವಾ ಪಾದ್ಯಾದಿಕಂ ದೇವ್ಯೈ ವೇದೋಕ್ತೇನ ಚ ನಾರದ ।
ಓಂ ಶ್ರೀಂ ಕ್ಲೀಂ ಹ್ರೀಂ ದಕ್ಷಿಣಾಯೈ ಸ್ವಾಹೇತಿ ಚ ವಿಚಕ್ಷಣಃ ॥ ೮೨ ॥

ಪೂಜಯೇದ್ವಿಧಿವದ್ಭಕ್ತ್ಯಾ ದಕ್ಷಿಣಾಂ ಸರ್ವಪೂಜಿತಾಂ ।
ಇತ್ಯೇವಂ ಕಥಿತಂ ಸರ್ವಂ ದಕ್ಷಿಣಾಖ್ಯಾನಮುತ್ತಮಂ ॥ ೮೩ ॥

---

೭೯. ಈ ರೀತಿಯಾಗಿ ದಕ್ಷಿಣಾದೇವಿಯ ಸ್ತೋತ್ರಮಾಡುವ ಕ್ರಮವನ್ನು ವಿವರಿಸಿದೆನು. ಈಗ ಧ್ಯಾನ ಮತ್ತು ಪೂಜಾವಿಧಾನವನ್ನು ಹೇಳುವೆನು. ದಕ್ಷಿಣಾ ದೇವಿಯನ್ನು ಸಾಲಿಗ್ರಾಮದಲ್ಲಾಗಲೀ, ಒಂದು ಕಲಶದಲ್ಲಾಗಲೀ ಆವಾಹಿಸಿ ಪೂಜಿಸಬೇಕು

೮೦-೮೧. ಲಕ್ಷ್ಮೀದೇವಿಯ ಬಲಭಾಗದಿಂದ ಅವತರಿಸಿದವಳೂ ಕಮಲಾಂಶ ಸಂಭೂತಳೂ, ಎಲ್ಲ ಕರ್ಮಗಳಲ್ಲಿಯೂ ಸಮರ್ಥಳೂ, ಸರ್ವಕರ್ಮ ಫಲಪ್ರದಳೂ, ವಿಷ್ಣುವಿನ ಶಕ್ತಿಸ್ವರೂಪಳೂ, ಸುಶೀಲೆಯೂ, ಶುಭದಾಯಕಳೂ ಆದ ದೇವಿಯನ್ನು ಭಜಿಸುವೆನು. ಈ ರೀತಿಯಾಗಿ ದಕ್ಷಿಣಾದೇವಿಯನ್ನು ಧ್ಯಾನಮಾಡಿ ಕ್ರಮವಾಗಿ ಪೂಜಿಸಬೇಕು.

೮೨-೮೩. ಎಲೈ ನಾರದನೇ, ಹೀಗೆ ವೇದೋಕ್ತಕ್ರಮವಾಗಿ ದೇವಿಗೆ ಪಾದ್ಯಾದಿಗಳನ್ನು ಸಮರ್ಪಿಸಿ 'ಓಂ ಶ್ರೀಂ ಕ್ಲೀಂ ಹ್ರೀಂ ದಕ್ಷಿಣಾಯೈ ಸ್ವಾಹಾ' ಎಂದು ಮಂತ್ರೋಚ್ಚಾರಣಪೂರ್ವಕವಾಗಿ ಸರ್ವಪೂಜಿತಳಾದ ದಕ್ಷಿಣಾದೇವಿಯನ್ನು ಪೂಜಿಸಬೇಕು.

ಸುಖದಂ ಪ್ರೀತಿದಂ ಚೈವ ಫಲದಂ ಸರ್ವಕರ್ಮಣಾಂ ।
ಇದಂ ಚ ದಕ್ಷಿಣಾಽಖ್ಯಾನಂ ಯಃ ಶೃಣೋತಿ ಸಮಾಹಿತಃ ॥ ೯೪ ॥

ಅಂಗಹೀನಂ ಚ ತತ್ಕರ್ಮ ನ ಭವೇದ್ಭಾರತೇ ಭುವಿ ।
ಅಪುತ್ರೋ ಲಭತೇ ಪುತ್ರಂ ನಿಶ್ಚಿತಂ ಚ ಗುಣಾನ್ವಿತಂ ॥ ೯೫ ॥

ಭಾರ್ಯಾಹೀನೋ ಲಭೇದ್ಭಾರ್ಯಾಂ ಸುಶೀಲಾಂ ಸುಂದರೀಂ ಪರಾಂ ।
ವರಾರೋಹಾಂ ಪುತ್ರವತೀಂ ವಿನೀತಾಂ ಪ್ರಿಯವಾದಿನೀಂ ॥ ೯೬ ॥

ಪತಿವ್ರತಾಂ ಸುವ್ರತಾಂ ಚ ಶುದ್ಧಾಂ ಚ ಕುಲಜಾಂ ವರಾಂ ।
ವಿದ್ಯಾಹೀನೋ ಲಭೇದ್ವಿದ್ಯಾಂ ಧನಹೀನೋ ಧನಂ ಲಭೇತ್ ॥ ೯೭ ॥

ಭೂಮಿಹೀನೋ ಲಭೇದ್ಭೂಮಿಂ ಪ್ರಜಾಹೀನೋ ಲಭೇತ್ಪ್ರಜಾಃ ।
ಸಂಕಟೇ ಬಂಧುವಿಚ್ಛೇದೇ ವಿಪತ್ತೌ ಬಂಧನೇ ತಥಾ ॥ ೯೮ ॥

೯೪-೯೫. ಸುಖ ಸಂತೋಷಗಳನ್ನೂ, ಸರ್ವಕರ್ಮಗಳ ಫಲವನ್ನೂ ಕೊಟ್ಟು ಉತ್ತಮವೆನಿಸಿರುವ ದಕ್ಷಿಣಾದೇವಿಯ ಕಥೆಯನ್ನು ನಿನಗೆ ವಿವರಿಸಿದೆನು. ದಕ್ಷಿಣಾ ದೇವಿಯ ಕಥೆಯನ್ನು ಸಾವಧಾನಚಿತ್ತದಿಂದ ಕೇಳುವವರಿಗೆ ಮಾಡಿದ ಕರ್ಮಗಳೆಲ್ಲವೂ ಸಾಂಗವಾಗಿ ನೆರವೇರಿ, ಅವರು ಭಾರತದಲ್ಲಿ ಎಂದಿಗೂ ಅಂಗಹೀನರಾಗುವುದಿಲ್ಲ. ಮಕ್ಕಳಿಲ್ಲದವರು ಗುಣವಂತನಾದ ಮಗನನ್ನು ಪಡೆಯುವರು.

೯೬-೯೭. ಹೆಂಡತಿಯಿಲ್ಲದವರು ಸುಂದರಿಯೂ, ಪ್ರಿಯವಾದಿನಿಯೂ, ವಿನಯವತಿಯೂ, ಪತಿವ್ರತೆಯೂ, ಸತ್ಕುಲಪ್ರಸೂತಳೂ, ಸುವ್ರತೆಯೂ ಆದ ಹೆಂಡತಿಯನ್ನು ಪಡೆದು ಪುತ್ರವಂತರಾಗುವರು. ವಿದ್ಯೆಯಿಲ್ಲದವನಿಗೆ ವಿದ್ಯೆಯೂ, ದರಿದ್ರನಿಗೆ ಧನವೂ ಲಭಿಸುವುದು.

೯೮-೯೯. ಭೂಮಿಯಿಲ್ಲದವನಿಗೆ ಭೂಮಿಯೂ, ಪುತ್ರರಿಲ್ಲದವರಿಗೆ ಪುತ್ರರೂ ಲಭಿಸುವರು. ಸಂಕಟಕಾಲದಲ್ಲಿಯೂ, ಬಂಧುವಿರಹದಲ್ಲಿಯೂ, ವಿಪತ್ತಿನಲ್ಲಿಯೂ

ಮಾಸಮೇಕಮಿದಂ ಶ್ರುತ್ವಾ ಮುಚ್ಯತೇ ನಾತ್ರ ಸಂಶಯಃ ॥ ೯೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ದಕ್ಷಿಣೋಪಾಖ್ಯಾನೇ
ದಕ್ಷಿಣೋತ್ಪತ್ತಿ ತತ್ಪೂಜಾದಿವಿಧಾನಕಂ ನಾಮ
ದ್ವಿಚತ್ವಾರಿಂಶತ್ತಮೋಽಧ್ಯಾಯಃ

ಬಂಧನಕ್ಕೆ ಸಿಲುಕಿದಾಗಲೂ ಒಂದುತಿಂಗಳು ಈ ಸ್ತೋತ್ರವನ್ನು ಕೇಳಿದರೆ ಎಲ್ಲ ಕಷ್ಟಗಳಿಂದಲೂ ಬಿಡುಗಡೆ ಹೊಂದುವುದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ನಾರದ
ನಾರಾಯಣ ಸಂವಾದರೂಪವಾದ ದಕ್ಷಿಣೋಪಾಖ್ಯಾನದಲ್ಲಿ
ದಕ್ಷಿಣಾದೇವಿಯ ಉತ್ಪತ್ತಿ ಮತ್ತು ದೇವಿಯ ಪೂಜಾ
ವಿಧಾನ ನಿರೂಪಣವೆಂಬ ನಲವತ್ತೆರಡನೆಯ
ಅಧ್ಯಾಯವು ಮುಗಿದುದು.

ನಲವತ್ತೆರಡನೆಯ ಅಧ್ಯಾಯದ ಸಾರಾಂಶವು.

ಪೂರ್ವದಲ್ಲಿ ಸುಶೀಲೆಯೆಂಬ ಸುಂದರಿಯಾದ ಗೋಪಿಯೊಬ್ಬಳು ಶ್ರೀಕೃಷ್ಣನ ಪ್ರೀತಿಗೆ ಪಾತ್ರಳಾಗಿ ಅವನ ಬಲತೊಡೆಯ ಮೇಲೆ ಕುಳಿತಿದ್ದುದನ್ನು ರಾಧಾದೇವಿಯು ನೋಡಿ ಅಸೂಯೆಪಡಲು ಕೂಡಲೇ ಶ್ರೀಕೃಷ್ಣನೂ ಆ ಗೋಪಿಯೂ ಅಂತರ್ಧಾನ ಹೊಂದಿದರು. ಆಗ ಕುಪಿತಳಾದ ರಾಧಾದೇವಿಯು 'ಸುಶೀಲೆಯು ಪುನಃ ಗೋಲೋಕಕ್ಕೆ ಬಂದರೆ ಭಸ್ಮೀಭೂತಳಾಗಲಿ' ಎಂದು ಶಾಪವಿತ್ತಳು. ಅಲ್ಲದೆ ತನ್ನ ಪ್ರಾಣಕಾಂತನಾದ ಶ್ರೀಕೃಷ್ಣನನ್ನು ಭಕ್ತಿಯಿಂದ ಸ್ತುತಿಸಿ ಅವನ ಪ್ರೀತಿಗೆ ಪಾತ್ರಳಾದಳು. ಇತ್ತ ಸುಶೀಲೆಯು ತನ್ನ ತಪೋಮಹಿಮೆಯಿಂದ ಲಕ್ಷ್ಮೀದೇವಿಯ ಶರೀರದಲ್ಲಿ ಐಕ್ಯಳಾಗಿದ್ದು, ದೇವತೆಗಳಿಗೆ ಯಜ್ಞದ ಫಲವು ದೊರೆಯದಿದ್ದಾಗ ಅವರ ಮೊರೆಯನ್ನು ಆಲಿಸಿ 'ದಕ್ಷಿಣಾ' ಎಂಬ ಹೆಸರಿನಿಂದ ಆವಿರ್ಭವಿಸಿದಳು. ಯಜ್ಞಪುರುಷನು ಆ ದಕ್ಷಿಣಾದೇವಿಯನ್ನು ವಿಧಿಪೂರ್ವಕವಾಗಿ ವರಿಸಿ ಫಲ'ನೆಂಬ ಸುಪುತ್ರನನ್ನು ಪಡೆದನು. ಅಂದಿನಿಂದ ಯಜ್ಞಯಾಗಾದಿಗಳನ್ನಾಚರಿಸುವವರು ವಿಹಿತ ದಕ್ಷಿಣೆಯನ್ನು ಕೊಟ್ಟು ಅದರ ಫಲಕ್ಕೆ ಭಾಗಿಗಳಾಗುವರು. ದಕ್ಷಿಣೆ ಕೊಡದ ಯಾಗವು ಫಲಪ್ರದವಾಗುವುದಿಲ್ಲ. ಅಂಥ ಯಾಗದ ಸಾಮಗ್ರಿಸಂಭಾರಗಳನ್ನೆಲ್ಲ ಬಲಿಚಕ್ರವರ್ತಿಯು ತಿಂದುಬಿಡುವನು. ಕಾಣ್ವಶಾಖೋಕ್ತವಾದ ದಕ್ಷಿಣಾದೇವಿಯ ಮಂತ್ರಸ್ತೋತ್ರಗಳನ್ನು ಭಕ್ತಿಯಿಂದ ಭಜಿಸುವವರು ತಮ್ಮ ಇಷ್ಟಾರ್ಥವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ತ್ರಿಚತ್ವಾರಿಂಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಅನೇಕಾನಾಂ ಚ ದೇವೀನಾಂ ಶ್ರುತಮಾಖ್ಯಾನಮುತ್ತಮಂ |
ಅನ್ಯಾಸಾಂ ಚರಿತಂ ಬ್ರಹ್ಮನ್ವದ ವೇದವಿದಾಂ ವರ || ೧ ||

|| ನಾರಾಯಣ ಉವಾಚ ||

ಸರ್ವಾಸಾಂ ಚರಿತಂ ವಿಪ್ರ ವೇದೇಷ್ವಸ್ತಿ ಪೃಥಕ್ ಪೃಥಕ್ |
ಪೂರ್ವೋಕ್ತಾನಾಂ ಚ ದೇವೀನಾಂ ತ್ವಂ ಕಾಸಾಂ ಶ್ರೋತುಮಿಚ್ಛಸಿ || ೨ ||

ನಲವತ್ತಮೂರನೆಯ ಅಧ್ಯಾಯವು

೧. ನಾರದ :—ಅನೇಕದೇವಿಯರ ಮಂಗಳಕರವಾದ ಕಥೆಯನ್ನು ಕೇಳಿ ಸಂತೋಷಪಟ್ಟೆನು. ಎಲೈ ವೇದವೇದಾಂಗಪಾರಂಗತನಾದ ಮಹರ್ಷಿಯೇ, ಈಗ ಇನ್ನೂ ಇತರ ದೇವಿಯರ ಚರಿತ್ರೆಯನ್ನು ವಿವರಿಸು.

೨. ನಾರಾಯಣ :—ಎಲೈ ಬ್ರಾಹ್ಮಣೋತ್ತಮನೇ, ಹಿಂದೆ ಹೇಳಿದ ಎಲ್ಲ ದೇವಿಯರ ಚರಿತ್ರೆಯೂ ವೇದದಲ್ಲಿ ಪ್ರತ್ಯೇಕವಾಗಿ ಉಕ್ತವಾಗಿದೆ. ನೀನು ಯಾರ ಚರಿತ್ರೆಯನ್ನು ಕೇಳಲು ಬಯಸುವೆ ಎಂಬುದನ್ನು ಹೇಳು.

|| ನಾರದ ಉವಾಚ ||

ಷಷ್ಠೀ ಮಂಗಲಚಂಡೀ ಚ ಮನಸಾ ಪ್ರಕೃತೇಃ ಕಲಾ ।
ಉತ್ಪತ್ತಿಮಾಸಾಂ ಚರಿತಂ ಶ್ರೋತುಮಿಚ್ಛಾಮಿ ತತ್ತ್ವತಃ || ೩ ||

|| ನಾರಾಯಣ ಉವಾಚ ||

ಷಷ್ಠಾಂಶಾ ಪ್ರಕೃತೇರ್ಯಾ ಚ ಸಾ ಚ ಷಷ್ಠೀ ಪ್ರಕೀರ್ತಿತಾ ।
ಬಾಲಕಾಧಿಷ್ಠಾತೃದೇವೀ ವಿಷ್ಣುಮಾಯಾ ಚ ಬಾಲದಾ || ೪ ||

ಮಾತೃಕಾಸು ಚ ವಿಖ್ಯಾತಾ ದೇವಸೇನಾಭಿಧಾ ಚ ಸಾ ।
ಪ್ರಾಣಾಧಿಕಪ್ರಿಯಾ ಸಾಧ್ವೀ ಸ್ಕಂದಭಾರ್ಯಾ ಚ ಸುವ್ರತಾ || ೫ ||

ಆಯುಃಪ್ರದಾ ಚ ಬಾಲಾನಾಂ ಧಾತ್ರೀ ರಕ್ಷಣಕಾರಿಣೀ ।
ಸತತಂ ಶಿಶುಪಾರ್ಶ್ವಸ್ಥಾ ಯೋಗಾದ್ವೈ ಸಿದ್ಧಿಯೋಗಿನೀ || ೬ ||

---

೩. ನಾರದ:—ಷಷ್ಠೀ, ಮಂಗಳಚಂಡಿ ಮತ್ತು ಪ್ರಕೃತಿಯ ಕಲಾಂಶಸಂಭೂತಳಾದ ಮನಸಾ ದೇವಿಯರ ಉತ್ಪತ್ತಿಮುಂತಾದ ಚರಿತ್ರೆಯನ್ನು ಯಥಾರ್ಥವಾಗಿ ತಿಳಿಯಬೇಕೆಂದು ನನಗೆ ಇಚ್ಛೆ ಇದೆ.

೪. ನಾರಾಯಣ:—ಪ್ರಕೃತಿಯ ಆರನೆಯ ಒಂದಂಶದಲ್ಲಿ ಅವತರಿಸಿದವಳು ಷಷ್ಠಿದೇವಿ ಎನಿಸಿಕೊಂಡಳು. ವಿಷ್ಣುವಿನ ಮಾಯಾಸ್ವರೂಪಿಣಿಯಾದ ಆ ದೇವಿಯು ಬಾಲಕರಿಗೆ ಪ್ರಧಾನದೇವತೆಯಾಗಿರುವಳು.

೫. ಸಪ್ತಮಾತೃಕೆಯರಲ್ಲಿ ಪ್ರಸಿದ್ಧಳೂ, ಷಣ್ಮುಖನಿಗೆ ಪ್ರಾಣಕ್ಕಿಂತಲೂ ಪ್ರಿಯಳೂ ಆದ ಆ ದೇವಿಗೆ ದೇವಸೇನಾ ಎಂದು ಅಭಿಧಾನವು.

೬. ಬಾಲಕರಿಗೆ ದೀರ್ಘಾಯುಷ್ಯವನ್ನು ಕೊಟ್ಟು ರಕ್ಷಣೆಮಾಡಿ ತಾಯಿ ಎನಿಸಿಕೊಳ್ಳುವ ಆ ದೇವಿಯು ಯೋಗಸಿದ್ಧಿಯನ್ನು ಪಡೆದಿರುವುದರಿಂದ ಯಾವಾಗಲೂ ಯೋಗಮಹಿಮೆಯಿಂದ ಶಿಶುಗಳ ಪಾರ್ಶ್ವದಲ್ಲಿಯೇ ರಕ್ಷಣೆಕೊಡುತ್ತಿರುವಳು.

ತಸ್ಯಾಃ ಪೂಜಾವಿಧೌ ಬ್ರಹ್ಮನ್ನಿತಿಹಾಸವಿಧಿಂ ಶೃಣು ।
ಯಚ್ಛ್ರುತಂ ಧರ್ಮಮುಖತೋ ಸುಖದಂ ಪುತ್ರದಂ ಪರಂ ॥ ೭ ॥

ರಾಜಾ ಪ್ರಿಯವ್ರತಶ್ಚಾಸೀತ್ಸ್ವಾಯಂಭುವಮನೋಃ ಸುತಃ ।
ಯೋಗೀಂದ್ರೋ ನೋದ್ವಹೇದ್ಭಾರ್ಯಾಂ ತಪಸ್ಯಾಸು ರತಃ ಸದಾ ॥ ೮ ॥

ಬ್ರಹ್ಮಾಜ್ಞಯಾ ಚ ಯತ್ನೇನ ಕೃತದಾರೋ ಬಭೂವ ಸಃ ।
ಸುಚಿರಂ ಕೃತದಾರಶ್ಚ ನ ಲೇಭೇ ತನಯಂ ಮುನೇ ॥ ೯ ॥

ಪುತ್ರೇಷ್ಟಿಯಜ್ಞಂ ತಂ ಚಾಪಿ ಕಾರಯಾಮಾಸ ಕಶ್ಯಪಃ ।
ಮಾಲಿನ್ಯೈ ತಸ್ಯ ಕಾಂತಾಯೈ ಮುನಿರ್ಯಜ್ಞಚರುಂ ದದೌ ॥ ೧೦ ॥

ಭುಕ್ತ್ವಾ ಚರುಂ ಚ ತಸ್ಯಾಶ್ಚ ಸದ್ಯೋ ಗರ್ಭೋ ಬಭೂವ ಹ ।
ದಧಾರ ತಂ ಚ ಸಾ ದೇವೀ ದೈವಂ ದ್ವಾದಶವತ್ಸರಂ ॥ ೧೧ ॥

---

೭. ಪುತ್ರಪೌತ್ರಾದಿ ಸುಖಸಂಪತ್ತನ್ನು ಕೊಡುವ ಆ ಷಷ್ಠೀದೇವಿಯ ಪೂಜಾ ವಿಧಿಯು ಇತಿಹಾಸಪ್ರಸಿದ್ಧವಾಗಿರುವಂತೆ ಧರ್ಮಪುರುಷನ ಬಾಯಿನಿಂದ ನಾನು ಕೇಳಿದುದನ್ನು ಹೇಳುವೆನು.

೮. ಹಿಂದೆ ಸ್ವಾಯಂಭುವ ಮನುವಿನ ಪುತ್ರನಾದ ಪ್ರಿಯವ್ರತನೆಂಬ ರಾಜನಿದ್ದನು. ಯೋಗಿಶ್ರೇಷ್ಠನಾದ ಅವನು ಯಾವಾಗಲೂ ತಪೋನಿರತನಾಗಿ ವಿವಾಹಿತನಾಗುವುದಿಲ್ಲವೆಂದಿದ್ದನು.

೯. ಆದರೆ ಬ್ರಹ್ಮನಿಂದ ಆಜ್ಞಪ್ತನಾಗಿ ವಿವಾಹಿತನಾದನು. ಬಹಳ ಕಾಲದ ಮೇಲೆ ಮದುವೆಯಾದರೂ ವಂಶಾಭಿವೃದ್ಧಿಕರನಾದ ಪುತ್ರನನ್ನು ಪಡೆಯಲಿಲ್ಲ.

೧೦. ಆಗ ಕಶ್ಯಪಪ್ರಜಾಪತಿಯು ಅವನಿಂದ ಪುತ್ರಕಾಮೇಷ್ಟಿಯಾಗವನ್ನು ಮಾಡಿಸಿ ಅವನ ಪತ್ನಿಯಾದ ಮಾಲಿನಿಗೆ ಯಜ್ಞದ ಚರು (ಹೋಮದ್ರವ್ಯ) ವನ್ನು ಕೊಟ್ಟನು.

೧೧. ಆ ಚರುವನ್ನು ಭುಜಿಸಿದ ಕೂಡಲೇ ಆಕೆಯು ಗರ್ಭಿಣಿಯಾದಳು. ಆ ಗರ್ಭವನ್ನು ಆಕೆಯು ದಿವ್ಯದ್ವಾದಶವರ್ಷಗಳ ಕಾಲ ಧರಿಸಿಕೊಂಡಿದ್ದಳು.

ತತಃ ಸುಷಾವ ಸಾ ಬ್ರಹ್ಮನ್ಕುಮಾರಂ ಕನಕಪ್ರಭಂ ।
ಸರ್ವಾವಯವಸಂಪನ್ನಂ ಮೃತಮುತ್ತಾರಲೋಚನಂ ॥ ೧೨ ॥

ತಂ ದೃಷ್ಟ್ವಾ ರುರುದುಃ ಸರ್ವಾ ನಾರ್ಯೋ ವೈ ಬಾಂಧವಸ್ತ್ರಿಯಃ ।
ಮೂರ್ಛಾಮವಾಪ ತನ್ಮಾತಾ ಪುತ್ರಶೋಕೇನ ಸುವ್ರತಾ ॥ ೧೩ ॥

ಶ್ಮಶಾನಂ ಚ ಯಯೌ ರಾಜಾ ಗೃಹೀತ್ವಾ ಬಾಲಕಂ ಮುನೇ ।
ರುರೋದ ತತ್ರ ಕಾಂತಾರೇ ಪುತ್ರಂ ಕೃತ್ವಾ ಸ್ವವಕ್ಷಸಿ ॥ ೧೪ ॥

ನೋತ್ಸೃಜ್ಯ ಬಾಲಕಂ ರಾಜಾ ಪ್ರಾಣಾಂಸ್ತ್ಯಕ್ತುಂ ಸಮುದ್ಯತಃ ।
ಜ್ಞಾನಯೋಗಂ ವಿಸಸ್ಮಾರ ಪುತ್ರಶೋಕಾತ್ಸುದಾರುಣಾತ್ ॥ ೧೫ ॥

ಏತಸ್ಮಿನ್ನಂತರೇ ತತ್ರ ವಿಮಾನಂ ಚ ದದರ್ಶ ಹ ।
ಶುದ್ಧಸ್ಫಟಿಕಸಂಕಾಶಂ ಮಣಿರಾಜವಿರಾಜಿತಂ ॥ ೧೬ ॥

---

೧೨. ಅನಂತರ ಆ ದೇವಿಯು ಸರ್ವಾವಯವಶೋಭಿತನೂ, ಸುವರ್ಣದಂತೆ ಕಾಂತಿಯುತನೂ, ಮೇಲ್ಮುಖವಾದ ಕಣ್ಣುಗುಡ್ಡೆ ಯುಳ್ಳವನೂ, ಆದ ಮೃತಪುತ್ರನನ್ನು ಪ್ರಸವಿಸಿದಳು.

೧೩. ಆ ಸತ್ತಶಿಶುವನ್ನು ನೋಡಿ ಅವರ ಸಕಲಬಂಧುಗಳೂ, ಎಲ್ಲಸ್ತ್ರೀಯರೂ ಬಹಳವಾಗಿ ಗೋಳಾಡಿದರು. ವ್ರತಪರಳಾದ ತಾಯಿಯೂ ಪುತ್ರಶೋಕದಿಂದ ಮೂರ್ಛೆಗೊಂಡಳು.

೧೪. ರಾಜನು ಆ ಮೃತಶಿಶುವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋದನು. ಆ ಗೊಂಡಾರಣ್ಯದಲ್ಲಿ ತನ್ನ ಮಗನನ್ನು ಎದೆಗೆ ಅಪ್ಪಿಕೊಂಡು ಬಹುವಾಗ ಅತ್ತನು.

೧೫. ಆ ಬಾಲಕನನ್ನು ಅಪ್ಪಿಕೊಂಡಿರುವಂತೆಯೇ ಆ ರಾಜನು ಪ್ರಾಣತ್ಯಾಗ ಮಾಡಲು ಸಿದ್ಧನಾದನು. ಸಹಿಸಲಸಾಧ್ಯವೂ ದಾರುಣವೂ ಆದ ಪುತ್ರಶೋಕದಿಂದ ತನ್ನ ದಿವ್ಯಜ್ಞಾನವನ್ನು ಮರೆತನು.

೧೬. ಈಮಧ್ಯೆ ಶುದ್ಧಸ್ಫಟಿಕಮಣಿಯಂತೆ ಪ್ರಕಾಶಮಾನವೂ ಶ್ರೇಷ್ಠಮಣಿಗಳಿಂದ ಭೂಷಿತವೂ ಆದ ಆಕಾಶಯಾನವೊಂದನ್ನು ನೋಡಿದನು.

ತೇಜಸಾ ಜ್ವಲಿತಂ ಶಶ್ವಚ್ಛೋಭಿತಂ ಕ್ಷೌಮವಾಸಸಾ ।
ನಾನಾಚಿತ್ರವಿಚಿತ್ರಾಢ್ಯಂ ಪುಷ್ಪಮಾಲಾ ವಿರಾಜಿತಂ ॥ ೧೭ ॥

ದದರ್ಶ ತತ್ರ ದೇವೀಂ ಚ ಕಮನೀಯಾಂ ಮನೋಹರಾಂ ।
ಶ್ವೇತಚಂಪಕವರ್ಣಾಭಾಂ ರಮ್ಯಸುಸ್ಥಿರಯೌವನಾಂ ॥ ೧೮ ॥

ಈಷದ್ಧಾಸ್ಯಪ್ರಸನ್ನಾಸ್ಯಾಂ ರತ್ನಭೂಷಣಭೂಷಿತಾಂ ।
ಕೃಪಾಮಯೀಂ ಯೋಗಸಿದ್ಧಾಂ ಭಕ್ತಾನುಗ್ರಹಕಾರಿಣೀಂ ॥ ೧೯ ॥

ದೃಷ್ಟ್ವಾ ತಾಂ ಪುರತೋ ರಾಜಾ ತುಷ್ಟಾವ ಪರಮಾದರಾತ್ ।
ಚಕಾರ ಪೂಜನಂ ತಸ್ಯಾ ವಿಹಾಯ ಭುವಿ ಬಾಲಕಂ ॥ ೨೦ ॥

ಪಪ್ರಚ್ಛ ರಾಜಾ ತಾಂ ದೃಷ್ಟ್ವಾ ಗ್ರೀಷ್ಮಸೂರ್ಯಸಮಪ್ರಭಾಂ ।
ತೇಜಸಾ ಜ್ವಲಿತಾಂ ಶಾಂತಾಂ ಕಾಂತಾಂ ಸ್ಕಂದಸ್ಯ ನಾರದ ॥ ೨೧ ॥

---

೧೭. ತೇಜಸ್ಸಿನಿಂದಲೂ, ರೇಷ್ಮೆಬಟ್ಟೆಗಳಿಂದಲೂ ಶೋಭಿತವಾಗಿ ಚಿತ್ರ ವಿಚಿತ್ರಗಳಿಂದಲೂ, ಪುಷ್ಪಮಾಲೆಯಿಂದಲೂ ಆ ವಿಮಾನವು ವಿರಾಜಿಸುತ್ತಿದ್ದಿತು.

೧೮–೧೯. ಆ ವಿಮಾನದಲ್ಲಿ ಬಿಳಿಯಸಂಪಿಗೆಯಂತೆ ಹೊಂಬಣ್ಣವುಳ್ಳವಳೂ, ಸುಸ್ಥಿರವಾದ ಯೌವನವುಳ್ಳವಳೂ, ಮಂದಹಾಸದಿಂದ ಪ್ರಸನ್ನವಾದ ಮುಖವುಳ್ಳವಳೂ, ದಯಾಮಯಳೂ, ಯೋಗಸಿದ್ಧಿಪಡೆದವಳೂ, ಭಕ್ತಾನುಗ್ರಹದಾಯಕಳೂ, ಅತ್ಯಂತಮನೋಹರಳೂ ಆದ ಷಷ್ಠೀದೇವಿಯನ್ನು ನೋಡಿದನು.

೨೦. ಆ ದೇವಿಯನ್ನು ನೋಡಿ ರಾಜನು ಪರಮಭಕ್ತಿಯಿಂದ ಸ್ತುತಿಸಿದನು. ಅಪ್ಪಿಕೊಂಡಿದ್ದ ಮೃತಶಿಶುವನ್ನು ಅಲ್ಲಿಯೇ ಇರಿಸಿ, ಆಕೆಯ ಪೂಜೆಯನ್ನು ಮಾಡಿದನು.

೨೧. ಗ್ರೀಷ್ಮರ್ತುವಿನ ಮಧ್ಯಾಹ್ನಸೂರ್ಯನಂತೆ ಪ್ರಕಾಶಮಾನಳೂ, ಶಾಂತಳೂ ಆದ ಆ ಷಣ್ಮುಖ ಪತ್ನಿಯನ್ನು ಕುರಿತು, ರಾಜನು ವಿನಯದಿಂದ ಬೇಡಿದನು.

॥ ಪ್ರಿಯವ್ರತ ಉವಾಚ ॥

ಕಾ ತ್ವಂ ಸುಶೋಭನೇ ಕಾಂತೇ ಕಸ್ಯ ಕಾಂತಾಸಿ ಸುವ್ರತೇ ।
ಕಸ್ಯ ಕನ್ಯಾ ವರಾರೋಹೇ ಧನ್ಯಾ ಮಾನ್ಯಾ ಚ ಯೋಷಿತಾಂ ॥ ೨೨ ॥

ನೃಪೇಂದ್ರಸ್ಯ ವಚಃ ಶ್ರುತ್ವಾ ಜಗನ್ಮಂಗಲದಾಯಿನೀ ।
ಉವಾಚ ದೇವಸೇನಾ ಸಾ ದೇವರಕ್ಷಣಕಾರಿಣೀ ॥ ೨೩ ॥

ದೇವಾನಾಂ ದೈತ್ಯಭೀತಾನಾಂ ಪುರಾ ಸೇನಾ ಬಭೂವ ಸಾ ।
ಜಯಂ ದದೌ ಚ ತೇಭ್ಯಶ್ಚ ದೇವಸೇನಾ ಚ ತೇನ ಸಾ ॥ ೨೪ ॥

॥ ದೇವಸೇನೋವಾಚ ॥

ಬ್ರಹ್ಮಣೋ ಮಾನಸೀಕನ್ಯಾ ದೇವಸೇನಾಹಮೀಶ್ವರೀ ।
ಸೃಷ್ಟ್ವಾ ಮಾಂ ಮನಸೋ ಧಾತಾ ದದೌ ಸ್ಕಂದಾಯ ಭೂಮಿಪ ॥ ೨೫ ॥

---

೨೨. ಪ್ರಿಯವ್ರತ :—ಎಲೌ ಮಂಗಳಪ್ರದಳೇ, ನೀನು ಯಾರ ಪತ್ನಿಯು, ಮತ್ತು ಯಾರ ಮಗಳು? ಸ್ತ್ರೀಯರಲ್ಲಿ ಧನ್ಯಳೂ, ಪೂಜ್ಯಳೂ ಆದ ನೀನಾರು ?

೨೩. ಈ ರೀತಿಯಾದ ರಾಜನ ಪ್ರಶ್ನೆಯನ್ನು ಕೇಳಿ ಜಗನ್ಮಂಗಳದಾಯಕಿಯೂ, ಬಾಲಕರ ರಕ್ಷಣಾಪರಳೂ ಆದ ಆ ದೇವಸೇನಾದೇವಿಯು ಇಂತು ನುಡಿದಳು.

೨೪. ಪೂರ್ವದಲ್ಲಿ ರಾಕ್ಷಸರಿಂದ ಭಯಗೊಂಡ ದೇವತೆಗಳಿಗೆ ಸೇನಾರೂಪಳಾಗಿ ಅವರಿಗೆ ಯುದ್ಧದಲ್ಲಿ ಜಯವನ್ನು ಕೊಟ್ಟುದರಿಂದ ಆಕೆಯು ದೇವಸೇನೆ ಎನಿಸಿಕೊಂಡಳು.

೨೫. ದೇವಸೇನೆ :—ಎಲೈ ರಾಜನೇ, ನಾನು ಬ್ರಹ್ಮನ ಮಾನಸಪುತ್ರಿಯಾದ ದೇವಸೇನೆಯೆಂಬುವಳು. ಬ್ರಹ್ಮನು ನನ್ನನ್ನು ಮನಸ್ಸಿನಿಂದ ಸೃಷ್ಟಿಮಾಡಿ ಷಣ್ಮುಖನಿಗೆ ಕೊಟ್ಟನು.

ಮಾತೃಕಾಸು ಚ ವಿಖ್ಯಾತಾ ಸ್ಕಂದಸೇನಾ ಚ ಸುವ್ರತಾ ।
ವಿಶ್ವೇ ಷಷ್ಠೀತಿ ವಿಖ್ಯಾತಾ ಷಷ್ಠಾಂಶಾ ಪ್ರಕೃತೇರ್ಯತಃ ॥ ೨೬ ॥

ಪುತ್ರದಾಽಹಮಪುತ್ರಾಯ ಪ್ರಿಯದಾತ್ರೀ ಪ್ರಿಯಾಯ ಚ ।
ಧನದಾ ಚ ದರಿದ್ರೇಭ್ಯಃ ಕರ್ತೃಭ್ಯಃ ಶುಭಕರ್ಮದಾ ॥ ೨೭ ॥

ಸುಖಂ ದುಃಖಂ ಭಯಂ ಶೋಕಂ ಹರ್ಷಂ ಮಂಗಲಮೇವ ಚ ।
ಸಂಪತ್ತಿಶ್ಚ ವಿಪತ್ತಿಶ್ಚ ಸರ್ವಂ ಭವತಿ ಕರ್ಮಣಾ ॥ ೨೮ ॥

ಕರ್ಮಣಾ ಬಹುಪುತ್ರೀ ಚ ವಂಶಹೀನಶ್ಚ ಕರ್ಮಣಾ ।
ಕರ್ಮಣಾ ರೂಪವಾಂಶ್ಚೈವ ರೋಗೀ ಶಶ್ವತ್ಸ್ವಕರ್ಮಣಾ ॥ ೨೯ ॥

ಕರ್ಮಣಾ ಮೃತಪುತ್ರಶ್ಚ ಕರ್ಮಣಾ ಚಿರಜೀವಿನಃ ।
ಕರ್ಮಣಾ ಗುಣವಂತಶ್ಚ ಕರ್ಮಣಾ ಚಾಂಗಹೀನಕಾಃ ॥ ೩೦ ॥

---

೨೬. ಸಪ್ತಮಾತೃಕೆಯರಲ್ಲಿ ಪ್ರಧಾನಳೂ, ಷಣ್ಮುಖನ ಪತ್ನಿಯೂ ಆದ ನಾನು ಪ್ರಕೃತಿಯ ಷಷ್ಠಾಂಶಸಂಭೂತಳಾದುದರಿಂದ, ಪ್ರಪಂಚದಲ್ಲಿ ಷಷ್ಠೀದೇವಿ ಯೆಂದು ವಿಖ್ಯಾತಿಪಡೆದಿರುವೆನು.

೨೭. ನಾನು ಮಕ್ಕಳಿಲ್ಲದವರಿಗೆ ಮಕ್ಕಳನ್ನೂ, ಪತ್ನೀರಹಿತರಿಗೆ ಪತ್ನಿ ಯನ್ನೂ, ದರಿದ್ರರಿಗೆ ಧನವನ್ನೂ, ಕರ್ಮಿಗಳಿಗೆ ಸತ್ಫಲವನ್ನೂ ಕೊಡಬಲ್ಲೆನು.

೨೮. ಸುಖದುಃಖಗಳೂ, ಭಯಶೋಕಗಳೂ, ಹರ್ಷಮಂಗಳಗಳೂ, ಸಂಪತ್ತುವಿಪತ್ತುಗಳೂ ಇವೆಲ್ಲವೂ ಕರ್ಮಾನುಗುಣವಾಗಿ ಲಭಿಸುವುವು.

೨೯. ಮನುಜರು ತಮ್ಮ ಕರ್ಮಾನುಗುಣವಾಗಿ ಪುತ್ರವಂತರೂ, ಅಪುತ್ರ ವಂತರೂ, ರೂಪವಂತರೂ, ಕುರೂಪಿಗಳೂ ಮತ್ತು ರೋಗಿಗಳೂ ಆಗುವರು.

೩೦. ಪುತ್ರನನ್ನು ಕಳೆದುಕೊಳ್ಳುವುದು, ಚಿರಂಜೀವಿಯಾಗಿ ಬಾಳುವುದು, ಗುಣವಂತರಾಗುವುದು ಮತ್ತು ಅಂಗಹೀನರಾಗಿ ಜನಿಸುವುದೂ ಕೂಡ ತಮ್ಮ ಜನ್ಮಾಂತರದ ಕರ್ಮಾನುಗುಣವಾಗಿಯೇ.

ತಸ್ಮಾತ್ಕರ್ಮ ಪರಂ ರಾಜನ್ಸರ್ವೇಭ್ಯಶ್ಚ ಶ್ರುತೌ ಶ್ರುತಂ ।
ಕರ್ಮರೂಪೀ ಚ ಭಗವಾಂಸ್ತದ್ದ್ವಾರಾ ಫಲದೋ ಹರಿಃ ॥ ೩೧ ॥

ಇತ್ಯೇವಮುಕ್ತ್ವಾ ಸಾ ದೇವೀ ಗೃಹೀತ್ವಾ ಬಾಲಕಂ ಮುನೇ ।
ಮಹಾಜ್ಞಾನೇನ ಸಹಸಾ ಜೀವಯಾಮಾಸ ಲೀಲಯಾ ॥ ೩೨ ॥

ರಾಜಾ ದದರ್ಶ ತಂ ಬಾಲಂ ಸಸ್ಮಿತಂ ಕನಕಪ್ರಭಂ ।
ದೇವಸೇನಾ ಚ ಪಶ್ಯಂತಂ ನೃಪಮಂಬರಮೇವ ಚ ॥ ೩೩ ॥

ಗೃಹೀತ್ವಾ ಬಾಲಕಂ ದೇವೀ ಗಗನಂ ಗಂತುಮುದ್ಯತಾ ।
ಪುನಸ್ತುಷ್ಟಾವ ತಾಂ ರಾಜಾ ಶುಷ್ಕಕಂಠೌಷ್ಠತಾಲುಕಃ ॥ ೩೪ ॥

ನೃಪಸ್ತೋತ್ರೇಣ ಸಾ ದೇವೀ ಪರಿತುಷ್ಟಾ ಬಭೂವ ಹ ।
ಉವಾಚ ತಂ ನೃಪಂ ಬ್ರಹ್ಮನ್ವೇದೋಕ್ತಂ ಕರ್ಮನಿರ್ಮಿತಂ ॥ ೩೫ ॥

---

೩೧. ಎಲೈ ರಾಜನೇ, ಆದ್ದರಿಂದ ಎಲ್ಲಕ್ಕೂ ಕರ್ಮವೇ ಶ್ರೇಷ್ಠವಾದುದೆಂದು ಶ್ರುತ್ಯುಕ್ತವಾಗಿದೆ. ಕರ್ಮಸ್ವರೂಪಿಯಾದ ಪರಮಾತ್ಮನು ಕರ್ಮದ ಮೂಲಕವಾಗಿಯೇ ಫಲದಾಯಕನಾಗುವನು.

೩೨. ಹೀಗೆ ಹೇಳುತ್ತಲೇ ಆದೇವಿಯು ಆ ಮೃತಶಿಶುವನ್ನು ಎತ್ತಿಕೊಂಡು ತನ್ನ ದಿವ್ಯಜ್ಞಾನದಿಂದ, ಲೀಲೆಯಿಂದಲೇ ಆ ಶಿಶುವನ್ನು ಪುನರ್ಜೀವಗೊಳಿಸಿದಳು.

೩೩–೩೪. ಕೂಡಲೇ ಆ ಬಾಲಕನು ಸುವರ್ಣದಂತೆ ಕಾಂತಿಮಯನೂ, ಸ್ಮಿತವದನನೂ ಆದುದನ್ನು ರಾಜನು ನೋಡಿದನು. ಆ ದೇವಸೇನೆಯಾದರೋ ರಾಜನು ನೋಡುತ್ತಿರುವಂತೆಯೇ ಆ ಬಾಲಕನನ್ನೆತ್ತಿಕೊಂಡು ಅಂತರಿಕ್ಷಕ್ಕೆ ಹಾರಿ ಹೋಗಲುದ್ಯುಕ್ತಳಾದಳು. ಆಗ ರಾಜನು ಒಣಗಿದ ಗಂಟಲು ಮತ್ತು ತುಟಿಗಳಿಂದ ಆ ದೇವಿಯನ್ನು ಸ್ತುತಿಸಿದನು.

೩೫. ರಾಜನು ಮಾಡಿದ ಸ್ತುತಿಯಿಂದ ಆ ದೇವಿಯು ಸಂತೋಷಗೊಂಡಳು. ಆಗ ರಾಜನನ್ನು ಕುರಿತು ವೇದೋಕ್ತವಾದ ಕರ್ಮವನ್ನು ಆಚರಿಸಲು ಇಂತು ಹೇಳಿದಳು.

|| ದೇವಸೇನೋವಾಚ ||

ತ್ರಿಷು ಲೋಕೇಷು ರಾಜಾ ತ್ವಂ ಸ್ವಾಯಂಭುವಮನೋಃ ಸುತಃ |
ಮಮ ಪೂಜಾಂ ಚ ಸರ್ವತ್ರ ಕಾರಯಿತ್ವಾ ಸ್ವಯಂ ಕುರು || ೩೬ ||

ತದಾ ದಾಸ್ಯಾಮಿ ಪುತ್ರಂ ತೇ ಕುಲಪದ್ಮಂ ಮನೋಹರಂ |
ಸುವ್ರತಂ ನಾಮ ವಿಖ್ಯಾತಂ ಗುಣವಂತಂ ಸುಪಂಡಿತಂ || ೩೭ ||

ಜಾತಿಸ್ಮರಂ ಚ ಯೋಗೀಂದ್ರಂ ನಾರಾಯಣಕಲಾತ್ಮಕಂ |
ಶತಕ್ರತುಕರಂ ಶ್ರೇಷ್ಠಂ ಕ್ಷತ್ರಿಯಾಣಾಂ ಚ ವಂದಿತಂ || ೩೮ ||

ಮತ್ತಮಾತಂಗಲಕ್ಷಾಣಾಂ ಧೃತವಂತಂ ಬಲಂ ಶುಭಂ |
ಧನ್ವಿನಂ ಗುಣಿನಂ ಶುದ್ಧಂ ವಿದುಷಾಂ ಪ್ರಿಯಮೇವ ಚ || ೩೯ ||

ಯೋಗಿನಂ ಜ್ಞಾನಿನಂ ಚೈವ ಸಿದ್ಧರೂಪಂ ತಪಸ್ವಿನಂ |
ಯಶಸ್ವಿನಂ ಚ ಲೋಕೇಷು ದಾತಾರಂ ಸರ್ವಸಂಪದಾಂ || ೪೦ ||

---

೩೬. ದೇವಸೇನೆ :—ಸ್ವಾಯಂಭುವ ಮನುವಿನ ಪುತ್ರನಾದ ನೀನು ತ್ರಿಲೋಕಕ್ಕೂ ರಾಜನಾಗಿರುವೆ. ಆದುದರಿಂದ ನೀನೂ ನನ್ನ ಪೂಜೆಯನ್ನು ಮಾಡಿ ಎಲ್ಲ ಪ್ರಜೆಗಳಿಂದಲೂ ಮಾಡಿಸು.

೩೭. ಆಗ ಕುಲೋದ್ಧಾರಕನೂ, ಮನೋಹರನೂ, ಗುಣವಂತನೂ ಪಂಡಿತನೂ ಆದ ಈ ಸುವ್ರತನೆಂಬ ಹೆಸರುಳ್ಳ ಪುತ್ರನನ್ನು ನಿನಗೆ ಅನುಗ್ರಹಿಸುವೆನು.

೩೮. ಇವನು ಜಾತಿಸ್ಮರನೂ, ಶ್ರೀಮನ್ನಾರಾಯಣಪರಾಯಣನೂ ಆಗಿ ನೂರು ಯಾಗಗಳನ್ನು ಮಾಡಿ ಕ್ಷತ್ರಿಯರಿಗೆಲ್ಲ ಪೂಜ್ಯನಾಗುವನು.

೩೯. ಅಲ್ಲದೆ ಮದಿಸಿರುವ ನೂರು ಆನೆಗಳನ್ನು ಹಿಡಿದು ನಿಲ್ಲಿಸುವಷ್ಟು ಬಲಶಾಲಿಯಾಗಿಯೂ,ಒಳ್ಳೆಯ ಧನುರ್ಧಾರಿಯಾಗಿಯೂ, ವಿದ್ವತ್ಪ್ರಿಯನಾಗಿಯೂ ಹೆಸರು ವಾಸಿಯಾಗುವನು.

೪೦. ಯೋಗಿಯೂ ಜ್ಞಾನಿಯೂ, ಶ್ರೇಷ್ಠತಪಸ್ವಿಯೂ, ಆಗಿ ಲೋಕದ ಪ್ರಜೆಗಳಿಗೆಲ್ಲ ಸಕಲ ಸಂಪತ್ತನ್ನೂ ಇತ್ತು ಕೀರ್ತಿವಂತನಾಗುವನು.

ಇತ್ಯೇವಮುಕ್ತ್ವಾ ಸಾ ದೇವೀ ತಸ್ಮೈ ತದ್ಬಾಲಕಂ ದದೌ ।
ರಾಜಾ ಚ ತಂ ಸ್ವೀಚಕಾರ ತತ್ಪೂಜಾರ್ಥಂ ಚ ಸುವ್ರತಃ ॥ ೪೧ ॥

ಜಗಾಮ ದೇವೀ ಸ್ವರ್ಗಂ ಚ ದತ್ವಾ ತಸ್ಮೈ ಶುಭಂ ವರಂ ।
ಆಜಗಾಮ ಮಹಾರಾಜಃ ಸ್ವಗೃಹಂ ಹೃಷ್ಟಮಾನಸಃ ।

ಆಗತ್ಯ ಕಥಯಾಮಾಸ ವೃತ್ತಾಂತಂ ಪುತ್ರಹೇತುಕಂ ॥ ೪೨ ॥
ತುಷ್ಟಾ ಬಭೂವುಃ ಸಂತುಷ್ಟಾ ನರಾ ನಾರ್ಯಶ್ಚ ನಾರದ ।

ಮಂಗಲಂ ಕಾರಯಾಮಾಸ ಸರ್ವತ್ರ ಸುತಹೇತುಕಂ ।
ದೇವೀಂ ಚ ಪೂಜಯಾಮಾಸ ಬ್ರಾಹ್ಮಣೇಭ್ಯೋ ಧನಂ ದದೌ ॥ ೪೩ ॥

ರಾಜಾ ಚ ಪ್ರತಿಮಾಸೇಷು ಶುಕ್ಲಷಷ್ಠ್ಯಾಂ ಮಹೋತ್ಸವಂ ।
ಷಷ್ಠ್ಯೈ ದೇವ್ಯೈಶ್ಚ ಯತ್ನೇನ ಕಾರಯಾಮಾಸ ಸರ್ವತಃ ॥ ೪೪ ॥

---

೪೧. ಹೀಗೆ ಹೇಳಿ ಆದೇವಿಯು ಆ ರಾಜನಿಗೆ ಶಿಶುವನ್ನು ಕೊಟ್ಟಳು. ರಾಜನೂ ಕೂಡ ಆ ಶಿಶುವನ್ನು ಸ್ವೀಕರಿಸಿ ಆ ದೇವಿಯ ಪೂಜೆಮಾಡುವುದಾಗಿ ಪ್ರತಿಜ್ಞೆಮಾಡಿದನು.

೪೨. ಆ ರಾಜನಿಗೆ ಶುಭವರಗಳನ್ನಿತ್ತು ಷಷ್ಠೀದೇವಿಯು ಸ್ವರ್ಗಕ್ಕೆ ಹೋದಳು ಸಂತುಷ್ಟನಾದ ರಾಜನೂ ಕೂಡ ತನ್ನಮನೆಗೆ ಹಿಂತಿರುಗಿದನು. ಮತ್ತು ಮಗನು ಪುನರ್ಜೀವಿತನಾದ ಸಮಾಚಾರವನ್ನೆಲ್ಲ ತನ್ನ ಬಾಂಧವರಿಗೆ ತಿಳಿಸಿದನು.

೪೩. ಎಲೈ ನಾರದನೇ ಆಗ ಸ್ತ್ರೀಪುರುಷರೆಲ್ಲರೂ ಅತ್ಯಂತಸಂತೋಷ ಗೊಂಡರು. ರಾಜನೂ ಕೂಡ ಮಗನು ಬದುಕಿದುದರ ಸಲುವಾಗಿ ಮಂಗಳಕಾರ್ಯ ಗಳನ್ನು ಮಾಡಿಸಿ ಷಷ್ಠೀದೇವಿಯನ್ನೂ ಪೂಜಿಸಿ ಬ್ರಾಹ್ಮಣರಿಗೆ ಯಥೇಚ್ಛವಾಗಿ ದ್ರವ್ಯದಾನಮಾಡಿದನು.

೪೪. ಅಲ್ಲದೆ ಪ್ರತಿತಿಂಗಳಿನ ಶುಕ್ಲಪಕ್ಷದ ಷಷ್ಠೀದಿವಸ ಷಷ್ಠೀದೇವಿಯ ಮಹೋತ್ಸವವನ್ನು ಪ್ರಯತ್ನಪೂರ್ವಕವಾಗಿ ಮಾಡಿಸಿದನು.

ಬಾಲಾನಾಂ ಸೂತಿಕಾಗಾರೇ ಷಷ್ಠಾಹೇ ಯತ್ನಪೂರ್ವಕಂ ।
ತತ್ಪೂಜಾಂ ಕಾರಯಾಮಾಸ ಚೈಕವಿಂಶತಿವಾಸರೇ ॥ ೪೫ ॥

ಬಾಲಾನಾಂ ಶುಭಕಾರ್ಯೇ ಚ ಶುಭಾನ್ನಪ್ರಾಶನೇ ತಥಾ ।
ಸರ್ವತ್ರ ವರ್ಧಯಾಮಾಸ ಸ್ವಯಮೇವ ಚಕಾರ ಹ ॥ ೪೬ ॥

ಧ್ಯಾನಂ ಪೂಜಾವಿಧಾನಂ ಚ ಸ್ತೋತ್ರಂ ಮತ್ತೋ ನಿಶಾಮಯ ।
ಯಚ್ಛ್ರುತಂ ಧರ್ಮವಕ್ತ್ರೇಣ ಕೌಥುಮೋಕ್ತಂ ಚ ಸುವ್ರತ ॥ ೪೭ ॥

ಶಾಲಗ್ರಾಮೇ ಘಟೇ ವಾಥ ವಟಮೂಲೇಽಥವಾ ಮುನೇ ।
ಭಿತ್ತ್ಯಾಂ ಪುತ್ತಲಿಕಾಂ ಕೃತ್ವಾ ಪೂಜಯೇದ್ವಾ ವಿಚಕ್ಷಣಃ ॥ ೪೮ ॥

ಷಷ್ಠಾಂಶಾಂ ಪ್ರಕೃತೇಃ ಶುದ್ಧಾಂ ಸುಪ್ರತಿಷ್ಠಾಂ ಚ ಸುವ್ರತಾಂ ।
ಸುಪುತ್ರದಾಂ ಚ ಶುಭದಾಂ ದಯಾರೂಪಾಂ ಜಗತ್ಪ್ರಸೂಂ ॥ ೪೯ ॥

---

೪೫. ಶಿಶುಜನನವಾದ ಆರನೆಯ ದಿವಸದಲ್ಲಿ ಸೂತಿಕಾ ಗೃಹದಲ್ಲಿರುವಾಗಲೂ ಇಪ್ಪತ್ತೊಂದನೆಯ ದಿವಸದಲ್ಲಿಯೂ ಷಷ್ಠೀದೇವಿಯ ಪೂಜೆಮಾಡಬೇಕೆಂದು ಪ್ರಚುರಪಡಿಸಿದನು.

೪೬. ಬಾಲಕರಿಗೆ ನಡೆಯುವ ಶುಭಕಾರ್ಯಗಳಲ್ಲಿಯೂ ಅನ್ನಪ್ರಾಶನ ಸಮಯದಲ್ಲಿಯೂ, ಎಲ್ಲೆಲ್ಲೂ ಷಷ್ಠೀದೇವಿಯನ್ನು ಪೂಜಿಸಬೇಕೆಂದು ನಿಯಮಿಸಿ ಮದಲ್ಲದೆ ತಾನೂ ಆಚರಿಸುತ್ತಿದ್ದನು.

೪೭. ಎಲೈ ವ್ರತಪರನೇ, ಧರ್ಮಪುರುಷನ ಮುಖದಿಂದ ನಾನು ಕೇಳಿರುವ ಕೌಥುಮ ಶಾಖೋಕ್ತವಾದ ಷಷ್ಠೀದೇವಿಯ ಧ್ಯಾನಪೂಜಾದಿಕ್ರಮವನ್ನೂ ಸ್ತೋತ್ರವನ್ನೂ ಹೇಳುವೆನು. ಕೇಳು.

೪೮. ಸಾಲಿಗ್ರಾಮದಲ್ಲಾಗಲೀ ಒಂದು ಕಲಶದಲ್ಲಾಗಲೀ ಆಲದಮರದ ಬುಡದಲ್ಲಾಗಲೀ ದೇವಿಯನ್ನು ಆವಾಹನೆಮಾಡಿ ಅಥವಾ ಒಂದುಗೋಡೆಯ ಮೇಲೆ ಮಣ್ಣಿನ ವಿಗ್ರಹವನ್ನಾಗಲೀ ಮಾಡಿಕೊಂಡು ಪೂಜಿಸಬೇಕು.

೪೯–೫೦. ಪ್ರಕೃತಿಯ ಷಷ್ಠಾಂಶಸಂಭೂತಳೂ, ಅತ್ಯಂತಪರಿಶುದ್ಧಳೂ, ಸುವ್ರತಳೂ, ಸತ್ಪುತ್ರರನ್ನು ಕೊಡುವವಳೂ, ದಯಾಮಯಳೂ. ಜಗನ್ಮಾತೆಯೂ,

ಶ್ವೇತಚಂಪಕವರ್ಣಾಭಾಂ ರತ್ನಭೂಷಣಭೂಷಿತಾಂ ।
ಪವಿತ್ರರೂಪಾಂ ಪರಮಾಂ ದೇವಸೇನಾಂ ಪರಾಂ ಭಜೇ ॥ ೫೦ ॥

ಇತಿ ಧ್ಯಾತ್ವಾ ಸ್ವಶಿರಸಿ ಪುಷ್ಪಂ ದತ್ವಾ ವಿಚಕ್ಷಣಃ ।
ಪುನರ್ಧ್ಯಾತ್ವಾ ಚ ಮೂಲೇನ ಪೂಜಯೇತ್ಸುವ್ರತಾಂ ಸತೀಂ ॥ ೫೧ ॥

ಪಾದ್ಯಾರ್ಘ್ಯಾಚಮನೀಯೈಶ್ಚ ಗಂಧಧೂಪಪ್ರದೀಪಕೈಃ ।
ನೈವೇದ್ಯೈರ್ವಿವಿಧೈಶ್ಚಾಪಿ ಫಲೇನ ಚ ಶುಭೇನ ಚ ॥ ೫೨ ॥

ಮೂಲಮೋಂ ಹ್ರೀಂ ಷಷ್ಠೀದೇವ್ಯೈ ಸ್ವಾಹೇತಿ ವಿಧಿಪೂರ್ವಕಂ ।
ಅಷ್ಟಾಕರಂ ಮಹಾಮಂತ್ರಂ ಯಥಾಶಕ್ತಿ ಜಪೇನ್ನರಃ ॥ ೫೩ ॥

ತತ್ರ ಸ್ತುತ್ವಾ ಚ ನಮತೇ ಭಕ್ತಿಯುಕ್ತಃ ಸಮಾಹಿತಃ ।
ಸ್ತೋತ್ರಂ ಚ ಸಾಮವೇದೋಕ್ತಂ ಧನಪುತ್ರಫಲಪ್ರದಂ ॥ ೫೪ ॥

ಬಿಳಿಯ ಸಂಪಿಗೆಯಂತೆ ಹೊಂಬಣ್ಣವುಳ್ಳವಳೂ, ರತ್ನಾಲಂಕಾರ ಭೂಷಿತಳೂ, ಪರಮ ಪವಿತ್ರರೂಪಳೂ ಆದ ದೇವಸೇನೆಯನ್ನು ಭಕ್ತಿಯಿಂದ ಭಜಿಸುವೆನು.

೫೧. ಈರೀತಿಯಾಗಿ ಧ್ಯಾನಮಾಡಿ ಕುಶಲಿಯಾದವನು ತನ್ನ ತಲೆಯ ಮೇಲೆ ಪ್ರಸಾದ ಪುಷ್ಪವನ್ನು ಧರಿಸಿ, ಮತ್ತೆ ಧ್ಯಾನಮಾಡಿ, ಯಥಾಕ್ರಮವಾಗಿ ದೇವಿಯನ್ನು ಪೂಜಿಸಬೇಕು.

೫೨. ಪಾದ್ಯ, ಅರ್ಘ್ಯ, ಆಚಮನ, ಗಂಧ, ಧೂಪ, ದೀಪಾದಿಗಳನ್ನೂ, ದಿವ್ಯ ಫಲವೇ ಮುಂತಾದ ವಿವಿಧನೈವೇದ್ಯಗಳನ್ನೂ ಭಕ್ತಿಯಿಂದ ಸಮರ್ಪಿಸಬೇಕು.

೫೩."ಓಂ ಹ್ರೀಂ ಷಷ್ಠೀದೇವ್ಯೈ ಸ್ವಾಹಾ" ಎಂಬ ಎಂಟಕ್ಷರದ ಮೂಲಮಂತ್ರವನ್ನು ವಿಧಿ ಪೂರ್ವಕವಾಗಿ ತನ್ನ ಶಕ್ತಿಯಿದ್ದಷ್ಟು ಜಪಿಸಬೇಕು.

೫೪. ಅನಂತರ ಸಾಮವೇದದಲ್ಲಿ ಹೇಳಿರುವಂತೆ, ಪುತ್ರ ಪೌತ್ರ ಧನ ಕನಕಾದಿ ಸಕಲ ಸಂಪತ್ತನ್ನೂ ಕೊಡುವ ಸ್ತೋತ್ರವನ್ನು ಭಕ್ತಿಯಿಂದ ಪಠನೆಮಾಡಿ ನಮಸ್ಕರಿಸಬೇಕು.

ಅಷ್ಟಾಕ್ಷರಂ ಮಹಾಮಂತ್ರಂ ಲಕ್ಷಧಾ ಯೋ ಜಪೇನ್ನರಃ ।
ಸ ಪುತ್ರಂ ಲಭತೇ ನೂನಮಿತ್ಯಾಹ ಕಮಲೋದ್ಭವಃ ॥ ೫೫ ॥

ಸ್ತೋತ್ರಂ ಶೃಣು ಮುನಿಶ್ರೇಷ್ಠ ಸರ್ವೇಷಾಂ ಚ ಶುಭಾವಹಂ ।
ವಾಂಛಾಪ್ರದಂ ಚ ಸರ್ವೇಷಾಂ ಗೂಢಂ ವೇದೆ ಚ ನಾರದ ॥ ೫೬ ॥

॥ ಪ್ರಿಯವ್ರತ ಉವಾಚ ॥

ನಮೋ ದೇವ್ಯೈ ಮಹಾದೇವ್ಯೈ ಸಿದ್ಧ್ಯೈ ಶಾಂತ್ಯೈ ನಮೋ ನಮಃ ।
ಶುಭಾಯೈ ದೇವಸೇನಾಯೈ ಷಷ್ಠೀದೇವ್ಯೈ ನಮೋ ನಮಃ ॥ ೫೭ ॥

ವರದಾಯೈ ಪುತ್ರದಾಯೈ ಧನದಾಯೈ ನಮೋ ನಮಃ ।
ಸುಖದಾಯೈ ಮೋಕ್ಷದಾಯೈ ಷಷ್ಠೀದೇವ್ಯೈ ನಮೋ ನಮಃ ॥ ೫೮ ॥

---

೫೫. ಮೇಲೆ ಹೇಳಿದ ಎಂಟಕ್ಷರದ ಮಹಾಮಂತ್ರವನ್ನು ಲಕ್ಷಸಾರಿ ಜಪಿಸುವ ಮನುಷ್ಯನು ನಿಜವಾಗಿಯೂ ಸತ್ಪುತ್ರನನ್ನು ಪಡೆಯುವನೆಂದು ಬ್ರಹ್ಮನು ಹೇಳಿರುವನು.

೫೬. ಎಲೈ ನಾರದನೇ, ಸರ್ವರಿಗೂ ಶುಭಕರವೂ ಇಷ್ಟಾರ್ಥಫಲಪ್ರದವೂ ಆಗಿ ವೇದದಲ್ಲಿ ಮಾತ್ರ ಇರುವ ಆ ದೇವಿಯ ಸ್ತೋತ್ರವನ್ನು ಹೇಳುವೆನು ಸಾವಧಾನದಿಂದ ಕೇಳು.

೫೭. ಪ್ರಿಯವ್ರತ :—ಮಹಾದೇವಿಯೂ, ಸಿದ್ಧಿ ಮತ್ತು ಶಾಂತಿಸ್ವರೂಪಿಣಿಯೂ, ಆದ ದೇವಿಗೆ ನಮಸ್ಕರಿಸುವೆನು. ಮಂಗಳಕರಳೂ, ದೇವಸೇನಾಭಿಧಾನಳೂ ಆದ ಷಷ್ಠೀದೇವಿಗೆ ವಂದಿಸುವೆನು.

೫೮. ವರವನ್ನು ಕೊಡುವವಳೂ, ಪುತ್ರರನ್ನೂ, ಧನವನ್ನೂ ಕೊಡುವವಳೂ ಆದ ದೇವಿಗೆ ವಂದನೆಗಳು. ಸುಖ ಮತ್ತು ಮೋಕ್ಷಗಳನ್ನೀಯುವ ಷಷ್ಠೀದೇವಿಗೆ ನಮಸ್ಕಾರಗಳು.

ಶಕ್ತೇಃ ಷಷ್ಠಾಂಶರೂಪಾಯೈ ಸಿದ್ಧಾಯೈ ಚ ನಮೋ ನಮಃ ।
ಮಾಯಾಯೈ ಸಿದ್ಧಯೋಗಿನ್ಯೈ ಷಷ್ಠೀದೇವ್ಯೈ ನಮೋ ನಮಃ ॥ ೫೯ ॥

ಪಾರಾಯೈ ಪಾರದಾಯೈ ಚ ಷಷ್ಠೀದೇವ್ಯೈ ನಮೋ ನಮಃ ।
ಸಾರಾಯೈ ಸಾರದಾಯೈ ಚ ಪಾರಾಯೈ ಸರ್ವಕರ್ಮಣಾಂ ॥ ೬೦ ॥

ಬಾಲಾಧಿಷ್ಠಾತೃದೇವ್ಯೈ ಚ ಷಷ್ಠೀದೇವ್ಯೈ ನಮೋ ನಮಃ ।
ಕಲ್ಯಾಣದಾಯೈ ಕಲ್ಯಾಣ್ಯೈ ಫಲದಾಯೈ ಚ ಕರ್ಮಣಾಂ ॥ ೬೧ ॥

ಪ್ರತ್ಯಕ್ಷಾಯೈ ಚ ಭಕ್ತಾನಾಂ ಷಷ್ಠೀದೇವ್ಯೈ ನಮೋ ನಮಃ ।
ಪೂಜ್ಯಾಯೈ ಸ್ಕಂದಕಾಂತಾಯೈ ಸರ್ವೇಷಾಂ ಸರ್ವಕರ್ಮಸು ॥ ೬೨ ॥

ದೇವರಕ್ಷಣಕಾರಿಣ್ಯೈ ಷಷ್ಠೀದೇವ್ಯೈ ನಮೋ ನಮಃ ।
ಶುದ್ಧಸತ್ವಸ್ವರೂಪಾಯೈ ವಂದಿತಾಯೈ ನೃಣಾಂ ಸದಾ ॥ ೬೩ ॥

---

೫೯. ಆದಿಶಕ್ತಿಯ ಷಷ್ಠಾಂಶಸ್ವರೂಪಳೂ, ಸಿದ್ಧಸ್ವರೂಪಿಣಿಯೂ ಆದ ದೇವಿಗೆ ನಮಿಸುವೆನು. ಮಾಯಾರೂಪಿಣಿಯೂ, ಸಿದ್ಧಯೋಗಿನಿಯೂ ಆದ ಷಷ್ಠೀ ದೇವಿಗೆ ನಮಸ್ಕಾರಗಳು.

೬೦. ತಾನು ಜನನಮರಣಾತ್ಮಕವಾದ ಸಂಸಾರದಿಂದ ದೂರವಾಗಿ, ಇತರರನ್ನೂ ಸಂಸಾರದಿಂದ ಪಾರುಗಾಣಿಸುವವಳೂ, ಸಾರಸ್ವರೂಪಿಣಿಯೂ, ಸರ್ವಕರ್ಮಗಳ ಸಾರವಾದ ಮುಕ್ತಿಯನ್ನು ಕೊಡುವವಳೂ ಆದ ಷಷ್ಠೀದೇವಿಗೆ ನಮಸ್ಕಾರಗಳು.

೬೧. ಬಾಲಕರಿಗೆಲ್ಲ ಅಧಿದೇವತೆಯೂ, ಕಲ್ಯಾಣಸ್ವರೂಪಿಣಿಯೂ, (ಕರ್ಮಗಳಿಗೆ) ಕಲ್ಯಾಣಫಲದಾಯಕಿಯೂ ಆದ ಷಷ್ಠೀದೇವಿಗೆ ನಮಸ್ಕಾರಗಳು.

೬೨. ಭಕ್ತರಿಗೆ ಪ್ರತ್ಯಕ್ಷಳಾಗುವವಳೂ, ಸರ್ವಪೂಜ್ಯಳೂ, ಷಣ್ಮುಖನ ಪತ್ನಿಯೂ ಆದ ಷಷ್ಠೀದೇವಿಗೆ ನಮಸ್ಕಾರಗಳು.

೬೩. ಶುದ್ಧಸತ್ತ್ವಸ್ವರೂಪಿಣಿಯೂ, ಮನುಜರಿಂದ ವಂದಿತಳೂ, ದೇವತೆಗಳನ್ನು ರಕ್ಷಣೆಮಾಡುವವಳೂ ಆದ ಷಷ್ಠೀದೇವಿಗೆ ನಮಸ್ಕಾರಗಳು.

ಹಿಂಸಾಕ್ರೋಧೈರ್ವರ್ಜಿತಾಯೈ ಷಷ್ಠೀದೇವ್ಯೈ ನಮೋ ನಮಃ ।
ಧನಂ ದೇಹಿ ಪ್ರಿಯಾಂ ದೇಹಿ ಪುತ್ರಂ ದೇಹಿ ಸುರೇಶ್ವರಿ ॥ ೬೪ ॥

ಧರ್ಮಂ ದೇಹಿ ಯಶೋ ದೇಹಿ ಷಷ್ಠೀದೇವ್ಯೈ ನಮೋ ನಮಃ ।
ಭೂಮಿಂ ದೇಹಿ ಪ್ರಜಾಂ ದೇಹಿ ದೇಹಿ ವಿದ್ಯಾಂ ಸುಪೂಜಿತೇ ॥ ೬೫ ॥

ಕಲ್ಯಾಣಂ ಚ ಜಯಂ ದೇಹಿ ಷಷ್ಠೀದೇವ್ಯೈ ನಮೋ ನಮಃ ।
ಇತಿ ದೇವೀಂ ಚ ಸಂಸ್ತೂಯ ಲೇಭೇ ಪುತ್ರಂ ಪ್ರಿಯವ್ರತಃ ॥ ೬೬ ॥

ಯಶಸ್ವಿನಂ ಚ ರಾಜೇಂದ್ರಂ ಷಷ್ಠೀದೇವೀಪ್ರಸಾದತಃ ।
ಷಷ್ಠೀಸ್ತೋತ್ರಮಿದಂ ಬ್ರಹ್ಮನ್ ಯಃ ಶೃಣೋತಿ ಚ ವತ್ಸರಂ ॥ ೬೭ ॥

ಅಪುತ್ರೋ ಲಭತೇ ಪುತ್ರಂ ವರಂ ಸುಚಿರಜೀವಿನಂ ।
ವರ್ಷಮೇಕಂ ಚ ಯಾ ಭಕ್ತ್ಯಾ ಸಂಯತ್ತೇದಂ ಶೃಣೋತಿ ಚ ॥ ೬೮ ॥

---

೬೪. ಹಿಂಸಾಕ್ರೋಧವಿವರ್ಜಿತಳೂ, ಸುರೇಶ್ವರಿಯೂ ಆದ ಷಷ್ಠೀದೇವಿಗೆ ನಮಿಸುವೆನು. ಧನವನ್ನೂ, ಪ್ರಿಯೆಯನ್ನೂ, ಪುತ್ರರನ್ನೂ ನೀನು ನನಗೆ ದಯಪಾಲಿಸು.

೬೫. ಸರ್ವಪೂಜಿತಳಾದ ಷಷ್ಠೀದೇವಿಗೆ ವಂದಿಸುವೆನು. ಭೂಮಿಯನ್ನೂ, ಪ್ರಜೆಗಳನ್ನೂ, ಸದ್ವಿದ್ಯೆಯನ್ನೂ, ಧರ್ಮವನ್ನೂ, ಕೀರ್ತಿಯನ್ನೂ, ನನಗೆ ಕರುಣಿಸು.

೬೬. ಎಲೌ ಷಷ್ಠೀದೇವಿಯೇ, ನಿನಗೆ ವಂದಿಸುವೆನು. ಕಲ್ಯಾಣವನ್ನೂ, ಜಯವನ್ನೂ, ನನಗೆ ಕರುಣಿಸು ಎಂದು ದೇವಿಯನ್ನು ಸ್ತುತಿಸಿ ಪ್ರಿಯವ್ರತನು ಪುತ್ರನನ್ನು ಪಡೆದನು.

೬೭. ಇಂತು ಷಷ್ಠೀದೇವಿಯ ಅನುಗ್ರಹದಿಂದ ಆ ರಾಜನು ಕೀರ್ತಿವಂತನಾದನು. ಷಷ್ಠೀದೇವಿಯ ಈ ಸ್ತೋತ್ರವನ್ನು ಒಂದುವರ್ಷ ಕೇಳುವವರು, ಅಪುತ್ರರಾದರೆ, ಗುಣವಂತನೂ, ದೀರ್ಘಾಯುವೂ ಆದ ಪುತ್ರನನ್ನು ಪಡೆಯುವರು.

೬೮–೬೯. ಯಾವ ಸ್ತ್ರೀಯು ಇಂದ್ರಿಯನಿಗ್ರಹಪರಳಾಗಿ ಒಂದುವರ್ಷಕಾಲ ಈ ಸ್ತೋತ್ರವನ್ನು ಕೇಳುವಳೋ ಅವಳು ಬಂಜೆಯಾದರೂ, ಸಕಲಪಾಪವಿನಿರ್ಮುಕ್ತ

ಸರ್ವಪಾಪಾದ್ವಿನಿರ್ಮುಕ್ತಾ ಮಹಾವಂಧ್ಯಾ ಪ್ರಸೂಯತೇ ।
ವೀರಪುತ್ರಂ ಚ ಗುಣಿನಂ ವಿದ್ಯಾವಂತಂ ಯಶಸ್ವಿನಂ ॥ ೬೯ ॥

ಸುಚಿರಾಯುಷ್ಮಂತಮೇವ ಷಷ್ಠೀಮಾತೃಪ್ರಸಾದತಃ ।
ಕಾಕವಂಧ್ಯಾ ಚ ಯಾ ನಾರೀ ಮೃತಾಪತ್ಯಾ ಚ ಯಾ ಭವೇತ್ ॥ ೭೦ ॥
ವರ್ಷಂ ಶ್ರುತ್ವಾ ಲಭೇತ್ಪುತ್ರಂ ಷಷ್ಠೀದೇವೀ ಪ್ರಸಾದತಃ ।

ರೋಗಯುಕ್ತೇ ಚ ಬಾಲೇ ಚ ಪಿತಾ ಮಾತಾ ಶೃಣೋತಿ ಚ ॥ ೭೧ ॥
ಮಾಸಂ ಚ ಮುಚ್ಯತೇ ಬಾಲಃ ಷಷ್ಠೀದೇವೀಪ್ರಸಾದತಃ ।

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಷಷ್ಠ್ಯುಪಾಖ್ಯಾನೇ ಷಷ್ಠೀ
ದೇವ್ಯುತ್ಪತ್ತಿ ತತ್ಪೂಜಾಸ್ತೋತ್ರಾದಿಕಥನಂ ನಾಮ
ತ್ರಿಚತ್ವಾರಿಂಶತ್ತಮೋಽಧ್ಯಾಯಃ

ಳಾಗಿ ವೀರನೂ, ಗುಣವಂತನೂ, ವಿದ್ಯಾವಂತನೂ, ಕೀರ್ತಿವಂತನೂ, ದೀರ್ಘಾಯುಷ್ಮಂತನೂ ಆದ ಪುತ್ರನನ್ನು ಷಷ್ಠೀದೇವಿಯ ಅನುಗ್ರಹದಿಂದ ಪ್ರಸುವಿಸುವಳು.

೭೦. ಒಬ್ಬನೇ ಮಗನನ್ನು ಪಡೆದವಳೂ, ಮಕ್ಕಳನ್ನು ಕಳೆದುಕೊಂಡವಳೂ, ಒಂದುವರ್ಷ ಈ ಸ್ತೋತ್ರವನ್ನು ಕೇಳಿ ಷಷ್ಠೀದೇನಿಯ ಅನುಗ್ರಹದಿಂದ ದೀರ್ಘಾಯುವುಳ್ಳ ಪುತ್ರನನ್ನು ಪಡೆಯುವಳು.

೭೧. ಶಿಶುವು ರೋಗಗ್ರಸ್ತವಾಗಿರುವಾಗ, ಅದರ ತಂದೆತಾಯಿಗಳು ಒಂದು ತಿಂಗಳು ಕಾಲ ಈ ದಿವ್ಯ ಸ್ತೋತ್ರವನ್ನು ಕೇಳಿದರೆ ಷಷ್ಠೀದೇವಿಯ ಅನುಗ್ರಹದಿಂದ ಆ ಬಾಲಕನು ರೋಗದಿಂದ ಮುಕ್ತಿಹೊಂದುವನು.

ಇಲ್ಲಿಗೆ ಶ್ರೀಬ್ರಹ್ಮವೈವರ್ತಮಹಾಪುರಾಣದಲ್ಲಿ ಷಷ್ಠೀದೇವಿಯ
ಉಪಾಖ್ಯಾನರೂಪವಾದ ನಲವತ್ತಮೂರನೆಯ
ಅಧ್ಯಾಯವು ಮುಗಿದುದು.

ನಲವತ್ತಮೂರನೆಯ ಅಧ್ಯಾಯದ ಸಾರಾಂಶವು

ವಿಷ್ಣುಮಾಯಾ ಸ್ವರೂಪಿಣಿಯಾದ ಷಷ್ಠೀದೇವಿಯು ಪ್ರಕೃತಿಯ ಆರನೆಯ ಒಂದಂಶದಿಂದ ಅವತರಿಸಿ 'ದೇವಸೇನಾ' ಯೆಂಬ ಹೆಸರಿನಿಂದ ಪ್ರಸಿದ್ಧಳಾಗಿ ಷಣ್ಮುಖನಿಗೆ ಪ್ರಿಯಳಾದಳು. ಈಕೆಯೇ ಬಾಲಕರನ್ನು ರಕ್ಷಿಸುವ ಅಭಿಮಾನಿ ದೇವತೆಯು ಸ್ವಾಯಂಭುವಮನುವಿನ ಪುತ್ರನಾದ ಪ್ರಿಯವ್ರತನು ಬ್ರಹ್ಮನ ಅಪ್ಪಣೆಯಂತೆ ಮಾಲಿನಿ ಎಂಬಾಕೆಯನ್ನು ವಿವಾಹವಾಗಿ ಅನೇಕ ದಿವಸಗಳ ಕಾಲ ಅಪುತ್ರನಾಗಿದ್ದನು. ಅನಂತರ ಕಶ್ಯಪಪ್ರಜಾಪತಿಯು ಅವನಿಂದ 'ಪುತ್ರಕಾಮೇಷ್ಟಿ' ಯಾಗವನ್ನು ಮಾಡಿಸಿ ಅವನ ಪತ್ನಿಗೆ ಯಜ್ಞದ ಚರುವನ್ನು ಭುಜಿಸಲು ಕೊಟ್ಟನು. ಆಕೆಯು ಅದನ್ನು ತಿಂದು ಗರ್ಭವತಿಯಾಗಿ ಹನ್ನೆರಡುವರ್ಷಗಳು ಕಳೆದನಂತರ ಸುಂದರವಾದ ಮೃತಶಿಶುವೊಂದನ್ನು ಪ್ರಸುವಿಸಿದಳು. ಪ್ರಿಯವ್ರತನು ಆ ಶಿಶುವನ್ನು ಶ್ಮಶಾನಕ್ಕೆ ಕರೆದೊಯ್ದು, ಅದರ ದಿವ್ಯ ಸುಂದರರೂಪವನ್ನು ನೋಡಿ ಬಹಳವಾಗಿ ಗೋಳಾಡುತ್ತಿರಲು, ಅವನ ಗೋಳಾಟವನ್ನು ನೋಡಿ ಕನಿಕರಗೊಂಡ ಷಷ್ಠೀ ದೇವಿಯು ಪ್ರತ್ಯಕ್ಷಳಾಗಿ, ಆ ಶಿಶುವನ್ನು ಪುನರುಜ್ಜೀವನಗೊಳಿಸಿ, ಷಷ್ಠೀದೇವಿಯ ವ್ರತವನ್ನು ಆಚರಿಸಬೇಕೆಂದೂ ತನ್ನ ರಾಜ್ಯದಲ್ಲಿ ಪ್ರಚಾರಮಾಡಬೇಕೆಂದೂ ಆ ರಾಜನಿಗೆ ಹೇಳಿ ಅಂತರ್ಧಾನಳಾದಳು. ಕೂಡಲೇ ಪ್ರಿಯವ್ರತನು ಷಷ್ಠೀದೇವಿಯ ವ್ರತವನ್ನಾಚರಿಸಿ, ಪ್ರತಿತಿಂಗಳಿನ ಶುಕ್ಲಷಷ್ಠೀದಿವಸ ಆ ವ್ರತವನ್ನಾಚರಿಸಬೇಕೆಂದು ತನ್ನ ಪ್ರಜೆಗಳಿಗೆಲ್ಲ ನಿಯಮಿಸಿದನು. ಸಾಮವೇದದ ಕೌಥುಮಶಾಖೆಯಲ್ಲಿ ಹೇಳಿರುವಂತೆ ಮೂಲ ಮಂತ್ರೋಚ್ಚಾರಣಪೂರ್ವಕವಾಗಿ ಷಷ್ಠೀದೇವಿಯನ್ನು ಪೂಜಿಸಿ ಸ್ತುತಿಸುವವರು ಪುತ್ರಪೌತ್ರಾದಿ ಸಕಲ ಸಂಪತ್ತುಗಳನ್ನೂ ನಿಶ್ಚಯವಾಗಿ ಹೊಂದುವರು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಚತುಶ್ಚತ್ವಾರಿಂಶತ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಕಥಿತಂ ಷಷ್ಠ್ಯುಪಾಖ್ಯಾನಂ ಬ್ರಹ್ಮಪುತ್ರ ಯಥಾಗಮಂ ।
ದೇವೀ ಮಂಗಲಚಂಡೀ ಚ ತದಾಖ್ಯಾನಂ ನಿಶಾಮಯ || ೧ ||

ತಸ್ಯಾಃ ಪೂಜಾದಿಕಂ ಸರ್ವಂ ಧರ್ಮವಕ್ತ್ರಾಚ್ಚ ಯಚ್ಛ್ರುತಂ ।
ಶ್ರುತಿಸಮ್ಮತಮೇವೇಷ್ಟಂ ಸರ್ವೇಷಾಂ ವಿದುಷಾಮಪಿ || ೨ ||

ಚಂಡಾಯಾ ವರ್ತತೇ ಚಂಡೀ ಜಾಗ್ರತೀ ಶತ್ರುಮಂಡಲೇ ।
ಮಂಗಲೇಷು ಚ ಯಾ ದಕ್ಷಾ ಮಂಗಲಾ ಸೈವ ಚಂಡಿಕಾ || ೩ ||

ನಲವತ್ತನಾಲ್ಕನೆಯ ಅಧ್ಯಾಯವು

೧. ನಾರಾಯಣ :—ಎಲೈ ಬ್ರಹ್ಮಪುತ್ರನೇ, ಷಷ್ಠೀದೇವಿಯ ಕಥೆಯನ್ನು ಶಾಸ್ತ್ರಾನುಗುಣವಾಗಿ ವಿವರಿಸಿದೆನು. ಈಗ 'ಮಂಗಳಚಂಡೀ' ಎಂಬ ದೇವಿಯ ಆಖ್ಯಾನವನ್ನು ಹೇಳುವೆನು ಕೇಳು.

೨. ಧರ್ಮಪುರುಷನ ಬಾಯಿನಿಂದ ನಾನು ಕೇಳಿದ, ಆ ದೇವಿಯ ಪೂಜಾ ವಿಧಾನವು ಶ್ರುತಿಸಂಮತವಾಗಿಯೂ, ವಿದ್ವಾಂಸರು ಒಪ್ಪುವಂತೆಯೂ ಇದೆ.

೩. ಯಾವಾಗಲೂ ದ್ವೇಷವನ್ನು ಸಾಧಿಸಲು ಸಿದ್ಧವಾಗಿರುವ ಶತ್ರುಗಳ ವಿಷಯದಲ್ಲಿ ಕ್ರೂರವಾಗಿರುವುದರಿಂದ 'ಚಂಡೀ' ಎಂದೂ, ಆ ದೇವಿಯೇ ಮಂಗಳ ಪರಂಪರೆಗಳನ್ನು ಒದಗಿಸುವುದರಲ್ಲಿ ಶಕ್ತಳಾದುದರಿಂದ 'ಮಂಗಳಚಂಡೀ' ಎಂದೂ ಅಭಿಧಾನಹೊಂದಿದಳು.

ದುರ್ಗಾಯಾಂ ವಿದ್ಯತೇ ಚಂಡೀ ಮಂಗಲೋಽಪಿ ಮಹೀಸುತೇ ।
ಮಂಗಲಾಭೀಷ್ಟದೇವೀ ಯಾ ಸಾ ಸ್ಯಾನ್ಮಂಗಲಚಂಡಿಕಾ ॥ ೪ ॥

ಮಂಗಲೋ ಮನುವಂಶಶ್ಚ ಸಪ್ತದ್ವೀಪಾವನೀಪತಿಃ ।
ತಸ್ಯ ಪೂಜ್ಯಾಭೀಷ್ಟದೇವೀ ತೇನ ಮಂಗಲಚಂಡಿಕಾ ॥ ೫ ॥

ಮೂರ್ತಿಭೇದೇನ ಸಾ ದುರ್ಗಾ ಮೂಲಪ್ರಕೃತಿರೀಶ್ವರೀ ।
ಕೃಪಾರೂಪಾತಿಪ್ರತ್ಯಕ್ಷಾ ಯೋಷಿತಾಮಿಷ್ಟದೇವತಾ ॥ ೬ ॥

ಪ್ರಥಮೇ ಪೂಜಿತಾ ಸಾ ಚ ಶಂಕರೇಣ ಪುರಾ ಪರಾ ।
ತ್ರಿಪುರಸ್ಯ ವಧೇ ಘೋರೇ ವಿಷ್ಣುನಾ ಪ್ರೇರಿತೇನ ಚ ॥ ೭ ॥

ಬ್ರಹ್ಮನ್ ಬ್ರಹ್ಮೋಪದೇಶೇನ ದುರ್ಗಪ್ರಸ್ಥೇ ಚ ಸಂಕಟೇ ।
ಆಕಾಶಾತ್ಪತಿತೇ ಯಾನೇ ರುಷಾ ದೈತ್ಯೇನ ಪಾತಿತೇ ॥ ೮ ॥

---

೪. ದುರ್ಗಾದೇವಿಯೇ ಚಂಡಿಯೆಂದೂ, ಭೂದೇವಿಯ ಸುತನೇ ಮಂಗಳನೆಂದೂ ವಿಖ್ಯಾತವಾಗಿರುವುದರಿಂದ, ಮಂಗಳ (ಅಂಗಾರಕ)ನಿಗೆ ಅಭೀಷ್ಟದೇವತೆಯಾದ ದುರ್ಗೆಯೇ ಮಂಗಳಚಂಡಿಕೆ ಎನಿಸಿಕೊಂಡಳು.

೫. ಮನುವಂಶೋತ್ಪನ್ನನೂ, ಸಪ್ತದ್ವೀಪಪರಿವೃತವಾದ ಭೂಮಿಗೆ ಒಡೆಯನೂ ಆದ ಮಂಗಳನೆಂಬ ಮಹಾರಾಜನಿಗೆ ಪೂಜ್ಯಳೂ, ಅಭೀಷ್ಟದೇವತೆಯೂ ಆದವಳೇ ಮಂಗಳಚಂಡಿಕೆ ಎನಿಸಿಕೊಂಡಳು.

೬. ಮೂಲಪ್ರಕೃತಿಯೂ, ಸರ್ವೇಶ್ವರಿಯೂ ಆದ ಆ ದುರ್ಗೆಯೇ ಆಕಾರಭೇದದಿಂದ ದಯಾಮಯಳೂ, ಸ್ತ್ರೀಯರ ಇಷ್ಟದೇವತೆಯೂ ಆದ ಮಂಗಳಚಂಡಿಕಾ ರೂಪದಿಂದ ಪ್ರತ್ಯಕ್ಷಳಾಗುವಳು.

೭. ಆ ಮಂಗಳಚಂಡಿಕೆಯನ್ನು ಪೂರ್ವದಲ್ಲಿ ತ್ರಿಪುರಾಸುರಸಂಹಾರ ಮಾಡಲುದ್ಯುಕ್ತನಾದ ಈಶ್ವರನು ವಿಷ್ಣುವಿನಿಂದ ಪ್ರೇರಿತನಾಗಿ ಮೊದಲು ಪೂಜಿಸಿದನು.

೮-೯. ಎಲೈ ನಾರದನೇ, ಶಂಕರನು ಬ್ರಹ್ಮನ ಮಾತಿನಂತೆ ದುರ್ಗಭೇದನಕ್ಕೆ ಹೊರಟು ಕಷ್ಟಕ್ಕೆ ಸಿಲುಕಿ, ರಾಕ್ಷಸರಿಂದ ನೂಕಲ್ಪಟ್ಟು ಯಾನಸಮೇತನಾಗಿ

ಬ್ರಹ್ಮವಿಷ್ಣೂಪದಿಷ್ಟಶ್ಚ ದುರ್ಗಾಂ ತುಷ್ಟಾವ ಶಂಕರಃ ।
ಸಾ ಚ ಮಂಗಲಚಂಡೀಯೆಮಭವದ್ರೂಪಭೇದತಃ ॥ ೯ ॥

ಉವಾಚ ಪುರತಃ ಶಂಭೋರ್ಭಯಂ ನಾಸ್ತೀತಿ ತೇ ಪ್ರಭೋ ।
ಭಗವಾನ್ವೃಷರೂಪಶ್ಚ ಸರ್ವೇಶಶ್ಚ ಬಭೂವ ಹ ॥ ೧೦ ॥

ಯುದ್ಧಶಕ್ತಿಸ್ವರೂಪಾಹಂ ಭವಿಷ್ಯಾಮಿ ತದಾಜ್ಞಯಾ ।
ಮಯಾತ್ಮನಾ ಚ ಹರಿಣಾ ಸಹಾಯೇನ ವೃಷಧ್ವಜ ॥ ೧೧ ॥

ಜಹಿ ದೈತ್ಯಂ ಚ ದೇವೇಶ ಸುರಾಣಾಂ ಪದಘಾತಕಂ ।
ಇತ್ಯುಕ್ತ್ವಾಂತರ್ಹಿತಾ ದೇವೀ ಶಂಭೋಃ ಶಕ್ತಿರ್ಬಭೂವ ಸಾ ॥ ೧೨ ॥

ವಿಷ್ಣುದತ್ತೇನ ಶಸ್ತ್ರೇಣ ಜಘಾನ ತಮುಮಾಪತಿಃ ।
ಮುನೀಂದ್ರಪತಿತೇ ದೈತ್ಯೇ ಸರ್ವೇ ದೇವಾ ಮಹರ್ಷಯಃ ॥ ೧೩ ॥

ತುಷ್ಟುವುಃ ಶಂಕರಂ ದೇವಾ ಭಕ್ತಿನಮ್ರಾತ್ಮಕಂಧರಾಃ ।
ಸದ್ಯಃ ಶಿರಸಿ ಶಂಭೋಶ್ಚ ಪುಷ್ಪವೃಷ್ಟಿರ್ಬಭೂವ ಹ ॥ ೧೪ ॥

ಕೆಳಗೆ ಬಿದ್ದಾಗ, ಬ್ರಹ್ಮ, ಮತ್ತು ವಿಷ್ಣುವಿನ ಉಪದೇಶದಂತೆ ದುರ್ಗಾದೇವಿಯನ್ನು ಸ್ತುತಿಸಿದನು. ಆಗ ದುರ್ಗಿಯು ಮಂಗಳಚಂಡಿಯ ರೂಪದಿಂದ ಪ್ರತ್ಯಕ್ಷಳಾದಳು.

೧೦–೧೨. ಈಶ್ವರನ ಮುಂದೆ ನಿಂತು ನೀನು ಭಯಪಡಬೇಕಾದಿಲ್ಲವೆಂದು ಸಮಾಧಾನಪಡಿಸಿದಳು. ‘ ಸರ್ವೇಶ್ವರನೂ, ಭಗವಂತನೂ ಆದ ಧರ್ಮಪುರುಷನು ವೃಷಭರೂಪವನ್ನು ಧರಿಸುವನು. ನಾನು ಅವನ ಆಜ್ಞೆಯಂತೆ ಯುದ್ಧಶಕ್ತಿಸ್ವರೂಪಳಾಗುವೆನು. ನೀನು ವೃಷಭವಾಹನನಾಗಿ ನನ್ನ ಮತ್ತು ಶ್ರೀಹರಿಯ ಸಹಾಯದಿಂದ, ದೇವತೆಗಳ ಸ್ಥಾನಕ್ಕೆ ಚ್ಯುತಿತಂದಿರುವ ರಾಕ್ಷಸನನ್ನು ಸಂಹರಿಸು.’ ಹೀಗೆ ಹೇಳಿ ಮಂಗಳಚಂಡಿಕೆಯು ಅಂತರ್ಧಾನಹೊಂದಿ ಶಂಭುವಿನ ಶಕ್ತಿಸ್ವರೂಪಳಾದಳು.

೧೩–೧೪. ಉಮಾಪತಿಯಾದ ಶಿವನು ವಿಷ್ಣುವು ಕೊಟ್ಟ ಶಸ್ತ್ರದಿಂದ ಆ ದೈತ್ಯನನ್ನು ಸಂಹರಿಸಿದನು. ಎಲೈ ನಾರದನೇ, ಆ ರಾಕ್ಷಸನ ಪತನವಾದ ಕೂಡಲೇ ಎಲ್ಲ ದೇವತೆಗಳೂ ಮಹರ್ಷಿಗಳೂ ಭಕ್ತಿಯಿಂದ ತಮ್ಮ ತಲೆಯನ್ನು ತಗ್ಗಿಸಿ ಶಂಕರನನ್ನು ಸ್ತುತಿಸಿದರು. ಆಗಲೇ ಶಂಕರನ ತಲೆಯ ಮೇಲೆ ಹೂಮಳೆ ಕರೆಯಿತು.

ಬ್ರಹ್ಮಾ ವಿಷ್ಣುಶ್ಚ ಸಂತುಷ್ಟೋ ದದೌ ತಸ್ಮೈ ಶುಭಾಶಿಷಂ ।
ಬ್ರಹ್ಮವಿಷ್ಣೂಪದಿಷ್ಟಶ್ಚ ಸುಸ್ನಾತಃ ಶಂಕರಃ ಶುಚಿಃ ॥ ೧೫ ॥

ಪೂಜಯಾಮಾಸ ತಾಂ ಶಕ್ತಿಂ ದೇವೀಂ ಮಂಗಲಚಂಡಿಕಾಂ ।
ಪಾದ್ಯಾರ್ಘ್ಯಾಚಮನೀಯೈಶ್ಚ ಬಲಿಭಿರ್ವಿವಿಧೈರಪಿ ॥ ೧೬ ॥

ಪುಷ್ಪಚಂದನನೈವೇದ್ಯೈರ್ಭಕ್ತ್ಯಾ ನಾನಾವಿಧೈರ್ಮನೇ ।
ಛಾಗೈರ್ಮೇಷೈಶ್ಚ ಮಹಿಷೈರ್ಗಂಡೈರ್ಮಾಯಾವಿಭಿರ್ವರೈಃ ॥ ೧೭ ॥

ವಸ್ತ್ರಾಲಂಕಾರಮಾಲ್ಯೈಶ್ಚ ಪಾಯಸೈಃ ಪಿಷ್ಟಕೈರಪಿ ।
ಮಧುಭಿಶ್ಚ ಸುಧಾಭಿಶ್ಚ ಪಕ್ವೈರ್ನಾನಾವಿಧೈಃ ಫಲೈಃ ॥ ೧೮ ॥

ಸಂಗೀತೈರ್ನರ್ತನೈರ್ವಾದ್ಯೈರುತ್ಸವೈಃ ಕೃಷ್ಣಕೀರ್ತನೈಃ ।
ಧ್ಯಾತ್ವಾ ಮಾಧ್ಯಂದಿನೋಕ್ತೇನ ಧ್ಯಾನೇನ ವಿಧಿಪೂರ್ವಕಂ ॥ ೧೯ ॥

೧೫–೧೬. ಸಂತುಷ್ಟರಾದ ವಿಷ್ಣು ಮತ್ತು ಬ್ರಹ್ಮರು ಆ ಶಂಕರನಿಗೆ ಶುಭಾಶೀರ್ವಾದಗಳನ್ನು ಮಾಡಿದರು. ಅವರಿಂದ ಉಪದೇಶಹೊಂದಿ ಶಂಕರನು ಸ್ನಾನಮಾಡಿ ಶುಚಿಯಾಗಿ, ಶಕ್ತಿಸ್ವರೂಪಿಣಿಯಾದ ಮಂಗಳಚಂಡಿಕೆಯನ್ನು ಅರ್ಘ್ಯ ಪಾದ್ಯಾದಿಗಳಿಂದ ಪೂಜಿಸಿದನು.

೧೭–೧೮. ಪುಷ್ಪಚಂದನಾದಿಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿ, ನಾನಾ ವಿಧ ನೈವೇದ್ಯಗಳನ್ನೂ, ಹೋತ, ಟಗರು, ಕೋಣ ಮತ್ತು ಮಾಯಾವಿಗಳ ತಲೆ ಬುರಡೆ ಮುಂತಾದುವುಗಳನ್ನೂ ಸಮರ್ಪಿಸಿ, ವಸ್ತ್ರಾಲಂಕಾರಗಳಿಂದಲೂ, ಪುಷ್ಪ ಮಾಲೆಯಿಂದಲೂ ಅಲಂಕರಿಸಿ, ಪಾಯಸ, ಪಿಷ್ಟ, ಜೇನು, ಸುಧಾ ಮತ್ತು ಪಕ್ವವಾಗಿರುವ ವಿವಿಧ ಫಲಗಳು ಇವೆಲ್ಲವನ್ನೂ ಸಮರ್ಪಿಸಿದನು.

೧೯. ನೃತ್ಯಗೀತವಾದ್ಯಗಳಿಂದಲೂ, ಶ್ರೀಕೃಷ್ಣನ ಕೀರ್ತನೆ ಮತ್ತು ಉತ್ಸವಾದಿಗಳಿಂದಲೂ, ಮಾಧ್ಯಂದಿನೋಕ್ತವಾದ ವಿಧಿಗನುಗುಣವಾಗಿ ಧ್ಯಾನಮಾಡಿ, ಮೂಲ ಮಂತ್ರೋಚ್ಚಾರಣಪೂರ್ವಕವಾಗಿ ಸಕಲದ್ರವ್ಯಗಳನ್ನೂ ಸಮರ್ಪಿಸಿದನು.

ದದೌ ದ್ರವ್ಯಾಣಿ ಮೂಲೇನ ಮಂತ್ರೇಣೈವ ಚ ನಾರದ ।
ಓಂ ಹ್ರೀಂ ಶ್ರೀಂ ಕ್ಲೀಂ ಸರ್ವಪೂಜ್ಯೇ ದೇವಿ ಮಂಗಲಚಂಡಿಕೇ ।
ಐಂ ಕ್ರೂಂ ಫಟ್ ಸ್ವಾಹೇತ್ಯೇವಂ ಚಾಪ್ಯೇಕವಿಂಶಾಕ್ಷರೋ ಮನುಃ ॥ ೨೦ ॥

ಪೂಜ್ಯಃ ಕಲ್ಪತರುಶ್ಚೈವ ಭಕ್ತಾನಾಂ ಸರ್ವಕಾಮದಃ ।
ದಶಲಕ್ಷಜಪೇನೈವ ಮಂತ್ರಸಿದ್ಧಿರ್ಭವೇನ್ನೃಣಾಂ ॥ ೨೧ ॥

ಮಂತ್ರಸಿದ್ಧಿರ್ಭವೇದ್ಯಸ್ಯ ಸ ವಿಷ್ಣುಃ ಸರ್ವಕಾಮದಃ ।
ಧ್ಯಾನಂ ಚ ಶ್ರೂಯತಾಂ ಬ್ರಹ್ಮನ್ವೇದೋಕ್ತಂ ಸರ್ವಸಮ್ಮತಂ ॥ ೨೨ ॥

ದೇವೀಂ ಷೋಡಶವರ್ಷೀಯಾಂ ರಮ್ಯಾಂ ಸುಸ್ಥಿರಯೌವನಾಂ ।
ಸರ್ವರೂಪಗುಣಾಢ್ಯಾಂ ಚ ಕೋಮಲಾಂಗೀಂ ಮನೋಹರಾಂ ॥ ೨೩ ॥

ಶ್ವೇತಚಂಪಕವರ್ಣಾಭಾಂ ಚಂದ್ರಕೋಟಿಸಮಪ್ರಭಾಂ ।
ವಹ್ನಿಶುದ್ಧಾಂಶುಕಾಧಾನಾಂ ರತ್ನಭೂಷಣಭೂಷಿತಾಂ ॥ ೨೪ ॥

೨೦–೨೧. ಈಶ್ವರಃ— 'ಓಂ ಹ್ರೀಂ ಶ್ರೀಂ ಕ್ಲೀಂ ಸರ್ವಪೂಜ್ಯೇ ದೇವಿ ಮಂಗಳಚಂಡಿಕೇ ಐಂ ಕ್ರೂಂ ಫಟ್ ಸ್ವಾಹಾ' ಎಂಬ ಇಪ್ಪತ್ತೊಂದಕ್ಷರದ ದಿವ್ಯಮಂತ್ರವು ಭಕ್ತರ ಸಕಲಾಭೀಷ್ಟವನ್ನೂ ಕೊಡವುದರಿಂದ ಕಲ್ಪವೃಕ್ಷದಂತೆ ಪೂಜ್ಯವಾಗಿದೆ. ಈ ಮಂತ್ರವನ್ನು ಹತ್ತು ಲಕ್ಷಬಾರಿ ಜಪಿಸುವುದರಿಂದ ಸಿದ್ಧಿಯಾಗುವುದು.

೨೨. ಮಂತ್ರಸಿದ್ಧಿಯನ್ನು ಪಡೆದವನು ವಿಷ್ಣುವಿನಂತೆ ಸಕಲರ ಇಷ್ಟಾರ್ಥಗಳನ್ನೂ ಕೊಡಬಲ್ಲವನಾಗುವನು. ಈಗ ವೇದೋಕ್ತವೂ, ಸಕಲಸಂಮತವೂ ಆದ ಆ ದೇವಿಯ ಧ್ಯಾನವನ್ನು ಹೇಳುವೆನು. ಕೇಳು.

೨೩–೨೪. ಸಕಲಗುಣ ಮತ್ತು ರೂಪಗಳಿಂದ ಪರಿಪೂರ್ಣಳೂ, ಕೋಮಲಾಂಗಿಯೂ, ಬಿಳಿಸಂಪಿಗೆಯಂತೆಯೂ, ಕೋಟಿಚಂದ್ರರಂತೆಯೂ ಕಾಂತಿಯುತಳೂ, ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ, ರತ್ನಾಲಂಕಾರಭೂಷಿತಳೂ ಆದ ದೇವಿಯನ್ನು ಭಜಿಸುವೆನು.

ಬಿಭ್ರತೀಂ ಕಬರೀಭಾರಂ ಮಾಲತೀಮಾಲ್ಯಭೂಷಿತಂ ।
ಬಿಂಬೋಷ್ಠೀಂ ಸುದತೀಂ ಶುದ್ಧಾಂ ಶರತ್ಪದ್ಮನಿಭಾನನಾಂ ॥ ೨೫ ॥

ಈಷದ್ಧಾಸ್ಯಪ್ರಸನ್ನಾಸ್ಯಾಂ ಸುನೀಲೋತ್ಪಲಲೋಚನಾಂ ।
ಜಗದ್ಧಾತ್ರೀಂ ಚ ದಾತ್ರೀಂ ಚ ಸರ್ವೇಭ್ಯಃ ಸರ್ವಸಂಪದಾಂ ॥ ೨೬ ॥

ಸಂಸಾರಸಾಗರೇ ಘೋರೇ ಪೋತರೂಪಾಂ ವರಾಂ ಭಜೇ ॥ ೨೭ ॥

ದೇವ್ಯಾಶ್ಚ ಧ್ಯಾನಮಿತ್ಯೇವಂ ಸ್ತವನಂ ಶ್ರೂಯತಾಂ ಮುನೇ ।
ಪ್ರಯತಃ ಸಂಕಟಗ್ರಸ್ತೋ ಯೇನ ತುಷ್ಟಾವ ಶಂಕರಃ ॥ ೨೮ ॥

॥ ಶಂಕರ ಉವಾಚ ॥

ರಕ್ಷ ರಕ್ಷ ಜಗನ್ಮಾತರ್ದೇವಿ ಮಂಗಲಚಂಡಿಕೇ ।
ಸಂಹರ್ತ್ರೀ ವಿಪದಾಂ ರಾಶೇರ್ಹರ್ಷಮಂಗಲಕಾರಿಕೇ ॥ ೨೯ ॥

೨೫–೨೭. ಕೇಶಪಾಶದಲ್ಲಿ ಮಲ್ಲಿಗೆಯಮಾಲೆಯನ್ನು ಧರಿಸಿ, ತೊಂಡೆಹಣ್ಣಿನಂತಿರುವ ಕೆಳತುಟಿಯಿಂದಲೂ, ಮುತ್ತಿನ ಸಾಲಿನಂತಿರುವ ಹಲ್ಲುಗಳಿಂದಲೂ, ಶರದೃತುವಿನ ತಾವರೆಯಂತೆ ಸುಂದರವಾದ ಮುಖದಿಂದಲೂ ಶೋಭಿತಳಾಗಿ, ಮಂದಹಾಸದಿಂದ ಪ್ರಸನ್ನವಾದ ಮುಖಕ್ಕೆ ಕಳೆಗೂಡಿಸುವಂತಿರುವ ಕನ್ನೈದಿಲೆಯ ಕಣ್ಣುಗಳಿಂದ ಮನೋಹರಳಾಗಿ, ಸಕಲರಿಗೂ ಸಕಲಸಂಪತ್ತನ್ನೂ ಇತ್ತು ಘೋರವಾದ ಸಂಸಾರವೆಂಬ ಸಾಗರದಿಂದ ಪಾರುಗಾಣಿಸುವ ನಾವೆರೂಪಳೂ, ಜಗನ್ಮಾತೆಯೂ ಆದ ದೇವಿಯನ್ನು ಭಜಿಸುವೆನು.

೨೮. ಈ ರೀತಿಯಾಗಿ ದೇವಿಯನ್ನು ಧ್ಯಾನಿಸಬೇಕು. ಈಗ ದೇವಿಯ ಸ್ತೋತ್ರಕ್ರಮವನ್ನು ಹೇಳುವೆನು. ಸಂಕಟಕ್ಕೆ ಸಿಲುಕಿದ ಶಂಕರನು ಈ ಸ್ತೋತ್ರವನ್ನು ಪಠಿಸಿಯೇ ಮುಕ್ತನಾದುದು.

೨೯. ಶಂಕರ :—ವಿಪತ್ಸಮೂಹವನ್ನು ನಾಶಗೊಳಿಸುವವಳೂ, ಹರ್ಷಮಂಗಳಗಳನ್ನು ವೃದ್ಧಿಗೊಳಿಸುವವಳೂ, ಜಗನ್ಮಾತೆಯೂ ಆದ ಎಲೌ ಮಂಗಳಚಂಡಿಕಾ ದೇವಿಯೇ, ನನ್ನನ್ನು ರಕ್ಷಿಸು.

ಹರ್ಷಮಂಗಲದಕ್ಷೇ ಚ ಹರ್ಷಮಂಗಲಚಂಡಿಕೇ ।
ಶುಭೇ ಮಂಗಲದಕ್ಷೇ ಚ ಶುಭಮಂಗಲಚಂಡಿಕೇ ॥ ೩೦ ॥

ಮಂಗಲೇ ಮಂಗಲಾರ್ಹೇ ಚ ಸರ್ವಮಂಗಲಮಂಗಲೇ ।
ಸತಾಂ ಮಂಗಲದೇ ದೇವಿ ಸರ್ವೇಷಾಂ ಮಂಗಲಾಲಯೇ ॥ ೩೧ ॥

ಪೂಜ್ಯಾ ಮಂಗಲವಾರೇ ಚ ಮಂಗಲಾಭೀಷ್ಟದೈವತೇ ।
ಪೂಜ್ಯೇ ಮಂಗಲಭೂಪಸ್ಯ ಮನುವಂಶಸ್ಯ ಸಂತತಂ ॥ ೩೨ ॥

ಮಂಗಲಾಧಿಷ್ಠಾತೃದೇವಿ ಮಂಗಲಾನಾಂ ಚ ಮಂಗಲೇ ।
ಸಂಸಾರಮಂಗಲಾಧಾರೇ ಮೋಕ್ಷಮಂಗಲದಾಯಿನಿ ॥ ೩೩ ॥

ಸಾರೇ ಚ ಮಂಗಲಾಧಾರೇ ಪಾರೇ ತ್ವಂ ಸರ್ವಕರ್ಮಣಾಂ ।
ಪ್ರತಿಮಂಗಲವಾರೇ ಚ ಪೂಜ್ಯೇ ತ್ವಂ ಮಂಗಲಪ್ರದೇ ॥ ೩೪ ॥

---

೩೦. ಹರ್ಷ ಮತ್ತು ಮಂಗಳಗಳನ್ನು ಕೊಡುವುದರಲ್ಲಿ ಸಮರ್ಥಳಾದುದರಿಂದ ಹರ್ಷಮಂಗಳಸ್ವರೂಪಳಾದ ಎಲೌ ಚಂಡಿಕೆಯೇ, ನನ್ನನ್ನು ಕಾಪಾಡು.

೩೧. ಮಂಗಳಸ್ವರೂಪಳೂ, ಸಮಸ್ತ ಮಂಗಳವನ್ನುಂಟುಮಾಡುವವಳೂ, ಮಂಗಳಗಳಿಗೆಲ್ಲ ಖನಿ (ಗಣಿ) ಸ್ವರೂಪಳೂ ಆದ ಎಲೌ ಮಂಗಳಾಂಗಿಯೇ ನನ್ನನ್ನು ಉದ್ಧರಿಸು.

೩೧. ಪ್ರತಿ ಮಂಗಳವಾರಗಳಲ್ಲೂ ಪೂಜ್ಯಳೂ, ಮಂಗಳಗ್ರಹಕ್ಕೆ ಅಭೀಷ್ಟ ದೇವತೆಯೂ, ಮನುವಂಶೋತ್ಪನ್ನನಾದ ಮಂಗಳಮಹಾರಾಜನಿಂದ ಪೂಜಿತಳೂ ಆದ ದೇವಿಯೇ ನನ್ನನ್ನು ರಕ್ಷಿಸು.

೩೩. ಮಂಗಳಗಳಿಗೆ ಅಧಿದೇವತೆಯೂ, ಎಲ್ಲಕ್ಕೂ ಆದಿಮಂಗಳಸ್ವರೂಪಳೂ, ಸಂಸಾರದಲ್ಲಿ ನಡೆಯುವ ಮಂಗಳಕಾರ್ಯಗಳಿಗೆ ಆಧಾರಸ್ವರೂಪಳೂ, ಮೋಕ್ಷರೂಪವಾದ ಅನಂತಮಂಗಳವನ್ನು ದಯಪಾಲಿಸಬಲ್ಲವಳೂ ಆದ ದೇವಿಯೇ ನಿನಗೆ ವಂದನೆಗಳು.

೩೪. ಮಂಗಳಗಳ ಸಾರಸ್ವರೂಪಳಾದ ನೀನು ಸರ್ವಕರ್ಮಗಳಿಗೂ ಸಿಲುಕದೆ ಮೇಲಾದವಳು. ಪ್ರತಿ ಮಂಗಳವಾರದಲ್ಲಿಯೂ ನೀನು ಪೂಜೆಗೊಂಡು ಮಂಗಳಪ್ರದಳಾಗಿರುವೆ.

ಸ್ತೋತ್ರೇಣಾನೇನ ಶಂಭುಶ್ಚ ಸ್ತುತ್ವಾ ಮಂಗಲಚಂಡಿಕಾಂ ।
ಪ್ರತಿಮಂಗಲವಾರೇ ಚ ಪೂಜಾಂ ಕೃತ್ವಾ ಗತಃ ಶಿವಃ ॥ ೩೫ ॥

ದೇವ್ಯಾಶ್ಚ ಮಂಗಲಸ್ತೋತ್ರಂ ಯಃ ಶ್ರುಣೋತಿ ಸಮಾಹಿತಃ ।
ತನ್ಮಂಗಲಂ ಭವೇಚ್ಛಶ್ವನ್ನ ಭವೇತ್ತದಮಂಗಲಂ ॥ ೩೬ ॥

ಪ್ರಥಮೇ ಪೂಜಿತಾ ದೇವೀ ಶಂಭುನಾ ಸರ್ವಮಂಗಲಾ ।
ದ್ವಿತೀಯೇ ಪೂಜಿತಾ ದೇವೀ ಮಂಗಲೇನ ಗ್ರಹೇಣ ಚ ॥ ೩೭ ॥

ತೃತೀಯೇ ಪೂಜಿತಾ ಭದ್ರಾ ಮಂಗಲೇನ ನೃಪೇಣ ಚ ।
ಚತುರ್ಥೇ ಮಂಗಲೇ ವಾರೇ ಸುಂದರೀಭಿಶ್ಚ ಪೂಜಿತಾ ।
ಪಂಚಮೇ ಮಂಗಲಾಕಾಂಕ್ಷೈರ್ನರೈರ್ಮಂಗಲಚಂಡಿಕಾ ॥ ೩೮ ॥

ಪೂಜಿತಾ ಪ್ರತಿವಿಶ್ವೇಷು ವಿಶ್ವೇಶೈಃ ಪೂಜಿತಾ ಸದಾ ।
ತತಃ ಸರ್ವತ್ರ ಸಂಪೂಜ್ಯಾ ಸಾ ಬಭೂವ ಸುರೇಶ್ವರೀ ॥ ೩೯ ॥

---

೩೫. ಈ ರೀತಿಯಾಗಿ ಸ್ತೋತ್ರಮಾಡುತ್ತ ಶಿವನು ಮಂಗಳಚಂಡಿಕೆಯನ್ನು ತುಷ್ಟಿಬಡಿಸಿ ಪ್ರತಿಮಂಗಳವಾರದಲ್ಲೂ ಪೂಜೆಮಾಡಿದನು.

೩೬. ಮಂಗಳಚಂಡಿಕಾದೇವಿಯ ಈ ಮಂಗಳಕರವಾದ ಸ್ತೋತ್ರವನ್ನು ಸಾವಧಾನಮನಸ್ಕನಾಗಿ ಕೇಳುವವನು ಯಾವಾಗಲೂ ಮಂಗಳ ಪರಂಪರೆಯನ್ನು ಹೊಂದುವನು. ಅವನಿಗೆ ಎಂದೆಂದಿಗೂ ಅಮಂಗಳವಾಗದು.

೩೭. ಸರ್ವಮಂಗಳಸ್ವರೂಪಳಾದ ಈ ದೇವಿಯು ಮೊಟ್ಟಮೊದಲು ಶಂಭುವಿನಿಂದಲೂ, ಎರಡನೆಯದಾಗಿ ಮಂಗಳ ಗ್ರಹದಿಂದಲೂ ಪೂಜೆಗೊಂಡಳು.

೩೮. ಮೂರನೆಯ ಬಾರಿ ಮಂಗಳನೆಂಬ ರಾಜನಿಂದಲೂ, ನಾಲ್ಕನೆಯದಾಗಿ ಪ್ರತಿಮಂಗಳವಾರದಲ್ಲೂ ಸುಮಂಗಲಿಯರಿಂದಲೂ, ಐದನೆಯಸಾರಿ ಮಂಗಳಾಕಾಂಕ್ಷಿಗಳಾದ ಪ್ರತಿ ಮನುಜರಿಂದಲೂ ಈ ಮಂಗಳಚಂಡಿಕೆಯು ಪೂಜೆಗೊಂಡಳು.

೩೯–೪೧. ಪ್ರತಿ ವಿಶ್ವದಲ್ಲೂ ಮೊದಲು ರಾಜಾಧಿರಾಜರಿಂದ ಸರ್ವತ್ರ ಪೂಜಿತಳಾಗಿ ಅನಂತರ ಆ ದೇವಾಧಿದೇವತೆಯು, ದೇವತೆಗಳು, ಮುನಿಗಳು ಮತ್ತು ಮನು ಮಾನವರಿಂದಲೂ ಎಲ್ಲ ಕಾಲದಲ್ಲಿಯೂ, ಪೂಜಿತಳಾದಳು. ಮಂಗಳಚಂಡಿಕೆಯ ಈ

ದೇವಾದಿಭಿಶ್ಚ ಮುನಿಭಿರ್ಮನುಭಿರ್ಮಾನವೈರ್ಮನೇ ।
ದೇವ್ಯಾಶ್ಚ ಮಂಗಲಸ್ತೋತ್ರಂ ಯಃ ಶೃಣೋತಿ ಸಮಾಹಿತಃ　　　॥ ೪೦ ॥

ತನ್ಮಂಗಲಂ ಭವೇಚ್ಛಶ್ವನ್ನ ಭವೇತ್ತದಮಂಗಲಂ ।
ವರ್ಧಂತೇ ತತ್ಪುತ್ರಪೌತ್ರಾ ಮಂಗಲಂ ಚ ದಿನೇ ದಿನೇ　　　॥ ೪೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಮಂಗಲೋಪಾಖ್ಯಾನೇ
ತತ್ಸ್ತೋತ್ರಾದಿಕಥನಂ ನಾಮ
ಚತುಶ್ಚತ್ವಾರಿಂಶತ್ತಮೋಽಧ್ಯಾಯಃ

ದಿವ್ಯಸ್ತೋತ್ರವನ್ನು ಸಾವಧಾನದಿಂದ ಕೇಳುವವರಿಗೆ ಯಾವಾಗಲೂ ಮಂಗಳಪರಂಪರೆಗಳು ಲಭಿಸುತ್ತಿರುವುವೇ ಹೊರತು ಅಮಂಗಳವೆಂದಿಗೂ ಲಭಿಸದು. ಅವರಿಗೆ ಪುತ್ರಪೌತ್ರಾದಿ ಸಕಲ ಮಂಗಳಗಳೂ ಪ್ರತಿದಿನವೂ ವೃದ್ಧಿಹೊಂದುತ್ತಿರುವುವು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿ ಖಂಡದಲ್ಲಿ ಮಂಗಳ
ಚಂಡಿಕೆಯ ಸ್ತೋತ್ರಕಥನವೆಂಬ ನಲವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

ನಲವತ್ತನಾಲ್ಕನೆಯ ಅಧ್ಯಾಯದ ಸಾರಾಂಶವು.

ಪೂರ್ವದಲ್ಲಿ ತ್ರಿಪುರಾಸುರರನ್ನು ಸಂಹರಿಸಲುದ್ಯುಕ್ತನಾದ ಮಹಾದೇವನು ದುರ್ಗಿಯ ಅಪರಾವತಾರಿಣಿಯೂ, ಶತ್ರುನಿಗ್ರಹಕಾರಿಣಿಯೂ ಆದ ಮಂಗಳಚಂಡಿಕಾ ದೇವಿಯನ್ನು ಆರಾಧಿಸಿ, ಆಕೆಯ ಅನುಗ್ರಹದಿಂದ ಶತ್ರುವಾದ ತ್ರಿಪುರಾಸುರರನ್ನು ಸಂಹರಿಸಿದನು. ಆದುದರಿಂದ ಶತ್ರುನಿಗ್ರಹಾಪೇಕ್ಷಿಗಳೂ ಮಂಗಳಾಕಾಂಕ್ಷಿಗಳೂ ಮೂಲಮಂತ್ರೋಚ್ಚಾರಣಪೂರ್ವಕವಾಗಿ ಧ್ಯಾನಾವಾಹನಾದಿ ಕ್ರಮಗಳಿಂದ ಮಂಗಳ ಚಂಡಿಕೆಯನ್ನು ಪ್ರತಿ ಮಂಗಳವಾರವೂ ಪೂಜಿಸಿ ಸ್ತುತಿಸಿದರೆ ಶತ್ರುರಹಿತರಾಗಿ ಮಂಗಳಪರಂಪರೆಗಳನ್ನು ಪಡೆಯುವರು.

|| ಶ್ರೀ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಪಂಚಚತ್ವಾರಿಂಶತ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಉಕ್ತಂ ದ್ವಯೋರುಪಾಖ್ಯಾನಂ ಬ್ರಹ್ಮಪುತ್ರ ಯಥಾಗಮಂ |
ಶ್ರೂಯತಾಂ ಮನಸಾಖ್ಯಾನಂ ಯಚ್ಛ್ರುತಂ ಧರ್ಮವಕ್ತ್ರತಃ || ೧ ||

ಕನ್ಯಾ ಭಗವತೀ ಸಾ ಚ ಕಶ್ಯಪಸ್ಯ ಚ ಮಾನಸೀ |
ತೇನೇಯಂ ಮನಸಾ ದೇವೀ ಮನಸಾ ಯಾ ಚ ದೀವ್ಯತಿ || ೨ ||

ಮನಸಾ ಧ್ಯಾಯತೇ ಯಾ ವಾ ಪರಮಾತ್ಮಾನಮೀಶ್ವರಂ |
ತೇನ ಸಾ ಮನಸಾ ದೇವೀ ಯೋಗೇನೈತೇನ ದೀವ್ಯತಿ || ೩ ||

ನಲವತ್ತೈದನೆಯ ಅಧ್ಯಾಯವು

೧. ನಾರಾಯಣ :—ಎಲೈ ಬ್ರಹ್ಮಪುತ್ರನಾದ ನಾರದನೇ, ಇದುವರೆಗೆ ಷಷ್ಠೀದೇವಿಯ ಮತ್ತು ಮಂಗಳಚಂಡಿಕೆಯ ಉಪಾಖ್ಯಾನವನ್ನು ವೇದೋಕ್ತ ಕ್ರಮದಂತೆ ತಿಳಿಸಿದೆನು. ಈಗ ಧರ್ಮಪುರುಷನ ಬಾಯಿನಿಂದ ಕೇಳಿದ ಮನಸಾದೇವಿಯ ಉಪಾಖ್ಯಾನವನ್ನು ಹೇಳುವೆನು. ಕೇಳು.

೨. ಆ ಪೂಜ್ಯಳಾದ ದೇವಿಯು, ಕಶ್ಯಪಮಹರ್ಷಿಯ ಮಾನಸಪುತ್ರಿಯೂ, ಮನಸ್ಸಿನಲ್ಲಿಯೇ ಸರ್ವದಾ ಪರಮಾತ್ಮನನ್ನು ಧ್ಯಾನಿಸುವವಳೂ ಆದುದರಿಂದ ಮನಸಾದೇವಿಯೆಂದು ವಿಖ್ಯಾತಳಾದಳು.

೩. ಯಾರು ಸರ್ವಶಕ್ತನಾದ ಪರಮಾತ್ಮನನ್ನು ಮನಸ್ಸಿನಲ್ಲಿಯೇ ಧ್ಯಾನಿಸುವ ಯೋಗಶಕ್ತಿಯನ್ನು ಪಡೆದಿರುವಳೋ ಅವಳನ್ನು ಮನಸಾದೇವಿಯೆನ್ನುವರು.

ಆತ್ಮಾರಾಮಾ ಚ ಸಾ ದೇವೀ ವೈಷ್ಣವೀ ಸಿದ್ಧಯೋಗಿನೀ ।
ತ್ರಿಯುಗಂ ಚ ತಪಸ್ತಪ್ತ್ವಾ ಕೃಷ್ಣಸ್ಯ ಪರಮಾತ್ಮನಃ ॥ ೪ ॥

ಜರತ್ಕಾರುಶರೀರಂ ಚ ದೃಷ್ಟ್ವಾ ಯಾಂ ಕ್ಷಣಮೀಶ್ವರಃ ।
ಗೋಪೀಪತಿರ್ನಾಮ ಚಕ್ರೇ ಜರತ್ಕಾರುರಿತಿ ಪ್ರಭುಃ ॥ ೫ ॥

ವಾಂಛಿತಂ ಚ ದದೌ ತಸ್ಯೈ ಕೃಪಯಾ ಚ ಕೃಪಾನಿಧಿಃ ।
ಪೂಜಾಂ ಚ ಕಾರಯಾಮಾಸ ಚಕಾರ ಚ ಪುನಃ ಪುನಃ ॥ ೬ ॥

ಸ್ವರ್ಗೇ ಚ ನಾಗಲೋಕೇ ಚ ಪೃಥಿವ್ಯಾಂ ಬ್ರಹ್ಮಲೋಕತಃ ।
ಭೃಶಂ ಜಗತ್ಸು ಗೌರೀ ಸಾ ಸುಂದರೀ ಚ ಮನೋಹರಾ ॥ ೭ ॥

ಜಗದ್ಗೌರೀತಿ ವಿಖ್ಯಾತಾ ತೇನ ಸಾ ಪೂಜಿತಾ ಸತೀ ।
ಶಿವಶಿಷ್ಯಾ ಚ ಸಾ ದೇವೀ ತೇನ ಶೈವೀತಿ ಕೀರ್ತಿತಾ ॥ ೮ ॥

---

೪. ಯಾವಾಗಲೂ ಆತ್ಮಜ್ಞಾನದಲ್ಲೇ ರತಳಾದ ಆ ದೇವಿಯು ಪರಮ ವೈಷ್ಣವಿ ಮತ್ತು ಸಿದ್ಧಯೋಗಿನಿಯೆಂದು ಖ್ಯಾತಳಾಗಿ, ಶ್ರೀಕೃಷ್ಣಪರಮಾತ್ಮನನ್ನು ಕುರಿತು ಮೂರು ಯುಗಗಳ ಕಾಲ ತಪಸ್ಸುಮಾಡಿ ಕೃಶಳಾಗಿದ್ದಳು.

೫. ಗೋಪೀಪತಿಯಾದ ಶ್ರೀಕೃಷ್ಣಪರಮಾತ್ಮನು ಕೃಶವಾದ ಆಕೆಯ ಶರೀರವನ್ನು ನೋಡಿ ಜರತ್ಕಾರು (ಮುದಿಯಾಗುತ್ತಿರುವ ಅವಯವಗಳುಳ್ಳವಳು) ಎಂಬ ಅನ್ವರ್ಥನಾಮವನ್ನಿಟ್ಟಿದ್ದನು.

೬. ದಯಾಮಯನಾದ ಪರಮಾತ್ಮನು ಆಕೆಗೆ ಇಷ್ಟಾರ್ಥವನ್ನು ಕೊಟ್ಟು ಎಲ್ಲರಿಂದಲೂ ಪೂಜೆಮಾಡಿಸಿದುದಲ್ಲದೆ ಸ್ವತಃ ತಾನೂ ಪೂಜೆಮಾಡಿದನು.

೭–೮. ಬ್ರಹ್ಮಲೋಕ ಮೊದಲುಗೊಂಡು ಸ್ವರ್ಗ, ಮರ್ತ್ಯ, ಪಾತಾಳಾದಿ ಸಮಸ್ತ ಲೋಕಗಳಲ್ಲಿಯೂ ಆ ದೇವಿಯು ಅತ್ಯಂತ ಬಿಳುಪಾದವಳೂ, ಮನೋಹರಳೂ, ಸುಂದರಿಯೂ ಆದುದರಿಂದ ಜಗದ್ಗೌರೀ ಎಂದು ಹೆಸರು ಪಡೆದು ಸರ್ವತ್ರ ಪೂಜ್ಯಳಾಗಿದ್ದಾಳೆ. ಆ ದೇವಿಯು ಶಿವನ ಶಿಷ್ಯೆಯಾದುದರಿಂದ ಶೈವೀ ಎಂದೂ ಖ್ಯಾತಿಪಡೆದಿದ್ದಾಳೆ.

ವಿಷ್ಣುಭಕ್ತಾತೀವ ರಮ್ಯಾ ವೈಷ್ಣವೀ ತೇನ ನಾರದ ।
ನಾಗಾನಾಂ ಪ್ರಾಣರಕ್ಷಿತ್ರೀ ಜನಮೇಜಯಯಜ್ಞಕೇ ॥ ೯ ॥

ನಾಗೇಶ್ವರೀತಿ ವಿಖ್ಯಾತಾ ಸಾ ನಾಗಭಗಿನೀ ತಥಾ ।
ವಿಷಂ ಸಂಹರ್ತುಮೀಶಾ ಸಾ ತೇನ ಸಾ ವಿಷಹಾರಿಣೀ ॥ ೧೦ ॥

ಸಿದ್ಧಂ ಯೋಗಂ ಹರಾತ್ಪ್ರಾಪ ತೇನಾಸೌ ಸಿದ್ಧಯೋಗಿನೀ ।
ಮಹಾಜ್ಞಾನಂ ಚ ಗೋಪ್ಯಂ ಚ ಮೃತಸಂಜೀವಿನೀಂ ಪರಾಂ ॥ ೧೧ ॥

ಮಹಾಜ್ಞಾನಯುತಾಂ ತಾಂ ಚ ಪ್ರವದಂತಿ ಮನೀಷಿಣಃ ।
ಆಸ್ತೀಕಸ್ಯ ಮುನೀಂದ್ರಸ್ಯ ಮಾತಾ ಸಾ ವೈ ತಪಸ್ವಿನಃ ॥ ೧೨ ॥

ಆಸ್ತೀಕಮಾತಾ ವಿಖ್ಯಾತಾ ಜರತ್ಕಾರುರಿತಿ ಸ್ಮೃತಾ ।
ಪ್ರಿಯಾ ಮುನೇರ್ಜರತ್ಕಾರೋರ್ಮುನೀಂದ್ರಸ್ಯ ಮಹಾತ್ಮನಃ ॥ ೧೩ ॥

ಯೋಗಿನೋ ವಿಶ್ವಪೂಜ್ಯಸ್ಯ ಜರತ್ಕಾರೋಃ ಪ್ರಿಯಾ ತತಃ ॥ ೧೪ ॥

೯–೧೦. ಅತ್ಯಂತಮನೋಹರಳಾದ ಆಕೆಯು ವಿಷ್ಣುಭಕ್ತೆಯಾದುದರಿಂದ ವೈಷ್ಣವಿಯೆಂದೂ, ಜನಮೇಜಯಮಹಾರಾಜನು ಸರ್ಪಯಾಗ ಮಾಡಿದಾಗ ಸರ್ಪಗಳ ಪ್ರಾಣರಕ್ಷಣೆ ಮಾಡಿದುದರಿಂದ ನಾಗೇಶ್ವರಿ ಎಂದೂ, ವಾಸುಕಿಯ ಸಹೋದರಿಯಾದುದರಿಂದ ನಾಗಭಗಿನಿಯೆಂದೂ, ವಿಷವನ್ನು ನಾಶಗೊಳಿಸಲು ಶಕ್ತಳಾದುದರಿಂದ ವಿಷಹಾರಿಣಿಯೆಂದೂ ವಿಖ್ಯಾತಳಾಗಿರುವಳು.

೧೧. ಈಶ್ವರನಿಂದ ಯೋಗಸಿದ್ಧಿಯನ್ನು ಪಡೆದು ಸಿದ್ಧಯೋಗಿನಿಯೆಂದೂ, ಮೃತಸಂಜೀವಿನೀ ಎಂಬ ಗೋಪ್ಯವಾದ ಮಹಾ ಜ್ಞಾನವನ್ನು ಪಡೆದಿರುವುದರಿಂದ ಮಹಾಜ್ಞಾನಯುತಳೆಂದೂ ಪಂಡಿತರು ಆಕೆಯನ್ನು ಕರೆಯುವರು.

೧೨–೧೪. ತಪಸ್ವಿ ಶ್ರೇಷ್ಠನಾದ ಆಸ್ತೀಕನೆಂಬ ಮುನಿಯ ಮಾತೆಯಾದುದರಿಂದ ಆಸ್ತೀಕಮಾತೆಯೆಂದೂ, ವಿಶ್ವಪೂಜ್ಯನೂ, ಮಹಾಯೋಗಿಯೂ ಆದ ಜರತ್ಕಾರುವೆಂಬ ಮಹರ್ಷಿಯ ಪ್ರಿಯಳಾದುದರಿಂದ ಜರತ್ಕಾರುವೆಂದೂ ಆಕೆಯು ಪ್ರಸಿದ್ಧಳಾಗಿದ್ದಾಳೆ.

॥ ಓಂ ನಮೋ ಮನಸಾಯೈ ॥

ಜರತ್ಕಾರುರ್ಜಗದ್ಗೌರೀ ಮನಸಾ ಸಿದ್ಧಯೋಗಿನೀ ।
ವೈಷ್ಣವೀ ನಾಗಭಗಿನೀ ಶೈವೀ ನಾಗೇಶ್ವರೀ ತಥಾ ॥ ೧೫ ॥

ಜರತ್ಕಾರುಪ್ರಿಯಾಸ್ತೀಕಮಾತಾ ವಿಷಹರೀತಿ ಚ ।
ಮಹಾಜ್ಞಾನಯುತಾ ಚೈವ ಸಾ ದೇವೀ ವಿಶ್ವಪೂಜಿತಾ ॥ ೧೬ ॥

ದ್ವಾದಶೈತಾನಿ ನಾಮಾನಿ ಪೂಜಾಕಾಲೇ ಚ ಯಃ ಪಠೇತ್ ।
ತಸ್ಯ ನಾಗಭಯಂ ನಾಸ್ತಿ ತಸ್ಯ ವಂಶೋದ್ಭವಸ್ಯ ಚ ॥ ೧೭ ॥

ನಾಗಭೀತೇ ಚ ಶಯನೇ ನಾಗಗ್ರಸ್ತೇ ಚ ಮಂದಿರೇ ।
ನಾಗಕ್ಷತೇ ನಾಗದುರ್ಗೇ ನಾಗವೇಷ್ಟಿತವಿಗ್ರಹೇ ॥ ೧೮ ॥

ಇದಂ ಸ್ತೋತ್ರಂ ಪಠಿತ್ವಾ ತು ಮುಚ್ಯತೇ ನಾತ್ರ ಸಂಶಯಃ ।
ನಿತ್ಯಂ ಪಠೇದ್ಯಸ್ತಂ ದೃಷ್ಟ್ವಾ ನಾಗವರ್ಗಃ ಪಲಾಯತೇ ॥ ೧೯ ॥

೧೫–೧೭. (ಓಂ ನಮೋ ಮನಸಾಯೈ) ಮನಸಾದೇವಿಗೆ ವಂದನೆಗಳು. 'ಜರತ್ಕಾರು, ಜಗದ್ಗೌರೀ, ಮನಸಾ, ಸಿದ್ಧಯೋಗಿನೀ, ವೈಷ್ಣವೀ, ನಾಗಭಗಿನೀ, ಶೈವೀ, ನಾಗೇಶ್ವರೀ, ಜರತ್ಕಾರುಪ್ರಿಯಾ, ಆಸ್ತೀಕಮಾತಾ, ವಿಷಹಾರೀ, ಮಹಾಜ್ಞಾನಯುತಾ,' ಎಂದು ವಿಶ್ವಪೂಜಿತಳಾದ ದೇವಿಯ ಈ ಹನ್ನೆರಡು ದಿವ್ಯನಾಮಗಳನ್ನು ಪೂಜಾಕಾಲದಲ್ಲಿ ಪಠಿಸುವವರಿಗೂ, ಅವರ ವಂಶೋತ್ಪನ್ನರಿಗೂ ಸರ್ಪಭಯವು ಇರುವುದಿಲ್ಲ.

೧೮–೧೯. ಹಾಸಿಗೆಯಲ್ಲಿ ಹಾವು ಬಂದಿರುವಾಗಲೂ, ಮನೆಯಲ್ಲಿ ಹಾವು ಸೇರಿಕೊಂಡಿರುವಾಗಲೂ, ಹಾವು ಕಡಿದು ಗಾಯವಾಗಿರುವಾಗಲೂ, ಹಾವಿನ ಹುತ್ತವೇ ಮನೆಯೊಳಗಿರುವಾಗಲೂ, ಶರೀರಕ್ಕೆ ಹಾವು ಸುತ್ತಿಕೊಂಡಿರುವಾಗಲೂ, ಈ ದ್ವಾದಶನಾಮಸ್ತೋತ್ರವನ್ನು ಪಠಿಸಿ ಮುಕ್ತಿಹೊಂದಬಹುದು. ನಿತ್ಯವೂ ಈ ಸ್ತೋತ್ರವನ್ನು ಪಠಿಸುವ ಮನುಜನನ್ನು ನೋಡಿ ಸರ್ಪಗಳ ಸಮೂಹವು ದೂರ ಓಡುವುದು.

ದಶಲಕ್ಷಜಪೇನೈವ ಸ್ತೋತ್ರಸಿದ್ಧಿರ್ಭವೇನ್ನೃಣಾಂ ।
ಸ್ತೋತ್ರಂ ಸಿದ್ಧಂ ಭವೇದ್ಯಸ್ಯ ಸ ವಿಷಂ ಭೋಕ್ತುಮೀಶ್ವರಃ ॥ ೨೦ ॥

ನಾಗೌಘಂ ಭೂಷಣಂ ಕೃತ್ವಾ ಸ ಭವೇನ್ನಾಗವಾಹನಃ ।
ನಾಗಾಸನೋ ನಾಗತಲ್ಪೋ ಮಹಾಸಿದ್ಧೋ ಭವೇನ್ನರಃ ॥ ೨೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಮನಸೋಪಾಖ್ಯಾನೇ
ಮನಸಾಸ್ತೋತ್ರಾದಿಕಥನಂ ನಾಮ
ಪಂಚಚತ್ವಾರಿಂಶತ್ತಮೋಽಧ್ಯಾಯಃ

---

೨೦. ಹತ್ತು ಲಕ್ಷಸಾರಿ ಜಪಿಸುವುದರಿಂದ ಮನುಜರಿಗೆ ಈ ಸ್ತೋತ್ರವು ಸಿದ್ಧಿಸುವುದು. ಸ್ತೋತ್ರಸಿದ್ಧಿಯನ್ನು ಪಡೆದಿರುವ ಮನುಷ್ಯನು ವಿಷವನ್ನು ತಿಂದು ಜೀರ್ಣಿಸಿಕೊಳ್ಳಲು ಶಕ್ತನಾಗುವನು.

೨೧. ಅಲ್ಲದೆ, ಸರ್ಪಗಳನ್ನೇ ಭೂಷಣವನ್ನಾಗಿ ಮಾಡಿಕೊಂಡು, ಸರ್ಪವಾಹನನಾಗಿ, ಸರ್ಪಾಸನದಲ್ಲೂ, ಸರ್ಪಶಯನದಲ್ಲೂ, ಮಂಡಿಸುವ ಮಹಾ ಸಿದ್ಧೇಶ್ವರನಾಗುವನು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿ ಖಂಡದಲ್ಲಿ ಮನಸಾ
ದೇವಿಯ ಉಪಾಖ್ಯಾನದಲ್ಲಿ ಮನಸಾಸ್ತೋತ್ರಾದಿ ಕಥನರೂಪವಾದ
ನಲವತ್ತೈದನೆಯ ಅಧ್ಯಾಯವು ಮುಗಿದುದು.

ನಲವತ್ತೈದನೆಯ ಅಧ್ಯಾಯದ ಸಾರಾಂಶವು.

ಕಶ್ಯಪ ಪ್ರಜಾಪತಿಯ ಮಾನಸ ಪುತ್ರಿಯಾದ ಮನಸಾದೇವಿಯು ಮೂರು ಯುಗಗಳಕಾಲ ಶ್ರೀಕೃಷ್ಣಪರಮಾತ್ಮನನ್ನು ಕುರಿತು ತಪಸ್ಸುಮಾಡಿ, ತನ್ನ ಇಷ್ಟಾರ್ಥವನ್ನು ಪಡೆದು ವಿಶ್ವಪೂಜ್ಯಳಾದಳು. ಆಕೆಯು ಜರತ್ಕಾರುವೆಂಬ ಮಹರ್ಷಿಗೆ ಪ್ರಿಯಳಾಗಿ ಆಸ್ತೀಕನೆಂಬ ಸತ್ಪುತ್ರನನ್ನು ಪಡೆದಳು. ಸರ್ಪಗಳ ಅಭಿಮಾನಿದೇವತೆಯಾದ ಈಕೆಯ ದ್ವಾದಶ ದಿವ್ಯನಾಮಗಳನ್ನು ಪಠಿಸುವವರು ಸರ್ಪಗಳ ಭಯದಿಂದ ಮುಕ್ತರಾಗುವುದರಲ್ಲಿ ಸಂಶಯವಿಲ್ಲ.

|| ಓಂ ||

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಪ್ರಕೃತಿಖಂಡೇ

|| ಷಟ್‌ಚತ್ವಾರಿಂಶತ್ತಮೋಽಧ್ಯಾಯಃ ||

|| ನಾರಾಯಣ ಉವಾಚ ||

ಪೂಜಾವಿಧಾನಂ ಸ್ತೋತ್ರಂ ಚ ಶ್ರೂಯತಾಂ ಮುನಿಪುಂಗವ |
ಧ್ಯಾನಂ ಚ ಸಾಮವೇದೋಕ್ತಂ ದೇವೀಪೂಜಾವಿಧಾನಕಂ || ೧ ||

ಶ್ವೇತಚಂಪಕವರ್ಣಾಭಾಂ ರತ್ನಭೂಷಣಭೂಷಿತಾಂ |
ವಹ್ನಿಶುದ್ಧಾಂಶುಕಾಧಾನಾಂ ನಾಗಯಜ್ಞೋಪವೀತಿನೀಂ || ೨ ||

ಮಹಾಜ್ಞಾನಯುತಾಂ ಚೈವ ಪ್ರವರಾಂ ಜ್ಞಾನಿನಾಂ ಸತಾಂ |
ಸಿದ್ಧಾಧಿಷ್ಠಾತೃದೇವೀಂ ಚ ಸಿದ್ಧಾಂ ಸಿದ್ಧಿಪ್ರದಾಂ ಭಜೇ || ೩ ||

ನಲವತ್ತಾರನೆಯ ಅಧ್ಯಾಯವು

೧. ನಾರಾಯಣ:—ಎಲೈ ಮುನಿಶ್ರೇಷ್ಠನೇ, ಮನಸಾದೇವಿಯ ಸ್ತೋತ್ರ ಪೂಜಾದಿಗಳ ವಿಧಾನವನ್ನೂ, ಸಾಮವೇದೋಕ್ತವಾದ ಧ್ಯಾನಕ್ರಮವನ್ನೂ ಹೇಳುವೆನು, ಕೇಳು.

೨-೩. ಬಿಳಿಯ ಸಂಪಿಗೆಯ ಬಣ್ಣದಂತೆ ಕಾಂತಿಯುತಳೂ, ರತ್ನಾಭರಣಾಲಂಕೃತಳೂ, ಅಗ್ನಿಯಂತೆ ಪವಿತ್ರವಾದ ವಸ್ತ್ರವನ್ನು ಧರಿಸಿರುವವಳೂ, ಸರ್ಪವನ್ನೇ ಯಜ್ಞೋಪವೀತವನ್ನಾಗಿ ಪಡೆದಿರುವವಳೂ, ಸಿದ್ಧರಿಗೆಲ್ಲ ಅಧಿದೇವತೆಯೂ, ಸಿದ್ಧಿದಾಯಕಳೂ ಆದ ದೇವಿಯನ್ನು ಭಕ್ತಿಯಿಂದ ಭಜಿಸುವೆನು.

ಇತಿ ಧ್ಯಾತ್ವಾ ಚ ತಾಂ ದೇವೀಂ ಮೂಲೇನೈವ ಪ್ರಪೂಜಯೇತ್ ।
ನೈವೇದ್ಯೈರ್ವಿವಿಧೈರ್ದೀಪೈಃ ಪುಷ್ಪೈರ್ಧೂಪಾನುಲೇಪನೈಃ ॥ ೪ ॥

ಮೂಲಮಂತ್ರಶ್ಚ ವೇದೋಕ್ತೋ ಭಕ್ತಾನಾಂ ವಾಂಛಿತಪ್ರದಃ ।
ಮೂಲಕಲ್ಪತರುರ್ನಾಮ ಸುಸಿದ್ಧೋ ದ್ವಾದಶಾಕ್ಷರಃ ॥ ೫ ॥

ಓಂ ಹ್ರೀಂ ಶ್ರೀಂ ಕ್ರೀಂ ಐಂ ಮನಸಾ ದೇವ್ಯೈ ಸ್ವಾಹೇತಿ ಕೀರ್ತಿತಃ ।
ಪಂಚಲಕ್ಷಜಪೇನೈವ ಮಂತ್ರಸಿದ್ಧಿರ್ಭವೇನ್ನೃಣಾಂ ॥ ೬ ॥

ಮಂತ್ರಸಿದ್ಧಿರ್ಭವೇದ್ಯಸ್ಯ ಸ ಸಿದ್ಧೋ ಜಗತೀತಲೇ ।
ಸುಧಾಸಮಂ ವಿಷಂ ತಸ್ಯ ಧನ್ವಂತರಿಸಮೋ ಭವೇತ್ ॥ ೭ ॥

ಬ್ರಹ್ಮನ್ನಾಷಾಢಸಂಕ್ರಾಂತ್ಯಾಂ ಗೂಢಶಾಖಾಸು ಯತ್ನತಃ ।
ಆವಾಹ್ಯ ದೇವೀಂ ಮಾಸಾಂತಂ ಪೂಜಯೇದ್ಯೋ ಹಿ ಭಕ್ತಿತಃ ॥ ೮ ॥

---

೪. ಈ ರೀತಿಯಾಗಿ ಆ ದೇವಿಯನ್ನು ಧ್ಯಾನಿಸಿ ಮೂಲಮಂತ್ರದಿಂದಲೂ ಗಂಧಪುಷ್ಪಧೂಪದೀಪ ನೈವೇದ್ಯಾದಿಗಳಿಂದಲೂ ಕ್ರಮವಾಗಿ ಪೂಜಿಸಬೇಕು.

೫. ಭಕ್ತರು ಬೇಡಿದ ಇಷ್ಟಾರ್ಥವನ್ನು ಕೊಡತಕ್ಕುದೂ, ಮೂಲಕಲ್ಪತರುವೆಂದು ಪ್ರಸಿದ್ಧಿಪಡೆದಿರುವುದೂ ಆದ ಹನ್ನೆರಡಕ್ಷರದ ದೇವಿಯ ಮೂಲಮಂತ್ರವು ವೇದೋಕ್ತವಾಗಿದೆ.

೬. 'ಓಂ ಹ್ರೀಂ ಶ್ರೀಂ ಕ್ರೀಂ ಐಂ ಮನಸಾ ದೇವ್ಯೈ ಸ್ವಾಹಾ' ಎಂಬುದೇ ಆ ದ್ವಾದಶಾಕ್ಷರಮಂತ್ರವು. ಐದುಲಕ್ಷಬಾರಿ ಜಪಿಸುವುದರಿಂದ ಮನುಜರಿಗೆ ಈ ಮಂತ್ರವು ಸಿದ್ಧಿಸುವುದು.

೭. ಮಂತ್ರಸಿದ್ಧಿಯನ್ನು ಪಡೆದವನು ಜಗತ್ತಿನಲ್ಲಿ ಎಲ್ಲ ಕಾರ್ಯಗಳಲ್ಲೂ ಸಿದ್ಧಿ ಹೊಂದುವನು. ಆ ಮನುಜನಿಗೆ ವಿಷವೂ ಅಮೃತಸಮಾನವಾಗುವುದಲ್ಲದೆ ಅವನು ದೇವವೈದ್ಯನಾದ ಧನ್ವಂತರಿಗೆ ಸಮನಾಗುವನು.

೮–೯. ಎಲೈ ನಾರದನೇ, ಆಷಾಢಮಾಸದ ಸಂಕ್ರಾಂತಿಯಲ್ಲಿ ಯಾರು ಮನಸಾದೇವಿಯನ್ನು ಕಬ್ಬಿನ ಜಲ್ಲೆಯಲ್ಲಿ ಆವಾಹನೆಮಾಡಿ, ಪ್ರಯತ್ನಪೂರ್ವಕವಾಗಿ

ಪಂಚಮ್ಯಾಂ ಮನಸಾಖ್ಯಾಯೋಂ ದೇವ್ಯೈ ದದ್ಯಾಚ್ಚ ಯೋ ಬಲಿಂ|
ಧನವಾನ್ ಪುತ್ರವಾಂಶ್ಚೈವ ಕೀರ್ತಿಮಾನ್ಸ ಭವೇದ್ಧ್ರುವಂ || ೯ ||

ಪೂಜಾವಿಧಾನಂ ಕಥಿತಂ ತದಾಖ್ಯಾನಂ ನಿಶಾಮಯ |
ಕಥಯಾಮಿ ಮಹಾಭಾಗ ಯಚ್ಛ್ರುತಂ ಧರ್ಮವಕ್ತ್ರತಃ || ೧೦ ||

ಪುರಾ ನಾಗಭಯಾಕ್ರಾಂತಾ ಬಭೂವುರ್ಮಾನವಾ ಭುವಿ |
ಯಾನ್ಯಾನ್ಖಾದಂತಿ ನಾಗಾಶ್ಚ ನ ತೇ ಜೀವಂತಿ ನಾರದ || ೧೧ ||

ಮಂತ್ರಾಂಶ್ಚ ಸಸೃಜೇ ಭೀತಃ ಕಶ್ಯಪೋ ಬ್ರಹ್ಮಣಾರ್ಥಿತಃ |
ವೇದಬೀಜಾನುಸಾರೇಣ ಚೋಪದೇಶೇನ ವೇಧಸಃ || ೧೨ ||

ಮಂತ್ರಾಧಿಷ್ಠಾತೃದೇವೀಂ ತಾಂ ಮಾನಸಾಂ ಸಸೃಜೇ ತತಃ |
ತಪಸಾ ಮನಸಾ ತೇನ ಮಾನಸಾ ಸಾ ಬಭೂವ ಹ || ೧೩ ||

ಭಕ್ತಿಯಿಂದ ಒಂದು ತಿಂಗಳವರೆಗೂ ಪೂಜಿಸುವರೋ ಮತ್ತು (ಮಾನಸ) ವೆಂಬ ಪಂಚಮಿಯ ದಿವಸ ದೇವಿಗೆ ಯಾರು ಬಲಿಸಮರ್ಪಣೆ ಮಾಡುವರೋ, ಅವರು ಧನವಂತರೂ, ಪುತ್ರವಂತರೂ, ಕೀರ್ತಿವಂತರೂ ಆಗುವುದರಲ್ಲಿ ಸಂದೇಹವಿಲ್ಲ.

೧೦. ಮನಸಾದೇವಿಯ ಪೂಜಾವಿಧಾನವನ್ನು ಹೇಳಿದುದಾಯಿತು. ಧರ್ಮಪುರುಷನ ಬಾಯಿನಿಂದ ಕೇಳಿದ ಆ ದೇವಿಯ ಉಪಾಖ್ಯಾನವನ್ನು ಹೇಳುವೆನು ಕೇಳುವವನಾಗು.

೧೧. ಎಲೈ ನಾರದನೇ, ಪೂರ್ವದಲ್ಲಿ ಭೂಲೋಕದ ಮನುಜರೆಲ್ಲರೂ ಸರ್ಪಭಯದಿಂದ ಪೀಡಿತರಾಗಿದ್ದರು. ಸರ್ಪಗಳ ಕಡಿತಕ್ಕೆ ಸಿಲುಕಿದವರಾರೂ ಜೀವಿಸುತ್ತಿರಲಿಲ್ಲ.

೧೨. ಆಗ ಮನುಜವಂಶವೇ ನಾಶವಾಗುವದೆಂಬ ಭಯದಿಂದ ಕಶ್ಯಪ ಪ್ರಜಾಪತಿಯು ಚತುರ್ಮುಖಬ್ರಹ್ಮನ ಉಪದೇಶದಂತೆ ವೇದಮೂಲಕವಾದ ದಿವ್ಯ ಮಂತ್ರಗಳನ್ನು ಸೃಜಿಸಿದನು.

೧೩. ಅನಂತರ ಆ ಮಂತ್ರಕ್ಕೆ ಮನಸಾದೇವಿಯನ್ನು ಅಧಿದೇವತೆಯನ್ನಾಗಿ ಸೃಜಿಸಿದನು. ತಪಸ್ಸು ಮಾಡುತ್ತಿದ್ದ ಆ ಕಶ್ಯಪನ ಮನಸ್ಸಿನಿಂದ ಆ ಮನಸಾದೇವಿಯು ಅವತರಿಸಿದಳು.

ಕುಮಾರೀ ಸಾ ಚ ಸಂಭೂಯ ಜಗಾಮಚ್ಛಂಕರಾಲಯಂ ।
ಭಕ್ತ್ಯಾ ಸಂಪೂಜ್ಯ ಕೈಲಾಸೇ ತುಷ್ಟುವೇ ಚಂದ್ರಶೇಖರಂ ॥ ೧೪ ॥

ದಿವ್ಯಂ ವರ್ಷಸಹಸ್ರಂ ಚ ತಂ ಸಿಷೇವೇ ಮುನೇಃ ಸುತಾ ।
ಆಶುತೋಷೋ ಮಹೇಶಶ್ಚ ತಾಂ ಚ ತುಷ್ಟೋ ಬಭೂವ ಹ ॥ ೧೫ ॥

ಮಹಾಜ್ಞಾನಂ ದದೌ ತಸ್ಯೈ ಪಾಠಯಾಮಾಸ ಸಾಮ ಚ ।
ಕೃಷ್ಣಮಂತ್ರಂ ಕಲ್ಪತರುಂ ದದಾವಷ್ಟಾಕ್ಷರಂ ಮುನೇ ॥ ೧೬ ॥

ಲಕ್ಷ್ಮೀಮಾಯಾ ಕಾಮಬೀಜಂ ಙೇಂತಂ ಕೃಷ್ಣಪದಂ ತಥಾ ।

॥ ಓಂ ಶ್ರೀಂ ಹ್ರೀಂ ಕ್ಲೀಂ ಕೃಷ್ಣಾಯ ॥

ತ್ರೈಲೋಕ್ಯಮಂಗಲಂ ನಾಮ ಕವಚಂ ಪೂಜನಕ್ರಮಂ ॥ ೧೭ ॥

---

೧೪. ಆ ಕುಮಾರಿಯು ಅವತರಿಸಿದ ಮೇಲೆ ಶಂಕರನ ವಾಸಸ್ಥಾನವಾದ ಕೈಲಾಸಕ್ಕೆ ಹೋಗಿ, ಚಂದ್ರಶೇಖರನನ್ನು ಭಕ್ತಿಯಿಂದ ಪೂಜಿಸಿ ನುತಿಸಿದಳು.

೧೫. ಈ ರೀತಿಯಾಗಿ ಆ ಮುನಿಕನ್ಯೆಯು ದಿವ್ಯಸಹಸ್ರವರ್ಷಗಳು ಶಿವನನ್ನು ಸೇವಿಸಿದಳು. ಭಕ್ತರ ಸೇವೆಯಿಂದ ಬಹಳ ಜಾಗ್ರತೆ ಸಂತೋಷಹೊಂದುವ ಆ ಮಹೇಶ್ವರನು ಆಕೆಯ ವಿಷಯದಲ್ಲಿ ಪ್ರಸನ್ನನಾದನು.

೧೬. ಆಕೆಗೆ ದಿವ್ಯಜ್ಞಾನವನ್ನು ಅನುಗ್ರಹಿಸಿ ಸಾಮವೇದವನ್ನು ಬೋಧಿಸಿದನು. ಅಲ್ಲದೆ ಕಲ್ಪವೃಕ್ಷಕ್ಕೆಣೆಯಾದ, ಎಂಟಕ್ಷರದ ಶ್ರೀಕೃಷ್ಣ ಮಂತ್ರವನ್ನು ಉಪದೇಶಿಸಿದನು.

೧೭. ಲಕ್ಷ್ಮೀ, ಮಾಯಾ, ಕಾಮಬೀಜರೂಪವೂ, ಕೃಷ್ಣ ಎಂಬ ಪ್ರಕೃತಿಯ ಚತುರ್ಥ್ಯಂತವಾಗಿಯೂ ಇರುವ 'ಓಂ ಶ್ರೀಂ ಹ್ರೀಂ ಕ್ಲೀಂ ಕೃಷ್ಣಾಯ ಸ್ವಾಹಾ' ಎಂಬುದೇ ಆ ಮಂತ್ರವು. ತ್ರೈಲೋಕ್ಯಮಂಗಳಸ್ವರೂಪವಾದ (ಕೃಷ್ಣ) ಕವಚವನ್ನು ಧಾರಣೆಮಾಡಿ ಪೂಜಿಸಬೇಕು.

ಸ್ತವನಂ ಸರ್ವಪೂಜ್ಯಂ ಚ ಧ್ಯಾನಂ ಭುವನಪಾವನಂ ।
ಪುರಶ್ಚರ್ಯಾಕ್ರಮಂ ಚಾಪಿ ವೇದೋಕ್ತಂ ಸರ್ವಸಮ್ಮತಂ ॥ ೧೮ ॥

ಪ್ರಾಪ್ಯ ಮೃತ್ಯುಂಜಯಾತ್ ಜ್ಞಾನಂ ಪರಂ ಮೃತ್ಯುಂಜಯಂ ಸತೀ ।
ಜಗಾಮ ತಪಸೇ ಸಾಧ್ವೀ ಪುಷ್ಕರಂ ಶಂಕರಾಜ್ಞಯಾ ॥ ೧೯ ॥

ತ್ರಿಯುಗಂ ಚ ತಪಸ್ತಪ್ತ್ವಾ ಕೃಷ್ಣಸ್ಯ ಪರಮಾತ್ಮನಃ ।
ಸಿದ್ಧಾ ಬಭೂವ ಸಾ ದೇವೀ ದದರ್ಶ ಪುರತಃ ಪ್ರಭುಂ ॥ ೨೦ ॥

ದೃಷ್ಟ್ವಾ ಕೃಶಾಂಗೀಂ ಬಾಲಾಂ ಚ ಕೃಪಯಾ ಚ ಕೃಪಾನಿಧಿಃ ।
ಪೂಜಾಂ ಚ ಕಾರಯಾಮಾಸ ಚಕಾರ ಚ ಹರಿಃ ಸ್ವಯಂ ॥ ೨೧ ॥

ವರಂ ಚ ಪ್ರದದೌ ತಸ್ಯೈ ಪೂಜಿತಾ ತ್ವಂ ಭವೇ ಭವ ।
ವರಂ ದತ್ವಾ ಚ ಕಲ್ಯಾಣ್ಯೈ ಸದ್ಯಶ್ಚಾಂತರ್ದಧೇ ವಿಭುಃ ॥ ೨೨ ॥

---

೧೮. ಸರ್ವಪೂಜ್ಯವಾದ ಆ ಪರಮಾತ್ಮನ ಸ್ತೋತ್ರವನ್ನೂ, ಭುವನಪಾವನವಾದ ಆತನ ಧ್ಯಾನವನ್ನೂ, ವೇದೋಕ್ತವೂ, ಸರ್ವಸಮಂತವೂ ಆದ ಪುರಶ್ಚರ್ಯಾಕ್ರಮವನ್ನೂ ಶಿವನು ಆ ಕನ್ಯೆಗೆ ಉಪದೇಶಿಸಿದನು.

೧೯. ಮೃತ್ಯುಂಜಯನಾದ ಶಿವನಿಂದ ಮೃತ್ಯುಂಜಯಸ್ವರೂಪವಾದ ಆ ದಿವ್ಯಜ್ಞಾನವನ್ನು ಆ ಕನ್ಯೆಯು ಪಡೆದು, ಶಂಕರನ ಅಪ್ಪಣೆಯಂತೆ ಆ ಸಾಧ್ವೀಶಿರೋಮಣಿಯು ತಪಸ್ಸಿಗಾಗಿ ಪುಷ್ಕರಕ್ಷೇತ್ರಕ್ಕೆ ಹೋದಳು.

೨೦. ಅಲ್ಲಿ ಶ್ರೀಕೃಷ್ಣಪರಮಾತ್ಮನನ್ನು ಕುರಿತು ಮೂರು ಯುಗಗಳ ಕಾಲ ತಪಸ್ಸುಮಾಡಿ ತಪಸ್ಸಿದ್ಧಿಯನ್ನು ಪಡೆದು ಮುಂದೆ ಶ್ರೀಕೃಷ್ಣನ ದಿವ್ಯರೂಪವನ್ನು ಕಂಡಳು.

೨೧. ದಯಾನಿಧಿಯಾದ ಪರಮಾತ್ಮನು ತಪಃಕೃಶಳಾದ ಆ ಬಾಲಿಕೆಯನ್ನು ನೋಡಿ ಆಕೆಗೆ ಎಲ್ಲೆಲ್ಲಿಯೂ ಪೂಜೆಯಾಗುವಂತೆ ಅನುಗ್ರಹಿಸಿ ತಾನೂ ಪೂಜೆ ಮಾಡಿದನು.

೨೨. 'ನೀನು ಪ್ರಪಂಚದಲ್ಲಿ ಎಲ್ಲೆಡೆಯಲ್ಲಿಯೂ ಪೂಜಿತಳಾಗು' ಎಂದು ಆ ಕಲ್ಯಾಣಸ್ವರೂಪಿಣಿಗೆ ವರವಿತ್ತು ಕೂಡಲೇ ಪರಮಾತ್ಮನು ಕಣ್ಮರೆಯಾದನು.

ಪ್ರಥಮೋ ಪೂಜಿತಾ ಸಾ ಚ ಕೃಷ್ಣೇನ ಪರಮಾತ್ಮನಾ ।
ದ್ವಿತೀಯೋ ಶಂಕರೇಣೈವ ಕಶ್ಯಪೇನ ಸುರೇಣ ಚ ॥ ೨೩ ॥

ಮನುನಾ ಮುನಿನಾ ಚೈವ ಹ್ಯಹಿನಾ ಮಾನವಾದಿನಾ ।
ಬಭೂವ ಪೂಜಿತಾ ಸಾ ಚ ತ್ರಿಷು ಲೋಕೇಷು ಸುಶ್ರುತಾ ॥ ೨೪ ॥

ಜರತ್ಕಾರುಮುನೀಂದ್ರಾಯ ಕಶ್ಯಪಸ್ತಾಂ ದದೌ ಪುರಾ ।
ಅಯಾಚಿತೋ ಮುನಿಶ್ರೇಷ್ಠೋ ಜಗ್ರಾಹ ಬ್ರಾಹ್ಮಣಾಜ್ಞಯಾ ॥ ೨೫ ॥

ಕೃತ್ವೋದ್ವಾಹಂ ಮಹಾಯೋಗೀ ವಿಶ್ರಾಂತಸ್ತಪಸಾ ಚಿರಂ ।
ಸುಷ್ವಾಪ ದೇವ್ಯಾ ಜಘನೇ ವಟಮೂಲೇ ಚ ಪುಷ್ಕರೇ ॥ ೨೬ ॥

ನಿದ್ರಾಂ ಜಗಾಮ ಸ ಮುನಿಃ ಸ್ಮೃತ್ವಾ ನಿದ್ರೇಶಮೀಶ್ವರಂ ।
ಜಗಾಮಾಸ್ತಂ ದಿನಕರಃ ಸಾಯಂಕಾಲ ಉಪಸ್ಥಿತೇ ॥ ೨೭ ॥

೨೩-೨೪. ಈ ರೀತಿಯಾಗಿ ಮನಸಾದೇವಿಯು ಮೊಟ್ಟಮೊದಲು ಶ್ರೀಕೃಷ್ಣ ಪರಮಾತ್ಮನಿಂದಲೂ, ಎರಡನೆಯದಾಗಿ ಶಂಕರನಿಂದಲೂ, ಪೂಜೆಗೊಂಡು ಅನಂತರ ಕಶ್ಯಪಾದಿ ಮಹರ್ಷಿಗಳಿಂದಲೂ, ಮುನಿಮಾನವರಿಂದಲೂ, ಸರ್ಪಗಳಿಂದಲೂ ಪೂಜೆ ಹೊಂದಿ ಮೂರು ಲೋಕದಲ್ಲೂ ವಿಖ್ಯಾತಿಪಡೆದಳು.

೨೫. ಪೂರ್ವದಲ್ಲಿ ಕಶ್ಯಪಪ್ರಜಾಪತಿಯು ತನ್ನ ಮಾನಸ ಪುತ್ರಿಯಾದ ಮನಸಾದೇವಿಯನ್ನು ಜರತ್ಕಾರುವೆಂಬ ಮುನಿಶ್ರೇಷ್ಠನಿಗೆ ಕೊಟ್ಟನು. ಅಯಾಚಿತ ವಾಗಿ ಲಭಿಸಿದ ಆ ಕನ್ಯೆಯನ್ನು ಆ ಮುನಿವರ್ಯನೂ ಕೂಡ ಬ್ರಹ್ಮನ ಆಜ್ಞೆಯಂತೆ ಸ್ವೀಕರಿಸಿದನು.

೨೬. ದೀರ್ಘತಪಸ್ಸಿನಿಂದ ಬಳಲಿದ ಆ ಮಹಾಯೋಗಿಶ್ರೇಷ್ಠನಾದ ಜರ ತ್ಕಾರುವು ವಿವಾಹ ಮಾಡಿಕೊಂಡು ಪುಷ್ಕರಕ್ಷೇತ್ರದ ಒಂದು ಆಲದ ಮರದ ಕೆಳಗೆ ತನ್ನ ದೇವಿಯ ತೊಡೆಯ ಪ್ರದೇಶದಲ್ಲಿ ಮಲಗಿದನು.

೨೭. ನಿದ್ರಾಪತಿಯಾದ ಈಶ್ವರನನ್ನು ಸ್ಮರಿಸಿಕೊಂಡು ಆ ಮುನಿಯು ನಿದ್ದೆ ಹೋದನು. ಇತ್ತ ಸೂರ್ಯಾಸ್ತವಾಗಿ ಸಂಧ್ಯಾಸಮಯವು ಸಮೀಪಿಸಿತು.

ಸಂಚಿಂತ್ಯ ಮನಸಾ ತತ್ರ ಮನಸಾ ಚ ಪತಿವ್ರತಾ ।
ಧರ್ಮಲೋಪಭಯೇನೈವ ಚಕಾರಾಲೋಚನಂ ಸತೀ ॥ ೨೮ ॥

ಅಕೃತ್ವಾ ಪಶ್ಚಿಮಾಂ ಸಂಧ್ಯಾಂ ನಿತ್ಯಾಂ ಚೈವ ದ್ವಿಜನ್ಮನಾಂ ।
ಬ್ರಹ್ಮಹತ್ಯಾದಿಕಂ ಪಾಪಂ ಲಭಿಷ್ಯತಿ ಪತಿರ್ಮಮ ॥ ೨೯ ॥

ನೋಪತಿಷ್ಠತಿ ಯಃ ಪೂರ್ವಾಂ ನೋಪಾಸ್ತೇ ಯಶ್ಚ ಪಶ್ಚಿಮಾಂ ।
ಸ ಸರ್ವದಾಽಶುಚಿರ್ನಿತ್ಯಂ ಬ್ರಹ್ಮಹತ್ಯಾದಿಕಂ ಲಭೇತ್ ॥ ೩೦ ॥

ವೇದೋಕ್ತಮಿತಿಸಂಚಿಂತ್ಯ ಬೋಧಯಾಮಾಸ ತಂ ಮುನಿಂ ।
ಸ ಚ ಬುದ್ಧ್ವಾ ಮುನಿಶ್ರೇಷ್ಠಸ್ತಾಂ ಚುಕೋಪ ಭೃಶಂ ಮುನಿಃ ॥ ೩೧ ॥

॥ ಜರತ್ಕಾರುರುವಾಚ ॥

ಕಥಂ ಮೇ ಸುವ್ರತೇ ಸಾಧ್ವಿ ನಿದ್ರಾಭಂಗಃ ಕೃತಸ್ತ್ವಯಾ ।
ವ್ಯರ್ಥಂ ವ್ರತಾದಿಕಂ ತಸ್ಯಾ ಯಾ ಭರ್ತುಶ್ಚಾಪಕಾರಿಣೀ ॥ ೩೨ ॥

---

೨೮. ಪತಿವ್ರತೆಯಾದ ಮನಸಾದೇವಿಯಾದರೋ ಪತಿಗೆ ಸಂಧ್ಯಾಕಾಲವು ಅತೀತವಾಗಿ, ಧರ್ಮಲೋಪ ದೋಷವು ಸಂಭವಿಸುವುದೆಂದು ಮನಸ್ಸಿನಲ್ಲಿಯೇ ಬಹಳವಾಗಿ ಆಲೋಚಿಸಿದಳು.

೨೯. 'ಬ್ರಾಹ್ಮಣನಿಗೆ ನಿತ್ಯಕರ್ಮವಾದ ಸಂಧ್ಯೆಯನ್ನು ತನ್ನ ಪತಿಯು ಆಚರಿಸದಿದ್ದರೆ ಬ್ರಹ್ಮಹತ್ಯಾದಿ ಮಹಾಪಾಪಗಳಿಗೆ ಗುರಿಯಾಗುವನು.

೩೦. ಯಾರು ಪ್ರಾತಃಸಂಧ್ಯೆ ಮತ್ತು ಸಾಯಂಸಂಧ್ಯೆಗಳನ್ನು ಕಾಲಕ್ಕೆ ಸರಿಯಾಗಿ ಆಚರಿಸುವುದಿಲ್ಲವೋ ಅವನು ಯಾವಾಗಲೂ ಅಶುಚಿಯಾಗಿರುವುದಲ್ಲದೆ ಬ್ರಹ್ಮಹತ್ಯಾದಿ ಮಹಾಪಾಪಕ್ಕೆ ಗುರಿಯಾಗುವನು'.

೩೧. ಇದು ವೇದೋಕ್ತವಾಗಿರುವುದೆಂದು ಯೋಚಿಸಿ ಆಕೆಯು ತನ್ನ ಪತಿಯನ್ನು ಎಚ್ಚರಗೊಳಿಸಿದಳು. ಆ ಜರತ್ಕಾರು ಮಹರ್ಷಿಯಾದರೋ ನಿದ್ರಾಭಂಗದಿಂದ ಕೋಪಗೊಂಡು ಆಕೆಯನ್ನು ಕುರಿತಿಂತೆಂದನು.

೩೨. ಜರತ್ಕಾರು :—ವ್ರತಪರಳೂ, ಪತಿವ್ರತೆಯೂ ಆದ ನೀನು ನನ್ನ ನಿದ್ರಾಭಂಗಮಾಡಿದುದುಚಿತವೇ ? ಯಾರು ತನ್ನ ಪತಿಗೆ ಅಹಿತವನ್ನಾಚರಿಸುವರೋ ಅವರು ಮಾಡಿದ ವ್ರತಾದಿಗಳೆಲ್ಲವೂ ವ್ಯರ್ಥವಾಗುವುದೆಂಬುದನ್ನು ನೀನರಿಯೆಯಾ ?

ತಪಶ್ಚಾನಶನಂ ಚೈವ ವ್ರತಂ ದಾನಾದಿಕಂ ಚ ಯತ್ ।
ಭರ್ತುರಪ್ರಿಯಕಾರಿಣ್ಯಾಃ ಸರ್ವಂ ಭವತಿ ನಿಷ್ಫಲಂ ॥ ೩೩ ॥

ಯಯಾ ಪತಿಃ ಪೂಜಿತಶ್ಚ ಶ್ರೀಕೃಷ್ಣಃ ಪೂಜಿತಸ್ತಯಾ ।
ಪತಿವ್ರತಾವ್ರತಾರ್ಥಂ ಚ ಪತಿರೂಪೀ ಹರಿಃ ಸ್ವಯಂ ॥ ೩೪ ॥

ಸರ್ವದಾನಂ ಸರ್ವಯಜ್ಞಃ ಸರ್ವತೀರ್ಥನಿಷೇವಣಂ ।
ಸರ್ವಂ ತಪೋವ್ರತಂ ಸರ್ವಮುಪವಾಸಾದಿಕಂ ಚ ಯತ್ ॥ ೩೫ ॥

ಸರ್ವಧರ್ಮಶ್ಚ ಸತ್ಯಂ ಚ ಸರ್ವದೇವಪ್ರಪೂಜನಂ ।
ತತ್ಸರ್ವಂ ಸ್ವಾಮಿಸೇವಾಯಾಃ ಕಲಾಂ ನಾರ್ಹಂತಿ ಷೋಡಶೀಂ ॥ ೩೬ ॥

ಸುಪುಣ್ಯೇ ಭಾರತೇ ವರ್ಷೇ ಪತಿಸೇವಾಂ ಕರೋತಿ ಯಾ ।
ವೈಕುಂಠಂ ಸ್ವಾಮಿನಾ ಸಾರ್ಧಂ ಸಾ ಯಾತಿ ಬ್ರಹ್ಮಣಃ ಪದಂ ॥ ೩೭ ॥

---

೩೩. ಪತಿಗೆ ಅಪ್ರಿಯವನ್ನು ಮಾಡುವ ಹೆಂಗಸು ಮಾಡಿದ ತಪಸ್ಸು, ಉಪವಾಸವ್ರತ ಮತ್ತು ದಾನಾದಿಪುಣ್ಯಕರ್ಮಗಳೆಲ್ಲವೂ ನಿಷ್ಫಲವಾಗುವುವು.

೩೪. ಯಾರು ತನ್ನ ಪತಿಯನ್ನು ಪೂಜಿಸಿ ಗೌರವಿಸುವರೋ ಅವರು ಶ್ರೀಕೃಷ್ಣನನ್ನು ಪೂಜಿಸಿದಂತಾಗುವುದು. ಪತಿವ್ರತೆಯರ ವ್ರತಪರಿಪಾಲನೆಗಾಗಿ, ಶ್ರೀಹರಿಯು ತಾನೇ ಪತಿರೂಪಧರನಾಗುವನು.

೩೫–೩೬. ಸಕಲ ದಾನಗಳು, ಯಜ್ಞಗಳು, ತೀರ್ಥಯಾತ್ರೆಗಳು, ತಪಸ್ಸು ಮತ್ತು ಉಪವಾಸವ್ರತಗಳು, ಸಕಲಧರ್ಮಾಚರಣೆಗಳು, ಸತ್ಯವಚನಗಳು, ಸಮಸ್ತ ದೇವತೆಗಳ ಪೂಜೆ ಇವುಗಳಿಂದ ಲಭಿಸುವ ಪುಣ್ಯವೆಲ್ಲವೂ ಪತಿಸೇವಾ ಪುಣ್ಯದ ಹದಿನಾರನೆಯ ಒಂದು ಭಾಗದಷ್ಟಿರುವುದಿಲ್ಲ.

೩೭. ಪುಣ್ಯಕರವಾದ ಭರತಖಂಡದಲ್ಲಿ ಅನನ್ಯಭಕ್ತಿಯಿಂದ ಪತಿಸೇವೆಯನ್ನು ಮಾಡುವ ಸ್ತ್ರೀಯು ತನ್ನ ಪತಿಯೊಡನೆ ವೈಕುಂಠದಲ್ಲಿ ಬ್ರಹ್ಮಪದವಿಯನ್ನು ಪಡೆಯುವಳು.

ವಿಪ್ರಿಯಂ ಕುರುತೇ ಭರ್ತುರ್ವಿಪ್ರಿಯಂ ವದತಿ ಪ್ರಿಯಂ ।
ಅಸತ್ಕುಲಪ್ರಜಾತಾ ಯಾ ತತ್ಫಲಂ ಶ್ರೂಯತಾಂ ಸತಿ ॥ ೩೮ ॥

ಕುಂಭೀಪಾಕಂ ವ್ರಜೇತ್ಸಾ ಚ ಯಾವಚ್ಚಂದ್ರದಿವಾಕರೌ ।
ತತೋ ಭವತಿ ಚಾಂಡಾಲೀ ಪತಿಪುತ್ರವಿವರ್ಜಿತಾ ॥ ೩೯ ॥

ಇತ್ಯುಕ್ತ್ವಾ ಚ ಮುನಿಶ್ರೇಷ್ಠೋ ಬಭೂವ ಸ್ಫುರಿತಾಧರಃ ।
ಚಕಮೇ ಮನಸಾ ಸಾಧ್ವೀ ಭಯೇನೋವಾಚ ತಂ ಪತಿಂ ॥ ೪೦ ॥

॥ ಮನಸೋವಾಚ ॥

ಸಂಧ್ಯಾಲೋಪಭಯೇನೈವ ನಿದ್ರಾಭಂಗಃ ಕೃತಸ್ತವ ।
ಕುರು ಶಾಂತಿಂ ಮಹಾಭಾಗ ದುಷ್ಟಾಯಾ ಮಮ ಸುವ್ರತ ॥ ೪೧ ॥

---

೩೮. ಎಲೌ ಸಾಧ್ವೀಶಿರೋಮಣಿಯೇ, ಯಾರು ತನ್ನ ಪತಿಗೆ ಅಹಿತವನ್ನೇ ಆಚರಿಸುತ್ತ, ಅಹಿತ ನುಡಿಗಳನ್ನು ನುಡಿಯುತ್ತಿರುವಳೋ ಅಂಥ ದುಷ್ಟಕುಲದಲ್ಲಿ ಹುಟ್ಟಿದ ಹೆಂಗಸು ಅನುಭವಿಸುವ ದುಷ್ಟಫಲಗಳನ್ನು ವಿವರಿಸುವೆನು. ಕೇಳು.

೩೯. ಅಂಥ ಕೆಟ್ಟ ಹೆಂಗಸು ಚಂದ್ರಸೂರ್ಯರಿರುವವರೆಗೆ ಕುಂಭೀಪಾಕವೆಂಬ ನರಕದಲ್ಲಿ ನರಳಿ ಅನಂತರ ಚಂಡಾಲಸ್ತ್ರೀಯಾಗಿ ಪತಿಪುತ್ರರಿಲ್ಲದೆ ದೀನಳಾಗಿರುವಳು.

೪೦. ಹೀಗೆ ಹೇಳಿ ಆ ಮಹರ್ಷಿಯಾದ ಜರತ್ಕಾರುವು ಕೆಳತುಟಿಯನ್ನು ನಡುಗಿಸುತ್ತ, ಆಕೆಗೆ ಶಾಪಕೊಡಲುದ್ಯುಕ್ತನಾದಾಗ, ಮನಸ್ಸಿನಲ್ಲಿಯೇ ಭಯದಿಂದ ನಡುಗುತ್ತಿರುವ ಆ ಸಾಧ್ವಿಯು ವಿನಯದಿಂದ ಇಂತು ನುಡಿದಳು.

೪೧. ಮನಸಾ:—ಎಲೈ ವ್ರತನಿಷ್ಠನಾದ ಪತಿದೇವನೇ, ಸಂಧ್ಯಾಸಮಯವು ಅತೀತವಾಗುವದೆಂದು ನಾನು ನಿನ್ನನ್ನು ಎಚ್ಚರಗೊಳಿಸಿದೆ. ಅಜ್ಞಳಾದ ನಾನು ಮಾಡಿದ ತಪ್ಪನ್ನು ಮಹಾತ್ಮನಾದ ನೀನು ದಯವಿಟ್ಟು ಕ್ಷಮಿಸು.

ಶೃಂಗಾರಾಹಾರನಿದ್ರಾಣಾಂ ಯಶ್ಚ ಭಂಗಂ ಕರೋತಿ ಚ ।
ಸ ವ್ರಜೇತ್ಕಾಲಸೂತ್ರಂ ಚ ಸ್ವಾಮಿನಶ್ಚ ವಿಶೇಷತಃ ॥ ೪೨ ॥

ಇತ್ಯುಕ್ತ್ವಾ ಮನಸಾ ದೇವೀ ಸ್ವಾಮಿನಶ್ಚರಣಾಂಬುಜೇ ।
ಪಪಾತ ಭಕ್ತ್ಯಾ ಭೀತಾ ಚ ರುರೋದ ಚ ಪುನಃ ಪುನಃ ॥ ೪೩ ॥

ಕುಪಿತಂ ಚ ಮುನಿಂ ದೃಷ್ಟ್ವಾ ಶ್ರೀಸೂರ್ಯಂ ಶಪ್ತುಮುದ್ಯತಂ ।
ತತ್ರಾಜಗಾಮ ಭಗವಾನ್ಸಂಧ್ಯಯಾ ಸಹ ನಾರದ ॥ ೪೪ ॥

ತತ್ರಾಗತ್ಯ ಮುನಿಶ್ರೇಷ್ಠಮುವಾಚದ್ಭಾಸ್ಕರಃ ಸ್ವಯಂ ।
ವಿನಯೇನ ವಿನೀತಶ್ಚ ತಯಾ ಸಹ ಯಥೋಚಿತಂ ॥ ೪೫ ॥

॥ ಶ್ರೀ ಸೂರ್ಯ ಉವಾಚ ॥

ಸೂರ್ಯಾಸ್ತಸಮಯಂ ದೃಷ್ಟ್ವಾ ಧರ್ಮಲೋಪಭಯೇನ ಚ ।
ತ್ವಾಂ ಬೋಧಯಾಮಾಸ ವಿಪ್ರ ನಾಹಮಸ್ತಂ ಗತಸ್ತದಾ ॥ ೪೬ ॥

---

೪೨. ಯಾರು ಶೃಂಗಾರಸುಖಕ್ಕೂ, ಆಹಾರಸೇವನೆಗೂ, ನಿದ್ರಾನುಭವಕ್ಕೂ, ಭಂಗವುಂಟುಮಾಡುವರೋ, ಅಂಥವರು ಕಾಲಸೂತ್ರವೆಂಬ ನರಕಕ್ಕೆ ಹೋಗುವರೆಂಬುದನ್ನು ನಾನು ಬಲ್ಲೆನು.

೪೩. ಹೀಗೆ ಹೇಳುತ್ತಾ ಆ ಮನಸಾದೇವಿಯು ಭಯಭಕ್ತಿಯಿಂದ ತನ್ನ ಪತಿಯ ಪಾದಾರವಿಂದಗಳಿಗೆ ಮತ್ತೆ ಮತ್ತೆ ನಮಸ್ಕರಿಸಿ ತನ್ನ ತಪ್ಪನ್ನು ಕ್ಷಮಿಸಬೇಕೆಂದು ಮೊರೆಯಿಟ್ಟಳು.

೪೪. ಆಗ ಕುಪಿತನಾದ ಮಹರ್ಷಿಯು, ತಾನು ನಿದ್ರೆಮಾಡುತ್ತಿದ್ದಾಗ ಸೂರ್ಯನು ಅಸ್ತವಾದುದೇ ಮಹಾಪರಾಧವೆಂದು, ಸೂರ್ಯನಿಗೆ ಶಾಪಕೊಡಲುದ್ಯುಕ್ತನಾದನು. ಆಗ ಸಂಧ್ಯಾದೇವಿಯೊಡನೆ ಸೂರ್ಯದೇವನೇ ಅವನಲ್ಲಿಗೆ ಬಂದನು.

೪೫. ಅತಿವಿನೀತನಾಗಿ ಸೂರ್ಯದೇವನು ಸಂಧ್ಯಾದೇವಿಯೊಡನೆ ಆ ಮಹರ್ಷಿಯನ್ನು ಕುರಿತು ಕಾಲೋಚಿತವಾದ ಕೆಲವು ಮಾತುಗಳನ್ನಾಡಿದನು.

೪೬. ಶ್ರೀಸೂರ್ಯ—ಎಲೈ ಮಹರ್ಷಿಯೇ, ಸೂರ್ಯಾಸ್ತ ಸಮಯವನ್ನು ನೋಡಿ ಧರ್ಮಲೋಪವಾಗುವದೆಂಬ ಭಯದಿಂದ ನಿನ್ನ ಪತ್ನಿಯು ನಿನ್ನನ್ನು ಎಚ್ಚರಗೊಳಿಸಿದಳು. ಆದರೆ ಆಗ ನಾನು ಅಸ್ತನಾಗಿರಲಿಲ್ಲ.

ಕ್ಷಮಸ್ವ ಭಗವನ್ಬ್ರಹ್ಮನ್ಮಾಂ ಶಪ್ತುಂ ನೋಚಿತಂ ಮುನೇ ।
ಬ್ರಾಹ್ಮಣಾನಾಂ ಚ ಹೃದಯಂ ನವನೀತಸಮಂ ಸದಾ ॥ ೪೭ ॥

ತೇಷಾಂ ಕ್ಷಣಾರ್ಧಂ ಕ್ರೋಧಶ್ಚ ತತೋ ಭಸ್ಮ ಭವೇಜ್ಜಗತ್ ।
ಪುನಃ ಸ್ರಷ್ಟುಂ ದ್ವಿಜಶ್ಶಕ್ತೋ ನ ತೇಜಸ್ವೀ ದ್ವಿಜಾತ್ಪರಃ ॥ ೪೮ ॥

ಬ್ರಾಹ್ಮಣೋ ಬ್ರಹ್ಮಣೋ ವಂಶೇ ಪ್ರಜ್ವಲನ್ಬ್ರಹ್ಮತೇಜಸಾ ।
ಶ್ರೀಕೃಷ್ಣಂ ಭಾವಯೇನ್ನಿತ್ಯಂ ಬ್ರಹ್ಮಜ್ಯೋತಿಃ ಸನಾತನಂ ॥ ೪೯ ॥

ಸೂರ್ಯಸ್ಯ ವಚನಂ ಶ್ರುತ್ವಾ ದ್ವಿಜಸ್ತುಷ್ಟೋ ಬಭೂವ ಹ ।
ಸೂರ್ಯೋ ಜಗಾಮ ಸ್ವಸ್ಥಾನಂ ಗೃಹೀತ್ವಾ ಬ್ರಾಹ್ಮಣಾಶಿಷಂ ॥ ೫೦ ॥

---

೪೭. ಆದ್ದರಿಂದ ಎಲೈ ಪೂಜ್ಯನಾದ ಋಷಿಯೇ, ನನ್ನನ್ನು ಶಪಿಸುವುದು ಉಚಿತವಲ್ಲ. ಕ್ಷಮಿಸು. ಬ್ರಾಹ್ಮಣರ ಮನಸ್ಸು ಯಾವಾಗಲೂ ಬೆಣ್ಣೆಯಂತೆ ಮೃದುವಾಗಿರುವುದು.

೪೮. ಬ್ರಾಹ್ಮಣರಿಗೆ ಕೋಪವು ಅರ್ಧಕ್ಷಣಮಾತ್ರ ಇರುವುದಾದರೂ ಅಷ್ಟರಲ್ಲಿಯೇ ಜಗತ್ತನ್ನು ಬೂದಿಮಾಡಬಲ್ಲರು. ಅಂತೆಯೇ ಬೂದಿಯಾದ ಜಗತ್ತನ್ನು ಪುನಃ ಸೃಷ್ಟಿಮಾಡಲು ಬ್ರಾಹ್ಮಣನು ಶಕ್ತನಾದುದರಿಂದ ಬ್ರಾಹ್ಮಣನಿಗಿಂತ ತೇಜಸ್ವಿಯಾದವನು ಬೇರೊಬ್ಬನಿಲ್ಲ.

೪೯. ಬ್ರಹ್ಮನ ವಂಶದಲ್ಲಿ ಹುಟ್ಟಿ ಬ್ರಹ್ಮತೇಜಸ್ಸಿನಿಂದ ಬೆಳಗುತ್ತಿರುವ ಬ್ರಾಹ್ಮಣನು, ಬ್ರಹ್ಮಜ್ಯೋತಿಃಸ್ವರೂಪನೂ ಅನಾದಿಯೂ ಆದ ಶ್ರೀಕೃಷ್ಣಪರಮಾತನನ್ನು ನಿತ್ಯವೂ ಭಾವಿಸಬೇಕು.

೫೦. ಸೂರ್ಯನು ಈ ರೀತಿ ಸ್ತೋತ್ರಮಾಡಿದುದನ್ನು ಕೇಳಿ ಆ ಮಹರ್ಷಿಯು ಸಂತೋಷಗೊಂಡನು. ಅನಂತರ ಸೂರ್ಯನು ಬ್ರಾಹ್ಮಣನಾದ ಅವನ ಆಶೀರ್ವಾದವನ್ನು ಪಡೆದು ತನ್ನ ಸ್ಥಾನಕ್ಕೆ ಹಿಂತಿರುಗಿದನು.

ತತ್ಯಾಜ ಮನಸಾಂ ವಿಪ್ರಃ ಪ್ರತಿಜ್ಞಾಪಾಲನಾಯ ಚ ।
ರುದಂತೀಂ ಶೋಕಯುಕ್ತಾಂ ಚ ಹೃದಯೇನ ವಿದೂಯತಾ ॥ ೫೧ ॥

ಸಾ ಸಸ್ಮಾರ ಗುರುಂ ಶಂಭುಮಿಷ್ಟದೇವಂ ಹರಿಂ ವಿಧಿಂ ।
ಕಶ್ಯಪಂ ಜನ್ಮದಾತಾರಂ ವಿಪತ್ತೌ ಭಯಕರ್ಶಿತಾ ॥ ೫೨ ॥

ತತ್ರಾಜಗಾಮ ಭಗವಾನ್ಗೋಪೀಶಃ ಶಂಭುರೇವ ಚ ।
ವಿಧಿಶ್ಚ ಕಶ್ಯಪಶ್ಚೈವ ಮನಸಾಂ ಪರಿಚಿಂತಯನ್ ॥ ೫೩ ॥

ಸಾ ಚ ದೃಷ್ಟ್ವಾಭೀಷ್ಟದೇವಂ ನಿರ್ಗುಣಂ ಪ್ರಕೃತೇಃ ಪರಂ ।
ತುಷ್ಟಾವ ಪರಯಾ ಭಕ್ತ್ಯಾ ಪ್ರಣನಾಮ ಮುಹುರ್ಮುಹುಃ ॥ ೫೪ ॥

ನಮಶ್ಚಕಾರ ಶಂಭುಂ ಚ ಬ್ರಹ್ಮಾಣಂ ಕಶ್ಯಪಂ ತಥಾ ।
ಕಥಮಾಗಮನಂ ತ್ವತ್ರೇತ್ಯೇವಂ ಪ್ರಶ್ನಂ ಚಕಾರ ಸಃ ॥ ೫೫ ॥

---

೫೧. ಇತ್ತ ಆ ಜರತ್ಕಾರುವು ತನ್ನ ಕೋಪವನ್ನು ವ್ಯರ್ಥಗೊಳಿಸದಿರುವುದಕ್ಕಾಗಿ, ದುಃಖದಿಂದ ಗೋಳಾಡುತ್ತಾ, ಮನಸ್ಸಿನಲ್ಲಿಯೇ ವ್ಯಥೆಪಡುತ್ತಿರುವ ಮನಸಾದೇವಿಯನ್ನು ತ್ಯಜಿಸಿಬಿಟ್ಟನು.

೫೨. ಆ ದೇವಿಯು ತನಗೆ ಬಂದ ವಿಪತ್ತಿನಿಂದ ಭಯಗ್ರಸ್ತಳಾಗಿ, ತನ್ನ ಗುರುವಾದ ಶಂಭುವನ್ನೂ, ಇಷ್ಟದೇವತೆಯಾದ ಬ್ರಹ್ಮ- ವಿಷ್ಣು, ಮುಂತಾದವರನ್ನೂ ತನಗೆ ಜನ್ಮದಾತೃವಾದ ಕಶ್ಯಪನನ್ನೂ ಸ್ಮರಿಸಿಕೊಂಡಳು.

೫೩. ಅವಳ ಭಕ್ತಿಗೆ ಮೆಚ್ಚಿ ಶ್ರೀಕೃಷ್ಣಪರಮಾತ್ಮನೂ, ಶಂಕರನೂ, ಬ್ರಹ್ಮನೂ, ಕಶ್ಯಪನೂ, ಅಲ್ಲಿಗೆ ಬಂದರು.

೫೪. ತನ್ನ ಇಷ್ಟದೇವತೆಯೂ, ನಿರ್ಗುಣನೂ, ಪ್ರಕೃತಿಗಿಂತ ಶ್ರೇಷ್ಠನೂ ಆದ ಪರಮಾತ್ಮನನ್ನು ಆಕೆಯೂ ಪರಮಭಕ್ತಿಯಿಂದ ಸ್ತುತಿಸಿ ಮತ್ತೆ ಮತ್ತೆ ನಮಸ್ಕರಿಸಿದಳು.

೫೫. ಈಶ್ವರನೂ ಕೂಡ ಬ್ರಹ್ಮ ಮತ್ತು ಕಶ್ಯಪರಿಗೆ ನಮಸ್ಕರಿಸಿ, ಇಲ್ಲಿಯವರೆಗೆ ತಾವು ಬಂದುದೇನು ? ಎಂದು ಪ್ರಶ್ನಿಸಿದನು.

ಬ್ರಹ್ಮಾ ತದ್ವಚನಂ ಶ್ರುತ್ವಾ ಸಹಸಾ ಸಮಯೋಚಿತಂ ।
ತಮುವಾಚ ನಮಸ್ಕೃತ್ಯ ಹೃಷೀಕೇಶಪದಾಂಬುಜಂ ॥ ೫೬ ॥

ಯದಿ ತ್ಯಕ್ತಾ ಧರ್ಮಪತ್ನೀ ಧರ್ಮಿಷ್ಠಾ ಮನಸಾ ಸತೀ ।
ಕುರುಷ್ವಾಸ್ಯಾಂ ಸುತೋತ್ಪತ್ತಿಂ ಧರ್ಮಸಂಸ್ಥಾಪನಾಯ ವೈ ॥ ೫೭ ॥

ಯತಿರ್ವಾ ಬ್ರಹ್ಮಚಾರೀ ವಾ ಭಿಕ್ಷುರ್ವನಚರೋಽಪಿ ವಾ ।
ಜಾಯಾಯಾಂ ಚ ಸುತೋತ್ಪತ್ತಿಂ ಕೃತ್ವಾ ಪಶ್ಚಾದ್ಭವೇನ್ಮುನಿಃ ॥ ೫೮ ॥

ಅಕೃತ್ವಾ ತು ಸುತೋತ್ಪತ್ತಿಂ ವಿರಾಗೀ ಯಸ್ತ್ಯಜೇತ್ಪ್ರಿಯಾಂ ।
ಸ್ರವೇತ್ತಪಸ್ತತ್ಪುಣ್ಯಂ ಚ ಚಾಲಿನ್ಯಾಂ ಚ ಯಥಾ ಜಲಂ ॥ ೫೯ ॥

ಬ್ರಹ್ಮಣೋ ವಚನಂ ಶ್ರುತ್ವಾ ಜರತ್ಕಾರುರ್ಮುನೀಶ್ವರಃ ।
ಚಕ್ರೇ ತನ್ನಾಭಿಸಂಸ್ಪರ್ಶಂ ಯೋಗಾದ್ವೈ ಮಂತ್ರಪೂರ್ವಕಂ ॥ ೬೦ ॥

---

೫೬. ಶಂಕರನ ಮಾತನ್ನು ಕೇಳಿದ ಬ್ರಹ್ಮನು ಪ್ರಶ್ನೆಯ ಅರ್ಥವನ್ನು ತಿಳಿದು ಶ್ರೀಕೃಷ್ಣಪರಮಾತ್ಮನ ಪಾದಗಳಿಗೆ ವಂದಿಸಿ, ಕಾಲೋಚಿತವಾಗಿ ಆ ಮಹರ್ಷಿಯನ್ನು ಕುರಿತಿಂತೆಂದನು.

೫೭. ಎಲೈ ಜರತ್ಕಾರುಮಹರ್ಷಿಯೇ, ನಿನ್ನ ಧರ್ಮಪತ್ನಿಯೂ, ಧರ್ಮಪರಾಯಣಳೂ, ಪತಿವ್ರತೆಯೂ ಆದ ಮನಸಾದೇವಿಯನ್ನು ನೀನು ತ್ಯಜಿಸಿದೆಯಾದರೆ ಧರ್ಮಪರಿಪಾಲನೆಗಾಗಿ ನಿನ್ನ ಪತ್ನಿಯಲ್ಲಿ ಸುತೋತ್ಪತ್ತಿಯಾಗುವಂತೆ ಮಾಡು.

೫೮. ಯತಿಯಾಗಲೀ, ಬ್ರಹ್ಮಚಾರಿಯಾಗಲೀ, ಭಿಕ್ಷುವಾಗಲೀ, ವಾನಪ್ರಸ್ಥನಾಗಲೀ, ವಿವಾಹಿತನಾದ ಮೇಲೆ ತನ್ನ ಪತ್ನಿಯಲ್ಲಿ ಸುತೋತ್ಪತ್ತಿಯನ್ನು ಮಾಡಿದ ನಂತರವೇ (ಮುನಿ) ಸಂನ್ಯಾಸಿಯಾಗಬೇಕು.

೫೯. ತನ್ನ ಪತ್ನಿಯಲ್ಲಿ ಸುತೋತ್ಪತ್ತಿಯನ್ನು ಪಡೆಯದೆ ವೈರಾಗ್ಯವನ್ನು ತಾಳಿ ಹೆಂಡತಿಯನ್ನು ಬಿಡುವವನ ಧರ್ಮಕಾರ್ಯಗಳೂ ಮತ್ತು ಪುಣ್ಯಫಲಗಳೂ, ವಂದರಿಯೊಳಗಿನ ನೀರು ಸುರಿದು ಹೋಗುವಂತೆ ಕ್ಷಣದೊಳಗೆ ನಾಶವಾಗುವುದು.

೬೦. ಬ್ರಹ್ಮನ ಮಾತನ್ನು ಕೇಳಿ ಮುನಿಶ್ರೇಷ್ಠನಾದ ಜರತ್ಕಾರುವು ಯೋಗಶಕ್ತಿಯಿಂದ ಮಂತ್ರಪೂರ್ವಕವಾಗಿ ಆಕೆಯ ನಾಭಿಪ್ರದೇಶವನ್ನು ಮುಟ್ಟಿದನು.

ತಸ್ಯೈ ಶುಭಾಶಿಷಂ ದತ್ವಾ ಯಯುರ್ದೇವಾ ಮುದಾನ್ವಿತಾಃ ।
ಮುದಾನ್ವಿತಾ ಚ ಮನಸಾ ಜರತ್ಕಾರುರ್ಮುದಾನ್ವಿತಃ ॥ ೬೧ ॥

ಮುನೇಃ ಕರಸ್ಪರ್ಶಮಾತ್ರಾತ್ಸದ್ಯೋ ಗರ್ಭೋ ಬಭೂವ ಹ ।
ಮನಸಾಯಾ ಮುನಿಶ್ರೇಷ್ಠ ಮುನಿಶ್ರೇಷ್ಠ ಉವಾಚ ತಾಂ ॥ ೬೨ ॥

॥ ಜರತ್ಕಾರುರುವಾಚ ॥

ಗರ್ಭೇಣಾನೇನ ಮನಸೇ ತವ ಪುತ್ರೋ ಭವಿಷ್ಯತಿ ।
ಜಿತೇಂದ್ರಿಯಾಣಾಂ ಪ್ರವರೋ ಧರ್ಮಿಷ್ಠೋ ವೈಷ್ಣವಾಗ್ರಣೀಃ ॥ ೬೩ ॥

ತೇಜಸ್ವೀ ಚ ತಪಸ್ವೀ ಚ ಯಶಸ್ವೀ ಚ ಗುಣಾನ್ವಿತಃ ।
ವರೋ ವೇದವಿದಾಂ ಚೈವ ಯೋಗಿನಾಂ ಜ್ಞಾನಿನಾಂ ತಥಾ ॥ ೬೪ ॥

ಸ ಚ ಪುತ್ರೋ ವಿಷ್ಣುಭಕ್ತೋ ಧಾರ್ಮಿಕಃ ಕುಲಮುದ್ಧರೇತ್ ।
ನೃತ್ಯಂತಿ ಪಿತರಃ ಸರ್ವೇ ಜನ್ಮಮಾತ್ರೇಣ ವೈ ಮುದಾ ॥ ೬೫ ॥

---

೬೧. ಅನಂತರ ದೇವತೆಗಳೆಲ್ಲ ಆಕೆಗೆ ಮಂಗಳಾಶೀರ್ವಾದವನ್ನು ಅನುಗ್ರಹಿಸಿ ಸಂತುಷ್ಟರಾಗಿ ಹಿಂತಿರುಗಿದರು. ಇತ್ತ ಮನಸಾದೇವಿಯೂ ಜರತ್ಕಾರುಮುನಿಯೂ ಸಂತುಷ್ಟರಾದರು.

೬೨. ಎಲೈ ನಾರದನೇ, ತನ್ನ ಪತಿದೇವನ ಕರಸ್ಪರ್ಶಮಾತ್ರದಿಂದಲೇ ಮನಸಾದೇವಿಯು ಗರ್ಭಿಣಿಯಾದಳು. ಅನಂತರ ಮುನಿಶ್ರೇಷ್ಠನಾದ ಜರತ್ಕಾರುವು ಅವಳಿಗೆ ಇಂತು ಹೇಳಿದನು.

೬೩. ಎಲೌ ಮನಸಾದೇವಿಯೇ, ಈ ಗರ್ಭದಲ್ಲಿ ನಿನಗೆ ಇಂದ್ರಿಯ ನಿಗ್ರಹ ಪರನೂ, ಧರ್ಮಿಷ್ಠನೂ, ವೈಷ್ಣವರಲ್ಲಿ ಶ್ರೇಷ್ಠನೂ ಆದ ಪುತ್ರನು ಜನಿಸುವನು.

೬೪. ತಪಸ್ವಿಯೂ, ತೇಜಸ್ವಿಯೂ, ಕೀರ್ತಿವಂತನೂ, ಗುಣವಂತನೂ ಆದ ಆ ಮಗನು ವೇದಜ್ಞರಿಗೂ, ಯೋಗಿಗಳಿಗೂ, ಜ್ಞಾನಿಗಳಿಗೂ ಶ್ರೇಷ್ಠನೆನಿಸಿರುವನು.

೬೫. ಆ ಪುತ್ರನು ವಿಷ್ಣುಭಕ್ತನೂ, ಧರ್ಮಿಷ್ಠನೂ, ಆಗಿ ನಿಮ್ಮ ಕುಲವನ್ನು ದ್ಧರಿಸುವನು. ಆ ಬಾಲಕನ ಜನನ ಮಾತ್ರದಿಂದಲೇ ಪಿತೃದೇವತೆಗಳೆಲ್ಲರೂ ಸಂತೋಷದಿಂದ ಕುಣಿದಾಡುವರು.

ಪತಿವ್ರತಾ ಸುಶೀಲಾ ಯಾ ಸಪ್ರಿಯಾ ಪ್ರಿಯವಾದಿನೀ ।
ಧರ್ಮಿಷ್ಠಾ ಪುತ್ರಮಾತಾ ಚ ಕುಲಜಾ ಕುಲಪಾಲಿಕಾ ॥ ೬೬ ॥

ಹರಿಭಕ್ತಿಪ್ರದೋ ಬಂಧುಸ್ತದಿಷ್ಟಂ ಯತ್ಸುಖಪ್ರದಂ ।
ಯೋ ಬಂಧಚ್ಛಿತ್ಸ ಚ ಪಿತಾ ಹರೇರ್ವರ್ತ್ಮಪ್ರದರ್ಶಕಃ ॥ ೬೭ ॥

ಸಾ ಗರ್ಭಧಾರಿಣೀ ಯಾ ಚ ಗರ್ಭವಾಸವಿಮೋಚಿನೀ ।
ವಿಷ್ಣುಮಂತ್ರಪ್ರದಾತಾ ಚ ಸ ಗುರುರ್ವಿಷ್ಣುಭಕ್ತಿದಃ ॥ ೬೮ ॥

ಗುರುಶ್ಚ ಜ್ಞಾನದಾತಾ ಚ ತಜ್ಜ್ಞಾನಂ ಕೃಷ್ಣಭಾವನಂ ।
ಆಬ್ರಹ್ಮಸ್ತಂಬಪರ್ಯಂತಂ ಯತೋ ವಿಶ್ವಂ ಚರಾಚರಂ ॥ ೬೯ ॥

ಆವಿರ್ಭೂತಂ ತಿರೋಭೂತಂ ಕಿಂ ವಾ ಜ್ಞಾನಂ ತದನ್ಯತಃ ।
ವೇದಜಂ ಯೋಗಜಂ ಯದ್ಯತ್ತತ್ಸಾರಂ ಹರಿಸೇವನಂ ॥ ೭೦ ॥

---

೬೬. ಪತಿವ್ರತೆಯೂ, ಸುಶೀಲೆಯೂ, ಪ್ರಿಯನುಡಿಯಾಡುವವಳೂ, ಧರ್ಮಿಷ್ಠೆಯೂ, ಪುತ್ರಮಾತೆಯೂ, ಆದ ಸ್ತ್ರೀಯೇ ಸತ್ಕುಲಪ್ರಸೂತಳೂ, ಕುಲಪಾಲಿಕೆಯೂ ಎನಿಸುವಳು.

೬೭. ಹರಿಭಕ್ತಿಯನ್ನುಂಟುಮಾಡಿಕೊಡುವವನೇ ಬಂಧುವು. ನಮಗೆ ಸುಖದಾಯಕವಾದುದೇ ಇಷ್ಟವೆನಿಸುವುದು. ಸಂಸಾರ ಬಂಧನವನ್ನು ತಪ್ಪಿಸಿ ಪರಮಾತ್ಮನಿರುವ ಮಾರ್ಗವನ್ನು ತೋರಿಸಿ ಕೊಡುವವನೇ ತಂದೆಯೆನಿಸಿಕೊಳ್ಳುವನು.

೬೮. ಜಂತುವಿಗೆ ಗರ್ಭವಾಸಕಷ್ಟವನ್ನು ಪರಿಹರಿಸುವವಳೇ ಗರ್ಭಧಾರಣೆಗೆ ಉಚಿತಳಾದವಳು. ವಿಷ್ಣುಮಂತ್ರೋಪದೇಶವನ್ನೂ, ವಿಷ್ಣುಭಕ್ತಿಯನ್ನೂ ಕೊಡುವವನೇ ಗುರುವೆನಿಸುವನು.

೬೯. ಗುರುವು ಜ್ಞಾನದಾಯಕನು. ಶ್ರೀಕೃಷ್ಣಪರಮಾತ್ಮನನ್ನು ಅನವರತ ಧ್ಯಾನಿಸುವುದೇ 'ಜ್ಞಾನ'ವೆನಿಸುವುದು. ಆ ಪರಮಾತ್ಮನಿಂದಲೇ ಬ್ರಹ್ಮನಿಂದ ಒಂದು ಹುಲ್ಲುಗರಿಕೆಯವರೆಗೆ ಚರಾಚರಾತ್ಮಕವಾದ ಸಕಲ ಪ್ರಪಂಚವೂ ಉತ್ಪತ್ತಿಯಾದುದು.

೭೦. ಆ ಪರಮಾತ್ಮನ ದಿವ್ಯಜ್ಞಾನವುಂಟಾದ ಮೇಲೆ ಆವಿರ್ಭಾವತಿರೋಭಾವಗಳಾವುದೂ ಇಲ್ಲ. ವೇದದಲ್ಲಿಯೂ, ಯೋಗದಲ್ಲಿಯೂ, ಶ್ರೀಹರಿಯ ಸೇವೆಯೇ ಸಾರವಾದುದೆಂದು ಹೇಳಿರುವುದು.

ತತ್ತ್ವಾನಾಂ ಸಾರಭೂತಂ ಚ ಹರೇರನ್ಯದ್ವಿಡಂಬನಂ ।
ದತ್ತಂ ಜ್ಞಾನಂ ಮಯಾ ತುಭ್ಯಂ ಸ ಸ್ವಾಮೀ ಜ್ಞಾನದೋ ಹಿ ಯಃ ॥ ೭೧ ॥

ಜ್ಞಾನಾತ್ಪ್ರಮುಚ್ಯತೇ ಬಂಧಾತ್ಸ ರಿಪುರ್ಯೋ ಹಿ ಬಂಧದಃ ।
ವಿಷ್ಣುಭಕ್ತಿಯುತಂ ಜ್ಞಾನಂ ಯೋ ದದಾತಿ ಹಿ ಸೋ ಗುರುಃ ॥ ೭೨ ॥

ಸ ರಿಪುಃ ಶಿಷ್ಯಘಾತೀ ಚ ಯತೋ ಬಂಧಾನ್ನ ಮೋಚಯೇತ್ ।
ಜನನೀಗರ್ಭಜಾತ್ಕ್ಲೇಶಾದ್ಯಮತಾಡನಜಾತ್ತಥಾ ॥ ೭೩ ॥

ಸ ಮೋಚಯೇದ್ಯಃ ಸ ಕಥಂ ಗುರುಸ್ತಾತೋ ಹಿ ಬಾಂಧವಃ ।
ಪರಮಾನಂದರೂಪಂ ಚ ಕೃಷ್ಣಮಾರ್ಗಮನಶ್ವರಂ ॥ ೭೪ ॥

---

೭೧. ತತ್ತ್ವಗಳಿಗೆಲ್ಲ ಶ್ರೀಹರಿಯೇ ಸಾರಭೂತನಾದವನು. ಉಳಿದುದೆಲ್ಲ ಕೇವಲ ಕ್ಷಣಿಕವು. ನಾನು ನಿನಗೆ ದಿವ್ಯಜ್ಞಾನವನ್ನು ಉಪದೇಶಿಸಿದೆನು. ಜ್ಞಾನವನ್ನು ಬೋಧಿಸುವವನೇ ನಿಜವಾದ ಪತಿಯೆನಿಸುವನು.

೭೨. ದಿವ್ಯಜ್ಞಾನೋದಯವಾದರೆ ಸಾಂಸಾರಿಕ ಬಂಧನದಿಂದ ಮುಕ್ತಿಯುಂಟಾಗುವುದು. ಸಂಸಾರ ಬಂಧನವನ್ನೊದಗಿಸುವವನೇ ಶತ್ರುವೆನಿಸುವನು. ವಿಷ್ಣುಭಕ್ತಿಸಹಿತವಾದ ಜ್ಞಾನವನ್ನು ಬೋಧಿಸುವವನೇ ಗುರುವೆನಿಸಿಕೊಳ್ಳುವನು.

೭೩. ತಾಯಿಯ ಗರ್ಭವಾಸರೂಪವಾದ ಕಷ್ಟದಿಂದಲೂ, ಯಮನ ಕಠಿಣ ಶಿಕ್ಷೆಯಿಂದಲೂ, ಸಂಸಾರಬಂಧನದಿಂದಲೂ, ಪರಿಹಾರಮಾಡಿಕೊಡದವನು ಶತ್ರುವೂ ಶಿಷ್ಯಘಾತುಕನೂ ಆಗುವನು.

೭೪. ಸಾಂಸಾರಿಕ ಕಷ್ಟಗಳಿಂದ ಬಿಡಿಸದವನು, ಗುರು, ತಂದೆ, ಬಂಧು ಎನಿಸಿಕೊಳ್ಳಲು ಯೋಗ್ಯನಲ್ಲ. ಪರಮಾನಂದಮಯವೂ, ಶಾಶ್ವತವೂ ಆದ ಶ್ರೀಕೃಷ್ಣ ಪರಮಾತ್ಮನ ಪರಮಪದವಿಯನ್ನು ತೋರಿಸದವನು ಹೇಗೆ ಬಂಧುವೆನಿಸಿಕೊಳ್ಳುವನು ?

ನ ದರ್ಶಯೇದ್ಯಃ ಸ ಕಥಂ ಕೀದೃಶೋ ಬಾಂಧವೋ ನೃಣಾಂ ।
ಭಜ ಸಾಧ್ವಿ ಪರಂ ಬ್ರಹ್ಮಾಚ್ಯುತಂ ಕೃಷ್ಣಂ ಚ ನಿರ್ಗುಣಂ ।
ನಿರ್ಮೂಲಂ ಚ ಪುರಾ ಕರ್ಮ ಭವೇದ್ಯತ್ಸೇವಯಾ ಧ್ರುವಂ ॥ ೭೫ ॥

ಮಯಾ ಛಲೇನ ತ್ವಂ ತ್ಯಕ್ತಾ ದೋಷಂ ಮೇ ಕ್ಷಮ್ಯತಾಂ ಪ್ರಿಯೇ ।
ಕ್ಷಮಾಯುತಾನಾಂ ಸಾಧ್ವೀನಾಂ ಸತ್ವಾತ್ಕ್ರೋಧೋ ನ ವಿದ್ಯತೇ ॥ ೭೬ ॥

ಪುಷ್ಕರೇ ತಪಸೇ ಯಾಮಿ ಗಚ್ಛ ದೇವಿ ಯಥಾ ಸುಖಂ ।
ಶ್ರೀಕೃಷ್ಣಚರಣಾಂಭೋಜೇ ಧ್ಯಾನವಿಚ್ಛೇದಕಾತರಃ ॥ ೭೭ ॥

ಧನಾದಿಷು ಸ್ತ್ರಿಯಾಂ ಪ್ರೀತಿಃ ಪ್ರವೃತ್ತಿಪಥಗಾಮಿನಾಂ ।
ಶ್ರೀಕೃಷ್ಣಚರಣಾಂಭೋಜೇ ನಿಸ್ಪೃಹಾಣಾಂ ಮನೋರಥಾಃ ॥ ೭೮ ॥

---

೭೫. ಆದುದರಿಂದ ಎಲೌ ಸಾಧ್ವೀಶಿರೋಮಣಿಯೇ, ನಿರ್ಗುಣನೂ, ನಾಶ ರಹಿತನೂ, ಯಾರ ಸೇವೆಯಿಂದ ನಮ್ಮ ಜನ್ಮಾಂತರ ಕರ್ಮವು ನಿಶ್ಚಿತವಾಗಿಯೂ ನಶಿಸುವುದೋ ಅಂಥ ಶ್ರೀಕೃಷ್ಣಪರಮಾತ್ಮನನ್ನು ಭಜಿಸು.

೭೬. ನಾನು ಹಠಸಾಧಿಸಲು ನಿನ್ನನ್ನು ತ್ಯಜಿಸಿದೆ, ಎಲೌ ಪ್ರಿಯಳೇ, ನನ್ನ ದೋಷವನ್ನು ಕ್ಷಮಿಸು. ಸತ್ವಗುಣಪ್ರಧಾನರಾದ ಸಾಧ್ವೀಮಣಿಯರು ಕ್ಷಮಾಶೀಲೆಯರಾದುದರಿಂದ ಅವರಿಗೆ ಎಂದಿಗೂ ಯಾರ ವಿಷಯದಲ್ಲೂ ಕೋಪವಿರುವುದಿಲ್ಲ.

೭೭. ಎಲೌ ದೇವಿಯೇ, ನೀನು ಸುಖವಾಗಿ ಹಿಂತಿರುಗು. ನಾನು ಶ್ರೀಕೃಷ್ಣ ಪರಮಾತ್ಮನ ಪಾದಾರವಿಂದಗಳನ್ನು ಧ್ಯಾನಿಸದೆ ಅರಘಳಿಗೆಯೂ ಇರಲಾರೆನಾದುದರಿಂದ ಪುಷ್ಕರ ಕ್ಷೇತ್ರದಲ್ಲಿ ತಪಸ್ಸುಮಾಡಲು ಹೋಗುವೆನು.

೭೮. ಪ್ರವೃತ್ತಿಮಾರ್ಗದಲ್ಲಿ ತೊಡಗಿರುವ ಸ್ತ್ರೀಯರು ಮುಂತಾದವರಿಗೆ ಧನ ಕನಕಾದಿಗಳಲ್ಲಿ ಪ್ರೀತಿಯಿರುವುದು. ನಿವೃತ್ತಿಮಾರ್ಗದಲ್ಲಿ ತೊಡಗಿರುವವರ ಮನೋರಥವೆಲ್ಲ ಶ್ರೀಕೃಷ್ಣಪರಮಾತ್ಮನ ಪಾದಾರವಿಂದಗಳಲ್ಲಿ ನೆಲೆಸಿರುವುದು.

ಜರತ್ಕಾರುವಚಃ ಶ್ರುತ್ವಾ ಮನಸಾ ಶೋಕಕಾತರಾ ।
ಸಾ ಸಾಶ್ರುನೇತ್ರಾ ವಿನಯಾದುವಾಚ ಪ್ರಾಣವಲ್ಲಭಂ ॥ ೭೯ ॥

॥ ಮನಸೋವಾಚ ॥

ದೋಷೇಣಾಹಂ ತ್ವಯಾ ತ್ಯಕ್ತಾ ನಿದ್ರಾಭಂಗೇನ ತೇ ಪ್ರಭೋ ।
ಯತ್ರ ಸ್ಮರಾಮಿ ತ್ವಾಂ ಬಂಧೋ ತತ್ರ ಮಾಮಾಗಮಿಷ್ಯಸಿ ॥ ೮೦ ॥

ಬಂಧುಭೇದಃ ಕ್ಲೇಶತಮಃ ಪುತ್ರಭೇದಸ್ತತಃ ಪರಃ ।
ಪ್ರಾಣೇಶಭೇದಃ ಪ್ರಾಣಾನಾಂ ವಿಚ್ಛೇದಾತ್ಸರ್ವತಃ ಪರಃ ॥ ೮೧ ॥

ಪತಿಃ ಪತಿವ್ರತಾನಾಂ ಚ ಶತಪುತ್ರಾಧಿಕಃ ಪ್ರಿಯಃ ।
ಸರ್ವಸ್ಮಾಚ್ಚ ಪ್ರಿಯಃ ಸ್ತ್ರೀಣಾಂ ಪ್ರಿಯಸ್ತೇನೋಚ್ಯತೇ ಬುಧೈಃ ॥ ೮೨ ॥

---

೭೯. ಈ ರೀತಿ ಹೇಳಿದ ಜರತ್ಕಾರುವಿನ ಮಾತನ್ನು ಕೇಳಿ, ದುಃಖದಿಂದ ಕಾತರಳಾದ ಮನಸಾದೇವಿಯು, ಅಶ್ರುಪೂರಿತಲೋಚನಳಾಗಿ ವಿನಯದಿಂದ ತನ್ನ ಪತಿಯನ್ನು ಕುರಿತಿಂತೆಂದಳು.

೮೦. ಮನಸಾ:—ಎಲೈ ಪತಿದೇವನೇ, ನಿನ್ನ ನಿದ್ರೆಯನ್ನು ನಾನು ಭಂಗಗೊಳಿಸಿದ ದೋಷಕ್ಕಾಗಿ ನೀನು ನನ್ನನ್ನು ತ್ಯಜಿಸಿದೆ. ಹೋಗಲಿ. ನಾನು ಎಲ್ಲಿ ಯಾವಾಗ ನಿನ್ನನ್ನು ಸ್ಮರಿಸಿದರೂ ಕೃಪೆಮಾಡಿ ನೀನು ಆಗ ನನ್ನ ಸಮೀಪಕ್ಕೆ ಬರಬೇಕು.

೮೧. ಬಂಧುಗಳನ್ನಗಲಿರುವುದೇ ಬಹಳ ಕಷ್ಟ. ಅದರಲ್ಲೂ ಮಗನನ್ನು ಅಗಲಿರುವುದು ಇನ್ನೂ ಕಷ್ಟತರವಾದುದು. ಪ್ರಾಣಪತಿಯನ್ನು ಬಿಟ್ಟು ಜೀವಿಸುವುದೆಂದರೆ ಪ್ರಾಣತ್ಯಾಗಕ್ಕಿಂತಲೂ ಕಷ್ಟತಮವೆನಿಸುವುದು.

೮೨. ಪತಿವ್ರತಾಸ್ತ್ರೀಯರಿಗೆ ನೂರುಜನ ಮಕ್ಕಳಿಗಿಂತಲೂ ಪತಿಯೇ ಅತ್ಯಂತ ಪ್ರೀತಿಪಾತ್ರನು. ಸ್ತ್ರೀಯರಿಗೆ ಎಲ್ಲಕ್ಕಿಂತಲೂ ಪ್ರೀತಿಪಾತ್ರನಾದುದರಿಂದಲೇ ಪ್ರಿಯನೆಂದು ಪಂಡಿತರು ಆತನನ್ನು ಕರೆವರು.

ಪುತ್ರೇ ಯಥೈಕಪುತ್ರಾಣಾಂ ವೈಷ್ಣವಾನಾಂ ಯಥಾ ಹರೌ ।
ನೇತ್ರೇ ಯಥೈಕನೇತ್ರಾಣಾಂ ತೃಷಿತಾನಾಂ ಯಥಾ ಜಲೇ ॥ ೮೩ ॥

ಕ್ಷುಧಿತಾನಾಂ ಯಥಾನ್ನೇ ಚ ಕಾಮುಕಾನಾಂ ಯಥಾ ಸ್ತ್ರಿಯಾಂ ।
ಯಥಾ ಪರಸ್ವೇ ಚೌರಾಣಾಂ ಯಥಾ ಜಾರೇ ಕುಯೋಷಿತಾಂ ॥ ೮೪ ॥

ವಿದುಷಾಂ ಚ ಯಥಾ ಶಾಸ್ತ್ರೇ ವಾಣಿಜ್ಯೇ ವಣಿಜಾಂ ಯಥಾ ।
ತಥಾ ಶಶ್ವನ್ಮನಃ ಕಾಂತೇ ಸಾಧ್ವೀನಾಂ ಯೋಷಿತಾಂ ಪ್ರಭೋ ॥ ೮೫ ॥

ಇತ್ಯುಕ್ತ್ವಾ ಮನಸಾ ದೇವೀ ಪಪಾತ ಸ್ವಾಮಿನಃ ಪದೇ ।
ಕ್ಷಣಂ ಚಕಾರ ಕ್ರೋಡೇ ತಾಂ ಕೃಪಯಾ ಚ ಕೃಪಾನಿಧಿಃ ॥ ೮೬ ॥

ನೇತ್ರೋದಕೇನ ಮನಸಾಂ ಸ್ನಾಪಯಾಮಾಸ ತಾಂ ಮುನಿಃ ।
ಸಾಶ್ರುಣಾ ಚ ಮುನೇಃ ಕ್ರೋಡೇ ಸಿಷೇವೇ ಭೇದಕಾತರಾ ॥ ೮೭ ॥

೮೩–೮೪. ಏಕಮಾತ್ರ ಪುತ್ರನುಳ್ಳ ತಾಯಿತಂದೆಯರಿಗೆ ತಮ್ಮ ಪುತ್ರನಲ್ಲೂ ವಿಷ್ಣುಭಕ್ತರಿಗೆ ಶ್ರೀಹರಿಯಲ್ಲೂ, ಒಂದೇ ಕಣ್ಣುಳ್ಳವರಿಗೆ ತಮ್ಮ ಕಣ್ಣಿನಲ್ಲೂ, ಬಾಯಾರಿದವರಿಗೆ ನೀರಿನಲ್ಲೂ, ಹಸಿದವರಿಗೆ ಅನ್ನದಲ್ಲೂ, ಕಾಮುಕನಿಗೆ ಹೆಂಗಸಿನಲ್ಲೂ, ಕಳ್ಳರಿಗೆ ಪರಸ್ವತ್ತಿನಲ್ಲೂ, ಕೆಟ್ಟಹೆಂಗಸಿಗೆ ಜಾರನಲ್ಲೂ ಪ್ರೀತಿಯಿರುವಂತೆ ನನಗೆ ನಿನ್ನಲ್ಲಿ ಅಚಲವಾದ ಪ್ರೀತಿಯಿದೆ.

೮೫. ಎಲೈ ಪ್ರಭುವೇ, ವಿದ್ವಾಂಸರಿಗೆ ಶಾಸ್ತ್ರದಲ್ಲೂ, ವರ್ತಕರಿಗೆ ವ್ಯಾಪಾರದಲ್ಲೂ ಆಸಕ್ತಿಯಿರುವಂತೆ, ಪತಿವ್ರತಾಸ್ತ್ರೀಯರಿಗೆ ಯಾವಾಗಲೂ ತಮ್ಮ ಪತಿಯಲ್ಲಿಯೇ ಮನಸ್ಸಿರುವುದು.

೮೬. ಹೀಗೆ ಹೇಳುತ್ತ ಆ ಮನಸಾದೇವಿಯು ತನ್ನ ಪತಿಯ ಪಾದಾರವಿಂದಗಳಿಗೆರಗಿದಳು. ದಯಾಮಯನಾದ ಅವಳ ಪತಿಯು ದಯೆತೋರಿ ಆಕೆಯನ್ನು ಕ್ಷಣಕಾಲ ತನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಂಡನು.

೮೭. ಅಲ್ಲದೆ ಆ ಜರತ್ಕಾರುಮಹರ್ಷಿಯು ಕಣ್ಣೀರಿನಿಂದ ಆಕೆಯ ದೇಹವನ್ನೆಲ್ಲಾ ನೆನಸಿದನು. ವಿರಹಕಾತರಳಾದ ಆ ದೇವಿಯೂ ಕೂಡ ಪತಿಯ ವಕ್ಷಃಸ್ಥಲವನ್ನು ದೃಢವಾಗಿ ಅಪ್ಪಿಕೊಂಡಳು.

ತದಾ ಜ್ಞಾನೇನ ತೌ ದ್ವೌ ಚ ವಿಶೋಕೌ ಚ ಬಭೂವತುಃ ।
ಸ್ಮಾರಂ ಸ್ಮಾರಂ ಪದಾಂಭೋಜಂ ಕೃಷ್ಣಸ್ಯ ಪರಮಾತ್ಮನಃ ॥ ೮೮ ॥

ಜಗಾಮ ತಪಸೇ ವಿಪ್ರಃ ಸ ಕಾಂತಾಂ ಸುಪ್ರಬೋಧ್ಯ ಚ ।
ಜಗಾಮ ಮನಸಾ ಶಂಭೋಃ ಕೈಲಾಸಂ ಮಂದಿರಂ ಗುರೋಃ ॥ ೮೯ ॥

ಪಾರ್ವತೀ ಬೋಧಯಾಮಾಸ ಮನಸಾಂ ಶೋಕಕರ್ಶಿತಾಂ ।
ಶಿವಶ್ಚ ತೀವ್ರಜ್ಞಾನೇನ ಶಿವೇನ ಚ ಶಿವಾಲಯೇ ॥ ೯೦ ॥

ಸುಪ್ರಶಸ್ತೇ ದಿನೇ ಸಾಧ್ವೀ ಸುಷುವೇ ಮಂಗಲೇ ಕ್ಷಣೇ ।
ನಾರಾಯಣಾಂಶಂ ಪುತ್ರಂ ಚ ಜ್ಞಾನಿನಾಂ ಯೋಗಿನಾಂ ಗುರುಂ ॥ ೯೧ ॥

ಗರ್ಭಸ್ಥಿತೋ ಮಹಾಜ್ಞಾನಂ ಶ್ರುತ್ವಾ ಶಂಕರವಕ್ತ್ರತಃ ।
ಸ ಬಭೂವ ಮಹಾಯೋಗೀ ಯೋಗಿನಾಂ ಜ್ಞಾನಿನಾಂ ಗುರುಃ · ॥ ೯೨ ॥

---

೮೮. ಆಗ ಅವರಿಬ್ಬರಿಗೂ ಜ್ಞಾನೋದಯವಾಗಿ, ಶ್ರೀಕೃಷ್ಣಪರಮಾತ್ಮನ ಪಾದಕಮಲಗಳನ್ನು ನೆನಸಿಕೊಳ್ಳುತ್ತಾ, ತಮ್ಮ ತಮ್ಮ ದುಃಖವನ್ನು ಮರೆತರು.

೮೯. ಆನಂತರ ಜರತ್ಕಾರುವು ತನ್ನ ಪತ್ನಿಗೆ ತಿಳಿವಳಿಕೆ ಹೇಳಿ ತಾಸು ತಪಸ್ಸಿಗೆ ಹೋದನು. ಇತ್ತ ಮನಸಾದೇವಿಯೂ ಕೂಡ ತನ್ನ ಗುರುವಾದ ಶಂಕರನ ಕೈಲಾಸಮಂದಿರಕ್ಕೆ ತೆರಳಿದಳು.

೯೦. ಅಲ್ಲಿ ದುಃಖಿತಳಾದ ಮನಸಾದೇವಿಯನ್ನು ಪಾರ್ವತೀದೇವಿಯೂ, ಪರಮೇಶ್ವರನೂ ಕೂಡ ದಿವ್ಯನುಡಿಗಳಿಂದ ಸಮಾಧಾನಗೊಳಿಸಿ ತಮ್ಮ ಮಂದಿರದಲ್ಲಿಯೇ ಸುಖವಾಗಿರುವಂತೆ ಹೇಳಿದರು.

೯೧. ಆ ಸಾಧ್ವೀಶಿರೋಮಣಿಯೂ ಕೂಡ ಅಲ್ಲಿಯೇ ಒಂದು ಶುಭದಿವಸದ ಶುಭಕ್ಷಣದಲ್ಲಿ ಜ್ಞಾನಿಗಳಿಗೂ, ಯೋಗಿಗಳಿಗೂ ಶ್ರೇಷ್ಠನೂ ನಾರಾಯಣಾಂಶಸಂಭೂತನೂ ಆದ ತನಯನನ್ನು ಪ್ರಸುವಿಸಿದಳು.

೯೨. ಆ ಶಿಶುವು ಗರ್ಭದಲ್ಲಿರುವಾಗಲೇ ಶಂಕರನ ಬಾಯಿನಿಂದ ಜ್ಞಾನೋಪದೇಶವನ್ನು ಪಡೆದು ಯೋಗಿಗಳಿಗೂ ಗುರುವೆನಿಸಿದ ಮಹಾಯೋಗಿಯಾದನು.

ಜಾತಕಂ ಕಾರಯಾಮಾಸ ವಾಚಯಾಮಾಸ ಮಂಗಲಂ |
ವೇದಾಂಶ್ಚ ಪಾಠಯಾಮಾಸ ಶಿವಾಯ ಚ ಶಿವಃ ಶಿಶೋಃ　　|| ೯೩ ||

ರತ್ನತ್ರಿಕೋಟಿಲಕ್ಷಂ ಚ ಬ್ರಾಹ್ಮಣೇಭ್ಯೋ ದದೌ ಶಿವಃ |
ಪಾರ್ವತೀ ಚ ಗವಾಂ ಲಕ್ಷಂ ರತ್ನಾನಿ ವಿವಿಧಾನಿ ಚ　　|| ೯೪ ||

ಶಂಭುಶ್ಚ ಚತುರೋ ವೇದಾನ್ವೇದಾಂಗಾನಿತರಾಂಸ್ತಥಾ |
ಬಾಲಕಂ ಪಾಠಯಾಮಾಸ ಜ್ಞಾನಂ ಮೃತ್ಯುಂಜಯಂ ಪರಂ　　|| ೯೫ ||

ಭಕ್ತಿರಾಸ್ತೇ ಸ್ವಕಾಂತೇ ಚಾಭೀಷ್ಟದೇವೇ ಹರೌ ಗುರೌ |
ಯಸ್ಯಾಸ್ತೇನ ಚ ತತ್ಪುತ್ರೋ ಬಭೂವಾಸ್ತೀಕ ಏವ ಚ　　|| ೯೬ ||

ಜಗಾಮ ತಪಸೇ ವಿಷ್ಣೋಃ ಪುಷ್ಕರಂ ಶಂಕರಾಜ್ಞಯಾ |
ಸಂಪ್ರಾಪ್ಯ ಚ ಮಹಾಮಂತ್ರಂ ತಪಶ್ಚ ಪರಮಾತ್ಮನಃ　　|| ೯೭ ||

---

೯೩. ಶಂಕರನೇ ಆ ಶಿಶುವಿನ ಶುಭೋದಯಕ್ಕಾಗಿ ಜಾತಕರ್ಮಾದಿಗಳನ್ನು ನಡೆಸಿ ಸ್ವಸ್ತಿವಾಚನ ಮಾಡಿಸಿದನು. ಅಲ್ಲದೆ ಎಲ್ಲ ವೇದಗಳನ್ನೂ, ಪಾಠ ಮಾಡಿಸಿದನು.

೯೪. ಶಿವನು ಮೂರುಕೋಟಿಲಕ್ಷ ದಿವ್ಯರತ್ನಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ಪಾರ್ವತಿಯೂ ಕೂಡ ವಿವಿಧರತ್ನಗಳನ್ನೂ, ಲಕ್ಷ ಗೋವುಗಳನ್ನೂ ದಾನಮಾಡಿದಳು.

೯೫. ಶಂಭುವೂ ಕೂಡ ಆ ಬಾಲಕನಿಗೆ ಚತುರ್ವೇದಗಳನ್ನೂ, ಶಿಕ್ಷಾದಿ ವೇದಾಂಗಗಳನ್ನೂ, ಅಧ್ಯಯನಮಾಡಿಸಿ ಮೃತ್ಯುವನ್ನು ಜಯಿಸುವ ದಿವ್ಯ ಜ್ಞಾನ ವನ್ನು ಬೋಧಿಸಿದನು.

೯೬. ಯಾವ ಮನಸಾದೇವಿಗೆ ತನ್ನ ಪ್ರಾಣಕಾಂತನಲ್ಲೂ, ಇಷ್ಟದೇವತೆ ಯಾದ ಹರಿಯಲ್ಲೂ, ಗುರುವಿನಲ್ಲೂ, ಆಸ್ತಿಕಬುದ್ಧಿಯೂ, ಭಕ್ತಿಯೂ ಇರುವುದರಿಂದ ಆಕೆಯ ಮಗನೂ ಆಸ್ತಿಕನೆಂದು ಹೆಸರುವಾಸಿಯಾದನು.

೯೭. ಆ ಆಸ್ತಿಕನು ಶಂಕರನ ಅಪ್ಪಣೆಯಂತೆ ವಿಷ್ಣುವನ್ನು ಕುರಿತು ತಪಸ್ಸು ಮಾಡಲು ಮಹಾಮಂತ್ರೋಪದೇಶವನ್ನು ಪಡೆದು, ಪುಷ್ಕರಕ್ಷೇತ್ರದಲ್ಲಿ ತಪಸ್ಸು ಮಾಡಿದನು.

ದಿವ್ಯಂ ವರ್ಷತ್ರಿಲಕ್ಷಂ ಚ ತಪಸ್ತಪ್ತ್ವಾ ತಪೋಧನಃ ।
ಆಜಗಾಮ ಮಹಾಯೋಗೀ ನಮಸ್ಕರ್ತುಂ ಶಿವಂ ಪ್ರಭುಂ ॥ ೯೮ ॥

ಶಂಕರಂ ಚ ನಮಸ್ಕೃತ್ಯ ಪುರಃ ಕೃತ್ವಾ ಚ ಬಾಲಕಂ ।
ಸಾ ಚಾಜಗಾಮ ಮನಸಾ ಕಶ್ಯಪಸ್ಯಾಶ್ರಮಂ ಪಿತುಃ ॥ ೯೯ ॥

ತಾಂ ಸಪುತ್ರಾಂ ಸುತಾಂ ದೃಷ್ಟ್ವಾ ಮುದಂ ಪ್ರಾಪ ಪ್ರಜಾಪತಿಃ ।
ಶತಲಕ್ಷಂ ಚ ರತ್ನಾನಾಂ ಬ್ರಾಹ್ಮಣೇಭ್ಯೋ ದದೌ ಮುನೇ ॥ ೧೦೦ ॥

ಬ್ರಾಹ್ಮಣಾನ್ಭೋಜಯಾಮಾಸ ತ್ವಸಂಖ್ಯಾಂಛ್ರೇಯಸೇ ಶಿಶೋಃ ।
ಅದಿತಿಶ್ಚ ದಿತಿಶ್ಚಾನ್ಯಾ ಮುದಂ ಪ್ರಾಪುಃ ಪರಂ ತಥಾ ॥ ೧೦೧ ॥

ಸಾ ಸಪುತ್ರಾ ಚ ಸುಚಿರಂ ತಸ್ಥೌ ತಾತಾಲಯೇ ತದಾ ।
ತದೀಯಂ ಪುನರಾಖ್ಯಾನಂ ವಕ್ಷ್ಯೇ ತ್ವಂ ತನ್ನಿಶಾಮಯ ॥ ೧೦೨ ॥

---

೯೮. ಆ ತಪೋಧನನು ಮೂರುದಿವ್ಯಲಕ್ಷವರ್ಷಗಳ ಕಾಲ ಅಲ್ಲಿ ತಪಸ್ಸು ಮಾಡಿ, ಮಹಾಯೋಗೀಶ್ವರನಾಗಿ ತಿರುಗಿ ಬಂದು ಶಿವನಿಗೆ ನಮಸ್ಕರಿಸಿದನು.

೯೯. ಆಗ ಮನಸಾದೇವಿಯೂ ಕೂಡ ಶಂಕರನಿಗೆ ವಂದಿಸಿ, ತನ್ನ ಮಗನನ್ನು ಮುಂದುಮಾಡಿಕೊಂಡು ತನ್ನ ತಂದೆಯಾದ ಕಶ್ಯಪಮಹರ್ಷಿಯ ಆಶ್ರಮಕ್ಕೆ ಬಂದಳು.

೧೦೦. ಪುತ್ರವತಿಯಾದ ತನ್ನ ಮಗಳನ್ನು ನೋಡಿ ಕಶ್ಯಪಪ್ರಜಾಪತಿಯು ಬಹಳ ಸಂತೋಷಗೊಂಡವನಾಗಿ ನೂರುಲಕ್ಷರತ್ನಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು.

೧೦೧. ಆ ಮೊಮ್ಮಗನ ಶ್ರೇಯಸ್ಸಿಗಾಗಿ ಅಸಂಖ್ಯಬ್ರಾಹ್ಮಣರಿಗೆ ಅನ್ನಸಂತರ್ಪಣೆ ಮಾಡಿದನು. ಆ ಕಶ್ಯಪನ ಪತ್ನಿಯರಾದ ಅದಿತಿ, ದಿತಿ ಮುಂತಾದವರೆಲ್ಲರೂ ಪರಮಾನಂದ ಭರಿತರಾದರು.

೧೦೨. ಇತ್ತ ಆ ಮನಸಾದೇವಿಯು ತನ್ನ ಪುತ್ರನೊಡನೆ ಬಹಳಕಾಲ ತಂದೆಯ ಮನೆಯಲ್ಲಿಯೇ ಇದ್ದಳು. ಆಕೆಯ ಮುಂದಿನ ಕಥೆಯನ್ನು ಹೇಳುವೆನು ಸಾವಧಾನದಿಂದ ಕೇಳು.

ಅಥಾಭಿಮನ್ಯುತನಯೋ ಬ್ರಹ್ಮಶಾಪಃ ಪರೀಕ್ಷಿತೇ ।
ಬಭೂವ ಸಹಸಾ ಬ್ರಹ್ಮನ್ದೈವದೋಷೇಣ ಕರ್ಮಣಾ || ೧೦೩ ||

ಸಪ್ತಾಹೇ ಸಮತೀತೇ ತು ತಕ್ಷಕಸ್ತ್ವಾಂ ಚ ದಂಕ್ಷ್ಯತಿ ।
ಶಶಾಪ ಶೃಂಗೀ ಕೌಶಿಕ್ಯಾ ಜಲಂ ಸಂಸ್ಪೃಶ್ಯ ಚೇತಿ ಸಃ || ೧೦೪ ||

ರಾಜಾ ಶ್ರುತ್ವಾ ತತ್ಪ್ರವೃತ್ತಿಂ ಗಂಗಾದ್ವಾರಂ ಜಗಾಮ ಸಃ ।
ತತ್ರ ತೆಸ್ಥೌ ಚ ಸಪ್ತಾಹಂ ಶುಶ್ರುವೇ ಧರ್ಮಸಂಹಿತಾಂ || ೧೦೫ ||

ಸಪ್ತಾಹೇ ಸಮತೀತೇ ತು ಗಚ್ಛಂತಂ ತಕ್ಷಕಂ ಪಥಿ ।
ಧನ್ವಂತರಿರ್ನೋಜಯಿತುಮುಪಶ್ಯದ್ಗಂತುಕೋ ನೃಪಂ || ೧೦೬ ||

---

೧೦೩. ಎಲೈ ನಾರದನೇ, ಈ ಸಮಯದಲ್ಲಿ ಅಭಿಮನ್ಯುವಿನ ಪುತ್ರನಾದ ಪರೀಕ್ಷಿತನು ತನ್ನ ಪೂರ್ವಕರ್ಮದ ದುರ್ವಿಪಾಕದಿಂದ ಇದ್ದಕ್ಕಿದ್ದಂತೆಯೇ ಬ್ರಾಹ್ಮಣ ಶಾಪಕ್ಕೊಳಗಾದನು.

೧೦೪. ಶಮೀಕಋಷಿಯ ಪುತ್ರನಾದ ಶೃಂಗೀ ಎಂಬ ಋಷಿಯು, ಸಮಾಧಿಸ್ಥನಾದ ತನ್ನ ತಂದೆಯ ಕೊರಳಿಗೆ ಸತ್ತಹಾವನ್ನು ಹಾರಹಾಕಿದ್ದಕ್ಕಾಗಿ ಕೌಶಿಕೀ ನದಿಯ ನೀರನ್ನು ಮುಟ್ಟಿ ಇಂದಿಗೆ ಏಳುದಿವಸಕ್ಕೆ ನಿನ್ನನ್ನು ತಕ್ಷಕನು ಕಚ್ಚುವನೆಂದು ಶಾಪವಿತ್ತನು.

೧೦೫. ಪರೀಕ್ಷಿತನಿಗೆ ಈ ಸಮಾಚಾರವು ತಿಳಿದು ಗಂಗಾನದಿಯ ಒಂದು ದ್ವೀಪದಲ್ಲಿ ನೆಲೆಸಿ, ಶುಕಮಹರ್ಷಿಯಿಂದ (ಭಾಗವತ) ಧರ್ಮಸಂಹಿತೆಯನ್ನು ಒಂದು ವಾರ ಕೇಳಿದನು.

೧೦೬. ಏಳು ದಿವಸಗಳು ಕಳೆದ ಮೇಲೆ ರಾಜನ ಚಿಕಿತ್ಸೆಗಾಗಿ ಹೋಗುತ್ತಿರುವ ದೇವವೈದ್ಯನಾದ ಧನ್ವಂತರಿಯು ದಾರಿಯಲ್ಲಿ ಹೋಗುತ್ತಿರುವ ತಕ್ಷಕನನ್ನು ಕಂಡನು.

ತಯೋರ್ಬಭೂವ ಸಂವಾದಃ ಸುಪ್ರೀತಿಶ್ಚ ಪರಸ್ಪರಂ ।
ಧನ್ವಂತರೇರ್ಮಣಿಂ ಶ್ರೇಷ್ಠಂ ತಕ್ಷಕಃ ಸ್ವೇಚ್ಛಯಾ ದದೌ ॥ ೧೦೭ ॥

ಸ ಯಯೌ ತಂ ಗೃಹೀತ್ವಾ ತು ತುಷ್ಟಸಂಹೃಷ್ಟಮಾನಸಃ ।
ಅಪಶ್ಯತ್ತಕ್ಷಕಸ್ತೂರ್ಣಂ ನೃಪಂ ಮಂಚಕಸಂಸ್ಥಿತಂ ॥ ೧೦೮ ॥

ರಾಜಾ ಜಗಾಮ ವೈಕುಂಠಂ ಸ್ಮಾರಂ ಸ್ಮಾರಂ ಹರಿಂ ಗುರುಂ ।
ಸಂಸ್ಕಾರಂ ಕಾರಯಾಮಾಸ ಪಿತುರ್ವೈ ಜನಮೇಜಯಃ ॥ ೧೦೯ ॥

ರಾಜಾ ಚಕಾರ ಯಜ್ಞಂ ಚ ಸರ್ಪಸತ್ರಾಭಿಧಂ ಮುನೇ ।
ಪ್ರಾಣಾಂಸ್ತತ್ಯಾಜ ಸರ್ಪಾಣಾಂ ಸಮೂಹೋ ಬ್ರಹ್ಮತೇಜಸಾ ॥ ೧೧೦ ॥

---

೧೦೭. ಪ್ರೀತ್ಯಾಸ್ಪದರಾದ ಅವರಿಬ್ಬರಿಗೂ ಬಹಳ ವಾದ ವಿವಾದಗಳಾದವು. ಆಗ ತಕ್ಷಕನು ತನ್ನ ಸ್ವಂತ ಇಚ್ಛಾಪೂರ್ವಕವಾಗಿ ಧನ್ವಂತರಿಗೆ ಒಂದು ಶ್ರೇಷ್ಠಮಣಿಯನ್ನು ಕೊಟ್ಟನು.

೧೦೮. ಅದನ್ನು ತೆಗೆದುಕೊಂಡು ಸಂತುಷ್ಟನಾದ ಧನ್ವಂತರಿಯು ತನ್ನಾಲಯಕ್ಕೆ ಹಿಂತಿರುಗಿದನು. ಇತ್ತ ತಕ್ಷಕನು ಮುಂದೆಬಂದು ಮಂಚದ ಮಧ್ಯದಲ್ಲಿ ಮಲಗಿರುವ ಪರೀಕ್ಷಿತನನ್ನು ನೋಡಿ ಕಚ್ಚಿದನು.

೧೦೯. ಕೂಡಲೇ ಪರೀಕ್ಷಿತನು ಶ್ರೀಹರಿಯನ್ನೂ, ಗುರುವನ್ನೂ ಸ್ಮರಣೆ ಮಾಡಿಕೊಳ್ಳುತ್ತಾ ವೈಕುಂಠಕ್ಕೆ ತೆರಳಿದನು. ಅವನ ಮಗನಾದ ಜನಮೇಜಯನು ತಂದೆಯ ಉತ್ತರಕ್ರಿಯಾದಿಗಳನ್ನು ಮಾಡಿದನು.

೧೧೦. ಅನಂತರ ಜನಮೇಜಯರಾಯನು ಸರ್ಪಯಾಗವೆಂಬ ಒಂದು ಯಾಗ ಮಾಡಿದನು ಅದರಲ್ಲಿ ಅನೇಕ ಸರ್ಪಗಳು ಹಿಂಡು ಹಿಂಡಾಗಿ ಬ್ರಹ್ಮತೇಜಸ್ಸಿಗೆ ಸಿಲುಕಿ ಪ್ರಾಣತ್ಯಾಗಮಾಡಬೇಕಾಯಿತು.

ಸ ತಕ್ಷಕಶ್ಚ ಭೀತಶ್ಚ ಮಹೇಂದ್ರಂ ಶರಣಂ ಯಯೌ ।
ಸೇಂದ್ರಂ ಚ ತಕ್ಷಕಂ ಹಂತುಂ ವಿಪ್ರವರ್ಗಃ ಸಮುದ್ಯತಃ || ೧೧೧ ||

ಅಥ ದೇವಾಶ್ಚ ಮುನಯಶ್ಚಾಯಯುರ್ಮನಸಾಂತಿಕಂ ।
ತಾಂ ತುಷ್ಟಾವ ಮಹೇಂದ್ರಶ್ಚ ಸಮುಕ್ತಂ ಭಯಕಾತರಃ || ೧೧೨ ||

ತತ್ರ ಆಸ್ತೀಕ ಆಗತ್ಯ ಮಾತುರ್ಯಜ್ಞಮಥಾಜ್ಞಯಾ ।
ಮಹೇಂದ್ರತಕ್ಷಕಪ್ರಾಣಾನ್ಯಯಾಚೇ ಭೂಮಿಪಂ ವರಂ || ೧೧೩ ||

ದದೌ ವರಂ ನೃಪಶ್ರೇಷ್ಠಃ ಕೃಪಯಾ ಬ್ರಾಹ್ಮಣಾಜ್ಞಯಾ ।
ಯಜ್ಞಂ ಸಮಾಪ್ಯ ವಿಪ್ರೇಭ್ಯೋ ದಕ್ಷಿಣಾಂ ಚ ದದೌ ಮುದಾ || ೧೧೪ ||

ವಿಪ್ರಾಶ್ಚ ಮುನಯೋ ದೇವಾ ಗತ್ವಾ ಚ ಮನಸಾಂತಿಕಂ ।
ಮನಸಾಂ ಪೂಜಯಾಮಾಸುಸ್ತುಷ್ಟುವುಶ್ಚ ಪೃಥಕ್ಪೃಥಕ್ || ೧೧೫ ||

---

೧೧೧. ಆಗ ತಕ್ಷಕನು ಭಯಗೊಂಡು ಮಹೇಂದ್ರನನ್ನು ಮರೆಹೊಕ್ಕನು. ಆಗ ಯಾಗದಲ್ಲಿದ್ದ ಋತ್ವಿಜರೆಲ್ಲರೂ ಇಂದ್ರನೊಡನೆಯೆ ತಕ್ಷಕನನ್ನು ಸಂಹರಿಸಲುದ್ಯುಕ್ತರಾದರು.

೧೧೨. ಆಗ ದೇವತೆಗಳು ಮತ್ತು ಮುನಿಗಳೆಲ್ಲರೂ ಮನಸಾದೇವಿಯ ಸಮೀಪಕ್ಕೆ ಬಂದರು. ಭಯಭೀತನಾದ ಮಹೇಂದ್ರನೂ ಮನಸಾದೇವಿಯನ್ನು ಬಹಳವಾಗಿ ಸ್ತುತಿಸಿದನು.

೧೧೩. ಆಗ ತಾಯಿಯ ಅಪ್ಪಣೆಯಂತೆ ಆಸ್ತೀಕನು, ಯಾಗಮಂಟಪಕ್ಕೆ ಬಂದು ಜನಮೇಜಯನನ್ನು ಕುರಿತು ತಕ್ಷಕ ಮತ್ತು ಇಂದ್ರನ ಪ್ರಾಣದಾನ ಮಾಡಬೇಕೆಂದು ಬೇಡಿದನು.

೧೧೪. ಆ ದಯಾಳುವಾದ ಜನಮೇಜಯರಾಯನು ಬ್ರಾಹ್ಮಣರ ಅನುಜ್ಞೆಯನ್ನು ಪಡೆದು ಹಾಗೆಯೇ ಆಗಲೆಂದು ವರವನ್ನು ಕೊಟ್ಟು ಯಾಗವನ್ನು ಪೂರ್ತಿಗೊಳಿಸಿ ಸಂತೋಷದಿಂದ ಬ್ರಾಹ್ಮಣರಿಗೆ ದಕ್ಷಿಣೆಯನ್ನು ಕೊಟ್ಟನು.

೧೧೫. ಮನಸಾದೇವಿಯ ಮಹಿಮೆಯನ್ನು ಕಂಡ ದೇವತೆಗಳು ಮತ್ತು ಮುನಿಮಾನವರು ಆ ದೇವಿಯ ಸಮೀಪಕ್ಕೆ ಹೋಗಿ ಪೂಜಿಸಿ ಸ್ತುತಿಸಿದರು.

ಶಕ್ರಃ ಸಂಭೃತಸಂಭಾರೋ ಭಕ್ತಿಯುಕ್ತಃ ಸದಾ ಶುಚಿಃ ।
ಮನಸಾಂ ಪೂಜಯಾಮಾಸ ತುಷ್ಟಾವ ಪರಮಾದರಾತ್ ॥ ೧೧೬ ॥

ಉಪಚಾರೈಃ ಷೋಡಶಭಿರ್ಬಲಿಂ ದತ್ವಾ ಪ್ರಿಯಂ ತದಾ ।
ಪ್ರದದೌ ಪರಿತುಷ್ಟಶ್ಚ ಬ್ರಹ್ಮವಿಷ್ಣುಸುರಾಜ್ಞಯಾ ॥ ೧೧೭ ॥

ಸಂಪೂಜ್ಯ ಮನಸಾಂ ದೇವೀಂ ಪ್ರಯಯುಃ ಸ್ವಾಲಯಂ ಚ ತೇ ।
ಇತ್ಯೇವಂ ಕಥಿತಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೧೮ ॥

॥ ನಾರದ ಉವಾಚ ॥

ಕೇನ ಸ್ತೋತ್ರೇಣ ತುಷ್ಟಾವ ಮಹೇಂದ್ರೋ ಮನಸಾಂ ಸತೀಂ ।
ಪೂಜಾವಿಧಿಕ್ರಮಂ ತಸ್ಯಾಃ ಶ್ರೋತುಮಿಚ್ಛಾಮಿ ತತ್ವತಃ ॥ ೧೧೯ ॥

---

೧೧೬. ದೇವೇಂದ್ರನು ಪೂಜಾಸಾಮಾಗ್ರಿಗಳನ್ನು ಸಿದ್ಧಪಡಿಸಿಕೊಂಡು ಶುಚಿರ್ಭೂತನಾಗಿ ಭಕ್ತಿಯಿಂದ ಮನಸಾದೇವಿಯನ್ನು ಪೂಜಿಸಿ ಅತ್ಯಾದರದಿಂದ ಸ್ತುತಿಸಿದನು.

೧೧೭. ಆಸನಾದಿ ಷೋಡಶೋಪಚಾರಗಳಿಂದ ಪೂಜಿಸಿ, ಬ್ರಹ್ಮ, ವಿಷ್ಣು ಮತ್ತು ಇತರ ದೇವತೆಗಳ ಅಪ್ಪಣೆಯಂತೆ ಆಕೆಗಿಷ್ಟವಾದ ಬಲಿಯನ್ನರ್ಪಿಸಿದನು.

೧೧೮. ಈ ರೀತಿಯಾಗಿ ಆ ದೇವತೆಗಳೆಲ್ಲರೂ ಮನಸಾದೇವಿಯನ್ನು ಪೂಜಿಸಿ ತಮ್ಮ ಮಂದಿರಕ್ಕೆ ಹಿಂತಿರುಗಿ ಹೋದರು. ಈ ರೀತಿಯಾಗಿ ಮನಸಾದೇವಿಯ ಉಪಾಖ್ಯಾನವನ್ನು ಹೇಳಿದೆನು. ಇನ್ನೇನನ್ನು ಕೇಳಬೇಕೆಂದು ನಿನಗೆ ಇಷ್ಟವಿದೆ?

೧೧೯. ನಾರದ:—ಮಹೇಂದ್ರನು ಪತಿವ್ರತೆಯಾದ ಮನಸಾದೇವಿಯನ್ನು ಯಾವ ಸ್ತೋತ್ರಗಳಿಂದ ಮೆಚ್ಚಿಸಿದನು, ಮತ್ತು ಹೇಗೆ ಪೂಜಿಸಿದನು? ಈ ಕ್ರಮದ ನಿಜಸ್ವರೂಪವನ್ನು ನನಗೆ ತಿಳಿಸು.

|| ನಾರಾಯಣ ಉವಾಚ ||

ಸುಸ್ನಾತಃ ಶುಚಿರಾಚಾಂತೋ ಧೃತ್ವಾ ಧೌತೇ ಚ ವಾಸಸೀ |
ರತ್ನಸಿಂಹಾಸನೇ ದೇವೀಂ ವಾಸಯಾಮಾಸ ಭಕ್ತಿತಃ || ೧೨೦ ||

ಸ್ವರ್ಗಗಂಗಾಜಲೇನೈವ ರತ್ನಕುಂಭಸ್ಥಿತೇನ ಚ |
ಸ್ನಾಪಯಾಮಾಸ ಮನಸಾಂ ಮಹೇಂದ್ರೋ ವೇದಮಂತ್ರತಃ || ೧೨೧ ||

ವಾಸಸೀ ವಾಸಯಾಮಾಸ ವಹ್ನಿಶುದ್ಧೇ ಮನೋರಮೇ |
ಸರ್ವಾಂಗೇ ಚಂದನಂ ಲಿಪ್ತ್ವಾ ಪಾದ್ಯಾರ್ಘ್ಯಂ ಭಕ್ತಿಸಂಯುತಃ || ೧೨೨ ||

ಗಣೇಶಂ ಚ ದಿನೇಶಂ ಚ ವಹ್ನಿಂ ವಿಷ್ಣುಂ ಶಿವಂ ಶಿವಾಂ |
ಸಂಪೂಜ್ಯ ದೇವಷಟ್ಕಂ ಚ ಪೂಜಯಾಮಾಸ ತಾಂ ಸತೀಂ || ೧೨೩ ||

ಓಂ ಹ್ರೀಂ ಶ್ರೀಂ ಮನಸಾದೇವ್ಯೈ ಸ್ವಾಹೇತ್ಯೇವಂ ಚ ಮಂತ್ರತಃ |
ದಶಾಕ್ಷರೇಣ ಮಂತ್ರೇಣ ದದೌ ಸರ್ವಾಣ್ಯಥೋಚಿತಂ || ೧೨೪ ||

---

೧೨೦. ನಾರಾಯಣ :—ಇಂದ್ರನು ಶುದ್ಧಸ್ನಾನಾಚಮನಗಳನ್ನು ಮಾಡಿ ಶುಭ್ರವಾದ ಎರಡು ವಸ್ತ್ರಗಳನ್ನು ಧರಿಸಿ ಮನಸಾದೇವಿಯನ್ನು ಭಕ್ತಿಯಿಂದ ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ ಆವಾಹನೆಮಾಡಿದನು.

೧೨೧. ಅನಂತರ ವೇದ ಮಂತ್ರೋಚ್ಚಾರಣ ಪೂರ್ವಕವಾಗಿ ರತ್ನಕಲಶದಲ್ಲಿರುವ ದೇವಗಂಗೆಯ ಜಲದಿಂದ ಮನಸಾದೇವಿಗೆ ಸ್ನಾನವಮಾಡಿಸಿದನು.

೧೨೨. ಭಕ್ತಿಯಿಂದ ಅರ್ಘ್ಯಪಾದ್ಯಾದಿಗಳನ್ನು ಸಮರ್ಪಿಸಿ, ಅಗ್ನಿಯಂತೆ ಪರಿಶುದ್ಧವಾದ ಎರಡು ಬಟ್ಟೆಗಳನ್ನುಡಿಸಿ ಸರ್ವಾಂಗಗಳಿಗೂ ದಿವ್ಯಚಂದನವನ್ನು ಲೇಪನಮಾಡಿದನು.

೧೨೩. ಗಣೇಶ, ಸೂರ್ಯ, ಅಗ್ನಿ, ವಿಷ್ಣು, ಶಿವ ಮತ್ತು ಪಾರ್ವತೀ ಈ ಆರು ದೇವತೆಗಳನ್ನು ಮೊದಲು ಪೂಜಿಸಿ ನಂತರ ಆ ಮನಸಾದೇವಿಯನ್ನು ಪೂಜಿಸಿದನು.

೧೨೪. ಓಂ ಹ್ರೀಂ ಶ್ರೀಂ ಮನಸಾ ದೇವ್ಯೈ ಸ್ವಾಹಾ' ಎಂಬ ಹತ್ತು ಅಕ್ಷರದ ಮಂತ್ರವನ್ನು ಜಪಿಸಿ ಉಚಿತಪೂಜೆಯನ್ನರ್ಪಿಸಿದನು.

ಉಪಚಾರಾನ್ಷೋಡಶಕಾನ್ ಭಕ್ತಿತೋ ದುರ್ಲಭಾನ್ಹರಿಃ ।
ಪೂಜಯಾಮಾಸ ಭಕ್ತ್ಯಾ ಚ ಬ್ರಹ್ಮಣಾ ಪ್ರೇರಿತೋ ಮುದಾ ॥ ೧೨೫ ॥

ವಾದ್ಯಂ ನಾನಾಪ್ರಕಾರಂ ಚ ವಾದಯಾಮಾಸ ತತ್ರ ವೈ ।
ಬಭೂವ ಪುಷ್ಪವೃಷ್ಟಿಶ್ಚ ನಭಸೋ ಮನಸೋಪರಿ ॥ ೧೨೬ ॥

ದೇವೋ ವಿಪ್ರಾಜ್ಞಯಾ ತತ್ರ ಬ್ರಹ್ಮವಿಷ್ಣುಶಿವಾಜ್ಞಯಾ ।
ತುಷ್ಟಾವ ಸಾಶ್ರುನೇತ್ರಶ್ಚ ಪುಲಕಾಂಚಿತವಿಗ್ರಹಃ ॥ ೧೨೭ ॥

॥ ಮಹೇಂದ್ರ ಉವಾಚ ॥

ದೇವಿ ತ್ವಾಂ ಸ್ತೋತುಮಿಚ್ಛಾಮಿ ಸಾಧ್ವೀನಾಂ ಪ್ರವರಾಂ ವರಾಂ ।
ಪರಾತ್ಪರಾಂ ಚ ಪರಮಾಂ ನ ಹಿ ಸ್ತೋತುಂ ಕ್ಷಮೋಽಧುನಾ ॥ ೧೨೮ ॥

ಸ್ತೋತ್ರಾಣಾಂ ಲಕ್ಷಣಂ ವೇದೇ ಸ್ವಭಾವಾಖ್ಯಾನತಃ ಪರಂ ।
ಸ ಕ್ಷಮಃ ಪ್ರಕೃತಿಂ ವಕ್ತುಂ ಗುಣಾನಾಂ ತವ ಸುವ್ರತೇ ॥ ೧೨೯ ॥

---

೧೨೫. ಬ್ರಹ್ಮನಿಂದ ಪ್ರೇರಿತನಾದ ದೇವೇಂದ್ರನು ಭಕ್ತಿಯಿಂದ ಸರ್ವಸುಲಭವಲ್ಲದ ಷೋಡಶೋಪಚಾರಗಳನ್ನು ಸಮರ್ಪಿಸಿದನು.

೧೨೬. ಪೂಜೆಯು ಮುಗಿದ ನಂತರ ವಿಧವಿಧವಾದ್ಯಗಳು ಭೋರ್ಗರೆಯುವಂತೆಸಗಿದನು. ಆಗ ಮನಸಾದೇವಿಯ ಮೇಲೆ ಹೂಮಳೆಗರೆಯಿತು.

೧೨೭. ತ್ರಿಮೂರ್ತಿಗಳ ಮತ್ತು ಬ್ರಾಹ್ಮಣರ ಆಜ್ಞೆಯಂತೆ ದೇವೇಂದ್ರನು ಕಣ್ಣುಗಳಲ್ಲಿ ಆನಂದಾಶ್ರುಗಳನ್ನು ತುಂಬಿಕೊಂಡು, ರೋಮಾಂಚಿತಶರೀರನಾಗಿ ದೇವಿಯನ್ನು ಸ್ತುತಿಸಿದನು.

೧೨೮. ಮಹೇಂದ್ರ :—ಪತಿವ್ರತಾಶಿರೋಮಣಿಯಾದ ಎಲೌ ಮನಸಾದೇವಿಯೇ, ಪರಮಪವಿತ್ರಳೂ, ಪರಾತ್ಪರಳೂ ಆದ ನಿನ್ನನ್ನು ಸ್ತುತಿಸಬೇಕೆಂದಿಚ್ಛೆಯಿದ್ದರೂ ನಾನು ಅಶಕ್ತನಾಗಿದ್ದೇನೆ.

೧೨೯. ಸ್ವಭಾವವರ್ಣನೆಗಿಂತಲೂ ಸ್ತೋತ್ರಮಾಡುವುದು ಶ್ರೇಷ್ಠವಾದುದೆಂದು ವೇದೋಕ್ತವಾಗಿದೆ. ನಾನು ನಿನ್ನ ಗುಣಗಳ ಸ್ವರೂಪವನ್ನೇ ವರ್ಣಿಸಲಶಕ್ತನಾಗಿದ್ದೇನೆ.

ಶುದ್ಧಸತ್ವಸ್ವರೂಪಾ ತ್ವಂ ಕೋಪಹಿಂಸಾವಿವರ್ಜಿತಾ ।
ನ ಚ ಶಪ್ತೋ ಮುನಿಸ್ತೇನ ತ್ಯಕ್ತಯಾ ಚ ತ್ವಯಾ ಯತಃ ।
ತ್ವಂ ಮಯಾ ಪೂಜಿತಾ ಸಾಧ್ವೀ ಜನನೀ ಚ ಯಥಾದಿತಿಃ　　॥ ೧೩೦ ॥

ದಯಾರೂಪಾ ಚ ಭಗಿನೀ ಕ್ಷಮಾರೂಪಾ ಯಥಾಪ್ರಸೂಃ ।
ತ್ವಯಾ ಮೇ ರಕ್ಷಿತಾಃ ಪ್ರಾಣಾ ಪುತ್ರದಾರಾಃ ಸುರೇಶ್ವರಿ　　॥ ೧೩೧ ॥

ಅಹಂ ಕರೋಮಿ ತ್ವಾಂ ಪೂಜ್ಯಾಂ ಮಮ ಪ್ರೀತಿಶ್ಚ ವರ್ಧತೇ ।
ನಿತ್ಯಂ ಯದ್ಯಪಿ ಪೂಜ್ಯಾತ್ವಂ ಭವೇಽತ್ರ ಜಗದಂಬಿಕೇ　　॥ ೧೩೨ ॥

ತಥಾಪಿ ತವ ಪೂಜಾಂ ವೈ ವರ್ಧಯಾಮಿ ಪುನಃ ಪುನಃ ।
ಯೇ ತ್ವಾಮಾಷಾಢಸಂಕ್ರಾಂತ್ಯಾಂ ಪೂಜಯಿಷ್ಯಂತಿ ಭಕ್ತಿತಃ　　॥ ೧೩೩ ॥

ಪಂಚಮ್ಯಾಂ ಮನಸಾಖ್ಯಾಯಾಂ ಮಾಸಾಂತೇ ವಾ ದಿನೇ ದಿನೇ ।
ಪುತ್ರಪೌತ್ರಾದಯಸ್ತೇಷಾಂ ವರ್ಧಂತೇ ಚ ಧನಾನಿ ಚ　　॥ ೧೩೪ ॥

---

೧೩೦. ನೀನು ಶುದ್ಧಸತ್ವಗುಣಪರಿಪೂರ್ಣಳೂ, ಕೋಪಹಿಂಸಾಪರಿವರ್ಜಿತಳೂ ಆದುದರಿಂದಲೇ ಜರತ್ಕಾರು ಮಹರ್ಷಿಯು ನಿನ್ನನ್ನು ತ್ಯಜಿಸಿದರೂ ನೀನು ಅವನನ್ನು ಶಪಿಸಲಿಲ್ಲ. ನಿನ್ನನ್ನು ನನ್ನ ತಾಯಿಯಾದ ದಿತಿಯಂತೆ ಭಾವಿಸಿ ಪೂಜಿಸಿದೆನು.

೧೩೧. ಎಲೌ ದೇವಾಧಿದೇವಿಯೇ, ಸಹೋದರಿಯಂತೆ ದಯಾಯುತಳೂ, ತಾಯಿಯಂತೆ ಕ್ಷಮಾಪರಿಪೂರ್ಣಳೂ ಆದ ನೀನು ನನ್ನ ಪ್ರಾಣಗಳನ್ನೂ ಪತ್ನೀ ಪುತ್ರರನ್ನೂ ರಕ್ಷಿಸಿದೆ.

೧೩೨. ಆದುದರಿಂದ ಈ ಜಗತ್ತಿನಲ್ಲಿ ನೀನು ನಿತ್ಯಪೂಜ್ಯಳಾದುದರಿಂದ, ಜಗದಂಬಿಕೆಯಾದ ನಿನ್ನಲ್ಲಿ ನನ್ನ ಭಕ್ತಿಪ್ರಕಟನೆಗಾಗಿ ನಿನಗೆ ವಿಶೇಷಪೂಜೆಯಾಗುವಂತೆ ಮಾಡುವೆ.

೧೩೩–೧೩೪. ನಿನಗೆ ಆಗಾಗ್ಗೆ ವಿಶೇಷಪೂಜೆ ನಡೆಯಲು ನಾನು ಏರ್ಪಾಡು ಮಾಡುವೆನು. ಯಾರು ಆಷಾಢಮಾಸದ ಸಂಕ್ರಾಂತಿಯ ದಿವಸ ಭಕ್ತಿಪೂರ್ವಕ

ಯಶಸ್ವಿನಃ ಕೀರ್ತಿಮಂತೋ ವಿದ್ಯಾವಂತೋ ಗುಣಾನ್ವಿತಾಃ ।
ಯೇ ತ್ವಾಂ ನ ಪೂಜಯಿಷ್ಯಂತಿ ನಿಂದಂತ್ಯಜ್ಞಾನತೋ ಜನಾಃ ॥ ೧೩೫ ॥

ಲಕ್ಷ್ಮೀಹೀನಾ ಭವಿಷ್ಯಂತಿ ತೇಷಾಂ ನಾಗಭಯಂ ಸದಾ ।
ತ್ವಂ ಸ್ವರ್ಗಲಕ್ಷ್ಮೀಃ ಸ್ವರ್ಗೇ ಚ ವೈಕುಂಠೇ ಕಮಲಾಕಲಾ ॥ ೧೩೬ ॥

ನಾರಾಯಣಾಂಶೋ ಭಗವಾನ್ ಜರತ್ಕಾರುರ್ಮುನೀಶ್ವರಃ ।
ತಪಸಾ ತೇಜಸಾ ತ್ವಾಂ ಚ ಮನಸಾ ಸಸೃಜೇ ಪಿತಾ ॥ ೧೩೭ ॥

ಅಸ್ಮಾಕಂ ರಕ್ಷಣಾಯೈವ ತೇನ ತ್ವಂ ಮನಸಾಭಿಧಾ ।
ಮನಸಾ ದೇವಿತುಂ ಶಕ್ತಾ ಚಾತ್ಮನಾ ಸಿದ್ಧಯೋಗಿನೀ ॥ ೧೩೮ ॥

ವಾಗಿ ನಿನ್ನನ್ನು ಪೂಜಿಸುವರೋ ಮತ್ತು ಮಾನಸಪಂಚಮಿಯ ದಿನದಲ್ಲಾಗಲೀ, ಪ್ರತಿತಿಂಗಳಿನ ಕೊನೆಯಲ್ಲಾಗಲೀ, ಪ್ರತಿದಿನದಲ್ಲಾಗಲೀ ಪೂಜಿಸುವರೋ ಅವರಿಗೆ ಪುತ್ರಪೌತ್ರಾದಿಗಳೂ ಧನಧಾನ್ಯವೂ ಅಭಿವೃದ್ಧಿಯಾಗುವುದು.

೧೩೫. ಅಲ್ಲದೆ ಅವರು ಗುಣವಂತರೂ, ವಿದ್ಯಾವಂತರೂ ಮತ್ತು ಕೀರ್ತಿಯುತರೂ ಆಗುವರು. ಯಾರು ನಿನ್ನನ್ನು ಪೂಜಿಸದೆ ಅಜ್ಞಾನದಿಂದ ನಿನ್ನನ್ನು ನಿಂದಿಸುವರೋ ಅವರು ದರಿದ್ರರಾಗುವುದಲ್ಲದೆ ಯಾವಾಗಲೂ ಸರ್ಪಭಯಕ್ಕೊಳಗಾಗುವರು.

೧೩೬. ನೀನು ಸ್ವರ್ಗದಲ್ಲಿ ಸ್ವರ್ಗಲಕ್ಷ್ಮಿಯಾಗಿಯೂ, ವೈಕುಂಠದಲ್ಲಿ ಕಮಲಾಕಲಾರೂಪಳಾಗಿಯೂ ಇರುವೆ.

೧೩೭. ಪೂಜ್ಯನಾದ ಜರತ್ಕಾರು ಮುನಿಯು ನಾರಾಯಣನ ಅಂಶದಿಂದ ಅವತರಿಸಿರುವನು. ಪೂಜ್ಯಪಿತೃವಾದ ಕಶ್ಯಪಪ್ರಜಾಪತಿಯು ತನ್ನ ತಪಸ್ಸು ಮತ್ತು ತೇಜಸ್ಸಿನ ಮಹಿಮೆಯಿಂದ ಮನಸ್ಸಿನಲ್ಲಿಯೇ ನಿನ್ನನ್ನು ಸೃಷ್ಟಿಮಾಡಿದನು.

೧೩೮. ಆತ್ಮಸಿದ್ಧಿಯನ್ನು ಪಡೆದು ಮನಸ್ಸಿನಲ್ಲಿಯೇ ಕ್ರೀಡಿಸಲು ಶಕ್ತಳಾಗಿರುವುದರಿಂದಲೇ ನೀನು ಮನಸಾದೇವಿಯೆನಿಸಿರುವೆ. ನಮ್ಮ ರಕ್ಷಣೆಗಾಗಿಯೇ ನಿನ್ನ ಸೃಷ್ಟಿಯಾಗಿರುವುದು.

ತೇನ ತ್ವಂ ಮನಸಾ ದೇವೀ ಪೂಜಿತಾ ವಂದಿತಾ ಭವೇ ।
ಯಾಂ ಭಕ್ತ್ಯಾ ಮಾನಸಾ ದೇವಾಃ ಪೂಜಯಂತ್ಯನಿಶಂ ಭೃಶಂ ॥ ೧೩೯ ॥

ತೇನ ತ್ವಾಂ ಮನಸಾದೇವೀಂ ಪ್ರವದಂತಿ ಪುರಾವಿದಃ ।
ಸತ್ವರೂಪಾ ಚ ದೇವೀ ತ್ವಂ ಶಶ್ವತ್ಸತ್ವನಿಷೇವಯಾ ॥ ೧೪೦ ॥

ಯೋ ಹಿ ಯದ್ಭಾವಯೇನ್ನಿತ್ಯಂ ಶತಂ ಪ್ರಾಪ್ನೋತಿ ತತ್ಸಮಂ ।
ಇಂದ್ರಶ್ಚ ಮನಸಾಂ ಸ್ತುತ್ವಾ ಗೃಹೀತ್ವಾ ಭಗಿನೀಂ ಚ ತಾಂ ॥ ೧೪೧ ॥

ನಿರ್ಜಗಾಮ ಸ್ವಭವನಂ ಭೂಷಾವಾಸಪರಿಚ್ಛದಾಂ ।
ಪುತ್ರೇಣ ಸಾರ್ಧಂ ಸಾ ದೇವೀ ಚಿರಂ ತಸ್ಥೌ ಪಿತುರ್ಗೃಹೇ ॥ ೧೪೨ ॥

ಭ್ರಾತೃಭಿಃ ಪೂಜಿತಾ ಶಶ್ವನ್ಮಾನ್ಯಾ ವಂದ್ಯಾ ಚ ಸರ್ವತಃ ।
ಗೋಲೋಕಾತ್ಸುರಭೀ ಬ್ರಹ್ಮಂಸ್ತತ್ರಾಗತ್ಯ ಸುಪೂಜಿತಾಂ ॥ ೧೪೩ ॥

---

೧೩೯. ಪ್ರಪಂಚದಲ್ಲಿ ಸರ್ವರಿಂದ ಪೂಜಿತಳೂ, ವಂದಿತಳೂ ಆದ ನಿನ್ನನ್ನು ದೇವತೆಗಳು ಯಾವಾಗಲೂ ಬಹಳ ಭಕ್ತಿಯಿಂದ ಮನಸ್ಸಿನಲ್ಲಿಯೇ ಪೂಜಿಸುತ್ತಾರೆ.

೧೪೦. ಆದುದರಿಂದಲೂ ನಿನ್ನನ್ನು ಮನಸಾದೇವಿಯೆಂದು ಪುರಾತನಜ್ಞಾನಿಗಳು ಹೇಳುವರು. ಎಲೌ ದೇವಿಯೇ, ನೀನು ಯಾವಾಗಲೂ ಸತ್ತ್ವಗುಣವನ್ನೇ ಆಶ್ರಯಿಸಿಕೊಂಡು ಸತ್ವಸ್ವರೂಪಳಾಗಿರುವೆ.

೧೪೧–೧೪೨. ಯಾರು ಯಾವದೇವತೆಯನ್ನು ಮನಃಪೂರ್ವಕವಾಗಿ ಭಾವಿಸುವರೋ ಅದಕ್ಕೆ ಅನುಗುಣವಾದ ನೂರಾರು ಫಲವನ್ನು ಹೊಂದುವರು. ಈ ರೀತಿಯಾಗಿ ದೇವೇಂದ್ರನು ಮನಸಾದೇವಿಯನ್ನು ಸ್ತುತಿಸಿ ಸಹೋದರಿಯಾದ ಆಕೆಯೊಡನೆ, ರಾಜಯೋಗ್ಯವಾಗಿ ಸುಸಜ್ಜಿತವಾಗಿರುವ ತನ್ನ ಮಂದಿರಕ್ಕೆ ಹಿಂತಿರುಗಿದನು. ಆ ದೇವಿಯೂ ಕೂಡ ಪುತ್ರನೊಡನೆ ತನ್ನ ತಂದೆಯ ಮನೆಯಲ್ಲಿ ಸುಖವಾಗಿ ಬಹುಕಾಲ ನಿಂತಳು.

೧೪೩–೧೪೪. ಸಹೋದರರನಿಂದ ಪೂಜಿತಳೂ ಬಹುಮಾನಿತಳೂ ಆಗಿ ಸರ್ವಲೋಕಕ್ಕೂ ವಂದ್ಯಳಾಗಿರುವ ಆ ದೇವಿಯನ್ನು ಗೋಲೋಕದಿಂದ ಕಾಮಧೇನುವು ಬಂದು ನೋಡಿ, ತನ್ನ ಕ್ಷೀರದಿಂದ ಅವಳಿಗೆ ಸ್ನಾನಮಾಡಿಸಿ, ಅತ್ಯಾದರದಿಂದ ಪೂಜೆ

ತಾಂ ಸ್ನಾಪಯಿತ್ವಾ ಕ್ಷೀರೇಣ ಪೂಜಯೊಮಾಸ ಸಾದರಂ ।
ಜ್ಞಾನಸ್ಯ ಕಥಯಾಮಾಸ ಸ್ವರೂಪಂ ಸರ್ವದುರ್ಲಭಂ ।
ತದಾ ದೇವ್ಯೈಃ ಪೂಜಿತಾ ಸಾ ಸ್ವರ್ಗಲೋಕಂ ಪುನರ್ಯಯೌ ॥ ೧೪೪ ॥

ಇದಂ ಸ್ತೋತ್ರಂ ಪುಣ್ಯಬೀಜಂ ತಾಂ ಸಂಪೂಜ್ಯ ಚ ಯಃ ಪಠೇತ್ ।
ತಸ್ಯ ನಾಗಭಯಂ ನಾಸ್ತಿ ತಸ್ಯ ವಂಶೇ ಭವೇಚ್ಚ ಯಃ ॥ ೧೪೫ ॥

ವಿಷಂ ಭವೇತ್ಸುಧಾತುಲ್ಯಂ ಸಿದ್ಧಸ್ತೋತ್ರಂ ಯದಾ ಪಠೇತ್ ।
ಪಂಚಲಕ್ಷಜಪೇನೈವ ಸಿದ್ಧಸ್ತೋತ್ರೋ ಭವೇನ್ನರಃ ॥ ೧೪೬ ॥

ಸರ್ಪಶಾಯೀ ಭವೇತ್ಸೋಽಪಿ ನಿಶ್ಚಿತಂ ಸರ್ಪವಾಹನಃ ॥ ೧೪೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಮನಸೋಪಾಖ್ಯಾನೇ
ತದುತ್ಪತ್ತಿಪೂಜಾಸ್ತೋತ್ರಾದಿಕಥನಂ ನಾಮ
ಷಟ್‌ಚತ್ವಾರಿಂಶತ್ತಮೋಽಧ್ಯಾಯಃ

ಮಾಡಿತು. ಅಲ್ಲದೆ ಸಕಲರಿಗೂ ಸುಲಭವಲ್ಲದ ಜ್ಞಾನಸ್ವರೂಪವನ್ನು ಉಪದೇಶಿಸಿತು. ಅನಂತರ ಆ ಮನಸಾದೇವಿಯು ದೇವತೆಗಳೆಲ್ಲರಿಂದಲೂ ಪೂಜೆಹೊಂದಿ ಪುನಃ ಸ್ವರ್ಗಲೋಕಕ್ಕೆ ಹಿಂತಿರುಗಿದಳು.

೧೪೫. ಮನಸಾದೇವಿಯನ್ನು ಭಕ್ತಿಪೂರ್ವಕವಾಗಿ ಪೂಜಿಸಿ, ಪುಣ್ಯಕರವಾದ ಈ ಸ್ತೋತ್ರವನ್ನು ಪಠಿಸುವವರಿಗೂ ಅವರ ವಂಶದಲ್ಲಿ ಹುಟ್ಟಿದವರಿಗೂ ಸರ್ಪಗಳ ಭಯವಿರುವುದಿಲ್ಲ.

೧೪೬. ಮನಸಾದೇವಿಯ ಸ್ತೋತ್ರವನ್ನು ಐದುಲಕ್ಷಸಾರಿ ಜಪಿಸಿ ಸಿದ್ಧಿಯನ್ನು ಪಡೆಯಬಹುದು. ಆಗ ವಿಷವೂ ಕೂಡ ಅವನಿಗೆ ಅಮೃತಸಮನಾಗುವುದು.

೧೪೭. ಅಲ್ಲದೆ ಸಿದ್ಧಸ್ತೋತ್ರನಾದ ಮನುಜನು ಸರ್ಪಶಾಯಿಯೂ, ಸರ್ಪವಾಹನನೂ ಆಗಿ ವಿಷ್ಣುಸದೃಶನಾಗುವನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಮನಸಾದೇವಿಯ
ಉತ್ಪತ್ತಿಮುಂತಾದುವುಗಳನ್ನು ತಿಳಿಸುವ ನಲವತ್ತಾರನೆಯ ಅಧ್ಯಾಯವು
ಸಮಾಪ್ತವಾಯಿತು.

ನಲವತ್ತಾರನೆಯ ಅಧ್ಯಾಯದ ಸಾರಾಂಶವು

ಮನಸಾದೇವಿಯ ಉಪಾಖ್ಯಾನವು

ಪೂರ್ವದಲ್ಲಿ ಭೂಲೋಕದ ಮಾನವರೆಲ್ಲರೂ ಸರ್ಪಭಯದಿಂದ ವ್ಯಾಕುಲರಾಗಿ ಬ್ರಹ್ಮನಲ್ಲಿ ಮೊರೆಯಿಡಲು, ಬ್ರಹ್ಮನು ಸರ್ಪಗಳ ಬಾಧೆಯನ್ನು ಪರಿಹರಿಸುವ ದಿವ್ಯಮಂತ್ರಗಳನ್ನು ಸೃಜಿಸೆಂದು ಕಶ್ಯಪಪ್ರಜಾಪತಿಗೆ ಅಪ್ಪಣೆಮಾಡಿದನು. ಅದರಂತೆ ಕಶ್ಯಪಪ್ರಜಾಪತಿಯು ಸರ್ಪಪೀಡಾಪರಿಹಾರಕವಾದ ದಿವ್ಯಮಂತ್ರಗಳನ್ನು ಸೃಜಿಸಿ ಅದಕ್ಕೆ ಅಧಿದೇವತೆಯೊಬ್ಬಳನ್ನು ತನ್ನ ಮನಸ್ಸಿನಿಂದಲೇ ಸೃಜಿಸಿದನು. 'ಮನಸಾ' ಎಂದು ಪ್ರಖ್ಯಾತಿಗೊಂಡ ಆ ದೇವಿಯು ಶಂಕರನನ್ನು ಕುರಿತು ತಪಸ್ಸುಮಾಡಿ, ಅವನ ಅನುಗ್ರಹಕ್ಕೆ ಪಾತ್ರಳಾಗಿ (ಶ್ರೀಕೃಷ್ಣನ) ಅಷ್ಟಾಕ್ಷರೀಮಂತ್ರೋಪದೇಶವನ್ನು ಪಡೆದು, ಪುಷ್ಕರಕ್ಷೇತ್ರದಲ್ಲಿ ಅನನ್ಯಭಕ್ತಿಯಿಂದ ಜಪಿಸಿ, ಶ್ರೀಕೃಷ್ಣನ ಪರಮಾನುಗ್ರಹಕ್ಕೂ ಪಾತ್ರಳಾದಳು. ಶ್ರೀಕೃಷ್ಣನು 'ನೀನು ವಿಶ್ವಪೂಜ್ಯಳಾಗು' ಎಂದು ವರವಿತ್ತನು. ಇಂತು ಲೋಕಪೂಜ್ಯಳಾದ ಮನಸಾದೇವಿಯನ್ನು ಕಶ್ಯಪಪ್ರಜಾಪತಿಯು ಜರತ್ಕಾರುವೆಂಬ ಮಹರ್ಷಿಗೆ ಕೊಟ್ಟು ವಿವಾಹಮಾಡಿದನು.

ಒಮ್ಮೆ ದೀರ್ಘತಪಸ್ಸಿನಿಂದ ಬಳಲಿದ ಆ ಮಹಾಮುನಿಯು ಪುಷ್ಕರಕ್ಷೇತ್ರದಲ್ಲಿ ತನ್ನ ಪತ್ನಿಯ ತೊಡೆಯಮೇಲೆ ತಲೆಯಿಟ್ಟು ನಿದ್ರಿಸುತ್ತಿರಲು, ಸಂಧ್ಯಾಸಮಯವು ಅತೀತವಾಗುವುದೆಂದು ಆ ಪತಿವ್ರತೆಯು ಆತನನ್ನು ಎಚ್ಚರಗೊಳಿಸಿದಳು. ಅರ್ಧನಿದ್ರೆಯಲ್ಲಿ ತನ್ನನ್ನು ಎಚ್ಚರಿಸಿದುದಕ್ಕಾಗಿ ಕುಪಿತನಾದ ಆ ಮಹರ್ಷಿಯು ತನ್ನ ಪತ್ನಿಗೆ ಶಾಪಕೊಡಲುದ್ಯುಕ್ತನಾದನು. ಆಕೆಯು ಕ್ಷಮಾಭಿಕ್ಷೆಯನ್ನು ಯಾಚಿಸಲು ತಾನು ನಿದ್ರಿಸುತ್ತಿದ್ದಾಗ ಸೂರ್ಯನು ಅಸ್ತವಾದುದೇ ತಪ್ಪೆಂದು ಸೂರ್ಯನನ್ನೇ ಶಪಿಸಲು ಹೊರಟನು. ಆಗ ಸೂರ್ಯದೇವನು ಸಂಧ್ಯಾದೇವಿಯೊಡನೆ ಬಂದು ಅವನನ್ನು ಸ್ತುತಿಸಿ ಸಮಾಧಾನಪಡಿಸಿದನು. ಆದರೂ ಜರತ್ಕಾರುವು ತನ್ನ ಪತ್ನಿಯನ್ನು ತ್ಯಜಿಸಿದನು. ಕೂಡಲೇ ಮನಸಾದೇವಿಯು ತನ್ನ ತಂದೆಯನ್ನೂ, ಇಷ್ಟದೇವತೆಯನ್ನೂ ಸ್ಮರಿಸಿಕೊಂಡಳು. ಅವರೆಲ್ಲರೂ ಪ್ರತ್ಯಕ್ಷರಾಗಿ 'ನಿನ್ನ ಪತ್ನಿಯಲ್ಲಿ ಸತ್ಪುತ್ರ

ನೊಬ್ಬನನ್ನು ಪಡೆದನಂತರ ಅವಳನ್ನು ತ್ಯಜಿಸು ' ಎಂದು ಜರತ್ಕಾರುವಿಗೆ ತಿಳಿಸಿದರು. ಕೂಡಲೇ ಆ ಮಹರ್ಷಿಯು ಆಕೆಯ ನಾಭಿಪ್ರದೇಶವನ್ನು ಮಂತ್ರೋಚ್ಚಾರಣ ಪೂರ್ವಕವಾಗಿ ಸ್ಪರ್ಶಮಾಡಿದನು. ಮತ್ತು ' ನಿನ್ನ ಗರ್ಭದಲ್ಲಿ ಧರ್ಮಿಷ್ಠನೂ, ಪರಮವೈಷ್ಣವನೂ, ಆದ ಪುತ್ರನು ಜನಿಸಿ ನಮ್ಮ ವಂಶಕ್ಕೆ ಕೀರ್ತಿತರುವನು. ' ಎಂದು ಹೇಳಿ ಆಕೆಗೆ ದಿವ್ಯಜ್ಞಾನವನ್ನು ಬೋಧಿಸಿ ತಾನು ತಪಸ್ಸುಮಾಡಲು ಪುಷ್ಕರ ಕ್ಷೇತ್ರಕ್ಕೆ ತೆರಳಿದನು. ಮನಸಾದೇವಿಯು ತಾನು ಸ್ಮರಿಸಿಕೊಂಡಾಗ ತನ್ನ ಪತಿಯು ಪ್ರತ್ಯಕ್ಷನಾಗಬೇಕೆಂದು ಕೇಳಿಕೊಂಡು ಕೈಲಾಸಕ್ಕೆ ತೆರಳಿದಳು. ಕೆಲವು ದಿವಸಗಳು ಕಳೆದನಂತರ ಶಂಕರನ ಮಂದಿರದಲ್ಲೇ ಸತ್ಪುತ್ರನೊಬ್ಬನನ್ನು ಪ್ರಸುವಿಸಿದಳು. ಆಸ್ತಿಕಬುದ್ಧಿಯುಳ್ಳ ಆಕೆಯ ಮಗನಿಗೆ ' ಆಸ್ತಿಕ ' ನೆಂದೇ ಅನ್ವರ್ಥನಾಮ ವನ್ನಿಟ್ಟು ಶಂಕರನು ಆ ಬಾಲಕನಿಗೆ ವೇದವೇದಾಂಗಗಳನ್ನೆಲ್ಲ ಕಲಿಸಿ, ಪರಮಾತ್ಮನ ದಿವ್ಯಜ್ಞಾನವನ್ನು ಬೋಧಿಸಿದನು. ಅನಂತರ ಮನಸಾದೇವಿಯು ತನ್ನ ಮಗ ನೊಡನೆ ತಂದೆಯಾದ ಕಶ್ಯಪನ ಮನೆಗೆ ಹೋಗಿ ಕೆಲವುಕಾಲ ಅಲ್ಲಿದ್ದಳು. ಹೀಗಿರಲು ಅಭಿಮನ್ಯುವಿನ ಪುತ್ರನಾದ ಪರೀಕ್ಷಿತನು ಬೇಟೆಗೆಂದು ಕಾಡಿಗೆ ಹೋಗಿ ಅಲ್ಲಿ ಧ್ಯಾನ ಪರವಶನಾಗಿದ್ದ ಶಮೀಕ ಮಹರ್ಷಿಯ ಕೊರಳಿಗೆ ಸತ್ತಹಾವೊಂದನ್ನು ಸುತ್ತಿ, ಅವನ ಮಗನಾದ ಶೃಂಗಿ ಎಂಬ ಮಹರ್ಷಿಯಿಂದ ಒಂದುವಾರದೊಳಗೆ ಸರ್ಪದಷ್ಟನಾಗಿ ಸಾಯುವಂತೆ ಶಾಪಹೊಂದಿ, ಗಂಗಾನದಿಯ ಒಂದು ದ್ವೀಪದಲ್ಲಿ ನೆಲೆಸಿ, ಶುಕಮ ಹರ್ಷಿಯಿಂದ ಭಾಗವತವನ್ನು ಕೇಳುತ್ತಿದ್ದನು. ಇತ್ತ ಮುನಿಯಶಾಪವನ್ನು ಸಾರ್ಥಕ ಗೊಳಿಸಬೇಕೆಂದು ಬರುತ್ತಿದ್ದ ಸರ್ಪರಾಜನಾದ ತಕ್ಷಕನು ದಾರಿಯಲ್ಲಿ ರಾಜನ ಚಿಕಿತ್ಸೆಗಾಗಿ ಬರುತ್ತಿದ್ದ ದೇವವೈದ್ಯನಾದ ಧನ್ವಂತರಿಯನ್ನು ಸಂಧಿಸಿ ಅವನಿಗೆ ಶ್ರೇಷ್ಠವಾದ ಮಣಿಯೊಂದನ್ನು ಕೊಟ್ಟು ಹಿಂದಕ್ಕೆ ಕಳುಹಿಸಿ, ತಾನು ಸೂಕ್ಷ್ಮರೂಪ ದಿಂದ ಬಂದು ಪರೀಕ್ಷಿತನನ್ನು ಕಚ್ಚಿ ಸಾಯಿಸಿದನು. ಅನಂತರ ಅವನ ಪುತ್ರನಾದ ಜನಮೇಜಯರಾಯನು ತಂದೆಗೆ ಉತ್ತರಕ್ರಿಯಾದಿಗಳನ್ನು ಮಾಡಿ, ಸೇಡುತೀರಿಸಿ ಕೊಳ್ಳುವ ಸಲುವಾಗಿ ಸರ್ಪಯಾಗಕ್ಕೆ ತೊಡಗಿ ಅನೇಕ ಸರ್ಪಗಳನ್ನು ಬಲಿ ಕೊಟ್ಟನು. ಆಗ ಭೀತನಾದ ತಕ್ಷಕನು ಮಹೇಂದ್ರನನ್ನು ಮರೆಹೋಗಲು ಮಹೇಂ ದ್ರನು ಮನಸಾದೇವಿಯನ್ನು ಶಾಸ್ತ್ರೋಕ್ತವಾಗಿ ಪೂಜಿಸಿದನು. ಪ್ರಸನ್ನಳಾದ

ಮನಸಾದೇವಿಯು ಜನಮೇಜಯನ ಯಾಗಮಂಟಪಕ್ಕೆ ಹೋಗಿ ತಕ್ಷಕ ಮತ್ತು ಇಂದ್ರನ ಜೀವದಾನಮಾಡೆಂದು ಜನಮೇಜಯನನ್ನು ಕೇಳಲು ತನ್ನ ಮಗನಾದ ಆಸ್ತಿಕನನ್ನು ಕಳುಹಿಸಿದಳು. ಅದರಂತೆ ಆಸ್ತಿಕನು ಜನಮೇಜಯನನ್ನು ಬೇಡಿ ಇಂದ್ರ ಮತ್ತು ತಕ್ಷಕನನ್ನು ಉಳಿಸಿದನು. ಆದಕಾರಣ (ಆಷಾಢಮಾಸದ ಸಂಕ್ರಾಂತಿಯ ದಿವಸ) ಯಾರು ವಿಶೇಷವಾಗಿ ಭಕ್ತಿಯಿಂದ ಮನಸಾದೇವಿಯನ್ನು ಪೂಜಿಸುವರೋ ಅವರಿಗೆ ಸರ್ಪಭಯವು ಪರಿಹಾರವಾಗುವುದೆಂದು ಶಾಸ್ತ್ರೋಕ್ತವಾಗಿದೆ. ಮನಸಾದೇವಿಯ ಉಪಾಖ್ಯಾನವನ್ನು ಭಕ್ತಿಯಿಂದ ಕೇಳಿದವರಿಗೂ ಸರ್ಪಭೀತಿ ಇರುವುದಿಲ್ಲ. ಭಕ್ತಿಯಿಂದ ಮನಸಾದೇವಿಯನ್ನು ಸ್ತುತಿಸುವವರು ಶೇಷಶಾಯಿಗಳಾಗುವರು.